ಮಂಡ್ಯ ಜಿಲ್ಲೆಯ ಜೈನ ನೆಲೆಗಳ ಸಾಂಸ್ಕೃತಿಕ ಅಧ್ಯಯನ

(ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಚರಿತ್ರೆ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ರೂಪೇಶ್ ಕುಮಾರ್ ಹೆಚ್.ಎಲ್.

ಮಾರ್ಗದರ್ಶಕರು

ಡಾ. ಹೆಚ್.ಎಸ್. ಬಸವೇಗೌಡ,
ಮುಖ್ಯಸ್ಥರು ಮತ್ತು ಸಂಯೋಜಕರು
ಇತಿಹಾಸಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ
ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ನಾಟಕ ಸಂಘ (ರಿ.), ಮಂಡ್ಯ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2019

ಮಂಡ್ಯ ಜಿಲ್ಲೆಯ ಜೈನ ನೆಲೆಗಳ ಸಾಂಸ್ಕೃತಿಕ ಅಧ್ಯಯನ

(ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಚರಿತ್ರೆ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ರೂಪೇಶ್ ಕುಮಾರ್ ಹೆಚ್.ಎಲ್.

ಮಾರ್ಗದರ್ಶಕರು

ಡಾ. ಹೆಚ್.ಎಸ್. ಬಸವೇಗೌಡ,

ಮುಖ್ಯಸ್ಥರು ಮತ್ತು ಸಂಯೋಜಕರು
ಇತಿಹಾಸ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ
ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ನಾಟಕ ಸಂಘ (ರಿ.), ಮಂಡ್ಯ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2019

ಸಂಶೋಧಕರ ಪ್ರಮಾಣ ಪತ್ರ

"ಮಂಡ್ಯ ಜಿಲ್ಲೆಯ ಜೈನ ನೆಲೆಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಹೆಚ್.ಎಸ್. ಬಸವೇಗೌಡ, ಮುಖ್ಯಸ್ಥರು ಮತ್ತು ಸಂಯೋಜಕರು, ಇತಿಹಾಸ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Roopesh

ರೂಪೇಶ್ ಕುಮಾರ್ ಹೆಚ್.ಎಲ್.
ಸಂಶೋಧನಾ ವಿದ್ಯಾರ್ಥಿ

ದಿನಾಂಕ : 27/07/2019
ಸ್ಥಳ : ಮಂಡ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

"ಮಂಡ್ಯ ಜಿಲ್ಲೆಯ ಜೈನ ನೆಲೆಗಳ ಸಾಂಸ್ಕೃತಿಕ ಅಧ್ಯಯನ", ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪಿಎಚ್.ಡಿ. ಪದವಿಗಾಗಿ ರೂಪೇಶ್ ಕುಮಾರ್ ಹೆಚ್.ಎಲ್., ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

H.S. B...

ಮಾರ್ಗದರ್ಶಕರು

ಡಾ. ಹೆಚ್.ಎಸ್. ಬಸವೇಗೌಡ

ಮುಖ್ಯಸ್ಥರು ಮತ್ತು ಸಂಯೋಜಕರು

ಇತಿಹಾಸ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ

ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ

Dr. H.S. Basavegowda
M.A., M.Ed., M.Phil., Ph.D.
Assistant Professor & Co-ordinator
Centre for Post Graduate Studies in History
Govt. College for Women
MANDYA-571 401.

ದಿನಾಂಕ : 27/07/2019

ಸ್ಥಳ : ಮಂಡ್ಯ

ಸಂಕೇತಾಕ್ಷರಗಳು ಮತ್ತು ವಿಸ್ತರಣೆ

ಎ.ಕ.	ಎಪಿಗ್ರಾಫಿಯ ಕರ್ನಾಟಿಕ
ಕೃ.ಪೆ.	ಕೃಷ್ಣರಾಜಪೇಟೆ
ಮ.ವ.	ಮಳವಳ್ಳಿ
ಮದ್ದೂ.	ಮದ್ದೂರು
ನಾ.ಮಂ.	ನಾಗಮಂಗಲ
ಪಾಂ.ಪು.	ಪಾಂಡವಪುರ
ಮಂ.	ಮಂಡ್ಯ
ಶ್ರೀ.ಪ.	ಶ್ರೀರಂಗಪಟ್ಟಣ
ಎಂ.ಎ.ಆರ್.	ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್

ಮಂಡ್ಯ ಜಿಲ್ಲೆಯ ಜೈನ ನೆಲೆಗಳ ಸಾಂಸ್ಕೃತಿಕ ಅಧ್ಯಯನ

ಪರಿವಿಡಿ

ಅಧ್ಯಾಯ – ಒಂದು
ಪ್ರಸ್ತಾವನೆ

1.1 ಪೀಠಿಕೆ

ಜೈನ ಧರ್ಮವು ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಅತ್ಯಂತ ಪ್ರಾಚೀನವಾದ ಧರ್ಮವೆಂದು ಉಲ್ಲೇಖಿಸಲ್ಪಟ್ಟಿದೆ. ಅಲ್ಲದೆ ಈ ಧರ್ಮದ ಮೂಲವನ್ನು ಹುಡುಕುತ್ತ ಕೆಲ ವಿದ್ವಾಂಸರು ಹರಪ್ಪ ನಾಗರೀಕತೆಯ ಕಾಲದಲ್ಲಿಯೇ ಈ ಧರ್ಮ ಪ್ರಚಲಿತದಲ್ಲಿತ್ತೆಂದು ದಾಖಲಿಸುತ್ತಾರೆ. ಅದಕ್ಕೆ ಆಕರವಾಗಿ ಹರಪ್ಪ ಸಂಸ್ಕೃತಿಯ ನೆಲೆಯಾದ ಮಹೆಂಜೋದಾರೊವಿನಲ್ಲಿ ದೊರೆತಿರುವ ಮುದ್ರಿಕೆಯೊಂದನ್ನು ಮತ್ತು ಆ ಮುದ್ರಿಕೆಯಲ್ಲಿ ಖಡ್ಗಾಸನ ಅಥವಾ ಕಾಯೋತ್ಸರ್ಗ ಭಂಗಿಯಲ್ಲಿರುವ ವ್ಯಕ್ತಿಯ ಚಿತ್ರಣವನ್ನು ಆಧರಿಸಿ ಆತನು ಜೈನ ತೀರ್ಥಂಕರರಿರಬೇಕೆಂದು ದಾಖಲಿಸುತ್ತಾರೆ. ಜೈನಧರ್ಮದ ಪರಂಪರೆಯನ್ನನುಸರಿಸಿ ಆದಿನಾಥನಿಂದ ಹಿಡಿದು ಮಹಾವೀರನವರೆಗೆ ಇಪ್ಪತ್ನಾಲ್ಕು ಜನ ತೀರ್ಥಂಕರರು ಆಗಿಹೋಗಿದ್ದಾರೆಂದು ದಾಖಲಿಸಲಾಗುತ್ತದೆ. ಅವರೆಲ್ಲರ ಜೀವನ ಸಾಧನೆಗಳ ಬಗ್ಗೆ ಪ್ರಶ್ನಾತೀತವಾದ ಪ್ರಾಗೈತಿಹಾಸಿಕ ದಾಖಲೆಗಳು ದೊರೆಯದಿರುವುದರಿಂದ ಇತಿಹಾಸಕಾರರು ಪಾರ್ಶ್ವನಾಥನನ್ನು ಮತ್ತು ಮಹಾವೀರನನ್ನು ಜೈನಧರ್ಮದ ಪ್ರಮುಖ ತೀರ್ಥಂಕರರೆಂದು ಅಥವಾ ಇವರನ್ನು ಐತಿಹಾಸಿಕ ವ್ಯಕ್ತಿಗಳೆಂದು ಉಳಿದ ಇಪ್ಪತ್ತೆರಡು ಜನ ತೀರ್ಥಂಕರರನ್ನು ಪರಂಪರೆಯ ಗುರುಗಳೆಂದು ದಾಖಲಿಸುತ್ತಾರೆ.

ಜೈನಗ್ರಂಥಗಳಲ್ಲಿ 24 ಜನ ತೀರ್ಥಂಕರರುಗಳ ಹೆಸರು ಈ ರೀತಿ ಉಲ್ಲೇಖವಾಗಿದೆ. ಆದಿನಾಥ ಅಥವಾ ಋಷಭನಾಥ, ಅಜಿತನಾಥ, ಶಂಭವನಾಥ, ಅಭಿನಂದನನಾಥ, ಸುಮತಿನಾಥ, ಪದ್ಮಪ್ರಭ, ಸುಪಾರ್ಶ್ವನಾಥ, ಚಂದ್ರಪ್ರಭ, ಸುವಿಧಿನಾಥ, ಶ್ರೀತಲನಾಥ, ಶ್ರೇಯಾಂಸನಾಥ, ವಾಸುಪೂಜ್ಯ, ವಿಮಲನಾಥ, ಅನಂತನಾಥ, ಧರ್ಮನಾಥ, ಶಾಂತಿನಾಥ, ಕುಂತುನಾಥ, ಅರನಾಥ, ಮಲ್ಲಿನಾಥ, ಮುನಿಸೂವ್ರತ, ನೇಮಿನಾಥ, ಅರಿಷ್ಟನೇಮಿ, ನೇಮಿನಾಥ, ಪಾರ್ಶ್ವನಾಥ ಮತ್ತು ಮಹಾವೀರ ಈ ಇಪ್ಪತ್ನಾಲ್ಕು ಜನ ತೀರ್ಥಂಕರರಲ್ಲಿ ಮಹಾವೀರನು ಅತ್ಯಂತ ಕೊನೆಯ ತೀರ್ಥಂಕರ. ಈತನ ಜನನ ಮತ್ತು ನಿರ್ವಾಣಗಳ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಜೈನಧರ್ಮವನ್ನು ವೈದಿಕ ಸಂಪ್ರದಾಯದ ಋಗ್ವೇದದ ಕಾಲಘಟ್ಟದಲ್ಲಿಯೇ ಅವೈದಿಕ ನಾಸ್ತಿಕ ಧರ್ಮವೆಂದು ಗುರುತಿಸಲಾಗಿದೆ. ಕೆಲವರು ಜೈನ ಮತ್ತು ಬೌದ್ಧ ಧರ್ಮವನ್ನು ಅವೈದಿಕ ಪಂಥವೆಂದೂ ಕರೆದು ಗುರುತಿಸಿದ್ದಾರೆ. ವಿಫುಲವಾದ ಜೈನ ಮತ್ತು ಬೌದ್ಧ ಸಾಹಿತ್ಯವನ್ನು ಗಮನಿಸಿದರೆ **'ಸವಣಾ ವಾ ಬ್ರಾಹ್ಮಣಾ ವಾ'** ಎಂಬ ಹೇಳಿಕೆಯಲ್ಲಿ ಅವೈದಿಕ ಪಂಥಗಳೆಲ್ಲವನ್ನೂ

ಶ್ರಮಣವೆಂದೂ ಕರೆಯಲಾಗಿದೆ. ತಮಿಳು ಸಾಹಿತ್ಯ ಪರಂಪರೆಯಲ್ಲಿ ಶ್ರಮಣವನ್ನು ಮೂರು ಪಂಥಗಳಾಗಿ ಗುರುತಿಸಲಾಗಿದೆ. ಅವುಗಳನ್ನು ಅಣುವಾದಿಗಳು, ಆಜೀವಿಕರೂ, ಜೈನರು ಎಂದು ವಿಭಾಗಿಸುತ್ತಾರೆ. ಆದರೆ ಇದರಲ್ಲಿ ಬೌದ್ಧರು ಸೇರ್ಪಡೆಗೊಂಡಿಲ್ಲ. ಅವರನ್ನು ಪ್ರತ್ಯೇಕವಾಗಿ ಶಾಕ್ತರೆಂದು ಹೆಸರಿಸಲಾಗಿದೆ. ವೇದಗಳ ಕಾಲಕ್ಕೆ ಮುಂಚೆಯೇ ಭಾರತದಲ್ಲಿ ಆಜೀವಿಕ ನಿಗಂಟ ಮುಂಡಸಾವಕ ಜಟಿಲಕ, ಪರಿಬ್ಬಾಜಕ, ಮಗಂಡಿಕ, ತೆದಂಟಿಕ, ಅವಿರುದ್ದಕ, ಗೋತಮಕ, ದೇವದಮ್ಮಿಕ ಎಂಬ ಹತ್ತು ಅವೈದಿಕ ಪಂಥಗಳನ್ನು ಗುರುತಿಸಿದ್ದಾರೆ. ಪ್ರಾಕೃತ ಅರ್ಧಮಾಗದಿ ಭಾಷೆಗಳಲ್ಲಿ ರಚನೆಗೊಂಡಿರುವ ಜೈನ ಬೌದ್ಧ ಸಾಹಿತ್ಯಗಳಲ್ಲಿ ಪಾಷಂಡಿ ಅಥವಾ ತಿತ್ಥಯ, ಪೂರಣ, ಕಸ್ಸಪ ಇತ್ಯಾದಿ ಹೆಸರಿನ ಅವೈದಿಕ ಪಂಥಗಳನ್ನು ಚರಿತ್ರಾಕಾರರು ಗುರುತಿಸಿರುತ್ತಾರೆ.

ಮೇಲ್ಕಂಡ ಎಲ್ಲ ಅವೈದಿಕ ಪಂಥಗಳ ಮೂಲ ಲಕ್ಷಣಗಳೆಂದರೆ ವೇದಪ್ರಮಾಣವನ್ನು ತಿರಸ್ಕರಿಸಿರುವುದು, ವರ್ಣಾಶ್ರಮ ಪದ್ಧತಿಯನ್ನು ವಿರೋಧಿಸುವುದು, ನೈತಿಕ ತತ್ವಗಳ ಪರಿಪಾಲನೆ, ಲೌಕಿಕ ಪ್ರಪಂಚದ ಬಿಡುಗಡೆಗಾಗಿ ನಿರ್ಲಿಪ್ತ ಬದುಕನ್ನಾಚರಿಸುವುದು, ಬಾಲ್ಯಾವಸ್ಥೆ ಕಳೆದ ನಂತರ ಯಾವುದೇ ಹಂತದಲ್ಲಿ ವಿರಕ್ತ ಜೀವನವನ್ನು ನಡೆಸುವ ಸಂಪ್ರದಾಯ ಹೊಂದಿದ್ದವರು. ಇವೆಲ್ಲ ಏನೇ ಕಂಡುಬಂದರೂ ಜೈನಧರ್ಮದ ಪರಂಪರೆಯು ಇಪ್ಪತ್ನಾಲ್ಕು ಜನ ತೀರ್ಥಂಕರರನ್ನು ಗುರುತಿಸುತ್ತದೆ. ಅವರೆಲ್ಲರೂ ಜೈನಧರ್ಮವನ್ನು ಪ್ರತಿಪಾದಿಸಿದರೆಂದೂ ದಾಖಲಿಸುತ್ತವೆ.

"ಮಹಾವೀರ ತೀರ್ಥಂಕರರ ಸಮವಸರಣ ವಿಹಾರವು ಕರ್ನಾಟಕದಲ್ಲಿಯೂ ಆಗಿತ್ತೆಂಬುದಕ್ಕೆ ಅನೇಕ ಆಧಾರಗಳಿವೆ. ಆ ಕಾಲದಲ್ಲಿ ಕಾಂಚೀಪುರದಲ್ಲಿ ವಸುಪಾಟನೆಂಬ ರಾಜನು ಆಳುತ್ತಿದ್ದನು. ಅವನು ಮಹಾವೀರನ ಭಕ್ತನಾಗಿದ್ದನೆಂದು **'ಆರಾಧನಾ ಕಥಾಕೋಶ'**ದಲ್ಲಿ ಹೇಳಿದೆ. ಹೇಮಾಂಗದ (ಮೈಸೂರು) ದೇಶಕ್ಕೆ ಬಂದಾಗ ಮಹಾವೀರನನ್ನು ಸತ್ಯಂಧರ ರಾಜನ ಮಗನಾದ ಜೀವಂಧರನು ಸ್ವಾಗತಿಸಿದನು. ಅಲ್ಲದೆ ತಾನೂ ಜಿನದೀಕ್ಷೆ ಸ್ವೀಕರಿಸಿ ವೀರಸಂಘದಲ್ಲಿ ಸೇರಿದನೆಂದು ಗುಣಭದ್ರಾಚಾರ್ಯರು ತಮ್ಮ **'ಉತ್ತರ ಪುರಾಣ'** ದಲ್ಲಿ ವಿವರಿಸಿದ್ದಾರೆ.

ಅದಕ್ಕೂ ಇನ್ನಷ್ಟು ಹಿಂದಿನ ಕಾಲಕ್ಕೆ ಹೋದರೆ ಭಗವಾನ್ ನೇಮಿನಾಥ ತೀರ್ಥಂಕರನು ಯಾದವರಲ್ಲಿ ಅಂತಃಕಲಹವುಂಟಾದಾಗ ದ್ವಾರಕೆಯನ್ನು ತ್ಯಜಿಸಿ, ಕೆಲಕಾಲ ಕರ್ನಾಟಕದಲ್ಲಿ ಬಂದು ತಪಸ್ಸು ಮಾಡಿದನೆಂಬ ಪ್ರತೀತಿಯಿದೆ. ಆದಿತೀರ್ಥಂಕರನಾದ ಋಷಭದೇವನೂ, ದಕ್ಷಿಣ ಕನ್ನಡ ಜಿಲ್ಲೆಯ ಬೆಟ್ಟಗಳಲ್ಲಿ ವಿಹರಿಸಿರಬೇಕೆಂದು ಕೆಲವು ವಿದ್ವಾಂಸರು ಊಹಿಸುತ್ತಾರೆ. ಮೇಲ್ಕಂಡ ಎಲ್ಲ ಸಂಗತಿಗಳನ್ನು ನೆನೆದಾಗ ಕರ್ನಾಟಕವು ಅತಿ ಪ್ರಾಚೀನ ಕಾಲದಿಂದಲೂ ಜೈನಧರ್ಮ ವಿಕಾಸಕ್ಕೆ ಆಶ್ರಯಸ್ಥಾನವಾಗಿದೆ ಎಂದು ಧಾರಾಳವಾಗಿ ಹೇಳಬಹುದು. ಇಪ್ಪತ್ತನಾಲ್ಕನೆಯ ತೀರ್ಥಂಕರನಾದ

ಮಹಾವೀರನು ಬುದ್ಧನ ಸಮಕಾಲೀನ, ಅವನಿಗಿಂತ ಹಿಂದೆ ಎಂದರೆ, ಕ್ರಿ.ಪೂ. ಎಂಟನೇ ಶತಮಾನದಲ್ಲಿ ಇಪತ್ತಮೂರನೇ ತೀರ್ಥಂಕರನಾದ ಪಾರ್ಶ್ವನಾಥನು ಬಾಳಿ ಬದುಕಿದನು. ಜೈನಧರ್ಮದ ಇತಿಹಾಸದಲ್ಲಿ ಹೆಚ್ಚು ಎಂದರೆ ಪಾರ್ಶ್ವನಾಥನವರೆಗೆ ಹೋಗಬಹುದು. ಅವನಿಂದಾಚೆಗೆ ಪೌರಾಣಿಕ ಕಟ್ಟುಕಥೆಗಳ ಮಂಜು ಮುಸುಕಿದೆ ಎಂದು ಯಾಕೋಬಿಯವರು ಅಭಿಪ್ರಾಯಪಟ್ಟಿದ್ದಾರೆ.

ಅಂತಿಮ ಶ್ರುತಕೇವಲಿ ಭದ್ರಬಾಹುಗಳು ಸಂಪ್ರತಿ ಚಂದ್ರಗುಪ್ತನೊಡನೆ ಹಾಗೂ ಮುನಿ ಸಂಘದೊಡನೆ ಕಳ್ಳಪ್ಪುತೀರ್ಥಕ್ಕೆ ಅಂದರೆ ಇಂದಿನ ಶ್ರವಣಬೆಳಗೊಳಕ್ಕೆ ಬಂದರೆಂಬುದಕ್ಕೆ ಶಾಸನಾಧಾರಗಳಿವೆ. ಆದರೆ ಅವರು ಪುನ್ನಾಟ ರಾಜ್ಯಕ್ಕೆ ಅಂದರೆ ಇಂದಿನ ಹೆಗ್ಗಡದೇವನಕೋಟೆ ತಾಲ್ಲೂಕಿನ ಕೀರ್ತಿಪುರಕ್ಕೆ ಮೊದಲು ಬಂದರೆಂಬುದಕ್ಕೆ ಯಾವ ಶಾಸನಾಧಾರಗಳೂ ಇಲ್ಲ. ಕೇವಲ ಐತಿಹ್ಯ ಮೂಲವಾದ ಈ ವಿಷಯವನ್ನು ಸಮರ್ಥಿಸುವ ಯಾವ ಪೂರಕ ಆಧಾರಗಳು ಇದುವರೆಗೂ ದೊರೆತಿಲ್ಲ. ನಂಬಲರ್ಹ ಆಧಾರಗಳು ದೊರೆಯುವವರೆಗೂ ಭದ್ರಬಾಹು ಮುನಿಗಳು ಚಂದ್ರಗುಪ್ತ ಮತ್ತಿತರರೊಡನೆ ಕಳ್ಳಪ್ಪುತೀರ್ಥಕ್ಕೆ ಬಂದರೆಂದು ಹೇಳುವುದೇ ಸೂಕ್ತವೆಂದು ತೋರುತ್ತದೆ.

ಬೌದ್ಧರ ಧಾರ್ಮಿಕ ಗ್ರಂಥವಾದ ಮಹಾವಂಶದ ಹತ್ತನೆಯ ಅಧ್ಯಾಯದಲ್ಲಿ ಸಿಂಹಳದ ರಾಜಕುಮಾರನಾದ ಪಾಂಡುಕಾಭಯನು ತನ್ನ ರಾಜಧಾನಿಯಾದ ಅನುರಾಧ ಪುರದಲ್ಲಿ ನಿರ್ಗ್ರಂಥರಿಗೋಸ್ಕರ ಒಂದು ದೇವಾಲಯವನ್ನು ನಿರ್ಮಿಸಿದ ಬಗ್ಗೆ ವಿವರಗಳಿವೆ. ಪಾಂಡುಕಾಭಯನು ಕಾಲವನ್ನು ಕ್ರಿ.ಪೂ. ನಾಲ್ಕನೆಯ ಶತಮಾನವೆಂದು (ಕ್ರಿ.ಪೂ. 377 ರಿಂದ 307) ವಿದ್ವಾಂಸರು ನಿರ್ಣಯಿಸಿದ್ದಾರೆ. ಆದ್ದರಿಂದ ಸಿಂಹಳಕ್ಕೆ ಉತ್ತರ ಭಾರತದಿಂದ ದಕ್ಷಿಣ ಭಾರತದ ತಮಿಳುನಾಡಿನ ಮೂಲಕ ಭೂಮಾರ್ಗವಾಗಿ ಜೈನಧರ್ಮವು ಹರಡಿರಬಹುದೆಂದು ತೋರುತ್ತದೆ.

ಸಿಂಹಳದ ಬೌದ್ಧಧರ್ಮ ಗ್ರಂಥ ಮಹಾವಂಶದ ಪ್ರಕಾರ ಕ್ರಿ.ಪೂ. ನಾಲ್ಕನೆಯ ಶತಮಾನದ ವೇಳೆಗಾಗಲೇ ಸಿಂಹಳದಲ್ಲಿ ಜೈನಧರ್ಮವು ಅಸ್ತಿತ್ವದಲ್ಲಿತ್ತೆಂಬುದನ್ನು ಒಪ್ಪುವುದಾದರೆ, ಜೈನಧರ್ಮ ಪ್ರಚಾರಕರು ಉತ್ತರ ಭಾರತದಿಂದ ಭೂ ಮಾರ್ಗವಾಗಿ, ಕರ್ನಾಟಕ, ತಮಿಳುನಾಡುಗಳ ಮಾರ್ಗದಲ್ಲಿಯೇ ಸಿಂಹಳವನ್ನು ಸೇರಿರುತ್ತಾರೆ. ಆದ್ದರಿಂದ ಕ್ರಿ.ಪೂ. ನಾಲ್ಕನೆಯ ಶತಮಾನದ ವೇಳೆಗಾಗಲೇ ಕರ್ನಾಟಕವನ್ನು ಜೈನಧರ್ಮವು ಪ್ರವೇಶಿಸಿತ್ತು ಎಂಬುದು ಸಾಧಿತವಾಗುತ್ತದೆ.

ಅಂತಿಮ ಶ್ರುತಕೇವಲಿ ಭದ್ರಬಾಹು ಮುನಿಯು ತನ್ನ ಮುನಿ ಸಂಘದೊಡನೆ ಕಳ್ಳಪ್ಪುವಿಗೆ ಬರುವ ಮೊದಲೇ ಈ ಪ್ರದೇಶದಲ್ಲಿ ಜೈನಧರ್ಮವು ಪ್ರಚಾರದಲ್ಲಿ ಇದ್ದಿರಬೇಕೆಂಬುದಾಗಿ ಡಾ. ಪಿ. ಬಿ. ದೇಸಾಯಿ ಅವರ ಅಭಿಪ್ರಾಯ. ಏಕೆಂದರೆ ದಕ್ಷಿಣದಲ್ಲಿ ತಮಗೆ ಉತ್ತಮ ಸ್ವಾಗತ ಹಾಗೂ ಗೌರವ ಮಾನ್ಯತೆಗಳು ಸಿಗುವ ಭರವಸೆಯಿಂದಲೇ ಭದ್ರಬಾಹು ಮುನಿಗಳು ದಕ್ಷಿಣಕ್ಕೆ ಬಂದಿದ್ದಾರೆ. ಇಲ್ಲದಿದ್ದರೆ ಅವರು ದಕ್ಷಿಣಕ್ಕೆ ಬರುತ್ತಿರಲಿಲ್ಲ ಎಂದು ಡಾ. ಪಿ. ಜಿ. ದೇಸಾಯಿಯವರ ಅಭಿಪ್ರಾಯವನ್ನು ಒಪ್ಪಬಹುದು.

ಜೈನಧರ್ಮದ ಸಂಪ್ರದಾಯಗಳ ಪ್ರಕಾರ ಮೌರ್ಯ ಚಂದ್ರಗುಪ್ತನ ಸಂದರ್ಭದಲ್ಲಿ ಉತ್ತರ ಭಾರತದಲ್ಲಿ ಹನ್ನೆರಡು ವರ್ಷಗಳ ಭಯಂಕರ ಬರಗಾಲ ಬೀಳಲು ಜೈನಾಚಾರ್ಯನಾದ ಭದ್ರಬಾಹು ತನ್ನ ದೊಡ್ಡ ಸಂಘದೊಡನೆ ದಕ್ಷಿಣ ಭಾರತಕ್ಕೆ ವಲಸೆ ಬಂದನು. ಹೀಗೆ ದೊಡ್ಡ ಸಂಘ ಸಹಿತ ಆಚಾರ್ಯರು ದಕ್ಷಿಣ ಭಾರತಕ್ಕೆ ಬಂದ ಕಾಲದಲ್ಲಿ ಬಹುಜನ ಶ್ರಾವಕರಿದ್ದು ಅವರು ಮುನಿಸಂಘವನ್ನು ಇಲ್ಲಿ ಕಟ್ಟಿದರೆಂದು ಭಾವಿಸಲು ಸಾಧ್ಯವಿಲ್ಲ. ಆದರೆ ಆ ದೊಡ್ಡ ಮುನಿಪರಂಪರೆಯನ್ನು ಸಾಕಿ ಸಲಹಲು ಶಕ್ತವಾಗಿದ್ದ ಶ್ರಾವಕ ಪರಂಪರೆ ಆ ಕಾಲಕ್ಕಾಗಲೇ ಇಲ್ಲಿದ್ದಿತೆಂದು ತಿಳಿದುಬರುತ್ತದೆ. ಆದರೂ ಕೆಲವೊಂದು ಜೈನ ಸಂಪ್ರದಾಯಗಳು ಭದ್ರಬಾಹುವೇ ದಕ್ಷಿಣ ಭಾರತಕ್ಕೆ ಜೈನಪರಂಪರೆಯನ್ನು ಪರಿಚಯಿಸಿದರೆಂದು ತಿಳಿದುಬರುತ್ತದೆ. ಮನುಗಳ ಇತಿಹಾಸವನ್ನು ಅಧ್ಯಯನ ಮಾಡುವಾಗ ಸತ್ಯವ್ರತನೆಂಬುವನು ದಕ್ಷಿಣ ದ್ರಾವಿಡರ ಒಡೆಯನೆಂಬುದನ್ನು ಒಪ್ಪುತ್ತದೆ. ಪೋತಲಿಯು ಭುಜಬಲಿಯ ರಾಜಧಾನಿಯಾಗಿದ್ದು ಭುಜಬಲಿಯು ಅದ್ವಿತೀಯ ತಪಸ್ಸಿನಿಂದ ಈ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದನೆಂದು ತಿಳಿದುಬರುತ್ತದೆ. ಭಾಗವತದ ಪ್ರಕಾರ ಋಷಭದೇವನು ದಕ್ಷಿಣ ಭಾರತದ ಕೊಂಗು, ವೇಂಗಡ, ಕರ್ನಾಟಕ, ಕಂಕಟ, ಕುಡಚಾದ್ರಿಗಳ ಮಧ್ಯದಲ್ಲಿ ನಿರ್ವಾಣ ಹೊಂದಿದನೆಂದು ಹೇಳುತ್ತದೆ. ಜೈನಾಗಮಗಳು ಕೈಲಾಸಪರ್ವತವೆಂದು ಹೇಳುತ್ತವೆ. ಇದೆಲ್ಲವನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಆದರೂ ಕ್ರಿ.ಪೂ. 2ನೆಯ ಶತಮಾನದ ಹೊತ್ತಿಗೆ ಕರ್ನಾಟಕದಲ್ಲಿ ಜೈನಧರ್ಮ ನೆಲೆಸಿತ್ತೆಂದು ಬಹುತೇಕ ಎಲ್ಲ ವಿದ್ವಾಂಸರೂ ಒಪ್ಪಿಕೊಳ್ಳುತ್ತಾರೆ.

ಕರ್ನಾಟಕದ ಮೊದಲ ರಾಜವಂಶವಾದ ಗಂಗರು ಜೈನಧರ್ಮವನ್ನು ಪರಿಪಾಲಿಸಿದರು. ಗಂಗವಾಡಿ ತೊಂಬತ್ತಾರು ಸಾವಿರ ಪ್ರದೇಶದಲ್ಲಿ ಮಂಡ್ಯ ಪ್ರದೇಶ ಕೂಡ ಸೇರಿತ್ತು. ಗಂಗವಂಶ ಸ್ಥಾಪನೆಯ ಕಥೆಯು ಜೈನಧರ್ಮದ ಸಂಪ್ರದಾಯದೊಂದಿಗೆ ತಳುಕು ಹಾಕಿಕೊಂಡಿದೆ. ಅಲ್ಲದೆ ಗಂಗರು ಪ್ರಾರಂಭದಿಂದಲೂ ಜೈನಧರ್ಮಕ್ಕೆ ಅಪಾರವಾದ ರಾಜಾಶ್ರಯವನ್ನು ನೀಡಿದ್ದಾರೆ.

ಇದಲ್ಲದೆ ಮಂಡ್ಯ ಜಿಲ್ಲೆಯಲ್ಲಿ ದೊರೆತಿರುವ ಅತಿ ಪ್ರಾಚೀನ ಜೈನಶಾಸನ ಕ್ರಿ.ಶ. 776 ರಂದು. ಈ ಶಾಸನವು ಶ್ರೀಪುರುಷನ ಕಾಲದ್ದಾಗಿದ್ದು ಪೃಥ್ವಿ ನಿರ್ಗ್ರಂಥರಾಜ, ಬಿರುದಾಂಕಿತ ಪರಮಗೂಳನ ಹೆಂಡತಿ ಕುಂದಚ್ಚಿಯು ಶ್ರೀಪುರದಲ್ಲಿ ಲೋಕತಿಲಕ ಜಿನಾಲಯವನ್ನು ನಿರ್ಮಿಸಿದಳು. ಆಗ ಆ ಬಸದಿಯ ಪೂಜಾಕೈಂಕರ್ಯಕ್ಕಾಗಿ ಪರಮಗೂಳನ ಪ್ರಾರ್ಥನೆಯಂತೆ ಶ್ರೀಪುರುಷ ಪೊನ್ನಳ್ಳಿ ಗ್ರಾಮವನ್ನು ದಾನಬಿಟ್ಟ ವಿವರವನ್ನು ದಾಖಲಿಸುತ್ತದೆ.

ಆ ನಂತರ ಅನೇಕ ಜೈನ ಶಾಸನಗಳು ಗಂಗರ ಕಾಲದಲ್ಲಿ ಹೊರಬಂದಿದ್ದು ಅವು ಜೈನ ದೇವಾಲಯಗಳ ನಿರ್ಮಾಣ, ಆಚಾರ್ಯರ ಆಹಾರ, ಅವರು ಲೋಕಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸಿದ್ದನ್ನು ದಾಖಲಿಸುತ್ತವೆ. ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿ ಸಮೀಪದ ರಾಂಪುರ ಗ್ರಾಮದ ಕ್ರಿ.ಶ. 900ರ ಜೈನ ಶಾಸನವು ಶ್ರವಣಬೆಳಗೊಳದ ಅಧಿಪತಿಯಾದ ಶ್ರೀ ಮರಮತಿ ಸಾಗರ ಪಂಡಿತ ಭಟ್ಟಾರಕರ ಆಜ್ಞೆಯಂತೆ ಅಣ್ಣಯ್ಯ, ದೇವಕುಮಾರ ಮತ್ತು ದೋರ ಎಂಬುವರು ಒಂದು ಕೆರೆಯನ್ನು ಕಟ್ಟಿದ ವಿಚಾರವನ್ನು ದಾಖಲಿಸುತ್ತದೆ. ಹೀಗೆ ಈ ಜಿಲ್ಲೆಯಲ್ಲಿ ಹೊಯ್ಸಳ ವಿಷ್ಣುವರ್ಧನನ ಕಾಲಘಟ್ಟದಲ್ಲಿ ಅನೇಕ ಜೈನಮಂದಿರಗಳು ರಚನೆಯಾದುದು ಶಾಸನಗಳಿಂದ ತಿಳಿದುಬರುತ್ತದೆ. ಜಿಲ್ಲೆಯಲ್ಲಿ ಈವರೆಗೆ ದಾಖಲಾಗಿರುವ ಬಹುತೇಕ ಜೈನ ಶಾಸನಗಳು ಗಂಗ ಮತ್ತು ಹೊಯ್ಸಳ ವಂಶಕ್ಕೆ ಮಾತ್ರ ಸೀಮಿತವಾಗಿದ್ದು ಬೆರಳೆಣಿಕೆಯ ಶಾಸನಗಳು ಮಾತ್ರ ಇತರ ಮನೆತನಗಳ ಕಾಲದಲ್ಲಿ ಹೊರಡಿಸಿದವುಗಳಾಗಿವೆ. ಮೈಸೂರು ಒಡೆಯರ ಕಾಲದ ಒಂದೆರಡು ಶಾಸನಗಳು ಇದರಲ್ಲಿ ಸೇರ್ಪಡೆಯಾಗಿವೆ. ಇವೆಲ್ಲವನ್ನೂ ಗಮನಿಸಿದಾಗ ಪ್ರಾರಂಭ ಕಾಲದಿಂದ ಕ್ರಿ.ಶ. 14ನೆಯ ಶತಮಾನದ ಮಧ್ಯಭಾಗದವರೆಗೆ ಜಿಲ್ಲೆಯಲ್ಲಿ ಜೈನಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಆನಂತರ ತನ್ನ ಪ್ರಖರತೆಯನ್ನು ಪ್ರಭಾವವನ್ನು ಕಡಿಮೆ ಮಾಡಿಕೊಂಡು ಒಡೆಯರ ನಂತರ ಇದು ಅಲ್ಪಸಂಖ್ಯಾತ ಧರ್ಮವಾಗಿ ಮಾರ್ಪಟ್ಟಿರುವುದು ಈ ಶಾಸನಗಳ ಅಧ್ಯಯನದಿಂದ ಖಚಿತವಾಗುತ್ತದೆ.

1.2. ಅಧ್ಯಯನದ ಉದ್ದೇಶ

ಮಂಡ್ಯ ಜಿಲ್ಲೆಯಲ್ಲಿ 15ಕ್ಕೂ ಹೆಚ್ಚು ಜೈನ ನೆಲೆಗಳು ಕಂಡುಬಂದಿವೆ. ಇವುಗಳಲ್ಲಿ ಪುರಾತತ್ತ್ವ ಆಕರಗಳಾದ ಸ್ಮಾರಕಗಳು, ಇಲ್ಲವೆ ಶಾಸನಗಳು ಅಥವಾ ವಿಗ್ರಹಗಳು ಆ ಗ್ರಾಮದಲ್ಲಿ ಇತಿಹಾಸ ಕಾಲಘಟ್ಟದಲ್ಲಿ ಜೈನಧರ್ಮ ಪ್ರಚಲಿತದಲ್ಲಿದ್ದುದನ್ನು ಖಚಿತವಾಗಿ ದಾಖಲಿಸುತ್ತವೆ. ಇದನ್ನು ಗಮನಿಸಿದಾಗ ಜೈನಧರ್ಮದ ಪ್ರಾಚೀನತೆ, ಈ ಜಿಲ್ಲೆಯಲ್ಲಿ ಕ್ರಿ.ಶ. 6ನೆಯ ಶತಮಾನಕ್ಕೆ ಹಿಂದಿನದೇ ಆಗಿತ್ತೆಂದು ದಾಖಲಿಸಬಹುದಾದರೂ ಕೆಲವೊಂದು ಸ್ಮಾರಕಗಳನ್ನು ನಿಗದಿತ

ಕಾಲಮಾನದೊಳಗೆ ತರಲು ಸಾಧ್ಯವಾಗಿಲ್ಲದ ಕಾರಣ ಜಿಲ್ಲೆಯಲ್ಲಿ ಜೈನಧರ್ಮದ ಪ್ರಾಚೀನತೆಯನ್ನು ಖಚಿತವಾಗಿ ದಾಖಲಿಸಲು ಸಾಧ್ಯವಿಲ್ಲ.

ಈ ಹಿಂದೆ ಹೇಳಿದಂತೆ ಮಂಡ್ಯ ಜಿಲ್ಲೆಯಲ್ಲಿ ಜೈನಧರ್ಮ 8ನೇ ಶತಮಾನದ ಆದಿಭಾಗದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿತ್ತೆಂದು ದಾಖಲಿಸಬಹುದು. ಆದರೂ ಇದು ಏಕಾಏಕಿ ಶಾಸನದ ಕಾಲಘಟ್ಟದಲ್ಲಿಯೇ ಪ್ರಾರಂಭವಾಯಿತೆಂದು ಭಾವಿಸಲು ಸಾಧ್ಯವಿಲ್ಲ. ಕ್ರಿ.ಶ. 776ರಲ್ಲಿ ಜಿಲ್ಲೆಯಲ್ಲಿ ಜೈನ ಬಸದಿ ನಿರ್ಮಾಣವಾಯಿತೆಂದು ಮತ್ತು ಅಲ್ಲಿನ ಋಷಿಗಳಿಗೆ ಮತ್ತು ನಿತ್ಯನೈಮಿತ್ತಿಕ ಉತ್ಸವಗಳಿಗೆ ದಾನ ನೀಡಿದ್ದನ್ನು ಒಪ್ಪಿಕೊಳ್ಳುವುದಾದರೆ ತಲಕಾಡಿನಲ್ಲಿ ಗಂಗರು ಬಂದು ನೆಲೆಸುವ ವೇಳೆಗಾಗಲೇ ಈ ಪ್ರದೇಶದಲ್ಲಿ ಜೈನಧರ್ಮ ಸಾಕಷ್ಟು ಪ್ರಭಾವವನ್ನು ಹೊಂದಿತ್ತೆಂಬುದನ್ನು ಭಾವಿಸಲೇಬೇಕಾಗುತ್ತದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಕಂಡುಬರುವ ಶಾಸನಗಳು, ಜೈನ ಸ್ಮಾರಕಗಳು ಜೈನಧರ್ಮದ ಆಚರಣೆ, ಹಬ್ಬ, ಆಹಾರ, ಜೀವನ ಸಂಸ್ಕಾರಗಳು, ಕುಟುಂಬ, ನಂಬಿಕೆ ಇತ್ಯಾದಿಗಳನ್ನು ತಳಮಟ್ಟದಲ್ಲಿ ಅಧ್ಯಯನ ಮಾಡುವ ಉದ್ದೇಶದಿಂದ **ಮಂಡ್ಯ ಜಿಲ್ಲೆಯ ಜೈನ ನೆಲೆಗಳ ಸಾಂಸ್ಕೃತಿಕ ಅಧ್ಯಯನ** ಎಂಬ ವಿಷಯವನ್ನು ಈ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

1.3. ಅಧ್ಯಯನದ ವ್ಯಾಪ್ತಿ

ಮಂಡ್ಯ ಜಿಲ್ಲೆಯು 1939ರಲ್ಲಿ ಪ್ರತ್ಯೇಕ ಜಿಲ್ಲೆಯಾಗಿ ಮಾರ್ಪಟ್ಟು ಮೈಸೂರಿನಿಂದ ಬೇರ್ಪಟ್ಟಿತ್ತು. ಅಲ್ಲದೆ ಈ ಜಿಲ್ಲೆಯಲ್ಲಿ ಕಾವೇರಿ, ಹೇಮಾವತಿ ನದಿ ಬಯಲುಗಳಿದ್ದು ಪ್ರಸಿದ್ಧ ಐತಿಹಾಸಿಕ ಧಾರ್ಮಿಕ ಕ್ಷೇತ್ರಗಳೂ ಇರುವುದಲ್ಲದೆ ಇತಿಹಾಸ ಕಾಲಘಟ್ಟದ ಅನೇಕ ರಾಜ್ಯ ಹೆದ್ದಾರಿಗಳು ಈ ಜಿಲ್ಲೆಯಲ್ಲಿ ಹಾದುಹೋಗಿದ್ದರಿಂದ ಆ ಮಾರ್ಗವನ್ನನುಸರಿಸಿ ನದಿಯ ಬಯಲು ಪ್ರದೇಶದಲ್ಲಿ ಮತ್ತು ವ್ಯಾಪಾರ ಮಾರ್ಗದಲ್ಲಿ ಜೈನಧರ್ಮೀಯರು ಬಹು ಹಿಂದಿನಿಂದಲೂ ವೈದಿಕ ಧರ್ಮೀಯರೊಂದಿಗೆ ವಾಸ್ತವ್ಯ ಹೂಡಿದ್ದರಿಂದ ಅವರೀರ್ವರ ನಡುವೆ ಇದ್ದ ಸಾಮರಸ್ಯವನ್ನು ದಾಖಲಿಸುವುದು **ಮಂಡ್ಯ ಜಿಲ್ಲೆಯ ಜೈನ ನೆಲೆಗಳ ಸಾಂಸ್ಕೃತಿಕ ಅಧ್ಯಯನದ** ವ್ಯಾಪ್ತಿಯನ್ನೊಳಗೊಂಡಿದೆ.

ಜಿಲ್ಲೆಯಲ್ಲಿ ಕಂಡುಬರುವ ಜೈನ ನೆಲೆಗಳು, ಜಿಲ್ಲೆಯಲ್ಲಿನ ಜೈನ ಶಾಸನಗಳು ಶಾಸನಗಳಲ್ಲಿ ಉಲ್ಲೇಖವಾಗಿರುವ ಆಚಾರ್ಯರು, ಜೈನಧರ್ಮದ ಪ್ರಾಚೀನತೆ, ಪ್ರಾದೇಶಿಕವಾರು ಹಂಚಿಕೆ, ಶಾಸನಗಳಲ್ಲಿ ಉಲ್ಲೇಖಿತವಾದ ಸ್ಮಾರಕಗಳನ್ನು ಗುರುತಿಸುವುದು ಮತ್ತು ದಾಖಲಿಸುವುದು ಹಾಗೂ

ಶಾಸನಗಳ ಸಾಂಸ್ಕೃತಿಕ ಅಧ್ಯಯನ ಅಲ್ಲದೆ ಜನಾಂಗೀಯ ಅಧ್ಯಯನದಿಂದ ಲಭ್ಯವಾಗುವ ಧರ್ಮ, ಸಂಸ್ಕೃತಿ ಮತ್ತು ಪರಂಪರೆಯನ್ನು ಕರ್ನಾಟಕದ ಜೈನಧರ್ಮ ಪರಂಪರೆಯ ಹಿನ್ನೆಲೆಯಲ್ಲಿ ಸಮೀಕ್ಷಿಸಿ ಸ್ಥಾನಿಕ ಐತಿಹಾಸಿಕ ಅಂಶಗಳು ಹೇಗೆ ಜೈನಧರ್ಮದ ಬೆಳವಣಿಗೆಗೆ ಮತ್ತು ಅದರ ಹಿಂಜರಿಕೆಗೆ ಕಾರಣವಾದವೆಂಬುದನ್ನು ಇತಿಹಾಸ ಕಾಲಘಟ್ಟದಲ್ಲಿ ಆಕರಗಳ ಹಿನ್ನೆಲೆಯಲ್ಲಿ ಗುರುತಿಸುವ ವ್ಯಾಪ್ತಿಯನ್ನು ಈ ಅಧ್ಯಯನವು ತನ್ನದಾಗಿಸಿಕೊಂಡಿದೆ.

1.4. ಅಧ್ಯಯನದ ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನವನ್ನು ಇತಿಹಾಸ ಸಂಶೋಧನಾ ಮಾರ್ಗದ ವಿಧಾನಗಳಿಗೆ ಅನುಗುಣವಾಗಿ ವಿಷಯ ಸಂಗ್ರಹಣೆ, ಬಾಹ್ಯ ಮತ್ತು ಆಂತರಿಕ ವಿಮರ್ಶೆ, ವಿಶ್ಲೇಷಣಾ ಕ್ರಮ, ಸಂಯೋಜನಾ ವಿಧಾನ ಮತ್ತು ನಿರೂಪಣಾ ವಿಧಾನಗಳನ್ನು ಅನುಸರಿಸಿ ಅಧ್ಯಯನ ಮಾಡಲಾಗಿದೆ. ಇವುಗಳ ಜೊತೆಗೆ ಕ್ಷೇತ್ರಕಾರ್ಯ ನಡೆಸಿ ಆ ಪ್ರದೇಶಗಳಲ್ಲಿರುವ ಸ್ಮಾರಕಗಳು ಮತ್ತು ಇತರ ಆಧಾರಗಳನ್ನು ಸಂಗ್ರಹಿಸಿ ಸ್ಥಳೀಯರ ಸಹಾಯವನ್ನು ಪಡೆದಿರುತ್ತೇನೆ. ಈ ಪ್ರಬಂಧ ರಚನೆಯಲ್ಲಿ ವಸ್ತುವಿಷಯಗಳನ್ನು ಸಂಗ್ರಹಿಸಿ ಅವುಗಳನ್ನು ಕಾಲಾನುಕ್ರಮವಾಗಿ ಅಭ್ಯಾಸ ನಡೆಸಿ ಅವುಗಳಿಗೆ ಪೂರಕವಾದ ಆಕರಗಳನ್ನು ಪಡೆದು ವಿಶ್ಲೇಷಿಸಿರುತ್ತೇನೆ. ಭಾಷೆ, ಪ್ರಾದೇಶಿಕತೆ, ಮತ ಮತ್ತಿತರ ವಿಷಯಗಳ ಪಕ್ಷಪಾತವಿಲ್ಲದೆ ಹಾಗೂ ಪೂರ್ವಾಗ್ರಹವಿಲ್ಲದೆ ಆಧುನಿಕ ಹಾಗೂ ವೈಜ್ಞಾನಿಕ ಸಂಶೋಧನೆ ವಿಧಾನ ಅನುಸರಿಸಲಾಗಿದೆ.

ಮಂಡ್ಯ ಜಿಲ್ಲೆಯ ಜೈನ ನೆಲೆಗಳ ಸಾಂಸ್ಕೃತಿಕ ಅಧ್ಯಯನವು ಜಿಲ್ಲೆಯಲ್ಲಿ ಕಂಡುಬರುವ ಜೈನ ವಾಸ್ತುಪರಂಪರೆಯನ್ನು ಮತ್ತು ಸಾಮಾಜಿಕ ಜೀವನ, ಧಾರ್ಮಿಕ ಜೀವನ, ವ್ಯಕ್ತಿಗಳು ಆಚರಿಸುವ ಪರಂಪರಾನುಗತ ಆಚರಣೆ ಇತ್ಯಾದಿಗಳನ್ನು ಖಚಿತಪಡಿಸಿಕೊಳ್ಳಲು ನಡೆಸಿದ ಸಂದರ್ಶನಗಳು ಅಲ್ಲದೆ ಕ್ಷೇತ್ರಕಾರ್ಯ ಕೂಡ ಪ್ರೌಢಪ್ರಬಂಧದ ಮೂಲ ಆಕರ ಸಾಮಗ್ರಿಯನ್ನು ಒದಗಿಸಿವೆ. ಮಂಡ್ಯ ಜಿಲ್ಲೆಯ ದೇವಾಲಯಗಳನ್ನು ಅಧ್ಯಯನ ಮಾಡಲು ಅತಿಪ್ರಮುಖವಾಗಿ ಮೈಸೂರು ಪುರಾತತ್ವ ಇಲಾಖೆ ಎಂ.ಎ.ಆರ್. ವರದಿಗಳಲ್ಲಿ ಸಂಕಲಿಸಿರುವ ಜೈನ ದೇವಾಲಯಗಳ ಬಗೆಗಿನ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಈ ಪ್ರೌಢಪ್ರಬಂಧದ ಆಕರಗಳಾಗಿ ಮೂಲ ಆಕರ ಸಾಮಗ್ರಿಗಳಾದ ಶಾಸನಗಳು, ವಾಸ್ತು ಅಧ್ಯಯನ ವರದಿಗಳು, ಕ್ಷೇತ್ರ ಕಾರ್ಯ ಅಧ್ಯಯನ ವರದಿಗಳನ್ನು ಪ್ರಾಥಮಿಕ ಆಕರಗಳನ್ನಾಗಿ ಬಳಸಿಕೊಂಡು, ಬಿ.ಎಲ್. ರೈಸ್‌ರವರ ಕಾಲದಿಂದ ಟಿ.ಎ. ಪಾರ್ಥಸಾರಥಿ ಸಂಪಾದಕತ್ವದಲ್ಲಿ ಹೊರಬಂದಿರುವ ಜಿಲ್ಲೆಯ ಎಲ್ಲ ಗೆಜೆಟಿಯರ್‌ಗಳು ಹಾಗೂ ತಾಲ್ಲೂಕು ದರ್ಶನಗಳನ್ನು ಆನುಷಂಗಿಕ ಆಕರಗಳನ್ನಾಗಿ ಬಳಸಿಕೊಂಡು ಈ ಎರಡೂ

ಆಕರಗಳಲ್ಲಿನ ಉಲ್ಲೇಖಗಳನ್ನು ಕ್ಷೇತ್ರಕಾರ್ಯದಲ್ಲಿ ಪುನಃ ಪರಿಶೀಲಿಸಿ ಖಚಿತಪಡಿಸಿಕೊಂಡು ಪ್ರೌಢ ಪ್ರಬಂಧದ ಬರವಣಿಗೆಯಲ್ಲಿ ಅಳವಡಿಸಿಕೊಳ್ಳಲಾಗಿದೆ.

1.5. ಅಧ್ಯಯನ ಮಹತ್ವ

ಭಾರತದಂತೆ ಕರ್ನಾಟಕವು ಹಲವು ಧರ್ಮಗಳ ತವರಾಗಿದ್ದು, ಇಲ್ಲಿ ವೈದಿಕ, ಜೈನ, ಬೌದ್ಧ, ಇಸ್ಲಾಂ, ಕ್ರೈಸ್ತ ಧರ್ಮಗಳು ನೆಲೆಸಿ ಇಂದಿನವರೆಗೂ ಅವು ಮುಂದುವರಿಯುತ್ತಿರುವುದು ಈ ಪ್ರದೇಶದ ಜನರ ಸಹಬಾಳ್ವೆ ಮತ್ತು ಪರಸ್ಪರರ ನಡುವೆ ಕಂಡುಬರುವ ಧಾರ್ಮಿಕ ಸಹಿಷ್ಣುತೆ ಮುಖ್ಯ ಕಾರಣವೆಂದರೆ ತಪ್ಪಾಗಲಿಕ್ಕಿಲ್ಲ. ದಕ್ಷಿಣ ಭಾರತದಲ್ಲಿ ಕರ್ನಾಟಕವು ಜೈನ ಪರಂಪರೆಗೆ ಪ್ರಾಚೀನ ಕಾಲದಿಂದಲೂ ಅತಿ ಹೆಚ್ಚು ಪ್ರೋತ್ಸಾಹವನ್ನು ಕೊಟ್ಟ ಪ್ರದೇಶವಾಗಿದೆಯಲ್ಲದೆ ಜೈನಧರ್ಮ ಉದಯಿಸಿದ ಅಂದರೆ ಮಹಾವೀರರ ನಿರ್ವಾಣವಾದ ಕೇವಲ 500 ವರ್ಷಗಳ ಒಳಗೆ ಕರ್ನಾಟಕದಲ್ಲಿ ಈ ಧರ್ಮ ಬಂದು ನೆಲೆನಿಂತುದು ಅತ್ಯಂತ ಪ್ರಮುಖ ಘಟನೆಯಾಗಿದೆಯಲ್ಲದೆ ಈ ಪ್ರದೇಶದ ಧಾರ್ಮಿಕ ಚರಿತ್ರೆಯಲ್ಲಿ ಅತಿದೊಡ್ಡ ಘಟನೆಯಾಗಿದೆ ಕೂಡ.

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಭೌಗೋಳಿಕ ಪ್ರದೇಶವಾದ ಮಂಡ್ಯ ಜಿಲ್ಲೆಯು ಜೈನಧರ್ಮ ಕರ್ನಾಟಕದಲ್ಲಿ ಬಂದು ನೆಲೆಸಿದ ಪ್ರಾಚೀನ ದಿವ್ಯಕ್ಷೇತ್ರ ಶ್ರವಣಬೆಳಗೊಳದ ಅತ್ಯಂತ ಸನಿಹದಲ್ಲಿರುವ ಜಿಲ್ಲೆಯಾಗಿದೆ. ಈ ಜಿಲ್ಲೆಯ ಧಾರ್ಮಿಕ ಇತಿಹಾಸವು ಕರ್ನಾಟಕದ ಧಾರ್ಮಿಕ ಇತಿಹಾಸದಷ್ಟೇ ರೋಚಕವಾದ ಅಧ್ಯಾಯವಾಗುತ್ತದೆ ಎಂಬ ಉದ್ದಿಶ್ಯ ನಮ್ಮದು. ಕಾರಣ ಶ್ರವಣಬೆಳಗೊಳದ ಕ್ಷೇತ್ರದ ಮಾದರಿಯಲ್ಲಿಯೇ ಜಿಲ್ಲೆಯ ಮದ್ದೂರು ತಾಲ್ಲೂಕಿನ ಅರೆತಿಪ್ಪೂರು ಕೂಡ ಕಂಡುಬರುತ್ತದೆ. ಅಲ್ಲದೆ ಶ್ರವಣಬೆಳಗೊಳದಲ್ಲಿ ಜೈನಧರ್ಮದ ಪ್ರತೀಕಗಳನ್ನು ನಿರ್ಮಿಸಿದವರು ಈ ಪ್ರದೇಶವನ್ನೂ ಆಳಿದ ರಾಜಮನೆತನಗಳೇ ಆಗಿವೆ. ಈ ಎಲ್ಲ ರಾಜಕೀಯ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ನೋಡಿದಾಗ ಜೈನರ ಪ್ರಾಚೀನ ನೆಲೆಯಾದ ಶ್ರವಣಬೆಳಗೊಳವನ್ನೊಳಗೊಂಡ ಹಾಸನ ಜಿಲ್ಲೆಯಷ್ಟೇ ಶ್ರೇಷ್ಠವಾದ ಹಾಗೂ ಅಷ್ಟೇ ವಿಸ್ತಾರವಾದ ಜೈನ ಧಾರ್ಮಿಕ ಇತಿಹಾಸವನ್ನು ಪ್ರಸ್ತುತ ಆಯ್ಕೆಯ ಕ್ಷೇತ್ರವಾದ ಮಂಡ್ಯ ಜಿಲ್ಲೆಯು ಹೊಂದಿರುವ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಜೈನ ಧರ್ಮದ ಬೆಳವಣಿಗೆ ವಿಸ್ತಾರ ಮತ್ತು ಅದರ ಅವನತಿ ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ಅದು ಜನಸಾಮಾನ್ಯರಲ್ಲಿ ಪ್ರವಹಿಸುತ್ತಿರುವ ಬಗೆಯನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ಪ್ರಸ್ತುತ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಮಂಡ್ಯ ಜಿಲ್ಲೆಯು ಇತಿಹಾಸ ಕಾಲಘಟ್ಟದಲ್ಲಿ ಜೈನಧರ್ಮಕ್ಕೆ ಹೆಸರಾದ ದೊಡ್ಡ ನೆಲೆಗಳನ್ನು ತನ್ನ ಪ್ರದೇಶದಲ್ಲಿ ಒಳಗು ಮಾಡಿಕೊಂಡಿದ್ದಿತು. ಆ ನೆಲೆಗಳೆಂದರೆ ಮದ್ದೂರು ತಾಲ್ಲೂಕಿನ ಅರೆತಿಪ್ಪೂರು, ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿ, ಬಿಂಡಿಗನವಿಲೆ, ದಡಗ, ಹಟ್ಟಣ, ಪಾರ್ಶ್ವಪುರ, (ಯಾಲದಹಳ್ಳಿ), ಬೆಳ್ಳೂರು, ಬೋಗಾದಿ, ಕೃಷ್ಣರಾಜಪೇಟೆ ತಾಲ್ಲೂಕಿನ ಬಸದಿಹೊಸಕೋಟೆ, ಹೊಸಹೊಳಲು, ಕತ್ತರಿಘಟ್ಟ, ಮುರುಕನಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀರಂಗಪಟ್ಟಣ, ಬೆಳಗೊಳ ಮತ್ತು ಬಸ್ತಿಪುರ ಮುಂತಾದ ಕ್ಷೇತ್ರಗಳು ಅತ್ಯಂತ ಪ್ರಾಚೀನ ಕಾಲದಿಂದಲೂ ಜೈನ ಧರ್ಮದ ನೆಲೆಯಾಗಿದ್ದವಲ್ಲದೆ ಈ ಜಿಲ್ಲೆಯ ಆರ್ಥಿಕ ಚಟುವಟಿಕೆಗಳ ಕೇಂದ್ರಗಳಾಗಿ ಧಾರ್ಮಿಕ ಕ್ಷೇತ್ರಗಳ ಸಮನ್ವಯ ಸ್ಥಳಗಳಾಗಿ ಬೆಳೆದು ಬಂದುದು ವಿಶೇಷ. ನಾಗಮಂಗಲ ತಾಲ್ಲೂಕಿನ ಶಾಸನವೊಂದು ಕಂಬದಹಳ್ಳಿಯ ಜಿನಾಲಯವೊಂದನ್ನು ಯಕ್ಕೋಟಿ ಜಿನಾಲಯವೆಂದು ಕರೆಯುತ್ತದೆ. ಯಕ್ಕೋಟಿ ರುದ್ರರು ಅಂದರೆ ಶೈವ ಧರ್ಮೀಯರು ಈ ಆಲಯವನ್ನು ಮೆಚ್ಚಿ ಅದರ ಎಲ್ಲ ಕಾರ್ಯ ಚಟುವಟಿಕೆಗಳನ್ನು ಆಗು ಮಾಡಲು ಮತ್ತು ಅದನ್ನು ಉಳಿಸಿಕೊಳ್ಳಲು ಆ ದೇವಾಲಯಕ್ಕೆ ಈ ಹೆಸರು ಕೊಟ್ಟಿರಬಹುದು. ಅದೇ ರೀತಿ ಶ್ರವಣಬೆಳಗೊಳದ ಗೊಮ್ಮಟನಿಗೆ ಪೂರ್ವದ ಗೊಮ್ಮಟನೆಲೆ ಮಂಡ್ಯ ಜಿಲ್ಲೆಯ ಅರೆತಿಪ್ಪೂರಿನದು ಎಂದು ವಿದ್ವಾಂಸರು ಭಾವಿಸುತ್ತಾರೆ. ಇದಲ್ಲದೆ ನಾಗಮಂಗಲ ತಾಲ್ಲೂಕಿನ ದಡಗ ಗ್ರಾಮದಲ್ಲಿ ಬಾಹುಬಲಿ ಕೂಟ ರಚನೆಯಾದುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಇಂತಹ ಬಹುಮುಖಿ ಸಾಮಾಜಿಕ, ಧಾರ್ಮಿಕ, ಆರ್ಥಿಕ ವ್ಯವಸ್ಥೆಯ ಕ್ಷೇತ್ರವಾದ ಮಂಡ್ಯ ಜಿಲ್ಲೆ ದಿಗಂಬರ ಜೈನ-ಪಂಥದ ಯಾಪನೀಯ-ಪಂಥದ ಕೇಂದ್ರಗಳನ್ನು ತನ್ನಲ್ಲಿ ಒಳಗು ಮಾಡಿಕೊಂಡಿದುದಲ್ಲದೆ ಇತಿಹಾಸ ಕಾಲದ ವಿವಿಧ ಕಾಲಘಟ್ಟಗಳಲ್ಲಿ ಧರ್ಮದ ಬೆಳವಣಿಗೆ, ರಾಜಕೀಯ ಚಟುವಟಿಕೆಯ ಮೇಲೆ ಅದರ ಪ್ರಭಾವ, ಧಾರ್ಮಿಕ ಚಳವಳಿಯ ಪ್ರಭಾವ ಮುಂತಾದವುಗಳನ್ನು ಎದುರಿಸಿ ನಿಂತು ಅದು ಬೆಳೆದ ಬಗೆಯನ್ನು ಅಧ್ಯಯನ ಮಾಡುವ ಉದ್ದೇಶದಿಂದ ಪ್ರಸ್ತುತ ಅಧ್ಯಯನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

1.6. ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳ ಸಮೀಕ್ಷೆ

ಮಂಡ್ಯ ಜಿಲ್ಲೆಯಲ್ಲಿನ ಜೈನಧರ್ಮ ಮತ್ತು ಸಂಸ್ಕೃತಿ ಕುರಿತಾದ ಯಾವುದೇ ಪಿಎಚ್.ಡಿ. ಪ್ರಬಂಧವಾಗಲಿ ಅಥವಾ ಎಂ.ಫಿಲ್. ಸಂಶೋಧನಾ ಪ್ರಬಂಧವಾಗಲಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅಥವಾ ಪ್ರಕಟವಾದ ಬಗ್ಗೆ ನನ್ನ ಓದಿನ ಹರವಿನಲ್ಲಿ ಮತ್ತು ವ್ಯಾಪ್ತಿಯಲ್ಲಿ ಮಾಹಿತಿ ಈವರೆಗೆ ಕಂಡುಬಂದಿರುವುದಿಲ್ಲ. ಹಾಗಾಗಿ ಮಂಡ್ಯ ಜಿಲ್ಲೆಯ ಜೈನ ನೆಲೆಗಳ ಸಂಸ್ಕೃತಿಯ ಅಧ್ಯಯನ ಮಾಡಲು ಸಂಶೋಧನೆಗೆ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿರುತ್ತೇನೆ.

'ಮಂಡ್ಯ ಜಿಲ್ಲೆಯ ಜೈನ ನೆಲೆಗಳ ಸಂಸ್ಕೃತಿಯ ಅಧ್ಯಯನ' ಮಾಡಲು ಪ್ರಮುಖವಾಗಿ ಮಂಡ್ಯ ಜಿಲ್ಲೆಯನ್ನು ಕುರಿತಾದ ಗ್ರಂಥಗಳನ್ನು ಮಂಡ್ಯ ಜಿಲ್ಲೆಯಲ್ಲಿ ಈವರೆಗೆ ಪ್ರಕಟವಾಗಿರುವ ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಿ ಅವುಗಳಲ್ಲಿ ದೊರೆಯುವ ಮಾಹಿತಿಗಳನ್ನು ಕಲೆಹಾಕಿ ಅವುಗಳೆಲ್ಲದರ ಸಾರ ಸಂಗ್ರಹವಾಗಿ ಈ ಪ್ರೌಢಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಶುಭಚಂದ್ರರವರು ಪ್ರಕಟಿಸಿರುವ **'ಜೈನಸಾಹಿತ್ಯ ಮತ್ತು ಸಂಸ್ಕೃತಿ ಕೆಲವು ಅಧ್ಯಯನಗಳು'** ಕೃತಿಯು ಮಂಡ್ಯ ಜಿಲ್ಲೆಯ ಶಾಸನಗಳನ್ನು ಕುರಿತಾದ ಒಂದು ಲೇಖನವನ್ನು ಒಳಗೊಂಡಿದೆ. ಇದಲ್ಲದೆ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಜೈನಧರ್ಮ ಮತ್ತು ಸಂಸ್ಕೃತಿಯ ಬಗೆಗೆ ಬರೆದ ಲೇಖನಗಳ ಸಂಗ್ರಹವಿದಾಗಿದೆ. ಮಂಡ್ಯ ಜಿಲ್ಲೆಯ ಶಾಸನಗಳನ್ನು ಕುರಿತ ಲೇಖನದಲ್ಲಿ ಸಹ ಶಾಸನಗಳ ಕಾಲಗಳನ್ನು ವಸ್ತುವಿಷಯವನ್ನು ನಿಖರವಾಗಿ ದಾಖಲಿಸುವುದಕ್ಕೆ ಬದಲಾಗಿ ಹೆಚ್ಚಾಗಿ ಉತ್ಪ್ರೇಕ್ಷೆಗೆ, ಮತೀಯ ಭಾವನೆಗೆ ಅದನ್ನು ಪ್ರೇರಕವಾಗಿ ಬಳಸಿರುವುದು ಇಲ್ಲಿ ಕಂಡುಬರುತ್ತದೆ. ಹೀಗಾಗಿ ಅವರ ಕೃತಿಯು ಮಂಡ್ಯ ಜಿಲ್ಲೆಯ ಸಮಗ್ರ ಅಧ್ಯಯನದ ಕೃತಿಯೆಂದು ಭಾವಿಸಲಾಗುವುದಿಲ್ಲ.

ರಂಗಸ್ವಾಮಿಯವರ **'ಕೃಷ್ಣರಾಜಪೇಟೆ ತಾಲ್ಲೂಕಿನ ಒಂದು ಸಾಂಸ್ಕೃತಿಕ ಅಧ್ಯಯನ'** ಕೃತಿಯು ತಾಲ್ಲೂಕಿನಲ್ಲಿ ಕಂಡುಬರುವ ಜೈನ ನೆಲೆಗಳನ್ನು ಉತ್ತಮವಾಗಿ ದಾಖಲಿಸುವ ಪ್ರಯತ್ನವಾಗಿದೆ. ಈ ಗ್ರಂಥದಲ್ಲಿ ಹೊಸಹೊಳಲು, ಮುರುಕನಹಳ್ಳಿ, ಮೊದಲಾದ ತಾಲ್ಲೂಕಿನ ಜೈನ ನೆಲೆಗಳನ್ನು ದಾಖಲಿಸುವುದಲ್ಲದೆ ಈ ಎರಡೂ ಕೇಂದ್ರಗಳೂ ಹೊಯ್ಸಳರ ಕಾಲದಲ್ಲಿಯೇ ಪ್ರಾಬಲ್ಯದಲ್ಲಿದ್ದವು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಹೊಸಹೊಳಲು ಮತ್ತು ಮುರುಕನಹಳ್ಳಿ ಜೈನ ಬಸದಿಗಳು ಕತ್ತರಿಘಟ್ಟದ ಜೈನ ನೆಲೆ ತನ್ನ ಅಸ್ತಿತ್ವವನ್ನು ಕಳೆದುಕೊಂಡ ನಂತರ ಅಲ್ಲಿನ ಜೈನ ದೇವಾಲಯಗಳಿಂದ ಶಾಸನಗಳನ್ನು, ಮೂರ್ತಿಗಳನ್ನು ತಂದು ಅವುಗಳನ್ನು ಸಂರಕ್ಷಿಸುವ ಸಲುವಾಗಿ ನಿರ್ಮಿಸಿದ ದೇವಾಲಯಗಳೆಂದು ಭಾವಿಸಬೇಕಾಗುತ್ತದೆ. ಸ್ಥಳೀಯ ಮೌಖಿಕ ಇತಿಹಾಸದಂತೆ ಮುರುಕನಹಳ್ಳಿಯ ಸುತ್ತಮುತ್ತಲಿನ ಜೈನಶ್ರಾವಕರು ಅನಂತನೋಂಪಿ ಮಾಡುವ ಕಾಲಘಟ್ಟದಲ್ಲಿ ಈ ಎರಡು ಗ್ರಾಮಗಳ ನಡುವೆ ಇದ್ದ ತೊರೆಯು ಉಕ್ಕಿ ಹರಿದ ಕಾರಣ ನೋಂಪಿ ಬಸದಿಗೆ ತೆರಳಲು ಸಾಧ್ಯವಾಗದ ಹಿನ್ನೆಲೆಯಲ್ಲಿ ತಾವೇ ಒಂದು ಬಸದಿಯ ನಿರ್ಮಾಣಕ್ಕೆ ಮುಂದಾಗುತ್ತಾರೆ. ಆ ಹಿನ್ನೆಲೆಯಲ್ಲಿ ಕತ್ತರಿಘಟ್ಟದ ಜೈನ ಬಸದಿಯ ಅವಶೇಷಗಳಲ್ಲಿದ್ದ ಅನಂತನಾಥ ತೀರ್ಥಂಕರನ ಮೂರ್ತಿಯನ್ನು ತಂದು ಇಲ್ಲಿ ಪ್ರತಿಷ್ಠಾಪಿಸಿಕೊಂಡು

ಜಿನಮಂದಿರವನ್ನು ನಿರ್ಮಿಸಿದರೆಂದು ತಿಳಿದುಬರುತ್ತದೆ. ಇದರ ಕಾಲಘಟ್ಟದ ಬಗ್ಗೆ ಸರಿಯಾದ ವಿವರಗಳಿಲ್ಲ. ಈ ವಿಶ್ಲೇಷಣೆಗಾಗಿಯೇ ಈ ಕೃತಿ ಮಹತ್ವ ಪಡೆದುಕೊಳ್ಳುತ್ತದೆ.

ಮಂಡ್ಯ ಜಿಲ್ಲೆಯ ಜೈನ ನೆಲೆಗಳಲ್ಲಿ ಅತ್ಯಂತ ಪ್ರಾಚೀನ ನೆಲೆಯೆಂದು ಗುರುತಿಸಿಕೊಳ್ಳುವ ತೊಂಡನೂರಿನ ಬಗೆಗೆ ಡಾ. ಸಿ. ಮಹದೇವ ಅವರು ಸಂಪಾದಿಸಿರುವ **'ತೊಣ್ಣೂರು' ಕೃತಿ** ಒಂದು ಮಹತ್ವದ ಸ್ಥಳೀಯ ಇತಿಹಾಸದ ಮಾಲಿಕೆಯ ಕೃತಿಗಳಲ್ಲೊಂದು. ಈ ಕೃತಿಯಲ್ಲಿ ಮತಪಂಥದ ಬಗೆಗೆ ಬರೆಯುತ್ತ ಶೆಲ್ವಪಿಳ್ಳೆ ಅಯ್ಯಂಗಾರ್‌ರವರು ಇಲ್ಲಿ ಜೈನಧರ್ಮ, ಹಿಂದೂಧರ್ಮ, ಮುಸ್ಲಿಂ ಧರ್ಮಗಳು ವಾಸಿಸಿದ್ದವೆಂದು ಅವುಗಳು ಸಾಕಷ್ಟು ಪ್ರಭಾವವನ್ನು ಪಡೆದುಕೊಂಡಿದ್ದವೆಂದು ದಾಖಲಿಸುತ್ತಾರೆ. ಗ್ರಾಮದ ಹೊರ ವ್ಯಾಪ್ತಿಯಲ್ಲಿ ಕಂಡುಬರುವ ನಖರೇಶ್ವರ ಶಿವಾಲಯವು ಜೈನ ಧರ್ಮೀಯರ ಬಸದಿಯಾಗಿತ್ತೆಂದು ನಂತರ ಅದು ಶೈವಾಲಯವಾಯಿತೆಂದು ಗುರುತಿಸುತ್ತಾರೆ. ಪ್ರಾಯಶಃ ಈ ಸಮೀಕರಣವೇ ತಪ್ಪು. ದಕ್ಷಿಣ ಕರ್ನಾಟಕದಲ್ಲಿ ಮಧ್ಯಯುಗೀನ ಕಾಲಘಟ್ಟದಲ್ಲಿ ಚಾಲ್ತಿಯಲ್ಲಿದ್ದ ನಖರ ವ್ಯಾಪಾರೀ ಸಂಘ ತಾನು ಕಾರ್ಯನಿರ್ವಹಿಸುತ್ತಿದ್ದ ಎಲ್ಲ ಪ್ರದೇಶಗಳಲ್ಲಿ ನಖರೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿ ಅದನ್ನು ಅತ್ಯಂತ ವ್ಯವಸ್ಥಿತವಾಗಿ ನಿರ್ವಹಿಸುತ್ತಿತ್ತು. ಆ ದೇವಾಲಯಗಳು ನಖರ ಸಂಘದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಚಟುವಟಿಕೆಗಳ ಕೇಂದ್ರವಾಗಿತ್ತು. ಇಸ್ಲಾಂ ಧಾಳಿಗಳ ನಂತರ ಈ ದೇವಾಲಯಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡ ಮೇಲೆ ಅದನ್ನು ಒಂದು ದರ್ಗಾವಾಗಿ ಪರಿವರ್ತಿಸಲಾಗಿದೆ.

ಮಂಡ್ಯ ಜಿಲ್ಲೆಯ ಪ್ರಪ್ರಥಮ ಪ್ರವಾಸಿ ಕಥನ ಅಥವಾ ಮೂಲ ಸಂಸ್ಕೃತಿಯ ಒಳ ಹೊರಗುಗಳನ್ನು ಪರಿಚಯ ಮಾಡಿಕೊಡುವ ಕೃತಿ ಅನಂತರಾಮುರವರ **'ಸಕ್ಕರೆಯ ಸೀಮೆ'**. ಈ ಕೃತಿಯಲ್ಲಿ ಜೈನ ಸಾಂಸ್ಕೃತಿಕ ನೆಲೆಗಳ ಕೆಲ ಪೌರಾಣಿಕ ಐತಿಹ್ಯಗಳ ವಿವರಗಳನ್ನು ಕಾಣಬಹುದು.

ಮಂಡ್ಯ ಜಿಲ್ಲೆ ರಚನೆಯಾದ 50 ವರ್ಷಗಳ ಸಂಭ್ರಮಾಚರಣೆಯ ಸಂದರ್ಭದಲ್ಲಿ ಪ್ರಕಟಪಡಿಸಿರುವ **'ಸುವರ್ಣ ಮಂಡ್ಯ'** ಕೃತಿಯಲ್ಲಿ ಜಿಲ್ಲೆಯ ಬಗೆಗಿನ ಭೌಗೋಳಿಕ ವಿವರಗಳು ಇತಿಹಾಸ, ಜಾನಪದ, ಆಹಾರ ಇತ್ಯಾದಿ ವಿವರಗಳು ಕಂಡುಬರುತ್ತವೆಯಾದರೂ ಇವು ಜೈನ ಇತಿಹಾಸ ಮತ್ತು ಸಂಸ್ಕೃತಿಯನ್ನು ಬಿಂಬಿಸುವಲ್ಲಿ ವಿಫಲವಾಗಿವೆ.

ಶಾಸನಗಳ ಸಾಂಸ್ಕೃತಿಕ ಅಧ್ಯಯನಕ್ಕೆ ವಿಶೇಷವಾದ ಆಕರ್ಷಣೀಯ ಗ್ರಂಥವೆಂದರೆ ಚಿದಾನಂದ ಮೂರ್ತಿಯವರ **'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'**. ಈ ಕೃತಿಯನ್ನು ಸಂಶೋಧನೆಯ ಕಾಲಘಟ್ಟದಲ್ಲಿ ಮೂಲ ಆಕರಕೃತಿಯಾಗಿಯೇ ಪರಿಭಾವಿಸಲಾಗಿದ್ದರೂ ಅದರಲ್ಲಿ

ಈ ಜಿಲ್ಲೆಗೆ ಸಂಬಂಧಿಸಿದ ಹೆಚ್ಚು ವಿವರಗಳು ಕಂಡುಬರುವುದಿಲ್ಲ. ಇದಲ್ಲದೆ ಜಿಲ್ಲೆಯಲ್ಲಿ ಪ್ರಕಟವಾಗಿರುವ ಬಹುತೇಕ ಶಾಸನಗಳನ್ನು ಹಳೆಯ **'ಎಪಿಗ್ರಾಫಿಯ ಕರ್ನಾಟಿಕ'** ಮಾಲಿಕೆಯಲ್ಲಿ ಮತ್ತು ಹೊಸ **'ಎಪಿಗ್ರಾಫಿಯ ಕರ್ನಾಟಿಕ'** ಮಾಲಿಕೆಯಲ್ಲಿ ಕೂಡ ಕಾಣಬಹುದಾಗಿದೆ. ನಮ್ಮ ಅಧ್ಯಯನಕ್ಕೆ **'ಎಪಿಗ್ರಾಫಿಯ ಕರ್ನಾಟಿಕ'** ಹೊಸ ಮಾಲಿಕೆಯ 6 ಮತ್ತು 7ನೆಯ ಸಂಪುಟಗಳನ್ನು ಬಳಸಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಕಂಡುಬರುವ ಎಲ್ಲ ಶಾಸನಗಳನ್ನು ಅಧ್ಯಯನ ಮಾಡಿ ಅವುಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಮತ್ತು ಧಾರ್ಮಿಕ ಇತಿಹಾಸವನ್ನು ಒಟ್ಟುಮಾಡಿ ಜಿಲ್ಲೆಯಲ್ಲಿ ಕಂಡುಬರುವ ಜೈನ ಪರಂಪರೆಯನ್ನು ಆಮೂಲಾಗ್ರವಾಗಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

ಇದೇ ಮಾರ್ಗದಲ್ಲಿ ನಮಗೆ ಅನುಕೂಲಕರವಾಗುವ ಮತ್ತೊಂದು ಕೃತಿ ಪಿ. ಬಿ. ದೇಸಾಯಿ ಅವರ ದಕ್ಷಿಣ ಭಾರತದ ಜೈನ ಧರ್ಮದ ಬಗೆಗಿನ ಕುರಿತಾದ ಶಾಸನಗಳ ಅಧ್ಯಯನ ಆಧಾರಿತ ಸಂಪುಟ. ಇದು ದಕ್ಷಿಣ ಭಾರತಕ್ಕೆ ಜೈನ ಧರ್ಮದ ಕೊಡುಗೆ ಕರ್ನಾಟಕದಲ್ಲಿ ಅದರ ಐತಿಹಾಸಿಕ ಬೆಳವಣಿಗೆ ಮತ್ತು ಸಂಸ್ಕೃತಿಯ ವಿಸ್ತಾರವನ್ನು ಕಟ್ಟಿಕೊಡುವ ಕೃತಿಯಾಗಿದೆ.

ಇವಲ್ಲದೆ ಅಲ್ಲಲ್ಲಿ ಪ್ರಕಟವಾಗಿರುವ ಜಿಲ್ಲೆಯ ಬಗೆಗಿನ ಬಿಡಿ ಲೇಖನಗಳನ್ನೂ ಆಯ್ಕೆ ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿನ ವಾಸ್ತುಪರಂಪರೆಯ ಬಗೆಗೆ ಅದರಲ್ಲೂ ಗಂಗರ ಕಾಲದ ವಾಸ್ತು ಪರಂಪರೆಯ ಬಗೆಗೆ ಐ. ಕೆ. ಶರ್ಮರವರ ಕೃತಿ **'ಟೆಂಪಲ್ಸ್ ಆಫ್ ಗಂಗಾಸ್ ಆಫ್ ಕರ್ನಾಟಕ'** ಮತ್ತು ಇದೇ ಕೃತಿಯ ಸ್ಫೂರ್ತಿಯಿಂದ ರಚಿತವಾಗಿರಬಹುದಾದ ದೇವರಕೊಂಡಾರೆಡ್ಡಿಯವರ **'ಗಂಗರ ಕಾಲದ ವಾಸ್ತುಶಿಲ್ಪ'** ಕೃತಿ ಪ್ರಮುಖ ಆಕರ ಗ್ರಂಥಗಳಾಗಿ ಕಂಡುಬರುತ್ತವೆ.

ಘೋಷ್‌ರವರು ಪ್ರಕಟಪಡಿಸಿರುವ **'ಜೈನ ಆರ್ಟ್ ಅಂಡ್ ಆರ್ಕಿಟೆಕ್ಚರ್'** ನ 2ನೇ ಸಂಪುಟದಲ್ಲಿ ಮಂಡ್ಯ ಜಿಲ್ಲೆಯ ಕಂಬದಹಳ್ಳಿ, ಅರೆತಿಪ್ಪೂರು, ಬೋಗಾದಿ ಈ ಸ್ಥಳಗಳ ದೇವಾಲಯಗಳ ಬಗೆಗಿನ ಉಲ್ಲೇಖಗಳು ಕಂಡುಬರುತ್ತವೆ. ಇದೇ ಮಾಲಿಕೆಯ ಮೊದಲನೇ ಸಂಪುಟದಲ್ಲಿ ಕೂಡ ಜಿಲ್ಲೆಯ ಮಹತ್ವದ ಕೆಲವು ದೇವಾಲಯಗಳ ಬಗ್ಗೆ ಉಲ್ಲೇಖ ಕಂಡುಬರುತ್ತದೆ.

'ಎನ್‌ಸೈಕ್ಲೋಪೀಡಿಯ ಆಫ್ ಇಂಡಿಯನ್ ಆರ್ಕಿಟೆಕ್ಚರ್' ಮಾಲಿಕೆಯಲ್ಲಿಯೂ ಕಂಬದಹಳ್ಳಿ ಮತ್ತು ಇತರ ಜೈನ ದೇವಾಲಯಗಳ ಬಗೆಗಿನ ಮಾಹಿತಿ ದಾಖಲಾಗಿರುವುದು ಕಂಡುಬರುತ್ತದೆ. ಈ ಕೃತಿಯಲ್ಲಿ ಮುಖ್ಯವಾಗಿ ಕಂಬದಹಳ್ಳಿಯ ಮತ್ತು ಇತರ ಪ್ರಾಚೀನ ದೇವಾಲಯಗಳ ವಾಸ್ತುಶೈಲಿ, ಅವುಗಳ ನಿರ್ಮಾಣ ಕಾಲ ಇತ್ಯಾದಿಗಳನ್ನು ಕುರಿತ ವಿವರಗಳು ಲಭ್ಯವಿವೆ.

ಹಂಪ ನಾಗರಾಜಯ್ಯ ಅವರು ರಚಿಸಿರುವ **'ಬಾಹುಬಲಿ, ರೂಪ, ಸ್ವರೂಪ, ವಿಶ್ವರೂಪ'** ಕೃತಿ ಮಂಡ್ಯ ಜಿಲ್ಲೆಯಲ್ಲಿನ ಬಾಹುಬಲಿ ಮೂರ್ತಿಯ ವಿಶೇಷವಾಗಿ ಅರೆತಿಪ್ಪೂರು ಮತ್ತು ಬಸ್ತಿಹೊಸಕೋಟೆಯ ಬಾಹುಬಲಿ ಮೂರ್ತಿಯ ಬಗ್ಗೆ ಉಲ್ಲೇಖಿಸುವುದಲ್ಲದೆ ಬಾಹುಬಲಿಯ ಚರಿತ್ರೆ, ಮಹಾಮಸ್ತಕಾಭಿಷೇಕ ಮತ್ತು ಅದರ ಹಿನ್ನೆಲೆ ಮೊದಲಾದ ವಿಚಾರಗಳನ್ನು ದಾಖಲಿಸುತ್ತದೆ.

ಪಿ.ಎಂ. ಜೋಸೆಫ್ ಬರೆದಿರುವ **'ಜೈನಿಸಮ್ ಇನ್ ಸೌತ್ ಇಂಡಿಯಾ'** ಕೃತಿ ಕೂಡ ಜಿಲ್ಲೆಯ ಕೆಲವು ಜೈನ ನೆಲೆಗಳು, ಶಿಲ್ಪಗಳು ಇಲ್ಲಿನ ಜೈನ ಸಮುದಾಯದ ಆಚಾರ ವಿಚಾರಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ.

ಈ ಎಲ್ಲ ದ್ವಿತೀಯ ಆಕರಗಳನ್ನು ಹೊರತುಪಡಿಸಿದರೆ ಜೈನ ಧರ್ಮದ ಆಚಾರ, ಸಂಪ್ರದಾಯ, ಪರಂಪರೆ ಇತ್ಯಾದಿಗಳ ಮೂಲ ಸ್ವರೂಪವನ್ನು ಕನ್ನಡದಲ್ಲಿ ದಾಖಲಿಸಿರುವ ಅತ್ಯಂತ ಪ್ರಾರಂಭಿಕ ಕೃತಿ ಮಿರ್ಜಿ ಅಣ್ಣಾರಾಯರ **'ಜೈನಧರ್ಮ'**. ಇದು 1953ರ ನಂತರ ಜೈನಧರ್ಮದ ಬಗೆಗೆ ರಚನೆಯಾಗಿರುವ ಎಲ್ಲ ಪ್ರಬಂಧಗಳಲ್ಲೂ ಉಲ್ಲೇಖಿತವಾಗಿರುವ ಕೃತಿ. ಕನ್ನಡದಲ್ಲಿ ಜೈನ ಧರ್ಮದ ಬಗೆಗೆ ದೊರೆಯುವ ಮೂಲ ಸಾಮಗ್ರಿಗಳಲ್ಲಿ ಅತ್ಯಂತ ಹೆಚ್ಚು ನಿರ್ದಿಷ್ಟವು ಮತ್ತು ಸಂಶೋಧನಾತ್ಮಕವೂ ಆದ ಕೃತಿಯಾಗಿದ್ದು, ಜೈನ ಧರ್ಮದ ಪರಂಪರೆ ಇತಿಹಾಸ, ಸಂಪ್ರದಾಯ, ಶ್ರಾವಕ ಮತ್ತು ಜಿನ ಪರಂಪರೆ ಮುಂತಾದವುಗಳನ್ನು ಅತ್ಯಂತ ವಿಸ್ತಾರವಾಗಿ ದಾಖಲಿಸಿದೆ. ಜೈನ ಧರ್ಮದ ಶ್ರಾವಕಾಚಾರದ ಬಗೆಗೆ ನಿತ್ಯಪೂಜೆ ಇತ್ಯಾದಿಗಳನ್ನು ಅಧ್ಯಯನ ಮಾಡಲು ನಮಗೆ ಅನೇಕ ಶಾಸ್ತ್ರ ಗ್ರಂಥಗಳು ಅನುಕೂಲವಾಗಿವೆ.

ಎಸ್.ಡಿ. ಶೆಟ್ಟಿ ಅವರು ರಚಿಸಿರುವ **'ಹಬ್ಬ ಹರಿದಿನಗಳು'**, 1969ರಲ್ಲಿ ಮೈಸೂರಿನಿಂದ ಪ್ರಕಟವಾಗಿರುವ ಡಿ. ಪದ್ಮನಾಭ ಶರ್ಮ ಅವರ **'ಜೈನ ಸಂಸ್ಕೃತಿಯ ಪರ್ವಗಳು'** ಅಲ್ಲದೆ ಭುಜಬಲಿ ಶಾಸ್ತ್ರಿಯವರ **'ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ'** ಎಂಬ ಕೃತಿಗಳು ನಮಗೆ ಸಾಕಷ್ಟು ಆಕರ ಸ್ವರೂಪವಾಗಿ ಮೂಡಿಬರುತ್ತವೆ.

ಜೈನಧರ್ಮದ ಶ್ರಾವಕರು ಅನುಸರಿಸುವ ವಿಧಿ ವಿಧಾನಗಳನ್ನು ಷೋಡಶ ಕ್ರಿಯೆಗಳನ್ನು, ಧಾರ್ಮಿಕ ಆಚಾರ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳ ಬಗೆಗಿನ ಸಂದೇಹವನ್ನು ನಿವಾರಿಸಿಕೊಳ್ಳಲು ನಾವು ಈ ಮುಂದೆ ಉಲ್ಲೇಖಿಸಲಾಗಿರುವ ಕೃತಿಗಳನ್ನು ಪ್ರಮುಖವಾಗಿ ಅವಲಂಬಿಸಿದ್ದೇನೆ.

ಪಂಡಿತ ನಾಗರಾಜಯ್ಯರವರ (1998), **'ಹೋಮವಿಧಿ ಮತ್ತು ಕ್ರಿಯಾದರ್ಪಣ'**, ಹಾಗೂ ಪಂಡಿತ ನಾಗರಾಜಯ್ಯರವರ (2000 ಪರಿಷ್ಕೃತ), **ಹೋಮವಿಧಿ ಮತ್ತು ಕ್ರಿಯಾದರ್ಪಣ**, ಭುವನಹಳ್ಳಿ ಡಿ. ಶ್ರೀಪತಿ ಜೋಯಿಸ್, (ಸಂ), (1997), **ಷೋಡಶ ಕ್ರಿಯಾದರ್ಪಣಂ** ಮತ್ತು ಶಿಶುಪಾಲ ಪಾರ್ಶ್ವನಾಥ ಶಾಸ್ತ್ರಿ (1934), ಉಪನಯನ ವಿಧಿ, ಈ ಕೃತಿಗಳು ಜೈನಧರ್ಮದ ಆಚಾರ ವಿಚಾರಗಳ ವಿಷಯದಲ್ಲಿ ನಮ್ಮ ಮೂಲ ಆಕರ ಗ್ರಂಥಗಳಾಗಿವೆ.

ಹೀರಾಲಾಲ್ ಜೈನ್‌ರವರ **'ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ'** ಕೃತಿಯು ಜೈನಧರ್ಮದ ಪ್ರಾಥಮಿಕ ಆಕರಗಳಲ್ಲಿ ಅತಿಪ್ರಮುಖ ಗ್ರಂಥವಾಗಿ ಕಂಡುಬರುತ್ತದೆ. ಭಾರತೀಯ ಧಾರ್ಮಿಕ ಇತಿಹಾಸದ ಹಿನ್ನೆಲೆಯಲ್ಲಿ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ವಿವಿಧ ಕಾಲಘಟ್ಟಗಳಲ್ಲಿ ಜೈನಧರ್ಮದ ಬೆಳವಣಿಗೆ ಆ ಧರ್ಮಕ್ಕೆ ರಾಜಮನೆತನಗಳು ನೀಡಿದ ಪ್ರೋತ್ಸಾಹ ಮೊದಲಾದ ವಿಚಾರಗಳೊಂದಿಗೆ ಈ ಕೃತಿಯು ಜೈನಧರ್ಮ ಹಿಂದೂ ಧರ್ಮಕ್ಕೆ ಮತ್ತು ಭಾರತೀಯ ಸಂಸ್ಕೃತಿಗೆ ನೀಡಿರುವ ಕೊಡುಗೆಗಳನ್ನು, ಜೈನಧರ್ಮದ ಉದಯದಿಂದ ಸನಾತನ ಭಾರತೀಯ ಧರ್ಮದಲ್ಲಿ ಉಂಟಾದ ಬದಲಾವಣೆಗಳನ್ನು ಈ ಗ್ರಂಥ ಗುರುತಿಸುವುದರಿಂದ ಇದೇ ಬಗೆಯ ಬದಲಾವಣೆಗಳು ಜಿಲ್ಲೆಯಲ್ಲಿಯೂ ಉಂಟಾಗಿರುವುದರಿಂದ ಜಿಲ್ಲೆಯ ಧಾರ್ಮಿಕ ಇತಿಹಾಸ ಸಮೀಕ್ಷೆಗೆ ಈ ಗ್ರಂಥ ಒಂದು ಪ್ರಮುಖ ಆಕರವಾಗುತ್ತದೆ.

ಎಸ್.ಡಿ. ಶೆಟ್ಟಿಯವರು ಬರೆದಿರುವ **'ತುಳುನಾಡಿನ ಜೈನಧರ್ಮ'** ಕೃತಿಯು ತುಳುನಾಡಿನಲ್ಲಿ ಬೆಳೆದುಬಂದ ಜೈನ ತುಂಡರಸರು ಹೇಗೆ ಜೈನ ಧರ್ಮವನ್ನು ತಮ್ಮ ಪ್ರದೇಶದಲ್ಲಿ ನೆಲೆಗೊಳ್ಳಲು ಸಹಾಯಕರಾದರು ಮತ್ತು ಆ ಧರ್ಮದ ಶ್ರೇಯೋಭಿವೃದ್ಧಿಗೆ ಕಾರಣರಾದರೆಂಬುದನ್ನು ಅತ್ಯಂತ ಮನೋಜ್ಞವಾಗಿ ದಾಖಲಿಸಿರುತ್ತಾರೆ. ಈ ಕೃತಿಗಳೆಲ್ಲವೂ ಒಂದಲ್ಲ ಒಂದು ಕಡೆ ಒಂದು ಜಿಲ್ಲೆಯ ಇತಿಹಾಸವನ್ನು ಅದರಲ್ಲೂ ಧಾರ್ಮಿಕ ಚೌಕಟ್ಟಿನ ಇತಿಹಾಸವನ್ನು ಗುರುತಿಸುವಾಗ ಮಾರ್ಗದರ್ಶಿ ಗ್ರಂಥಗಳಾಗಿ ಕಂಡುಬರುತ್ತವೆ.

ಇಲ್ಲಿ ಸಮೀಕ್ಷಿಸಿರುವ ಗ್ರಂಥಗಳಾಗಲೀ ಅಥವಾ ಪ್ರತಿ ಅಧ್ಯಾಯದಲ್ಲಿ ಬಳಸಿಕೊಂಡಿರುವ ಗ್ರಂಥಗಳು ಜಿಲ್ಲೆಯ ಜೈನ ಇತಿಹಾಸದ ಬಗೆಗೆ ಮತ್ತು ಸಂಸ್ಕೃತಿಯ ಬಗೆಗೆ ಬೆಳಕು ಚೆಲ್ಲುವ ಪ್ರಯತ್ನಗಳಾದರೂ, ಆ ಪ್ರಯತ್ನಗಳು ಪೂರ್ಣ ಮಟ್ಟದವೂ ಮತ್ತು ಸಕಾರಾತ್ಮಕವಾದ ಮತ್ತು ನಕಾರಾತ್ಮಕವಾದ ಎಲ್ಲ ವಿಶ್ಲೇಷಣೆಗಳಿಗೂ ಒಳಗಾಗಿವೆ ಎಂದು ಹೇಳಲು ಸಾಧ್ಯವಿಲ್ಲದ ಕಾರಣ, ಒಂದು ಜಿಲ್ಲೆಯಲ್ಲಿ ಧಾರ್ಮಿಕ ಇತಿಹಾಸ ಬೆಳೆಯಲು ಕಾರಣವಾದ ಅಂಶಗಳು ಮತ್ತು ಅದು

ವಿನಾಶ ಹೊಂದಲು ಉಂಟಾದ ವಿಭಿನ್ನ ಕಾಲಘಟ್ಟಗಳ ಘಟನೆಗಳನ್ನು ಚಿತ್ರಿಸುವ ಉದ್ದೇಶದಿಂದಾಗಿ ಪ್ರಸ್ತುತ ಸಂಶೋಧನಾ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

1.6 ಅಧ್ಯಯನ ಸ್ವರೂಪ

ಪ್ರಸ್ತುತ ಪ್ರೌಢಪ್ರಬಂಧವನ್ನು ಏಳು ಅಧ್ಯಾಯಗಳಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ. ಅವುಗಳನ್ನು ಈ ಕೆಳಗಿನಂತೆ ದಾಖಲಿಸಬಹುದು.

ಅಧ್ಯಾಯ 1 : ಪ್ರಸ್ತಾವನೆ

ಇದರಲ್ಲಿ ಮಂಡ್ಯ ಜಿಲ್ಲೆಗೆ ಜೈನಧರ್ಮ ಸಾಗಿಬಂದ ಪರಂಪರೆಯನ್ನು ಮತ್ತು ಕಾಲಘಟ್ಟವನ್ನು ಅಧ್ಯಯನ ಮಾಡಿ ಆನಂತರ ಉಳಿದ ಕಾಲಘಟ್ಟಗಳಲ್ಲಿ ಜೈನಧರ್ಮದ ಬೆಳವಣಿಗೆಗೆ ಪೂರಕವಾದ ಅಂಶಗಳನ್ನು ಗಮನಿಸಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಆಕರಗಳು, ಅಧ್ಯಯನ ವಿಧ ಮತ್ತು ಅಧ್ಯಯನ ಕ್ರಮಗಳನ್ನು ಔಚಿತ್ಯ ರೀತಿಯಲ್ಲಿ ಅಡಕಮಾಡಲಾಗಿದೆ.

ಅಧ್ಯಾಯ 2 : ಮಂಡ್ಯ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ :

ಈ ಅಧ್ಯಾಯದಲ್ಲಿ ಮಂಡ್ಯ ಜಿಲ್ಲೆಯ ಐತಿಹಾಸಿಕ ಚಟುವಟಿಕೆಗಳು ಮತ್ತು ಅವುಗಳ ಪ್ರಭಾವವನ್ನು ಗಮನಿಸಲಾಗಿದೆ. ಜೊತೆಗೆ ಜಿಲ್ಲೆಯನ್ನಾಳಿದ ರಾಜಮನೆತನಗಳು ಹೇಗೆ ಜೈನ ಧರ್ಮದ ಬೆಳವಣಿಗೆಗೆ ಕಾರಣವಾದವೆಂಬುದನ್ನು ಸಂಕಲಿಸಲಾಗಿದೆ.

ಅಧ್ಯಾಯ 3 : ಮಂಡ್ಯ ಜಿಲ್ಲೆಯ ಜೈನ ಶಾಸನಗಳು :

ಈ ಅಧ್ಯಾಯದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಈವರೆಗೆ ಪ್ರಕಟವಾಗಿರುವ ಎಲ್ಲ ಶಾಸನಗಳನ್ನು ಕ್ರೋಢೀಕರಿಸಿ ಅವುಗಳಲ್ಲಿ ಕಂಡುಬರುವ ಉದ್ದೇಶ, ಜೈನ ಗುರುಗಳು, ದಾನಕೊಟ್ಟ ವ್ಯಕ್ತಿ, ಕಾಲ, ನಿರ್ಮಾಣಗೊಂಡ ಬಸದಿಗಳು, ಮುಡುಪಿದ ಯತಿಗಳು ಮತ್ತು ಕಂತಿಯರು ಇತ್ಯಾದಿ ಎಲ್ಲ ವಿವರಗಳನ್ನು ಸಮಗ್ರವಾಗಿ ದಾಖಲಿಸಿ ಜೈನ ಶಾಸನಗಳು ಮಂಡ್ಯ ಜಿಲ್ಲೆಯ ಸಂಸ್ಕೃತಿಗೆ ನೀಡಿರುವ ಕೊಡುಗೆಗಳನ್ನು ಐತಿಹಾಸಿಕ ಮೂಲ ಆಕರಗಳ ಹಿನ್ನೆಲೆಯಲ್ಲಿ ದಾಖಲಿಸಿ ಅವನ್ನು ವಿಮರ್ಶಿಸಿ ಜೈನಧರ್ಮಕ್ಕೆ ಮತ್ತು ಜಿಲ್ಲೆಯ ಸಂಸ್ಕೃತಿಗೆ ಅವುಗಳ ಕೊಡುಗೆಯನ್ನು ತೌಲನಿಕವಾಗಿ ಗುರುತಿಸಲಾಗಿದೆ.

ಅಧ್ಯಾಯ 4 : ಮಂಡ್ಯ ಜಿಲ್ಲೆಯ ಜೈನ ಸಂಸ್ಕೃತಿ :

ಈ ಅಧ್ಯಾಯದಲ್ಲಿ ಮಂಡ್ಯ ಜಿಲ್ಲೆಯ ಜೈನ ನೆಲೆಗಳಲ್ಲಿ ಕಂಡುಬರುವ ಜೈನ ಶ್ರಾವಕರು ಅನುಸರಿಸುವ ಆಚಾರ ವಿಚಾರಗಳು, ಧಾರ್ಮಿಕ ಪರಂಪರೆ, ಯತಿ ಪರಂಪರೆ, ಶ್ರಾವಕ ಪರಂಪರೆ,

ಶ್ರಾವಕ ಪರಂಪರೆಯಲ್ಲಿನ ಷೋಡಶ ಕರ್ಮಗಳು ಮತ್ತು ಅವರು ಆಚರಿಸುವ ಹಬ್ಬ ಮತ್ತು ಹರಿದಿನಗಳನ್ನು ಗುರುತಿಸಿ ಅವುಗಳನ್ನು ಆನುಷಂಗಿಕ ಆಕರಗಳು ಮತ್ತು ಪರಂಪರೆಯೊಂದಿಗೆ ಸಮೀಕರಿಸಿ ಪ್ರಸ್ತುತ ಜಿಲ್ಲೆಯಲ್ಲಿ ಆಚಾರದಲ್ಲಿರುವ ಆಚರಣೆಗಳನ್ನು ಗಮನಿಸಿ ಅವುಗಳೆಲ್ಲದರ ಸಾರ ಸಂಗ್ರಹವನ್ನು ಇಲ್ಲಿ ದಾಖಲಿಸಲಾಗಿದೆ.

ಅಧ್ಯಾಯ 5 : ಮಂಡ್ಯ ಜಿಲ್ಲೆಯ ಜೈನ ನೆಲೆಗಳು :

ಶಾಸನಗಳು ಮತ್ತು ಇತರ ಆನುಷಂಗಿಕ ಆಕರಗಳು ಉಲ್ಲೇಖಿಸುವ ಜೈನ ಸ್ಮಾರಕಗಳನ್ನು ಹಾಗೂ ಆ ಸ್ಮಾರಕಗಳಿರುವ ಗ್ರಾಮಗಳನ್ನು ಗುರುತಿಸಿ ಆ ಗ್ರಾಮ ಮತ್ತು ಸ್ಮಾರಕದ ಪರಂಪರೆಯನ್ನು ದಾಖಲಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಜಿಲ್ಲೆಯಲ್ಲಿ ಕಂಡುಬರುವ ಬಹುತೇಕ ಜೈನ ಸ್ಮಾರಕಗಳು ಮತ್ತು ನೆಲೆಗಳು ಇಂದು ತಮ್ಮ ಮೂಲ ಅಂತಃಸತ್ವವನ್ನು ಕಳೆದುಕೊಂಡು ಅವು ಕೇವಲ ಸ್ಮಾರಕಗಳಾಗಿ ಅಥವಾ ಅಂದಿನ ಜೈನ ಪರಂಪರೆಯ ಕುರುಹುಗಳಾಗಿ ಉಳಿದುಬಂದಿರುವುದನ್ನು ಸಹ ಗುರುತಿಸಲಾಗಿದೆ.

ಅಧ್ಯಾಯ 6 : ಮಂಡ್ಯ ಜಿಲ್ಲೆಯ ಜೈನ ವಾಸ್ತು ಮತ್ತು ಶಿಲ್ಪ ಪರಂಪರೆ :

ಈ ಅಧ್ಯಾಯದಲ್ಲಿ ಮಂಡ್ಯ ಜಿಲ್ಲೆಯ ಜೈನ ನೆಲೆಗಳಲ್ಲಿ ಕಂಡುಬರುವ ವಾಸ್ತುಶೈಲಿಯನ್ನು ಮತ್ತು ಆ ವಾಸ್ತು ನಿರ್ಮಿತಿಗಳಲ್ಲಿ ಕಂಡುಬರುವ ಜೈನ ಶಿಲ್ಪ ಪರಂಪರೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ಕೂಡ ಜಿಲ್ಲೆಯ ಜೈನ ಕ್ಷೇತ್ರಗಳಂತೆ ಕೆಲವೊಂದು ಕ್ಷೇತ್ರಗಳಲ್ಲಿ ಸ್ಮಾರಕಗಳು ತಮ್ಮ ಕೊನೆಯ ಅವಸ್ಥೆಯಲ್ಲಿರುವುದರಿಂದ ಹೆಚ್ಚಿನ ಮಾಹಿತಿಯನ್ನು ಅವು ಹೊರಹಾಕಲು ಸಾಧ್ಯವಾಗಿಲ್ಲದಿರುವುದನ್ನು ಕಂಡುಕೊಳ್ಳಲಾಗಿದೆ.

ಅಧ್ಯಾಯ 7 : ಉಪಸಂಹಾರ :

ಅಧ್ಯಾಯ ಎರಡರಿಂದ ಅಧ್ಯಾಯ ಆರರವರೆಗೆ ಮಂಡ್ಯ ಜಿಲ್ಲೆಯ ಜೈನ ಸಂಸ್ಕೃತಿಯನ್ನು ಅವಲೋಕಿಸಿ ಆಯಾ ಅಧ್ಯಾಯಗಳಲ್ಲಿ ಕಂಡುಕೊಂಡ ಹೊಸ ಅಂಶಗಳನ್ನು, ಶೋಧನೆಗಳನ್ನು, ಜೈನ ಧರ್ಮದ ಏರಿಳಿತಗಳನ್ನು ಪರಂಪರೆಯಲ್ಲಾಗಿರುವ ಬದಲಾವಣೆಗಳನ್ನು ಸಾರ ಸಂಗ್ರಹರೂಪದಲ್ಲಿ ಇಲ್ಲಿ ಸಂಗ್ರಹಿಸಿಕೊಡಲಾಗಿದೆ.

ಅಧ್ಯಾಯ – ಎರಡು

ಮಂಡ್ಯ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

2.1 ಭೌಗೋಳಿಕ ಅಂಶಗಳು

ಭೌಗೋಳಿಕವಾಗಿ ಮಂಡ್ಯ ಪ್ರದೇಶದ ಅಸ್ತಿತ್ವವನ್ನು ಸಹಸ್ರಾರು ವರ್ಷಗಳ ಹಿಂದಿನಿಂದಲೂ ಗುರುತಿಸಬಹುದು. ಹಿಂದೂ ಪುರಾಣಗಳ ಪ್ರಕಾರ ಕೃತಯುಗದ ಆದಿಯಲ್ಲಿ ಈ ಪ್ರದೇಶವನ್ನು 'ವೇದಾರಣ್ಯ'ವೆಂತಲೂ[1], ಅದೇ ಯುಗದ ನಂತರದ ಕಾಲದಲ್ಲಿ ಈ ಪ್ರದೇಶವನ್ನು 'ವಿಷ್ಣುಪುರ'ವೆಂತಲೂ ಕರೆಯಲಾಗುತ್ತಿತ್ತು.[2] ದ್ವಾಪರ ಯುಗದಲ್ಲಿ 'ಮುಂಡವೇಮು'[3] ಎಂಬ ಹೆಸರಿನಿಂದ ಕಲಿಯುಗದಲ್ಲಿ ಅಂದರೆ ಈಗ ಮಂಠೇಯ–ಮಂಡ್ಯವಾಗಿದೆ[4] ಎಂತಲೂ ತಿಳಿದುಬರುತ್ತದೆ, ಪುರಾಣ ಕಾಲದಲ್ಲಿ ಮಾಂಡವ್ಯ ಮುನಿಯ ತಪೋ ಭೂಮಿಯಾಗಿದ್ದ ಇದನ್ನು ಮಾಂಡವ್ಯನ ಪ್ರದೇಶ ಮಂಠೇಯ ಮಂಡ್ಯವೆಂದು ಕರೆದರೆಂತಲೂ ದಂತಕಥೆ ಇದೆ.[5]

ಮೊದಲು ಮೈಸೂರು ಜಿಲ್ಲೆಗೆ ಸೇರಿದ್ದ ಏಳು ತಾಲ್ಲೂಕುಗಳನ್ನೊಳಗೊಂಡು 1–07–1939ರಂದು ಸ್ವತಂತ್ರ ಮಂಡ್ಯ ಜಿಲ್ಲೆಯಾಗಿ ರಚಿಸಲಾಯಿತು.[6] ಈ ಜಿಲ್ಲೆಯಲ್ಲಿ. ಕೃಷ್ಣರಾಜಪೇಟೆ, ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣ, ಮಳವಳ್ಳಿ, ಮದ್ದೂರು ಮತ್ತು ಮಂಡ್ಯ ತಾಲ್ಲೂಕುಗಳಿವೆ. ಈ ಜಿಲ್ಲೆಯಲ್ಲಿ 11 ಪಟ್ಟಣಗಳೂ, 31 ಹೋಬಳಿಗಳೂ, 232 ಮಂಡಲ ಪಂಚಾಯತ್‌ಗಳೂ, 1369 ಗ್ರಾಮಗಳೂ ಇವೆ.[7] 2011ರ ಜನಗಣತಿಯ ಪ್ರಕಾರ ಜಿಲ್ಲೆಯ ಜನಗಣತಿ ಜನಸಂಖ್ಯೆ 1763705 ಜಿಲ್ಲೆಯ ಜನಸಾಂದ್ರತೆಯ ಪ್ರಮಾಣ ಪ್ರತಿ ಚದರ ಕಿ.ಮೀ.ಗೆ 356 ಮಂದಿ[8].

ಮಂಡ್ಯ ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ಭಾಗದ ಮಧ್ಯದಲ್ಲಿದೆ. ಇದು ಮೈಸೂರು ವಿಭಾಗಕ್ಕೆ ಸೇರಿದ ಜಿಲ್ಲೆಯಾಗಿದ್ದು ರಾಜ್ಯದ ದಕ್ಷಿಣದಲ್ಲಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ 4961 ಚ. ಕಿಲೋ ಮೀಟರ್‌ಗಳು.[9] ಇದು ಉತ್ತರ ಅಕ್ಷಾಂಶ 120–13 ನಿಂದ 130–04′ ಅಕ್ಷಾಂಶದವರೆಗೆ. ಪೂರ್ವ ರೇಖಾಂಶ 760–15′ ರಿಂದ 770–20′ ರೇಖಾಂಶದವರೆಗೆ ಹರಡಿದೆ.[10] ಜಿಲ್ಲೆಯು ದಕ್ಷಿಣ ಮತ್ತು ನೈರುತ್ಯದಲ್ಲಿ ಮೈಸೂರು, ಉತ್ತರದಲ್ಲಿ ತುಮಕೂರು ಪೂರ್ವದಲ್ಲಿ ಬೆಂಗಳೂರು, ವಾಯುವ್ಯದಲ್ಲಿ ಹಾಸನ ಜಿಲ್ಲೆಗಳಿಂದ ಸುತ್ತುವರಿದಿದೆ.

ಜಿಲ್ಲೆಯ ಬಹುಭಾಗ ಸಮತಟ್ಟಾದ ಬಯಲು ಪ್ರದೇಶ. ಅಲ್ಲಲ್ಲಿ ಸಣ್ಣ ಬೆಟ್ಟಗಳೂ ಹಾಗೂ ಎತ್ತರವಲ್ಲದ ಶ್ರೇಣಿಗಳೂ ಕಂಡುಬರುತ್ತವೆ. ಈ ಪ್ರದೇಶವು ಸಮುದ್ರಮಟ್ಟದಿಂದ ಸುಮಾರು 762 ರಿಂದ 914 ಮೀಟರ್ ಎತ್ತರದಲ್ಲಿದೆ.[11] ಮಳವಳ್ಳಿ ತಾಲ್ಲೂಕಿನ ಪೂರ್ವಭಾಗದಲ್ಲಿ ಬಿಳಿಗಿರಿರಂಗನಬೆಟ್ಟದ ಸಾಲಿನಿಂದ ಮುಂದುವರಿದ ಕೆಲವು ಬೆಟ್ಟದ ಶ್ರೇಣಿಗಳು, ಜಿಲ್ಲೆಯ ದಕ್ಷಿಣ ಅಂಚಿನಲ್ಲಿ ಹುಲಿಕೆರೆ ಮತ್ತು ಕರಿಘಟ್ಟ ಬೆಟ್ಟಗಳ ಸಾಲುಗಳೂ ಇವೆ. ಇವಲ್ಲದೆ ಕೃಷ್ಣರಾಜಪೇಟೆ, ನಾಗಮಂಗಲ ಇವುಗಳ ಸುತ್ತಲೂ ಕೆಲವು ಬೆಟ್ಟಗಳಿವೆ.[12] ಪಾಂಡವಪುರದ ಬಳಿಯ ಕುಂತಿಬೆಟ್ಟ, ಮಂಡ್ಯನಗರದ ಸಮೀಪದಲ್ಲಿ ಸಾತನೂರು ಬೆಟ್ಟಗಳು ಅಲ್ಲದೆ ಜಿಲ್ಲೆಯ ಮುಖ್ಯವಾದ ಎತ್ತರದ ಪ್ರದೇಶಗಳು ಕಂಡುಬರುತ್ತದೆ. ಈ ಜಿಲ್ಲೆಯ ಆದಿಚುಂಚನಗಿರಿ ಬೆಟ್ಟ (1060 ಮೀಟರ್)[13] ಮಳವಳ್ಳಿ ತಾಲ್ಲೂಕಿನ ಕಬ್ಬಾಳದುರ್ಗ (1069 ಮೀ)[14] ಶ್ರೀರಂಗಪಟ್ಟಣದ ಬಳಿಯ ಕರಿಘಟ್ಟ (974.44 ಮೀ)[15] ಮೇಲುಕೋಟೆ (1246.32 ಮೀ)[16] ನಾರಾಯಣದುರ್ಗ (124.32 ಮೀ)[17] ಇವು ಪ್ರಮುಖ ಬೆಟ್ಟ ಪ್ರದೇಶಗಳು.

ಜಿಲ್ಲೆಯಲ್ಲಿ ಹರಿಯುವ ನದಿಗಳು ಇಲ್ಲಿನ ಬೆಟ್ಟಗಳು ನದಿ ಬಯಲು ಪ್ರದೇಶಗಳು ಜಿಲ್ಲೆಯ ಸಂಸ್ಕೃತಿಗೆ ಮಹತ್ವದ ಕಾಣಿಕೆಯನ್ನು ನೀಡಿದೆ. ಕ್ರಿ.ಶ. 10ನೆಯ ಶತಮಾನಕ್ಕೆ ಪೂರ್ವದಲ್ಲಿ ಬಹುತೇಕ ನಿರ್ಲಕ್ಷತೆಗೆ ಒಳಗಾಗಿದ್ದು ಈ ಪ್ರದೇಶದಲ್ಲಿ ಕೆಲವು ಜೈನ ಸ್ಮಾರಕಗಳು ಕಂಡುಬರುತ್ತವಾದರು ಅತಿ ಹೆಚ್ಚು ಜನವಸತಿಯ ಪ್ರದೇಶವಾಗಿರಲಿಲ್ಲ. ಕರ್ನಾಟಕದ ರಾಜಮನೆತನಗಳು ಹಾಗೂ ದಕ್ಷಿಣದ ತಮಿಳು ರಾಜ ಮನೆತನಗಳ ನಡುವಿನ ಯುದ್ಧದ ಕ್ಷೇತ್ರವಾಗಿ ಈ ಜಿಲ್ಲೆಯು ಮಾರ್ಪಟ್ಟಿದ್ದಂತೆ ಕಂಡುಬರುತ್ತದೆ. ಆತಕೂರಿನ ಶಾಸನವು ಇದಕ್ಕೆ ಜ್ವಲಂತ ಸಾಕ್ಷಿ. ಚೋಳರು ಗಂಗವಾಡಿಯನ್ನು ಆಕ್ರಮಿಸಿದ ನಂತರ ಜಿಲ್ಲೆಯಲ್ಲಿ ನೂರು ವರ್ಷಗಳ ಕಾಲ ಶಾಂತಿ ಮತ್ತು ಸುವ್ಯವಸ್ಥೆ ನೆಲೆಸಿತು. ಆ ಕಾಲ ಘಟ್ಟದಲ್ಲಿ ಈ ಪ್ರದೇಶ ಸಾಕಷ್ಟು ಜನವಸತಿಯ ಕೇಂದ್ರವಾಗಿ ಪರಿವರ್ತಿತವಾಯಿತು. ಸಂಸ್ಕೃತಿಯ ಕ್ಷೇತ್ರಗಳು ಬೆಳವಣಿಗೆಗೊಂಡಿದ್ದರಿಂದ ಜಿಲ್ಲೆಯಲ್ಲಿ ಚತುರ್ವೇದಿಮಂಗಲ ರಚನೆ ಇದೇ ಕಾಲದಲ್ಲಿ ಉಂಟಾಯಿತೆಂದು ಈಗಾಗಲೆ ಶಾಸನ ಅಧ್ಯಯನಗಳು ನಿರೂಪಿಸಿವೆ.

ಕ್ರಿ.ಶ. 12ನೇ ಶತಮಾನದ ಪ್ರಾರಂಭದ ದಿನಗಳಲ್ಲಿ ರಾಮಾನುಜಾಚಾರ್ಯರು ತಮಿಳುನಾಡಿನಿಂದ ಕರ್ನಾಟಕಕ್ಕೆ ವಲಸೆ ಬಂದು ಜಿಲ್ಲೆಯ ತೊಂಡನೂರು ಮತ್ತು ಮೇಲುಕೋಟೆಗಳಲ್ಲಿ ವಾಸಿಸಿದರೆಂದು ಇಲ್ಲಿನ ಸ್ಥಳ ಪುರಾಣಗಳು ಉಲ್ಲೇಖಿಸುತ್ತವೆ. ಆನಂತರದ ದಿನಗಳಲ್ಲಿ ಜಿಲ್ಲೆಯ ಹಲವಾರು ಕ್ಷೇತ್ರಗಳು ಮಹತ್ವವನ್ನು ಪಡೆದುಕೊಂಡವು. ಹೊಯ್ಸಳರು ಮತ್ತು

ವಿಜಯನಗರದ ಕಾಲದಲ್ಲಿ ಜಿಲ್ಲೆಯು ಅತಿವೇಗವಾಗಿ ಬೆಳವಣಿಗೆಯನ್ನು ಸಾಧಿಸಿತು ಕಾರಣ ಹೊಯ್ಸಳರ ಆಳ್ವಿಕೆಗೆ ಒಳಪಟ್ಟ ತಮಿಳುನಾಡು ಪ್ರದೇಶಗಳನ್ನು ಸಂಪರ್ಕಿಸಲು ಜಿಲ್ಲೆಯ ಸಂಚಾರ ವ್ಯವಸ್ಥೆ ಮಾರ್ಗವಾಯಿತು. ಆಳರಸರು ಸೈನ್ಯ ಮತ್ತು ಇತರ ವ್ಯವಸ್ಥೆಗಳನ್ನು ನಡೆಸುತ್ತಿದುದರಿಂದ ಸಂಚಾರ ಅಭಿವೃದ್ಧಿಯ ಜೊತೆಗೆ ವ್ಯಾಪಾರ ವಹಿವಾಟು, ತಾತ್ಕಾಲಿಕ ತಂಗು ಪ್ರದೇಶಗಳು ಬೆಳೆದ ನಂತರ ಅವುಗಳು ಪ್ರಮುಖ ಪ್ರದೇಶಗಳಾಗಿ ಮಾರ್ಪಟ್ಟಿರುವುದನ್ನು ಶಾಸನಗಳು ತಿಳಿಸುತ್ತವೆ. ಇವುಗಳೆಲ್ಲವು ಜಿಲ್ಲೆಯ ಪ್ರಮುಖ ನದಿಬಯಲಿನಲ್ಲಿಯೇ ನಡೆದಿರುವುದು ಮತ್ತೊಂದು ವಿಶೇಷ. ನದಿಗಳು ಜೀವನಾವಶ್ಯಕತೆಗೆ ನೀರಿನ ಆಶ್ರಯಗಳಾಗಿದ್ದುದಲ್ಲದೆ, ಸಾಂಸ್ಕೃತಿಕ ನೆಲೆಗಟ್ಟನ್ನು ಕಟ್ಟಿಕೊಟ್ಟ ಕ್ಷೇತ್ರಗಳಾಗಿವೆ, ಇದಲ್ಲದೆ ಜಿಲ್ಲೆಯ ನದಿಗಳು ನಯನ ಮನೋಹರವಾದ ನೈಸರ್ಗಿಕ ತಾಣಗಳನ್ನು ಸೃಷ್ಟಿಸಿವೆ, ಜಿಲ್ಲೆಯ ಹೇಮಾವತಿ ನದಿ–ಬಯಲು ಹೇಮಾವತಿ ಕ್ಷೇತ್ರ, ಕಾವೇರಿ ನದಿಯ ಪಾತ್ರದಲ್ಲಿರುವ ಕನ್ನಂಬಾಡಿ, ಬಲಮುರಿ ಕ್ಷೇತ್ರ. ಶ್ರೀರಂಗಪಟ್ಟಣ, ಮಧ್ಯರಂಗ (ಶಿವನ ಸಮುದ್ರ) ಮತ್ತು ಶಿಂಷಾ ಜಲಪಾತವನ್ನು ಸೃಷ್ಟಿಸಿದೆ, ಇದರಲ್ಲಿ ಶ್ರೀರಂಗಪಟ್ಟಣದ ರಂಗನತಿಟ್ಟು ಪ್ರಪಂಚದ ಹಲವಾರು ಜಾತಿಯ ಪಕ್ಷಿಗಳಿಗೆ ಮತ್ತು ಮೊಸಳೆಗಳಿಗೆ ಆಶ್ರಯ ತಾಣವಾಗಿ ನೈಸರ್ಗಿಕ ಪ್ರವಾಸಿಗರ ಆಕರ್ಷಣೆಯ ತಾಣವಾಗಿ ಕಾವೇರಿ ನದಿ ರೂಪುಗೊಳಿಸಿದೆ.

ಜಿಲ್ಲೆಯ ಗಿರಿಶ್ರೇಣಿಗಳಾದ ಆದಿಚುಂಚನಗಿರಿ, ಮೇಲುಕೋಟೆ, ಸಿಂಧಘಟ್ಟ, ಕರಿಘಟ್ಟ, ಪಾಂಡವಪುರದ ಕುಂತಿಬೆಟ್ಟ ಮೊದಲಾದವುಗಳು ಪ್ರಾಚೀನ ಮಾನವನ ಕಾಲದಿಂದ ಇತಿಹಾಸ ಕಾಲದ ಮಾನವನ ಆಯಕಟ್ಟಿನ ಪ್ರದೇಶವಾಗಿ ಬೆಳೆದು ಎಲ್ಲಾ ಕಾಲಘಟ್ಟಗಳಲ್ಲಿ ಸಮಾಜಕ್ಕೆ ಮತ್ತು ಸಂಸ್ಕೃತಿಗೆ ಆಶ್ರಯ ತಾಣಗಳಾಗಿ ಕಾರ್ಯನಿರ್ವಹಿಸಿ ಇಂದು ಆಸ್ತಿಕರ ಮತ್ತು ಆಸಕ್ತರ ಆಕರ್ಷಣೆಯ ಕೇಂದ್ರಗಳಾಗಿ ಪರಿವರ್ತಿತವಾಗಿವೆ. ಇವಲ್ಲದೆ ಹಲವಾರು ಬಯಲು ಪ್ರದೇಶದ ವಾಸದ ನೆಲೆಗಳು ಅತ್ಯುತ್ತಮ ವ್ಯಾಪಾರ ಕೇಂದ್ರಗಳಾಗಿ ಪರಿವರ್ತಿತವಾದದ್ದು ಇಲ್ಲಿನ ಸುಖ ಹವೆಯ ಪ್ರಭಾವದಿಂದಾಗಿ ಎಂದು ಈ ದಿಸೆಯಲ್ಲಿ ಗುರುತಿಸಬಹುದಾಗಿದೆ.

ಹೀಗಾಗಿ ಜಿಲ್ಲೆಯ ಹವಾಗುಣ, ನದಿ ಮತ್ತು ಬೆಟ್ಟಗುಡ್ಡ ಪ್ರದೇಶ ಪ್ರಾಚೀನ ಮಾನವನ ವಸತಿ ಕೇಂದ್ರವಾಗಿ ನಂತರ ಸಾಮ್ರಾಜ್ಯಶಾಹಿಗಳ ಆಸೆಯನ್ನು ಪೂರೈಸಿ ಇಂದು ಪ್ರವಾಸಿಗರನ್ನು ತನ್ನ ಇತಿಹಾಸ ಮತ್ತು ಭೌಗೋಳಿಕ ಮಹತ್ವವನ್ನು ಸಾರಲು ಆಕರ್ಷಿಸುತ್ತಿರುವುದು ಜಿಲ್ಲೆಯ ಮಹತ್ವವೆಂದರೆ ತಪ್ಪಾಗಲಾರದು.

2.2 ಐತಿಹಾಸಿಕ ಹಿನ್ನೆಲೆ

ಮಂಡ್ಯ ಜಿಲ್ಲೆಯ ಪುರಾತತ್ವ ಶೋಧನೆಯು ಒಂದು ಮಹತ್ವದ ಇತಿಹಾಸ ಡಾ. ಅ. ಸುಂದರ ರವರ ಪ್ರಕಾರ ಮಂಡ್ಯ ಜಿಲ್ಲೆಯ ಪ್ರಾಂತ್ಯದಲ್ಲಿ ಪುರಾತತ್ವ ಶೋಧನೆಯು ಮೈಸೂರು ಜಿಲ್ಲೆಯ ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಬೆಂಜಮನ್ ಲೂಯಿಸ್‌ರವರ ಕಾಲದಲ್ಲಿ ನಿಖರವಾಗಿ ಹೇಳುವುದಾದರೆ 1894ರಲ್ಲಿ[18] ಈ ಕಾರ್ಯ ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಈ ಜಿಲ್ಲೆಯಲ್ಲಿ ಪ್ರಾಗೈತಿಹಾಸಿಕ ಕಾಲದ ಎಲ್ಲ ಬಗೆಯ ನೆಲೆಗಳು ಕಂಡುಬಂದಿದೆ. ಹಳೆಯ ಶಿಲಾಯುಗದ, ಆದಿ ಶಿಲಾಯುಗದ, ಮಧ್ಯ ಶಿಲಾಯುಗದ ಮತ್ತು ಅಂತ್ಯ ಶಿಲಾಯುಗದ ನೆಲೆಗಳು, ಸೂಕ್ಷ್ಮ ಶಿಲಾಯುಗದ ನೆಲೆಗಳು, ನೂತನ ಶಿಲಾಯುಗದ ನೆಲೆಗಳು ಮತ್ತು ಬೃಹತ್ ಶಿಲಾಯುಗದ ನೆಲೆಗಳು ಸಹ ದೊರಕಿವೆ. ಬೃಹತ್ ಶಿಲಾಯುಗವನ್ನು ಕ್ರಿ.ಶ 2ನೇ ಶತಮಾನದವರೆಗೆ ಗುರುತಿಸಲಾಗಿದೆ. ಪ್ರಾಯಶಃ ಗಂಗರು ಈ ಪ್ರದೇಶದಲ್ಲಿ ಪ್ರಭುತ್ವ ಸ್ಥಾಪಿಸುವುದರೊಂದಿಗೆ ಇಲ್ಲಿನ ಜನವಸತಿ ಅದೇ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬಂದಿರಬೇಕೆಂದು ಭಾವಿಸಬೇಕಾಗುತ್ತದೆ. ಜಿಲ್ಲೆಯಲ್ಲಿ ಈ ಮೇಲೆ ಹೇಳಿದ ಎಲ್ಲಾ ಸಾಂಸ್ಕೃತಿಕ ನೆಲೆಗಳು ವರದಿಯಾಗಿವೆಯೆ ಹೊರತು ಅವುಗಳ ಸಮಗ್ರ ಅಧ್ಯಯನ ನಡೆದಿಲ್ಲವೆಂದು ಹೇಳಬಹುದು. ಆದಿ, ಹಳೆಯ ಶಿಲಾಯುಗದ ಅಥವಾ ಹಳೆ ಶಿಲಾಯುಗದ ಆದಿ ಭಾಗದ ನೆಲೆಗಳು ಕೃಷ್ಣರಾಜಪೇಟೆ ತಾಲ್ಲೂಕಿನ ರಂಗನಾಥಪುರ[19], ಪಾಂಡವಪುರ ತಾಲ್ಲೂಕಿನ ಕುಂತಿಬೆಟ್ಟ[20], ಶ್ರೀರಂಗಪಟ್ಟಣದ ರಂಗನತಿಟ್ಟು[21] ಮತ್ತು ಹಂಗರಹಳ್ಳಿ[22]ಯಲ್ಲಿ ಕಂಡುಬಂದಿರುವುದು ವರದಿಯಾಗಿದೆ.

ಮಧ್ಯ ಶಿಲಾಯುಗದ ಅಥವಾ ಹಳೆಯ ಶಿಲಾಯುಗದ ಮಧ್ಯಭಾಗದ ಸಂಸ್ಕೃತಿಯ ನೆಲೆಯು ಕುಂತಿಬೆಟ್ಟ, ರಂಗನತಿಟ್ಟು ನೆಲೆಗಳಲ್ಲಿ ವರದಿಯಾಗಿದೆ.[23]ಇದಾದ ನಂತರ ಜಿಲ್ಲೆಯಿಂದ ವರದಿಯಾಗುವ ಪ್ರಾಚೀನ ಮಾನವನ ನೆಲೆಯೆಂದರೆ ಸೂಕ್ಷ್ಮ ಶಿಲಾಯುಗದ ನೆಲೆ ಶ್ರೀರಂಗಪಟ್ಟಣ ದ್ವೀಪದ ರಂಗನಾಥ ದೇವಾಲಯದ ದಕ್ಷಿಣ ಭಾಗಕ್ಕಿರುವ ಇಂದು ವಾಸದ ನೆಲೆಯಾಗಿ ಪರಿವರ್ತಿಸಲಾಗಿರುವ ರಂಗನಾಥ ನಗರದಲ್ಲಿ ದೊರೆತ ಕೆಲವು ಆಯುಧಗಳನ್ನು ಸೂಕ್ಷ್ಮ ಶಿಲಾಯುಗದ ಆಯುಧಗಳೆಂದು ಇತಿಹಾಸ ದರ್ಶನ 13ನೇ ಸಂಪುಟದಲ್ಲಿ ಉಲ್ಲೇಖಿಸಲಾಗಿದೆ.[24] ಈ ಬಗ್ಗೆ ಬರೆಯುತ್ತಾ ಕರ್ನಾಟಕ ಪುರಾತತ್ವ ನೆಲೆಗಳ ಗ್ರಂಥದಲ್ಲಿ ಡಾ. ಕೆ.ಬಿ. ಶಿವತಾರಕ್[25] ಅದು ನೆಲೆಯಾಗಿದುದ್ದರ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಇದಾದ ನಂತರ ಜಿಲ್ಲೆಯಲ್ಲಿ ದೊರೆಯುವ ಪ್ರಾಚೀನ ಮಾನವನ ನೆಲೆಗಳು ನೂತನ ಶಿಲಾಯುಗಕ್ಕೆ ಸೇರಿದ ನೆಲೆಗಳಾಗಿವೆ. ಪಾಂಡವಪುರ ತಾಲ್ಲೂಕಿನ ಕುಂತಿಬೆಟ್ಟ, ಮಳವಳ್ಳಿ ತಾಲ್ಲೂಕಿನ ಶೆಟ್ಟಹಳ್ಳಿ, ಉಲ್ಲಂಬಳ್ಳಿ, ಶ್ರೀರಂಗಪಟ್ಟಣ ನೆಲೆಗಳಿಂದ

ವರದಿಯಾಗಿವೆ.[26] ಶ್ರೀರಂಗಪಟ್ಟಣ ಮತ್ತು ಶೆಟ್ಟಹಳ್ಳಿಗಳನ್ನು ರಾಬರ್ಟ್ ಬ್ರೂಸ್‌ಪೂಟ್ ಕಂಡುಹಿಡಿದು ವರದಿ ಮಾಡಿದ್ದಾರೆ.[27]

ಬೃಹತ್ ಶಿಲಾಯುಗದ ನೆಲೆಗಳು ಪಾಂಡವಪುರ ತಾಲ್ಲೂಕಿನ ಕುಂತಿಬೆಟ್ಟ, ತೊಂಡನೂರು, ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ, ಹಲಗೂರು, ಹುಲ್ಲಂಬಳ್ಳಿ ಸ್ಥಳಗಳಿಂದ ವರದಿಯಾಗಿವೆ.[28] ಇತಿಹಾಸ ಆರಂಭ ಯುಗದ ಎರಡು ನೆಲೆಗಳನ್ನು ಈವರೆಗೆ ಜಿಲ್ಲೆಯಲ್ಲಿ ಕಂಡುಹಿಡಿಯಲಾಗಿದ್ದು, ಅವು ಪಾಂಡವಪುರ ಮತ್ತು ಪಾಂಡವಪುರ ಸಮೀಪದ ಕುಂತಿಬೆಟ್ಟದಿಂದ ವರದಿಯಾಗಿವೆ.[29] ಜಿಲ್ಲೆಯಲ್ಲಿ ದೊರೆತಿರುವ ಪ್ರಾಗೈತಿಹಾಸಿಕ ಮಾನವನ ನೆಲೆಗಳು ಕಾವೇರಿ ಜಲಾನಯನ ಪ್ರದೇಶದಲ್ಲಿ ವಾಸವಾಗಿದ್ದ ಪ್ರಾಗೈತಿಹಾಸಿಕ ಮಾನವನು ಇತರ ನೆಲೆಗಳೊಂದಿಗೆ ಸಂಪರ್ಕ ಸಾಧಿಸಿದವು ಎಂದು ಹೇಳಬಹುದಾಗಿದೆ. ಕಾರಣ ಮೈಸೂರು, ತುಮಕೂರು ಮತ್ತು ಇತರೆ ಜಿಲ್ಲೆಯಲ್ಲಿ ದೊರೆತಿರುವ ಪ್ರಾಗೈತಿಹಾಸಿಕ ನೆಲೆಗಳಲ್ಲಿ ದೊರಕಿರುವ ಆಯುಧೋಪಕರಣಗಳನ್ನು, ಮಂಡ್ಯ ಜಿಲ್ಲೆಯಲ್ಲಿ ದೊರೆತಿರುವ ಆಯುಧೋಪಕರಣಗಳನ್ನು ಹೋಲಿಸಿದಾಗ ಯಾವುದೇ ಬಗೆಯ ವ್ಯತ್ಯಾಸ ಕಂಡುಬಂದಿಲ್ಲ.[30] ಹೀಗಾಗಿ ಜಿಲ್ಲೆಯ ನೆಲೆಗಳು ಅಂದಿನ ಕಾಲದಲ್ಲಿ ಕಾವೇರಿ ಕೊಳ್ಳವು ಇತರೆ ನೆಲೆಗಳೊಂದಿಗೆ ಸಂಪರ್ಕ ಸಾಧಿಸಿದ್ದವೆಂಬುದನ್ನು ತಳ್ಳಿ ಹಾಕುವಂತಿಲ್ಲ. ಪ್ರಾಗೈತಿಹಾಸಿಕ ಮಾನವ ನೆಲೆಗಳು ಈ ದೃಷ್ಟಿಯಿಂದ ಅಧ್ಯಯನ ಮಾಡಲು ಅಧ್ಯಯನದ ಅಕಾಂಕ್ಷಿಗಳಿಗೆ ಮಹತ್ವದ ಸೂಚನೆಯಾಗಿದೆ. ಇಂದಿಗೂ ಜಿಲ್ಲೆಯ ಕೆ.ಆರ್. ಪೇಟೆ, ನಾಗಮಂಗಲ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳು ಈ ಬಗೆಯ ಕ್ಷೇತ್ರಕಾರ್ಯ ಕೈಗೊಳ್ಳಲು ಸಹಕಾರಿಯಾಗಿವೆ. ಆದರೆ ಉಳಿದ ಮೂರು ತಾಲೂಕುಗಳಲ್ಲಿ ಶ್ರೀರಂಗಪಟ್ಟಣ, ಪಾಂಡವಪುರ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ನೀರಾವರಿ ಸೌಕರ್ಯದಿಂದಾಗಿ ಈ ಬಗೆಯ ಅಧ್ಯಯನಕ್ಕೆ ತೊಡಕಾಗಿವೆ ಎಂದು ಮಾತ್ರ ಹೇಳಬಹುದು.

ಮಂಡ್ಯ ಜಿಲ್ಲೆಯ ಕುಂತಿಬೆಟ್ಟ ಮತ್ತು ಪಾಂಡವಪುರ ನೆಲೆಗಳು ಇತಿಹಾಸದ ಆರಂಭದ ನೆಲೆಗಳಾಗಿ ಗೋಚರವಾಗಿವೆ. ಇವನ್ನು ನಾವು ತಮಿಳುನಾಡಿನ ಸಂಗಂ ಸಂಸ್ಕೃತಿಯ ಸಮಕಾಲೀನ ಸಂಸ್ಕೃತಿಯ ನೆಲೆಗಳೆಂದು ಗುರುತಿಸಬೇಕಾಗುತ್ತದೆ. ಸಾಮಾನ್ಯವಾಗಿ ಕರ್ನಾಟಕ ಇತಿಹಾಸ ಬರೆಯುವ ಎಲ್ಲಾ ವಿದ್ವಾಂಸರು ಈ ಕಾಲಘಟ್ಟವನ್ನು ಮೌರ್ಯ, ಶಾತವಾಹನ ಯುಗವೆಂದು ದಾಖಲಿಸುತ್ತಾರೆ.[31] ಆದರೆ ಕರ್ನಾಟಕದ ದಕ್ಷಿಣ ಜಿಲ್ಲೆಗಳಲ್ಲಿ ಶಾತವಾಹನರ ಕುರುಹುಗಳು ನಮಗೆ ದೊರೆಯದಿರುವ ಕಾರಣ ಈ ಪ್ರದೇಶದಲ್ಲಿ ಆ ಪ್ರದೇಶದ ಕಾಲಘಟ್ಟವನ್ನು ಶಾತವಾಹನ ಯುಗವೆಂದು ಕರೆಯಲು ಕಷ್ಟಸಾಧ್ಯವಾಗುತ್ತದೆ. ಜಿಲ್ಲೆಯ ಸಮೀಪದ ಶ್ರವಣಬೆಳಗೊಳದಲ್ಲಿ

ಮೌರ್ಯ ಚಕ್ರವರ್ತಿ ಚಂದ್ರಗುಪ್ತನು ತನ್ನ ಗುರು ಭದ್ರಬಾಹುವಿನೊಂದಿಗೆ ಆಗಮಿಸಿ ಸಲ್ಲೇಖನವನ್ನು ಕೈಗೊಂಡನೆಂದು ಐತಿಹ್ಯಗಳು ಮತ್ತು ಪುರಾಣಗಳು ತಿಳಿಸಿದರೂ ಇಲ್ಲಿನ ಪ್ರಾಕ್ತನ ಅವಶೇಷಗಳು ಈ ವಿಷಯವನ್ನು ಇನ್ನೂ ವಸ್ತುನಿಷ್ಠವಾಗಿ ನಿರೂಪಿಸದೆ ಇರುವ ಕಾರಣ ಈ ವಿಷಯದ ಸತ್ಯ ಸತ್ಯತೆಯನ್ನು ಅನುಮಾನದಿಂದಲೇ ನೋಡಬೇಕಾಗುತ್ತದೆ. ಹಾಗಾದರೂ ಕಾವೇರಿ ಬಯಲು ಪಲ್ಲವರ ನೆಲೆವೀಡಾಗಿತ್ತೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಈ ವಿಷಯವನ್ನು ನಿರ್ಧರಿಸುವುದೇ ಮತ್ತೊಂದು ಸಂಶೋಧನೆಯ ವಿಷಯವಾಗುವ ಕಾರಣ ಈ ವಿಷಯವನ್ನು ವಿಸ್ತರಿಸದೇ ಮುಂದುವರೆಯಲಾಗಿದೆ. ಜಿಲ್ಲೆಯ ಇತಿಹಾಸದ ಬಗೆಗೆ ಈವರೆಗೆ ಪ್ರಕಟವಾಗಿರುವ ಶಾಸನಗಳನ್ನು ಮತ್ತು ಲೇಖನಗಳನ್ನು ಆಧರಿಸಿ ಜಿಲ್ಲೆಯ ಇತಿಹಾಸವನ್ನು ನಿರೂಪಿಸುವ ಪ್ರಯತ್ನ ಮಾಡಲಾಗಿದೆ.

ಬೆಂಜಮನ್ ಲೂಯಿಸ್ ರೈಸ್, ಎಂ.ಹೆಚ್. ಕೃಷ್ಣ ಮತ್ತು ಆರ್. ಗೋಪಾಲ್‌ರವರ ಪರಿಶ್ರಮದಿಂದಾಗಿ ಜಿಲ್ಲೆಯ ಶಾಸನ ಸಂಪುಟಗಳು ಪ್ರಕಟವಾಗಿವೆ. ಜಿಲ್ಲೆಯಲ್ಲಿ ದೊರೆತ ಶಾಸನಗಳನ್ನು ಎಫಿಗ್ರಫಿಯಾ ಕರ್ನಾಟಿಕ ನೂತನ ಆವೃತ್ತಿಯ 6 ಮತ್ತು 7ನೇ ಸಂಪುಟಗಳಲ್ಲಿ ಕಾಣಬಹುದು.[32] ಜಿಲ್ಲೆಯಲ್ಲಿ ಒಟ್ಟು ಪ್ರಕಟವಾಗಿರುವ ಒಟ್ಟು ಶಾಸನಗಳು 1065 ಅಂದರೆ 6ನೇ ಸಂಪುಟದಲ್ಲಿ 499 ಶಾಸನಗಳು ಏಳನೇ ಸಂಪುಟದಲ್ಲಿ 566 ಶಾಸನಗಳು ಪ್ರಕಟವಾಗಿವೆ. ಈಗ ಪ್ರಕಟವಾಗಿರುವ ಶಾಸನಗಳಲ್ಲಿ ಕೇವಲ 28 ಶಾಸನಗಳು ಮಾತ್ರ ತಾಮ್ರ ಪಟಗಳ ಮೇಲೆ ದೇವಾಲಯದ ಬಾಗಿಲುಗಳ ಹಿತ್ತಾಳೆಯ ಹೊದಿಕೆಯ ಮೇಲೆ ಮತ್ತು ಪಾತ್ರೆ ಮತ್ತು ಇತರೆ ಉಪಕರಣಗಳ ಮೇಲೆ ಬರೆದವುಗಳಾದರೆ ಉಳಿದ ಶಾಸನಗಳು ಶಿಲಾ ಶಾಸನಗಳಾಗಿವೆ.[33] ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ 500 ರಷ್ಟು ಶಾಸನಗಳು ಮಾತ್ರ ರಾಜ ಮನೆತನದ ರಾಜರುಗಳಿಂದ ಅಥವಾ ಅಧಿಕಾರ ವರ್ಗದಿಂದ ಹೊರಡಿಸಿದ ಶಾಸನಗಳಾಗಿದ್ದು ಉಳಿದ ಐನೂರಕ್ಕೂ ಹೆಚ್ಚು ಶಾಸನಗಳು ಸಾಮಾನ್ಯರ ಶಾಸನಗಳಾಗಿವೆ.[34] ಇವುಗಳ ಮತ್ತು ಆನುಷಂಗಿಕ ಆಕರಗಳ ಸಹಾಯದಿಂದ ಜಿಲ್ಲೆಯ ಇತಿಹಾಸವನ್ನು ಪುನರ್‌ರಚಿಸಬೇಕಾಗುತ್ತದೆ. ಜಿಲ್ಲೆಯಲ್ಲಿ ಶಾತವಾಹನರ ಕಾಲಕ್ಕೆ ಸೇರಿದ ಕೇವಲ ಎರಡು ನಿವೇಶನಗಳು ದೊರೆತಿರುವ ಹಿನ್ನೆಲೆಯಲ್ಲಿ ಮತ್ತು ಈವರೆಗೆ ಯಾವುದೇ ಶಾಸನಗಳು ಪ್ರಕಟವಾಗದ ಹಿನ್ನಲೆಯಲ್ಲಿ ಜಿಲ್ಲೆಯ ಇತಿಹಾಸವನ್ನು ಗಂಗರ ಇತಿಹಾಸದಿಂದ ಪ್ರಾರಂಭಿಸಬೇಕಾಗುತ್ತದೆ.

2.2.1. ಗಂಗರು

ಮಂಡ್ಯ ಜಿಲ್ಲೆಯ ಇತಿಹಾಸವನ್ನು ಗಮನಿಸಿದಾಗ ಜಿಲ್ಲೆಯಲ್ಲಿ ಗಂಗರು ಆರು ಶತಮಾನಕ್ಕೂ ಹೆಚ್ಚು ಕಾಲ ರಾಜ್ಯವಾಳಿದರೂ ಅವರ ಕೆಲವೇ ಕೆಲವು ಶಾಸನಗಳು ನಮಗೆ ದೊರೆತಿವೆ. ಜಿಲ್ಲೆಯಲ್ಲಿ ದೊರೆತಿರುವ ಗಂಗರ ಅತಿ ಪ್ರಾಚೀನ ಶಾಸನವೆಂದರೆ ಕ್ರಿ.ಶ. 713ರ ಹಳ್ಳಿಗೆರೆಯ ತಾಮ್ರ ಶಾಸನ. ಇದು ಒಂದನೆಯ ಶಿವಮಾರನ ಆಳ್ವಿಕೆಯ ಮೂವತ್ನಾಲ್ಕು ವರ್ಷದಲ್ಲಿ ಹೊರಡಿಸಲಾದ ಶಾಸನವಾಗಿದೆ ಇದು ಒಂದನೆಯ ಶಿವಮಾರನು ಕ್ರಿ.ಶ. 679ರಲ್ಲಿ ಅಧಿಕಾರಕ್ಕೆ ಬಂದನೆಂದು ಸೂಚಿಸುತ್ತದೆ, ಇದು ಜಿಲ್ಲೆಯ ಕೆರಗೋಡು ಮತ್ತು ಇತರ ಗ್ರಾಮಗಳನ್ನು ಹಲವು ಬ್ರಾಹ್ಮಣರಿಗೆ ದಾನವಿತ್ತ ವಿಷಯವನ್ನು ತಿಳಿಸುತ್ತದೆ. ಈ ಶಾಸನದ ಆಧಾರದ ಮೇಲೆ ಹೇಳುವುದಾದರೆ ಪಲ್ಲವರ ಯುವರಾಜನ ಮಕ್ಕಳಾದ ಜಯ ಮತ್ತು ವೃದ್ಧಿ ಎಂಬುವರ ಕೋರಿಕೆಯ ಮೇರೆಗೆ ಈ ದಾನವನ್ನು ನೀಡಲಾಗಿದೆ.[35] ಈ ಶಾಸನವು ಮಂಡ್ಯ ಜಿಲ್ಲೆಯ ಕೆರಗೋಡು ಆ ಕಾಲಕ್ಕಾಗಲೆ ಮಹತ್ವದ ಕೇಂದ್ರವಾಗಿತ್ತೆಂದು ಸಾರುತ್ತದೆ. ಇಂದಿಗೂ ಈ ಕೆರಗೋಡು ಮಂಡ್ಯ ಮತ್ತು ಯಡಿಯೂರನ್ನು ಸಂಧಿಸುವ ಮಾರ್ಗದಲ್ಲಿದ್ದು ಹೊಯ್ಸಳರ ಪ್ರಮುಖ ಸ್ಥಳ ಬಸರಾಳನ್ನು ಈ ಮಾರ್ಗ ಸಂಪರ್ಕಿಸುತ್ತದೆ. ಇಂದಿಗೂ ಕೆರಗೋಡಿನಲ್ಲಿ ಗಂಗರ ಜಿನಾಲಯವೊಂದನ್ನು ಕಾಣಬಹುದು. ಈ ಶಾಸನವು ಕೊಂಗಣಿವರ್ಮನಿಂದ ಪ್ರಾರಂಭಮಾಡಿ ಶಿವಮಾರನವರೆಗಿನ ಗಂಗವಂಶಾವಳಿಯನ್ನು ನೀಡಿದೆ.

ಕ್ರಿ.ಶ 776–77ರ ನಾಗಮಂಗಲ ತಾಲ್ಲೂಕಿನ ಮತ್ತೊಂದು ಗಂಗರ ತಾಮ್ರಶಾಸನದೊಂದಿಗೆ ಮೇಲೆ ಹೇಳಿದ ಶಾಸನವನ್ನು ಹೋಲಿಸಿ ನೋಡಬಹುದು.[36] ಈ ಶಾಸನವು ಬಾಣ ದೊರೆ ಪರಮಗೊಳ ಆತನ ಪತ್ನಿ ಸಗರ ವಂಶದ ಮರುವರ್ಮನ ಪುತ್ರಿ ಕುಂದಾಚ್ಚಿಯು ಕಟ್ಟಿಸಿದ ಲೋಕತಿಲಕವೆಂಬ ಬಸದಿಗೆ ಬಾಣಾಧಿಪನ ಆಜ್ಞೆಯಂತೆ ದಾನ ನೀಡಿದುದನ್ನು ವಿವರಿಸುತ್ತದೆ. ಅಂದರೆ ಬಾಣರು ಸಗರನಾಡಿನ ಅರಸರು ಪಲ್ಲವರು, ಗಂಗರು ಸಾಮರಸ್ಯದಿಂದ ಸಂಬಂಧ ಹೊಂದಿದ್ದುದನ್ನು ಈ ಶಾಸನ ತಿಳಿಸುತ್ತದೆ.

ಶ್ರೀಪುರುಷನ ದಿನಾಂಕ ನಮೂದಿತವಾಗದ ಹುಲ್ಲೇನಹಳ್ಳಿ ಶಾಸನವು ಬಾಣಪ್ರಭು ದಾನ ನೀಡಿದ ವಿಷಯವನ್ನು ನಿರೂಪಿಸುತ್ತದೆ.[37] ಈ ದಿಂಡ್ಡಿಗರರ್ ರಾಜನನ್ನು ನಾಗಮಂಗಲದ 149ನೇ ಶಾಸನವು ದುಣ್ಣುವಿನೊಂದಿಗೆ ಹೋಲಿಸಬಹುದು ಈ ಶಾಸನದ ಕಾಲ ಪ್ರಾಯಶಃ ಕ್ರಿ.ಶ. 776–77 ಬಾಣ ರಾಜ ದುಣ್ಣು ಸುಮಾರು 25 ವರ್ಷಗಳ ಕಾಲ ಆಳ್ವಿಕೆ ನಡೆಸಿದನೆಂದು ಹೇಳಬಹುದಾಗಿದೆ. ಶ್ರೀಪುರುಷನ ಮತ್ತೊಂದು ಶಾಸನ ಪೂರಿಗಾಲಿ(ಮಳವಳ್ಳಿ)ಯಲ್ಲಿ ದೊರೆತಿದ್ದು ಅದರಲ್ಲಿ

ಗ್ರಾಮವೊಂದರ ಮೇಲೆ ನಡೆದ ದಾಳಿಯಲ್ಲಿ ಅತ್ತಿಗಾಲ (ಸತ್ತೇಗಾಲ)ದ ಚವತ್ತಾರ್ ಎಂಬುವವನು ಹೋರಡಿಸಿದುದನ್ನು ಉಲ್ಲೇಖಿಸುತ್ತದೆ.[38] ಈ ಶಾಸನಗಳು ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದ ಸೇಂದ್ರಕರು ಗಂಗರ ಕೆಲವು ಪ್ರದೇಶಗಳ ಮೇಲೆ ಅಧಿಕಾರ ಸಾಧಿಸುವ ಪ್ರಯತ್ನಮಾಡಿದಂತೆ ಅಥವಾ ಅಧಿಕಾರ ಹೊಂದಿದಂತೆ ತಿಳಿಸುತ್ತದೆ.

ಕ್ರಿ.ಶ. 895-96 ಕ್ಕೆ ಸರಿ ಹೊಂದುವ ಮತ್ತೊಂದು ಗಂಗರ ಶಾಸನ ಮದ್ದೂರು ತಾಲ್ಲೂಕಿನ ತಾಯಲೂರಿನಿಂದ ವರದಿಯಾಗಿದೆ.[39] ತೈರೂರು ಗಾಮುಣ್ಣ ಸಾಮಿಯ ಮಗ ನಾಗಮಯ್ಯ ಶಿಲಾಮಯವಾದ ದೇವಾಲಯವನ್ನು ಕಟ್ಟಿಸಿದುದಾಗಿ ಉಲ್ಲೇಖಿಸುತ್ತದೆ, ಶಾಸನೋಕ್ತ ತೈರೂರನು ಇವತ್ತಿನ ತಾಯಲೂರಿನ ಈ ಶಾಸನದ ಮತ್ತೊಂದೆಡೆ ಸತ್ಯವಾಕ್ಯ ಪೆರ್ಮಾಡಿಯ ಬಗ್ಗೆ ಉಲ್ಲೇಖಿಸುವ ಶಾಸನವಿದೆ. ಸತ್ಯವಾಕ್ಯ ಪೆರ್ಮಾಡಿಯು ಗಂಗರ ದೊರೆ ಎರಡನೆ ರಾಚಮಲ್ಲನೆಂದು ಗುರುತಿಸಲಾಗಿದೆ. 896ರ ಸುಮಾರಿನಲ್ಲಿ ನೊಳಂಬಾಧಿಪತಿ ಮಹೇಂದ್ರನನ್ನು ಯರೆಯಪ್ಪ ಕೊಂದನೆಂದು ಸೂಚಿಸುತ್ತದೆ, ಗಾಂಮೂಣ್ಣ ಸಾಮಿಯ ಮಗ ನಾಗಮಯ್ಯನ ಶಾಸನದಲ್ಲಿ ಉಲ್ಲೇಖಿತವಾಗಿರುವ ನೊಳಂಬಾಧಿಪನೆ ಈ ಮಹೇಂದ್ರನಿರ ಬಹುದೆಂದು ಗುರುತಿಸಲಾಗಿದೆ. ಅಂದಮೇಲೆ ಗಂಗವಾಡಿಯ ಪ್ರದೇಶದ ಮೇಲೆ ನೊಳಂಬರು ದೇವಾಲಯವನ್ನು ನಿರ್ಮಾಣ ಮಾಡುವಷ್ಟು ಪ್ರಬಲರಾಗಿದ್ದರೆಂದು ಶಾಸನ ಪರೋಕ್ಷವಾಗಿ ಉಲ್ಲೇಖಿಸುತ್ತದೆ. ನಾಗಮಂಗಲ ತಾಲ್ಲೂಕಿನ ಕಾರಬಯಲು ಶಾಸನವು ಆರಂಭಲ್ಲನು ಇದುಳೆಯ ಬೀರವೃತ್ತಿಯನ್ನು ಆಳುತ್ತಿದ್ದಾಗ ಬಲ್ಲಹನ ಸೈನ್ಯವು ಕೊಂಬೊರಿಲು ಗ್ರಾಮದ ಮೇಲೆ ದಾಳಿಮಾಡಿದುದನ್ನು ಉಲ್ಲೇಖಿಸುತ್ತದೆ.[40] ಶಾಸನದ ಆರಂಬಲ್ಲನು ರಾಷ್ಟ್ರಕೊಟರ ಅರಸನೆಂದು ಗುರುತಿಸಲಾಗಿದೆ ಆದರೂ ನಿಖರವಾಗಿ ಯಾರನ್ನು ಗುರುತಿಸಿಲ್ಲ. ಶಾಸನದ ನೀತಿಮಾರ್ಗ ಪೆರ್ಮಾನಡಿಯನ್ನು ಇಮ್ಮಡಿ ರಾಚಮಲ್ಲನ ಜೊತೆ ರಾಜ್ಯವಾಳುತ್ತಿದ್ದ ಇಮ್ಮಡಿ ನೀತಿಮಾರ್ಗ ಎರೆಯಂಗನೆಂದು ಗುರುತಿಸಬಹುದೆಂದು ಅಭಿಪ್ರಾಯ ಪಡಲಾಗಿದೆ. ಈ ಅರಸನ ಸಮಕಾಲೀನ ರಾಷ್ಟ್ರಕೂಟರ ದೊರೆ ರಾಷ್ಟ್ರಕೂಟ ಇಮ್ಮಡಿ ಕೃಷ್ಣ, ಅಂದರೆ ಎರೆಯಂಗ ರಾಷ್ಟ್ರಕೂಟರ ಸೋದರಳಿಯನಾಗುತ್ತಾನೆ. ಸುಮಾರು ಕ್ರಿ.ಶ. 892 ರಲ್ಲಿ ಗಂಗರ ರಾಜಧಾನಿ ಮಣ್ಣೆಯು ನೊಳಂಬರ ಅಧೀನಕ್ಕೆ ಒಳಪಟ್ಟಿದ್ದನ್ನು ತಿಳಿಸುತ್ತದೆ.

ತೇದಿಯಿಲ್ಲದ ನೀತಿಮಾರ್ಗ ಪೆರ್ಮಾನಡಿಯ ಮತ್ತೊಂದು ಶಾಸನ ಗಂಗವಾಡಿಯ 96000 ಭಲ್ಲವರು ನೆಲ್ಲಕೊಳಣವಾಗಿ ಯಮ್ಮದೂರು ಗ್ರಾಮವನ್ನು ದಾನವಾಗಿ ಬಿಟ್ಟಿದ್ದನ್ನು ತಿಳಿಸುತ್ತದೆ.[41] ಆದರೆ ದಾನದ ಉದ್ದೇಶ ಸ್ಪಷ್ಟವಾಗಿಲ್ಲ 96000 ನಾಡು ಇಲ್ಲಿ ಗಂಗವಾಡಿ 96000ಕ್ಕೆ

ಪರ್ಯಾಯವಾಗಿ ಬಳಕೆಗೊಂಡಿದೆ. ಅಲ್ಲದೆ ಬಲ್ಲವರ ನಾಡಿನ ಬಲ್ಲವರನ್ನು ಬಿಲ್ಲವರೆಂದು ಚಾಲ್ತಿಯಲ್ಲಿದ್ದ ಬಿಲ್ಲವ ಸಂಘವೆಂದು ಗುರುತಿಸುವ ಪ್ರಯತ್ನವಾಗಿದೆ.

ಕ್ರಿ.ಶ. 972ರ ಅರಣಿ ಶಾಸನವು ಜಿಲ್ಲೆಯ ಗಂಗರ ಇತಿಹಾಸದಲ್ಲಿ ಪ್ರಮುಖ ಶಾಸನವಾಗಿದೆ. ಗಂಗರ ಅರಸನಾದ ಮಾರಸಿಂಗನು ಗಂಗವಾಡಿ 96000 ಪ್ರದೇಶವನ್ನು ತನ್ನ ಆಳ್ವಿಕೆಯ 10ನೇ ವರ್ಷದಲ್ಲಿ ನಿಷ್ಕಂಟಕಂ ಮಾಡಿ ಅಂದರೆ 2ನೇ ಮಾರಸಿಂಹನು ನೊಳಂಬರನ್ನು ಕೊಂದು ಗಂಗವಾಡಿ ಪ್ರದೇಶವನ್ನು ಆಳುತ್ತಿದ್ದನೆಂದು ಹೇಳುತ್ತದೆ.[42] ಹಾಗಾದರೆ ಪ್ರಸ್ತುತ ಶಾಸನದ ಕಾಲವಾದ ಕ್ರಿ.ಶ. 972ರ ಸೆಪ್ಟಂಬರ್ ಪೂರ್ವದಲ್ಲಿಯೇ ನೊಳಂಬರನ್ನು ಆತ ಸೋಲಿಸಿದುದು ಖಚಿತವಾಗುತ್ತದೆ. ಈ ಶಾಸನ ಕೊಳಗನಾಡನ್ನು ಉಲ್ಲೇಖಿಸುವುದರಿಂದ ಗಂಗವಾಡಿ-96000ರ ಪ್ರದೇಶಗಳ ಬಳ್ಳಾರಿಯವರೆಗೆ ರಾಜ್ಯವಿಸ್ತರಿಸಿದುದನ್ನು ಖಚಿತಪಡಿಸುತ್ತದೆ.

ಕೊತ್ತತ್ತಿಯ ಮತ್ತೊಂದು ಶಾಸನ ಕ್ರಿ.ಶ. 977-78 ಸಾಲಿಗೆ ಸೇರಿದ್ದು ತೇದಿಯ ವಿವರಗಳು ಸರಿಯಾಗಿಲ್ಲವಾದರೂ, ಶಕವರ್ಷವನ್ನು ಅನುಸರಿಸಿ ಕಾಲವನ್ನು ನಿಗದಿಪಡಿಸಲಾಗಿದೆ, ಈ ಶಾಸನವು ಈಶರಗಂಡನೆಂಬಾತನು ಪಲ್ಲವರ ವಿರುದ್ದ ನಡೆದ ಕದನವೊಂದರಲ್ಲಿ ಹೋರಾಡಿ ಮರಣ ಹೊಂದಿದ ವಿಷಯ ಹೇಳುತ್ತದೆ.[43] ಪ್ರಾಯಶಃ ನೊಳಂಬರು ತಮ್ಮನ್ನು ಪಲ್ಲವರೆಂದು ಗುರುತಿಸಿಕೊಳ್ಳುವ ಕಾರಣ ಶಾಸನದಲ್ಲಿ ಪಲ್ಲವರನ್ನು ನೊಳಂಬರೆಂದು ಗುರುತಿಸಿಕೊಳ್ಳಬೇಕಾಗುತ್ತದೆ.

ಶಾಸನದಲ್ಲಿ ಉಲ್ಲೇಖಿತ ಪಲ್ಲವರು ನೊಳಂಬರೆಂದಾದ ಪಕ್ಷದಲ್ಲಿ ನನ್ನಿ ನೊಳಂಬನ ಮಗ ನೊಳಂಬವಾಡಿಯನ್ನು ಗಂಗರಿಂದ ಗೆದ್ದುಕೊಳ್ಳುವ ಸಂದರ್ಭದಲ್ಲಿ ಆತ ಮಡಿದಿರಬಹುದೆಂದು ನಂಬಬಹುದಾಗಿದೆ ಹಳೇಬೂದನೂರಿನ ರಕ್ಕಸ ಗಂಗ ಪೆರ್ಮಾನಡಿಯ ಶಾಸನವು ಆತನನ್ನು ರಾಜಾಧಿರಾಜ ಮೊದಲಾದ ಬಿರುದುಗಳಿಂದ ಗುರುತಿಸುತ್ತದೆ. ಆದರೂ ಆ ಕಾಲಕ್ಕಾಗಲೆ ಗಂಗರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರೆಂದು ಮೈಸೂರು ಜಿಲ್ಲೆಯ ತಲಕಾಡು ಸಮೀಪ ಕಲಿಯೂರು ಶಾಸನ 1006 ಉಲ್ಲೇಖಿಸುತ್ತದೆ.[44] ಒಟ್ಟಾರೆ ಗಂಗರ ಶಾಸನಗಳನ್ನು ಅವಲೋಕಿಸಿದಾಗ ಅವುಗಳ ಉಪಲಬ್ಧತೆಯನ್ನು ಆಧರಿಸಿ ಜಿಲ್ಲೆಯ ತಾಲ್ಲೂಕುಗಳಾದ ಮಂಡ್ಯ, ಮಳವಳ್ಳಿ, ಮದ್ದೂರು ಮತ್ತು ನಾಗಮಂಗಲ ತಾಲ್ಲೂಕುಗಳಲ್ಲಿ ಪ್ರಾರಂಭಿಕ ಅರಸರ ಶಾಸನಗಳು ದೊರೆತರೆ 9 ಮತ್ತು 10ನೇ ಶತಮಾನದ ಶಾಸನಗಳು ಕೃಷ್ಣರಾಜಪೇಟೆ, ಶ್ರೀರಂಗಪಟ್ಟಣ, ಪಾಂಡವಪುರಗಳಲ್ಲಿ ದೊರೆತಿವೆ. ಅವುಗಳನ್ನು ಈ ಮುಂದೆ ಮಂಡ್ಯ ಜಿಲ್ಲೆಯ ತಾಲ್ಲೂಕುವಾರು ಗಂಗರ ಶಾಸನಗಳ ಪಟ್ಟಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

1. ಶ್ರೀರಂಗಪಟ್ಟಣ = 2	S.R 66, 85
2. ಪಾಂಡವಪುರ = 3	P.P 47, 52, 16
3. ಕೆ ಆರ್ ಪೇಟೆ = 2	K.R 19, 20
4. ನಾಗಮಂಗಲ = 4	N.M 149, 127, 12, 99
5. ಮಂಡ್ಯ = 5	M 35, 14, 81, 67, 54.
6. ಮದ್ದೂರು = 2	M.D 57, 100
7. ಮಳವಳ್ಳಿ = 5	M.L 122, 15, 135, 50,141

ಜಿಲ್ಲೆಯಲ್ಲಿ ಈವರೆಗೆ ಗಂಗರಿಗೆ ಸಂಬಂಧಿಸಿದ ಇಪ್ಪತ್ಮೂರು ಶಾಸನಗಳನ್ನು ಗುರುತಿಸಲಾಗಿದ್ದು ಅತ್ಯಂತ ಪ್ರಾಚೀನ ಗಂಗರ ಶಾಸನ ಕ್ರಿ.ಶ. 713 ಕ್ಕೆ ಸೇರಿದುದಾದರೆ ಅತ್ಯಂತ ಕೊನೆಯ ಮತ್ತು ನಿಖರವಾಗಿ ಕಾಲ ನಿರ್ದೇಶಿತವಾದ ಕ್ರಿ.ಶ. 997 ಕ್ಕೆ ಸೇರಿದುದಾಗಿದೆ. ಆನಂತರದ ಶಾಸನ ಅಂದರೆ ಸತ್ಯವಾಕ್ಯ ಗೋವಿಂದನ ಶಾಸನ ಕಾಲ ನಿರ್ದೇಶಿತವಾಗಿಲ್ಲದಿದ್ದರು, ಅದನ್ನು ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನ ಹಳೆಯಬೂದನೂರಿನ ಗಂಗರ ಕೊನೆಯ ಶಾಸನವೆಂದು ಗುರುತಿಸಬಹುದಾಗಿದೆ. ಕಾರಣ ರಾಜರಾಜನ ಶಾಸನ ಜಿಲ್ಲೆಯಲ್ಲಿ ಕ್ರಿ.ಶ. 1011 ಕ್ಕೆ ದೊರೆಯುವ ಹಿನ್ನೆಲೆಯಲ್ಲಿ ಸತ್ಯವಾಕ್ಯ ಗೋವಿಂದನು ಒಂದನೆ ರಾಜರಾಜನ ಅಧೀನನಂತೆ ಕಾರ್ಯನಿರ್ವಹಣೆ ಮಾಡಿದ್ದಾನೆ ಎಂಬುದಾಗಿ ಶಾಸನಗಳ ಆಧಾರದ ಮೇಲೆ ಈ ಬಗೆಯ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ.

2.2.2. ರಾಷ್ಟ್ರಕೂಟರು

ಜಿಲ್ಲೆಯಲ್ಲಿ ರಾಷ್ಟ್ರಕೂಟರ 2 ಶಾಸನಗಳು ದೊರೆತಿದ್ದು ಆ ಎರಡು ಶಾಸನಗಳು ಮದ್ದೂರು ತಾಲ್ಲೂಕಿನಿಂದ ವರದಿಯಾಗಿವೆ.[45] ದಕ್ಷಿಣದ ಗಂಗರು ರಾಷ್ಟ್ರಕೂಟರಿಗೆ ಸಾಮಾನ್ಯವಾಗಿ ಪ್ರತಿರೋಧವನ್ನು ತೋರಿದರು. ಗಂಗರ ಅರಸ 2ನೇ ಬೂತಗನು ರಾಷ್ಟ್ರಕೂಟ ಸೇನೆಯ ನಾಯಕತ್ವವಹಿಸಿ ತಕ್ಕೋಲಂ ಯುದ್ಧದಲ್ಲಿ ಚೋಳರ ರಾಜ್ಯಾದಿತ್ಯನನ್ನು ಇರಿದು ಕೊಂದನು. ಈ ವಿಷಯ ಚೋಳ ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಈ ಕದನದಲ್ಲಿ ಸಗರವಂಶದ ಮಣಲೇರ ಭಾಗವಹಿಸಿದ್ದನು. ಯುದ್ಧದಲ್ಲಿ ಮಣಲೇರನ ಪರಾಕ್ರಮಕ್ಕೆ ಮೆಚ್ಚಿದ ಚಕ್ರವರ್ತಿಯು ನಿನಗೇನು ಬೇಕು ಬೇಡಿಕೋ ಎಂದು ಕೇಳಿದಾಗ ಮಣಲೇರನು ಚಕ್ರವರ್ತಿಯ ಬೇಟೆ ನಾಯಿ ಪಡೆಯಿಂದ ಕಾಳಿ ಎಂಬ ಹೆಸರಿನ ನಾಯಿಯನ್ನು ಕೇಳಿಪಡೆಯುತ್ತಾನೆ.[46] ಇದು ಪೆಳತ್ತೂರಿನ ಬಳಿಯಲ್ಲಿ ಕಾಡುಹಂದಿಯೊಡನೆ ಹೋರಾಡಿ ಮರಣ ಹೊಂದಿತು. ಅದರ ಸ್ಮರಣಾರ್ಥವಾಗಿ ಹಾಕಿಸಿರುವ ಆತಗೂರು ಶಾಸನವೆ ರಾಷ್ಟ್ರಕೂಟರ ಎರಡು ಶಾಸನಗಳಲ್ಲಿ ಪ್ರಮುಖವೆನಿಸುತ್ತದೆ. ಈ ಶಾಸನದಲ್ಲಿ

ಎರಡನೆ ಬೂತುಗನು ಮಣಲೇರನ ಅರಸನು ಮಾತ್ರ ಗುರುತಿಸಲ್ಪಟ್ಟಿದ್ದಾರೆ.[47] ಇದಾದ ನಂತರ ಕಾಡುಕೊತ್ತನ ಹಳ್ಳಿಯ ಮತ್ತೊಂದು ಶಾಸನ ಅತಿಯಾಗಿ ಸವೆದಿದ್ದು 986–87 ಕ್ಕೆ ಸೇರಬಹುದಾದ ವಿವರಗಳು ನಷ್ಟವಾಗಿದೆ ಹಾಗಾಗಿ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಈ ಶಾಸನವು ಜಿಲ್ಲೆಯು ಬಾದಾಮಿ ಚಾಲುಕ್ಯರ ಕಾಲದಲ್ಲಿ ಪ್ರಾರಂಭವಾದ ಕರ್ನಾಟಕ ಮತ್ತು ತಮಿಳುನಾಡು ರಾಜ ಮನೆತನಗಳ ನಡುವಿನ ಹೋರಾಟಕ್ಕೆ ಗಂಗರ ಅಂತ್ಯದವರೆಗೆ ಮುಂದುವರಿದುದಕ್ಕೆ ಸಾಕ್ಷಿಯಾಗಿತ್ತು.

2.2.3. ಚೋಳರು

ಮಂಡ್ಯ ಜಿಲ್ಲೆಯಲ್ಲಿ ಚೋಳರ ಏಳು ಶಾಸನಗಳು ಈವರೆಗೆ ಪ್ರಕಟವಾಗಿವೆ. ಗಂಗರ ಬಗೆಗೆ ಅಧ್ಯಯನ ಮಾಡಿರುವ ಎಮ್. ವಿ. ಕೃಷ್ಣರಾವ್,[48] ಡಾ. ಬಿ ಶೇಕ್‌ಅಲಿ[49] ರವರು ರಕ್ಕಸಗಂಗನ ಕಾಲಕ್ಕಾಗಲೆ ಅಂದರೆ ಕ್ರಿ.ಶ. 1004ರ ವೇಳೆಗೆ ಗಂಗವಾಡಿ ಚೋಳರ ವಶವಾಗಿದ್ದುದನ್ನು ಉಲ್ಲೇಖಿಸಿದ್ದಾರೆ. ಚೋಳರ ಶಾಸನಗಳು ಜಿಲ್ಲೆಯ ಪಾಂಡವಪುರ, ಶ್ರೀರಂಗಪಟ್ಟಣ, ಮದ್ದೂರು ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ದೊರೆತಿವೆ. ಚೋಳರ ಏಳು ಶಾಸನಗಳ ಪೈಕಿ ತಲಾ ಎರಡು ಶಾಸನಗಳು ಪಾಂಡವಪುರ, ಮಂಡ್ಯ ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳಿಂದ, ಒಂದು ಶಾಸನ ಮದ್ದೂರು ತಾಲ್ಲೂಕಿನಿಂದ ಪ್ರಕಟವಾಗಿವೆ. ಜಿಲ್ಲೆಯಲ್ಲಿ ಇವರ ಅತಿ ಪ್ರಾಚೀನ ಶಾಸನ ಕ್ರಿ. ಶ. 1011ಕ್ಕೆ ಸೇರಿದುದಾಗಿದೆ. ಇದು ಚಿನುಕುರುಳಿಯ ವೀರಗಲ್ಲು ಶಾಸನ.[50] ಎರಡನೇ ಶಾಸನ ಕ್ರಿ. ಶ. 1012–13ರಲ್ಲಿ ಹೊರಡಿಸಲಾಗಿದ್ದು ಇದು ಶ್ರೀರಂಗಪಟ್ಟಣ ತಾಲ್ಲೂಕಿನ ಬಲಮುರಿಯಿಂದ ವರದಿಯಾಗಿದೆ. ಈ ಶಾಸನವು ಒಂದನೆ ರಾಜರಾಜನ ಕಾಲಕ್ಕೆ ಸೇರಿದುದಾಗಿದ್ದು, ಪಂಚಮಹಾರಾಯನು ವೆಂಗಿ ಮತ್ತು ಗಂಗಮಂಡಲದ ಮಹಾ ದಂಡನಾಯಕರಾಗಿದ್ದರೆಂದು ಗುರುತಿಸಲಾಗುತ್ತದೆ. ಶಾಸನೋಕ್ತವಾದ ಪಂಚವನ್ ಮಹಾರಾಯನನ್ನು ಯುವರಾಜ ಒಂದನೆ ರಾಜೇಂದ್ರನೆಂದು ಗುರುತಿಸಲಾಗಿದೆ. ಈತನು ಚೋಳ ಗಂಗಾವರಣನೆನಿಸಿದ ವೆಂಗಿಮಂಡಲಗಳಿಗೆ ಮಹಾದಂಡನಾಯಕನಾಗಿದ್ದು ಗಂಗವಾಡಿ ರಟ್ಟವಾಡಿ ನೊಳಂಬವಾಡಿ ಮುಂತಾದ ಹತ್ತಾರು ನಾಡುಗಳ ಅರಸರನ್ನು ಸಂಹರಿಸಿ ಅವುಗಳನ್ನು ಕೈವಶಮಾಡಿಕೊಂಡಿದ್ದನೆಂದು ಇತರ ಶಾಸನಗಳು ಉಲ್ಲೇಖಿಸುತ್ತವೆ. ಅಲ್ಲದೆ ಜಿಲ್ಲೆಯ ಮತ್ತೊಂದು ಶಾಸನ ಅಂದರೆ ಹಳೆಬೂದನೂರಿನ ವೈದ್ಯನಾಥಪುರದ ಒಂದು ಶಾಸನ ಈ ಮೇಲಿನ ವಿವರಣೆಯನ್ನು ಪುಷ್ಟೀಕರಿಸುತ್ತದೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಬೊಮ್ಮೂರು ಅಗ್ರಹಾರ ಶಾಸನವು ಕುಲೊತ್ತುಂಗನ ಕಾಲಕ್ಕೆ ಸೇರಿದ್ದಾಗಿದ್ದು ಸಿರಿಯ ಕಳಸ್ತವಾಡಿಯಲ್ಲಿ ಎರಡು ಶತಮಾನಗಳಿಂದ ಹಾಳುಬಿದ್ದಿದ್ದ ಜಲಾಶಯವನ್ನು ದುರಸ್ತಿಮಾಡಿದುದನ್ನು ಅರಹುತ್ತದೆ.[51] ಚೋಳರ ಶಾಸನಗಳು ಹೆಚ್ಚಾಗಿ

ವೈವಿಧ್ಯತೆಗೆ ಹೆಸರಾಗಿಲ್ಲದಿದ್ದರು, ಐತಿಹಾಸಿಕ ನೆಲೆಗಟ್ಟನ್ನು ಸೃಷ್ಟಿಸಿ ಸರಿಸುಮಾರು ಒಂದು ಶತಮಾನದ ಕಾಲ ಮುಂದುವರಿಸಿಕೊಂಡು ಬಂದಿರುವುದರ ದಾಖಲೆಗಳಾಗಿ ಕಂಡು ಬರುತ್ತವೆ.

2.2.4. ಹೊಯ್ಸಳರು

ಡಾ. ಬಿ. ಶೇಕ್‌ಅಲಿರವರು[52] ಗಂಗರ ಅವಸಾನದ ಬಗ್ಗೆ ಬರೆಯುತ್ತಾ ಕ್ರಿ.ಶ. 1004ರ ವೇಳೆಗೆ ಗಂಗರು ಚೋಳರ ಅಧಿಪತ್ಯವನ್ನು ಒಪ್ಪಿಕೊಂಡಿದ್ದರೆಂತಲೂ ಈ ಅಧಿಪತ್ಯವನ್ನು ಮುಂದುವರಿಸಿ ಚೋಳರು ಗಂಗವಾಡಿ 96000ದಿಂದ ಅರಕಲಗೂಡು, ಶ್ರೀರಂಗಪಟ್ಟಣ, ನೆಲಮಂಗಲ, ನಿಡುಗಲ್ ಮುಂತಾದ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರೆಂದು, ಮುಂದುವರಿದು ಗಂಗವಾಡಿ 96,000 ಸಂಪೂರ್ಣವಾಗಿ ಚೋಳರ ವಶವಾಗಿದ್ದುದನ್ನು ಉಲ್ಲೇಖಿಸಿದ್ದಾರೆ.

ಕ್ರಿ. ಶ. 1006ರಲ್ಲಿ ತಲಕಾಡು ಸಮೀಪದ ಕಲಿಯೂರಿನಲ್ಲಿ ತಮಿಳರ ಆಕ್ರಮಣವನ್ನು ಹಿಮ್ಮೆಟ್ಟಿಸುವ ಪ್ರಯತ್ನವೊಂದು ಜರುಗಿದ್ದಂತೆ ಕಂಡುಬರುತ್ತದೆ. ಈ ಬಗ್ಗೆ ಬರೆಯುತ್ತಾ ಶೇಕ್‌ಅಲಿರವರು[53] ಚೋಳರನ್ನು ಕರ್ನಾಟಕದಿಂದ ಹೊರಗಟ್ಟಲು ಕರ್ನಾಟಕದ ಇತರ ರಾಜ ಮನೆತನಗಳು ಒಗ್ಗೂಡಿ ಹೋರಾಟ ನಡೆಸಿದರೆಂದು ಹೇಳುತ್ತಾರೆ. ಹಾಗೆ ಹೋರಾಟ ನಡೆಸಿದ ಕರ್ನಾಟಕದ ಪ್ರಮುಖರಲ್ಲಿ ಹೊಯ್ಸಳರು ಇದ್ದರೆಂದು ಗುರುತಿಸುತ್ತಾರೆ. ಶಾಸನದಲ್ಲಿ ಹೊಯ್ಸಳರ ರಾಜನನ್ನು ಗಂಡರಾಭೀಮನೆಂದು ಹಲವಾರು ಬಾರಿ ಉಲ್ಲೇಖಿಸಲಾಗಿದೆ. ಹೊಯ್ಸಳರ ರಾಜ ಯಾರೆಂದು ನಿರ್ಧರಿಸುವುದು ಸಾಧ್ಯವಿಲ್ಲವೆಂದು, ಇದಕ್ಕೆ ಹೆಚ್ಚಿನದೇನನ್ನು ಹೇಳುವುದಕ್ಕಾಗುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಚೋಳರು ಕರ್ನಾಟಕ ಪ್ರದೇಶವನ್ನು ಆಕ್ರಮಿಸಿದ ಕಾಲದಲ್ಲಿ ಹೊಯ್ಸಳರ ಮನೆತನದ ಉದಯವು ಇರುವುದನ್ನು ಗಮನಿಸಿದರೆ ತಲಕಾಡನ್ನು ಚೋಳರಿಂದ ವಶಪಡಿಸಿಕೊಳ್ಳಲು ಹೊಯ್ಸಳರಿಗೆ ಕಲಿಯೂರು ಯುದ್ಧವೆ ಪ್ರೇರಣೆಯಾಗಿರ ಬೇಕೆಂದು ತೋರುತ್ತದೆ.

ಜಿಲ್ಲೆಯಲ್ಲಿ ದೊರೆಯುವ ಹೊಯ್ಸಳರ ಪ್ರಥಮ ಶಾಸನ ವಿನಯಾದಿತ್ಯ ತ್ರಿಭುವನ ಮಲ್ಲನ ಶಾಸನ. ಈ ಶಾಸನವು ಕೃಷ್ಣರಾಜಪೇಟೆ ತಾಲ್ಲೂಕಿನ ತೊಣಚಿಯಿಂದ ವರದಿಯಾಗಿದೆ. ಶಾಸನದಲ್ಲಿರುವ ಸಂವತ್ಸರದ ಆಧಾರದ ಮೇಲೆ ಕ್ರಿ.ಶ 1048–49ರ ವರಗೆ ವಿನಯಾದಿತ್ಯನು ಹೊಯ್ಸಳರ ಅರಸನಾಗಿದ್ದನು ಎಂದು ಗುರುತಿಸಬಹುದು.[54] ಈತನ ಬಿರುದಿನಿಂದ ಹೊಯ್ಸಳ ವಿನಯಾದಿತ್ಯನು ಕಲ್ಯಾಣದ ಚಾಲುಕ್ಯರ ಸಾಮಂತನಾಗಿದ್ದನೆಂದು ಸ್ಪಷ್ಟವಾಗುತ್ತದೆ. ಕೊಂಕಣ ಆಳ್ವಕೇಡ, ಬಯಲುನಾಡು ಮೊದಲಾದ ಪ್ರದೇಶಗಳನ್ನು ಆಳಿದ ಈತನಿಗೆ ದ್ವಾರವತಿಪುರಾವಧೀಶ್ವರ ಎಂಬ ಬಿರುದಿದುದ್ದು ಗಮನಾರ್ಹ. ಚಾಲುಕ್ಯರ ಬಲಭುಜದಂಡನೆನಿಸಿದ ಎರೆಯಂಗನ ಮಗ

ವಿನಯಾದಿತ್ಯನೆಂದು ಆತನು ಮಾಳ್ವ ದೇಶವನ್ನು ಚಾಲುಕ್ಯರಿಗೆ ಜಯಿಸಿಕೊಟ್ಟನೆಂದು ಉಲ್ಲೇಖಿಸಲಾಗಿದೆ.

ಎರೆಯಂಗನ ಮೊದಲನೆಯ ಶಾಸನ ಹಳೆಯ ಬೂದನೂರಿನಿಂದ ವರದಿಯಾಗಿದೆ.[55] ಈ ಶಾಸನದಲ್ಲಿ ಉಲ್ಲೇಖವಾಗಿರುವ ಸಂವತ್ಸರದ ಆಧಾರದ ಮೇಲೆ ಕ್ರಿ.ಶ 1052ಕ್ಕೆ ಶಾಸನವನ್ನು ಸರಿಹೊಂದಿಸಬಹುದು. ಈ ಕಾಲ ಸರಿಯಾಗಿದ್ದಲ್ಲಿ ಎರೆಯಂಗನನ್ನು ಯುವರಾಜನಾಗಿ ಉಲ್ಲೇಖಿಸುವ ಪ್ರಥಮಶಾಸನ ಇದಾಗಿದೆ. ತಂದೆಯ ಕಾಲದಲ್ಲಿಯೇ ಎರೆಯಂಗನು ಯುದ್ಧಗಳಲ್ಲಿ ಭಾಗವಹಿಸಿದ್ದುದದನ್ನು ನಿಸ್ಸಂದೇಹವಾಗಿ ಹೇಳಬಹುದು ಬಿಂಡಿಗನವಿಲೆಯ ಮತ್ತೊಂದು ಶಾಸನ ವಿನಯಾದಿತ್ಯನ ಕಾಲದ್ದಾಗಿದೆ. ಕ್ರಿ.ಶ 1095-96ರ ವೇಳೆಗೆ ವಿನಯಾದಿತ್ಯನು ಇನ್ನು ಆಳುತ್ತಿದ್ದನೆಂದು ಆತನನ್ನು ಮಹಾಮಂಡಲೇಶ್ವರ ದ್ವಾರವತಿಪುರವರಾಧೀಶ್ವರ ಮುಂತಾದ ಬಿರುದುಗಳನ್ನು ಹೊಂದಿ ಗಂಗಮಂಡಲವನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.[56] ಈ ಶಾಸನಗಳನ್ನು ಗಮನಿಸಿದರೆ ಕ್ರಿ.ಶ 1117ರ ತಲಕಾಡು ವಿಜಯಕ್ಕೆ ಪೂರ್ವದಲ್ಲಿಯೇ ಹೊಯ್ಸಳರು ಹಂತ-ಹಂತವಾಗಿ ಗಂಗವಾಡಿಯ ಉತ್ತರದ ಪ್ರದೇಶಗಳನ್ನು ಆಕ್ರಮಿಸುತ್ತಾ ಚೋಳರನ್ನು ಹಂತ-ಹಂತವಾಗಿ ಹಿಮ್ಮೆಟ್ಟಿಸಿದ್ದರೆಂದು ಖಚಿತವಾಗುತ್ತದೆ. ಅಂದರೆ ಬೂದನೂರಿನ ವೀರಗಲ್ಲು ಶಾಸನ ತೋಣಿಚಿಯ ಶಾಸನ, ಸುಂಕತೊಂಡನೂರಿನ ಶಾಸನ ಈ ಪ್ರದೇಶದಲ್ಲಿಯೇ ಹೊಯ್ಸಳರ ಅಧಿಪತ್ಯ ಸ್ಥಾಪಿಸಿದ್ದುದನ್ನು ಖಚಿತಪಡಿಸುತ್ತವೆ. ಇಷ್ಟಲ್ಲದೆ ನಾಗಮಂಗಲ ಆ ಕಾಲಕ್ಕೆ ಹೊಯ್ಸಳರ ವಾಸಸ್ಥಾನವಾಗಿದುದ್ದನ್ನು ಖಚಿತಪಡಿಸುತ್ತದೆ, ಜಿಲ್ಲೆಯಲ್ಲಿ ವಿಷ್ಣುವರ್ಧನನ ಒಟ್ಟು 33 ಶಾಸನಗಳು ದೊರೆತಿವೆ.[57] ವಿಷ್ಣುವರ್ಧನನ ಮೊದಲನೆ ಶಾಸನ ಕೃಷ್ಣರಾಜಪೇಟೆ ತಾಲ್ಲೂಕಿನಿಂದ ವರದಿಯಾಗಿದ್ದು. ಅದರ ಕಾಲವನ್ನು ಕ್ರಿ.ಶ.1114-15 ಎಂದು ಗುರುತಿಸಲಾಗಿದೆ. ಕ್ರಿ.ಶ. 1117ಕ್ಕೆ ಸಂದಿದ ತಿಪ್ಪೂರಿನ ಶಾಸನವು ಹೊಯ್ಸಳರ ಸೇನಾನಿ ಗಂಗರಸನು ಅರಸನಿಂದ ತಿಪ್ಪೂರನ್ನು ದಾನಪಡೆದು ಅದನ್ನು ತನ್ನ ಗುರು ಮೂಲಸಂಘದ ಮೇಘಚಂದ್ರ ಸಿದ್ಧಾಂತನಿಗೆ ದಾನ ನೀಡುದುದ್ದನ್ನು ಉಲ್ಲೇಖಿಸುತ್ತದೆ.[58] ಕ್ರಿ.ಶ. 1118ನೇ ವರ್ಷದ ಪಾಂಡವಪುರ ತಾಲ್ಲೂಕಿನ ಮತ್ತೊಂದು ಶಾಸನ ಲಿಂಗಂಬಯ್ಯ ಎಂಬುವವನು ಹೊಯ್ಸಳರ ವಿಷ್ಣುವರ್ಧನ ಮಹಾದಂಡನಾಯಕನಾಗಿದ್ದನೆಂದು ಹೊಯ್ಸಳರ ವಿಷ್ಣುವರ್ಧನನು ತಲಕಾಡಿನಲ್ಲಿ ನೆಲೆಸಿದನೆಂದು ಉಲ್ಲೇಖಿಸುತ್ತದೆ.[59] ಈ ಮೂರು ಶಾಸನಗಳ ಹಿನ್ನೆಲೆಯಲ್ಲಿ ತಲಕಾಡು ವಿಜಯವನ್ನು ವಿಷ್ಣುವರ್ಧನನು ವ್ಯವಸ್ಥಿತವಾಗಿ ಯೋಜಿಸಿ ಕಾರ್ಯರೂಪಕ್ಕೆ ತಂದ ಸೈನಿಕ ಕಾರ್ಯಾಚರಣೆಯ ಫಲವೆಂಬುದು ಖಚಿತವಾಗಿರುತ್ತದೆ. ಕ್ರಿ.ಶ 1114ರ ಹೊತ್ತಿಗಾಗಲೇ ವಿಷ್ಣುವರ್ಧನನು ಗಂಗವಾಡಿಯ ಉತ್ತರದ ಪ್ರದೇಶಗಳನ್ನು ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿಟ್ಟುಕೊಂಡು ಕ್ರಿ.ಶ. 1117ರಲ್ಲಿ ಗಂಗವಾಡಿಯನ್ನು ಜಯಿಸಿದನೆಂದು ಹೇಳಬಹುದು.

ಆದರೆ ಇತ್ತೀಚಿಗೆ ದೊರೆತಿರುವ ಹಿರೇಮರಳಿಯ ಶಾಸನ ಕ್ರಿ.ಶ. 1109ರ ಜೂನ್ 30ಕ್ಕೆ ಸೇರಿದ್ದು ಆ ಹೊತ್ತಿಗಾಗಲೇ ವಿಷ್ಣುವರ್ಧನನು ತಲಕಾಡಿನಲ್ಲಿ ಪೃಥ್ವಿರಾಜ್ಯಂಗೈಯುತ್ತಿದ್ದನೆಂದು ಉಲ್ಲೇಖಿಸುತ್ತದೆ.[60] ಅಂದರೆ ಪ್ರಾಯಶಃ ಈ ಕಾಲದ ಹೊತ್ತಿಗಾಗಲೇ ಹೊಯ್ಸಳರು ಗಂಗವಾಡಿಯ ಬಹು ಪ್ರದೇಶವನ್ನು ಆಕ್ರಮಿಸಿದರೆಂದು ಹೇಳಬಹುದಾಗಿದೆ. ಹೊಯ್ಸಳರ ವಿಷ್ಣುವರ್ಧನನು ತನ್ನ ಅಣ್ಣ ಒಂದನೆ ಬಲ್ಲಾಳನು ಬದುಕಿದ್ದಾಗಲೇ ರಾಜ್ಯವಾಳುತ್ತಿದ್ದನೆಂದು ಹೊಸಕೋಟೆ ಶಾಸನ ನಿರೂಪಿಸುತ್ತದೆ. ಹಾಗಾಗಿ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಹೊಯ್ಸಳರ ಶಾಸನಗಳ ಪುನರಾಧ್ಯಯನ ಅವಶ್ಯಕ ಎನಿಸುತ್ತದೆ. ಇದು ಪ್ರಸ್ತುತ ಅಧ್ಯಯನದ ವ್ಯಾಪ್ತಿಯ ಹೊರಗಿರುವುದರಿಂದ ಅದನ್ನು ಮುಂದುವರೆಸದೆ ಮುಖ್ಯ ವಿಷಯಗಳನ್ನು ಮಾತ್ರ ನಿರೂಪಿಸಲಾಗಿದೆ.[61] ವಿಷ್ಣುವರ್ಧನನ ಅರಸಿಯರಲ್ಲಿ ನಾಲ್ವರನ್ನು ಮಂಡ್ಯ ಜಿಲ್ಲೆಯ ಶಾಸನಗಳು ಉಲ್ಲೇಖಿಸುತ್ತವೆ. ಅವರುಗಳೆಂದರೆ ಪಿರಿಯರಸಿ ಪಟ್ಟ ಮಹಾದೇವಿ ಶಾಂತಲಾದೇವಿ, ಪಟ್ಟಮಹಿಶಿ ಲಕ್ಷ್ಮಾದೇವಿ, ಪಲ್ಲವರಾಜಪುತ್ರಿ ಬೊಮ್ಮಲಾದೇವಿ ಮತ್ತು ಕೊಂಗಾಳ್ವರ ರಾಜಕುಮಾರಿ ಚಂಗಾಲದೇವಿ.[62]

ನಾಗಮಂಗಲದ ಕ್ರಿ.ಶ 1134ರ ಶಾಸನವು ವಿಷ್ಣುವರ್ಧನನ ಪಟ್ಟದರಸಿ ಬೊಮ್ಮಲಾದೇವಿಯನ್ನು ಉಲ್ಲೇಖಿಸುತ್ತದೆ. ಹಾಗೂ ಆಕೆ ಕಲ್ಕಣಿನಾಡಿಗೆ ಸೇರಿದ ನಾಗಮಂಗಲದ ಶಂಕರನಾರಾಯಣ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಪೂಜೆ ಮತ್ತು ಧಾರ್ಮಿಕ ಕೈಂಕರ್ಯಗಳನ್ನು ನೆರವೇರಿಸುವಂತೆ ದಾನವಿತ್ತಳೆಂದು ದಾಖಲಿಸಿದೆ.[63] ಪಾಂಡವಪುರ ತಾಲ್ಲೂಕಿನ ತೊಣ್ಣೂರು ಗ್ರಾಮದ ಲಕ್ಷ್ಮಿನಾರಾಯಣಸ್ವಾಮಿ ದೇವಾಲಯದಲ್ಲಿರುವ, ಅಂದರೆ ಇಂದಿನ ನಂಬಿನಾರಾಯಣ ದೇವಾಲಯದಲ್ಲಿರುವ ಶಾಸನವು ಹೊಯ್ಸಳ ವಿಷ್ಣುವರ್ಧನನನ್ನು ಉಲ್ಲೇಖಿಸಿ, ಆತನ ನಿರ್ದೇಶನದ ಮೇರೆಗೆ ನಾಗಯ್ಯನು ಓಲಗ ಶಾಲೆಯನ್ನು ನಿರ್ಮಾಣ ಮಾಡಿದಂತೆ ಉಲ್ಲೇಖಿಸುತ್ತದೆ.[64] ಕೃಷ್ಣರಾಜಪೇಟೆ ತಾಲ್ಲೂಕಿನ ನಾಗರಘಟ್ಟ ಶಾಸನವು ವಿಷ್ಣುವರ್ಧನನು ಬಂಕಾಪುರವನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.[65] ಅಲ್ಲದೆ ಹಾನಗಲ್ಲು ಪ್ರದೇಶವನ್ನು ಗೆದ್ದುಕೊಂಡಿದ್ದನೆಂದು ತಿಳಿಸುತ್ತದೆ. ಈ ದೆಸೆಯಲ್ಲಿ ಈ ಶಾಸನದ ಕಾಲವನ್ನು ಕ್ರಿ.ಶ. 1140ರ ನಂತರದ ಕಾಲವೆಂದು ಗುರುತಿಸಬಹುದು. ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳದ ಜನಾರ್ಧನಸ್ವಾಮಿ ದೇವಾಲಯದ ತಳಪಾಯದ ಕಲ್ಲಿನ ಮೇಲಿರುವ ಶಾಸನದ ಕಾಲವನ್ನು ಅದರಲ್ಲಿ ಕೊಟ್ಟಿರುವ ತೇದಿಯ ವಿವರಗಳ ಆಧಾರದ ಮೇಲೆ ಕ್ರಿ.ಶ. 1098 ನವೆಂಬರ್ ಇಪ್ಪತ್ತೆರಡಕ್ಕೆ ಸರಿಹೊಂದಿಸಲಾಗಿದೆ.[66] ಪ್ರಸ್ತುತ ಶಾಸನದ ಆಧಾರದ ಮೇಲೆ ಕ್ರಿ.ಶ. 1098ರ ವೇಳೆಗೆ ವಿಷ್ಣುವರ್ಧನನು ಕೊಂಗುನಾಡು ಪ್ರದೇಶವನ್ನು ಗೆದ್ದುಕೊಂಡು ಆ ವೇಳೆಗಾಗಲೇ ವಿಷ್ಣುವರ್ಧನನೆಂಬ ಹೆಸರಿನಿಂದ ಬೆಳಗೊಳವನ್ನೇ ಅಗ್ರಹಾರವನ್ನಾಗಿ ಪರಿವರ್ತಿಸಿ ದಾನ

ನೀಡಿದನೆಂದು ಭಾವಿಸಬೇಕಾಗುತ್ತದೆ. ಹಾಗೆ ಭಾವಿಸಿದ್ದಲ್ಲಿ ಬಿಟ್ಟಿದೇವನು ವಿಷ್ಣುವರ್ಧನನಾದ ಎಂಬ ವೈಷ್ಣವ ಸಂಪ್ರದಾಯಕ್ಕೆ ಮತ್ತು ರಾಮಾನುಜಾಚಾರ್ಯರು ಇದರಲ್ಲಿ ಪ್ರಭಾವ ಬೀರಿದರೆಂಬ ಅಂಶ ಸ್ಪಷ್ಟವಾಗುವುದಿಲ್ಲ. ಅಲ್ಲದೆ ಮೇಲುಕೋಟೆಯ ಐತಿಹ್ಯಗಳ ಪ್ರಕಾರ ಕ್ರಿ.ಶ. 1198ನೇ ಡಿಸೆಂಬರ್ 18ರಂದು ರಾಮಾನುಜಾಚಾರ್ಯರು ತಿರುನಾರಾಯಣನನ್ನು ಪ್ರತಿಷ್ಠಾಪಿಸಿದರು.[67] ಇದನ್ನು ಒಪ್ಪಿದಲ್ಲಿ ಆಚಾರ್ಯರು ದೇವ ಪ್ರತಿಷ್ಠೆಗೆ ಪೂರ್ವದಲ್ಲಿಯೇ ಬಿಟ್ಟಿದೇವ ವಿಷ್ಣುವರ್ಧನನಾಗಿದ್ದನೆಂದು ಖಚಿತವಾಗುತ್ತದೆ. ಜೈನ ಮತೀಯನಾದ ವಿಷ್ಣುವರ್ಧನನು ವೈಷ್ಣವ ಮತವಲಾಂಬಿಯಾದುದ್ದನ್ನು ಯಾವುದೇ ಶಾಸನಗಳು ಉಲ್ಲೇಖಿಸದೇ ಇರುವುದರಿಂದ ಅಲ್ಲದೆ ಮೇಲುಕೋಟೆ ಮತ್ತು ತೊಂಡನೂರಿನ ಶಾಸನಗಳಲ್ಲಿ ವಿಷ್ಣುವರ್ಧನನ ಉಲ್ಲೇಖವಿಲ್ಲದ ಹಿನ್ನೆಲೆಯಲ್ಲಿ, ರಾಮಾನುಜಾಚಾರ್ಯರು ಆ ದೇವಾಲಯಗಳನ್ನು ನಿರ್ಮಿಸಿದ್ದರೆಂಬ ಉಲ್ಲೇಖ ಶಾಸನಗಳಲ್ಲಿ ದೊರೆಯದಿರುವುದರಿಂದ, ಈ ಎಲ್ಲಾ ವಿಷಯವನ್ನು ಮತ್ತೆ ಪರೀಕ್ಷಿಸುವ ಅವಶ್ಯಕತೆ ಕಂಡುಬರುತ್ತದೆ.

ನಾಗಮಂಗಲ ತಾಲ್ಲೂಕಿನ ಬೋಗಾದಿಯ ಶಾಸನವು ಕ್ರಿ.ಶ 1144 ಡಿಸೆಂಬರ್ 26 ಕ್ಕೆ ಸರಿಹೊಂದಿದ್ದು, ಚಾಲುಕ್ಯರ ಸಾಮಂತ ಅಧಿಪತಿಯಾಗಿ ವಿಷ್ಣುವರ್ಧನನು ಆಳ್ವಿಕೆ ನಡೆಸುತ್ತಿದ್ದುದನ್ನು ಉಲ್ಲೇಖಿಸುತ್ತದೆ.[68] ಹಾಗೆಂದ ಮೇಲೆ ಕೊಹಿಲೋರವರ ಹೊಯ್ಸಳ ವಂಶ ವಿಷ್ಣುವರ್ಧನನ ಅಂತ್ಯದ ಕಾಲವಾದ ಕ್ರಿ.ಶ. 1141ನ್ನು ನಾಲ್ಕು ವರ್ಷಗಳ ಕಾಲ ಮುಂದೆ ನೂಕುತ್ತದೆ. ಅಲ್ಲದೆ ನಾಗಮಂಗಲ ತಾಲ್ಲೂಕಿನ ಯಲ್ಲಾದಹಳ್ಳಿಯ ಕ್ರಿ.ಶ. 1145ಕ್ಕೆ ಸೇರಿದ ಶಾಸನವು ಹೊಯ್ಸಳ ವಿಷ್ಣುವರ್ಧನನನ್ನು ಉಲ್ಲೇಖಿಸುತ್ತದೆ.[69] ಅಂದ ಮೇಲೆ ತನ್ನ ಮಗ ನರಸಿಂಹನೊಂದಿಗೆ ವಿಷ್ಣುವರ್ಧನನು ಸಹ ಆಳ್ವಿಕೆ ನಡೆಸುತ್ತಿದ್ದನೆಂದು ಹೇಳಬೇಕಾಗುತ್ತದೆ.

ಒಂದನೆ ನರಸಿಂಹನು ವಿಷ್ಣುವರ್ಧನ ಮತ್ತು ಲಕ್ಷ್ಮೀದೇವಿಯರ ಮಗ. ತಂದೆಯ ಅನೇಕ ಬಿರುದುಗಳನ್ನು ಈತನು ಧರಿಸಿದ್ದನು ನಾಗಮಂಗಲ ತಾಲ್ಲೂಕಿನ ಅರವತ್ನಾಲ್ಕನೇ ಶಾಸನ ಅಂದರೆ ಈ ಹಿಂದೆ ಉಲ್ಲೇಖಿಸಿದ ಯಾಲ್ಲಾದಹಳ್ಳಿಯ ಶಾಸನ ಒಂದನೇ ನರಸಿಂಹನು ಚಂಗಾಳ್ವವನ್ನು ಕೊಂದನೆಂದು ಉಲ್ಲೇಖಿಸುತ್ತದೆ.[70] ಆದರೂ ಶಾಸನದ ರಾಜನನ್ನು ಗುರುತಿಸಲು ಸಾಧ್ಯವಾಗಿಲ್ಲ. ಹೊಯ್ಸಳರ ಅರಸ ಗಂಗವಾಡಿ, ನೊಳಂಬವಾಡಿ, ಬೆಳ್ವಲ ಮುಂತಾದ ಪ್ರದೇಶಗಳನ್ನು ಆಳುತ್ತಿದ್ದನೆಂದೂ ಅಲ್ಲದೆ ದ್ರಮಿಳ, ಮಗದ, ಪಾಂಚಾಳ, ನೇಪಾಳ ಮುಂತಾದ ಪ್ರದೇಶಗಳ ಅರಸರನ್ನು ಜಯಸಿದ್ದನೆಂದು ಹೇಳಲಾಗುತ್ತದೆ. ಆದರೂ ಇವೆಲ್ಲವೂ ಅತಿಶಯೋಕ್ತಿಯ ಉಕ್ತಿಗಳಾಗಿ ಮಾತ್ರ ಕಂಡುಬರುತ್ತದೆ. ಇಮ್ಮಡಿ ಬಲ್ಲಾಳನ ಅರವತ್ತಕ್ಕೂ ಹೆಚ್ಚು ಶಾಸನಗಳು ಜಿಲ್ಲೆಯಲ್ಲಿ

ದೊರೆತಿವೆ. ಈತನ ಅತೀ ಹೆಚ್ಚು ಶಾಸನಗಳು ಪಾಂಡವಪುರ (16), ಮದ್ದೂರು (13), ನಾಗಮಂಗಲ ತಾಲ್ಲೂಕಿನಿಂದ (13), ಕೃಷ್ಣರಾಜಪೇಟೆಯಿಂದ ಏಳು ಶಾಸನ, ಮಳವಳ್ಳಿಯಿಂದ ಆರು ಶಾಸನ, ಮಂಡ್ಯದಿಂದ ಆರು ಶಾಸನ, ಶ್ರೀರಂಗಪಟ್ಟಣದಿಂದ ಒಂದು ಶಾಸನ ವರದಿಯಾಗಿವೆ.

ಇದನ್ನು ಗಮನಿಸಿದರೆ ನೊಳಂಬವಾಡಿಗೆ ಅಂಟಿಕೊಂಡಂತೆ ಇದ್ದ ಪಾಂಡವಪುರ, ಕೃಷ್ಣರಾಜಪೇಟೆ, ನಾಗಮಂಗಲ, ಮಂಡ್ಯ, ಮದ್ದೂರು ತಾಲ್ಲೂಕುಗಳು ಅತೀ ಹೆಚ್ಚು ಹೊಯ್ಸಳರ ಚಟುವಟಿಕೆಗೆ ಒಳಗಾಗಿದ್ದವೆಂದು ಹೇಳಬಹುದು. ಇಮ್ಮಡಿ ಬಲ್ಲಾಳನು ಪಾಂಡ್ಯರಿಗೆ ಸೇರಿದ ಉಚ್ಚಂಗಿಯನ್ನು ವಶಪಡಿಸಿಕೊಂಡನು.[71] ಈತನ ದಂಡನಾಯಕನು ಕಳಚೂರಿ ಅರಸ ಸಂಕಮನೊಂದಿಗೆ ಹೋರಾಡಿ ಮೃತನಾದುದನ್ನು ಮತ್ತು ಈತನ ಸಾಮಂತ ಸಿಂಧೆಯ ನಾಯಕ ಅಟ್ಟಿಕಾಳಗದಲ್ಲಿ ಜಯಶೀಲನಾದುದನ್ನು ಜಿಲ್ಲೆಯ ಶಾಸನಗಳು ಉಲ್ಲೇಖಿಸುತ್ತವೆ.[72] ಈತನ ನಾಗಮಂಗಲ ಶಾಸನವು ಆ ಊರನ್ನು ವೀರಬಲ್ಲಾಳನ ಚತುರ್ವೇದಿ ಭಟ್ಟಾರತ್ನಾಕರ ಎಂಬ ಅಗ್ರಹಾರ ಎಂದು ಕರೆದಿದ್ದು ಅಲ್ಲಿನ ಚೆನ್ನಕೇಶವನಿಗೆ ಭೂಮಿಯನ್ನು ದಾನಬಿಟ್ಟುದಾಗಿ ತಿಳಿಸುತ್ತದೆ.[73] ಈ ಶಾಸನದ ಕಾಲಕ್ಕೆ ಇಮ್ಮಡಿ ಬಲ್ಲಾಳನು ಇನ್ನೂ ರಾಜ ಪದವಿಯನ್ನು ಏರಿಲ್ಲದಿದ್ದರೂ ಸ್ವತಂತ್ರವಾಗಿ ಶಾಸನ ಹಾಕಿಸಿರುವುದು ವಿಶೇಷ ಎನಿಸುತ್ತದೆ. ನಾಗಮಂಗಲ 130, 132ನೆಯ ಶಾಸನಗಳು ಈತನ ಕಾಲದ ಪ್ರಮುಖ ಶಾಸನಗಳಾಗಿವೆ. ರಾಜಾಧಿರಾಜ ಎಂಬ ಬಿರುದಿನೊಂದಿಗೆ ತಲಕಾಡನ್ನು ಆಳುತ್ತಿದ್ದ 3ನೇ ಬಲ್ಲಾಳನೆ ಹೊಯ್ಸಳರ ಅರಸರಲ್ಲಿ ಸ್ವತಂತ್ರ ದೊರೆ. ಇದಕ್ಕೆ ಪೂರಕವಾಗಿ ನಾಗಮಂಗಲದ ಶಾಸನವು ಕ್ರಿ.ಶ 1199 ಏಪ್ರಿಲ್ 7ರಲ್ಲಿ ಎರಡನೆ ಬಲ್ಲಾಳನು ಲುಕ್ಕಿಗುಂಡಿಯನ್ನು ರಾಜಧಾನಿಯನ್ನಾಗಿ ಹೊಂದಿ ಆಳುತ್ತಿದ್ದುದಾಗಿ ಹೇಳುತ್ತದೆ.[74] ಎರಡನೆ ಬಲ್ಲಾಳನು ಕೃಷ್ಣಾ ನದಿಯವರೆಗೆ ತನ್ನ ಆಳ್ವಿಕೆಯನ್ನು ವಿಸ್ತರಿಸಿದುದ್ದನ್ನು ಈ ಶಾಸನ ಖಚಿತಪಡಿಸುತ್ತದೆ. ಮಳವಳ್ಳಿ ತಾಲ್ಲೂಕಿನ ಅಂತರವಳ್ಳಿಯ ಶಾಸನ ವೀರಬಲ್ಲಾಳನು ಜಗದೇಕಮಲ್ಲ ಎಂಬ ಬಿರುದು ಹೊಂದಿದ್ದನೆಂದು ಉಲ್ಲೇಖಿಸುತ್ತದೆ.[75]

ಜಿಲ್ಲೆಯಲ್ಲಿ ಈವರೆಗೆ ಇಮ್ಮಡಿ ನರಸಿಂಹನ ಕಾಲದ 11 ಶಾಸನಗಳು ದೊರೆತಿವೆ. ಮಂಡ್ಯದ ಎರಡು ಶಾಸನಗಳು ಸಂಘಟಿತ ಶಾಸನಗಳಾಗಿದ್ದು, ಕ್ರಿ.ಶ. 1234 ನೆಯ ವರ್ಷಕ್ಕೆ ಸೇರಿದವುಗಳಾಗಿವೆ.[76] ಇವು ರಾಜನ ವಂಶಾವಳಿಯನ್ನು ಸುದೀರ್ಘವಾಗಿ ಕೊಡುತ್ತವೆ. ಇಮ್ಮಡಿ ನರಸಿಂಹನ ತರುವಾಯ ಅಧಿಕಾರಕ್ಕೆ ಬಂದವನೇ ಸೋಮೇಶ್ವರ ಜಿಲ್ಲೆಯಲ್ಲಿ ಈತನ 15 ಶಾಸನಗಳು ದೊರೆತಿವೆ. ಈತನ ಶಾಸನಗಳು ಅತಿ ಉತ್ಪ್ರೇಕ್ಷೆಯಿಂದ ಈತನನ್ನು ಹೊಗಳುತ್ತವೆ.

ಅದೇನೆಂದರೆ ಈತನ ವಿರೋಧಿಗಳು ಈತನನ್ನು ಸ್ತ್ರೀವೇಷ ಧರಿಸಿ ಗೌರವಿಸುತ್ತಿದ್ದರೆಂದು ಹೇಳಲಾಗಿದೆ.[77] ಈತನು ಬಾಲ್ಯದಲ್ಲಿದ್ದಾಗಲೇ ವಿರೋಧಿಗಳನ್ನು ದ್ವಂಸಮಾಡಿದ್ದನೆಂದು ಗೋವಿಂದನಹಳ್ಳಿ ಶಾಸನ ಉತ್ಪ್ರೇಕ್ಷಿಸುತ್ತದೆ.[78] ಈತನ ಬಸರಾಳು ಶಾಸನದಲ್ಲಿ ಉಲ್ಲೇಖವಾಗಿರುವ ಕೃಷ್ಣ ಕನ್ನರ ಸೇವುಣ ಅರಸರೆಂದು ಕೆಲವರು, ಮತ್ತೆ ಕೆಲವರು ರಾಷ್ಟ್ರಕೂಟ ಅರಸರೆಂದು ಗುರುತಿಸಿದ್ದಾರೆ. ಸೋಮೇಶ್ವರನು ಸಾಮ್ರಾಜ್ಯವನ್ನು ಪೂರ್ವದಲ್ಲಿ ಕಂಚಿ ಬೇಲೂರು, ಉತ್ತರದಲ್ಲಿ ಕೃಷ್ಣಾನದಿ, ದಕ್ಷಿಣದಲ್ಲಿ ಬಯಲುನಾಡಿನವರೆಗೆ ವಿಸ್ತರಿಸಿದನೆಂದು ತಿಳಿದುಬರುತ್ತದೆ.[79] (ಪುಟ 37)

ಮೂರನೇ ಸೋಮೇಶ್ವರನ ಉತ್ತರಾಧಿಕಾರಿಯಾದ ಮೂರನೇ ನರಸಿಂಹನ 19 ಶಾಸನಗಳು ಜಿಲ್ಲೆಯಲ್ಲಿ ಲಭ್ಯವಿವೆ. ಕ್ರಿ.ಶ 1271ರ ಬೆಳ್ಳೂರಿನ ಶಾಸನವು ಸೇವುಣನೆಂಬ ಮಹಾದೇವನು ಈತನ ವಿರುದ್ಧ ಯುದ್ಧಮಾಡದೆ ಒಂದೇ ರಾತ್ರಿ ಓಡಿಹೋದನೆಂದು ಅಣಕ ಮಾಡುತ್ತದೆ.[80] ಇದಲ್ಲದೆ ಈತನ ಕಾಲದಲ್ಲಿ ಹೆಚ್ಚಿನ ಅಥವಾ ಮಹತ್ವದ ಘಟನೆಗಳು ಜರುಗಿದಂತೆ ದಾಖಲಾಗಿಲ್ಲ ಮುಂದೆ ಅಧಿಕಾರಕ್ಕೆ ಬಂದ ಮೂರನೇ ಬಲ್ಲಾಳನ 12 ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ಪಾಂಡವಪುರ ತಾಲ್ಲೂಕಿನ ಚಟ್ಟನಹಳ್ಳಿ ಶಾಸನವು ಮೂರನೆ ಸೋಮೇಶ್ವರನ ಕಾಲದಲ್ಲಿ ಚಿತ್ರದುರ್ಗದ ಸೋಮಯ್ಯನಾಯಕ ಮತ್ತು ಕಂಪಿಲರ ನಡುವೆ ಹೊಳಲಕೆರೆಯಲ್ಲಿ ಕ್ರಿ.ಶ. 1303ರಲ್ಲಿ ಯುದ್ಧ ನಡೆದುದ್ದನ್ನು ಉಲ್ಲೇಖಿಸುತ್ತದೆ.

ಮಂಡ್ಯ ಜಿಲ್ಲೆಯ ಶಾಸನಗಳನ್ನು ಅವಲೋಕಿಸಿದಾಗ ಹೊಯ್ಸಳರ ಅರಸರು ಸೊಸೆಯೂರು, ಬೇಲೂರು, ದ್ವಾರಸಮುದ್ರಗಳಿಂದ ಮಾತ್ರವಲ್ಲದೇ ತಲಕಾಡು, ಬಂಕಾಪುರ, ಕೋಡಾಲ, ಹಳೇಬೀಡು, ಕೊಣನೂರು, ಲಕ್ಕಿಗುಂಡಿ ಮುಂತಾದ ಸ್ಥಳಗಳಿಂದಲೂ ರಾಜ್ಯಭಾರ ನಡೆಸಿದ್ದರೆಂದು ತಿಳಿಸುತ್ತದೆ.[81] ಸಮಕಾಲೀನ ರಾಜರುಗಳಾದ ಚೋಳರು, ಚಾಲುಕ್ಯರು, ಕಳಚೂರಿಗಳು, ಸೇವುಣರು, ಕೊಂಗಾಳ್ವರು, ಚೆಂಗಾಳ್ವರು, ಪಾಂಡ್ಯರು ಮುಂತಾದವರುಗಳ ವಿರುದ್ಧ ಹೋರಾಡಿ ಮೇಲುಗೈ ಸಾಧಿಸಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ.[82] ಕೆಲವೊಂದು ಇತಿಹಾಸಕಾರರ ಅಭಿಪ್ರಾಯದಂತೆ ಮಂಡ್ಯ ಜಿಲ್ಲೆಯ ತೊಂಡನೂರು ಮೂರನೇ ಬಲ್ಲಾಳ ಮತ್ತು ಆತನ ಮಗ ವಿರೂಪಾಕ್ಷ ಬಲ್ಲಾಳನ ರಾಜಧಾನಿಯಾಗಿತ್ತೆಂದು ಭಾವಿಸಿದ್ದಾರೆ.[83] ಇದಕ್ಕೆ ಶಾಸನ ಆಧಾರಗಳು ಇಲ್ಲದಿರುವುದರಿಂದ ಅವನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಮುನ್ನ ಪುನಃ ಅಧ್ಯಯನ ಮಾಡಬೇಕಾದ ಅವಶ್ಯಕತೆಯನ್ನು ಎತ್ತಿ ಹಿಡಿಯುತ್ತದೆ.

2.2.5. ವಿಜಯನಗರ ಸಾಮ್ರಾಜ್ಯ

ವಿಜಯನಗರ ಸಂಸ್ಥಾನದ 16 ಅರಸರುಗಳ ಶಾಸನಗಳು ಜಿಲ್ಲೆಯಲ್ಲಿ ದೊರೆತಿದ್ದು, ಒಂದನೆ ಬುಕ್ಕರಾಯನಿಂದ ಪ್ರಾರಂಭಿಸಿ ಶ್ರೀರಂಗರಾಯರವರೆಗೆ ಶಾಸನಗಳು ಮುಂದುವರೆದಿದೆ.[84] ಜಿಲ್ಲೆಯಲ್ಲಿ ದೊರೆತಿರುವ ವಿಜಯನಗರ ಅರಸರ ಶಾಸನಗಳು ಬಹುತೇಕವಾಗಿ ದಾನಗಳಿಗೆ, ಅಗ್ರಹಾರ ರಚನೆಗೆ, ದೇವಾಲಯಗಳ ಜೀರ್ಣೋದ್ಧಾರಗಳಿಗೆ ಮತ್ತು ದೇವಾಲಯ ರಚನೆಗೆ, ಸಮಾಜೋಧಾರ್ಮಿಕ ವ್ಯವಸ್ಥೆಗೆ ಸಂಬಂಧಿಸಿದವುಗಳಾಗಿವೆ. ಹರಿಹರನ ಕ್ರಿ.ಶ 1341ರ ಶಾಸನವೇ ಜಿಲ್ಲೆಯಲ್ಲಿ ದೊರಕುವ ವಿಜಯನಗರ ಸಾಮ್ರಾಜ್ಯದ ಮೊದಲ ಶಾಸನ. ಈ ಶಾಸನವು ವೀರಗಲ್ಲು ಶಾಸನವಾಗಿದ್ದು, ತಿಮ್ಮವ್ವನು ಹಾಕಿಸಿದ ವೀರಗಲ್ಲು ಶಾಸನವಾಗಿದೆ. ಹೆಚ್ಚಿನ ವಿವರಗಳು ಲಭ್ಯವಿಲ್ಲವಾದರೂ ಶ್ರೀ ವೀರಬುಕ್ಕನ ಒಡೆಯನ ಹೆಸರನ್ನು ಸೂಚಿಸುತ್ತದೆ. ಆದರೆ ಶಾಸನದ ಕಾಲವನ್ನು ಗಮನಿಸಿದಾಗ ಇದು ಒಂದನೇ ಹರಿಹರನ ಕಾಲದಾಗಿದ್ದು ವಿಶೇಷವೆನಿಸುತ್ತದೆ.[85]

ಜಿಲ್ಲೆಯಲ್ಲಿ ಕೃಷ್ಣದೇವರಾಯನ 15 ಶಾಸನಗಳು ಲಭ್ಯವಿವೆ.[86] ಅಚ್ಯುತರಾಯನ 18 ಶಾಸನಗಳು,[87] ಸದಾಶಿವರಾಯನ 15 ಶಾಸನಗಳು[88] ಜಿಲ್ಲೆಯಿಂದ ವರದಿಯಾಗಿವೆ. ವಿಜಯನಗರದ ಅರಸರ ಜಿಲ್ಲೆಯ ಶಾಸನಗಳಲ್ಲಿ ಅತೀ ಹೆಚ್ಚು ಗಮನ ಸೆಳೆಯುವ ಶಾಸನವೆಂದರೆ ಪಾಂಡವಪುರ ತಾಲ್ಲೂಕಿನ 19 ಮತ್ತು 163 ಸಂಖ್ಯೆಯ ಶಾಸನಗಳು[89] ಈ ಎರಡು ಶಾಸನಗಳು ವಿರೂಪಾಕ್ಷನ ಶಾಸನಗಳಾಗಿದ್ದು ಈ ಶಾಸನದಲ್ಲಿ ಒಂದು ಸ್ವಾರಸ್ಯಕರ ವಿಷಯ ಪ್ರಸ್ಥಾಪಿತವಾಗಿದೆ,[90] ನಾಗಮಂಗಲದ ಸಿಂಗಣ್ಣ ಒಡೆಯರ ಮಗ ದೇವರಾಜನು ಕಾವೇರಿ ನದಿಗೆ ಹೊಸದಾಗಿ ಕಾಲುವೆಯನ್ನು ಕಟ್ಟಿಸಿದಾಗ ಹರವು ಗ್ರಾಮದ ಜನತೆ ತಮ್ಮ ಊರಿನವರೆಗೆ ಕಾಲುವೆಯನ್ನು ವಿಸ್ತರಿಸಬೇಕೆಂದು ಮನವಿ ಮಾಡಿದರು. ಇದಕ್ಕೆ ಒಪ್ಪಿ ತನ್ನ ವೆಚ್ಚದಲ್ಲಿ ಹರವು ಗ್ರಾಮದವರೆಗೆ ಕಾಲುವೆಯನ್ನು ವಿಸ್ತರಿಸಿದನು. ಈ ಕಾರ್ಯಕ್ಕೆ ಪ್ರತಿಯಾಗಿ ಕುರುವೆಂಕನಾಡು, ವೆಂಕಟಯ್ಯ ಗ್ರಾಮವನ್ನು ಆ ಗ್ರಾಮದ ಹೆಬ್ಬಾರ್ವ ಯದುವಣ್ಣನು ದೇವರಾಜನಿಗೆ ಯಜಮಾನ ಭಾಗವೆಂದು ಶೋತ್ರಿಯ ಭಾಗವೆಂದು ಕೊಟ್ಟನು ಎಪಿಗ್ರಾಫಿಯ ಕರ್ನಾಟಿಕ ಶಾಸನ ಸಂಪುಟ 6 ಪೀಠಿಕೆಯಲ್ಲಿ ಈ ಕಾರ್ಯ 1455ರಲ್ಲಿ ನಡೆದಿದೆ ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ. ಕ್ರಿ.ಶ. 1467ರಲ್ಲಿ ಯದುವಣ್ಣನು ತನ್ನ ಭಾಗದ ಗ್ರಾಮಗಳಾದ ಚಿಕ್ಕಮಾಳದ ಹೊಸಹಳ್ಳಿ ಮತ್ತು ಕಂದನಹಳ್ಳಿ ಗ್ರಾಮದ ಅರ್ಧಭಾಗವನ್ನು 401 ಹೊನ್ನುಗಳಿಗೆ ದೇವರಾಯನಿಗೆ ಮಾರಾಟ ಮಾಡಿದನು. ಆತನು ಇದನ್ನು 208 ವೃತ್ತಿಗಳಾಗಿ ವಿಭಜಿಸಿ, 8 ವೃತ್ತಿಗಳನ್ನು ಗ್ರಾಮದೇವತೆಗೆ ವಿವಿಧ 200 ವೃತ್ತಿಗಳನ್ನು ನಾನಾಗೋತ್ರದ ಬ್ರಾಹ್ಮಣರಿಗೆ, ತನ್ನ ತಾಯಿ ಸೀತಾಯಮ್ಮನ ಪುಣ್ಯಾರ್ಥವಾಗಿ ದಾನ

ಮಾಡಿದನೆಂದು, ಹೊಸಹಳ್ಳಿ ಗ್ರಾಮವನ್ನು ಸೀತಾರಾಮಪುರ ಅಥವಾ ಸೀತಾಪುರ ಎಂದು ಪುನರ್‌ನಾಮಕರಣ ಮಾಡಿದನೆಂದು ತಿಳಿಸುತ್ತದೆ.[91] ಇದನ್ನು ಹೊರತುಪಡಿಸಿದರೆ ನಮ್ಮ ಗಮನ ಸೆಳೆಯುವ ಮತ್ತೊಂದು ಶಾಸನ ನಾಗಮಂಗಲದ ಶಾಸನ.[92] ಈ ಶಾಸನದಂತೆ ರಾಣಿ ಚೆನ್ನಾದೇವಿಯ ಬಗೆಗಿದ್ದ ಗೊಂದಲವನ್ನು ನಿವಾರಿಸಲು ಸಾಕಷ್ಟು ಪ್ರಯತ್ನಶೀಲಾವಾಗಿದೆ. ಇಷ್ಟಲ್ಲದೇ ಜಿಲ್ಲೆಯಲ್ಲಿ ದೊರೆತಿರುವ ವಿಜಯನಗರದ ಬಹುತೇಕ ಕಾಲದ ಶಾಸನಗಳು ಅಗ್ರಹಾರ ರಚನೆಗೆ, ದೇವಾಲಯಗಳ ನಿರ್ಮಾಣಕ್ಕೆ ಮುಂತಾದ ಧರ್ಮಕಾಯಕ್ಕೆ ಮೀಸಲಾಗಿರುವುದು ಕಂಡುಬರುತ್ತದೆ. ತುಳುವನರಸಿಂಹನಾಯಕನು ಕ್ರಿ.ಶ 1503 ವೇಳೆಗೆ ಮೃತನಾಗಿದ್ದ ವಿಷಯವನ್ನು ಸಂತೆಬಾಚಹಳ್ಳಿಯ ಶಾಸನ ತಿಳಿಸಿಕೊಡುತ್ತದೆ.[93] ಈ ಮಹತ್ವದ ವಿಷಯವನ್ನು ಹೊರತುಪಡಿಸಿದರೆ. ವಿಜಯನಗರ ಅರಸರ ಮತ್ತ್ಯಾವ ಶಾಸನಗಳೂ ವಿಶೇಷತೆಯಿಂದ ಗಮನ ಸೆಳೆಯುವುದಿಲ್ಲ.

2.2.6. ಮೈಸೂರು ಅರಸರು

ಮೈಸೂರು ಅರಸರ ಒಟ್ಟು 65 ಶಾಸನಗಳು ಜಿಲ್ಲೆಯಿಂದ ವರದಿಯಾಗಿದೆ.[94] ಎಪಿಗ್ರಾಫಿಯ ಕರ್ನಾಟಿಕ ಏಳನೆಯ ಸಂಪುಟದಲ್ಲಿ 18 ಶಾಸನಗಳು ಹಾಗೂ ಎಪಿಗ್ರಾಫಿಯ ಕರ್ನಾಟಿಕ ಆರನೆಯ ಸಂಪುಟದಲ್ಲಿ, 47 ಶಾಸನಗಳು ಲಭ್ಯವಾಗಿವೆ. ಏಳನೆಯ ಸಂಪುಟದಲ್ಲಿ ಚಾಮರಾಜರು, ದೇವರಾಜರು, ಇಮ್ಮಡಿ ಕಂಠೀರವ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಶಾಸನಗಳು ಉಪಲಬ್ಧವಿವೆ. 6ನೇ ಸಂಪುಟದಲ್ಲಿ ರಾಜ ಒಡೆಯರು, ದೇವರಾಜ, ಕಂಠೀರವ ನರಸರಾಜ, ದೊಡ್ಡ ಮತ್ತು ಚಿಕ್ಕದೇವರಾಜ ಒಡೆಯರು 1, 2, ಮತ್ತು 3ನೇ ಕೃಷ್ಣರಾಜರ ಶಾಸನ, ಟಿಪ್ಪುಸುಲ್ತಾನನ ಶಾಸನಗಳು ಲಭ್ಯವಿವೆ. ಮುಮ್ಮಡಿ ಕೃಷ್ಣರಾಜರ ಅತಿ ಹೆಚ್ಚು ಶಾಸನಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. ಅಂದರೆ ಜಿಲ್ಲೆಯ ಒಡೆಯರ ಒಟ್ಟು ಶಾಸನಗಳಲ್ಲಿ 25 ಶಾಸನಗಳು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸೇರಿವೆ. ಈ ಶಾಸನಗಳು ವಿಜಯನಗರದ ಶಾಸನಗಳ ಮಾದರಿಯಲ್ಲಿಯೇ ಮುಂದುವರೆಯುತ್ತವೆ. ಅಂದರೆ ಬಹುತೇಕವಾಗಿ ಈ ಶಾಸನಗಳು ದಾನ, ದತ್ತಿ, ಅಗ್ರಹಾರ ನಿರ್ಮಾಣ ಮತ್ತು ದೇವಾಲಯಗಳ ಪುನರ್‌ನಿರ್ಮಾಣಕ್ಕೆ ಮೀಸಲಾಗಿವೆಯೇ ಹೊರತು, ಐತಿಹಾಸಿಕ ಮಹತ್ವದ ವಿಷಯವನ್ನು ತಿಳಿಸುವುದಿಲ್ಲ. ತೊಂಡನೂರು ಅಗ್ರಹಾರದ ಕ್ರಿ.ಶ. 1722 ಶಾಸನವು ಈ ಮನೆತನದ ಶಾಸನಗಳಲ್ಲಿ ಅತಿ ಉದ್ದವಾದ ಅಂದರೆ 733 ಸಾಲುಗಳನ್ನು ಹೊಂದಿದೆ.[95] ಶಾಸನ ಕರ್ತೃವೇ ಶಾಸನಗ್ರಂಥ ಉಲ್ಲೇಖಿಸಿರುವುದು ಮಹತ್ವ ಎನಿಸುತ್ತದೆ. ಇದನ್ನು ಬಿಟ್ಟರೆ ಇತ್ತೀಚಿಗೆ ದೇವರಾಜಸ್ವಾಮಿರವರು[96] ಪ್ರಕಟಿಸಿರುವ ರಾಜ ಒಡೆಯರ ಕಾಲದ ಶಾಸನದ ಒಂದು ಹಲಗೆಯ ಪಾಠ ಮುಖ್ಯವಾಗುತ್ತದೆ ಆದರೂ ಅದನ್ನು ಆ ಕಾಲದ್ದೆಂದು ಒಪ್ಪಿಕೊಳ್ಳುವಲ್ಲಿ

ಸಾಕಷ್ಟು ಸಂದೇಹವಿದೆ. ಇದಲ್ಲದೆ ಜಿಲ್ಲೆಯಿಂದ ಇತರ ಸಣ್ಣ ಅರಸು ಮನೆತನಗಳ ಶಾಸನಗಳು ದೊರೆತಿವೆ. ಉಮ್ಮತ್ತೂರು, ಹದಿನಾರು, ಕಳಲೆ, ಚೆನ್ನಪಟ್ಟಣ ಮತ್ತು ನಾಗಮಂಗಲದ ಆಡಳಿತಗಾರರಿಗೆ ಸಂಬಂಧಿಸಿದಂತೆ ಕೆಲವು ಶಾಸನಗಳು ಕಂಡುಬಂದಿದ್ದರು ಅವು ಜಿಲ್ಲೆಯ ಇತಿಹಾಸ ನಿರ್ಮಿಸುವಲ್ಲಿ ಗೌಣವಾಗುವುದರಿಂದ ಅವುಗಳನ್ನು ಇಲ್ಲಿ ಪ್ರಸ್ತಾಪಿಸಿಲ್ಲ.

ಕೊನೆ ಟಿಪ್ಪಣಿಗಳು

1. ಪಾರ್ಥಸಾರಥಿ ಟಿ. ಎ., 2003, ಕರ್ನಾಟಕ ರಾಜ್ಯ ಗೆಜೆಟಿಯರ್ ಮಂಡ್ಯ ಜಿಲ್ಲೆ, ಪುಟ 2.
2. ರೈಸ್, ಬಿ.ಎಲ್., 1897, ಮೈಸೂರು ಗೆಜೆಟಿಯರ್, ಸಂಪುಟ-2, ಪುಟ 271,
3. ಹಯವದನರಾವ್ ಸಿ., 1930, ಮೈಸೂರು ಗೆಜೆಟಿಯರ್, ಸಂಪುಟ-5, ಪುಟ -724,
4. ಅದೇ, ಪುಟ-174
5. ಪಾರ್ಥಸಾರಥಿ ಟಿ. ಎ., 2003, ಪೂರ್ವೋಕ್ತ, ಪುಟ 2,
6. ಅದೇ, ಪುಟ-2
7. ಪ್ರದೀಪ್ ಕುಮಾರ್ ಹೆಬ್ರಿ., 2006, "ಮಂಡ್ಯಜಿಲ್ಲೆಯ ಭೌಗೋಳಿಕ ಹಿನ್ನೆಲೆ" ಸುವರ್ಣ ಮಂಡ್ಯ, ದೇ. ಜವರೇಗೌಡ (ಸಂ) ಪುಟ 45-93,
8. ಅದೇ, ಪುಟ 45-93
9. ಅದೇ, ಪುಟ 45-93
10. ಪಾರ್ಥಸಾರಥಿ ಟಿ. ಎ., 2003, ಪೂರ್ವೋಕ್ತ, ಪುಟ 2.
11. ಪ್ರದೀಪ್ ಕುಮಾರ್ ಹೆಬ್ರಿ., 2006, ಪೂರ್ವೋಕ್ತ, ಪು.45-95.
12. ಅದೇ, ಪುಟ 45-95
13. ಅದೇ, ಪುಟ 45-95
14. ಹಯವದನರಾವ್, ಸಿ., 1930, ಪೂರ್ವೋಕ್ತ, ಪುಟ 685.
15. ಅದೇ, ಪುಟ 693.
16. ರೈಸ್. ಬಿ. ಎಲ್., 1897, ಪೂರ್ವೋಕ್ತ, ಪುಟ 271
17. ಪಾರ್ಥಸಾರಥಿ ಟಿ. ಎ., 2003, ಪೂರ್ವೋಕ್ತ. ಪುಟ 16,
18. ಸುಂದರ, ಅ., 2006, "ಮಂಡ್ಯ ಜಿಲ್ಲೆಯ ಪ್ರದೇಶದ ಪ್ರಾಗೈತಿಹಾಸದ ಪುರಾತತ್ವಗಳು ಒಂದು ಪಕ್ಷಿನೋಟ" ಡಾ. ದೆ. ಜವರೇಗೌಡ (ಸಂ), ಪುಟ 35-44.
19. ಅದೇ, ಪುಟ 35-44
20. ಶೇಷಾದ್ರಿ ಎಂ., 1956 –"Stone using culture of Pre and Proto Historic Mysore in Shesha Chandrika, Mysore" ಪುಟ 63-66
21. ಕೃಷ್ಣಮೂರ್ತಿ ಎಂ.ಎಸ್., 1989, ಕುಂತಿಬೆಟ್ಟದ ಪ್ರಾಕ್ತನಾನ್ವೇಷಣೆ ಒಂದು ಟಿಪ್ಪಣಿ, ಇತಿಹಾಸ ದರ್ಶನ, ಸಂಪುಟ 4, ಪುಟ 1-4
22. ಸುಂದರ ಅ., 2006, ಪೂರ್ವೋಕ್ತ, ಪುಟ, 35-44
23. ಅದೇ, ಪುಟ 35-44
24. ಶಿವತಾರಕ್ ಕೆ. ಬಿ., 2001. ಕರ್ನಾಟಕದ ಪುರಾತತ್ವ ನೆಲಗಳು, ಪುಟ 563-568,
25. ಮಹದೇವ ಸಿ., 1998, "ಇತಿಹಾಸ ದರ್ಶನ" 13, ಪುಟ 25-26,
26. ಶಿವತಾರಕ್ ಕೆ. ಬಿ., ಪೂರ್ವೋಕ್ತ, ಪುಟ 563-568
27. ಅದೇ.... ಪುಟ 563-568

28. Foote – R.B., 1901, Catalouge of prehistoric Protohistoric antiquities Madras, p.76,
29. ಶಿವತಾರಕ್ ಕೆ. ಬಿ., 2001, ಪೂರ್ವೋಕ್ತ, ಪುಟ 563–565.
30. ಅದೇ, ಪುಟ 563–565
31. ಲಕ್ಷ್ಮಣ ತೆಲಗಾವಿ, 2004, ಮೌರ್ಯ ಶಾತವಾಹನ ಯುಗ, ಪುಟ 1–20
32. ಗೋಪಾಲ್ ಬಿ.ಆರ್., (ಸಂ), 1977–79, ಎಪಿಗ್ರಾಫಿಯಾ ಕರ್ನಾಟಕ Vol 6–7, ಪುಟ 77–79
33. ನಾಗರಾಜ್‌ರಾವ್ ಎಚ್.ಎಂ., 2008, ಮಂಡ್ಯ ಜಿಲ್ಲೆಯ ಶಾಸನಗಳ ಸಮೀಕ್ಷೆ ಮಂಡ್ಯ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ, ಡಾ. ಆರ್. ಗೋಪಾಲ್ (ಸಂ,) ಪುಟ 16–37.
34. ಅದೇ, ಪುಟ 16–37
35. ಎಪಿಗ್ರಾಫಿಯ ಕರ್ನಾಟಿಕ, ಸಂ–7, ರ ಪೀಠಿಕೆ, ಪುಟ 33–83
36. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮಂಡ್ಯ ಪುಟ 35.
37. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ, ಪುಟ 149.
38. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮಂಡ್ಯ –14.
39. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮದ್ದೂರು–13.
40. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮದ್ದೂರು–122.
41. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ–127.
42. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮಳವಳ್ಳಿ–135.
43. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ–99.
44. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮಂಡ್ಯ–81.
45. ಷೇಕ್ ಅಲಿ ಬಿ., 1976, The History of the Western Gangas, ಪುಟ 149 - 164.
46. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮದ್ದೂರು –47, 116.
47. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಪೀಠಿಕೆ.
48. Krishna rao M. V., 1936, The Western Gangas of Talkadu – p. 22, 21.
49. Sheik Ali B., 1976, ಪೂವೋಕ್ತ, ಪುಟ 149–164
50. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಪಾಂಡವಪುರ, 51.
51. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಶ್ರೀರಂಗಪಟ್ಟಣ–67.
52. ಶೇಕ್ ಅಲಿ ಬಿ., 1976, – ಪೂವೋಕ್ತ, ಪುಟ, 19–76.
53. ಅದೇ, ಪುಟ 19–76.
54. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಕೃಪೆ–50.
55. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮಂಡ್ಯ – 52.
56. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ–56
57. ಎಪಿಗ್ರಾಫಿಯ ಕರ್ನಾಟಿಕ, ಸಂ–6 ಮತ್ತು 7ರ ಪೀಠಿಕೆ ಮತ್ತು ವಂಶಾನುಕ್ರಮದಲ್ಲಿನ ಶಾಸನಗಳಲ್ಲಿನ ಸೂಚಿ.
58. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮಂಡ್ಯ – 54.
59. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಪಾಂಡವಪುರ – 241
60. ನಾಗರಾಜ್‌ರಾವ್ ಹೆಚ್.ಎಂ., 2008.–ಪೂರ್ವೋಕ್ತ, ಪುಟ 16–37
61. ಅದೇ, ಪುಟ 16–37
62. ಅದೇ, ಪುಟ 16–37
63. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ–07.
64. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಪಾಂಡವಪುರ. 73.

65. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಕೃಪೆ–60.
66. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಶ್ರೀರಂಗಪಟ್ಟಣ 70.
67. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಪೀಠಿಕೆ ಪು–43.
68. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ–183
69. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ–64
70. ನಾಗರಾಜ್‌ರಾವ್ ಹೆಚ್.ಎಂ. ಪೂರ್ವೋಕ್ತ, ಪುಟ–16–37
71. ಅದೇ, 16–37
72. ಅದೇ, 16–37
73. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ–1.
74. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ–80
75. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ, 130–132
76. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮಂಡ್ಯ 29–30.
77. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ–173.
78. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಕೃಪೆ – 39
79. ನಾಗರಾಜ್‌ರಾವ್ ಹೆಚ್.ಎಂ. ಪೂರ್ವೋಕ್ತ, ಪುಟ 16–37
80. ಎಪಿಗ್ರಾಫಿಯ ಕರ್ನಾಟಿಕ, ಸಂ–7, ನಾಗಮಂಗಲ–74
81. ನಾಗರಾಜ್‌ರಾವ್ ಹೆಚ್.ಎಂ. ಪೂರ್ವೋಕ್ತ, ಪುಟ 16–37
82. ಅದೇ, ಪುಟ 16–37
83. ರೈಸ್ ಬಿ.ಎಲ್. 1987, ಮೈಸೂರು ಗೆಜೆಟಿಯರ್. ಪುಟ 271–275
84. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಪೀಠಿಕೆಗಳು
85. ಎಪಿಗ್ರಾಫಿಯ ಕರ್ನಾಟಿಕ, ಸಂ–7, ಮದ್ದೂರು – 93.
86. ವಿವರಗಳಿಗೆ ಎಪಿಗ್ರಾಫಿಯ ಕರ್ನಾಟಿಕ, ಸಂ–6 & 7 ಸಂಪುಟದ ವಂಶಾನುಕ್ರಮದ ಶಾಸನದ ಪಟ್ಟಿಯನ್ನು ಪರಿಶೀಲಿಸುವುದು.
87. ಅದೇ
88. ಅದೇ
89. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಪಾಂಡವಪುರ–19, 163.
90. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಪೀಠಿಕೆ, ಪು–11.
91. ಅದೇ, ಪುಟ–11
92. ಪರಮಶಿವಮೂರ್ತಿ, 2010, ದೇವರಾಯನ ಕಾಲದ ಶಾಸನಗಳು, ಪುಟ 90–96
93. ಎಪಿಗ್ರಾಫಿಯ ಕರ್ನಾಟಿಕ, ಸಂ–6, ಕೃಪೆ– 63.
94. ಎಪಿಗ್ರಾಫಿಯ ಕರ್ನಾಟಿಕ, ಸಂ–6 & 7ರ ವಂಶಾನುಕ್ರಮಣಿಕೆಯ ಪಟ್ಟಿಯನ್ನು ಗಮನಿಸುವುದು.
95. ಎಪಿಗ್ರಾಫಿಯ ಕರ್ನಾಟಿಕ, ಸಂ–6 ಪಾಂಡವಪುರ–99.
96. ದೇವರಾಜಸ್ವಾಮಿ ಜಿ.ಕೆ., 2005, ಮೈಸೂರು ರಾಜ ಒಡೆಯರ ಕಾಲದ ಮೊದಲ ಶಾಸನ, ಇತಿಹಾಸ ದರ್ಶನ ಸಂಪುಟ–20, ಪುಟ 163–169

ಅಧ್ಯಾಯ – ಮೂರು

ಮಂಡ್ಯ ಜಿಲ್ಲೆಯ ಜೈನ ಶಾಸನಗಳು

ಕರ್ನಾಟಕದ ಅತಿಪ್ರಸಿದ್ಧ ಜೈನ ಯಾತ್ರಾಸ್ಥಳ ಗೊಮ್ಮಟನ ಆವಾಸಸ್ಥಾನ ಶ್ರವಣಬೆಳಗೊಳಕ್ಕೆ ಹೊಂದಿಕೊಂಡಂತೆಯೇ ಇರುವ ಮಂಡ್ಯ ಜಿಲ್ಲೆಯಲ್ಲಿ ಸಾಕಷ್ಟು ಜೈನ ಶಾಸನಗಳು ಕಂಡುಬರುತ್ತವೆ. ಈವರೆಗೆ ಈ ಜಿಲ್ಲೆಯಿಂದ ಪ್ರಕಟವಾಗಿರುವ ಜೈನ ಶಾಸನಗಳ ಪರಂಪರೆಯಲ್ಲಿ ಅತಿ ಪ್ರಾಚೀನವಾದ ಶಾಸನ ಕ್ರಿ.ಶ. 776ಕ್ಕೆ ಸೇರಿದುದಾಗಿದೆ.[1] ಅಂದರೆ ಶ್ರವಣಬೆಳಗೊಳದಲ್ಲಿ ಗಂಗ ದಂಡನಾಯಕ ಚಾವುಂಡರಾಯನು ಗೊಮ್ಮಟನನ್ನು ಕೆತ್ತಿಸುವ ಪೂರ್ವದಲ್ಲಿಯೆ ಮಂಡ್ಯ ಜಿಲ್ಲೆಯು ಜೈನಮುನಿಗಳ, ಶ್ರಾವಕ ಶ್ರಾವಕಿಯರ ಆವಾಸಸ್ಥಾನವಾಗಿತ್ತೆಂದು ಜಿಲ್ಲೆಯ ಯಾವುದೇ ಬಸದಿಯ ನಿರ್ಮಾಣಕ್ಕೆ ನೇರ ಮಾಹಿತಿ ನೀಡದ ಈ ಶಾಸನವು ದಾಖಲಿಸುತ್ತದೆ. ಅಂದರೆ ಬೆಳಗೊಳವು ಚಾವುಂಡರಾಯನ ಗಮನ ಸೆಳೆಯುವುದಕ್ಕೆ 200 ವರ್ಷಗಳ ಹಿಂದೆಯೇ ಮಂಡ್ಯ ಜಿಲ್ಲೆಯ ನಾಗಮಂಗಲ ಪ್ರದೇಶ ಜೈನರ ಪ್ರಮುಖ ನೆಲೆಯಾಗಿತ್ತೆಂಬುದು ಖಚಿತವಾಗುತ್ತದೆ. ಶಾಸನಾಧಾರದಲ್ಲಿ ಇದನ್ನೇ ಪ್ರಾಚೀನತಮ ಶಾಸನವೆಂದು ಬಗೆದರೂ, ಮೌಖಿಕ ಇತಿಹಾಸದಲ್ಲಿ ಮತ್ತು ಶಾಸನದಲ್ಲಿ ವ್ಯಕ್ತವಾಗಿರುವ ಪರೋಕ್ಷ ವಿಷಯಗಳು ಈ ಪ್ರದೇಶವು ಶಾಸನಕಾಲಕ್ಕೆ ಬಹಳ ಹಿಂದೆಯೇ ಪ್ರಮುಖ ಜೈನರ ನೆಲೆಯಾಗಿತ್ತೆಂಬುದನ್ನು ನಿರ್ವಿವಾದವಾಗಿ ಒಪ್ಪಿಕೊಳ್ಳಲೇಬೇಕು.

ಮಂಡ್ಯ ಜಿಲ್ಲೆಯು ಏಳು ತಾಲ್ಲೂಕುಗಳಲ್ಲಿ ಹರಡಿರುವ ಜೈನ ಶಾಸನಗಳನ್ನು ಸಮಗ್ರವಾಗಿ ಮತ್ತು ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗಿದ್ದು, ಜಿಲ್ಲೆಯಲ್ಲಿ ದೊರೆತಿರುವ ಅತಿ ಪ್ರಾಚೀನ ಶಾಸನವು ಕ್ರಿ.ಶ. 776 ಕ್ಕೆ ಸಂದುದಾದರೆ ಇತ್ತೀಚಿನ ಶಾಸನವು ಹದಿನೇಳನೆಯ ಶತಮಾನದ್ದಾಗಿರುವುದು ವಿಶೇಷ.[2] ಜಿಲ್ಲೆಯಲ್ಲಿ ದೊರೆತಿರುವ ಏಕೈಕ ಜೈನ ತಾಮ್ರಶಾಸನವು ಜಿಲ್ಲೆಯ ಪ್ರಾಚೀನ ಜೈನ ಶಾಸನವೇ ಆಗಿದೆ. ಜಿಲ್ಲೆಯ ತಾಲ್ಲೂಕುಗಳಲ್ಲಿ ದೊರೆತಿರುವ ಶಾಸನಗಳ ಪಟ್ಟಿಯನ್ನು ಈ ಅಧ್ಯಾಯದ ಅಂತ್ಯದಲ್ಲಿ ನೋಡಬಹುದು. ಮಂಡ್ಯ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಜೈನಧರ್ಮ ನೆಲೆಸಿತ್ತು ಎಂಬುದಕ್ಕೆ ಶಾಸನಗಳು ಮತ್ತು ಉಳಿದಿರುವ ಹಾಗೂ ಜೀರ್ಣವಾಗಿರುವ ಬಸದಿಗಳು ಸಾಕ್ಷಿಯಾಗಿವೆ. ಮಂಡ್ಯ ಜಿಲ್ಲೆಯಲ್ಲಿ ಇಲ್ಲಿಯವರೆಗೆ ದೊರೆತಿರುವ ಸುಮಾರು 1065[3] ಶಾಸನಗಳಲ್ಲಿ 57 ಶಾಸನಗಳು ಜೈನ ಶಾಸನಗಳಾಗಿವೆ.[4] ಈ ಶಾಸನಗಳ ತಾಲ್ಲೂಕುವಾರು ವಿವರ ಹೀಗಿದೆ. ನಾಗಮಂಗಲ 30, ಕೃಷ್ಣರಾಜಪೇಟೆ 09, ಪಾಂಡವಪುರ 04, ಮದ್ದೂರು 6, ಶ್ರೀರಂಗಪಟ್ಟಣ 05, ಮಳವಳ್ಳಿ 2 ಮತ್ತು ಮಂಡ್ಯ 1.

ಜಿಲ್ಲೆಯ ತಾಲ್ಲೂಕುಗಳಲ್ಲಿ ಅತಿಹೆಚ್ಚು ಜೈನಶಾಸನಗಳು ನಾಗಮಂಗಲ ತಾಲ್ಲೂಕಿನಲ್ಲಿ ಕಂಡುಬರುತ್ತವೆ. ನಾಗಮಂಗಲ ತಾಲ್ಲೂಕಿನಲ್ಲಿ 30 ಜೈನ ಶಾಸನಗಳು ಉಪಲಬ್ಧವಿವೆ. ಈ ಶಾಸನಗಳಲ್ಲಿ ಜಿಲ್ಲೆಯ ಪ್ರಾಚೀನ ಜೈನ ಶಾಸನವು ಒಳಗೊಂಡಿರುವುದು ವಿಶೇಷ. ಅಲ್ಲದೆ ಜಿಲ್ಲೆಯ ಇತ್ತೀಚಿನ ಜೈನ ಶಾಸನವು ಇದೇ ತಾಲ್ಲೂಕಿನದಾಗಿದೆ. ಅಂದಮೇಲೆ ನಾಗಮಂಗಲ ತಾಲ್ಲೂಕು ಕ್ರಿ.ಶ. 8ನೆಯ ಶತಮಾನದ ಪ್ರಾರಂಭದಿಂದ ಹದಿನೆಂಟನೆಯ ಶತಮಾನದವರೆಗೆ ಜೈನಧರ್ಮ, ಪರಂಪರೆ ಮತ್ತು ವಾಸ್ತುಶೈಲಿಯನ್ನು ಉಳಿಸಿ ಬೆಳೆಸಿಕೊಂಡು ಬಂದುದನ್ನು ಗಮನಿಸಬಹುದಾಗಿದೆ.[5] ನಾಗಮಂಗಲದ ದೇವರಹಳ್ಳಿ, ಬಿಂಡಿಗನವಿಲೆ, ಕೊಡಿಹಳ್ಳಿ, ಮತ್ತಂದ್ರ, ಎಲೆಕೊಪ್ಪ, ಕಂಬದಹಳ್ಳಿ, ಸುಖದೆರೆ ದಡಗ, ಕಸಲಗೆರೆ, ಬೋಗಾದಿ, ಯಾಲದಹಳ್ಳಿ, ಹಟ್ಟಣ, ಅಳೀಸಂದ್ರ, ಲಾಲನಕೆರೆ, ಕಳಗೆರೆ ಮತ್ತು ಬೆಳ್ಳೂರು ಸ್ಥಳಗಳು ಇಂದಿಗೂ ಜೈನರ ವಾಸದ ಕೇಂದ್ರಗಳಾಗಿರುವುದಲ್ಲದೆ ಅದರ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಪ್ರಮುಖ ಸ್ಥಳಗಳಾಗಿವೆ.[6] ಪ್ರಮುಖವಾಗಿ ಕಂಬದಹಳ್ಳಿಯು ಅತ್ಯಂತ ಸುಪ್ರಸಿದ್ಧ ಕೇಂದ್ರವಾಗಿದ್ದು, ಅತಿ ಹೆಚ್ಚು ಜೈನ ಶಾಸನಗಳು ಲಭ್ಯವಿವೆ. ಅಂದರೆ ಹತ್ತು ಜೈನ ಶಾಸನಗಳು ಇಲ್ಲಿ ಕಂಡುಬರುತ್ತವೆ.[7] ಕ್ರಿ.ಶ. 1118ರ ಶಾಸನವೆ ಇಲ್ಲಿಯ ಅತಿಪ್ರಾಚೀನ ಶಾಸನ ಹದಿನೆಂಟನೆಯ ಶತಮಾನದ ಕಂಬದಹಳ್ಳಿಯ ಇತ್ತೀಚಿನ ಶಾಸನ ನಾಗಮಂಗಲ ತಾಲ್ಲೂಕು ಮತ್ತು ವಿಶೇಷವಾಗಿ ಮಂಡ್ಯ ಜಿಲ್ಲೆ ಹೊಯ್ಸಳರ ಕಾಲಘಟ್ಟದಲ್ಲಿ ಅತಿ ಪ್ರಮುಖ ರಾಜಾಶ್ರಯವನ್ನು ಪಡೆದ ಧರ್ಮವಾಗಿ ಮೆರೆದುದು ಕಂಡುಬರುತ್ತದೆ. ಅಂದರೆ ಗಂಗರ ನಂತರ ಜೈನಧರ್ಮಕ್ಕೆ ಅತಿಹೆಚ್ಚು ಪ್ರೋತ್ಸಾಹಕೊಟ್ಟ ರಾಜಮನೆತನವಾದ ಹೊಯ್ಸಳರು ಜಿಲ್ಲೆಯಲ್ಲಿನ ಜೈನಧರ್ಮದ ಅಭಿವೃದ್ಧಿಗೆ ಕೂಡ ಕಾರಣವಾಗಿರುವುದು ಶಾಸನಾಧ್ಯಯನದಿಂದ ಕಂಡುಬರುವ ಪ್ರಮುಖ ಸಂಗತಿ.[8]

ಹೊಯ್ಸಳರ ಕಾಲಘಟ್ಟದ ಅತಿಪ್ರಾಚೀನ ಶಾಸನವನ್ನು ಶುಭಚಂದ್ರರವರು **"ಜೈನ ಸಾಹಿತ್ಯ ಮತ್ತು ಸಂಸ್ಕೃತಿ ಕೆಲವು ಅಧ್ಯಯನಗಳು"** ಎಂಬ ಕೃತಿಯಲ್ಲಿ ಎಲೆಕೊಪ್ಪದ ಶಾಸನ ಕಾಲವನ್ನು ನಿರ್ಧರಿಸುತ್ತಾ ಹೀಗೆ ಉಲ್ಲೇಖಿಸುತ್ತಾರೆ.[9] ಕೊಪ್ಪ ಗ್ರಾಮದ ಉತ್ತರಕ್ಕೆ ಮಾಸ್ತಿಯಮ್ಮನ ಗುಡಿಯ ಬಾಗಿಲ ಚೌಕಟ್ಟಿನ ಕಲ್ಲಿನಲ್ಲಿರುವ ಕ್ರಿ.ಶ. ಸು. 1068ರ ಶಾಸನವು ಹೊಯ್ಸಳದೇವನು ಬಸದಿಗೆ ಮಣಿಯರಸನ ಕೆರೆಯನ್ನು ದತ್ತಿ ಕೊಟ್ಟಿದುದಾಗಿ ಹೇಳುತ್ತದೆ. ಇದೇ ಕೊಪ್ಪ ಗ್ರಾಮದಲ್ಲಿ ಒಂದು ಬಂಡೆಯ ಮೇಲೆ ಬರೆದ ಶಾಸನದ ವಿವರವನ್ನು ದಾಖಲಿಸುತ್ತಾರೆ. ಆ ಶಾಸನದ ಪಾಠ ಈ ಕೆಳಗಿನಂತಿದೆ.[10]

1. ತಳವಳಗನಾಗಿ ಪುಲಿಗಳ ಗಳಗರ್ಜನೆಗಾದಮಳ್ಕಿ ಗುಹೆಯಿಂದಮಣಂ ತಳರದೆ ನೆಲೆಸಿಪ್ಪ ಮನೋಬಳಮುರ್ಬ್ಬಿ ಗಗುರ್ವ್ವ ಗೊಹೆಯಭಟ್ಟಾರಕರನ್॥
2. ಪಕ್ಷೋಪವಾಸಿಗಳ್ಪಾಪಕ್ಷಯಕರಮೂರ್ತ್ತಿಗಳ್ಗುಹಾವಾಸಿಗಳತ್ಯಕ್ಷುಂಣಚರಿತರಿವರೆನೀ ಕ್ಷಿತಿ ಪೊಗೆಟ್ಟಿಪುದು ಗೊಹೆಯಭಟ್ಟಾರಕರನ್ ॥
3. ಪಡೆದುದು ನೊಟಂಬವಾಡಿಯುಮೊಡನೊಡನೀ ದಡಿಗವಾಡಿಯುಂ ಧರ್ಮ್ಮಮನೋಗೆಡಿಸದ ತಪದಿಂ ಭುವನ ಮನಡಿಗೆಱಗಿಸಿ ನೆಗಟ್ದಿ ಗೊಹೆಯಭಟ್ಟಾರಕರನ್॥
4. ಸ್ವಸ್ತಿ ಶ್ರೀಮದೇಳಾಚಾರ್ಯ್ಯರ ವರಗುಡ್ಡ ಬಿಣ್ಣಯ್ಯ ಬರೆದಂ ಮಂಗಳಮ್ ॥

ಶುಭಚಂದ್ರರು ಉಲ್ಲೇಖಿಸುವ ನಾಗಮಂಗಲ ತಾಲ್ಲೂಕಿನ ಹೊಯ್ಸಳರ ಕಾಲದ್ದೆಂದು ಹೇಳುವ ಈ ಎರಡು ಶಾಸನಗಳಲ್ಲಿ ಕೇವಲ 'ಶ್ರೀಮತ್ಪೋಸಳದೇವರು' ಎಂದು ಹೊಯ್ಸಳ ಅರಸನನ್ನು ಉಲ್ಲೇಖಿಸುತ್ತದೆಯೆ ಹೊರತು ಕಾಲವನ್ನು ಯಾವ ರೀತಿಯಲ್ಲೂ ಉಲ್ಲೇಖಿಸಿಲ್ಲ. ಹಾಗಾಗಿ ಶಾಸನದಲ್ಲಿ ಉಲ್ಲೇಖವಾಗಿರುವ 'ಶ್ರೀ ಮತ್ಪೋಸಳದೇವರು' ಯಾರೆಂದು ಖಚಿತವಾಗುವುದಿಲ್ಲ. ಶುಭಚಂದ್ರರ ಕಾಲವನ್ನು ಒಪ್ಪಿಕೊಂಡಾದಲ್ಲಿ ಹೊಯ್ಸಳ ವಿನಯಾದಿತ್ಯನ ಕಾಲದ ಶಾಸನವಿದಾಗುತ್ತದೆ. ಅಂದರೆ ನೃಪಕಾಮನ ನಂತರದ ಶಾಸನವದು. ಹೊಯ್ಸಳ ವಿನಯಾದಿತ್ಯನು ಚೋಳರಿಂದ ಗಂಗವಾಡಿಯ ಎತ್ತರದ ಪ್ರದೇಶಗಳನ್ನು ಗೆದ್ದುಕೊಂಡುದುದನ್ನು ಇತಿಹಾಸದ ಪುಟಗಳು ಖಚಿತಪಡಿಸುವ ಹಿನ್ನೆಲೆಯಲ್ಲಿ ಈ ಶಾಸನವು ಹೊಯ್ಸಳ ಅರಸ ವಿನಯಾದಿತ್ಯನಾಗಿರಬಹುದೆಂದು ಊಹಿಸಬಹುದೇ ಹೊರತು ಖಚಿತವಾಗಿ ಇದು ಈ ಕಾಲಘಟ್ಟಕ್ಕೆ ಸೇರಿದ್ದೆಂದು ಶುಭಚಂದ್ರರು ಹೇಳಿರುವಂತೆ ದಾಖಲಿಸಲು ಬರುವುದಿಲ್ಲ.

ನಾಗಮಂಗಲ ತಾಲ್ಲೂಕಿಗೆ ಹೊಂದಿಕೊಂಡಂತಿರುವ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ 9 ಜೈನಶಾಸನಗಳು ಲಭ್ಯವಿದ್ದು ಇವು ಹೊಸಹೊಳಲು (5), ಬಸ್ತಿಹೊಸಕೋಟೆ (2), ಶ್ರವಣನಹಳ್ಳಿ (1) ಮತ್ತು ಬಳ್ಳೆಕೆರೆ (1) ಯಿಂದ ವರದಿಯಾಗಿವೆ. ಕೃಷ್ಣರಾಜಪೇಟೆ ತಾಲ್ಲೂಕಿನ ಅತಿಪ್ರಾಚೀನ ಶಾಸನವು ಕ್ರಿ.ಶ. 1118ಕ್ಕೆ ಸಂದುದಾದರೆ,[11] ಇತ್ತೀಚಿನ ಶಾಸನವು ಹೊಸಹೊಳಲಿನದೇ ಆಗಿದೆ. ಇದು 15–16ನೇ ಶತಮಾನದ ಶಾಸನವಾಗಿದೆ.[12]

ಜಿಲ್ಲೆಯಲ್ಲಿ ನಾಗಮಂಗಲ ಮತ್ತು ಕೃಷ್ಣರಾಜಪೇಟೆಯನ್ನು ಹೊರತುಪಡಿಸಿದರೆ ಅತ್ಯಧಿಕ ಜೈನ ಶಾಸನಗಳನ್ನು ಹೊಂದಿರುವ ತಾಲ್ಲೂಕು ಮದ್ದೂರು. ಈ ತಾಲ್ಲೂಕಿನಲ್ಲಿ ಒಟ್ಟು 6 ಜೈನ ಶಾಸನಗಳು ಕಂಡುಬಂದಿವೆ.[13] ತಾಲ್ಲೂಕಿನ ಮತ್ತು ಜಿಲ್ಲೆಯ ಅತಿಪ್ರಸಿದ್ಧ ಜೈನ ಕೇಂದ್ರ ಅರೆತಿಪ್ಪೂರಿನಲ್ಲಿ 2 ಶಾಸನಗಳು, ಆಬಲವಾಡಿಯಲ್ಲಿ 2, ಕೂಲಿಗೆರೆ ಮತ್ತು ಹಾಗಲಹಳ್ಳಿಯಲ್ಲಿ ತಲಾ

ಒಂದು ಶಾಸನಗಳು ಕಂಡುಬಂದಿವೆ. ಕೂಲಿಗೆರೆಯ ಶಾಸನ ತಾಲ್ಲೂಕಿನ ಅತಿ ಪ್ರಾಚೀನ ಜೈನ ಶಾಸನವಾಗಿದ್ದು ಜಿಲ್ಲೆಯ ಪ್ರಾಚೀನ ಜೈನಶಾಸನಗಳಲ್ಲಿ 4ನೆಯ ಸ್ಥಾನವನ್ನು ಹೊಂದಿದ್ದು ಕ್ರಿ.ಶ. 909ನೇ ವರ್ಷದಲ್ಲಿ ಹೊರಡಿಸಿರುವುದಾಗಿದೆ.[14] ಅತಿ ಇತ್ತೀಚಿನ ಜೈನಶಾಸನ ತಿಪ್ಪೂರಿನ ಶಾಸನವಾಗಿದ್ದು 13ನೆಯ ಶತಮಾನಕ್ಕೆ ಸೇರಿದುದಾಗಿದೆ.

ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿ 4 ಹಾಗೂ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 5 ಜೈನ ಶಾಸನಗಳು ದೊರೆತಿವೆ. ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯ ಜೈನಶಾಸನವು ಕ್ರಿ.ಶ. 900ಕ್ಕೆ ಸಂದುದಾಗಿದ್ದು, ಪಾಂಡವಪುರ ತಾಲ್ಲೂಕಿನಲ್ಲಿ ಈವರೆಗೆ ದೊರಕಿರುವ ಜೈನ ಶಾಸನಗಳಲ್ಲಿ ಅತಿ ಪ್ರಾಚೀನದ್ದಾಗಿದ್ದು[15] ತಾಲ್ಲೂಕಿನ ಅತಿ ಇತ್ತೀಚಿನ ಜೈನ ಶಾಸನವು ಬಳೆ ಅತ್ತಿಗುಪ್ಪೆಯದ್ದಾಗಿದ್ದು ಕ್ರಿ.ಶ. 12ನೆಯ ಶತಮಾನದ ಶಾಸನವಾಗಿದೆ.[16] ಕ್ಯಾತನಹಳ್ಳಿಯ ಶಾಸನವು ಜಿಲ್ಲೆಯ ಜೈನ ಶಾಸನಗಳ ಕಾಲಾನುಕ್ರಮಣಿಕೆಯಲ್ಲಿ 2ನೆಯ ಸ್ಥಾನದ್ದಾಗಿದೆ. ಪಾಂಡವಪುರ ತಾಲ್ಲೂಕಿನಲ್ಲಿ ಕ್ಯಾತನಹಳ್ಳಿ, ಬಳೆ ಅತ್ತಿಗುಪ್ಪೆ ಮತ್ತು ಹಿರೇಮರಳಿಯಲ್ಲಿ ಜೈನ ಶಾಸನಗಳು ಲಭ್ಯವಿವೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಅತಿ ಪ್ರಾಚೀನ ಜೈನಶಾಸನವು ಕ್ರಿ.ಶ. 904 ರದ್ದಾಗಿದ್ದು ಗೌತಮಕ್ಷೇತ್ರದ ಉತ್ತರದಂಡೆಯ ರಾಂಪುರದಲ್ಲಿ ದೊರೆತಿದೆ.[17] ಇದಲ್ಲದೆ ಬೆಳಗೊಳದಲ್ಲಿ ಒಂದು,[18] ಬಸ್ತಿಪುರದಲ್ಲಿ ಎರಡು[19] ಮತ್ತು ಶ್ರೀರಂಗಪಟ್ಟಣದಲ್ಲಿ ಒಂದು[20] ಶಾಸನ ಕಂಡುಬಂದಿವೆ. ಮಳವಳ್ಳಿ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಅತಿಕಡಿಮೆ ಸಂಖ್ಯೆಯ ಜೈನಶಾಸನಗಳು ಕಂಡುಬಂದಿವೆ. ಅಂದರೆ ಮಳವಳ್ಳಿ ತಾಲ್ಲೂಕಿನಲ್ಲಿ ಎರಡು[21] ಮತ್ತು ಮಂಡ್ಯ ತಾಲ್ಲೂಕಿನಲ್ಲಿ ಒಂದು ಜೈನಶಾಸನ ಈವರೆಗೆ ಪ್ರಕಟವಾಗಿವೆ.[22] ಮಳವಳ್ಳಿ ತಾಲ್ಲೂಕಿನ ಹೊಸ್ಕೂರಿನಲ್ಲಿ ಎರಡು ಶಾಸನಗಳು ಮತ್ತು ಮಂಡ್ಯದ ಗುತ್ತಲುವಿನಲ್ಲಿ ಒಂದು ಶಾಸನ ಲಭ್ಯವಾಗಿವೆ.

ಜೈನ ಶಾಸನಗಳು ದೊರೆತ ಸ್ಥಳಗಳು ಮತ್ತು ಜೈನರ ಸಾಂಸ್ಕೃತಿಕ ಅವಶೇಷಗಳು ದೊರೆತಿರುವ ಸಾಂದ್ರತೆಯನ್ನು ಆಧಾರವಾಗಿಟ್ಟುಕೊಂಡು ಜಿಲ್ಲೆಯಲ್ಲಿ ಜೈನಧರ್ಮದ ಬೆಳವಣಿಗೆ ಮತ್ತು ಪ್ರಾಮುಖ್ಯತೆಯನ್ನು ಗಮನಿಸುವುದಾದರೆ ನಾಗಮಂಗಲ ತಾಲ್ಲೂಕು ಅತಿಪ್ರಾಚೀನ ಶಾಸನದೊಂದಿಗೆ 30 ಶಾಸನಗಳನ್ನು ಹೊಂದಿದ್ದು ಜೈನರ ಪ್ರಮುಖ ಆವಾಸಸ್ಥಾನವಾಗಿತ್ತೆಂದು ಖಚಿತವಾಗುತ್ತದೆ.[23] ತರುವಾಯದ ಸ್ಥಾನವನ್ನು ಕೃಷ್ಣರಾಜಪೇಟೆ ತನ್ನದಾಗಿಸಿಕೊಂಡಿದೆ.[24] ಮೂರನೆಯ ಸ್ಥಾನದಲ್ಲಿ ಮದ್ದೂರು ತಾಲ್ಲೂಕು ಕಂಡುಬರುತ್ತದೆ. ನಾಗಮಂಗಲದ ಕಂಬದಹಳ್ಳಿ, ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲು, ಬಸ್ತಿಹೊಸಕೋಟೆ ಮತ್ತು ಶ್ರವಣನಹಳ್ಳಿ ಪ್ರಮುಖ ಜೈನಕೇಂದ್ರಗಳಾಗಿದ್ದು ಈ ಶಾಸನ ಹಂಚಿಕೆಗೆ ಪ್ರಮುಖ ಕಾರಣವಾಗಿರುತ್ತದೆ. ಮದ್ದೂರು

ತಾಲ್ಲೂಕಿನಲ್ಲಿ ಗಂಗರ ಕಾಲದ ಪ್ರಸಿದ್ಧ ಜೈನಕೇಂದ್ರ ಅರೆತಿಪ್ಪೂರು ಇದ್ದು ಈ ತಾಲ್ಲೂಕಿನ ಜೈನಶಾಸನ ಸಂಖ್ಯೆಯ ಬಾಹುಳ್ಯಕ್ಕೆ ಪ್ರಮುಖ ಕಾರಣವಾಗುತ್ತವೆ.

ಪಾಂಡವಪುರ ತಾಲ್ಲೂಕಿನಲ್ಲಿ 4 ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 5 ಶಾಸನಗಳು ಮಾತ್ರ ಲಭ್ಯವಿದ್ದು ಅವು ಕೆಲವೇ ಕೆಲವು ಕೇಂದ್ರಗಳಿಗೆ ಸೀಮಿತವಾಗಿವೆ. ನಾಗಮಂಗಲವನ್ನು ಹೊರತುಪಡಿಸಿ ಪಾಂಡವಪುರ, ಮದ್ದೂರು, ಮಳವಳ್ಳಿ, ಕೃಷ್ಣರಾಜಪೇಟೆ, ಶ್ರೀರಂಗಪಟ್ಟಣ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಚೋಳರ ಆಡಳಿತಾವಧಿಯಲ್ಲಿ ಸನಾತನ ಧಾರ್ಮಿಕ ಪರಂಪರೆ ಹೆಚ್ಚು ಪ್ರಬಲಗೊಂಡ ಕಾರಣ ಮತ್ತು ಈ ಪ್ರದೇಶದ ವರ್ತಕ ಮಾರ್ಗಗಳು ಚೋಳರ ಅಧಿಪತ್ಯದಿಂದಾಗಿ ಇತರ ಪ್ರದೇಶಗಳೊಂದಿಗಿನ ಸಂವಹನವನ್ನು ಸೀಮಿತಗೊಳಿಸಿಕೊಂಡಿದ್ದರಿಂದ ಜೈನ ಸಂಸ್ಕೃತಿಯು ಈ ಪ್ರದೇಶಗಳಲ್ಲಿ ಹೆಚ್ಚು ಪ್ರಚಲಿತಕ್ಕೆ ಬರಲಿಲ್ಲವೆಂಬುದಾಗಿ ಕಂಡುಬರುತ್ತವೆ. ಮತ್ತೊಂದು ಕಾರಣ ಉಳಿದ ತಾಲ್ಲೂಕುಗಳಲ್ಲಿನ ಪ್ರಮುಖ ವ್ಯಾಪಾರಿ ಕೇಂದ್ರಗಳಲ್ಲಿ ವೈದಿಕ ಧರ್ಮಿಯರು ಪ್ರಬಲರಾಗಿದುದು ಮತ್ತು ಆ ಪರಂಪರೆಗೆ ಹೆಚ್ಚು ಪ್ರಾಧಾನ್ಯತೆ ಆಡಳಿತ ವರ್ಗದಿಂದ ದೊರೆತಿದ್ದುದು ಇದಕ್ಕೆ ಕಾರಣವೆನ್ನಬಹುದು. ಇನ್ನು ಮುಂದಿನ ಪುಟಗಳಲ್ಲಿ ಜಿಲ್ಲೆಯಲ್ಲಿ ದೊರೆತಿರುವ ಜೈನಶಾಸನಗಳ ಕಾಲಾನುಕ್ರಮಣಿಕೆ ಪಟ್ಟಿಯನ್ನು ನೀಡಿ ಆಯಾ ಶಾಸನಗಳಲ್ಲಿ ಉಲ್ಲೇಖವಾಗಿರುವ ಶಾಸನ ವಿಷಯಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡಲಾಗುವುದು. ಇದಕ್ಕೆ ಮೊದಲು ಜಿಲ್ಲೆಯಲ್ಲಿ ದೊರೆತಿರುವ ಜೈನಶಾಸನಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಅಂಶಗಳನ್ನು ಮತ್ತು ಶಾಸನಗಳ ಉದ್ದೇಶವನ್ನು ಸಹ ಚರ್ಚಿಸಲಾಗುವುದು.

ಈವರೆಗೆ ಜಿಲ್ಲೆಯಲ್ಲಿ ಪ್ರಕಟವಾಗಿರುವ 57 ಜೈನ ಶಾಸನಗಳಲ್ಲಿ ಜೈನಬಸದಿ ನಿರ್ಮಾಣದ 16 ಶಾಸನಗಳು, ಬಸದಿಗಳನ್ನು ಜೀರ್ಣೋದ್ಧಾರ ಮಾಡಿದ ಶಾಸನ, ಬಸದಿಗಳಿಗೆ, ಮುನಿಗಳಿಗೆ, ಛಾತ್ರರಿಗೆ, ವಿದ್ಯಾದಾನಕ್ಕೆ ಭೂದಾನ ಮಾಡಿದುದನ್ನು 33 ಶಾಸನಗಳು, ಕೆರೆಯ ನಿರ್ಮಾಣವನ್ನು 4 ಶಾಸನಗಳು ಉಲ್ಲೇಖಿಸುತ್ತವೆ. ಇದಲ್ಲದೆ 5 ನಿಶಿಧಿ ಶಾಸನಗಳು ಮತ್ತು 5 ಪರೋಕ್ಷ ವಿನಯದ ಶಾಸನಗಳು ಲಭ್ಯವಿವೆ. (ಅನುಬಂಧ – 1 ನೋಡಿ).

ಮಂಡ್ಯ ಜಿಲ್ಲೆಯಲ್ಲಿ ದೊರೆತಿರುವ ಜೈನ ಶಾಸನಗಳನ್ನು ಜಿಲ್ಲೆಯನ್ನಾಳಿದ ರಾಜಮನೆತನಗಳ ಕಾಲಘಟ್ಟದ ಹಿನ್ನೆಲೆಯಲ್ಲಿ ವಿಭಾಗಿಸಿದರೆ ಗಂಗರ ಕಾಲಾವಧಿಯ ಕೇವಲ 5 ಶಾಸನಗಳು ದೊರೆಯುತ್ತವೆ. ಇವು ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳ ಕಾಲಾನುಕ್ರಮಣಿಕೆಯಾದಿಯ ಮೊದಲ 5 ಸ್ಥಾನಗಳನ್ನು ಹೊಂದಿದ್ದು, ಅವು ಕ್ರಮವಾಗಿ ನಾಗಮಂಗಲ ತಾಲ್ಲೂಕಿನ ದೇವರಹಳ್ಳಿ,[25]

ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿ,[26] ಶ್ರೀರಂಗಪಟ್ಟಣ ತಾಲ್ಲೂಕಿನ ರಾಂಪುರ,[27] ಮದ್ದೂರು ತಾಲ್ಲೂಕಿನ ಕೂಲಿಗೆರೆ[28] ಮತ್ತು ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆಗಳಲ್ಲಿ ಕಂಡುಬಂದವುಗಳಾಗಿವೆ.[29] ಉಳಿದ 40 ಶಾಸನಗಳು ಹೊಯ್ಸಳರ ಕಾಲಘಟ್ಟದಲ್ಲಿ ಹೊರಡಿಸಿದ ಶಾಸನಗಳಾಗಿವೆ. ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿಗಳ ಹೆಸರನ್ನು ಉಲ್ಲೇಖಿಸುವ ಅಥವಾ ಅವರು ಜಿಲ್ಲೆಯ ಜೈನ ಸಮುದಾಯಕ್ಕೆ ನೀಡಿದ ಕೊಡುಗೆಯನ್ನು ದಾಖಲಿಸುವ ಯಾವ ಶಾಸನಗಳು ಕಂಡುಬಂದಿಲ್ಲ. ವಿಜಯನಗರ ಸಾಮ್ರಾಜ್ಯ ನಂತರದ ಕಾಲದಲ್ಲಿ 7 ಶಾಸನಗಳು ಕಂಡುಬಂದರೂ ಅವು ರಾಜಕೀಯ ಮಾಹಿತಿಗಳಿಗಿಂತ ದಾನಿಯ ಮತ್ತು ಪ್ರತಿಗ್ರಹಿಯ ವಿವರಗಳನ್ನು, ದಾನದ ವಿಷಯವನ್ನು ಪ್ರಸ್ತಾಪಿಸುತ್ತವೆಯೆ ಹೊರತು ಮತ್ತಾವ ವಿವರಗಳು ಕಂಡುಬರುವುದಿಲ್ಲ. ಇವುಗಳು ಮತ್ತು ಇತರ ಶಾಸನಗಳು ಶ್ರಾವಕರು ನೀಡಿದ ದಾನಗಳಾಗಿವೆ. (ಅನುಬಂಧ–1 ನೋಡಿ). ಈ ವಿಶ್ಲೇಷಣೆಯಿಂದ ಖಚಿತವಾಗುವುದೇನೆಂದರೆ ಜಿಲ್ಲೆಯಲ್ಲಿ ಗಂಗರ ಕಾಲದಲ್ಲಿ ಪ್ರಾರಂಭವಾದ ಜೈನರ ಚಟುವಟಿಕೆಗಳು ಚೋಳರ ಆಕ್ರಮಣದ ಕಾಲಘಟ್ಟದಲ್ಲಿ ಹಿಂದೆಸರಿದು ಹೊಯ್ಸಳ ವಿಷ್ಣುವರ್ಧನನು ಗಂಗವಾಡಿಯನ್ನು ಆಕ್ರಮಿಸಿದ ನಂತರ ಹೊಯ್ಸಳರ ಚಟುವಟಿಕೆಗಳು ಅಧಿಕವಾದವು. ಹೊಯ್ಸಳರ ಕಾಲಘಟ್ಟದ ಅತಿಪ್ರಾಚೀನ ಶಾಸನ ಎಲೆಕೊಪ್ಪದಾಗಿದ್ದು ಇದು ಎರೆಯಂಗನ ಆಡಳಿತಾವಧಿಯ ಶಾಸನವಾಗಿದೆ. ಚೋಳರ ಕಾಲಘಟ್ಟದ ಒಂದೇ ಒಂದು ಶಾಸನ ಈವರೆಗೆ ಲಭ್ಯವಾಗಿದ್ದು ಮತ್ತೆ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಅರಸರುಗಳು ಜಿಲ್ಲೆಯ ಜೈನಧರ್ಮಕ್ಕೆ ಕಾಣಿಕೆ ನೀಡಿದುದನ್ನು ದಾನ ಶಾಸನಗಳು ತಿಳಿಸುವುದಿಲ್ಲ. ಅಂದಮೇಲೆ ಜಿಲ್ಲೆಯ ಶಾಸನಗಳ ಸಮಷ್ಠಿ ಅಧ್ಯಯನವು ಗಂಗ ಮತ್ತು ಹೊಯ್ಸಳರ ಕಾಲಕ್ಕೆ ತಂತಾನೆ ಸೀಮಿತಗೊಳ್ಳುತ್ತವೆ.

3.1. ಶಾಸನಗಳ ಸಮೀಕ್ಷೆ

ಮಂಡ್ಯ ಜಿಲ್ಲೆಯ ಅತಿ ಪ್ರಾಚೀನ ಜೈನ ಶಾಸನವು ನಾಗಮಂಗಲ ತಾಲ್ಲೂಕಿನ ದೇವರಹಳ್ಳಿಯಲ್ಲಿ ದೊರೆತಿದುದಾಗಿದ್ದು, ಇದು 7 ಹಲಗೆಗಳ ಸಮುಚ್ಚಯವಾಗಿದೆ.[30] ಮೊದಲನೆಯ ಹಲಗೆಯ ಮುಂಭಾಗ, ಆರನೇ ಹಲಗೆಯ ಹಿಂಭಾಗ ಮತ್ತು ಏಳನೇ ಹಲಗೆ ಸಂಪೂರ್ಣವಾಗಿ ಯಾವ ಬರವಣಿಗೆಯನ್ನು ಹೊಂದಿಲ್ಲ. ಶಾಸನವು ಗಂಗರ ವಂಶಾವಳಿಯನ್ನು ಶ್ರೀಪುರುಷನವರೆಗೆ ನೀಡುತ್ತದೆ. ಶ್ರೀಪುರುಷನವರೆಗಿನ ಗಂಗವಂಶದ ವಂಶಾವಳಿಯು ಒಂದನೇ ಹಲಗೆಯ ಹಿಂಭಾಗದಿಂದ ಮೂರನೇ ಹಲಗೆ ಹಿಂಭಾಗದವರೆಗೆ ಆಕ್ರಮಿಸಿದೆ. ತದನಂತರ ನಾಲ್ಕು, ಐದು ಮತ್ತು ಆರನೇ ಹಲಗೆಯ ಮುಂಭಾಗದಲ್ಲಿ ದಾನಪಡೆದ ವ್ಯಕ್ತಿಯ ಮತ್ತು ದಾನ ನೀಡಿದ ವ್ಯಕ್ತಿಯ

ವಿವರಗಳು ಲಿಖಿತವಾಗಿದ್ದು ಶಾಸನವೇ ಹೇಳುವಂತೆ ಇದು ಬ್ರಹ್ಮದೇಯ ಶಾಸನವಾಗಿದೆ. ಗಂಗ ಶಾಸನದಲ್ಲಿ ಬರುವ ಶ್ರೀಪುರುಷನನ್ನು ಪೃಥ್ವಿ ಕೊಂಗುಣಿ ಮಹಾರಾಜನೆಂದು ಶಾಸನವು ಉಲ್ಲೇಖಿಸುತ್ತದೆ. ದಾನನೀಡುವ ಕಾಲಘಟ್ಟದಲ್ಲಿ ಮಹಾರಾಜ ಶ್ರೀಪುರುಷನು ಮಾನವ್ಯಪುರದಲ್ಲಿ ವಾಸ್ತವ್ಯ ಮಾಡಿದ್ದನು. ಶ್ರೀಪುರುಷನ ವಂಶಾವಳಿಯ ತರುವಾಯ ದುಂಡು ನಿರ್ಗುಂದ ಯುವರಾಜನ ಮಗ ಪರಮಗೊಳ ಪೃಥ್ವಿ ನಿರ್ಗುಂದ ರಾಜನ ಉಲ್ಲೇಖವಿದೆ. ಪೃಥ್ವಿ ನಿರ್ಗುಂದರಾಜನ ಮಡದಿ, ಸಗರವಂಶದ ಕುಂದಾಚ್ಚಿಯು ಈ ಶಾಸನದ ಕೇಂದ್ರಬಿಂದು. ಕುಂದಾಚ್ಚಿಯ ತಂದೆ ಸಗರ ಕುಲದ ಮರುವರ್ಮ. ಈತನ ಕಾಲ ಸುಮಾರು ಕ್ರಿ.ಶ. 750. ಈ ಶಾಸನವು ಕುಂದಾಚ್ಚಿಯು ಶ್ರೀಪುರದಲ್ಲಿ 'ಲೋಕತಿಲಕ ಜಿನಾಲಯವನ್ನು ಕಟ್ಟಿಸಿದ್ದಾಗ ಈಕೆಯ ಪತಿಯಾದ ಪರಮಗೊಳ ನಿರ್ಗುಂದ ರಾಜನ ಬಿನ್ನಹದಂತೆ ಗಂಗರ ಪ್ರಭು ಶ್ರೀಪುರುಷನೂ (726–777) ಲೋಕತಿಲಕ ಜಿನಗೃಹಕ್ಕೆ ಪೊನ್ನಳಿಗ್ರಾಮವನ್ನು ತೆರಿಗೆ ರಹಿತವಾಗಿ ಬಿಟ್ಟುಕೊಟ್ಟನು ಎಂಬ ವಿವರವನ್ನು ಉಲ್ಲೇಖಿಸುತ್ತದೆ. ದೇವರಹಳ್ಳಿಯ ಈ ಶಾಸನ ಗಂಗಕುಲದರಸರ ಇತಿಹಾಸಕ್ಕೂ ಸಗರಕುಲದ ಚರಿತ್ರೆಗೂ ಕಾಯಕಲ್ಪವೆಸಗಿದಂತಿದೆ. ಸಗರನಾಡಿನ ರಾಜರು ಗಂಗರ ಅಧೀನ ಅರಸರಾಗಿದ್ದರೆಂಬ ವಿವರ ದೊರೆಯುತ್ತದೆ. ಈ ಶಾಸನದ ಕಾಲವನ್ನು ಶಕ 698ರಲ್ಲಿ ಹೊರಡಿಸಿದ್ದು ಕ್ರಿ.ಶ. 776–77ಕ್ಕೆ ಸಲ್ಲುತ್ತದೆ. ಬಾಣ ಮನೆತನದ ಧಾರ್ಮಿಕ ಗುರುವಾಗಿದ್ದ ವಿಮಲಚಂದ್ರರು ನಂದಿ ಸಂಘದ ಎರೆಗಿತ್ತೂರಗಣದ, ಪುಲಿಕಲ್‌ಗಚ್ಛ ಶಾಖೆಗೆ ಸೇರಿದ್ದವರಾಗಿದ್ದರೆಂದು ಅಲ್ಲದೆ ಅವರ ಗುರುಪರಂಪರೆಯನ್ನು ಈ ಶಾಸನವು ದಾಖಲಿಸುತ್ತದೆ. ಆ ಗುರುಪರಂಪರೆಯನ್ನು ಈ ಕೆಳಗಿನಂತೆ ದಾಖಲಿಸಬಹುದು.

ಚಂದ್ರನಂದಿ ದೇವರು

ಕುಮಾರನಂದಿ ದೇವರು

ಕೀರ್ತಿನಂದಿ ದೇವರು

ವಿಮಲಚಂದ್ರ ಆಚಾರ್ಯ

ಮಂಡ್ಯ ಜಿಲ್ಲೆಯ 2ನೇ ಅತಿ ಪ್ರಾಚೀನ ಜೈನಶಾಸನವು 9 ಮತ್ತು 10ನೇ ಶತಮಾನಕ್ಕೆ ಸೇರಿದುದಾಗಿದೆ ಎಂದು ಕ್ಯಾತನಹಳ್ಳಿಯಿಂದ ವರದಿಯಾಗಿದೆ.[31] ಇದರಲ್ಲಿ ಶ್ರವಣಬೆಳಗೊಳ ಕ್ಷೇತ್ರದ ಎರಡು ಹೆಸರುಗಳನ್ನು ಅಂದರೆ ಶಾಸನವು ಶ್ರೀ ಕಳ್ವಪ್ಪುತೀರ್ಥ ಸನಾತನ ಬೆಳ್ಗೊಳ ಎಂದು ಸ್ಥಳವನ್ನು ಉಲ್ಲೇಖಿಸುತ್ತದೆ. ಶಾಸನದ ಕಾಲಘಟ್ಟಕ್ಕಾಗಲೇ ಬೆಳ್ಗೊಳವೆಂಬ ಹೆಸರು ಪ್ರಚಲಿತದಲ್ಲಿತ್ತೆಂದು ಅರಿಯಬಹುದು. ಅಲ್ಲದೆ ಭದ್ರಬಾಹು ಮತ್ತು ಚಂದ್ರಗುಪ್ತ ಮುನಿಪತಿಯು ಈ

ಕ್ಷೇತ್ರವನ್ನು ಅಂದರೆ ಶ್ರವಣಬೆಳಗೊಳವನ್ನು ಜೈನ ಕ್ಷೇತ್ರವನ್ನಾಗಿ ಪರಿವರ್ತಿಸಿದರೆಂದು ಹೇಳುತ್ತದೆ. ಈ ಶಾಸನವು ಕ್ರಿ.ಶ. 900ಕ್ಕೆ ಸಲ್ಲುತ್ತದೆ ಎಂದು ಶುಭಚಂದ್ರರು ಉಲ್ಲೇಖಿಸುತ್ತಾರಾದರೂ,[32] ಎಪಿಗ್ರಫಿಯಾ ಕರ್ನಾಟಿಕ ಸಂಪುಟದ ಸಂಪಾದಕರು ಇದು 9-10ನೆಯ ಶತಮಾನದೆಂದು ದಾಖಲಿಸುತ್ತಾರೆ. ಶಾಸನದಲ್ಲಿ ದಾನನೀಡಿದ ಕಾಲವನ್ನು ಯಾವ ರೀತಿಯಲ್ಲೂ ಉಲ್ಲೇಖಿಸದಿರುವುದರಿಂದ ಲಿಪಿಶಾಸ್ತ್ರದ ಆಧಾರದ ಮೇಲೆ ಎಪಿಗ್ರಾಫಿಯಾ ಕರ್ನಾಟಿಕಾದಲ್ಲಿ ಉಕ್ತವಾಗಿರುವ ಶಾಸನದ ಇತ್ತೀಚಿನ ಕಾಲವನ್ನು ಶಾಸನದ ಕಾಲವೆಂದೇ ಒಪ್ಪಿಕೊಳ್ಳಬೇಕಾಗುತ್ತದೆ. ಶಾಸನವು ಕೆಲ್ಲವಂಶದ ಚಾಗಿಪೆರ್ಮನಾಡಿಯ ಕ್ಯಾತನಹಳ್ಳಿಯಲ್ಲಿ ಕಟ್ಟಿಸಿದ ಕೆಲ್ಲಬಸದಿಗೆ ಎರೆಯಣ್ಣ ಕೊಟ್ಟ ದತ್ತಿಯನ್ನು ಮೂಲಸಂಘ ದೇಶಿಯ ಗಣ ಪುಸ್ತಕಗಚ್ಛ ಕುಂದಕುಂದಾನ್ವಯದ ಶ್ರೀ ಕುಮಾರಸೇನ ಭಟಾರರು ಪಡೆದ ವಿಚಾರವನ್ನು ಉಲ್ಲೇಖಿಸುತ್ತದೆ.

ಶ್ರೀರಂಗಪಟ್ಟಣ ತಾಲ್ಲೂಕಿನ ರಾಂಪುರಕ್ಕೆ ಸೇರಿದ ಕ್ರಿ.ಶ. 904-905ಕ್ಕೆ ಸರಿಹೊಂದಬಹುದಾದ ಶಾಸನವು ಸತ್ಯವಾಕ್ಯ ಪೆರ್ಮಾಡಿಯ ಸಿಂಹಾಸನಾರೋಹಣದ 34ನೇ ವರ್ಷದ ಮಾರ್ಗಶಿರ ಮಾಸದ ಪೌರ್ಣಮಿಯಂದು ದಾನ ನೀಡಿದುದಾಗಿ ದಾಖಲಿಸುತ್ತದೆ.[33] ಈ ವಿವರಗಳನ್ನಾಧರಿಸಿ ಶಾಸನದ ಕಾಲವನ್ನು ಕ್ರಿ.ಶ. 904-05 ವರ್ಷದೆಂದು ಗುರುತಿಸಬಹುದು. ಈ ಶಾಸನವು ಹಿಂದಿನ ಶಾಸನದಂತೆ ಶ್ರವಣಬೆಳಗೊಳದ ಎರಡು ಹೆಸರುಗಳನ್ನು ದಾಖಲಿಸುತ್ತದಲ್ಲದೆ, ಭದ್ರಬಾಹು ಮತ್ತು ಚಂದ್ರಗುಪ್ತರಿಂದ ಈ ಕ್ಷೇತ್ರ ಪ್ರಸಿದ್ಧವಾಯಿತೆಂದು, ಕಳ್ಪಪ್ಪುಗಿರಿ ಸನಾತನ ಬೆಳ್ಗೊಳಾಧಿಪತಿಗಳಾಗಿದ್ದ ಶ್ರೀ ವರಮತಿಸಾಗರ ಪಂಡಿತ ಭಟ್ಟಾರಕರ ಆಜ್ಞೆಯ ಮೇರೆಗೆ ಅಣ್ಣಯ್ಯ, ದೇವಕುಮಾರ ಮತ್ತು ದೊರ ಎಂಬುವರು ನದಿಗೆ ಅಡ್ಡಲಾಗಿ ಕಟ್ಟೆಯನ್ನು ಕಟ್ಟಿಸಿ ಮೊದಲವರ್ಷ 1 ಆರಣಿ, ಎರಡನೆ ವರ್ಷ ಪೆಟ್ರೊಂದಿ, ಮೂರನೇ ವರ್ಷ ಎಳವರಿ, ಮೂರನೇ ವರ್ಷಾನಂತರ ಮೂರು ಅಳವೇರಿ ತೆರಿಗೆಗಳನ್ನು ಪಾವತಿಸಬೇಕೆಂದು ಒಪ್ಪಿಕೊಂಡ ವಿಚಾರವನ್ನು ತಿಳಿಸುತ್ತದೆ.

ಜಿಲ್ಲೆಯ ನಾಲ್ಕನೆಯ ಅತಿಪ್ರಾಚೀನ ಜೈನಶಾಸನವು ಕ್ರಿ.ಶ. 909-10ನೇ ವರ್ಷದಲ್ಲಿ ಗಂಗವಂಶದ ನೀತಿಮಾರ್ಗ ಪೆರ್ಮನಡಿಯಾದ ಭೂತುಗನ ಮಗ ಎರೆಯಂಗನ ಕಾಲದ್ದಾಗಿದೆ.[34] ಈ ಶಾಸನವು ಕನಕಗಿರಿಯೆಂದು ಹೆಸರಾದ, ಇಂದು ಅರೆತಿಪ್ಪೂರು ಎಂದು ಕರೆಯುವ ಜಿಲ್ಲೆಯ ಅತಿಪ್ರಾಚೀನ ಜೈನ ನೆಲೆಯಲ್ಲಿ ಗಂಗರ ಸಾಮಂತನಾದ ಮಣಲೆಯರನು ಕಟ್ಟಿಸಿದ ಬಸದಿಗೆ ರಾಜನು ಕೊಟ್ಟ ಸಾಮಂತದೆಶೆಯನ್ನು ಅಟ್ಟದೆಶೆಯನ್ನು ಮತ್ತು ಕುರಿದೆಶೆಯನ್ನು ಮಣಲೆರನು ತನ್ನ ಗುರುವಾದ ಕನಕಸೇನಾಭಟ್ಟಾರಕರಿಗೆ ದಾನವಾಗಿ ಬಿಟ್ಟುಕೊಟ್ಟಿದುದನ್ನು ದಾಖಲಿಸುತ್ತದೆ.

ಜಿಲ್ಲೆಯ ಐದನೆಯ ಪ್ರಾಚೀನ ಜೈನಶಾಸನವು ನಿಶಿಧಿಶಾಸನವಾಗಿದ್ದು ನಾಗಮಂಗಲ ತಾಲ್ಲೂಕು ಬಿಂಡಿಗನವಿಲೆಯದ್ದಾಗಿದೆ.[35] ಈ ಶಾಸನವು ಶಕವರ್ಷ 897 ಯುವ ಸಂವತ್ಸರ ಆಷಾಢಶುದ್ಧ ದಶಮಿ ಸೋಮವಾರದಂದು ಜೈನಕಂತಿಯಾದ ಅಮೃತಬ್ಬೆಯು ಸಲ್ಲೇಖನ ವ್ರತವನ್ನಾಚರಿಸಿ ಸಮಾಧಿಮರಣವನ್ನೊಂದಿದಾಗ ಆಕೆಯ ಕರಕಮಲ ಸಂಜಾತ ಪದ್ಮನಂದಿ ಭಟ್ಟಾರರು ನಿಶಿಧಿ ಹಾಕಿಸಿದಂತೆ ದಾಖಲಿಸುತ್ತದೆ.

ಮಂಡ್ಯ ಜಿಲ್ಲೆಯ ಜೈನಶಾಸನಗಳ ಕಾಲಾನುಕ್ರಮಣಿಕೆಯಲ್ಲಿ ಕಂಡುಬರುವ ಮುಂದಿನ ಶಾಸನವು ನಾಗಮಂಗಲ ತಾಲ್ಲೂಕಿನ ಕೊಡಿಹಳ್ಳಿಗ್ರಾಮದ ಮಾಯಮ್ಮನ ಗುಡಿಯ ಎತ್ತರದಲ್ಲಿರುವ ತ್ರುಟಿತ ಶಾಸನವು ಸನ್ಯಾಸನವನ್ನು ಪಡೆದುಕೊಂಡು ಗತಿಸಿದ ವ್ಯಕ್ತಿಯೋರ್ವನಿಗೆ ಆತನ ಮಗಳು ಬೀಡಕ್ಕೆ ಎಂಬುವಳು ನಿಲ್ಲಿಸಿದ ನಿಷಿಧಿಯಾಗಿದೆ.[36] ಎಪಿಗ್ರಫಿಯ ಕರ್ನಾಟಿಕದ ಸಂಪಾದಕರು ಈ ನಿಶಿಧಿಶಾಸನವು ಹತ್ತನೆಯ ಶತಮಾನದ್ದೆಂದು ದಾಖಲಿಸುತ್ತಾರೆ.

ಹನ್ನೊಂದನೇ ಶತಮಾನದ ಕಾಲಘಟ್ಟಕ್ಕೆ ಸೇರಿದ ನಾಗಮಂಗಲ ತಾಲ್ಲೂಕಿನ ಮತ್ತಂದ್ರ ಗ್ರಾಮದಿಂದ ವರದಿಯಾಗಿರುವ ಶಾಸನವು ಕಲುಕೆರೆಯ ನಾಡಾಳ್ವರು ಚೊಕ್ಕಜಿನಾಲಯಕ್ಕೆ (ಬಸದಿ) ಮತ್ತಿಕೆರೆ ಗ್ರಾಮವನ್ನು ದಾನನೀಡಿ ಚತುಃಸೀಮೆಯ ನಿರ್ಧಾರಕ್ಕೆ ನೆಟ್ಟ ಕಲ್ಲು ಇದಾಗಿದೆ ಎಂದು ದಾಖಲಿಸುತ್ತದೆ.[37]

ಪಾಂಡವಪುರ ತಾಲ್ಲೂಕು ಸುಂಕಾತೊಂಡನೂರು ಗ್ರಾಮದ ಸೋಮೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಹತ್ತು-ಹನ್ನೊಂದನೇ ಶತಮಾನಕ್ಕೆ ಸೇರಬಹುದಾದ ವೀರಗಲ್ಲು ಗಂಟಾ ಎಂಬ ವೀರನು ಮಡಿದಾಗ ಆತನ ತಮ್ಮ ಪರೋಕ್ಷವಿನಯ ನಿಶಿಧಿಗಾಗಿ ನಿಲ್ಲಿಸಿದ ಶಾಸನವಾಗಿದ್ದು ರೇವಣ್ಣ, ಗಂಗಾಚಾರಿ, ಚೌಡೋಜ ಮುಂತಾದವರನ್ನು ಹೆಸರಿಸುತ್ತದೆ.[38] ಶಾಸನದ ಇತರ ವಿವರಗಳು ತಿಳಿದುಬಾರದಷ್ಟು ನಶಿಸಿಹೋಗಿವೆ.

ನಾಗಮಂಗಲ ತಾಲ್ಲೂಕಿನ ಎಲೆಕೊಪ್ಪ ಗ್ರಾಮದ ಮಾಸ್ತಿಯಮ್ಮನ ಗುಡಿಯ ಬಾಗಿಲುವಾಡದಲ್ಲಿರುವ ಹನ್ನೊಂದನೇ ಶತಮಾನದ ಶಾಸನವು ಶಾಸನವೊಂದರ ಭಾಗವಾಗಿದೆ. ಇದು ಹೊಯ್ಸಳದೇವರು ಮಣಿಯರಸನಕೆರೆಯ ಬಸದಿಗಾಗಿ ಬಿಟ್ಟ ದಾನವನ್ನು ಉಲ್ಲೇಖಿಸಲು ಹೊರಡಿಸಿದ ಕೀಲಕ ಸಂವತ್ಸರದ ಶಾಸನದ ಮೊದಲ ಸಾಲಾಗಿದೆ. ಇವುಗಳನ್ನು ಹೊರತುಪಡಿಸಿ ಶಾಸನವು ಮತ್ತಾವ ವಿವರಗಳನ್ನು ನೀಡುವುದಿಲ್ಲ.[39] ಶುಭಚಂದ್ರರವರು[40] ತಮ್ಮ ಗ್ರಂಥವೊಂದರಲ್ಲಿ ಈ ಶಾಸನದ ಕಾಲವನ್ನು ಕ್ರಿ.ಶ. 1068 ಎಂದು ದಾಖಲಿಸಿರುತ್ತರಾದರೂ ಅದಕ್ಕೆ ಯಾವ

ಆಕರಗಳನ್ನು ಕೊಡುವುದಿಲ್ಲ. ಹೆಚ್ಚಾಗಿ ಶಾಸನದಲ್ಲಿ ಕೀಲಕನಾಮ ಸಂವತ್ಸರದ ಹೆಸರಿದೆಯೇ ಹೊರತು ಮತ್ತಾವ ತೇದಿ ನಿಷ್ಕರ್ಷಿಸುವ ವಿವರಗಳು ಶಾಸನದಲ್ಲಿ ದೊರೆಯುವುದಿಲ್ಲ. ಕೇವಲ ಹೊಯ್ಸಳ ದೇವ ಎಂಬ ಹೆಸರನ್ನಾಧರಿಸಿ ಇವರು ತೇದಿಯನ್ನು ನಿಷ್ಕರ್ಶಿಸಿರುವಂತೆ ತಿಳಿದುಬರುತ್ತದೆ.

ಇದೇ ಗ್ರಾಮದ ಪಶ್ಚಿಮದಿಕ್ಕಿನ ಬಂಡೆಯ ಮೇಲೆ ಕೆತ್ತಿರುವ ಶಾಸನವು ತೇದಿಯನ್ನು ಹೊಂದಿರದಿರುವುದು ಗಮನಾರ್ಹವಾದುದು.[41] ಶ್ರೀಮದ್ ಏಲಾಚಾರ್ಯರ ಶಿಷ್ಯ ಬಿಂಡಯ್ಯನು ಗುಹೆಯ ಭಟ್ಟಾರಕರಾದ ಏಲಾಚಾರ್ಯರ ನಿಶ್ಚಲ ತಪಸ್ಸಿನ ಸುಂದರವರ್ಣನೆಯನ್ನು ಮೂರು ಕಂದ ಪದ್ಯಗಳಲ್ಲಿ ದಾಖಲಿಸಿರುವುದು ಇದರ ವಿಶೇಷ. ದಡಿಗವಾಡಿ ಮತ್ತು ನೊಳಂಬವಾಡಿ ಪ್ರದೇಶಗಳಲ್ಲಿ ಗುಹೆಯ ಭಟ್ಟಾರಕರಾದ ಏಲಾಚಾರ್ಯರು ಪ್ರಸಿದ್ಧರಾಗಿದ್ದುದಾಗಿ ತಿಳಿದುಬರುತ್ತದೆ. ಶಾಸನದಲ್ಲಿ ಕಂಡುಬಂದಿರುವ ಕಂದಪದ್ಯಗಳ ಸಾರಾಂಶವನ್ನು ಹೀಗೆ ಸಂಕಲಿಸಬಹುದು.

"ಹುಲಿಗಳ ಘರ್ಜನೆಗೆ ಹೆದರದೆ, ಗುಹೆಯಿಂದ ಅಣಂತಳರದೆ ನೆಲೆಸಿದ್ದ ದೃಢಮನೋಬಲದ ಗುಹೆಯ ಭಟ್ಟಾರಕರನ್ನು ಪಕ್ಷೋಪವಾಸಿಗಳು, ಪಾಪಕ್ಷಯಕರ ಮೂರ್ತಿಗಳು ಗುಹಾಮೂರ್ತಿಗಳು, ತ್ರಿಕಾಲ ಜ್ಞಾನಿಗಳು, ಉತ್ತಮ ಚರಿತರು ಎಂದು ಈ ಕ್ಷಿತಗಳು ಹೊಗಳುವುದಲ್ಲದೆ ನೊಳಂಬವಾಡಿಯೊಂದಿಗೆ ದಡಿಗವಾಡಿಯು ಇವರ ತಪದಿಂದ ಧರ್ಮವನ್ನು ಪಡೆಯಿತೆಂದು" ಹೇಳುತ್ತದೆ. ಇಲ್ಲಿ ಎರಡು ಹೆಸರುಗಳು ಉಲ್ಲೇಖಿತವಾಗುತ್ತದೆ. ಒಂದು ಏಲಾಚಾರ್ಯರದು ಮತ್ತೊಂದು ಗುಹೆಯ ಭಟ್ಟಾರಕರದು. ಗುಹೆಯ ಭಟ್ಟಾರಕರು ಯಾರು ಎಂಬ ವಿಷಯ ಶಾಸನದಿಂದ ಖಚಿತವಾಗುವುದಿಲ್ಲ. ಏಲಾಚಾರ್ಯರ ವರಗುಡ್ಡನಾದ ಬಿಂಡಯ್ಯನು ಈ ಕಂದ ಪದ್ಯಗಳನ್ನು ಬರೆದಿರುವುದನ್ನು ಆಧರಿಸಿ ಗುಹೆಯ ಭಟ್ಟಾರಕರನ್ನು ಏಲಾಚಾರ್ಯರೊಂದಿಗೆ ಸಮೀಕರಿಸಲಾಗಿದೆ.[42]

ಇದೇ ಎಲೆಕೊಪ್ಪ ಗ್ರಾಮದ ಮಧ್ಯಭಾಗದಲ್ಲಿ ಜೈನವೀರಗಲ್ಲೊಂದು ಪತ್ತೆಯಾಗಿದೆ. ಶಾಸನದ ಶಿರೋಭಾಗದಲ್ಲಿ ತೀರ್ಥಂಕರರ ವಿಗ್ರಹವಿದ್ದು, ಕೆಳಭಾಗದಲ್ಲಿ ವ್ಯಕ್ತಿಯೋರ್ವ ಕದನದಲ್ಲಿ ಕಾದಾಡಿ ಮರಣ ಹೊಂದಿದ ದೃಶ್ಯವಿದೆ. ಅಸ್ಪಷ್ಟವಾದ ಬರಹದಿಂದ ಕೂಡಿರುವ ಈ ವೀರಗಲ್ಲಿನಲ್ಲಿ ಮೂರು ಹಂತವಿದೆ. ಮೊದಲ ಹಂತದಲ್ಲಿ ವೀರ ಬಾಕು ಹಿಡಿದು ರೋಷಾವೇಶದಿಂದ ಹೋರಾಡುತ್ತಿದ್ದಾನೆ. ಹಾಗೆ ಯುದ್ಧದಲ್ಲಿ ಮಡಿಯುತ್ತಾನೆ. ಹೀಗೆ ಶತ್ರುಗಳನ್ನು ಎದುರಿಸಿ ಮಡಿದ ವೀರನನ್ನು ಅಪ್ಸರೆಯರು ಚಾಮರ ಸಹಿತ ನಭದ ಮೂಲಕ ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ಮೇಲಿನ ಹಂತದಲ್ಲಿ ಪದ್ಮಾಸನಸ್ಥ ಜಿನ ಆಸೀನನಾಗಿದ್ದಾನೆ. ಇಕ್ಕೆಲಗಳಲ್ಲಿ

ಚಾಮರಧಾರಿಣಿಯರಿದ್ದಾರೆ. ಈ ವೀರಗಲ್ಲಿನ ಮೇಲೆ ಸಮಕಾಲೀನ ಅನ್ಯಧರ್ಮಗಳ ವೀರಗಲ್ಲುಗಳ ಪ್ರಭಾವವಾಗಿದೆ. ಜೈನರಲ್ಲಿ ಅಪ್ಸರೆಯರ ಸ್ವರ್ಗದ ಕಲ್ಪನೆ ಇಲ್ಲ. ಲಿಪಿ ಅಸ್ಪಷ್ಟವಾಗಿರುವ ಕಾರಣವಾಗಿ ವೀರನ ಹೆಸರು ತಿಳಿದು ಬರುವುದಿಲ್ಲ. (ನೋಡಿ ಚಿತ್ರ 3.1).

ಕನಕಗಿರಿ ಕ್ಷೇತ್ರವೆಂದು ಪ್ರಸಿದ್ಧವಾದ ಮದ್ದೂರು ತಾಲ್ಲೂಕಿನ ಜೈನಕೇಂದ್ರ ಅರೆತಿಪ್ಪೂರಿನಲ್ಲಿ ದೊರೆತಿರುವ ಮತ್ತೊಂದು ಜೈನಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲಘಟ್ಟದ್ದಾಗಿದೆ. ಕ್ರಿ.ಶ. 1117 ರ ಡಿಸೆಂಬರ್ 20ರಂದು ಹೊರಡಿಸಲಾದ ಈ ಶಾಸನವು ವಿಷ್ಣುವರ್ಧನನು ತಲಕಾಡನ್ನು ವಶಪಡಿಸಿಕೊಂಡ ವಿಚಾರವನ್ನು ದಾಖಲಿಸುತ್ತದೆ. ಶಾಸನವು 42 ಸಾಲಿನ ಸುಧೀರ್ಘವಾಗಿದ್ದು ಮೊದಲ 26 ಪಂಕ್ತಿಗಳು ಹೊಯ್ಸಳ ಮನೆತನದ ವಂಶಾವಳಿಯನ್ನು ವಿಷ್ಣುವರ್ಧನನವರೆಗೆ ದಾಖಲಿಸುವುದಕ್ಕೆ ಸೀಮಿತವಾಗಿದೆ. ಶಾಸನದ 26ನೆಯ ಸಾಲಿನಿಂದ 33ನೆಯ ಸಾಲಿನವರೆಗೆ ಏಚಿರಾಜ ಮತ್ತು ಮಾಕಣಬ್ಬೆಯರ ಪುತ್ರನಾದ ಮಹಾಸಾಮಂತಾಧಿಪತಿ ಗಂಗರಾಜನ ಸಾಧನೆಗಳನ್ನು ಹೇಳಲು ಬಳಸಿಕೊಳ್ಳಲಾಗಿದೆ. ಗಂಗವಾಡಿಯನ್ನು ಚೋಳರ ಹಿಡಿತದಿಂದ ಮುಕ್ತಗೊಳಿಸುವಲ್ಲಿ ಮತ್ತು ಪಾಂಡ್ಯ ಇತರ ಚೋಳ ಸಾಮಂತರನೆಲ್ಲ ಗಂಗವಾಡಿಯಿಂದ ಹೊಡೆದೋಡಿಸಿ ಇಡೀ ಪ್ರದೇಶವನ್ನು ಹೊಯ್ಸಳನಾಡನ್ನಾಗಿ ಪರಿವರ್ತಿಸಿ ಅದನ್ನು ಚಕ್ರವರ್ತಿ ವಿಷ್ಣುವರ್ಧನನಿಗೆ ಸಮರ್ಪಿಸಿದಾಗ ಸಂಪ್ರೀತನಾದ ಚಕ್ರವರ್ತಿಯು ಗಂಗರಾಜನಿಗೆ ಮೆಚ್ಚಿದ್ದನ್ನು ಬೇಡಿಕೊಳ್ಳಲು ಆಜ್ಞಾಪಿಸುತ್ತಾನೆ. ಅದರಂತೆ ದಂಡನಾಯಕನು ಮಹಾಸಾಮಂತಾಧಿಪತಿಯು, ಶ್ರೀಮಾನ್ ಮಹಾಪ್ರಧಾನ ದಂಡನಾಯಕನು ಆದ ಗಂಗರಾಜನು ಅರೆತಿಪ್ಪೂರಿನ ಮಹತ್ವವನ್ನು ತಿಳಿಸಿ ತ್ರಿಪೂರ ವೃತ್ತಿಯನ್ನು ಬೇಡಿಕೊಂಡಿದ್ದನ್ನು ಮುಂದುವರೆದು ಗಂಗರಾಜನು ತಿಪ್ಪೂರ ವೃತ್ತಿಯನ್ನು ತನ್ನ ಗುರುಗಳಾದ ಮೂಲಸಂಘ, ಕಾನೂರು ಗಣ, ತಿಂತ್ರಿಣಿಗಚ್ಛದ ಶ್ರೀಮೇಘಚಂದ್ರ ಸಿದ್ಧಾಂತದೇವರಿಗೆ ಶಕವರ್ಷ 1039ರ ಹೇವಿಳಂಬಿ ಸಂವತ್ಸರದ ಉತ್ತರಾಯಣ ಸಂಕ್ರಮಣದಂದು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ.[43]

ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯಲ್ಲಿರುವ ಕಂಬದರಾಯನ ಅಂದರೆ ಮಾನಸ್ತಂಭದ ಬುಡದ ಕಲ್ಲಿನಲ್ಲಿ ನಾಲ್ಕು ದಿಕ್ಕಿನಲ್ಲಿರುವ ಶಾಸನವು ಕಂಬದಹಳ್ಳಿಯು ಜೈನತೀರ್ಥಕ್ಷೇತ್ರವಾಗಿ ಪರಿವರ್ತಿತವಾದುದಕ್ಕೆ ಪ್ರಮುಖವಾದ ದಾಖಲೆಯಾಗಿದೆ.[44] ಶಾಸನವು ಭದ್ರ ಮತ್ತು ಜಿನಶಾಸನಸ್ಯ ಎಂಬ ಜಿನಸ್ತುತಿಯಿಂದ ಪ್ರಾರಂಭವಾಗುತ್ತದೆ. ಲಿಪಿಯ ಆಧಾರದ ಮೇಲೆ ಶಾಸನವನ್ನು 9–10 ನೆಯ ಶತಮಾನಕ್ಕೆ ಸೇರಿಸಬಹುದಾಗಿದೆ. ಆದರೆ ಶಕವರ್ಷ 1046ಕ್ಕೆ ವಿಳಂಬಿಸಂವತ್ಸರವು ಸರಿಹೊಂದುವುದಿಲ್ಲ. ಆದರೆ ವಿಳಂಬಿ ಸಂವತ್ಸರವು ಶಕ 1040ಕ್ಕೆ ಅಂದರೆ

1118ಕ್ಕೆ ಸರಿಹೊಂದುತ್ತದೆ. ಪ್ರಾಯಶಃ ಸೊನ್ನೆ ಬರೆಯುವಾಗ 6 ಎಂದು ಬರೆದಿರುವ ಸಾಧ್ಯತೆಗಳಿವೆ. ಇದನ್ನು ತಿದ್ದಿಕೊಳ್ಳಲು ಶಾಸನವನ್ನು ಅವಲೋಕಿಸಬೇಕು. ಆದರೂ ಶಾಸನವು ನಾವು ಈ ಮೊದಲೇ ಉಲ್ಲೇಖಿಸಿರುವ ಕನಕಗಿರಿ ಕ್ಷೇತ್ರವೆಂದೇ ಹೆಸರಾದ ಅರೆತಿಪ್ಪೂರಿನ ಜೈನತೀರ್ಥಕ್ಕೆ ನೀಡಿದ ದಾನದಂತೆಯೆ ಅದೇ ರಾಜಕೀಯ ಹಿನ್ನೆಲೆಯಲ್ಲಿ ಈ ದಾನವನ್ನು ನೀಡಿರುವುದನ್ನು ಶಾಸನದ 51ನೇ ಸಾಲಿನಿಂದ 66ನೇ ಸಾಲಿನವರೆಗೆ ದಾಖಲಿಸುತ್ತದೆ. ಆದರೆ ಶಾಸನದ ಮೊದಲ ಭಾಗ ಅಂದರೆ ಜಿನಸ್ತುತಿಯಿಂದ 50ನೆಯ ಸಾಲಿನವರೆಗೆ ಸೂರಸ್ತಗಣದ 9 ಜನ ಆಚಾರ್ಯರನ್ನು ಅವರುಗಳ ಸಾಧನೆ ಹಿರಿಮೆ ಗರಿಮೆಗಳನ್ನು ದಾಖಲಿಸುತ್ತದೆ. ಜಿನಾಚಾರ್ಯರ ಸ್ಥಾನದಲ್ಲಿ ಮೊದಲನೆಯವರಾಗಿ ಈ ಶಾಸನದಲ್ಲಿ ಉಲ್ಲೇಖಿತರಾಗಿರುವವರು ಅನಂತವೀರ್ಯಾ ಚಾರ್ಯರು. ಇವರು ರಾಜರಿಂದ ಸನ್ಮಾನಿಸಲ್ಪಟ್ಟವರು. ಸಿದ್ಧಾಂತಪಾರಗರು, ನಮಿಸಲ್ಪಟ್ಟವರು, ಅತ್ಯುನ್ನತ ಸುಂದರ ಚರಿತೆಯನ್ನು ಹೊಂದಿದವರು. ಇವರ ಶಿಷ್ಯ ಬಾಳಚಂದ್ರರು ಮುನಿಸಮುದಾಯದ ಬಹುಮುಖ್ಯ ಪ್ರತಿಭೆಯಾಗಿದ್ದವರು. ಇವರ ಕರಕಮಲ ಸಂಜಾತರು ಪ್ರಭಾಚಂದ್ರರು ಮದನ ಸಿದ್ಧಾಂತವನ್ನು ಗೆದ್ದವರು. ಇವರ ಶಿಷ್ಯರು ಕನ್ನೆಲ ದೇವರು. ಇವರು ಮದನ ದರ್ಪವನ್ನು ಆಳಿದ ಅಷ್ಟೋಪವಾಸಿಗಳು. ಇವರು ಮುನಿ ಸಮುದಾಯಕ್ಕೆ ಪ್ರಮುಖರಾಗಿದ್ದರು. ಇವರ ಶಿಷ್ಯರು ಪಂಡಿತರಿಗೆ ಒಡೆಯರಾದ ಹೇಮನಂದಿ ಮುನೀಶ್ವರರು ಹೇಮನಂದಿ ಯತಿಗಳು ಸೂರಸ್ತ ಗಣಕ್ಕೆ ಸೂರ್ಯನಂತಿದ್ದವರು. ಹೇಮನಂದಿ ಮುನೀಶ್ವರರ ಶಿಷ್ಯರಾಗಿದ್ದ ವಿನಯನಂದಿ ತಪೋಧರರು, ವಿನಯನಂದಿ ಯತಿ ನಾಡಿನಲ್ಲಿ ಹಳ್ಳಿಗಳನ್ನು ಪಡೆದು ಭೂವನಿತೆಯರ ಜೊತೆ ಸೇರಿ ಇಂದ್ರಿಯ ನಿಗ್ರಹವನ್ನು ಮಾಡದೆ ಮುನಿವನಿತೆಯರಲ್ಲಿ ಕೂಡಿದ ಎಂಬ ಕುಚೋದ್ಯಕ್ಕೆ ಬಲಿಯಾಗಿ ಈ ಮಾತು ಕೇಳಿ ಬಂದ ಬಂದಜನರೆಲ್ಲಾ ಸಾಕ್ಷಿಯಾಗಿರಲು ಅಂತವಾಸಿಗಳಾಗಿದ್ದ ವಿನಯನಂದಿ ತಪೋಧನರು ಅಂದೇ ಇಳೆಯನಾರಿಯರೆಲ್ಲರು ತನ್ನ ತಾಯಿಯೆಂದೇ ಭಾವಿಸಿ ಅದರಂತೆ ದೀಕ್ಷೆಯನ್ನು ಪಡೆದು ಯತಿಗಳಾದವರು. ವಿನಯನಂದಿ ಯತಿಗಳ ಶಿಷ್ಯರು ಏಕವೀರರು ಮತ್ತು ಪಲ್ಲಕೀರ್ತಿಗಳು. ಏಕವೀರರು ವ್ರತಗಳನೇಕವನ್ನು ಅಂದರೆ ಪಂಚಾಣುವ್ರತಗಳನ್ನಾಚರಿಸಿ ತ್ರಿಗುಪ್ತಿಗಳನ್ನು ಪಡೆದು ಮೋಹಪರಿಷಹ ಬಾದೆಗಳನ್ನು ಕಡೆಗಣಿಸಿ ಐದು ಸಮಿತಿಗಳನ್ನು ಅಂದರೆ ಈರ್ಯ, ಭಾಷಾ, ಏಷಣ, ಆದಾನ ಹಾಗೂ ಪ್ರತಿಷ್ಠಾನಗಳನ್ನೊಡಗೂಡಿ ಮದಮಾಯಾದ್ವೇಷಗಳನ್ನು ಕೊಂದು ಜಿತಮದನನಾಗಿ ಜಂಗಮತೀರ್ಥ ಎನಿಸಿಕೊಂಡವರು. ಇವರು ತಾವು ಪಡೆದ ದಾನಗಳಿಂದ ಭವ್ಯ ಜನರನ್ನು ಸಂತೈಸಿ ಧೀನರಿಗೆ ದಾರಿದೀಪವಾದವರು. ಧನಿಕರಿಗೆ ಆತ್ಮತೃಪ್ತಿ ನೀಡಿದವರು. ಆದರೆ ಪಲ್ಲಕೀರ್ತಿ ಅಥವಾ ಪಲ್ಲಪಂಡಿತ ಹಾಗೂ ಶುಭಚಂದ್ರ ಸಿದ್ಧಾಂತ ದೇವರ ನಡುವಿನ ಸಂಬಂಧವನ್ನು ಶಾಸನವು ತಿಳಿಸುವಲ್ಲಿ ವಿಫಲವಾಗಿದೆ. ಶಾಸನವು ಮುಖ್ಯವಾಗಿ ಗಂಗರಾಜನು

ವಿಷ್ಣುವರ್ಧನನಿಂದ ಪಡೆದ ಬಿಂಡಿಗನವಿಲೆಯ ತಳವೃತ್ತಿಯನ್ನು ತನ್ನ ಗುರುಗಳಾದ ಶುಭಚಂದ್ರಸಿದ್ಧಾಂತ ಕೀರ್ತಿದೇವರಿಗೆ ಅರ್ಪಿಸಿದುದನ್ನು ದಾಖಲಿಸುತ್ತದೆ.

ಮಂಡ್ಯ ಜಿಲ್ಲೆಯ ಹೊಯ್ಸಳರ ಕಾಲದ ಜೈನಶಾಸನಗಳಲ್ಲಿ ಹೊಸಹೊಳಲು ಗ್ರಾಮದ ಪಾರ್ಶ್ವನಾಥ ಬಸದಿಯ ದಕ್ಷಿಣ ದಿಕ್ಕಿನಲ್ಲಿರುವ ಶಾಸನವು ಅತಿಪ್ರಮುಖ ಶಾಸನವೆಂದರೆ ತಪ್ಪಾಗಲಿಕ್ಕಿಲ್ಲ.[45] ಈ ಶಾಸನವು ಹೊಯ್ಸಳ ದೇವ ಭುಜಬಲ ವೀರಗಂಗ ಗಂಗವಾಡಿ 96000 ಭೂಪ್ರದೇಶವನ್ನು ಆಳುತ್ತಿದ್ದ ಕಾಲದಲ್ಲಿ ದೂರಸಮುದ್ರದ ಪಟ್ಟಣಸ್ವಾಮಿ ಪೊಯ್ಸಳಸೆಟ್ಟಿಯಾದ ನೊಳಂಬಿಸೆಟ್ಟಿಯ ಪತ್ನಿ ಚಾವುಂಡಾಡಿಯೆಂದು ಹೆಸರಾದ ದೇಮಿಕಬ್ಬೆ ಕತ್ತರಿಗಟ್ಟದಲ್ಲಿ ತ್ರಿಕೂಟಜಿನಾಲಯವನ್ನು ನಿರ್ಮಿಸಿ ಅದಕ್ಕೆ ಅರುಹನಹಳ್ಳಿಯ ಭೂಮಿಯನ್ನು, ಎರಡು ಎಣ್ಣೆಯ ಗಾಣಗಳನ್ನು, ಎರಡು ಕೈದೋಟಗಳನ್ನು ಹಾಗೂ ಬೆಟ್ಟನಾಯಕನ ಮಗ ಕತ್ತರಿಗಟ್ಟದ ಗಂಡನಾರಾಯಣಸೆಟ್ಟಿಯೂ ತನಗೆ ನೀಡಿದ್ದ ಎರಡು ಕೆರೆಗಳನ್ನು ಅವುಗಳ ಕೆಳಗಿನ ಗದ್ದೆಯನ್ನು ತರಿಭೂಮಿಯನ್ನು ಮೂಲಸಂಘ ದೇಶೀಯ ಗಣ, ಪುಸ್ತಕಗಚ್ಛ, ಕುಂದಕುದಾನ್ವಯದ ಶುಭಚಂದ್ರಸಿದ್ಧಾಂತ ದೇವರಿಗೆ ದಾರಾಪೂರ್ವಕವಾಗಿ ದಾನಕೊಟ್ಟ ವಿಚಾರವನ್ನು ದಾಖಲಿಸುತ್ತದೆ. ಶುಭಚಂದ್ರ ಸಿದ್ಧಾಂತ ದೇವರನ್ನು ದೇಮಿಕಬ್ಬೆ ಮತ್ತು ನೊಳಂಬಿಸೆಟ್ಟಿಯ ಸಂರಕ್ಷಕರೆಂದು ದಾಖಲಿಸುತ್ತದೆ. ಈ ಶಾಸನದಲ್ಲಿ ಮೂರು ಜನ ಯತಿಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಅವರುಗಳೆಂದರೆ ದಿವಾಕರನಂದಿದೇವ, ಆತನ ಶಿಷ್ಯ ಕಕ್ಕುಟಾಸನ ಮಲಾರಿದೇವ ಮತ್ತು ಅವರ ಶಿಷ್ಯರಾದ ಶುಭಚಂದ್ರ ಸಿದ್ಧಾಂತ ದೇವರು.

ನಾಗಮಂಗಲ ತಾಲ್ಲೂಕಿನ ಸುಖದೆರೆಯಲ್ಲಿ ದೊರೆತಿರುವ ತೇದಿರಹಿತ ಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲದಾಗಿದ್ದು, ಜಕ್ಕಶೆಟ್ಟಿ ಎಂಬುವವನು ಸುಖದೆರೆಯಲ್ಲಿ ಬಸದಿ ಮತ್ತು ಕೆರೆಯನ್ನು ಕಟ್ಟಿಸಿ ಭೂದಾನಗಳನ್ನು ನೀಡಿ 'ತೆಪ್ಪಸುಂಕ' ದೊಂದಿಗೆ ಸಣ್ಣ ಕೆರೆಯನ್ನು ದಾನವಾಗಿ ನೀಡಿದನೆಂದು ಉಲ್ಲೇಖಿಸುತ್ತದೆ.[46]

12ನೇ ಶತಮಾನಕ್ಕೆ ಸೇರಿದ ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯ ಶಾಂತೀಶ್ವರ ಬಸದಿಯ ಉತ್ತರ ಬಾಗಿಲಿನಲ್ಲಿ ಇರುವ ಶಾಸನವು ಗಂಗರಾಜನ ಮಗ ಬೊಪ್ಪದೇವನು ಹೊಂದಿದ್ದ ಬಿರುದುಗಳನ್ನು ಮತ್ತು ಆತನು ನಿರ್ಮಿಸಿದ ಕನ್ನವಸದಿಯನ್ನು ದಾಖಲಿಸುತ್ತದೆ.[47]

ಕೃಷ್ಣರಾಜಪೇಟೆ ತಾಲ್ಲೂಕು ಶ್ರವಣನಹಳ್ಳಿ ಗ್ರಾಮದ ಪೂರ್ವದಿಕ್ಕಿನಲ್ಲಿ ಬಿದ್ದಿರುವ ಕಲ್ಲೊಂದರಲ್ಲಿರುವ ಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲವನ್ನು ದಾಖಲಿಸುತ್ತದೆ.[48] ಅಲ್ಲದೆ

ಮಂದಗೆರೆಯ ವೃತ್ತಿಯೊಳಗೆ ಕಾವನಹಳ್ಳಿಯಲ್ಲಿ ಕೊಂಗಾಳ್ವವಂಶಕ್ಕೆ ಸೇರಿದ ಪೃಥ್ವಿಕೊಂಗಾಳ್ವನ ಮಗ ದುದ್ದಮಲ್ಲನು, ಆತನ ಅಕ್ಕ ವಿಷ್ಣುವರ್ಧನನ ಹಿರಿಯರಾಣಿಯಾದ ಚಂದಲದೇವಿಯು ತಮಗೆ ತಮ್ಮ ತಂದೆ ಬಳುವಳಿಯಾಗಿ ಕೊಟ್ಟಿದ್ದ ಕಾವನಹಳ್ಳಿಯ ತ್ರಿಭುವನ ತಿಲಕ ತೀರ್ಥದಲ್ಲಿ ವೀರಕೊಂಗಾಳ್ವ ಜಿನಾಲಯವನ್ನು ನಿರ್ಮಿಸಿ ಬಸದಿಯ ಅಂಗಭೋಗಕ್ಕೆ ಋಷಿಗಳ ಆಹಾರಧಾನಕ್ಕೆ, ಕಾವನಹಳ್ಳಿಯನ್ನು ತಮ್ಮ ಗುರುಗಳಾದ ಮೂಲಸಂಘ ದೇಶೀಯ ಗಣ ಪುಸ್ತಕಗಚ್ಛ ಕುಂದಕುಂದಾನ್ವಯದ ಶ್ರೀ ಮೇಘಚಂದ್ರ ತ್ರೈವಿದ್ಯಾದೇವರ ಶಿಷ್ಯರಾದ ಪ್ರಭಾಚಂದ್ರದೇವರ ಪಾದವನ್ನು ತೊಳೆದು ಧಾರಾಪೂರ್ವಕವಾಗಿ ದಾನ ಮಾಡಿದುದನ್ನು ತಿಳಿಸುತ್ತದೆ.

ಮದ್ದೂರು ತಾಲ್ಲೂಕು ಆಬಲವಾಡಿಯ ಶಾಸನವು ಹೊಯ್ಸಳ ಅರಸ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಹೆಗ್ಗಡೆ ಮಲ್ಲಿನಾಥನು ಒಂದು ಬಸದಿಯನ್ನು (ಶ್ರೀಯಳ್ಳೀ ಬಸದಿ) ಕಟ್ಟಿಸಿ ಅದರ ಪೂಜೆಗಾಗಿ ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ ಹನ್ನೆರಡು ಸಲಿಗೆಯ ಗದ್ದೆಯನ್ನು ಈ ವೆಚ್ಚಕ್ಕಾಗಿ ಯತಿಗಳಾದ ಮೂಲಸಂಘ, ದೇಶಿಯ ಗಣ ಪುಸ್ತಕಗಚ್ಛ ಕುಂದಕುಂದಾನ್ವಯದ ನಯಕೀರ್ತಿ ಮತ್ತು ಭಾನುಕೀರ್ತಿಗಳಿಗೆ ಧಾರೆ ಎರೆದು ಕೊಟ್ಟರೆಂಬ ವಿವರವನ್ನು ದಾಖಲಿಸುತ್ತದೆ.[49] ಶಾಸನದಲ್ಲಿ ಉಲ್ಲೇಖವಾಗಿರುವ ದಿನಾಂಕದ ಕೆಲ ವಿವರಗಳನ್ನು ಆಧರಿಸಿ ಶಾಸನವು 1131 ರ ಫೆಬ್ರವರಿ 16ಕ್ಕೆ ಸರಿಹೊಂದುತ್ತದೆಯೆಂದು ಆದರೆ ಸೋಮವಾರ ಫೆಬ್ರವರಿ 16ಕ್ಕೆ 19ರಂದು ದಾಖಲಾಗಿರುವುದನ್ನು ಗುರುತಿಸುತ್ತಾರೆ.

ನಾಗಮಂಗಲ ತಾಲ್ಲೂಕು ದಡಗ ಗ್ರಾಮದ ಮನೆಯೊಂದರ ಮುಂದಿರುವ ಕಲ್ಲಿನ ಮೇಲಿರುವ ಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲದ್ದಾಗಿದ್ದು, ಆತನ ಆಳ್ವಿಕೆಯಲ್ಲಿ ದಂಡನಾಯಕರುಗಳಾಗಿದ್ದ ಮರಿಯಾನೆ ದಂಡನಾಯಕನು ಭರತಮಯ್ಯ ದಂಡನಾಯಕನು ತಮ್ಮ ಗುರುಗಳಾದ ಮೂಲಸಂಘದ ಮೇಘಚಂದ್ರಸಿದ್ಧಾಂತ ದೇವರಿಗೆ ದಡಿಗನಕೆರೆಯ ಪಂಚಬಸದಿಯೊಳಗೆ ಬಾಹುಬಲಿಕೂಟವನ್ನು ಮಾಡಿಸಿ ಕೆಲವು ಭೂಮಿಗಳನ್ನು ಧಾರೆ ಎರೆದುಕೊಟ್ಟರೆಂದು ದಾಖಲಿಸುತ್ತದೆ.[50] ಅಲ್ಲದೆ ಈತನ ತಂದೆಯಾದ ಬಲ್ಲೇಶನನ್ನು ಮತ್ತು ಆತನ ಇಬ್ಬರು ಪತ್ನಿಯರಾದ ಹರಿಯಬ್ಬೆ ಮತ್ತು ಜಕ್ಕಯಬ್ಬೆಯರ ಹೆಸರುಗಳು ಕಂಡುಬಂದಿವೆ. ಇವರು ದಾನಿಯರ ತಾಯಂದಿರು. ಅಂದರೆ ಬಲ್ಲೇಶ ಜಕ್ಕಯಕ್ಕನ ಪುತ್ರ ಮರಿಯಾನೆಯು ಬಲ್ಲೇಶ ಹರಿಯಬ್ಬೆಯ ಪುತ್ರ ಭರತಮಯ್ಯನು ಆಗಿರುವ ಸಾಧ್ಯತೆಗಳನ್ನು ಶಾಸನವು ದಾಖಲಿಸಿದೆ. ಈ ಶಾಸನದಲ್ಲಿ ಮೂಲಸಂಘದ ಕುಂದಕುಂದಾನ್ವಯ ಕಾಣೂರು ಗಣ, ತಿಂತ್ರಿಣಿಗಚ್ಛದ ಜವಳಿಗೆಯ ಮುನಿಗಳಾದ ಭದ್ರಸಿದ್ಧಾಂತ ದೇವರ ಶಿಷ್ಯರಾದ ಮೇಘಚಂದ್ರ ಸಿದ್ಧಾಂತದೇವರಿಗೆ

ದಾನಮಾಡಿದುದನ್ನು ದಾಖಲಿಸುತ್ತದೆ. ಪುಸ್ತಕಗಚ್ಛದ ಹೆಸರಿಗೆ ಬದಲಾಗಿ ತಿಂತ್ರಿಣಿಗಚ್ಛದ ಉಲ್ಲೇಖ ಬಂದಿರುವುದು ವಿಶೇಷವಾಗಿ ಗಮನಿಸಬೇಕಾದ ಅಂಶ. ಕಾನೂರು ಗಣವು ಯಾಪನೀಯ ಸಂಘಕ್ಕೆ ಸೇರಿದ ಬಹು ಪ್ರಸಿದ್ಧವಾದ ಒಂದು ಗಣ ಕಾಣೂರು ಗಣಕ್ಕೆ ಹೊಂದಿಕೊಂಡು ಜಂಟಿಯಾಗಿಯೇ ಬರುವ ಗಚ್ಛ ತಿಂತ್ರಿಣಿಗಚ್ಛ. ಅಂದರೆ ದಡಗದಲ್ಲಿ ಯಾಪನೀಯ ಸಂಘವು ದಿಗಂಬರ ಅಂದರೆ ಮೂಲ ಸಂಘದೊಂದಿಗೆ ಉತ್ತಮ ಸಂಬಂಧವನ್ನು ಸ್ಥಾಪಿಸಿಕೊಂಡಿತ್ತು. ಮುನಿಗಳ ಹೆಸರುಗಳಲ್ಲಿ, ಗಣ–ಗಚ್ಛ ಅನ್ವಯಗಳ ಹೆಸರುಗಳಲ್ಲಿ ದೇವಾಲಯ ಮತ್ತು ಮೂರ್ತಿ ನಿರ್ಮಾಣದಲ್ಲಿ ಸಮಾನತೆಯಿತ್ತು ಎನ್ನುವ ಅಂಶ ಮನದಟ್ಟಾಗುತ್ತದೆ.

ನಾಗಮಂಗಲ ತಾಲ್ಲೂಕಿನ ಕಸಲಗೆರೆ ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಬಲಗಡೆ ಇರುವ ಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲದ್ದಾಗಿದ್ದು ಇದು ಶತವರ್ಷ 1064 ದುಂದುಬಿ ಸಂವತ್ಸರ ಶುದ್ಧ ಪಂಚಮಿ ಗುರುವಾರ ಉತ್ತರಾಯಣ ಸಂಕ್ರಮಣ ಕಾಲದಲ್ಲಿ ನೀಡಿದ ದಾನವಾಗಿದ್ದು ಕ್ರಿ.ಶ. 1142ರ ಡಿಸೆಂಬರ್ 24ನೇ ತಾರೀಖಿಗೆ ಸರಿಹೊಂದುತ್ತದೆ.[51] ಶಾಸನವು ದಾನಿಯಾದ ಕಲ್ಕುಣಿನಾಡಿನ ಒಡೆಯನಾಗಿದ್ದ ಸಾವಂತಸೋವೆಯ ನಾಯಕನ ವಂಶಾವಳಿಯನ್ನು ದಾಖಲಿಸುತ್ತದೆ. ಈತನೇ ದಾನಿಯೂ ಹೌದು. ಈತನು ಹೆಬ್ಬಿದಿರುವಾಡಿಯಲ್ಲಿ ಉತ್ತುಂಗ ಚೈತ್ಯಾಲಯವನ್ನು ನಿರ್ಮಿಸಿ ಅದರಲ್ಲಿ ಶ್ರೀ ಪಾರ್ಶ್ವನಾಥಸ್ವಾಮಿಯ ವಿಗ್ರಹವನ್ನು ಸ್ಥಾಪಿಸಿ ದೇವರ ಅಂಗಭೋಗಕ್ಕೆ ಋಷಿಗಳ ಆಹಾರಕ್ಕೆ ಮತ್ತು ಬಸದಿಯ ಜೀರ್ಣೋದ್ಧಾರಕ್ಕಾಗಿ ತನ್ನ ಗುರುಗಳಾದ ಸೂರಸ್ತಗಣದ ಬ್ರಹ್ಮದೇವರ ಕಾಲುತೊಳೆದು ಧಾರಾಪೂರ್ವಕವಾಗಿ ಕೊಟ್ಟ ದತ್ತಿಯನ್ನು ಅದರ ಚತುಃಸೀಮಾ ವಿವರವನ್ನು ದಾಖಲಿಸುತ್ತದೆ. ಇದೇ ಗ್ರಾಮದ ಮತ್ತೊಂದು ಜೈನಶಾಸನವು ಕಲ್ಕುಣಿನಾಡ ಬಸದಿಯನ್ನು ಎಕ್ಕೋಟ ಜಿನಾಲಯವೆಂದು ಹೆಸರಿಸಲ್ಪಟ್ಟಿದ್ದನ್ನು ದಾಖಲಿಸಿದ.[52]

ನಾಗಮಂಗಲ ತಾಲ್ಲೂಕು ಬೋಗಾದಿಯ ತ್ರುಟಿತ ಜಿನಾಲಯದ ಮುಂದೆ ಬಿದ್ದಿರುವ ಶಾಸನವು 88ಕ್ಕೂ ಹೆಚ್ಚು ಸಾಲುಗಳನ್ನೊಂದಿದ ಸುದೀರ್ಘ ಶಾಸನವಾಗಿದೆ. ಶಾಸನದಲ್ಲಿ ದಾನಕೊಟ್ಟ ಕಾಲವನ್ನು ಶಕ 1067 ರಕ್ತಾಕ್ಷಿ ಸಂವತ್ಸರದ ಪುಷ್ಯ ಅಮಾವಾಸ್ಯೆ ಉತ್ತರಾಯಣ ಸಂಕ್ರಮಣ ಸೂರ್ಯಗ್ರಹಣ ಎಂದು ಗುರುತಿಸಲಾಗಿದೆ ಅಥವಾ ತಿಳಿಯಲಾಗಿದೆ. ಈ ಶಕಕಾಲವು ಕ್ರಿ.ಶ. 1144 ಡಿಸೆಂಬರ್ 26 ಮಂಗಳವಾರಕ್ಕೆ ಸರಿಹೊಂದುತ್ತದೆ. ಶಾಸನವು ಶ್ರೀಕರಣದ ಮಾದಿರಾಜನ ವಂಶಾವಳಿಯನ್ನು ದಾಖಲಿಸುತ್ತದೆ.[53] ಅದರ ಪೂರ್ಣ ವಿವರ ದೊರೆಯುವುದಿಲ್ಲ. ಹೊಯ್ಸಳ ಒಂದನೇ ನರಸಿಂಹನು ಪಾರ್ಶ್ವದೇವರ ಶ್ರೀಕರಣ ಜಿನಾಲಯಕ್ಕೆ ಭೋಗವತಿ ಎಂಬ ಗ್ರಾಮವನ್ನು ದಾನ ನೀಡಿದುದನ್ನು ಈ ಶಾಸನವು ತಿಳಿಸುತ್ತದೆ. ಇದಲ್ಲದೆ ದ್ರವಿಳ ಸಂಘದ

ಮಲ್ಲಿಷೇಣ ಮಲದಾರಿದೇವ ಮುನಿಗಳು ಮತ್ತು ಅವರ ಗುರುಪರಂಪರೆಯ ವಿವರವನ್ನು ಈ ಶಾಸನ ಕೆಳಗಿನಂತೆ ದಾಖಲಿಸುತ್ತದೆ.

ಸಮಂತಭದ್ರ ಆಚಾರ್ಯ

ಅಕಳಂಕ ದೇವರು

ವಕ್ರಗ್ರೀವಾಚಾರ್ಯ

ಕನಕಸೇನಾಚಾರ್ಯ

ವಾದಿರಾಜರು

ವಿಜಯನಂದಿ ಆಚಾರ್ಯ

ಅಜಿತಪಾಲನಾಥದೇವ

ಅಜಿತಸೇನಾಚಾರ್ಯ

ದ್ವಿತೀಯ ಅಕಳಂಕದೇವ

ಕುಮಾರಸ್ವಾಮಿ

ಮಲ್ಲಿಷೇಣ ಮಲಧಾರಿದೇವ

ಕಂಬದಹಳ್ಳಿಯ ಶಾಂತೀಶ್ವರ ಬಸದಿಯ ತೊಲೆಯೊಂದರಲ್ಲಿರುವ ಶಾಸನವು ಕ್ರಿ.ಶ. 1145ರ ಡಿಸೆಂಬರ್ 25ಕ್ಕೆ ಸರಿಹೊಂದುತ್ತದೆ.[54] ಹೊಯ್ಸಳ ನರಸಿಂಹದೇವನು ಮೊದಲಿಹಳ್ಳಿಯನ್ನು ಶಾಂತಿನಾಥ ದೇವರ ಪೂಜೆಗೆ, ಆಹಾರ ದಾನಕ್ಕಾಗಿ ಮರಿಯಾನೆ ದಂಡನಾಯಕ ಮತ್ತು ಭರಿತಿಮಯ್ಯ ದಂಡನಾಯಕರು ಬಸದಿಗೆ ದಾನಕೊಡುವ ಸಲುವಾಗಿ ದಾನ ನೀಡಿದುದನ್ನು ಉಲ್ಲೇಖಿಸುತ್ತದೆ. ಅಲ್ಲದೆ ಮರೆಯಾನೆ ದಂಡನಾಯಕ ಮತ್ತು ಭರತಿಮಯ್ಯ ದಂಡನಾಯಕರು ತಾವು ದಾನವಾಗಿ ಪಡೆದ ಮೊದಲಿಹಳ್ಳಿಯನ್ನು ಗಂಡವಿಮುಕ್ತ ಸಿದ್ಧಾಂತದೇವರಿಗೆ ದಾನಮಾಡಿದ ವಿವರಗಳನ್ನು ದಾಖಲಿಸುತ್ತದೆ.

ನಾಗಮಂಗಲ ತಾಲ್ಲೂಕು ಯಾಲದಹಳ್ಳಿಯಲ್ಲಿ ಪಾಳುಬಿದ್ದ ಬಸದಿಯಲ್ಲಿರುವ ಕ್ರಿ.ಶ. 1145ರ ಶಾಸನವು ಹೊಯ್ಸಳ ಒಂದನೇ ನರಸಿಂಹನ ಕಾಲಕ್ಕೆ ಸೇರಿದುದಾಗಿದೆ.[55] ಹೊಯ್ಸಳ ವಿಷ್ಣುವರ್ಧನನ ಮಹಾಪ್ರಧಾನ ದೇವರಾಜನು ಸೂರನಹಳ್ಳಿಯಲ್ಲಿ ಪಾರ್ಶ್ವಜಿನನಿಗೆ ಬಸದಿಯನ್ನು ನಿರ್ಮಿಸಿ ಪಾರ್ಶ್ವನಾಥನ ಹೆಸರಿನಲ್ಲಿ ಆ ಹಳ್ಳಿಯನ್ನು 'ಪಾರ್ಶ್ವಪುರ' ವನ್ನಾಗಿ ಪರಿವರ್ತಿಸಿ ದಾನ ನೀಡಿದ ಸಂಗತಿಯನ್ನು ಈ ಶಾಸನ ತಿಳಿಸುತ್ತದೆ. ಮಹಾಪ್ರಧಾನ ದೇವರಾಜನು ಕೌಶಿಕಕುಲದವನಾಗಿದ್ದು ತಂತ್ರ ವಗ್ಗಡೆಯಾಗಿಯೂ ಕಾರ್ಯನಿರ್ವಹಿಸಿದಂತೆ ತಿಳಿದುಬರುತ್ತದೆ.

ನರಸಿಂಹನು ತನ್ನ ಮಹಾಪ್ರಧಾನಿ ದೇವರಾಜನ ಧರ್ಮಬುದ್ಧಿ ಮತ್ತು ಸ್ವಾಮಿಭಕ್ತಿಗೆ ಮೆಚ್ಚಿ ಸೂರನಹಳ್ಳಿಯನ್ನು ದಾನವಾಗಿ ಕೊಡಲು ದೇವರಾಜನು ಆ ಊರಿನಲ್ಲಿ ಬಸದಿಯನ್ನು ಕಟ್ಟಿಸುತ್ತಾನೆ. ನಂತರ ರಾಜನ ಬಸದಿಗೆ ನಲವತ್ತು ಹಣಗಳಲ್ಲಿ ಹತ್ತು ಹಣವನ್ನು ದಾನ ನೀಡಿದುದಾಗಿ ತಿಳಿದುಬರುತ್ತದೆ. ಶಾಸನವು ದಾನಿಯಾದ ಮಹಾಪ್ರಧಾನ ದೇವರಾಜನ ವಂಶಾವಳಿಯನ್ನು ಮತ್ತು ಪ್ರತಿಗ್ರಹಿಯಾದ ಮೂಲಸಂಘ ದೇಶಿಯಗಣ ಪುಸ್ತಕಗಚ್ಛ ಕುಂದಾಕುಂದಾನ್ವಯುದ ಮುನಿಚಂದ್ರ ಭಟ್ಟಾರಕರ ಗುರುಪರಂಪರೆಯನ್ನು ಈ ಕೆಳಗಿನಂತೆ ದಾಖಲಿಸುತ್ತದೆ.

ಸಮಂತಭದ್ರಸ್ವಾಮಿಗಳ

ಅಕಳಂಕ ದೇವಾರು

ಗೃದ್ಧ ಪಿಂಚಾಚಾರ್ಯರು

ಶೃತಧರರು

ಸಾಗರನಂದಿ ಸಿದ್ಧಾಂತದೇವ

ಅರ್ಹನಂದಿ ಮುನಿಪುಂಗವ

ನರೇಂದ್ರಕೀರ್ತಿ ತ್ರೈವಿದ್ಯಾದೇವ

ಮುನಿಚಂದ್ರ ಭಟ್ಟಾರಕ

ಕೃಷ್ಣರಾಜಪೇಟೆ ತಾಲ್ಲೂಕು ಬಸ್ತಿ ಹೊಸಕೋಟೆಯಲ್ಲಿ ದೊರೆತಿರುವ ಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಆತನ ದಂಡನಾಯಕ ಪುಣಿಸೋಮಯ್ಯನು ಬಸದಿಯನ್ನು ನಿರ್ಮಿಸಿ ಅದರ ನಿರ್ವಹಣೆಗಾಗಿ ಮಾಣಿಕ್ಯದೊಡಲೂರು ಹಾಗೂ ಮಾವಿನಕೆರೆಗಳನ್ನು ಸರ್ವಬಾಧಾಪರಿಹಾರವಾಗಿ ದಾನ ನೀಡಿದುದನ್ನು ದಾಖಲಿಸುತ್ತದೆ.[56]

ಬಸ್ತಿಹೊಸಕೋಟೆಯ ಇನ್ನೊಂದು ಶಾಸನವು ಹಿಂದಿನ ಶಾಸನದಲ್ಲಿ ಹೇಳಿದಂತೆ ಮಾಣಿಕ್ಯದೊಡಲೂರಿನಲ್ಲಿ ಪುಣಿಸೋಮಯ್ಯನು ಹೊಯ್ಸಳ ವೀರನರಸಿಂಹನ ಕಾಲದಲ್ಲಿ ಮಹಾಪ್ರಧಾನ ಹೆಗ್ಗಡೆ ಶಿವರಾಜನ ಸಮ್ಮತಿಯಿಂದ ಕಟ್ಟಿಸಿದ ಜಿನಾಲಯಕ್ಕೆ ಅಲ್ಲಿನ ಆಶ್ರಮವಾಸಿಗಳ ಆಹಾರಕ್ಕೆ ಆ ಸೀಮೆಯ ನಾಲ್ಕು ಕಡೆಯ ಗ್ರಾಮಗಳ ಕೆಲವು ತೆರಿಗೆಗಳನ್ನು ದತ್ತಿಯಾಗಿ ಕೊಟ್ಟ ವಿಚಾರವು ತಿಳಿದುಬರುತ್ತದೆ.[57]

ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯ ಶಾಂತೀಶ್ವರ ಪಾಳು ಬಸದಿಯ ರಂಗಮಂಟಪದ ತೊಲೆಯ ಮೇಲಿನ ಶಾಸನವು ಗಂಗವಂಶದ ನೇಮದಂಡೇಶ ಮತ್ತು

ಮುದ್ದರಸಿಯ ಮಗನಾದ ಪಾರ್ಶ್ವದೇವನು ಬಿಂಡಿಗನವಿಲೆಯ ಪಾರ್ಶ್ವಜಿನನ ಬಸದಿಯನ್ನು ಜೀರ್ಣೋದ್ಧಾರ ಮಾಡಿ ಸುಣ್ಣ ಹೊಡೆಸಿ ನಿರಂತರ ಶೋಭಿಸುವಂತೆ ಮಾಡಿ ಪುಣ್ಯಪಡೆದನು ಎಂದು ದಾಖಲಿಸುತ್ತದೆ.[58] ಅಲ್ಲದೆ ಪಾರ್ಶ್ವದೇವನು ಈ ಜಿನಾಲಯಕ್ಕೆ 24 ಖಂಡುಗ ನೀರಾವರಿ ಭೂಮಿಯನ್ನು 50 ಖಂಡುಗ ಒಣಭೂಮಿಯನ್ನು ವಿದ್ಯಾರ್ಥಿಗಳ ಮತ್ತು ಋಷಿಗಳ ಆಹಾರಕ್ಕಾಗಿ ಹನಸೋಗೆಯ ಮೂಲಸಂಘದ, ದೇಶಿಗಣದ ಪುಸ್ತಕಗಚ್ಛದ ಮುನಿಗಳಿಗೆ ಶಕ 1068 ಜನವರಿ 31ರ ಬುಧವಾರದಂದು ದಾನಕೊಟ್ಟಿದುದಾಗಿ ತಿಳಿಸುತ್ತದೆ.

ನಾಗಮಂಗಲ ತಾಲ್ಲೂಕಿನ ಬೋಗಾದಿಯ ಬಸದಿಯ ತಳಪಾದಿಯ ಕಲ್ಲೊಂದರ ಮೇಲಿರುವ ಶಾಸನವು ಶ್ರೀಕರಣ ಜಿನಾಲಯದ ಪಾರ್ಶ್ವದೇವರ ಪೂಜೆಗೆ ಭೊಗವತಿ ಗ್ರಾಮದ ಉಪಗ್ರಾಮವಾದ ಕಾಳಭೂವನಹಳ್ಳಿಯ ಎಲ್ಲಾ ಸುಂಕಗಳನ್ನು ಹೊಯ್ಸಳ ದೊರೆ 2ನೇ ಬಲ್ಲಾಳನ ಮಹಾಪ್ರಧಾನನ ಸರ್ವಾಧಿಕಾರಿ ಹೆಗ್ಗಡೆ ಬಲ್ಲಿಯನು ದಾನ ನೀಡಿದುದನ್ನು ದಾಖಲಿಸುತ್ತದೆ.[59] ಈತನು ಮಾಚಿರಾಜನ ಮಾವನಾಗಿದ್ದನು. ಅಕಳಂಕ ದೇವರ ಶಿಷ್ಯ ಪದ್ಮಪ್ರಭರು ಈ ದಾನವನ್ನು ಸ್ವೀಕರಿಸಿದ ಯತಿಗಳು.

ಹೊಯ್ಸಳ ಸಣ್ಣೇನಾಡಿನ ರಾಜನಾದ ಚಂಗಿಕುಲ ಮಾರ್ತಾಂಡ ಕಾಮಕೋಟಿ ದೇವಿ ವರಪ್ರಸಾದನಾದ ಹೊಯ್ಸಳ ಸಾಮಂತ ಭರತಮಯ್ಯ ದಂಡನಾಯಕನು ಕಂಬದಹಳ್ಳಿಯ ಹಿರಿಯ ಕೆರೆಯ ದಕ್ಷಿಣತೂಬಿನ ಹುಟ್ಟುವಳಿಯನ್ನು ಶ್ರೀಶಾಂತಿನಾಥ ದೇವರ ಪೂಜೆಗೆ ಕ್ರಿ.ಶ. 1174 ಡಿಸೆಂಬರ್ 25 ರಂದು ದಾನ ನೀಡಿದುದನ್ನು ಕಂಬದಹಳ್ಳಿಯ ಇನ್ನೊಂದು ಶಾಸನ ದಾಖಲಿಸುತ್ತದೆ.[60]

ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿ ಕೋದಂಡರಾಮಸ್ವಾಮಿ ದೇವಸ್ಥಾನದಲ್ಲಿರುವ ವೀರಬಲ್ಲಾಳನ ಕಾಲದ ಶಾಸನವು ಕ್ರಿ.ಶ. 1175 ನವೆಂಬರ್ 16ಕ್ಕೆ ಸಂದುದಾಗಿದೆ.[61] ಶಾಸನದಲ್ಲಿ ಉಲ್ಲೇಖಿತವಾಗಿರುವ ವೀರಬಲ್ಲಾಳನನ್ನು 2ನೇ ಬಲ್ಲಾಳನೆಂದು ಗುರುತಿಸಲಾಗಿದೆ. ಈ ಮೇಲೆ ಉಲ್ಲೇಖಿಸಿದ ದಿನದಂದು ಶ್ರೀ ಯಾದವ ನಾರಾಯಣ ಚತುರ್ವೇದಿ ಮಂಗಲಕ್ಕೆ ಶ್ರೀಕರಣದ ಕಲಿಯಣ್ಣನು ನೀಡಿದ ಕೊಡುಗೆಯಲ್ಲಿ 50 ಕೊಳಗ ಗದ್ದೆಯನ್ನು ಎರೆಯಣ್ಣನು ಕೊಂಡುಕೊಂಡು ಅದನ್ನು ಕೊಡೆಹಾಳ ಬಸದಿಗೆ ಸರ್ವಬಾಧಾ ಪರಿಹಾರವಾಗಿ ದಾನಮಾಡಿದುದನ್ನು ದಾಖಲಿಸುತ್ತದೆ.

ನಾಗಮಂಗಲ ತಾಲ್ಲೂಕು ಹಟ್ಟಣ ಗ್ರಾಮದ ವೀರಭದ್ರಸ್ವಾಮಿ ದೇವಾಲಯದ ಒಳನಿಂತಿರುವ ಜೈನಶಾಸನವು 60 ಸಾಲುಗಳನ್ನು ಹೊಂದಿರುವ ಸುದೀರ್ಘ ಶಾಸನವಾಗಿದೆ.[62] ಈ

ಶಾಸನವು ಶತವರ್ಷ 1100 ಹೇವಿಳಂಬಿ ಸಂವತ್ಸರದ ಪುಷ್ಯಮಾಸ ಶುದ್ಧ ತೃತೀಯ ಭಾನುವಾರದಂದು ಉತ್ತರಾಯಣ ಸಂಕ್ರಾಂತಿಯ ದಿವಸ ದಾನ ನೀಡಿದುದಾಗಿ ದಾಖಲಿಸುತ್ತದೆ. ಶಾಸನದ ಮೊದಲ 33 ಸಾಲುಗಳು ಹೊಯ್ಸಳರ ವಂಶಾವಳಿಗೆ ಮೀಸಲಾಗಿದೆ. 34 ರಿಂದ 50ನೆಯ ಸಾಲಿನವರೆಗೆ ಅಂದರೆ 16 ಸಾಲುಗಳಲ್ಲಿ ದಾನಿಯಾದ ಹೊಯ್ಸಳ ಪಟ್ಟಣಸ್ವಾಮಿ ಸೋವಿಸೆಟ್ಟಿಯ ವಂಶಾವಳಿಯನ್ನೇ ದಾಖಲಿಸುತ್ತದೆ. ದಾನಿಯಾದ ಸೋವಿಸೆಟ್ಟಿಯು ಬಾಳಚಂದ್ರ ದೇವರ ಶಿಷ್ಯನಾಗಿದ್ದು ಹಟ್ಟಣದಲ್ಲಿ ಸಾಗರಸಮಾನವಾದ ಮೂರು ಕೆರೆಗಳನ್ನು ಮತ್ತು ಪಾರ್ಶ್ವಜಿನಾಲಯವನ್ನು ಕಟ್ಟಿಸಿ ಜಿನಪಾರ್ಶ್ವದೇವನ ಅಷ್ಟವಿಧಾರ್ಚನೆಗೆ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ಮುನಿಗಳ ಆಹಾರದಾನಕ್ಕೆ ಭೂಮಿಯನ್ನು ದಾನ ಮಾಡಿದ ವಿಚಾರವನ್ನು ಈ ಶಾಸನವು ದಾಖಲಿಸುತ್ತದೆ. ಸೋವಿಸೆಟ್ಟಿಯ ಪೂರ್ವಜರಲ್ಲಿ ಎಪಗಾಂಪ ಎಂಬುವನು ಮುದುಹೊಳಲಿನಲ್ಲಿ ಬಸದಿ, ಕೆರೆ, ದೇವಸ್ಥಾನ ಮತ್ತು ಮಠವೊಂದನ್ನು ಕಟ್ಟಿಸಿದನು ಎಂಬ ವಿಚಾರವು ಸಹ ಈ ಶಾಸನದಿಂದ ತಿಳಿದುಬರುತ್ತದೆ.[63]

ನಾಗಮಂಗಲ ತಾಲ್ಲೂಕಿನ ಅಳೀಸಂದ್ರದ ಶಾಸನವು ಪ್ರಾಯಶಃ ಮಂಡ್ಯ ಜಿಲ್ಲೆಯ ಜೈನ ಶಿಲಾ ಶಾಸನಗಳಲ್ಲಿ ಅತ್ಯಂತ ಸುದೀರ್ಘವಾದ ಶಾಸನವಾಗಿದೆ. ಈ ಶಾಸನವು ಹೊಯ್ಸಳ ಚಕ್ರವರ್ತಿ 3ನೇ ವೀರಬಲ್ಲಾಳನ ಕಾಲಕ್ಕೆ ಸಂದುದಾಗಿದೆ.[64] ಇದು ಭರತಮಯ್ಯ ಮತ್ತು ಬಾಹುಬಲಿ ದಂಡನಾಯಕರು ಅಣುವ ಸಮುದ್ರ ಗ್ರಾಮದಲ್ಲಿ ಕನ್ನೆ ಬಸದಿಯನ್ನು ಕಟ್ಟಿಸಿ ಆ ಬಸದಿಗೆ ದಾನ ನೀಡಿದ ವಿಷಯವನ್ನು ದಾಖಲಿಸುತ್ತದೆ. ಶಾಸನವು ಹೇಳುವಂತೆ ದಾನಿಗಳಾದ ಭರತಮಯ್ಯ ದಂಡನಾಯಕ ಮತ್ತು ಬಾಹುಬಲಿ ದಂಡನಾಯಕರಿಂದ ದೇವಕೀರ್ತಿ ಪಂಡಿತದೇವರ ಶಿಷ್ಯರಾದ ದೇವಚಂದ್ರಪಂಡಿತ ದೇವರು ಈ ದಾನವನ್ನು ಬಸದಿಯ ಪರವಾಗಿ ಸ್ವೀಕರಿಸಿದುದಾಗಿ ತಿಳಿದುಬರುತ್ತದೆ.[65] ಗುರುಶಿಷ್ಯರಿಬ್ಬರು ಮೂಲಸಂಘ ದೇಶೀಯ ಗಣ ಪುಸ್ತಕಗಚ್ಛ ಕುಂದಕುಂದಾನ್ವಯದವರಾಗಿದ್ದು ಇಂಗಳೇಶ್ವರ ಬಳಿಗೆ ಸೇರಿದವರಾಗಿದ್ದರೆಂದು ದಾಖಲಿಸಲಾಗಿದೆ. ಶಾಸನದಲ್ಲಿ ನಾಲ್ಕು ವಿವಿಧ ಕಾಲಗಳನ್ನು ದಾಖಲಿಸಿದ್ದು ಆ ಕಾಲಘಟ್ಟಗಳಲ್ಲಿ ಶಾಸನದ ದಾನಿಗಳಾದ ಪೂರ್ವಜರು ಪಡೆದ ದಾನಗಳನ್ನು ಮತ್ತು ನೀಡಿದ ದಾನಗಳನ್ನು ದಾಖಲಿಸುತ್ತದೆ. ಹೊಯ್ಸಳ ವಂಶಾವಳಿಯಿಂದ ಪ್ರಾರಂಭವಾಗುವ ಈ ಶಾಸನವು ವಿನಯಾದಿತ್ಯನು ಸೊಸೆಯೂರಿನಿಂದ ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ ಆತನ ಪತ್ನಿ ಕಳಲೆಯ ದೇವಿಯ ಮರಿಯಾನೆ ದಂಡನಾಯಕನನ್ನು ತಮ್ಮನೆಂದು ಭಾವಿಸಿ, ರಕ್ಷಿಸಿ ಆತನಿಗೆ ದೇಕವ್ವೆ ದಂಡನಾಯಕಿಯನ್ನು ಕನ್ಯಾದಾನ ಮಾಡಿ ಅದೇ ಸಮಯದಲ್ಲಿ ಅಂದರೆ ಶಕ 967 ಸರ್ವಜಿತು ಸಂವತ್ಸರದ

ಫಾಲ್ಗುಣಶುದ್ಧ ತದಿಗೆ ಸೋಮವಾರದಂದು ಕನ್ಯಾದಾನ ಸಹಿತವಾಗಿ ಭೂಮಿದಾನ ಮಾಡಿದುದನ್ನು ದಾಖಲಿಸುತ್ತದೆಯಲ್ಲದೆ ಈ ಭೂದಾನವು 'ಪ್ರಭುತ್ವ ಸಹಿತ' ನೆಲೆಯಾಗಿತ್ತೆಂದು ದಾಖಲಿಸುತ್ತದೆ. ಅಂದರೆ ಮರಿಯಾನೆ ದಂಡನಾಯಕನು ಅಸಿಂದಿನಾಡ ಸಿಂಧಗೆರೆಯ ಪ್ರಭುತ್ವವನ್ನು ಅಥವಾ ಆಡಳಿತದ ಚುಕ್ಕಾಣಿಯನ್ನು ಅಂದಿನಿಂದ ಹೊಂದಿದನೆಂದು ಭಾವಿಸಬಹುದು. ಶಾಸನದಲ್ಲಿ ಉಲ್ಲೇಖಿತವಾಗಿರುವ ಮರಿಯಾನೆ ದಂಡನಾಯಕರ ಬಗ್ಗೆ ಹ.ಕ. ರಾಜೇಗೌಡರು ಅದು ಮರಿಯಣ್ಣನಾಗಿರಬೇಕೆಂದು ಹೀಗೆ ಅಭಿಪ್ರಾಯಪಡುತ್ತಾರೆ.[66] "ಈ ಶಾಸನದಲ್ಲಿ ಬರುವ ಮರಿಯಣ್ಣ ದಂಡನಾಯಕನನ್ನು ಈವರೆಗೆ ಶಾಸನಶಾಸ್ತ್ರದಲ್ಲಿ ಕೆಲಸ ಮಾಡಿದವರೆಲ್ಲರೂ ಮರಿಯಾನೆ ದಂಡನಾಯಕ ಎಂದು ಕರೆದಿದ್ದಾರೆ. ಅನೇಕ ಕಾರಣಗಳಿಂದ ಇದು ಸರಿಯಲ್ಲವೆನಿಸುತ್ತದೆ. ನಮ್ಮ ಪ್ರಾಚೀನರ ಹೆಸರುಗಳು ಅಲ್ಲಿಂದ ಇಲ್ಲಿಯವರೆಗೆ ಪರಂಪರೆಯಲ್ಲಿ ಉಳಿದು ಬಂದಿರುವುದನ್ನು ಕಾಣಬಹುದು. ಆದರೆ ಈ ಮರಿಯಾನೆ ನಮ್ಮ ವ್ಯಕ್ತಿನಾಮ ಪರಂಪರೆಯಲ್ಲಿ ಎಲ್ಲಿಯೂ ಉಳಿದುಬಂದ ದಾಖಲೆ ಇಲ್ಲ. ಗಂಗವಂಶದ ಸ್ಥಾಪಕರಾದ ದದಿಗ, ಮಾಧವರು ಕೂಡ ಅನೇಕ ಸ್ಥಳ ಮತ್ತು ವ್ಯಕ್ತಿ ನಾಮರೂಪದಲ್ಲಿ ಉಳಿದಿದ್ದಾರೆ. ಆದರೆ ಮರಿಯಾನೆ ಎಂಬ ಹೆಸರು ನಮ್ಮ ವ್ಯಕ್ತಿನಾಮ ಪರಂಪರೆಯ ಅನುಗುಣವಾಗಿಯೂ ಇಲ್ಲಿ ಸರಿಯಾದ ಹೆಸರಿನಲ್ಲಿ ರೂಪವೂ ಆಗಿಲ್ಲ ಬಹುಶಃ ಶಾಸನ ಓದಿದವರು ತಪ್ಪಾಗಿ ಓದಿದ್ದರಿಂದ ಹೀಗಾಗಿದೆ. ಶಾಸನಗಳಲ್ಲಿ 'ಣ' ಅಕ್ಷರ ನೆ ಯಂತೆ ಕೆತ್ತಿರುವುದನ್ನು ಕಾಣಬಹುದು. ಜಯಾಭಿರಾಮನಿಗೀತನೆ ನೆಚ್ಚಿನ ಪಟ್ಟದಾನೆ ಎಂಬ ಈತನ ಬಿರುದು ಈ ರೀತಿಯ ತಪ್ಪುಗ್ರಹಿಕೆಗೆ ಕಾರಣವಾಗಿರಬೇಕು. ಮರಿಯಾನೆ ಎಂಬ ಹೆಸರು ಈಗಲೂ ಇರುವ ಈ ವಂಶಿಕರಲ್ಲಿ ಕಂಡುಬರುವುದಿಲ್ಲ. ಬದಲಿಗೆ ಮರಿಯಣ್ಣ ಚಿಕ್ಕಮರಿಯಣ್ಣ ಮಾರಣ್ಣ ಮುಂತಾದ ಹೆಸರುಗಳು ಚಾಲ್ತಿಯಲ್ಲಿರುವುದು ಕಂಡುಬರುತ್ತದೆ. ಇದಕ್ಕೆ ಪೋಷಕವಾಗಿ ಈ ಶಾಸನ ಮತ್ತು ಸುತ್ತಮುತ್ತಲಿನ ಶಾಸನಗಳಲ್ಲಿ ಮಾರಣ್ಣ, ಮರಿಯಣ್ಣ ಹೆಸರುಗಳು ದೊರೆಯುತ್ತವೆ. ಆದುದರಿಂದ ಈತ ಮರಿಯಣ್ಣ ದಂಡನಾಯಕನೆ ವಿನಃ ಮರಿಯಾನೆ ದಂಡನಾಯಕ ಎಂಬುದು ಸ್ಪಷ್ಟವಾಗುತ್ತದೆ.

ಶಾಸನದಲ್ಲಿ ಉಲ್ಲೇಖಿತವಾಗುವ ಎರಡನೇ ಕಾಲ ಶಕವರ್ಷ 1025ನೇ ಸುಭಾನು ಸಂವತ್ಸರದ ಕಾರ್ತಿಕ ಶುದ್ಧ ದಶಮಿಯಂದು ಪಡೆದ ದಾನದ ವಿವರವನ್ನು ಹೊಂದಿದೆ. ಹೊಯ್ಸಳ ಬಲ್ಲಾಳದೇವನು ಮರಿಯಾನೆ ದಂಡನಾಯಕನ ದ್ವಿತೀಯ ಪತ್ನಿ ಚಾಮವ್ವೆ ದಂಡನಾಯಕಿಯ ಪುತ್ರಿಯರಾದ ಪದುಮಲದೇವಿ, ಚಾಮಲದೇವಿ ಮತ್ತು ಬೊಪ್ಪದೇವಿಯರನ್ನು ಒಂದೇ ಹಸೆಮಣೆಯಲ್ಲಿ ಮದುವೆಯಾಗಿ ಮರಿಯಾನೆ ದಂಡನಾಯಕನಿಗೆ ಈ ಎರಡನೆಯ

ಪರ್ಯಾಯದಲ್ಲಿಯೂ ಸಿಂಧಗೆರೆಯನ್ನು ಪ್ರಭುತ್ವಸಹಿತ ನೆಲೆಯಾಗಿ ಮನಃ ಧಾರಾಪೂರ್ವಕವಾಗಿ ಕೊಟ್ಟಿದುದನ್ನು ದಾಖಲಿಸಿದೆ.[67]

ಶಾಸನದ ಮೂರನೆಯ ಕಾಲವು ಶಕ 1105 ಶುಭಕೃತ್ ಸಂವತ್ಸರ, ಮಾರ್ಗಶಿರ ಶುದ್ಧ ಒಂದು ಸೋಮವಾರದಂದು ದಾನ ನೀಡಿದುದನ್ನು ದಾಖಲಿಸುತ್ತದೆ. ಇದು ಕ್ರಿ.ಶ. 1182ರ ಅಕ್ಟೋಬರ್ 30ಕ್ಕೆ ಸರಿಹೊಂದುತ್ತದೆ. ಮರಿಯಾನೆ ದಂಡನಾಯಕನ ಭಾವಮೈದುನ ಗಂಗರಾಜ ಈತನಿಗೆ ಬೊಪ್ಪ ಅಥವಾ ಏಚರಾಜನೆಂಬ ಮಗನಿದ್ದ. ಏಚರಾಜನಿಗೆ ಮರಿಯಾನೆ ಮತ್ತು ಭರತೇಶ್ವರರೆಂಬ ಮೈದುನರಿದ್ದು ಅವರು ಅಂದರೆ ಮರಿಯಾನೆಯು ಜಕ್ಕಲೆಯನ್ನು ಭರತೇಶ್ವರ ಹರಿಯಲೆಯನ್ನು ಮದುವೆಯಾಗಿದುದಲ್ಲದೆ ಇವರಿಬ್ಬರು ಹೊಯ್ಸಳರ ವಿಷ್ಣುವರ್ಧನನ ಅಧಿಕಾರಾವಧಿಯಲ್ಲಿ ಸರ್ವಾಧಿಕಾರಿಯಾಗಿ, ಮಾಣಿಕ ಭಂಡಾರಿಗಳಾಗಿ ಅಧಿಕಾರವನ್ನು ನಡೆಸುತ್ತಿದ್ದರೆಂದು ತಿಳಿದುಬರುತ್ತದೆ.[68] ಈ ಇಬ್ಬರು ದಂಡನಾಯಕರು ತಮ್ಮ ಮಕ್ಕಳಿಗೆ ಹೊಯ್ಸಳ ವಿಷ್ಣುವರ್ಧನನ ಹೆಸರಿಟ್ಟಿದುದನ್ನು ಅರಿತು ಅಸಿಂದಿನಾಡ ಸಿಂಧಗೆರೆಯ ಭಾಗವಳ್ಳಿ, ಕಲ್ಕುಣಿನಾಡ ದಿಂಡಿಗನಗೆರೆ ಗ್ರಾಮಗಳನ್ನು ಅವರಿಗೆ ದಾನ ನೀಡಿದುದಾಗಿ ದಾಖಲಿಸುತ್ತದೆ. ಇದೇ ಹೊಯ್ಸಳನಾಯಕರುಗಳಿಗೆ ಹೊಯ್ಸಳ ವಿಷ್ಣುವರ್ಧನನ ಮಗ ನರಸಿಂಹದೇವನು ದಾನ ನೀಡಿದುದನ್ನು ಸಹ ಶಾಸನವು ದಾಖಲಿಸುತ್ತದೆ.

ಅಂತಿಮವಾಗಿ ಶಕ 1106 ಶೋಭಕೃತ ಸಂವತ್ಸರದ ಪುಷ್ಯ ಶುದ್ಧ ದಶಮಿ ಸೋಮವಾರ ಉತ್ತರಾಯಣ ಸಂಕ್ರಮಣದಲ್ಲಿ ಶ್ರೀಮನ್ ಮಹಾಪ್ರಧಾನ ಭರತಮಯ್ಯ ದಂಡನಾಯಕ ಬಾಹುಬಲಿ ದಂಡನಾಯಕರು ಬಲ್ಲಾಳದೇವರಿಂದ ಧಾರಾಪೂರ್ವಕವಾಗಿ ದಾನಪಡೆದು ಅದನ್ನು ಶ್ರೀ ಮೂಲಸಂಘದ ದೇಶೀಯಗಣದ ಪುಸ್ತಕಗಚ್ಛದ ಕುಂದಾಕುಂದಾನ್ವಯದ ಇಂಗಳೇಶ್ವರ ಸಮೀಪ ಇರುವ ಕೊಲ್ಲಾಪುರದ ಸಾವಂತ ಬಸದಿಯ ಗುರುಪರಂಪರೆಗೆ ಸೇರಿದ ಶ್ರೀ ಮಾಘನಂದಿ ಸಿದ್ಧಾಂತದೇವರ ಶಿಷ್ಯರೂ ಆದ ಶ್ರೀ ಗಂಡಮುಕ್ತ ಸಿದ್ಧಾಂತದೇವರ ಶಿಷ್ಯರಾದ ದೇವಕೀರ್ತಿ ಪಂಡಿತ ದೇವರು ಅವರ ಶಿಷ್ಯರಾದ ಶ್ರೀ ದೇವಚಂದ್ರ ಪಂಡಿತ ದೇವರಿಗೆ ಅಣುವ ಸಮುದ್ರದ ತನ್ನ ಬಸದಿಗೆ ಚಾಕೇಯನಹಳ್ಳಿಯ ಬಸದಿಗೆ, ದೇವಪೂಜೆಗೆ, ಆಹಾರದಾನಕ್ಕೆ ಸಿದ್ಧಾಯವಾಗಿ 60ಹೊನ್ನುಗಳ ಉತ್ಪತ್ತಿಯ ಭೂಮಿಯನ್ನು ದಾನ ಕೊಟ್ಟಿದುದನ್ನು ದಾಖಲಿಸುತ್ತದೆ.[69]

ಮದ್ದೂರು ತಾಲ್ಲೂಕು ಆಬಲವಾಡಿ ಗ್ರಾಮದ ಮಧ್ಯಭಾಗದಲ್ಲಿ ದೊರೆತ ಕಂಡುಗಲ್ಲಿನ ಮೇಲಿರುವ ಶಾಸನವು ಹೊಯ್ಸಳ ವಿಷ್ಣುವರ್ಧನನ ಬಿರುದುಗಳಾದ ಮಲೆಪೆರಳುಗೊಂಡ, ವೀರಗಂಗ ಇತ್ಯಾದಿಗಳನ್ನು ಹೊಂದಿದ್ದು ಉಳಿದ ಇತರೆ ಯಾವುದೇ ವಿವರಗಳನ್ನು ಇದು

ದಾಖಲಿಸುವುದಿಲ್ಲ. ಬಹುತೇಕ ವಿವರಗಳು ನಷ್ಟವಾಗಿವೆ. ಶಾಸನದ ಲಿಪಿ ಆಧಾರದ ಮೇಲೆ ಇದನ್ನು 12ನೆಯ ಶತಮಾನದ ಶಾಸನವೆಂದು ಗುರುತಿಸಲಾಗಿದೆ.[70]

ಪಾಂಡವಪುರ ತಾಲ್ಲೂಕು ಬಳೆ ಅತ್ತಿಗುಪ್ಪೆಯ ಮಾರಿಗುಡಿ ಮುಂದಿರುವ ಶಾಸನವು ಸಮಸ್ತ ಸಿದ್ಧಾಂತ ಚಕ್ರವರ್ತಿಗಳು ತ್ರಿವಿಷ್ಟಿತಪಾವೇಷ್ಟಿತ ಕೀರ್ತಿಗಳು ಆದ ಕುಂದಕುಂದಾನ್ವಯದ ಮುನಿಗಳಾದ ಶ್ರೀಮನ್ ನಯಕೀರ್ತಿ ದೇವರನ್ನು ಪೂಜಿಸಿ ಯಾರೊ ಒಬ್ಬ ಶ್ರಾವಕ ದಾನಕೊಟ್ಟ ವಿವರಗಳನ್ನು ದಾಖಲಿಸಲು ಹೊರಟಿರುವ ಶಾಸನದ ಭಾಗವಿದಾಗಿದ್ದು ವಿವರಗಳು ನಷ್ಟವಾಗಿವೆ.[71] ಶಾಸನವು ದಾನಿಯನ್ನು ಸತ್ಯಾರಾಧಕ, ಅನೇಕ ಗುಣಗಣಾಂಕಿತ, ಪುಣ್ಯಪುಂಜಿತ, ಪ್ರಣಥ, ಮಹಾಧರ್ಮಿ, ದೇಸಿಯಭರಣ ಮತ್ತು ಜಿನಚರಣ ಸರಣಂ ಎಂದು ಹೊಗಳುತ್ತದೆ.

ನಾಗಮಂಗಲ ತಾಲ್ಲೂಕು ಕಂಬದಹಳ್ಳಿಯ ಜೈನಬಸದಿಯ ಹೊರಪ್ರಕಾರದಲ್ಲಿ ನಿಂತಿರುವ ಶಾಸನವು ತಾರಣ ಸಂವತ್ಸರದ ಆಷಾಢ ಶುದ್ಧ ಒಂದರಲ್ಲಿ ನಿಷಿಧಿ ಎಂಬ ಅರ್ಥಕೊಡುವ ಮೂರು ಸಾಲಿನ ಸಾಲುಗಳನ್ನು ಹೊಂದಿದೆ.[72] ಈ ನಿಷಿಧಿಶಾಸನವು ಪುಸ್ತಕಗಚ್ಛದ ದೇಶೀಯ ಗಣದ ಮೂಲಸಂಘದ ಕುಂದಕುಂದನ್ವಯದ ಯತಿಗಳಾದ ಪ್ರಭಾಚಂದ್ರ ಸಿದ್ಧಾಂತಿಗಳ ಶಿಷ್ಯಯರಾದ ಕಂತಿ ಜಕ್ಕವ್ವೆ ಮತ್ತು ರುಕ್ಕುಮವ್ವೆಯವರ ನಿಷಧಿಯನ್ನು ಸಾರುವ ವಿವರಗಳನ್ನು ಒಳಗೊಂಡಿರುವ ಶಾಸನದಲ್ಲಿ ಇವರ ವಿವರಗಳು ಲಭ್ಯವಿಲ್ಲ. ಕಂಬದಹಳ್ಳಿಯ ಮತ್ತೊಂದು ನಿಶಿಧಿ ಶಾಸನವು ಏಕವೀರ ಭಟ್ಟಾರನ ಶಿಷ್ಯನೂ, ಪುರುಷೋತ್ತಮಯ್ಯನ ಮಗನು ಆದ ವ್ಯಕ್ತಿಯೋರ್ವನು ಸಮಾಧಿಮರಣವನ್ನಪ್ಪಿದನೆಂದು ಹೇಳುತ್ತದೆ.[73]

ಮದ್ದೂರು ತಾಲ್ಲೂಕು ಹಾಗಲಹಳ್ಳಿಯ ಜೈನ ಶಾಸನವು ತಿಪ್ಪೂರು ತೀರ್ಥಕ್ಕೆ ಸೇರಿದ ಹಾದರವಾಗಿಲು (ಹಾಗಲಹಳ್ಳಿ) ತೆಳ್ಳರಕುಲದ ಭೂಮಿಕಾಶಿ ಚಾಮಗಾವುಂಡನು ತನ್ನ ಗುರುಗಳಾದ ಮೂಲಸಂಘ, ಕಾನೂರುಗಣ ತ್ರಿಂತ್ರಿಣಿಗಚ್ಛದ ಆದಿನಾಥ ಪಂಡಿತದೇವರು ಮತ್ತು ಶೃತಕೀರ್ತಿ ಪಂಡಿತ ದೇವರ ಸಮ್ಮತಿಯಿಂದ ಕಲ್ಲುಗಾಣ ಮಾಡಿಸಿದ ವಿಷಯವನ್ನು ಪ್ರಸ್ತಾಪಿಸುವ ಜೊತೆಗೆ ಮುನಿಗಳಾದ ಕುಮುದಚಂದ್ರ ಪಂಡಿತದೇವರ ಮತ್ತು ಅವರ ಶಿಷ್ಯ ಮೇಘಚಂದ್ರ ಸಿದ್ಧಾಂತ ದೇವರ ಶಿಷ್ಯರನ್ನು ಉಲ್ಲೇಖಿಸುತ್ತದೆ. ದೇವರಶಿಷ್ಯ ಪಂಡಿತೋಜ ಶಾಸನದ ಕಾಲ ಶಕ 1627ರ ಈಶ್ವರ ಮಾಘಶುದ್ಧ ಹದಿಮೂರನೇ ಸೋಮವಾರವಾಗಿದೆ.

ತೇದಿರಹಿತವಾದ ನಾಗಮಂಗಲ ತಾಲ್ಲೂಕು ಕಂಬದಹಳ್ಳಿಯ ಶಾಂತೀಶ್ವರ ಪಾಳುಬಸದಿಯ ರಂಗಮಂಟಪದ ಈಶಾನ್ಯಕಂಬ ಬೊದಿಗೆಯ ಪಟ್ಟಿಗೆಯ ಸುತ್ತಲೂ ಇರುವ ಶಾಸನವು

ಯಮನಿಯಮ, ಸ್ವಾದ್ಯಾಯ, ಧ್ಯಾನಧಾರಣ ಮನೋನುಷ್ಠಾನ, ಜಪ ಸಮಾಧಿಶೀಲ ಗುಣ ಸಂಪನ್ನರುಗಳಾದ ದೇವತಾ ಭಕ್ತರುಗಳು ಲಕುಳೀಶ್ವರ ಸಿದ್ಧಾಂತ ಕುಟುಂಬದ ನಾಥ ಪಂಥೀಯರು ಆದ ಸಪ್ತಕೋಟಿ ಶ್ರೀ ರುದ್ರರು ಮೂಲ ಸಂಘ ದೇಶೀಯ ಗಣ ಪುಸ್ತಕ ಗಚ್ಛದ ಕಂಬದಹಳ್ಳಿ ತೀರ್ಥದ ಜಿನಾಲಯವೊಂದಕ್ಕೆ ಎಕ್ಕೋಟಿ ಜಿನಾಲಯವೆಂದು ಹೆಸರಿಟ್ಟು ಪಂಚಭೇರಿ ಮಹಾಶಬ್ಧಗಳನ್ನು ಎಕ್ಕೋಟಿಜಿನಾಲಯಕ್ಕೆ ಕೊಟ್ಟರಲ್ಲದೆ ಅದನ್ನು ಅನಾದರಿಸಿದವರು ಶಿವದ್ರೋಹಿಗಳೆಂದು ದಾಖಲಿಸುತ್ತದೆ.[74]

ಮದ್ದೂರು ತಾಲ್ಲೂಕಿನ ಅರೆತಿಪ್ಪೂರು ಗ್ರಾಮದ ಜಿನಬಿಂಬದ ಪೀಠದ ಮೇಲಿನ ಶಾಸನವು ಕಾನೂರು ಗಣದ ತಿಲಕನೆಂದು ಹೆಸರಾದ ಬಾಳಚಂದ್ರದೇವರು ತಮ್ಮ ಗುರುಗಳ ಪರೋಕ್ಷ ವಿನಯಕ್ಕೆ ಪ್ರತಿಷ್ಠೆ ಮಾಡಿಸಿದ ಪಾರ್ಶ್ವನಾಥ ವಿಗ್ರಹದ ಉಲ್ಲೇಖ ಹೊಂದಿರುವುದಾಗಿದೆ.[75] ಈ ಶಾಸನದಲ್ಲಿ ಬಾಳಚಂದ್ರದೇವನು ಉಭಯ ಭಾಷಾ ಚಕ್ರವರ್ತಿ ಎಂದು ಹೆಸರಾದ ಕವಿಕಂದರ್ಪದೇವ ಮತ್ತು ಆತನ ಪತಿ ಸೊನ್ನಾದೇವಿಯರ ಮಗನೆಂದು ತಿಳಿದುಬರುತ್ತದೆ.[76] ಇದೇ ತಿಪ್ಪೂರಿನಲ್ಲಿ ದೊರೆತಿರುವ ಮತ್ತೊಂದು ಶಾಸನದಲ್ಲಿ 'ತಿಪ್ಪೂರ ಕವಿಕಂದರ್ಪ ಶಿಷ್ಯ ಬಾಳಚಂದ್ರ ದೇವರ ಮಕ್ಕಳು' ಎಂದಿದೆ.[77] ಎರಡೂ ಶಾಸನಗಳಲ್ಲಿ ಬಾಳಚಂದ್ರಾದೇವನನ್ನು ಕಂದರ್ಪನ ಮಗನೆಂದು ಗುರುತಿಸಲಾಗಿದೆ. ಆದರೆ ಒಂದು ಶಾಸನ ಕಾಣೂರುಗಣತಿಲಕನೆಂದು ಆತನ ಬಿರುದನ್ನು ದಾಖಲಿಸುತ್ತದೆ. ಈ ಹಂತದಲ್ಲಿ ಬಾಳಚಂದ್ರನು ಜೈನಮುನಿ ದೀಕ್ಷೆಯನ್ನು ಪಡೆದಿದ್ದಾನೆ ಅಥವಾ ಇಲ್ಲವೇ? ಎಂಬ ಸಂದೇಹವೇರ್ಪಡುತ್ತದೆ. ತಿಪ್ಪೂರಿನಲ್ಲಿಯೇ ದೊರೆಯುವ ಮತ್ತೊಂದು ಶಾಸನದಲ್ಲಿ ಕೂಡ ಆತನ ದೀಕ್ಷಾಗುರುಗಳ ಹೆಸರು ಉಲ್ಲೇಖವಾಗಿರದ ಕಾರಣ ಕಂದರ್ಪನ ಮಗ ಬಾಳಚಂದ್ರದೇವನು ಕಾಣೂರುಗಣವನ್ನು ಸಲಹಿದುದರ ಗೌರವಾರ್ಥ ಆತನಿಗೆ 'ಕಾಣೂರುಗಣ ತಿಲಕ' ನೆಂದು ಹೆಸರು ಬಂದಿದೆ, ಎಂಬ ಜಿಜ್ಞಾಸೆ ಲಭ್ಯವಾಗುತ್ತದೆ. ಸದ್ಯದ ಆಕರಗಳ ಹಿನ್ನೆಲೆಯಲ್ಲಿ ಕವಿಕಂದರ್ಪನು ಬಾಳಚಂದ್ರ ದೇವನ ತಂದೆ ಮತ್ತು ಗುರುವೆಂದು ಹೇಳಲು ಸಾಧ್ಯವಿದೆ.

ನಾಗಮಂಗಲ ತಾಲ್ಲೂಕು ಕಳಗೆರೆಯ ಕೆರೆಯಬಳಿ ಸ್ಥಾಪಿಸಿರುವ ಶಾಸನ ಸ್ತಂಭವು ಮೂರನೆ ನರಸಿಂಹದೇವನ ಕಾಲದ್ದಾಗಿದ್ದು ಪ್ರಾರಂಭದ ಹದಿನಾಲ್ಕು ಸಾಲುಗಳು ಜಿನಸ್ತುತಿಗೆ ಮತ್ತು ಹೊಯ್ಸಳ ವಂಶಾವಳಿಗೆ ಮೀಸಲಾಗಿದೆ.[78] ಅಲ್ಲದೆ ಮಾಘನಂದಿ ಸಿದ್ಧಾಂತ ದೇವರ ಗುರುಪರಂಪರೆಯನ್ನು ಇದು ಒಳಗೊಂಡಿದೆ. ಆ ಗುರುಪರಂಪರೆಯನ್ನು ಹೇಗೆ ದಾಖಲಿಸಬಹುದು.

ವರ್ಧಮಾನ ಭಟ್ಟಾರಕರು

ಶ್ರೀಧರಾಚಾರ್ಯರು
ದೇವನಂದಿ ತ್ರೈವಿದ್ಯಾಧರರು
ವಾಸುಪೂಜ್ಯ ಸಿದ್ಧಾಂತದೇವರು
ಶುಭಚಂದ್ರ
ಅಭಯಚಂದ್ರ
ಅರ್ಹನಂದಿ ಸಿದ್ಧಾಂತಿಗಳು
ದೇವಚಂದ್ರ ಸಿದ್ಧಾಂತಿಗಳು
ಅಷ್ಟೋಪವಾಸಿ ಕನಕ ಚಂದ್ರದೇವರು
ನಯಕೀರ್ತಿ ಚಂದ್ರಾರ್ಯರು
ಮಾಸೋಪವಾಸಿ ರವಿಚಂದ್ರ ಸಿದ್ಧಾಂತಿಗಳು
ಹರಿಯನಂದಿ ಸಿದ್ಧಾಂತಿಗಳು
ಶೃತಕೀರ್ತಿ ತ್ರೈವಿಧ್ಯಾಧರರು
ವೀರನಂದಿ ಸಿದ್ಧಾಂತದೇವರು
ಗಂಡಮುಕ್ತ ನೇಮಿಚಂದ್ರ ಭಟ್ಟಾರಕದೇವ
ವರ್ಧಮಾನಮುನೀಂದ್ರರು
ಶ್ರೀಧರಾಚಾರ್ಯರು
ವಾಸುಪೂಜ್ಯ ತ್ರೈವಿದ್ಯಾದೇವರು
ಉದಯಚಂದ್ರ ಸಿದ್ಧಾಂತದೇವರು
ಕುಮುದ ಚಂದ್ರ ಭಟ್ಟಾರಕರು
ಮಾಘನಂದಿ ಸಿದ್ಧಾಂತ ಚಕ್ರವರ್ತಿಗಳು

ಈ ಯತಿಪರಂಪರೆಯು ಮೂಲಸಂಘದ ಬಲತ್ಕಾರಗಣಕ್ಕೆ ಸೇರಿದುದಾಗಿದ್ದು ರಾಜನಾದ ಮೂರನೇ ನರಸಿಂಹನು ದೋರಸಮುದ್ರದ ತ್ರಿಕೂಟ ರತ್ನತ್ರಯ ಜಿನಾಲಯದ ಶಾಂತಿನಾಥ ದೇವರ ಅಂಗಭೋಗ, ರಂಗಭೋಗ, ಆಹಾರದಾನ ಮುಂತಾದ ಧರ್ಮಕಾರ್ಯಗಳಿಗೆ ನೀಡಿದ ದಾನವನ್ನು ದಾಖಲಿಸುತ್ತದೆ.[79]

ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಗ್ರಾಮದ ಬಸ್ತಿದಿಬ್ಬದ ಪಾರ್ಶ್ವನಾಥ ಜಿನಬಿಂಬದ ಪೀಠದ ಮೇಲಿರುವ ಶಾಸನವು ದ್ರಮಿಳಸಂಘದ ನಂದಿ ಸಂಘದ ಅರುಂಗಳಾನ್ವಯದ ಎಂಬ ಒಂದು ಸಾಲಿನ ಅಪೂರ್ಣ ಶಾಸನವಾಗಿದ್ದು ಯಾವ ವಿವರವನ್ನು ದಾಖಲಿಸಿಲ್ಲ.[80]

ಮಳವಳ್ಳಿ ತಾಲ್ಲೂಕು ಹೊಸ್ಕೂರಿನಲ್ಲಿ ದೊರೆತಿರುವ ಕ್ರಿ.ಶ. 1265ರ ಶಾಸನವು ಹೊಯ್ಸಳ ವೀರ ಬಲ್ಲಾಳನ ಕಾಲದಲ್ಲಿ ತಲಕಾಡಿನ ಆನೆಬಸದಿಯ ಚೆಟ್ಟೊಡೆಯನಿಗೆ ಬಣ್ಣೆಹಳ್ಳಿಯ ಮಾರಗೌಡನ ಮಗ ಮಂಚೆಗೌಡ ಮಾದಿಗೌಡ ಮುಂತಾದವರು ನೀಡಿದ ವಿವರವನ್ನು

ದಾಖಲಿಸುತ್ತದೆ.[81] ಇದೇ ಊರಿನ ಮತ್ತೊಂದು ಶಾಸನವು ಕ್ರಿ.ಶ. 1313ರಲ್ಲಿ ಹೊಯ್ಸಳ ವೀರ ಬಲ್ಲಾಳನು ಆಳ್ವಿಕೆ ಮಾಡುತ್ತಿದ್ದಾಗ ತಲಕಾಡಿನ ಆನೆ ಬಸದಿಯ ಆದಿದೇವರ ಸೇವೆಗಾಗಿ ಏಳುಪುರ ಪಂಚಮಠಸ್ಥಾನಪತಿಗಳ ವಶದಲ್ಲಿ ಕೆಲವು ಭೂಮಿಗಳನ್ನು ಹೊಸಗೂರಿನ ಮಾರಿಗೌಡ, ಕಲಗೌಡ, ಉಳುವೆಗೌಡನ ಮಗ ರಯಗೌಡ ಹಾಗೂ ಮೊದಲಾದ ಗವುಡಗಳು ದತ್ತಿಯಾಗಿ ಕೊಟ್ಟು ಸೀಮಾಂತ ಹಾಕಿಸಿದ ಮಾಹಿತಿಯನ್ನು ದಾಖಲಿಸುತ್ತದೆ.[82]

ಶ್ರೀರಂಗಪಟ್ಟಣ ತಾಲ್ಲೂಕು ಬಸ್ತಿಪುರ ಗ್ರಾಮದ ಸರಹದ್ದಿನ ಬಂಡೆಯ ಮೇಲಿರುವ ಶಾಸನವು ವಾಸುಪೂಜ್ಯದೇವರ ಶಿಷ್ಯರಾದ ಸಕಳಚಂದ್ರದೇವರ ಖ್ಯಾತಿಯನ್ನು ಸಾಧನೆಗಳನ್ನು ವಿವರಿಸುವುದಲ್ಲದೆ[83] ಅವರು ಮೂಲಸಂಘ, ಕಾಣೂರುಗಣ, ತಿಂತ್ರಿಣಿಗಚ್ಛ, ಕುಂದಕುಂದಾನ್ವಯದವರಾಗಿದ್ದು ಇವರ ಕಾಲಘಟ್ಟದಲ್ಲಿ ಕೂರಿಗೆ ಹಳ್ಳಿಯ ಪ್ರಭುಗಳು ಗವುಡಕುಲದ ಕೇತಗವುಡ, ರಾಮಗವುಡ, ಶಂಭುಗವುಡ ಮತ್ತು ಮಾದಿಗವುಡ ಇವರುಗಳು ಪಾರ್ಶ್ವನಾಥ ದೇವರ ಜಿನಾಲಯವನ್ನು ನಿರ್ಮಾಣ ಮಾಡಿ ಪಾರ್ಶ್ವನಾಥದೇವರ ಅಮೃತಪಡಿಗೆ ಹತ್ತುಕೊಳಗ ಬೆದ್ದಲು ಗದ್ದೆಯನ್ನು ದಾನಮಾಡಿದುದನ್ನು ದಾಖಲಿಸುತ್ತದೆ.

ಹೊಸಹೊಳಲುವಿನ ಪಾರ್ಶ್ವನಾಥ ಬಸದಿಯ ಪದ್ಮಾವತಿ ವಿಗ್ರಹದ ಪೀಠದ ಮೇಲೆ 13ನೆಯ ಶತಮಾನದೆಂದು ಲಿಪಿಶೈಲಿಯ ಮೇಲೆ ಗುರುತಿಸಿರುವ ಜಿನಶಾಸನ 'ಶ್ರೀ ವಿಜಯಕೀರ್ತಿ ದೇವರ ಶಿಷ್ಯರು' ಎಂದು ದಾಖಲಾಗಿದ್ದು, ಇದನ್ನು ವಿಗ್ರಹ ನಿರ್ಮಿಸಿದಾತನ ಹೆಸರಿರಬಹುದೆಂದು ಅಭಿಪ್ರಾಯಪಡುತ್ತಾರಾದರೂ, ಈ ಜೈನ ಬಸದಿಯಲ್ಲಿನ ಮುನಿ ಶ್ರೀ ವಿಜಯಕೀರ್ತಿ ಎಂಬುದು ಪರೋಕ್ಷವಾಗಿ ಖಚಿತವಾಗುತ್ತದೆ.[84] ಇದೇ ಗ್ರಾಮದ ಭೈರವೇಶ್ವರ ದೇವಾಲಯದ ಆವರಣದಲ್ಲಿರುವ ಜೈನಶಿಲ್ಪದ ಪೀಠ ಒಂದರ ಮೇಲೆ ಎರಡು ಸಾಲಿನ ಕ್ರಿ.ಶ. 12ನೆಯ ಶತಮಾನದ ಶಾಸನವಿದ್ದು ಅದು ಮೂಲಸಂಘ, ದೇಶೀಯ ಗಣ ಪುಸ್ತಕಗಚ್ಛ ಕುಂದಕುಂದಾನ್ವಯದ ಶುಭಚಂದ್ರಸಿದ್ಧಾಂತ ದೇವರು, ಶ್ರೀ ಕುಕ್ಕುಟಾಸನ ಮಲಾರಿದೇವರ ಶಿಷ್ಯರಾಗಿದ್ದು, ಶುಭಚಂದ್ರ ಸಿದ್ಧಾಂತದೇವರ ಮುನಿಯ ಗುಡ್ಡ ನೊಳಂಬ ಸೆಟ್ಟಿಯು ಶಿಲ್ಪವನ್ನು ಪ್ರತಿಷ್ಠಾಪಿಸಿದಂತೆ ದಾಖಲಿಸುತ್ತದೆ.[85] ಇದೇ ಬಸದಿಯ ಹಾರದ ಮೇಲಿನ ದೇವಕೋಷ್ಠಕದಲ್ಲಿರುವ ಪಾರ್ಶ್ವನಾಥ ವಿಗ್ರಹದ ಪೀಠದ ಮೇಲಿರುವ ಶಾಸನವು ನಯಭದ್ರರನ್ನು ನೆಯಭದ್ರ ಎಂದು ದಾಖಲಿಸುತ್ತದೆ. ಇದು ಲಿಪಿಶಾಸ್ತ್ರದ ಆಧಾರದ ಮೇಲೆ ಕ್ರಿ.ಶ. 15–16ನೆಯ ಶತಮಾನದ್ದೆಂದು ಗುರುತಿಸಲಾಗಿದೆ.[86]

ಬಸ್ತಿಪುರ ಗ್ರಾಮದ ಸರಹದ್ದಿನ ಬಂಡೆಯ ಮೇಲಿರುವ ಮತ್ತೊಂದು ತ್ರುಟಿತ ಶಾಸನ, ಅಕಳಂಕ, ವಾಕ್ಚಂದ್ರಿ, ಚಂದ್ರಕೀರ್ತಿ, ದಿಗಂಬರ ಪದಗಳನ್ನು ದಾಖಲಿಸುತ್ತದೆ. ಚಂದ್ರಕೀರ್ತಿ ಮುನಿಯ ದಿಗಂಬರ ಪಂಥದ ಭಟ್ಟಾರಕ ಪರಂಪರೆಯವರಾಗಿದ್ದಿರಬೇಕು. ಮಿಕ್ಕ ಯಾವ ವಿವರಗಳನ್ನು ಶಾಸನವು ದಾಖಲಿಸುವುದಿಲ್ಲ.[87]

ಶ್ರೀರಂಗಪಟ್ಟಣದ ಆದೀಶ್ವರ ಬಸದಿಯ ಮುಖಮಂಟಪದ ಕಲ್ಲಿನ ಮೇಲಿರುವ ಶಾಸನವೊಂದು ಕ್ರಿ.ಶ. 1666 ಜೂನ್ 28ರಲ್ಲಿ ಹೊರಡಿಸಿದ್ದು ಶ್ರೀರಂಗಪಟ್ಟಣದ ಆದೀಶ್ವರ ಭಂಡಾರಕ್ಕೆ ಚಾರುಕೀರ್ತಿ ಪಂಡಿತಾಚಾರ್ಯರ ಶಿಷ್ಯರಾದ ಪಾಯಣ್ಣ ಮತ್ತು ಮತ್ತೊಬ್ಬ ವ್ಯಕ್ತಿಯ 288 ಕಂಠಿರಾಯ ನರಸರಾಜ ಗದ್ಯಾಣವನ್ನು 383 ಕಂಠೀರಾಯ ಗುಳಿಗೆಗಳನ್ನು ಅಷ್ಟಾಹ್ನೀಕ ಧರ್ಮಾಚರಣೆಗೆ ನೀಡಿ ಈ ವ್ರತವನ್ನು ಶ್ರೀ ಸೀತಾಳ ಮಳಿಗೆಯ ಸಮಸ್ತರು ನೆರವೇರಿಸಬೇಕೆಂದು ನಿರ್ದೇಶಿಸುತ್ತದೆ.[88]

ನಾಗಮಂಗಲ ತಾಲ್ಲೂಕು ಬೆಳ್ಳೂರಿನ ವಿಮಲನಾಥ ಬಸದಿಯ ಪಡಸಾಲೆಯ ಗೋಡೆಯ ಮೇಲಿರುವ ಶಾಸನವು ಮೈಸೂರು ಅರಸ ದೇವರಾಜ ಒಡೆಯರ ಕಾಲದ್ದಾಗಿದ್ದು, ಡಿಳ್ಳಿ, ಕೊಲ್ಲಾಪುರ, ಜಿನಕಂಚಿ, ಪೊನಗೊಂಡೆ, ಸಿಂಹಸನಾಧೀಶ್ವರರೆಂದು ಖ್ಯಾತರಾದ ಶ್ರೀ ಲಕ್ಷ್ಮಿಸೇನಾ ಭಟ್ಟಾರಕರ ಆಣತಿಯ ಮೇರೆಗೆ ಮೈಸೂರಿನ ದೇವರಾಜ ಒಡೆಯರಿಂದ ದಾನವಾಗಿ ಪಡೆದ ಭೂಮಿಯಲ್ಲಿ ಹುಲಿಕಲ್ಲ ಪದುಮಣ್ಣಶೆಟ್ಟರ ಮಗ ದೊಡ್ಡಣ್ಣಶೆಟ್ಟರು ಅವರ ಪುತ್ರರಾದ ಸಕ್ಕರೆಯ ಶೆಟ್ಟರು ಈ ವಿಮಲನಾಥದೇವಾಲಯವನ್ನು ಕಟ್ಟಿಸಿದರೆಂದು ದಾಖಲಿಸುತ್ತದೆ.[89] ಇದೇ ಬಸದಿಯ ಮತ್ತೊಂದು ಪೀಠದಲ್ಲಿರುವ ಶಾಸನವು ಸಮಂತಭದ್ರರ ಶಿಷ್ಯರಾದ ಲಕ್ಷ್ಮಿಸೇನ ಭಟ್ಟಾರಕರು ಈ ಮಂದಿರದ ಮೂರ್ತಿಯನ್ನು ಪ್ರತಿಷ್ಠಾಪಿಸಿದಂತೆ ಸಂಸ್ಕೃತದಲ್ಲಿ ದಾಖಲಿಸುತ್ತದೆ.[90]

ಕಂಬದಹಳ್ಳಿಯ ಆಗ್ನೇಯ ದಿಕ್ಕಿನಲ್ಲಿರುವ ದೊಣ್ಣೇಬೋರನ ಅರೆಯ ಮೇಲಿರುವ ಶಾಸನವು ಕಂಬದಹಳ್ಳಿ ಸಮೀಪ ಬೆಟ್ಟದ ಮೇಲಿರುವ ಚಂದ್ರಪ್ರಭ ತೀರ್ಥಂಕರರ ಅರ್ಚನೆಗೆ ಸಮರ್ಪಿಸಿದ ಕೋಮಲಕಟ್ಟೆಯನ್ನು ದಾಖಲಿಸುತ್ತದೆ.[91]

ಮಂಡ್ಯ ತಾಲ್ಲೂಕು ಗುತ್ತಲಿನ ಅರ್ಕೇಶ್ವರ ದೇವಾಲಯದಲ್ಲಿ ದೊರೆತಿರುವ ಹೊಸ ನಿಷಿಧಿ ಶಾಸನವು ಗಂಗರಾಜಕುಮಾರ ವಿದ್ಯಾಧರನದೆಂದು ಹೆಸರಾದವನು. ಗುತ್ತಲಿನ ಬಸದಿಯೊಂದರಲ್ಲಿ ಸಲ್ಲೇಖನ ವ್ರತವನ್ನಾಚರಿಸಿ ಕ್ರಿ.ಶ. 1134–35 ರಲ್ಲಿ ಗತಿಸಿದನೆಂಬುದನ್ನು ತಿಳಿಸುತ್ತದೆ.[92] ಈ ಶಾಸನದ ಆಧಾರದ ಮೇಲೆ ಗುತ್ತಲು ಒಂದು ಜೈನಕೇಂದ್ರವಾಗಿತ್ತೆಂದು ಹಾಗೂ ಇಲ್ಲಿ

ಬಸದಿಗಳಿದ್ದವೆಂದು ಡಾ. ಹಂಪನಾರವರು ತಮ್ಮ ಕೃತಿ ಚಂದ್ರಕೊಡೆಯಲ್ಲಿ ದಾಖಲಿಸಿದ್ದಾರೆ. ಮುಂದುವರೆದು ಗುತ್ತಲು ಗ್ರಾಮವು ಗಂಗರ ಆಳ್ವಿಕೆಯ ಕೊನೆಯ ಕಾಲಘಟ್ಟದಲ್ಲಿ ಒಂದು ಪ್ರಮುಖ ಜೈನ ಮತ್ತು ಗಂಗರ ಕೇಂದ್ರವಾಗಿತ್ತೆಂದು ದಾಖಲಿಸಿದ್ದಾರೆ.

3.2. ಶಾಸನೋಕ್ತ ಕಂತಿಯರು ಮತ್ತು ಶ್ರಾವಕಿಯರು

ಮಂಡ್ಯ ಜಿಲ್ಲೆಯ ಜೈನ ಶಾಸನಗಳಲ್ಲಿ ಹಲವಾರು ಕಂತಿಯರ ಮತ್ತು ಶ್ರಾವಕಿಯರ ಉಲ್ಲೇಖ ಕಂಡುಬರುತ್ತದೆ.[93] ಕಂತಿಯರೆಂದರೆ ಸನ್ಯಾಸ ಸ್ವೀಕರಿಸಿದ ಜೈನ ಸ್ತ್ರೀಯರು. ಶ್ರಾವಕಿಯರು ಎಂದರೆ ಜೈನ ಧರ್ಮಕ್ಕೆ ಸೇರಿದ ಗೃಹಸ್ಥ ಸ್ತ್ರೀಯರು. ನಾಗಮಂಗಲ ತಾಲ್ಲೂಕು ದೇವರಹಳ್ಳಿಯ ಶಾಸನವು ಸಗರವಂಶದ ಮರುವರ್ಮನ ಮಗಳು ಕುಂದಾಚ್ಚಿಯನ್ನು ಉಲ್ಲೇಖಿಸುತ್ತದೆ. ಈಕೆಯು ಶ್ರೀಪುರದಲ್ಲಿ ಲೋಕತಿಲಕ ಜಿನಾಲಯವನ್ನು ನಿರ್ಮಿಸಿದಳು.[94] ಈಕೆಯ ಪತಿ ಬಾಣವಂಶದ ಪರಮಗೊಳ ಬಾಣವಂಶಕ್ಕೆ ಮದುವೆಯಾದ ಕುಂದಾಚ್ಚಿಯು ಗಂಗವಾಡಿ 96000ದ ನಾಡಿನಲ್ಲಿ ಜಿನಾಲಯವನ್ನು ಕಟ್ಟಿಸಿದುದರ ಹಿನ್ನೆಲೆ ತಿಳಿದುಬರುವುದಿಲ್ಲ.

ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲುವಿನ ಶಾಸನವು ಪೊಯ್ಸಳಸೆಟ್ಟಿ ಎಂದು ಕರೆಸಿಕೊಂಡ ನೊಳಂಬಸೆಟ್ಟಿಯ ಪತ್ನಿ ಚಾವುಂಡಾಡಿಯನ್ನು ಉಲ್ಲೇಖಿಸುತ್ತದೆ.[95] ಆಕೆಯನ್ನು ದೇಮಿಕಬ್ಬೆಯೆಂದು ಸಹ ಕರೆಯಲಾಗುತ್ತಿತ್ತೆಂದು ಶಾಸನವು ಉಲ್ಲೇಖಿಸುತ್ತದೆ. ಪ್ರಾಯಶಃ ಚಾವುಂಡಾಂಬೆ ದೇಮಿಕಬ್ಬೆಯಾಗಿ ಪರಿವರ್ತಿತವಾಗಿರಬೇಕು. ಈಕೆಯು ಕತ್ತರಿಘಟ್ಟದಲ್ಲಿ ತ್ರಿಕೂಟ ಜಿನಾಲಯವನ್ನು ನಿರ್ಮಿಸಿದುದಾಗಿ ಅಲ್ಲದೆ ಅದರ ಬಳಕೆಗೆ ಎರಡು ಗ್ರಾಮಗಳನ್ನು ಎರಡು ಗಾಣಗಳನ್ನು ಎರಡು ತೋಟಗಳನ್ನು ಮತ್ತು ಎರಡು ಮನೆಗಳನ್ನು ದಾನ ಮಾಡಿದ ವಿವರ ತಿಳಿದುಬರುತ್ತದೆ.

ಕೃಷ್ಣರಾಜಪೇಟೆ ತಾಲ್ಲೂಕಿನ ಶ್ರವಣನಹಳ್ಳಿಯ ಶಾಸನವು ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನ ಪಟ್ಟದರಸಿ ಚಂದ್ರಲಾದೇವಿಯನ್ನು ಉಲ್ಲೇಖಿಸುತ್ತದೆ.[96] ಈ ಶಾಸನವು ಮಂದಗೆರೆಯ ಉಪಗ್ರಾಮವಾದ ಕಾವನಹಳ್ಳಿಯ ವೀರಕೊಂಗಾಳ್ವ ಜಿನಾಲಯಕ್ಕೆ ದತ್ತಿಬಿಟ್ಟ ವಿಷಯವನ್ನು ದಾಖಲಿಸುತ್ತದೆ.

ಮದ್ದೂರು ತಾಲ್ಲೂಕಿನ ತಿಪ್ಪೂರಿನ ಶಾಸನವು ಉಭಯಭಾಷಾ ಚಕ್ರವರ್ತಿ ಕಂದರ್ಪದೇವನ ಪತ್ನಿ ಸೊಂನ್ನಾದೇವಿಯನ್ನು ಉಲ್ಲೇಖಿಸುತ್ತದೆ.[97] ಇದೇ ತಿಪ್ಪೂರಿನ ಮತ್ತೊಂದು

ಶಾಸನವು ಮಣಕಬ್ಬೆ ಮತ್ತು ಪೂಚಿಕಬ್ಬೆಯರನ್ನು ಉಲ್ಲೇಖಿಸುತ್ತದೆ.[98] ಮಣಕಬ್ಬೆ, ಗಂಗರಾಜನ ಅಜ್ಜಿ, ಏಚನ ತಾಯಿ ಮತ್ತು ಗಂಗಮಾರಯ್ಯನ ಪತ್ನಿ. ಈಕೆಯನ್ನು ಶಾಸನವು ವಿಬುಧ ಪ್ರಖ್ಯಾತ, ಧರ್ಮಪ್ರಯುಕ್ತ ನಿಕಾಮಾತ್ರ ಚರಿತೆ ಎಂದು ಹೊಗಳುತ್ತದೆ. ಪೂಚಿಕಬ್ಬೆಯ ಏಚನಪತ್ನಿ ಅಂದರೆ ಗಂಗರಾಜನ ತಾಯಿ ಈಕೆಯನ್ನು ಉತ್ತಮ ಗುಣವತಿ ವನಿತಾವೃತ್ತಿಯನ್ನೊಳಗೊಂಡ ಜಗವೆಲ್ಲಿ ಕೈಯೆತ್ತುವಿಳಮಳ ಸಂಪತ್ತಿಗೆ ಸೋತವಳೆಂದು ಹೊಗಳುತ್ತದೆ.

ಕೃಷ್ಣರಾಜಪೇಟೆ ತಾಲ್ಲೂಕಿನ ಬಸದಿ ಹೊಸಕೋಟೆಯ ಶಾಸನವು ಹೊಯ್ಸಳ ದಂಡ ನಾಯಕ ಪುಣಿ ಸೋಮಯ್ಯನ ಪತ್ನಿಯಾದ ಜಕ್ಕೆಯಬ್ಬೆಯನ್ನು ದಾಖಲಿಸುತ್ತದೆ.[99] ಈಕೆಯ ಬಸದಿಹೊಸಕೋಟೆಯಲ್ಲಿ ಬಸದಿಯನ್ನು ನಿರ್ಮಾಣ ಮಾಡಿದುದನ್ನು ಉಲ್ಲೇಖಿಸುತ್ತದೆ ಅಲ್ಲದೆ, ಇವರ ಆಡಳಿತಗಾರನಾದ ಮಹಾದಂಡನಾಯಕನು ಮಾವಿನಕೆರೆ ಮತ್ತು ಮಾಣಿಕ್ಯ ದೊಡಲೂರಿನ ತೆರಿಗೆಗಳನ್ನು ಬಸದಿಗೆ ಬಿಟ್ಟುಕೊಟ್ಟಿದುದನ್ನು ದಾಖಲಿಸುತ್ತದೆ.

ನಾಗಮಂಗಲ ತಾಲ್ಲೂಕು ಯಾಲದಹಳ್ಳಿಯ ಶಾಸನವು ಹೊಯ್ಸಳ ವಿಷ್ಣುವರ್ಧನನ ಮಹಾಪ್ರಧಾನ ದೇವರಾಜನ ಪತ್ನಿ ಕಮಲಾದೇವಿಯನ್ನು ಉಲ್ಲೇಖಿಸುತ್ತದೆ.[100] ಈಕೆಯು ಸೂರನಹಳ್ಳಿಯಲ್ಲಿ ಅಂದರೆ ಪಾರ್ಶ್ವಪುರದಲ್ಲಿ ಶ್ರೀ ಪಾರ್ಶ್ವನಾಥ ಸ್ವಾಮಿಯ ಜಿನಾಲಯವನ್ನು ನಿರ್ಮಿಸಿದುದು ಹಾಗೂ ಕಾಮಿಕಬ್ಬೆಯನ್ನು ಸಹ ಉಲ್ಲೇಖಿಸುತ್ತದೆ.

ಇದೇ ತಾಲ್ಲೂಕಿನ ಆಳಿಸಂಧ್ರದ ಶಾಸನವು ಹೊಯ್ಸಳ ವೀರಬಲ್ಲಾಳನ ಕಾಲದ್ದಾಗಿದ್ದರೂ ಈ ಶಾಸನದ ಕಾಲಕ್ಕೆ ಹಿಂದಿನದನ್ನು ದಾಖಲಿಸುತ್ತದೆ.[101] ವಿನಯಾದಿತ್ಯನ ಪತಿ ಕಳಲೆಯದೇವಿಯನ್ನು ಈ ಶಾಸನ ಉಲ್ಲೇಖಿಸುತ್ತದೆ. ಅಲ್ಲದೆ ಆಕೆಯ ಪೋಷಿಸಿದ್ದ ಮರಿಯಾನೆ ದಂಡನಾಯಕನಿಗೆ ದೇಕವ್ವೆಯನ್ನು ಮದುವೆಮಾಡಿಕೊಟ್ಟಿದುದನ್ನು ದಾಖಲಿಸುತ್ತದೆ. ಹೊಯ್ಸಳ ದೊರೆ ಬಲ್ಲಾಳದೇವನು ಮರಿಯಾನೆ ದಂಡನಾಯಕನ ದ್ವಿತೀಯ ಪತ್ನಿ ಚಾಮವ್ವೆ ದಂಡನಾಯಕಿಯನ್ನು, ಆಕೆಯ ಮೂವರು ಪುತ್ರಿಯರನ್ನು ಕ್ರಮವಾಗಿ ಪದುಮಲಾದೇವಿ, ಚಾಮಲಾದೇವಿ ಮತ್ತು ಬೊಪ್ಪಾದೇವಿಯರನ್ನು ಉಲ್ಲೇಖಿಸಿ ಈ ಮೂರ್ವರು ಒಂದೇ ದಿನ ಚಕ್ರವರ್ತಿ ಬಲ್ಲಾಳದೇವನನ್ನು ವರಿಸಿದುದಾಗಿ ದಾಖಲಿಸುತ್ತವೆ.

ಇದೇ ಶಾಸನವು ಮರಿಯಾನೆ ದಂಡನಾಯಕ ಮತ್ತು ಭರತೇಶ ದಂಡನಾಯಕನನ್ನು ಮತ್ತು ಮರಿಯಾನೆ ದಂಡನಾಯಕನ ಪತ್ನಿ ಜಕ್ಕಲೆಯನ್ನು ಹಾಗೂ ಭರತೇಶನ ಪತ್ನಿ ಹರಿಯಲೆಯನ್ನು ದಾಖಲಿಸುತ್ತದೆ. ಈ ಶಾಸನವು ಹೊಯ್ಸಳ ವಂಶವು ವಿನಯಾದಿತ್ಯನ ಕಾಲದಿಂದ

ಬಲ್ಲಾಳದೇವನ ಕಾಲದವರೆಗೆ ಮರಿಯಾನೆ ದಂಡನಾಯಕನ ಮನೆತನದವರು ತಲತಲಾಂತರವಾಗಿ ಆಡಳಿತ ಚುಕ್ಕಾಣಿಯನ್ನು ಹಿಡಿದಿದ್ದರಲ್ಲದೆ ಸಾಮ್ರಾಜ್ಯದ ಚಕ್ರವರ್ತಿಗಳೊಂದಿಗೆ ನಿಕಟ ಸಂಬಂಧ ಹೊಂದಿದುದನ್ನು ಮೂರು ತಲೆಮಾರುಗಳಲ್ಲಿ ಉಲ್ಲೇಖಿಸುತ್ತದೆ. ನಾಗಮಂಗಲ ತಾಲ್ಲೂಕಿನ ಹಟ್ಟಣದ ಶಾಸನವು ಸೋವಿಸೆಟ್ಟಿಯ ಹೆಂಡತಿ ಮರುದೇವಿ ಮತ್ತು ಆಕೆಯ ಅತ್ತೆ ಮಾಕವ್ವೆ ಅಥವಾ ಮಾಚಿಯಕ್ಕನನ್ನು ಉಲ್ಲೇಖಿಸುತ್ತದೆ.[102]

ಜಿಲ್ಲೆಯ ಒಟ್ಟು ಜೈನ ಶಾಸನಗಳನ್ನು ಗಮನಿಸಿದಾಗ ನಾಲ್ಕು ಜನ ಕಂತಿಯರ ನಿಷಧಿ ಶಾಸನಗಳು ಕಂಡುಬರುತ್ತವೆ.[103] ಅಮೃತಬ್ಬೆ ಕಂತಿಯು ಸಮಾಧಿ ಮರಣವನ್ನು ಅಪ್ಪಿದಳೆಂದು ಹೇಳುವ ಬಿಂಡಿಗನವಿಲೆ ಶಾಸನ,[104] ರುಕುಮ್ಮವ್ವೆ ಮತ್ತು ಜಕ್ಕವ್ವೆ ಕಂತಿಯರು ನಿಷಧಿಯಾದರು ಎಂದು ಹೇಳುವ ಕಂಬದಹಳ್ಳಿಯ[105] ಶಾಸನ ಮತ್ತು ಪಾಂಡವಪುರ ತಾಲ್ಲೂಕು ಕುಂತಿಬೆಟ್ಟದ ಸಮೀಪ ದೊರೆತ ಶಾಸನವು ಬುದ್ಧಸೇನ ಕಂತಿ ನಿಷಧಿಯಾದುದನ್ನು ದಾಖಲಿಸುತ್ತದೆ.[106] ಈ ನಿಷಧಿಗಳಲ್ಲಿ ಪ್ರಮುಖವಾಗಿ ಸಮಾಧಿ ಪದ ಕಂಡುಬರುತ್ತವೆ.

3.3. ಜೈನ ಶಾಸನೋಕ್ತ ಕೆರೆಗಳು

ಶ್ರೀರಂಗಪಟ್ಟಣದ ಸಮೀಪವಿರುವ ರಾಂಪುರದ ಶಾಸನವು ವರಮತಿಸಾಗರ ಎಂಬ ಮುನಿಗಳ ಅಪ್ಪಣೆಯ ಮೇರೆಗೆ ಅಣ್ಣಯ್ಯ, ದೇವಕುಮಾರ ಮತ್ತು ದೊರ ಎಂಬುವವರು ನದಿಗೆ ಅಡ್ಡಲಾಗಿ ಕಟ್ಟೆಯನ್ನು ಕಟ್ಟಿದರೆಂಬ ವಿವರ ಕಂಡುಬರುತ್ತದೆ.[107] ಅಲ್ಲದೆ ನಾಗಮಂಗಲ ತಾಲ್ಲೂಕಿನ ಹಟ್ಟಣದ ಶಾಸನವು ಪಟ್ಟಣಸ್ವಾಮಿಯಾದ ಸೋವಿಸೆಟ್ಟಿಯು ಹಟ್ಟಣದಲ್ಲಿ ಸಾಗರ ಸಮಾನವಾದ ಮೂರು ಕೆರೆಗಳನ್ನು ನಿರ್ಮಿಸಿದಂತೆ ದಾಖಲಿಸುತ್ತದೆ.[108] ಮಧ್ಯಕಾಲೀನ ಯುಗದಲ್ಲಿ ಪಟ್ಟಣಸ್ವಾಮಿಗಳು ಆರ್ಥಿಕಾಭಿವೃದ್ಧಿಗೆ ಕೆರೆಗಳನ್ನು ನಿರ್ಮಿಸಿ ಇಡೀ ಗ್ರಾಮವನ್ನು ನೆಲೆನಿಲ್ಲುವಂತೆ ಮಾಡುತ್ತಿದ್ದ ಪ್ರಕ್ರಿಯೆಯನ್ನು ಕಾಣಬಹುದು. ಇದು ಆ ಬಗೆಯ ಆರ್ಥಿಕ ಸಮಾಜೋಧಾರ್ಮಿಕ ಚಟುವಟಿಕೆಗಳನ್ನು ಬೆಳೆಸುವ ಪ್ರಕ್ರಿಯೆಯಾಗಿ ಕಂಡುಬರುತ್ತದೆ. ಹೊಯ್ಸಳ ವಿಷ್ಣುವರ್ಧನನ ಕಾಲಘಟ್ಟದಲ್ಲಿ ಸುಖದೊರೆಯಲ್ಲಿ ಜಕ್ಕಸೆಟ್ಟಿಯು ಕೆರೆಯೊಂದನ್ನು ಕಟ್ಟಿಸಿ, ಬಸದಿಯನ್ನು ನಿರ್ಮಿಸಿ ಅದರ ಪೂಜೆಗೆ ಕೆರೆಯ ಕೆಳಗಿನ ಭೂಮಿಯನ್ನು ದಾನನೀಡಿ ತೆಪ್ಪಸುಂಕ ಮತ್ತು ಸಣ್ಣ ಕೆರೆಯನ್ನು

ಬಸದಿಗೆ ನೀಡಿದುದನ್ನು ದಾಖಲಿಸುತ್ತದೆ. ಹದಿನೇಳು ಹದಿನೆಂಟನೇ ಶತಮಾನದ ಕಂಬದಹಳ್ಳಿ ಶಾಸನ ದೇವಾಲಯದ ನೀರಿನ ಅನುಕೂಲಕ್ಕಾಗಿ ಕೊಳವೊಂದನ್ನು ನಿರ್ಮಾಣಮಾಡಿದಂತೆ ದಾಖಲಿಸುತ್ತದೆ.[109]

3.4. ಶಾಸನೋಕ್ತ ಜೈನಾಚಾರ್ಯರು

ಮಂಡ್ಯ ಜಿಲ್ಲೆಯ ಜೈನ ಶಾಸನಗಳನ್ನು ಅವಲೋಕಿಸಿದಾಗ ಮೂಲಸಂಘ, ದ್ರವಿಳಸಂಘ, ಮಣಲೂರು ಹಾಗೂ ನಂದಿಸಂಘದ ಆಚಾರ್ಯರುಗಳು ಇಲ್ಲಿ ಧರ್ಮಪ್ರಚಾರ ಮತ್ತು ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದನ್ನು ಖಚಿತಪಡಿಸಬಹುದಾಗಿದೆ. ಪ್ರಸ್ತುತ ಶಾಸನಗಳು ಉಲ್ಲೇಖಿಸುವ ಆಚಾರ್ಯರುಗಳ ಸಾಧನೆಯ ವಿವರಗಳನ್ನು ಸಂಕಲಿಸಲಾಗಿದೆ. ಈ ಶಾಸನಗಳಲ್ಲಿ ವಿವಿಧ ಸಂಘ, ಗಣ, ಗಚ್ಛ ಮತ್ತು ಅನ್ವಯಕ್ಕೆ ಸೇರಿದ ಸುಮಾರು 25 ಜೈನ ಆಚಾರ್ಯರುಗಳು ಉಲ್ಲೇಖಿತರಾಗಿದ್ದಾರೆ. ಈ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಅತಿ ಹೆಚ್ಚು ಜೈನ ಆಚಾರ್ಯರುಗಳು ಉಲ್ಲೇಖಿತಗೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಯಾಪನೀಯ ಸಂಘದವರು ಪ್ರಚಲಿತದಲ್ಲಿದ್ದರೆ ದಕ್ಷಿಣ ಕರ್ನಾಟಕದಲ್ಲಿ ಮೂಲಸಂಘವು ಹೆಚ್ಚು ಪ್ರಭಾವಿತವಾಗಿದ್ದು, ಇಂದಿನ ಶ್ರವಣಬೆಳಗೊಳ, ಕಂಬದಹಳ್ಳಿ, ಮಲೆಯೂರು (ಕನಕಗಿರಿ) ನರಸಿಂಹರಾಜಪುರ, ಹುಂಚದ ಭಟ್ಟಾರಕ ಪರಂಪರೆಯು ಮೂಲಸಂಘ ದೇಶೀಯಗಣ ಪುಸ್ತಕಗಚ್ಛ ಮತ್ತು ಕುಂದದಾನ್ವಯಕ್ಕೆ ಸೇರಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಈ ಜಿಲ್ಲೆಯಲ್ಲಿ ದೊರಕುವ ಅತ್ಯಂತ ಪ್ರಾಚೀನ ಜೈನ ಶಾಸನವೆಂದರೆ ನಾಗಮಂಗಲ ತಾಲ್ಲೂಕು, ದೇವರಹಳ್ಳಿಯಲ್ಲಿ ದೊರೆತ ಗಂಗ ದೊರೆ ಶ್ರೀಪುರುಷನ ಕ್ರಿ.ಶ. 776ರ ತಾಮ್ರಶಾಸನ.[110] ಈ ಶಾಸನದಲ್ಲಿ ನಂದಿ ಸಂಘ ಎರೆಗಿತ್ತೂರು ಗಣ ಪುಲಿಕಲ್‌ಗಚ್ಛಕ್ಕೆ ಸೇರಿದ ವಿಮಲಚಂದ್ರ ಆಚಾರ್ಯರ ಉಲ್ಲೇಖವಿದೆ. ವಿಮಲಚಂದ್ರ ಆಚಾರ್ಯರ ಗುರುಪರಂಪರೆಯನ್ನು ಈ ಶಾಸನದಲ್ಲಿ ತಿಳಿಸಲಾಗಿದೆ. ಈ ಶಾಸನದಿಂದ ವಿಮಲಚಂದ್ರ ಆಚಾರ್ಯರು ಕೀರ್ತಿ ನಂದಿದೇವರ ಶಿಷ್ಯರಾಗಿದ್ದು, ಚಂದ್ರನಂದಿದೇವರ ಗುರುಪರಂಪರೆಯವರು ಎನ್ನುವ ವಿಚಾರ ತಿಳಿದು ಬರುತ್ತದೆ.

ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯ ಕ್ರಿ.ಶ. 900ಕ್ಕೆ ಸೇರಿದ ಶಾಸನದಲ್ಲಿ ಕುಮಾರಸೇನ ಭಟ್ಟಾರಕರು ಸತ್ಯವಾಕ್ಯ ಕೊಂಗುಣಿವರ್ಮನ ಕಾಲದಲ್ಲಿ ತ್ಯಾಗಿಪೆರ್ಮಾಡಿಯು ಕಟ್ಟಿಸಿದ ಕಲ್ಲು ಬಸದಿಯೊಂದಕ್ಕೆ ದತ್ತಿ ಪಡೆದ ವಿಚಾರ ದಾಖಲಾಗಿದೆ.[111] ಈ ಶಾಸನವು ಸತ್ಯವಾಕ್ಯ ಕೊಂಗುಣಿವರ್ಮನನ್ನು ಬೆಳಗೊಳದ ಶ್ರವಣ ಸಂಘದ ಮತ್ತು ಸ್ಯಾದ್ವಾದದ ಆಧಾರಭೂತ ಎಂದು

ಕರೆದಿದೆ. ಕ್ರಿ.ಶ. 904ರ ಶ್ರೀರಂಗಪಟ್ಟಣ ತಾಲ್ಲೂಕು, ರಾಂಪುರ ಗ್ರಾಮದಿಂದ ವರದಿಯಾಗಿರುವ ಶಾಸನದಲ್ಲಿ ವರಮತಿಸಾಗರಪಂಡಿತಾಚಾರ್ಯರ ಉಲ್ಲೇಖವಿದೆ.[112] ಇವರು ಒಬ್ಬ ಘನ ವಿದ್ವಾಂಸರಾಗಿದ್ದು, ಇವರ ಅಪ್ಪಣೆಯ ಮೇರೆಗೆ ಅಣ್ಣಯ್ಯ, ದೇವಕುಮಾರ ಮತ್ತು ದೊರೆ ಎಂಬುವರು ನದಿಗೆ ಅಡ್ಡಲಾಗಿ ಕಟ್ಟೆಯನ್ನು ಕಟ್ಟಿಸಿದರು ಎಂಬ ವಿವರ ಲಭ್ಯವಾಗಿರುತ್ತದೆ.

ಮದ್ದೂರು ತಾಲ್ಲೂಕು, ಕೂಲಿಗೆರೆ ಗ್ರಾಮದ ಕೆರೆ ಏರಿಯ ಮೇಲಿರುವ ಕ್ರಿ.ಶ. 909ರ ಶಾಸನವು ಕನಕಸೇನ ಭಟ್ಟಾರಕರನ್ನು ಉಲ್ಲೇಖಿಸುತ್ತದೆ.[113] ಮಣಲೆಯರನು ಕನಕಗಿರಿ ತೀರ್ಥದ ಮೇಲಿನ ಬಸದಿಯನ್ನು ಇಮ್ಮಡಿನ ಅರಸರ ಅಧ್ಯಕ್ಷದಲ್ಲಿ ಕನಕಸೇನ ಭಟಾರರಿಗೆ ತಿಪ್ಪೂರಿನ ಕೆಲವು ತೆರಿಗೆಗಳನ್ನು ಬಿಟ್ಟುಕೊಟ್ಟಿರುವುದನ್ನು ಈ ಶಾಸನವು ತಿಳಿಸುತ್ತದೆ. ಕನಕಸೇನಭಟ್ಟಾರರು ತಿಪ್ಪೂರಿನಲ್ಲಿಯೇ ಇದ್ದುದರಿಂದ ಅದಕ್ಕೆ ಕನಕಗಿರಿ ಎಂಬ ಹೆಸರು ಬಂದಿರಬಹುದು.

ಚಿಕ್ಕರಸಿನಕೆರೆ ಹೋಬಳಿ, ತಿಪ್ಪೂರಿನಲ್ಲಿ ಮೇಲೆ ಹೇಳಿರುವ ಕನಕಗಿರಿ ಕ್ಷೇತ್ರದಲ್ಲಿ ವಿಷ್ಣುವರ್ಧನನ ಕಾಲದ ಒಂದು ಶಾಸನವಿದೆ. ಕ್ರಿ.ಶ. 1117ರಲ್ಲಿ ಸೇನಾನಿ ಗಂಗರಾಜನಿಗೆ ತಲಕಾಡಿನಲ್ಲಿ ಚೋಳರ ಮೇಲೆ ಸಾಧಿಸಿದ ಗೆಲುವಿನಿಂದ ಸಂಪ್ರೀತನಾದ ಅರಸ ವಿಷ್ಣುವರ್ಧನನು ಬೇಕಾದುದ್ದನ್ನು ಕೇಳು ಎಂದು ಹೇಳಿದಾಗ ಆತ ಏನನ್ನು ಬೇಡದೆ ಭೂ ಮಂಡಲವೇ ಹೊಗಳುತ್ತಿದ್ದ ತಿಪ್ಪೂರು ವೃತ್ತಿಯನ್ನು ಕೇಳುತ್ತಾನೆ. ದೊರೆ ಅದನ್ನು ಕೊಟ್ಟಾಗ ಸಂತೋಷಪಟ್ಟ ಗಂಗರಾಜನು ಇದನ್ನು ತನ್ನ ಗುರುವಾದ ಮೇಘಚಂದ್ರ ಸಿದ್ಧಾಂತ ದೇವನಿಗೆ ಧಾರೆ ಎರೆದುಕೊಡುತ್ತಾನೆ ಎಂಬ ಅಂಶ ಈ ಮೇಲಿನ ಶಾಸನದಿಂದ ಗೊತ್ತಾಗುತ್ತದೆ.[114] ಇದೇ ಗಂಗರಾಜನು ತಿಪ್ಪೂರಿನ ಬಳಿ ಇರುವ ಒಂದು ಸಣ್ಣಗುಡ್ಡದ ಮೇಲೆ ಕಟ್ಟಿಸಿದ ಬಸದಿಯಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಕವಿಯಾಗಿದ್ದ ಬಾಲಚಂದ್ರದೇವನು ತನ್ನ ಗುರುವಿನ ನೆನಪಿಗೆ ಜನಬಿಂಬವನ್ನು ಪ್ರತಿಷ್ಠೆ ಮಾಡಿಸಿರುವುದಾಗಿ ತಿಳಿದು ಬರುತ್ತದೆ.[115]

ಬಾಲಚಂದ್ರದೇವನನ್ನು ಉಭಯ ಭಾಷಾ ಕವಿಚಕ್ರವರ್ತಿಯೆಂದು ಕಾಣೂರು ಗಣತಿಲಕನೆಂದು ಇದೇ ತಿಪ್ಪೂರಿನ ದೋಣೆಯ ಬಳಿ ಬಿದ್ದಿದ್ದ ಜಿನ ಬಿಂಬದ ಮೇಲಿನ ಶಾಸನವು ತಿಳಿಸುತ್ತದೆ. ಇವನ ತಂದೆ ಮತ್ತು ಗುರು ಕವಿಕಂದರ್ಪ, ತಾಯಿ ಸೊಂನ್ನಾದೇವಿ. ಬಾಲ್ಯದಲ್ಲಿ ವಿದ್ಯಾಭ್ಯಾಸವನ್ನು ಬಾಲಚಂದ್ರ ತನ್ನ ತಂದೆಯಿಂದಲೇ ಕಲಿತಿದ್ದನು. ನಂತರ ನಯಕೀರ್ತಿ ಈತನ ಗುರುವಾಗಿದ್ದನು. ಕನ್ನಡ ಮತ್ತು ಸಂಸ್ಕೃತಗಳಲ್ಲಿ ಕವಿಯಾಗಿದ್ದ ಬಾಲಚಂದ್ರದೇವನ ಯಾವ ಕೃತಿಯೂ ಈವರೆಗೆ ಉಪಲಬ್ಧವಾಗಿಲ್ಲ. ಇವನಿಂದಲೇ ರಚಿತವಾಗಿರುವ ಎರಡು ಶಾಸನಗಳಲ್ಲಿ ಇವನು ತನ್ನನ್ನು ಚತುರ್ಭಾಷಾ ಕವಿಚಕ್ರವರ್ತಿಯೆಂದು ಹೇಳಿಕೊಂಡಿದ್ದಾನೆ. ಈತನು ರಚಿಸಿರುವ

ಎರಡು ಶಾಸನಗಳು ಬೆಳಗಾವಿಯ ಕೋಟೆಯಲ್ಲಿವೆ. ಜಿನಬಿಂಬದ ಪೀಠದಲ್ಲಿರುವ ಶಾಸನದಲ್ಲಿ ಅವನ ಗುರು ಯಾರೆಂದು ಹೆಸರಿಸಿಲ್ಲ. ಆದರೆ ಅವನ ಗುರು ಸಕಲಚಂದ್ರನ ಮಗ ಮಾಧವಚಂದ್ರ ಎಂಬುದಾಗಿ ಬೇರೆ ಮೂಲಗಳಿಂದ ತಿಳಿದು ಬರುತ್ತದೆ. 'ಯಶೋಧರ ಚರಿತೆ' ಯ ಜನ್ನನ ಪತ್ನಿ ಲಕುಮಾದೇವಿಗೆ ಬಾಲಚಂದ್ರನು ಗುರುವಾಗಿದ್ದನೆಂದು ಜನ್ನನ ಅನಂತನಾಥ ಪುರಾಣದಿಂದ ತಿಳಿದು ಬರುತ್ತದೆ.

ನಾಗಮಂಗಲ ತಾಲ್ಲೂಕಿನ ಎಲೆಕೊಪ್ಪ ಗ್ರಾಮದ ಕ್ರಿ.ಶ. 1068ರ ಶಾಸನದಲ್ಲಿ ಭಟ್ಟಾರಕ ಏಲಾಚಾರ್ಯ ಕಠಿಣವಾದ ಉಪಸರ್ಗಗಳನ್ನು ಅನುಭವಿಸುತ್ತಾ ನಿಷ್ಕಳಂಕ ಚರಿತನಾಗಿ ವಾಸ ಮಾಡುತ್ತಿದ್ದುದರಿಂದ ನೊಳಂಬವಾಡಿಯು ಮತ್ತು ದಡಿಗವಾಡಿಯು ಪ್ರಸಿದ್ಧವಾದವು ಎಂಬ ವಿಚಾರವನ್ನು ಈ ಶಾಸನದ ಕವಿ ಏಲಾಚಾರ್ಯರ ಶಿಷ್ಯನು ಆದ ಬಿಂಡಯ್ಯನು ತಿಳಿಸುತ್ತಾನೆ.[116]

ಕ್ರಿ.ಶ. 975 ರ ಬಿಂಡಿಗನವಿಲೆಯ ನಿಷಿಧಿ ಶಾಸನವು ಕಂತಿ ಅಮೃತಬ್ಬೆ ಎಂಬ ಜೈನ ಸನ್ಯಾಸಿನಿ ಇಹಲೋಕ ತ್ಯಜಿಸಿದಾಗ ಆಕೆಯ ಮಗನಾದ ಪದ್ಮನಂದಿ ಭಟ್ಟಾರರು ತಮ್ಮ ತಾಯಿಯ ಹೆಸರಿನಲ್ಲಿ ನಿಶಿದಿ ಶಾಸನ ನಿಲ್ಲಿಸಿದರು.[117] ಕಂಬದ ಹಳ್ಳಿಯ ಬ್ರಹ್ಮಯಕ್ಷ ಕಂಬದ ಬುಡದಲ್ಲಿರುವ ಕ್ರಿ.ಶ. 1118ರ ಶಾಸನದ ಪ್ರಕಾರ ಹೊಯ್ಸಳದೇವ ವಿಷ್ಣುವರ್ಧನನು ತನ್ನ ಹಿರಿಯ ದಂಡನಾಯಕ ಗಂಗರಾಜನಿಗೆ ತಲಕಾಡನ್ನು ಗೆಲ್ಲುವುದಕ್ಕೆ ಮುಂಚಿತವಾಗಿಯೇ ವಾಗ್ದಾನ ಮಾಡಿ ಮೆಚ್ಚಿದ್ದನ್ನು 'ಬೇಡಿಕೊಳ್' ಎಂದಾಗ ಆತ ಶ್ರೀ ಬಿಂಡಿಗನವಿಲೆಯ ತೀರ್ಥಕ್ಕರಳ ವೃತ್ತಿಯನ್ನು ಬೇಡಿಕೊಳ್ಳುತ್ತಾನೆ. ಹೀಗೆ ಪಡೆದ ಬಿಂಡಿಗನವಿಲೆ ವೃತ್ತಿಯನ್ನು ಗಂಗರಾಜನು ಶ್ರೀ ಮೂಲ ಸಂಘದ ದೇಶಿಗಣದ ಪುಸ್ತಕ ಗಚ್ಛದ ಕೊಂಡಕುಂದಾನ್ವಯದ ಶುಭಚಂದ್ರ ಸಿದ್ಧಾಂತದೇವರಿಗೆ ಧಾರಾಪೂರ್ವಕವಾಗಿ ಕಾಲುತೊಳೆದು ದತ್ತಿ ಬಿಟ್ಟ ವಿಚಾರ ತಿಳಿದುಬರುತ್ತದೆ.[118]

ಶುಭಚಂದ್ರ ಸಿದ್ದಾಂತ ದೇವರ ಉಲ್ಲೇಖ ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದಲ್ಲಿ ದೊರೆತಿರುವ ಕ್ರಿ.ಶ. 1118 ರ ಶಾಸನದಲ್ಲೂ ಕಂಡುಬರುತ್ತದೆ.[119] ದ್ವಾರಸಮುದ್ರದ ಪಟ್ಟಣ ಸ್ವಾಮಿಯಾದ ನೊಳಂಬ ಶೆಟ್ಟಿಯ ಮನೋವಲ್ಲಭೆ ದೇಮಿಕಬ್ಬೆ ಸೆಟ್ಟಿಯು ಅರುಹನಹಳ್ಳಿ ಮತ್ತು ಬಸದಿಯ ಬಡಗಲು ತೆಂಕಲಗಳ ಭೂಮಿ, ದಾನಶಾಲೆ, ಎರಡು ಗಾಣ, ಎರಡು ತೋಟಗಳು, ಗಂಡ ನಾರಾಯಣಶೆಟ್ಟಿಯು ಕೊಟ್ಟ ಭೂಮಿ ಇವಿಷ್ಟನ್ನು ಶ್ರೀ ಶುಭಚಂದ್ರ ಸಿದ್ಧಾಂತದೇವರಿಗೆ ದತ್ತಿಯಾಗಿ ಬಿಟ್ಟುಕೊಟ್ಟರೆಂದು ತಿಳಿದುಬರುತ್ತದೆ. ಈ ಶಾಸನದಲ್ಲಿ ಶ್ರೀ ಶುಭಚಂದ್ರ ಸಿದ್ಧಾಂತದೇವರ ಗುರುಪರಂಪರೆಯೂ ಉಕ್ತವಾಗಿದೆ. ಶ್ರೀ ಶುಭಚಂದ್ರ ಸಿದ್ಧಾಂತ ಗುರುಗಳು ಕುಕ್ಕಟಾಸನ ಮಾಲಾದಾರಿ ದೇವರು ಹಾಗೂ ಅವರ ಗುರುಗಳು ದಿವಾಕರ ನಂದಿಮುನಿಗಳು ಎಂಬ ಅಂಶ

ತಿಳಿದು ಬರುತ್ತದೆ. ಮೂಲ ಸಂಘದ ಕೊಂಡಕುಂದಾ ಮಾರ್ಗವು ಜಿನಧರ್ಮದಲ್ಲಿ ಅತ್ಯಂತ ಪ್ರಾಚೀನವಾದುದು ಮತ್ತು ದೇಶಿಗಣದ ಪುಸ್ತಕ ಗಚ್ಛದ ವಿದ್ವಾಂಸರಾದ ಕುಕ್ಕಟಾಸನ ಮಾಲಧಾರಿದೇವನ ಪ್ರಸಿದ್ಧ ಶಿಷ್ಯನಾದ ಶುಭಚಂದ್ರಸಿದ್ಧಾಂತ ದೇವನ ಶಿಷ್ಯನೆನಿಸಿರುವ ಸೇನಾನಿ ಗಂಗನು ನಿಸ್ಸಂದೇಹವಾಗಿಯೂ ಆ ಮಾರ್ಗದ ಪ್ರವರ್ತಕ.

ಕೃಷ್ಣರಾಜಪೇಟೆ ತಾಲ್ಲೂಕು, ಅಕ್ಕಿಹೆಬ್ಬಾಳು ಹೋಬಳಿಗೆ ಸೇರಿದ ಶ್ರವಣಹಳ್ಳಿಯಲ್ಲಿ ದೊರಕಿರುವ 10–11 ನೇ ಶತಮಾನದ ಶಾಸನವು ಶಾಂತಲಾದೇವಿ ಮತ್ತು ಅವಳ ತಮ್ಮ ದುದ್ದ ಮಲ್ಲನು ತಮಗೆ ತಮ್ಮ ತಂದೆ ಬಳುವಳಿಯಾಗಿ ಕೊಟ್ಟಿದ್ದ ಕಾವನಹಳ್ಳಿಯನ್ನು ವೀರಕೊಂಗಾಳ್ವ ಜಿನಾಲಯಕ್ಕೆ ದತ್ತಿಯಾಗಿ ತಮ್ಮ ಗುರುಗಳಾದ ಪ್ರಭಾಚಂದ್ರಸಿದ್ಧಾಂತ ದೇವರ ಕಾಲನ್ನು ತೊಳೆದು ಸರ್ವಬಾಧಾ ಪರಿಹಾರವಾಗಿ ಕೊಡುತ್ತಾರೆ ಎಂದಿದೆ.[120]

ನಾಗಮಂಗಲ ತಾಲ್ಲೂಕು, ಸುಖದೆರೆ ಎಂಬ ಗ್ರಾಮದಿಂದ ವರದಿಯಾಗಿರುವ ವಿಷ್ಣುವರ್ಧನನ ಕಾಲಕ್ಕೆ ಸೇರಿದ ಶಾಸನದಲ್ಲಿ ಸುಖದೆರೆಯ ಜಕ್ಕಿಸೆಟ್ಟಿಯು ಗ್ರಾಮದಲ್ಲಿ ಒಂದು ಬಸದಿಯನ್ನು ಕಟ್ಟಿಸಿ ಅದಕ್ಕೆ ದತ್ತಿಗಳನ್ನು ಮತ್ತು ದಾನಗಳನ್ನು ದಯಪಾಲದೇವ ಎಂಬ ಆಚಾರ್ಯರಿಗೆ ಧಾರೆ ಎರೆದುಕೊಟ್ಟಿದ್ದನ್ನು ದಾಖಲಿಸಲಾಗಿದೆ.[121] ದಯಾಪಾಲದೇವ ಆಚಾರ್ಯರು ದ್ರವಿಳ ಸಂಘಕ್ಕೆ ಸೇರಿದ್ದು, ಅವರ ಪರಂಪರೆಯ ಸಮಂತಭದ್ರರು, ಹೇಮಸೇನಾ ಹಾಗೂ ವಾದಿರಾಜರ ಆಚಾರ್ಯರ ಹೆಸರುಗಳು ಈ ಶಾಸನದಲ್ಲಿ ಉಲ್ಲೇಖವಾಗಿವೆ.

ಕಂಬದಹಳ್ಳಿಯಿಂದ ವರದಿಯಾಗಿರುವ ಕ್ರಿ.ಶ. 1168ರ ಶಾಸನವೊಂದರಲ್ಲಿ ನೇಮ ದಂಡೇಶನ ಮುದ್ದರಸಿಯರ ಮಗನು, ಕಲಿಯುಗಭೀಮ, ಜಿನದೇವಾಲಯಗಳ ಜೀರ್ಣೋದ್ಧಾರಕನು ಆದ ಗಂಗ ಕುಲದ ಪಾರ್ಶ್ವದೇವನ ದೇವಕ್ಷೇತ್ರನಿಸಿದ ಬಿಂಡಿಗನವಿಲೆಯನ್ನು ಪಾರ್ಶ್ವದಾನ ಸ್ಥಳವೆಂದು ಪರಿಗಣಿಸಿ ಮೂಲ ಸಂಘದ, ದೇಸಿ ಗಣದ, ಪುಸ್ತಕ ಗಚ್ಛದ ಭೂ ಸ್ಥಿತಿರಾದ ಹನಸೋಗೆಯ ಮುನಿಗಳ ಪಾದಾರ್ಚನೆಗೂ, ಶ್ರಾವಕರಿಗೂ ಹಾಗೂ ತನ್ನ ವಂಶದವರಿಗೂ ಇದು ಸೇರುತ್ತದೆ ಎಂದು ಹೇಳುತ್ತಾ, ಬಿಂಡಿಗನವಿಲೆಯ ಪಾರ್ಶ್ವಜಿನಾಲಯಕ್ಕೆ ಸುಣ್ಣ ಬಳಿಸಿ ಅದರ ಕೈಂಕರ್ಯಕ್ಕಾಗಿ 20 ಖಂಡುಗ ನೀರ್ನೆಲವನ್ನು 50 ಖಂಡುಗ ಬಿದ್ದಲೆಯನ್ನು ಋಷಿಗಳಿಗೆ, ವಿದ್ಯಾರ್ಥಿಗಳಿಗೆ ಅತ್ಯಂತ ಉತ್ಸಾಹದಿಂದ ದಾನ ಮಾಡಿದನು ಎನ್ನುವ ಅಂಶ ತಿಳಿದುಬರುತ್ತದೆ.[122]

ಕ್ರಿ.ಶ. 1100ರ ನಾಗಮಂಗಲ ತಾಲ್ಲೂಕಿನ ಹಟ್ನ ಗ್ರಾಮದ ಶಾಸನವು ಬಾಳಚಂದ್ರ ದೇವನ ಗುರುಪರಂಪರೆಯನ್ನು ತಿಳಿಸುತ್ತದೆ.[123] ಹೊಯ್ಸಳ ವೀರಬಲ್ಲಾಳನು ಆಳುತ್ತಿದ್ದಾಗ ಕ್ರಿ.ಶ. 1100 ರಲ್ಲಿ ಹೊಯ್ಸಳ ಪಟ್ಟಣ ಸ್ವಾಮಿಯಾದ ಸೋಮಿಶೆಟ್ಟಿಯು ತಾನು ಕಟ್ಟಿಸಿದ ಶ್ರೀ ಪಾರ್ಶ್ವನಾಥ ದೇವರ ಬಸದಿಗಾಗಿ, ಮುನಿಗಳ ಆಹಾರಕ್ಕಾಗಿ ಕೆಲವು ಭೂಮಿಗಳನ್ನು ಆಗ ತನ್ನ ಅಧಿಕಾರಿಯಾಗಿದ್ದ ಸಾಮಂತ ನರಸಿಂಹನಾಯಕನ ಅನುಮತಿಯಿಂದ ತನ್ನ ಗುರುಗಳಾದ ಬಾಳಚಂದ್ರ ದೇವರಿಗೆ ಧಾರಾ ಪೂರ್ವಕವಾಗಿ ಕೊಟ್ಟನು. ವೀರ ಬಲ್ಲಾಳ ಕಾಲದ ಇನ್ನೊಂದು ಶಾಸನವು ನಾಗಮಂಗಲ ತಾಲ್ಲೂಕಿನ ಅಳೀಸಂದ್ರದಿಂದ ವರದಿಯಾಗಿದ್ದು, ಇದರಲ್ಲಿ ಮೂಲ ಸಂಘ, ದೇಸೀಯ ಗಣ, ಪುಸ್ತಕ ಗಚ್ಚ, ಕುಂದಾಕಂದಾನ್ವಯದ ಶ್ರೀ ಮಾಘನಂದಿ ಸಿದ್ಧಾಂತದೇವರ ಶಿಷ್ಯರು ಶ್ರೀಗಂಧ ವಿಮುಕ್ತ ಸಿದ್ದಾಂತ ದೇವರು ಅವರ ಶಿಷ್ಯ ಶ್ರೀ ದೇವಕೀರ್ತಿ ಪಂಡಿತ ದೇವರ ಶಿಷ್ಯ ಶ್ರೀ ದೇವಚಂದ್ರ ಪಂಡಿತ ದೇವರಿಗೆ ಶಕವರ್ಷ 1106ರಲ್ಲಿ ಆಹಾರ ಭೂಮಿಯನ್ನು ದಾನವಾಗಿ ನೀಡಿದ್ದನ್ನು ದಾಖಲಿಸಿದೆ.[124]

ಕ್ರಿ.ಶ. 1145 ಕ್ಕೆ ಸೇರಿದ ಕಂಬದ ಹಳ್ಳಿಯ ಇನ್ನೊಂದು ಶಾಸನವು ಹೊಯ್ಸಳ ಒಂದನೇ ನರಸಿಂಹದೇವನು ತನ್ನ ಹಿರಿಯರು ಕಂಬದಹಳ್ಳಿ ದೇವತಾಪೂಜೆಗೂ, ಆಹಾರದಾನಕ್ಕೂ ಮೊದಲಿಹಳ್ಳಿಯ ಶಾಂತಿನಾಥ ದೇವರ ಪೂಜೆಗಾಗಿ ಬಿಟ್ಟಿದ್ದ ದತ್ತಿಯನ್ನು ದಂಡ ವಿಮುಕ್ತ ಸಿದ್ಧಾಂತದೇವರ ಶಿಷ್ಯರಾದ ಮರಿಯಾನೆ ದಂಡನಾಯಕನಿಗೂ ಮತ್ತು ಭರತಮಯ್ಯ ದಂಡನಾಯಕನಿಗೂ ಧಾರಾಪೂರ್ವಕವಾಗಿ ಕೊಟ್ಟರು.[125] ನಂತರ ಈ ದಂಡನಾಯಕರು ಮೇಲೆ ತಿಳಿಸಿದ ದತ್ತಿಯನ್ನು ತಮ್ಮ ಗುರುಗಳಾದ ದಂಡ ಶಮಿಮುಕ್ತ ಸಿದ್ಧಾಂತದೇವರಿಗೆ ಭಕ್ತಿಪೂರ್ವಕವಾಗಿ ಅರ್ಪಿಸಿದರು ಎನ್ನುವ ವಿಚಾರ ತಿಳಿದುಬರುತ್ತದೆ.

ಕಂಬದಹಳ್ಳಿಯಿಂದ ವರದಿಯಾಗಿರುವ ಇನ್ನೊಂದು ಶಾಸನವು ಸೂರಸ್ತ ಗಣಕ್ಕೆ ಸೇರಿದ ಪಲ್ಲವಪಂಡಿತ ಎಂಬ ಆಚಾರ್ಯನ ಅನ್ವಯವನ್ನು ಕೊಡುತ್ತದೆ.[126] ಈತನ ಪೂರ್ವಜರನ್ನು ಅನಂತವೀರ್ಯಾಚಾರ್ಯ ಪ್ರಾರಂಭಿಸಿ, ನಂತರ ಬಾಳಚಂದ್ರ ದೇವ, ಪ್ರಭಾಚಂದ್ರಮುನಿ, ಕಣ್ಣೆಲದೇವ, ಅಷ್ಟೋಪವಾಸಿ, ಹೇಮನಂದಿಮುನಿ ಎಂದು ಹೇಳಿ ನಂತರ ಈ ಸೂರಸ್ತಗಣಕ್ಕೆ ಭಾಸ್ಕರನೆನಿಸಿದ ವಿನಯಕೀರ್ತಿ ಮುನಿಯ ಹೆಸರನ್ನು ಹೇಳಿ, ಅದರ ನಂತರ ಆತನು ಸೋನು ಏಕವೀರ ಎಂದು ಆ ಮುನಿಗಳ ಅನುಜರೇ ಪಲ್ಲಪಂಡಿತ ಅಥವಾ ಪಲ್ಲ ಕೀರ್ತಿ ಎಂದು ಹೇಳುತ್ತದೆ. ಈ ಪಲ್ಲಕೀರ್ತಿ ಪಂಡಿತನ ಗುಣಗಳನ್ನು ಸುಮಾರು 30 ಪಂಕ್ತಿಗಳಲ್ಲಿ ಹೇಳುತ್ತಾ ಈತ "ಬೇಡಿದರ್ಥಿ ಜನಕ್ಕೆ ಇಚ್ಚನೀವ ದೇವತರು" ಎಂದು ಹೇಳಲಾಗಿದೆ. ಈ ಶಾಸನದಲ್ಲಿ ಸೂರಸ್ತ

ಗಣದ ಅನೇಕ ಆಚಾರ್ಯರು ಮತ್ತು ಮುಖ್ಯವಾಗಿ ಪಲ್ಲಕೀರ್ತಿ ದೇವನು ಒಬ್ಬ ಅತ್ಯಂತ ಪ್ರಭಾವಶಾಲಿಯು ಪ್ರಖ್ಯಾತನು ಆದ ವ್ಯಕ್ತಿ ಇರಬೇಕು ಈ ಶಾಸನ ದೊರೆತಿರುವ ಕಂಬದಳ್ಳಿ ತೀರ್ಥದ ಆಚಾರ್ಯನು ಇವನೇ ಆಗಿರಬಹುದೆಂಬ ವಿಚಾರ ಮನದಟ್ಟಾಗುತ್ತದೆ. ಆದರೆ ಈ ಶಾಸನವು ಬಿಂಡಿಗನವಿಲೆಯ ಸ್ಥಳ ವೃತ್ತಿಯನ್ನು ಸ್ವೀಕರಿಸಿದ ದೇಸಿಗಣದ ಶುಭಚಂದ್ರ ಸಿದ್ಧಾಂತದೇವರಿಗೂ, ಕಂಬದಹಳ್ಳಿಯ ಸೂರಸ್ತಗಣದ ಪಲ್ಲಕೀರ್ತಿದೇವನಿಗೂ ಸಂಬಂಧವೇನು ಎಂದು ಹೇಳುವುದಿಲ್ಲ.

ಒಂದನೆಯ ನರಸಿಂಹನ ಕಾಲಕ್ಕೆ ಸೇರಿದ ನಾಗಮಂಗಲ ತಾಲ್ಲೂಕಿನ ಯಾಲದಹಳ್ಳಿಯಲ್ಲಿ ದೊರಕಿರುವ ಶಾಸನವು ಮೂಲ ಸಂಘಕ್ಕೆ ಸೇರಿದ ಮುನಿಚಂದ್ರ ದೇವರಿಗೆ ಸಂಬಂಧಿಸಿದ್ದು, ಈ ಶಾಸನದ ಪ್ರಕಾರ ಹೊಯ್ಸಳ ಒಂದನೆಯ ನರಸಿಂಹನು ತನ್ನ ಮಹಾಪ್ರಧಾನನಾದ ದೇವರಾಜನಿಗೆ ಬಳುವಳಿಯಾಗಿ ಕೊಟ್ಟ ಸೂರನಹಳ್ಳಿಯಲ್ಲಿ ತ್ರಿಕೂಟಜಿನಾಲಯವನ್ನು ಕಟ್ಟಿಸಿ ಶ್ರೀ ಪಾಶ್ವನಾಥ ತೀರ್ಥಂಕರರ ವಿಗ್ರಹವನ್ನು ಪ್ರತಿಷ್ಠಾಪಿಸಿ ಪಾರ್ಶ್ವಪುರ ಎಂಬ ನಾಮಕರಣ ಮಾಡಿರುತ್ತಾನೆ. ಈ ಜಿನಾಲಯವನ್ನು ಅದರ ದತ್ತಿ ಭೂಮಿಗಳನ್ನು ದೇವರಾಜನು ತನ್ನ ಗುರುಗಳಾದ ಮುನಿಚಂದ್ರದೇವರಿಗೆ ಧಾರೆಎರೆದುಕೊಟ್ಟ ವಿಚಾರ ತಿಳಿದುಬರುತ್ತದೆ.[127] ಈ ಶಾಸನದಲ್ಲಿ ಮೂಲ ಸಂಘ ದೇಶೀಯಗಣದ ಪುಸ್ತಕಗಚ್ಛ ಕುಂದಾಕುಂದಾನ್ವಯದ ಸಮಂತಭದ್ರಾಚಾರ್ಯ, ಅಕಳಂಕ ದೇವರು, ಗೃದ್ಧ ಪಿಂಚಾಚಾರ್ಯರು, ಸಾಗರನಂದಿ, ಸಿದ್ಧಾಂತದೇವ, ಅರ್ಹನಂದಿಮುನಿ, ನರೇಂದ್ರಕೀರ್ತಿತ್ರೈವಿದ್ಯದೇವ ಹಾಗೂ ಮುನಿಚಂದ್ರ ಭಟ್ಟಾರಕರ ಉಲ್ಲೇಖವಿದೆ. ಈ ಶಾಸನ ಕೌಶಿಕಗೋತ್ರದ ಮಹಾಪ್ರಧಾನತಂತ್ರವೆಗ್ಗಡ ದೇವರಾಜನನ್ನು ಪರಿಚಯಿಸುತ್ತದೆ. ದೇವರಾಜನ ಗುರುಪರಂಪರೆಯನ್ನು ಅನೇಕ ತಲೆಮಾರುಗಳ ತನಕ ಹೇಳುತ್ತಾ ಇದು ಶ್ರೀ ವರ್ಧಮಾನ ಸ್ವಾಮೀಗಳ ದಿವ್ಯ ತೀರ್ಥ ಎನ್ನುತ್ತದೆ. ಈ ವರ್ಧಮಾನ ಸ್ವಾಮೀಯೇ ಈ ಗುರುಪರಂಪರೆಯ ಮೂಲಿಗಳು, ಅವರು ಈ ಸ್ಥಳದಲ್ಲಿ ಇದ್ದುದರಿಂದಲೇ ಈ ಕ್ಷೇತ್ರಕ್ಕೆ ವರ್ಧಮಾನ ಸ್ವಾಮಿಗಳ ದಿವ್ಯತೀರ್ಥ ಎಂದು ಕರೆಯಲಾಗಿದೆ ಹಾಗೂ ಈ ಕ್ಷೇತ್ರದಲ್ಲಿ ಕೇವಲಿಗಳು, ಶೃತ ಕೇವಲಿಗಳು, ಆಗಿಹೋದರು ಎಂದು ತಿಳಿಯಲಾಗಿದೆ. ಈ ಪೈಕಿ ಆಚಾರ್ಯ ಸಮಂತ ಭದ್ರರು ಆಚಾರ್ಯ ಅಕಳಂಕ ದೇವರ ಹಾಗೂ ಆಚಾರ್ಯ ಗುದ್ರ ಪಿಂಚರು ಜೈನ ಧರ್ಮದ ಮಹಾಘನತೆವೆತ್ತ ಆಚಾರ್ಯರು.

ಒಂದನೆಯ ನರಸಿಂಹನ ಕಾಲದ ಕ್ರಿ.ಶ. 1144ರ ನಾಗಮಂಗಲ ತಾಲ್ಲೂಕಿನ ಬೋಗಾದಿ ಗ್ರಾಮದಲ್ಲಿ ದೊರೆತಿರುವ ಶಾಸನವು ಶ್ರೀಕರಣದ ಹೆಗ್ಗಡೆ ಮಾದಿರಾಜನಿಗೆ ಆಳರಸ ಜಿನಾಲಯ

ಕಟ್ಟಲು ಅವಕಾಶಕೊಟ್ಟಾಗ ಈ ಮಾದಿರಾಜ ಇಲ್ಲಿ ಒಂದು ಶ್ರೀಕರಣದ ಜಿನಾಲಯವನ್ನು ಕಟ್ಟಿಸಿ ಅದರ ಕೈಂಕರ್ಯಕ್ಕಾಗಿ ಜಮೀನನ್ನು ತನ್ನ ಗುರುಗಳಾದ ಅಜಿತಸೇನಾ ಭಟ್ಟಾರಕರಿಗೆ ಧಾರೆ ಎರೆದುಕೊಟ್ಟ ವಿಚಾರವನ್ನು ಒಳಗೊಂಡಿದೆ.[128] ಅದೇ ಗ್ರಾಮದ ಕ್ರಿ.ಶ. 1173ರ ಹೊಯ್ಸಳ ಅರಸ ವೀರಬಲ್ಲಾಳನ ಮಂತ್ರಿಯಾಗಿದ್ದ ಮಾಚಿರಾಜನ ಮಾವ ಸರ್ವಾಧಿಕಾರಿ ಹೆಗ್ಗಡೆ ಬಿಲ್ಲಯ್ಯನು ಬೋಗವತಿಯ ಶ್ರೀಕರಣದ ಜಿನಾಲಯದ ಸೇವಾಕಾರ್ಯಗಳಿಗಾಗಿ ಬೋಗವತಿ ಮತ್ತು ಕಾಳಬೋವನಹಳ್ಳಿಯ ಸಮಸ್ತ ಸುಂಕಗಳನ್ನು ತನ್ನ ಗುರುವಾದ ಅಕಳಂಕ ಸ್ವಾಮಿಗಳ ಶಿಷ್ಯರಾದ ಪದ್ಮಪ್ರಭ ಸ್ವಾಮಿಗಳಿಗೆ ದಾನ ಕೊಟ್ಟುದ್ದನ್ನು ತಿಳಿಸುತ್ತದೆ.[129]

ಹೊಯ್ಸಳ ದೊರೆ ಮೂರನೆಯ ನರಸಿಂಹನ ಕಾಲದ ಶಾಸನವು ಕಳೆಗೆರೆ ಗ್ರಾಮದಿಂದ ವರದಿಯಾಗಿದ್ದು, ಜೈನ ಆಚಾರ್ಯ ಮಾಘನಂದಿಸಿದ್ದಾಂತರ ಗುರುಪರಂಪರೆಯನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಸುಮಾರು 18 ಜನ ಗುರುಗಳ ಹೆಸರು ಉಲ್ಲೇಖವಾಗಿದೆ.[130]ಇವರೆಲ್ಲರೂ ಮೂಲ ಸಂಘದ ಬಲತ್ಕಾರ ಗಣಕ್ಕೆ ಸೇರಿದರು. ಇಲ್ಲಿ ಉಕ್ತವಾಗಿರುವ ಆಚಾರ್ಯರೆಂದರೆ ವರ್ಧಮಾನಭಟ್ಟಾರರು, ಶ್ರೀಧರಾಚಾರ್ಯರು, ದೇವನಂದಿತ್ರೈವಿದ್ಯರು, ವಾಸೂಪೂಜ್ಯ ಸಿದ್ದಾಂತದೇವರು, ಶುಭಚಂದ್ರ ಸಿದ್ದಾಂತದೇವರು, ಅಷ್ಟೋಪವಾಸಿ ಕನಕಚಂದ್ರದೇವರು, ನಯಕೀರ್ತಿ ಸಿದ್ದಾಂತಿಗಳು, ಮಾಸೋಪವಾಸಿ ರವಿಚಂದ್ರ ಕೀರ್ತಿಗಳು, ಹರಿಯನಂದಿ ಸಿದ್ದಾಂತಿಗಳು, ಶೃತಕೀರ್ತಿತ್ರೈವಿದ್ಯಾಧರರು, ವೀರನಂದಿ ಸಿದ್ಧಾಂತಿಗಳು ಹಾಗೂ ಗಂಡವಿಮುಕ್ತ ನೇಮಿಚಂದ್ರ ಭಟ್ಟಾರಕರು.

ಕಸಲಗೆರೆಯ ಕ್ರಿ.ಶ. 1142ರ ಶಾಸನವು ಕುಲ್ಕಣಿನಾಡಿನ ಒಡೆಯನಾಗಿದ್ದ ಸಾಮಂತ ಸೋವೆಯ ನಾಯಕನು ಹೆಬ್ಬದಿರುವಾಡಿಯಲ್ಲಿ ಉತ್ತುಂಗ ಚೈತ್ಯಾಲಯ ಕಟ್ಟಿಸಿ, ಶ್ರೀ ಪಾರ್ಶ್ವದೇವರ ಪ್ರತಿಷ್ಠೆಯನ್ನು ಮಾಡಿ ದೇವರ ಸೇವೆಗಾಗಿ, ಮುನಿಗಳ ಆಹಾರಕ್ಕಾಗಿ, ಬಸದಿಯ ಜೀರ್ಣೋದ್ಧಾರಕ್ಕಾಗಿ ತನ್ನ ಗುರುಗಳಾದ ಸೂರಸ್ತಗಣದ ಬ್ರಹ್ಮದೇವರ ಕಾಲನ್ನು ಮುಟ್ಟಿ ಧಾರಾಪೂರ್ವಕವಾಗಿ ದತ್ತಿ ಕೊಟ್ಟ ವಿವರ ಹಾಗೂ ಅದರ ಸೀಮಾ ಉಲ್ಲೇಖವನ್ನು ಹೊಂದಿದೆ.[131]

ಪಾಂಡವಪುರ ತಾಲ್ಲೂಕು, ಬಳೆಅತ್ತಿಗುಪ್ಪೆ ಗ್ರಾಮದ 12ನೇ ಶತಮಾನದ ಶಾಸನದಲ್ಲಿ ಕುಂದಕುಂದಾನ್ವಯದ ಸಿದ್ಧಾಂತ ಚಕ್ರವರ್ತಿಗಳೆಸಿದ ಶ್ರೀ ಮನ್ಮಯ ಕೀರ್ತಿದೇವರಿಗೆ ಒಬ್ಬ ಮಹಾದಾನಿ ಶ್ರಾವಕನು ಪೂಜಿಸಿ ದತ್ತಿಕೊಟ್ಟ ವಿಚಾರ ತಿಳಿದುಬರುತ್ತದೆ. ಇದೇ ತಾಲ್ಲೂಕಿನ ಹಿರೇಮರಳಿಯಲ್ಲಿ ಬುದ್ದಸೇನ ಕಂತಿ ಎಂಬ ಜೈನ ಸನ್ಯಾಸಿಯು ತಪಸ್ಸು ಮಾಡಿ ಸ್ವರ್ಗಸ್ಥಳಾದಳು ಎಂದು ತಿಳಿದುಬರುತ್ತದೆ.[132] ಕುಂತಿಬೆಟ್ಟ ಹಾಗೂ ಹಿರೋಡೆಬೆಟ್ಟ ಪರಿಸರದಲ್ಲಿ ಮಣಲೂರು

ಸಂಘದ ಒಬ್ಬ ಜೈನ ಆಚಾರ್ಯರು ಇದ್ದು, ಧರ್ಮಪ್ರಸಾರ ಮಾಡುತ್ತಿದ್ದರು ಎನ್ನುವ ಉಲ್ಲೇಖವಿದೆ.

ಶ್ರೀರಂಗಪಟ್ಟಣ ತಾಲ್ಲೂಕು, ಬಸ್ತಿಪುರ ಗ್ರಾಮದ ಕ್ರಿ.ಶ. 1422ರ ಶಾಸನದಲ್ಲಿ ಮೂಲಸಂಘದ ವಾಸುಪೂಜ್ಯ ದೇವರ ಶಿಷ್ಯರಾದ ಸಕಲಚಂದ್ರದೇವರ ಪ್ರಭಾವದಿಂದ ಕೂರಗಹಳ್ಳಿಯ ಗೌಡ ಕುಲದ ಕೇತುಗೌಡ, ರಾಮಗೌಡ ಮುಂತಾದವರು ಬಸ್ತಿಯನ್ನು ಕಟ್ಟಿಸಿ ಪಾರ್ಶ್ವದೇವರ ಸೇವೆಗಾಗಿ ಗದ್ದೆಯನ್ನು ದತ್ತಿಯಾಗಿ ಬಿಟ್ಟಿದ್ದಾರೆ ಎಂದಿದೆ.[133] ಬಸ್ತಿಪುರದ ಬೆಳಗೊಳ ಗ್ರಾಮದಲ್ಲಿ ದೊರೆತಿರುವ 12–13ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ ಅರುಂಗಳಾನ್ವಯದ ದ್ರವೀಳ ಸಂಘದ ನಂದೀಸಂಘದ ಉಲ್ಲೇಖವಿದೆ.[134]

ಬೆಳ್ಳೂರಿನ ಶಾಸನವೊಂದರಲ್ಲಿ ಸಮಂತಭದ್ರರ ಶಿಷ್ಯರಾದ ವಾದೀಬ ವಾಗ್ಮೀ ಕವಿಯಾದ ಲಕ್ಷ್ಮೀಸೇನ ಭಟ್ಟಾರಕರ ಶಿಷ್ಯನಾದ ಹುಲಿಕಲ್ಲು ನಿವಾಸಿ ಪದ್ಮಕುಲ ವಣಿಕ ಶ್ರೇಷ್ಟ ಸರ್ಕರಶೆಟ್ಟಿ, ಎಂಬಾತನು ವಿಭಲನಾಥ ಬಸದಿಯನ್ನು ಕಟ್ಟಿಸಿದನೆಂದು ಉಲ್ಲೇಖಿತವಾಗಿದೆ.[135] ಇದೇ ಬೆಳ್ಳೂರಿನ ಕ್ರಿ.ಶ. 1602ರ ಶಾಸನವು ಚಿತ್ರದುರ್ಗ ಜಿಲ್ಲೆಯ ಹರತಿಯ ಪಾಳೇಗಾರರು ತಮ್ಮ ಸೀಮೆಗೆ ಸೇರಿದ್ದ ರತ್ನಗಿರಿ ಬಸದಿಯ ಜೀರ್ಣೋದ್ಧಾರ ಮತ್ತು ಪೂಜಾ ಕೈಂಕರ್ಯಗಳನ್ನು ತಮ್ಮ ಗುರುಗಳಾದ ಲಕ್ಷೀಸೇನ ಭಟ್ಟಾರಕರ ಇಷ್ಟಾನುಸಾರ ಕೈಗೊಂಡಿರುವ ವಿಚಾರವನ್ನು ದಾಖಲಿಸಿದೆ.[136] ಬೆಳ್ಳೂರಿನಿಂದ ವರದಿಯಾಗಿರುವ ಎಲ್ಲಾ ಶಾಸನಗಳು ಲಕ್ಷ್ಮೀಸೇನಾಭಟ್ಟಾರಕರಿಗೆ ಸಂಬಂಧಿಸಿದ್ದು, ಇವೆಲ್ಲವೂ ವಿಮಲನಾಥ ತೀರ್ಥಂಕರರ ಬಸದಿಯಲ್ಲಿ ದೊರಕಿವೆ. ಇದರಿಂದ ಶ್ರೀ ಲಕ್ಷ್ಮೀಸೇನಾ ಭಟ್ಟಾರಕರು ದಕ್ಷಿಣ ಭಾರತದಲ್ಲಿ ದಿಗಂಬರ ಪಂಥದ ಪ್ರಮುಖ ಆಚಾರ್ಯರಾಗಿದ್ದು, ಅವರ ಕೇಂದ್ರ ಸ್ಥಳವು ಬೆಳ್ಳೂರಿನ ವಿಮಲನಾಥ ತೀರ್ಥಂಕರರ ಬಸದಿಯೇ ಇರಬೇಕು ಎನ್ನುವ ಅಂಶ ಗಮನಕ್ಕೆ ಬರುತ್ತದೆ. ಬೆಳ್ಳೂರು ಬಳಿಯ ದಡಗ ಗ್ರಾಮದ ಶಾಸನವೊಂದರಲ್ಲಿ ಮೂಲಸಂಘದ ಕಾನೂರು ಗಣದ ತಿಂತ್ರಿಣಿಗಚ್ಛಕ್ಕೆ ಸೇರಿದ ಕೊಂಡಕುಂದಾನ್ವಯದ ಜವಳಿಗೆ ಮುನಿ ಭದ್ರಸಿದ್ಧಾಂತ ದೇವರ ಹಾಗೂ ಮೇಘಚಂದ್ರ ಸಿದ್ಧಾಂತ ದೇವರ ಉಲ್ಲೇಖವಿದೆ.

ಮಂಡ್ಯ ಜಿಲ್ಲೆಯ ಶಾಸನಗಳನ್ನು ಅವಲೋಕಿಸಿದಾಗ ಕ್ರಿ.ಶ. 8ನೆಯ ಶತಮಾನದಿಂದ 12ನೆಯ ಶತಮಾನದವರೆಗೆ ಜೈನ ಪರಂಪರೆಯು ಅತೀ ಉಚ್ಛ್ರಾಯದಲ್ಲಿದ್ದುದನ್ನು ಕಂಡುಕೊಳ್ಳಬಹುದಾಗಿದೆ. ಇದನ್ನು ಬೇರೆ ರೀತಿ ಭಾವಿಸುವುದಾದರೆ ಗಂಗರು ಮತ್ತು ಹೊಯ್ಸಳರ ಕಾಲಘಟ್ಟದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಜೈನ ಮತವು ಅಪಾರ ರಾಜ ಮನ್ನಣೆಯನ್ನು ಹೊಂದಿದ್ದಿತ್ತಲ್ಲದೆ ಕ್ರಮೇಣ ವಿಜಯನಗರ ಕಾಲದಲ್ಲಿ ಹಾಗೂ ವಿಜಯನಗರೋತ್ತರ ಕಾಲದಲ್ಲಿ ತನ್ನ

ಪ್ರಖರತೆಯನ್ನು ಮಸುಕಾಗಿಸಿಕೊಂಡಿತೆಂದೆ ಹೇಳಬೇಕು. ಆದರೂ ಜೈನ ಧರ್ಮ ಜಿಲ್ಲೆಯಲ್ಲಿ ಉಳಿದುಕೊಂಡು ಬಂದಿರುವುದಕ್ಕೆ ಜಿಲ್ಲೆಯಲ್ಲಿರುವ ಅನೇಕ ಶಾಸನಗಳು ಜಿನಾಲಯಗಳು ಹಾಗೂ ಸ್ಮಾರಕಗಳು ಸಾಕ್ಷಿಯಾಗಿವೆ. ಅಲ್ಲದೆ ನೂರಾರು ಕುಟುಂಬಗಳು ಇಲ್ಲಿ ಇಂದಿಗೂ ಉಳಿದುಕೊಂಡು ಬಂದಿದ್ದು ಈ ಪರಂಪರೆಯ ಸಂರಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

3.5. ಶಾಸನಗಳಲ್ಲಿ ಯಾಪನೀಯ ಸಂಘದ ಉಲ್ಲೇಖ

ಜೈನ ಸಂಘ ಸಂಪ್ರದಾಯದಲ್ಲಿ ಶ್ವೇತಾಂಬರ ಮತ್ತು ದಿಗಂಬರ ಎಂಬ ಎರಡು ಸಂಘಗಳಿರುವುದು ಎಲ್ಲರಿಗೂ ತಿಳಿದ ವಿಚಾರ. ಆದರೆ ಇದರಷ್ಟೇ ಪ್ರಾಚೀನವಾದ ಮತ್ತೊಂದು ಸಂಘ ಯಾಪನೀಯ ಸಂಘ. ಈ ಸಂಪ್ರದಾಯವನ್ನು ಗೋಪ್ಯ ಸಂಘ ಎಂದು ಕರೆಯುತ್ತಾರೆ. ಈ ಸಂಪ್ರದಾಯವು ಅತ್ಯಂತ ಪ್ರಾಚೀನವಾದ ಪರಂಪರೆಯನ್ನು ಹೊಂದಿದ್ದು ದರ್ಶನ ಸಾರದ ಕರ್ತೃವಾದ ಶ್ರೀ ದೇವಸೇನ ಸೂರಿಯು ಕಥಾನುಸಾರ ಕೃತಿಯಲ್ಲಿ ಕ್ರಿ.ಶ. 148ರ ವಿಕ್ರಮ ಸಂವತ್ಸರದಲ್ಲಿ ಶ್ರೀ ಕಲಶನೆಂಬ ಶ್ವೇತಾಂಬರ ಸಾಧುವು ಈ ಸಂಘವನ್ನು ಸ್ಥಾಪಿಸಿದನೆಂದು ಅಭಿಪ್ರಾಯ ಪಡುತ್ತಾರೆ.[137] ಶ್ವೇತಾಂಬರ ಮತ್ತು ದಿಗಂಬರ ಪಂಥವಾಗಿ ಜೈನಧರ್ಮ ಒಡೆದುಹೋದ 70 ವರ್ಷಗಳ ತರುವಾಯ ಈ ಸಂಪ್ರದಾಯ ಪ್ರಾರಂಭವಾಯಿತು. ಈ ಸಂಪ್ರದಾಯವನ್ನು ಕರ್ನಾಟಕದ ಅದರಲ್ಲೂ ವಿಶೇಷವಾಗಿ ದಕ್ಷಿಣ ಕರ್ನಾಟಕ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಕಾಣಬಹುದಾಗಿದೆ. ಕದಂಬರು, ರಾಷ್ಟ್ರಕೂಟರು, ಗಂಗರು ಈ ಯಾಪನೀಯ ಸಂಘಕ್ಕೆ ಅನೇಕ ದಾನ ದತ್ತಿಗಳನ್ನು ನೀಡುತ್ತಿದ್ದರೆಂದು ತಿಳಿದುಬರುತ್ತದೆ. ಯಾಪನೀಯ ಸಂಘದ ಮುನಿಗಳು ದಿಗಂಬರರಾಗಿ ನವಿಲುಗರಿಯ ಪಿಚ್ಛವನ್ನು ಹಿಡಿದಿರುತ್ತಿದ್ದರು. ಇವರು ದಿಗಂಬರ ಮುನಿಗಳಂತೆ ಪಾಣಿಪಾತ್ರದಲ್ಲಿಯೇ ಭೋಜನ ಮಾಡುತ್ತಿದ್ದರು ಮತ್ತು ನಗ್ನ ಮೂರ್ತಿಗಳನ್ನು ಪೂಜೆ ಮಾಡುವುದರ ಜೊತೆಗೆ ಶ್ರಾವಕ ಶ್ರಾವಕಿಯರಿಗೆ ಸದ್ಧರ್ಮ ವೃದ್ಧಿರಸ್ತು ಎಂದು ಆಶೀರ್ವಾದ ಮಾಡುತ್ತಿದ್ದರು. ಇವರ ನಂಬಿಕೆಯಂತೆ ಸ್ತ್ರೀಯರಿಗೂ ಇದೇ ಜನ್ಮದಲ್ಲಿ ಮುಕ್ತಿ ಎಂದು ಕೇವಲಿಗಳು ಆಹಾರ ಸ್ವೀಕರಿಸುವವರೆಂದು ನಂಬಿದ್ದರು.

ಪ್ರಸಿದ್ಧ ವೈಯಾಕರ್ಣಿಕನಾದ ಶಕಟಾಯನ ಪಾಲ್ಯಕೀರ್ತಿಯು ಯಾಪನೀಯ ಸಂಘದವನು. ಈ ಸಂಘವು ಮಂಡ್ಯ ಜಿಲ್ಲೆಯಲ್ಲಿಯೂ ಪ್ರಚಲಿತದಲ್ಲಿತ್ತೆಂದು ಹಂಪ ನಾಗರಾಜಯ್ಯ[138] ಮತ್ತು ಎಂ.ಜಿ. ಮಂಜುನಾಥ್[139] ಅಭಿಪ್ರಾಯಪಡುತ್ತಾರೆ. ನಾಗಮಂಗಲ ತಾಲ್ಲೂಕಿನ ದಡಗ ಅತ್ಯಂತ ಪ್ರಮುಖ ಯಾಪನೀಯ ಕೇಂದ್ರವಾಗಿತ್ತೆಂದು ದಾಖಲಿಸುತ್ತಾರೆ.

ದಡಗದಲ್ಲಿ ದೊರೆತಿರುವ ಶಾಸನಗಳು ದಡಗವು ಬಹಳ ಹಿಂದೆ ಅಧಿಕ ಬಸದಿಗಳನ್ನು ಹೊಂದಿದುದಲ್ಲದೆ ಮೂಲ ಸಂಘದ ಕುಂದಾಕುಂದಾನ್ವಯಕ್ಕೆ ಸೇರಿದ ಕಾಣೂರ್ಗಣದ ತಿಂತ್ರಿಣಿಗಚ್ಛವನ್ನು ಹೆಸರಿಸುತ್ತದೆ. ಕಾಣೂರ್ಗಣವು ಯಾಪನೀಯ ಸಂಘವಾಗಿತ್ತೆಂದು, ಕಾಣೂರ್ಗಣವನ್ನು ಪ್ರಾಚೀನ ಉಲ್ಲೇಖಗಳು ಮತ್ತು ಅದು ಯಾಪನೀಯ ಸಂಘವಾಗಿತ್ತೆಂದು ಅನೇಕ ವಿದ್ವಾಂಸರುಗಳು ದಾಖಲಿಸಿರುತ್ತಾರೆ. ದಡಗದ ಶಾಸನದಲ್ಲಿ ಕಾಣೂರ್ಗಣ ತಿಂತ್ರಿಣಿ ಗಚ್ಛದ ನಂತರ ಹೇಳಿರುವ ಜವಳಿಗೆಯ ಎಂಬುದನ್ನು ಜಾವಳಿಗೆ ಎಂದು ಭಾವಿಸಿ ಇದು ಯಾಪನೀಯ ಸಂಬಂಧದ ರೂಪಗಳನ್ನು ಶಾಸನಗಳಲ್ಲಿ ಹುಡುಕುವ ಪ್ರಯತ್ನವನ್ನು ಉಪಾಧ್ಯಾಯ ಮಾಡಿರುತ್ತಾರೆಂದು ದಾಖಲಿಸುತ್ತಾರೆ. ಹಾಗಾಗಿ ಮಂಡ್ಯ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ದಡಗದಲ್ಲಿ ಐದು ಬಸದಿಗಳಿದ್ದು ನಾಲ್ಕು ಬಸದಿಗಳು ದೇಶೀಯ ಗಣಕ್ಕೆ ಸೇರಿದ್ದು ಒಂದು ಕಾಣೂರ್ಗಣಕ್ಕೆ ಸೇರಿತ್ತು ಎಂದು ದಾಖಲಿಸುತ್ತಾ ಯಾಪನೀಯ ಸಂಘವು ದಡಗದಲ್ಲಿ ಮತ್ತು ಮಂಡ್ಯ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿತ್ತೆಂದು ಅಭಿಪ್ರಾಯ ಪಡುತ್ತಾರೆ.

ಮಂಡ್ಯ ಜಿಲ್ಲೆಯಲ್ಲಿ ಇದುವರೆಗೆ ಬೆಳಕಿಗೆ ಬಂದಿರುವ ಜೈನ ಶಾಸನಗಳ ಸಂಖ್ಯೆ ಬೆರಳೆಣಿಕೆಯಷ್ಟಾದರೂ ಸಮಕಾಲೀನ ಸಾಂಸ್ಕೃತಿಕ ಚಿತ್ರಣವನ್ನು ವಸ್ತುನಿಷ್ಠವಾಗಿ ಚಿತ್ತಾರಗೊಳಿಸಲು ಇವುಗಳ ಕೊಡುಗೆ ಅಪಾರವಾಗಿದೆ. ಈ ಪ್ರದೇಶದ ಕೆಲವು ನೆಲೆಗಳಲ್ಲಿ ಗಂಗರ ಆಳ್ವಿಕೆಯ ಆರಂಭದ ಕಾಲದಿಂದಲೆ ಜೈನ ವಸತಿಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಗೋಚರಿಸುತ್ತವೆ. ಅವುಗಳಲ್ಲಿ ಅರೆತಿಪ್ಪೂರು, ಕಂಬದಹಳ್ಳಿ, ಬಸ್ತಿ ಹೊಸಕೋಟೆ ಹಾಗೂ ಬೋಗಾದಿ ಪ್ರಮುಖವಾಗಿವೆ. ಈ ನೆಲೆಗಳಲ್ಲಿ ಗಂಗರ ಆಳ್ವಿಕೆಯ ಆರಂಭ ಕಾಲದಲ್ಲಿಯೇ ಜನವಸತಿಗಳು ಇದ್ದವೆಂಬುದನ್ನು ಅನೇಕ ವಿದ್ವಾಂಸರು ಗುರುತಿಸಿದ್ದಾರೆ.

ಇದೇ ಅವಧಿಯಲ್ಲಿ ಕವಿಕಂದರ್ಪ, ಬಾಳಚಂದ್ರ ಮುಂತಾದ ಕವಿಗಳು ಬಿಂಡಯ್ಯ ಎಂಬ ಜೈನ ಶಾಸನ ಕವಿ ಸಾಹಿತ್ಯಕ್ಷೇತ್ರಕ್ಕೆ ಉತ್ಕೃಷ್ಟವಾದ ಕೊಡುಗೆಯನ್ನು ನೀಡಿದ್ದಾರೆ. ಅಲ್ಲದೆ, ದೇವ, ವಿಮಲಚಂದ್ರ, ಮತಿಸಾಗರ, ಪಂಡಿತಾಚಾರ್ಯ, ಕನಕಸೇನ ಭಟ್ಟಾರಕ, ಮೇಘಚಂದ್ರ, ಸಿದ್ಧಾಂತದೇವ, ಭಟ್ಟಾರಕ ಏಲಾಚಾರ್ಯ, ಪದ್ಮನಂದಿ, ಭಟ್ಟಾರಕ, ಶುಭಚಂದ್ರ, ಸಿದ್ಧಾಂತದೇವರು, ಪ್ರಭಾಚಂದ್ರದೇವ, ದೇವಚಂದ್ರ ಪಂಡಿತ, ಪಲ್ಲ ಪಂಡಿತ, ಮುನಿಚಂದ್ರದೇವ, ಮಾಘನಂದಿಸಿದ್ಧಾಂತ ದೇವರು, ಮನ್ಮಯ ಕೀರ್ತಿದೇವರು, ಸಕಲ ಚಂದ್ರದೇವರು, ಲಕ್ಷ್ಮಿಸೇನಾಭಟ್ಟಾರಕರು ಮುಂತಾದ ಪ್ರಸಿದ್ಧ ಜೈನಮುನಿಗಳೂ ಆಗಿಹೋಗಿದ್ದಾರೆ.

ಮಂಡ್ಯ ಜಿಲ್ಲೆಯು ಜೈನ ಮುನಿಪರಂಪರೆಗೆ ಅಪಾರ ಕೊಡುಗೆ ಕೊಟ್ಟಿದ್ದು ಈ ಅಧ್ಯಯನದಿಂದ ವೇದ್ಯವಾಗುತ್ತದೆ. ಇಲ್ಲಿ ಮೂಲಸಂಘದ ಮುನಿಗಳು ಹೆಚ್ಚಾಗಿದ್ದು ತರುವಾಯ ಯಾಪನೀಯ ಸಂಘದ ಮುನಿಗಳು ಕಂಡುಬರುತ್ತಾರೆ. ದಿಗಂಬರ ಮತ್ತು ಶ್ವೇತಾಂಬರ ಪಂಗಡಗಳ ಮಧ್ಯದಲ್ಲಿಯ ಭಿನ್ನಾಭಿಪ್ರಾಯಗಳನ್ನು ತುಂಬಲು ಯಾಪನೀಯ ಸಂಘವು ಹುಟ್ಟಿಕೊಂಡಿತು. ಈ ಪಂಗಡದ ಮುನಿಗಳು ನಿರ್ಗ್ರಂಥರಾಗಿಯೇ ಇರುತ್ತಿದ್ದರು. ಈ ಸಂಘವು ಮೂಲಸಂಘದ ಮೇಲೆ ಅಷ್ಟಾಗಿ ಪ್ರಭಾವ ಬೀರಿದಂತೆ ತೋರುವುದಿಲ್ಲ. ಆದ್ದರಿಂದಲೇ ಈ ಪಂಥದ ಮುನಿಗಳು ಕಡಿಮೆ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ.

ಗಂಗ ಮತ್ತು ಕದಂಬರ ಕಾಲದಿಂದ ಮೊದಲುಗೊಂಡು ಮೂಲಸಂಘ, ಯಾಪನೀಯಸಂಘ, ಕೂರ್ಚಕ ಸಂಘ, ಶ್ವೇತಪಟ ಸಂಘ, ದ್ರಾವೀಳ ಸಂಘ, ಮಣಲೂರು ಸಂಘ ಹಾಗೂ ಶ್ವೇತಪಟ ಸಂಘಗಳು ಅಸ್ತಿತ್ವದಲ್ಲಿದ್ದವು. ಆದರೆ ಕೂರ್ಚಕ ಮತ್ತು ಶ್ವೇತಪಟ ಸಂಘಗಳು ಕದಂಬರ ಆಳ್ವಿಕೆ ಕಾಲದಲ್ಲಿ ಮಾತ್ರ ಕಂಡುಬರುತ್ತವೆ. ಮೂಲಸಂಘ, ಯಾಪನೀಯ ಸಂಘಗಳು ಕದಂಬರ ಕಾಲದಿಂದ ಹೊಯ್ಸಳರ ಕಾಲದವರೆಗೂ ಅಸ್ತಿತ್ವದಲ್ಲಿದ್ದುದನ್ನು ಕಾಣಬಹುದು. ಮಂಡ್ಯ ಪ್ರದೇಶದಲ್ಲಿ ಮೂಲಸಂಘ ಹಾಗೂ ಯಾಪನೀಯ ಸಂಘದ ಕೆಲವು ಜೈನಮಠಗಳು ಅಸ್ತಿತ್ವದಲ್ಲಿದ್ದವು. ಕಂಬದಹಳ್ಳಿ ಹಾಗೂ ಅರೆತಿಪ್ಪೂರುಗಳಲ್ಲಿ ಜೈನ ಮಠಗಳಿದ್ದುದು ಕಂಡುಬರುತ್ತದೆ. ಹೀಗೆ ಮಂಡ್ಯ ಪ್ರದೇಶವು ಜೈನ ಮುನಿ ಪರಂಪರೆಗೆ ಅಪಾರವಾದ ಕೊಡುಗೆಯನ್ನು ನೀಡಿದೆಯೆಂದು ಹೇಳಬಹುದು.

ಜೈನಧರ್ಮವು ಕನ್ನಡನಾಡಿನುದ್ದಕ್ಕೂ ವಿಸ್ತರಿಸಿ ಆಳರಸರಾದಿ ಪ್ರಜೆಗಳನ್ನು ಆಕರ್ಷಿಸಿ ಹೆಮ್ಮರವಾಗಿ ಬೆಳೆದು ಬರಲು ಮುನಿಪರಂಪರೆಯ ಪಾತ್ರ ಅವಿಸ್ಮರಣೀಯವಾಗಿದೆ. ಈ ನಿಟ್ಟಿನಲ್ಲಿ ಇಂದಿನ ಮಂಡ್ಯ ಜಿಲ್ಲೆಯ ಪ್ರದೇಶದಲ್ಲಿ ಕ್ರಿ.ಶ. ಸುಮಾರು 6ನೇ ಶತಮಾನದಿಂದಲೂ ಧರ್ಮಪ್ರಸಾರ ಮತ್ತು ಜೈನ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸ್ಫೂರ್ತಿ ಪ್ರೇರಣೆ ಕೊಡಮಾಡಿದ ಮೂಲಸಂಘ ಮತ್ತು ಯಾಪನೀಯ ಸಂಘ ಪರಂಪರೆಗಳ ಮುನಿಗಳ ಪ್ರಭಾವ ಅಮೋಘವಾಗಿದೆ. ಕೆಲವು ಮುನಿಗಳು ಇಲ್ಲಿಯ ಜೈನ ಕೇಂದ್ರಗಳಲ್ಲಿ ತಮ್ಮ ಜೀವಮಾನದ ಕೊನೆಗಳಿಗೆಯನ್ನು ಕಳೆದು ಸಲ್ಲೇಖನವ್ರತದಿಂದ ಸಮಾಧಿಮರಣ ಹೊಂದಿದ್ದಾರೆ. ಅವರ ಪರೋಕ್ಷ ವಿನಯಾರ್ಥವಾಗಿ ನಿಷಿಧಿಗಲ್ಲುಗಳನ್ನು ನಿಲ್ಲಿಸಲಾಗಿದೆ. ಮದ್ದೂರು ತಾಲ್ಲೂಕಿನ ಅರೆತಿಪ್ಪೂರು, ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿ, ಬಿಂಡಿಗನವಿಲೆ, ಕೃಷ್ಣರಾಜಪೇಟೆ ತಾಲ್ಲೂಕಿನ ಬಳ್ಳೇಕೆರೆ, ಪಾಂಡವಪುರ ತಾಲ್ಲೂಕಿನ ಬಳೆಅತ್ತಿಗುಪ್ಪೆ ಹಾಗೂ ಕುಂತಿಬೆಟ್ಟದಲ್ಲಿ ಅಂತಹ ನಿಷಧಿಗಲ್ಲುಗಳಿವೆ. ಈ ಪರಿಸರಗಳಲ್ಲಿ

ಪಾದ ಚಿಹ್ನೆಗಳುಳ್ಳ ಅನೇಕ ಪೀಠಗಳು ಗೋಚರಿಸುತ್ತವೆ. ಈ ನೆಲೆಗಳಲ್ಲಿ ಸಲ್ಲೇಖನ ವ್ರತದಿಂದ ಸಮಾಧಿ ಮರಣವನ್ನಪ್ಪಿದ ಮುನಿಗಳು ಆರ್ಯಿಕೆಯರು ಮತ್ತು ಶ್ರಾವಕರ ಪರೋಕ್ಷ ವಿನಯಾರ್ಥವಾಗಿ ಇವುಗಳನ್ನು ಮಾಡಿಸಿದಂತೆ ತೋರುತ್ತದೆ.

ಒಟ್ಟಾರೆ ಮಂಡ್ಯ ಜಿಲ್ಲೆಯ ಶಾಸನಗಳು ಸಮಕಾಲೀನ ರಾಜಕೀಯ ಆಡಳಿತ, ಸಂಸ್ಕೃತಿ, ಸಮಾಜ, ಧರ್ಮ, ಮುನಿಪರಂಪರೆ, ಅರ್ಥವ್ಯವಸ್ಥೆ, ಜಿನಾಲಯಗಳು, ಶಿಲ್ಪಗಳು, ಭಾಷೆ, ಸಾಹಿತ್ಯ, ಸ್ಥಳನಾಮಗಳು, ಲಿಪಿಕಾರರು, ಮೊದಲಾದ ಅಜ್ಞಾತ ವಿಷಯಗಳಿಗೆ ಹೊನಲು ಬೆಳಕು ಹಾಯಿಸುವ ಅಪರೂಪದ ಆಕರಗಳನ್ನು ಗರ್ಭೀಕರಿಸಿಕೊಂಡಿವೆ. ಈ ಆಕರಗಳು ಮಂಡ್ಯ ಪ್ರದೇಶದಲ್ಲಿ ಜೈನಧರ್ಮ ಕುರಿತಾದ ತಲಸ್ಪರ್ಶಿ ಪ್ರೌಢ ಸಂಶೋಧನಾ ಅಧ್ಯಯನಾಸಕ್ತರಿಗೆ ದಾರಿದೀಪಗಳಾಗಿವೆ.

ಕೊನೆ ಟಿಪ್ಪಣಿಗಳು

1. ಎ.ಕ. 7, ನಾ.ಮಂ. 149
2. ಎ.ಕ. 7, ನಾ.ಮಂ. 37
3. ಅನಂತರಾಮು, ಕೆ., 1984, ಮಂಡ್ಯ ಜಿಲ್ಲೆಯ ಶಾಸನ ಸಂಪದ, *ಸುವರ್ಣ ಮಂಡ್ಯ* ದೇ.ಜ.ಗೌ. (ಸಂ.) ಮಂಡ್ಯ ಜಿಲ್ಲೆಯ ಸುವರ್ಣ ಮಂಡ್ಯ ಜಿಲ್ಲೆಯ ಸುವರ್ಣ ಮಹೋತ್ಸವದ ಅಂಗವಾಗಿ ಹೊರತಂದ ಸ್ಮರಣ ಸಂಚಿಕೆ, ಪು–86–111
4. ರೂಪೇಶ್ ಕುಮಾರ್ ಎಚ್.ಎಲ್., 2017, ಮಂಡ್ಯ ಜಿಲ್ಲೆಯ ಶಾಸನೋಕ್ತ ಜೈನ ಆಚಾರ್ಯರು, ಇತಿಹಾಸ ದರ್ಶನ, ಸಂಪುಟ 30, (ಸಂ), ದೇವರಕೊಂಡರೆಡ್ಡಿ ಮತ್ತು ಜಿ.ಕೆ. ದೇವರಾಜಸ್ವಾಮಿ, ಪುಟ 232–238
5. ದೊರೆಸ್ವಾಮಿ ಮ.ಕ., 2000, ಶ್ರೀ ಕಂಬದಹಳ್ಳಿ ಕ್ಷೇತ್ರ ದರ್ಶನ, ಪುಟ 5–10
6. ಶುಭಚಂದ್ರ, 1976, ಜೈನ ಸಾಹಿತ್ಯ ಮತ್ತು ಸಂಸ್ಕೃತಿ, ಕೆಲವು ಅಧ್ಯಯನಗಳು, ಪುಟ 92–107
7. ಸೀತಾರಾಮ ಜಾಗೀರ್‌ದಾರ್, 1999, ಕಂಬದಹಳ್ಳಿ ಒಂದು ಜೈನಕೇಂದ್ರ, ಪುಟ 23–46
8. ಸರಸ್ವತಿ ಎನ್. ಮತ್ತು ಶಿಲ್ಪಶ್ರೀ ಎಸ್., 2011, ಹೊಯ್ಸಳರ ಕಾಲದಲ್ಲಿ ದಾನಿಗಳ ಪಾತ್ರ, ಪುಟ–94–113
9. ಶುಭಚಂದ್ರ, 1976, ಪೂರ್ವೋಕ್ತ, ಪುಟ 92–107
10. ಎ.ಕ. 7, ನಾ.ಮಂ. 122 ಕ್ರಿ.ಶ. 10–11ನೇ ಶತಮಾನ
11. ಎ.ಕ. 6, ಕೃ.ಪೆ. 3 ಕ್ರಿ.ಶ. 1118
12. ಎ.ಕ. 6, ಕೃ.ಪೆ. 5 ಕ್ರಿ.ಶ. 15–16ನೇ ಶತಮಾನ
13. ಎ.ಕ. 7, ಮದ್ದೂರು 29, 30, 53, 54, 100, 106
14. ಎ.ಕ. 7, ಮದ್ದೂರು 100, ಕ್ರಿ.ಶ. 909
15. ಎ.ಕ. 6, ಪಾಂಪು. 10, ಕ್ರಿ.ಶ. 900
16. ಎ.ಕ. 6, ಪಾಂಪು 45, ಕ್ರಿ.ಶ. 12ನೇ ಶತಮಾನ
17. ಎ.ಕ. 6, ಶ್ರೀ.ಪ. 85, ಕ್ರಿ.ಶ. 904
18. ಎ.ಕ. 6, ಶ್ರೀ.ಪ. 73, ಕ್ರಿ.ಶ. 13ನೇ ಶತಮಾನ
19. ಎ.ಕ. 6, ಶ್ರೀ.ಪ. 74–75, ಕ್ರಿ.ಶ. 1422
20. ಎ.ಕ. 6, ಶ್ರೀ.ಪ. 38 – ಕ್ರಿ.ಶ. 1666

21. ಎ.ಕ. 7, ಮ.ವ. 30, ಕ್ರಿ.ಶ. 1265, 31, ಕ್ರಿ.ಶ. 1313
22. ಹಂಪ, ನಾಗರಾಜಯ್ಯ, 1997, ಚಂದ್ರಕೊಡೆ, ಪುಟ-170-180
23. ಕಂಬದಹಳ್ಳಿಯಲ್ಲಿ, ಎ.ಕ. 7, ನಾ.ಮಂ. 26, 27, 28, 29, 30, 31, 32, 33, 37, 38
    ಬಿಂಡಿಗನವಿಲೆ- ಎ.ಕ. 7, ನಾ.ಮಂ. 55
    ದೇವರಹಳ್ಳಿ-ಎ.ಕ. 7, ನಾ.ಮಂ. 149
    ಸುಖದೊರೆ, ಎ.ಕ. 7, ನಾ.ಮಂ. 14
    ಮತ್ಸಂದ್ರ- ಎ.ಕ. 7, ನಾ.ಮಂ. 167
    ಕಸಲಗೆರೆ- ಎ.ಕ. 7, ನಾ.ಮಂ. 169, 170
    ಬೋಗಾದಿ - ಎ.ಕ. 7, ನಾ.ಮಂ. 183, 184
    ಹಟ್ಟಣ - ಎ.ಕ. 7, ನಾ.ಮಂ. 118
    ಅಳೀಸಂದ್ರ - ಎ.ಕ. 7, ನಾ.ಮಂ. 72
    ಯಾಲದಹಳ್ಳಿ - ಎ.ಕ. 7, ನಾ.ಮಂ. 64
    ಕೋಡಿಹಳ್ಳಿ - ಎ.ಕ. 7, ನಾ.ಮಂ. 74
    ದಡಗ - ಎ.ಕ. 7, ನಾ.ಮಂ. 68, 69
    ಕೆಳಗೆರೆ - ಎ.ಕ. 7, ನಾ.ಮಂ. 60
    ಬೆಳ್ಳೂರು - ಎ.ಕ. 7, ನಾ.ಮಂ. 92, 93, 94, 96
    ಲಾಳನಕೆರೆ - ಎ.ಕ. 7, ನಾ.ಮಂ. 62
24. ರಂಗಸ್ವಾಮಿ ಆರ್., 2011, ಕೃಷ್ಣರಾಜ ಪೇಟೆ, ತಾಲ್ಲೂಕಿನ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನ, ಪುಟ 136
25. ಎ.ಕ. 7, ನಾ.ಮಂ. 149, ಕ್ರಿ.ಶ. 776
26. ಎ.ಕ. 6, ಪಾಂ.ಪು. 16, ಕ್ರಿ.ಶ. 900
27. ಎ.ಕ. 6, ಶ್ರೀ.ಪು. 85, ಕ್ರಿ.ಶ. 904
28. ಎ.ಕ. 7, ಮದ್ದೂರು 100 ಕ್ರಿ.ಶ. 909
29. ಎ.ಕ. 7, ನಾ.ಮಂ. 55, ಕ್ರಿ.ಶ. 975
30. ಎ.ಕ. 7, ನಾ.ಮಂ. 149, ಕ್ರಿ.ಶ. 770
31. ಎ.ಕ. 6, ಪಾಂ.ಪು.16, ಕ್ರಿ.ಶ. 9 & 10ನೇ ಶತಮಾನ
32. ಶುಭಚಂದ್ರ., 1976, ಪೂರ್ವೋಕ್ತ, ಪುಟ 92-107
33. ಎ.ಕ. 6, ಶ್ರೀ.ಪ. 85, ಕ್ರಿ.ಶ. 904
34. ಎ.ಕ. 7, ಮದ್ದೂರು-100, ಕ್ರಿ.ಶ. 909-10
35. ಎ.ಕ.7, ನಾ.ಮಂ. 55, ಕ್ರಿ.ಶ. 975
36. ಎ.ಕ. 7, ನಾ.ಮಂ. 24, ಕ್ರಿ.ಶ. 10ನೇ ಶತಮಾನ
37. ಎ.ಕ. 7, ನಾ.ಮಂ. 107, ಕ್ರಿ.ಶ. 10ನೇ ಶತಮಾನ
38. ಎ.ಕ. 6, ಪಾಂ.ಪು. 243, ಕ್ರಿ.ಶ. 10 & 11ನೇ ಶತಮಾನ
39. ಎ.ಕ. 7, ನಾ.ಮಂ. 121, ಕ್ರಿ.ಶ. 11ನೇ ಶತಮಾನ
40. ಶುಭಚಂದ್ರ., 1976, ಪೂರ್ವೋಕ್ತ, ಪುಟ 92-107
41. ಎ.ಕ. 7, ನಾ.ಮಂ. 122, ಕ್ರಿ.ಶ. 10-11ನೇ ಶತಮಾನ
42. ಶುಭಚಂದ್ರ., 1976, ಪೂರ್ವೋಕ್ತ, ಪುಟ 92-107
43. ಎ.ಕ. 7, ಮದ್ದೂರು, 54 ಕ್ರಿ.ಶ. 1117
44. ಎ.ಕ. 7, ನಾ.ಮಂ. 33, ಕ್ರಿ.ಶ. 1118
45. ಎ.ಕ. 6, ಕೃ.ಪೆ. 03, ಕ್ರಿ.ಶ. 1118
46. ಎ.ಕ. 7, ನಾ.ಮಂ. 14, ಕ್ರಿ.ಶ. 1120

47. ಎ.ಕ. 7, ನಾ.ಮಂ. 32, ಕ್ರಿ.ಶ. 12ನೇ ಶತಮಾನ
48. ಎ.ಕ. 6, ಕೃ.ಪೆ. 5, ಕ್ರಿ.ಶ. 12ನೇ ಶತಮಾನ
49. ಎ.ಕ. 6, ಮದ್ದೂರು 29, 1131
50. ಎ.ಕ. 7, ನಾ.ಮಂ. 68, ಕ್ರಿ.ಶ. 12ನೇ ಶತಮಾನ ಮತ್ತು ಸರಸ್ವತಿ ಎನ್, ಮತ್ತು ಕೆಂಪರಾಜ, ಎಸ್.ಎಲ್., 2011, ಹೊಯ್ಸಳರ ಕಾಲದ ದಂಡನಾಯಕರುಗಳು ಮತ್ತು ಅವರ ಕೊಡುಗೆಗಳು, ಪುಟ- 88-138
51. ಎ.ಕ. 7, ನಾ.ಮಂ. 169, ಕ್ರಿ.ಶ. 1142 ಮತ್ತು ಸರಸ್ವತಿ ಎನ್, ಮತ್ತು ಕೆಂಪರಾಜ ಎಸ್.ಎಲ್., 2011 ಪೂರ್ವೋಕ್ತ, ಪುಟ 88-138
52. ಎ.ಕ. 7, ನಾ.ಮಂ. 170, ಕ್ರಿ.ಶ. 12ನೇ ಶತಮಾನ
53. ಎ.ಕ. 7, ನಾ.ಮಂ. 183, ಕ್ರಿ.ಶ. 1144
54. ಎ.ಕ. 7, ನಾ.ಮಂ. 30, ಕ್ರಿ.ಶ. 1145, ಮತ್ತು ಸರಸ್ವತಿ.ಎನ್ ಮತ್ತು ಕೆಂಪರಾಜು.ಎಸ್.ಎಲ್., 2011, ಪೂರ್ವೋಕ್ತ, ಪುಟ 88-138
55. ಎ.ಕ. 7, ನಾ.ಮಂ. 64, ಕ್ರಿ.ಶ. 1145
56. ಎ.ಕ. 6, ಕೃ.ಪೆ. 107-ಕ್ರಿ.ಶ. 1147.
57. ಎ.ಕ. 6, ಕೃ.ಪೆ. 106-ಕ್ರಿ.ಶ. 1165, ಎ.ಕ. 7, ನಾ.ಮಂ. 26, ಕ್ರಿ.ಶ. 1168
58. ಎ.ಕ. 7, ನಾ.ಮಂ. 184, ಕ್ರಿ.ಶ. 1173
59. ಎ.ಕ. 7, ನಾ.ಮಂ. 29, ಕ್ರಿ.ಶ. 1174
60. ಎ.ಕ. 6, ಪಾಂ.ಪು. 15, ಕ್ರಿ.ಶ. 1175
61. ಎ.ಕ. 7, ನಾ.ಮಂ. 118, ಕ್ರಿ.ಶ. 1178
62. ಸರಸ್ವತಿ ಎನ್, ಮತ್ತು ಕೆಂಪರಾಜ ಎಸ್.ಎಲ್. 2011, ಪೂರ್ವೋಕ್ತ, ಪುಟ 88-138
63. ಎ.ಕ. 7, ನಾ.ಮಂ. 72, ಕ್ರಿ.ಶ. 1184
64. ಸರಸ್ವತಿ ಎನ್, ಮತ್ತು ಶಿಲ್ಪಶ್ರೀ, 2011, ಪೂರ್ವೋಕ್ತ- ಪುಟ-94-113
65. ರಾಜೇಗೌಡ ಹ.ಕ., 1994, ಮಂಡ್ಯ ಜಿಲ್ಲೆಯ ಶಾಸನೋಕ್ತ ಮಹಿಳೆಯರು, ಪುಟ 131-151
66. ಎ.ಕ.ಸಂ. 7ರ ಪ್ರಸ್ತಾವನೆ, ಪುಟ-10-17
67. ಅದೇ, ಪುಟ-10-17
68. ಅದೇ ಮತ್ತು ನಾ.ಮಂ. 72, ಕ್ರಿ.ಶ. 1184
69. ಎ.ಕ. 7, ಮದ್ದೂರು 30, ಕ್ರಿ.ಶ. 12ನೇ ಶತಮಾನ
70. ಎ.ಕ. 6, ಪಾಂ.ಪು. 245, ಕ್ರಿ.ಶ. 12ನೇ ಶತಮಾನ
71. ಎ.ಕ. 7, ನಾ.ಮಂ. 28, ಕ್ರಿ.ಶ. 12ನೇ ಶತಮಾನ, ರತ್ನಮ್ಮ ಎಸ್., 2003, ಕಂತಿಯರು ಮತ್ತು ಮುಡುಪಿದವರು, ಪುಟ 45-48,
72. ಎ.ಕ. 7, ನಾ.ಮಂ. 38, ಕ್ರಿ.ಶ. 12-13ನೇ ಶತಮಾನ
73. ಎ.ಕ. 7, ಮದ್ದೂರು 106, ಕ್ರಿ.ಶ. 1700
74. ಎ.ಕ. 7, ನಾ.ಮಂ. 31, ಕ್ರಿ.ಶ. ತೇದಿರಹಿತ ಶಾಸನ
75. ಎ.ಕ. 7, ಮದ್ದೂರು, 51, ಕ್ರಿ.ಶ. 1204
76. ಎ.ಕ. 7, ಮದ್ದೂರು, 53, ಕ್ರಿ.ಶ. 13ನೇ ಶತಮಾನ, ತಮಿಳ್‌ಸೆಲ್ವಿ, 2011, ಕವಿ ಕಂದರ್ಪ ಮತ್ತು ಬಾಳಚಂದ್ರಮುನಿ- ಒಂದು ವಿವೇಚನೆ, ಮುಕ್ಕೊಡೆ, ಡಾ. ಸಿ.ಎಸ್. ವಾಸುದೇವನ್ (ಸಂ), ಪುಟ 325-330
77. ಎ.ಕ. 7, ನಾ.ಮಂ. 60, ತೇದಿರಹಿತ ಶಾಸನ
78. ಅದೇ
79. ಎ.ಕ. 6, ಶ್ರೀ.ಪ. 73, 13ನೇ ಶತಮಾನ
80. ಎ.ಕ. 7, ಮ.ಳ. 30, 1265 ಕ್ರಿ.ಶ.

81. ಎ.ಕ. 7, ಮ.ಳ. 31, ಕ್ರಿ.ಶ. 1313
82. ಎ.ಕ. 6, ಶ್ರೀ.ಪ. 74, ಕ್ರಿ.ಶ. 1422
83. ಎ.ಕ. ಕೃ.ಪೆ. 4, ಕ್ರಿ.ಶ. 13ನೇ ಶತಮಾನ
84. ರಂಗಸ್ವಾಮಿ ಆರ್., 2011, ಪೂರ್ವೋಕ್ತ, ಪುಟ 136–137
85. ಎ.ಕ. 6, ಕೃ.ಪೆ. 5, 15–16ನೇ ಶತಮಾನ
86. ಎ.ಕ. 6, ಶ್ರೀ.ಪ. 75, ತೇದಿರಹಿತ
87. ಎ.ಕ. 6, ಶ್ರೀ.ಪ. 38, ಕ್ರಿ.ಶ. 1666
88. ಎ.ಕ. 7, ನಾ.ಮಂ. 94, ಕ್ರಿ.ಶ. 17ನೇ ಶತಮಾನ
89. ಎ.ಕ. 7, ನಾ.ಮಂ. 92, ಕ್ರಿ.ಶ. 1518
90. ಎ.ಕ. 7, ನಾ.ಮಂ. 37, ಕ್ರಿ.ಶ. 17 ಮತ್ತು 18ನೇ ಶತಮಾನ
91. ಹಂಪ ನಾಗರಾಜಯ್ಯ 1997, ಪೂರ್ವೋಕ್ತ, ಪುಟ 170–180
92. ರತ್ನಮ್ಮ, ಎಸ್., 2003, ಪೂರ್ವೋಕ್ತ, 2003, ಪುಟ 45–48
93. ಎ.ಕ. 7, ನಾ.ಮಂ. 149
94. ಎ.ಕ. 6, ಕೃ.ಪೆ. 03
95. ಎ.ಕ. 6, ಕೃ.ಪೆ. 21
96. ಎ.ಕ. 7, ಮದ್ದೂರು 53
97. ಎ.ಕ. 7, ಮದ್ದೂರು 54
98. ಎ.ಕ. 6, ಕೃ.ಪೆ. 106
99. ಎ.ಕ. 7, ನಾ.ಮಂ. 64
100. ಎ.ಕ. 7, ನಾ.ಮಂ. 72
101. ಎ.ಕ. 7, ನಾ.ಮಂ. 118
102. ರತ್ನಮ್ಮ ಎಸ್., 2003, ಪೂರ್ವೋಕ್ತ, ಪುಟ 45–48
103. ಎ.ಕ. 7, ನಾ.ಮಂ. 55, ಕ್ರಿ.ಶ. 975
104. ಎ.ಕ. 7, ನಾ.ಮಂ. 27 & 28
105. ನಾಗರಾಜರಾವ್ ಎಚ್.ಎಂ., 2009, ಮಂಡ್ಯ ಜಿಲ್ಲೆಯ ಶಾಸನಗಳ ಸಮೀಕ್ಷೆ, ಮಂಡ್ಯ ಜಿಲ್ಲೆಯ ಪುರಾತತ್ವ ಮತ್ತು ಇತಿಹಾಸ, ಡಾ. ಆರ್. ಗೋಪಾಲ್ (ಸಂ.), ಪುಟ, 16–37
106. ಅದೇ, ಪುಟ 16–37
107. ಎ.ಕ. 6, ಶ್ರೀ.ಪ. 85, ಕ್ರಿ.ಶ. 904
108. ಎ.ಕ. 7, ನಾ.ಮಂ. 118
109. ಎ.ಕ. 7, ನಾ.ಮಂ. 37
110. ಎ.ಕ. 7, ನಾ.ಮಂ. ನಾಮಂ. 85
111. ಎ.ಕ. 6, ಶ್ರೀ.ಪ. 147,
112. ಎ.ಕ. 6, ಶ್ರೀ.ಪ. 148,
113. ಎ.ಕ. 7, ಮವ. 30
114. ಎ.ಕ. 7, ಮವ. 31
115. ಎ.ಕ. 7, ಮದ್ದೂರು 21
116. ಎ.ಕ. 7, ನಾ.ಮಂ. 67
117. ಎ.ಕ. 7, ನಾ.ಮಂ. 35
118. ಎ.ಕ. 7, ನಾ.ಮಂ. 19
119. ಎ.ಕ. 6, ಕೃ.ಪೆ. 3
120. ಎ.ಕ. 6, ಕೃ.ಪೆ. 115

121. ಎ.ಕ. 7, ನಾ.ಮಂ. 103
122. ಎ.ಕ. 7, ನಾ.ಮಂ. 20
123. ಎ.ಕ. 7, ನಾ.ಮಂ. 70
124. ಎ.ಕ. 7, ನಾ.ಮಂ. 72
125. ಎ.ಕ. 7, ನಾ.ಮಂ. 70
126. ಎ.ಕ. 7, ನಾ.ಮಂ. 30
127. ಎ.ಕ. 7, ನಾ.ಮಂ. 64
128. ಎ.ಕ. 7, ನಾ.ಮಂ. 183
129. ಎ.ಕ. 7, ನಾ.ಮಂ. 184
130. ಎ.ಕ. 7, ನಾ.ಮಂ. 60
131. ಎ.ಕ. 7, ನಾ.ಮಂ. 170
132. ಎ.ಕ. 6, ಪಾಂ.ಪು. 245
133. ಎ.ಕ. 6, ಶ್ರೀ.ಪ. 74, ಕ್ರಿ.ಶ. 1422
134. ಎ.ಕ. 6, ಶ್ರೀ.ಪ. 73,
135. ಎ.ಕ. 7, ನಾ.ಮಂ. 93
136. ಎ.ಕ. 7, ನಾ.ಮಂ. 96
137. ಮಿರ್ಜಿ ಅಣ್ಣಾರಾಯ, 1999, ಜೈನಧರ್ಮ, ಪುಟ 81–83
138. ಹಂಪ ನಾಗರಾಜಯ್ಯ, 1997, ಪೂರ್ವೋಕ್ತ, ಪುಟ 24–29
139. ಎಂ.ಜಿ. ಮಂಜುನಾಥ್, 2009, ಮಂಡ್ಯ ಜಿಲ್ಲೆಯಲ್ಲಿ ಜೈನಧರ್ಮ, ಮಂಡ್ಯ ಜಿಲ್ಲೆಯ ಪುರಾತತ್ವ ಮತ್ತು ಇತಿಹಾಸ, ಡಾ. ಆರ್. ಗೋಪಾಲ್ (ಸಂ.), ಪುಟ 246–249

ಅಧ್ಯಾಯ – ನಾಲ್ಕು

ಮಂಡ್ಯ ಜಿಲ್ಲೆಯ ಜೈನ ಸಂಸ್ಕೃತಿ

ಜೈನ ಧರ್ಮ ಮತ್ತು ಸಂಸ್ಕೃತಿಯ ಅತ್ಯುಚ್ಚ ಸ್ಥಿತಿಯನ್ನು ನಿರ್ಧರಿಸುವುದು ಅದರ ಆಚರಣಾಂಗ ಪ್ರಕೃತಿಯೊಂದಿಗೆ ಆ ಧರ್ಮವು ಮತ್ತು ಮಾನವ ಸ್ವಭಾವಗಳನ್ನು ಹೊಂದಿರುವ ತಾದ್ಯಾತ್ಮತೆಯನ್ನು ಅವಲಂಬಿಸಿದೆ. ಜೈನ ಧರ್ಮವು ಅಹಿಂಸೆಯನ್ನು ಪರಮ ಪವಿತ್ರ ವ್ರತವಾಗಿ ಹೊಂದಿ ಎಲ್ಲ ಜೀವರಾಶಿಗಳಲ್ಲಿಯೂ ಪರಮಾತ್ಮನ ಅಂಶವನ್ನು ಕಾಣುವ ಮತ್ತು ಅವುಗಳನ್ನು ಬದುಕಿಸಿ ತಾನೂ ಬದುಕುವ ಪಾರಮಾರ್ಥದ ಪರಿಕಲ್ಪನೆ ಜಿನಧರ್ಮದ ಶ್ರೇಷ್ಠತೆ. ಸಂಸ್ಕೃತಿಯು ಧಾರ್ಮಿಕ ಅನುಸಂಧಾನದಲ್ಲಿ ನಿರಂತರ ವೈಚಾರಿಕ ಮತ್ತು ಸಾಂಪ್ರದಾಯಿಕ ಕೊಡು–ಕೊಳ್ಳುವಿಕೆಗಳನ್ನು ಅಂತರ್ಗತ ಮಾಡಿಕೊಂಡು ಮುಂದುವರಿಯುತ್ತದೆ. ಈ ಬಗೆಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಅನುಸಂಧಾನ ಜೈನಧರ್ಮಕ್ಕೇ ವಿಶೇಷವೇನಲ್ಲ. ಸನಾತನ ಭಾರತೀಯ ಯಾವ ಧರ್ಮವೂ ನಿಂತ ನೀರಲ್ಲ. ಸಮಾಜದ ಅವಶ್ಯಕತೆಗಳಿಗನುಗುಣವಾಗಿ ಕಾಲದಿಂದ ಕಾಲಕ್ಕೆ ತನ್ನ ಆಚರಣಾಂಗದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತದೆ. ಜೈನಧರ್ಮವು ತನ್ನೊಂದೇ ಧಾರ್ಮಿಕ ಸಂಬಂಧ ಮತ್ತು ಸಂಘರ್ಷಗಳೊಡನೆ ತೊಳಲಾಡದೆ ತನ್ನ ಸುತ್ತಲಿನ ಧರ್ಮಗಳೊಂದಿಗೂ ಕೊಡುಕೊಳ್ಳುವಿಕೆಯನ್ನು ಮುಂದುವರಿಸಿತು.

ಭಾರತೀಯ ಜೈನ ಪರಂಪರೆಯಲ್ಲಿ ಶ್ವೇತಾಂಬರ, ದಿಗಂಬರ, ತೇರಾಪಂಥ ಇತ್ಯಾದಿ ಅನೇಕ ಉಪಶಾಖೆಗಳಿದ್ದರೂ ಈ ಎಲ್ಲ ಉಪಶಾಖೆಗಳ ಮೂಲತತ್ವಗಳಲ್ಲಿ ಮತ್ತು ಸೈದ್ಧಾಂತಿಕ ವಿಚಾರಗಳಲ್ಲಿ ಯಾವುದೇ ಭೇದಭಾವಗಳಿಲ್ಲ. ಕೆಲವೊಂದು ಆಚರಣೆಗಳು ಪ್ರಾದೇಶಿಕ ಜೀವನದಿಂದ ಪ್ರಭಾವಿತವಾದವುಗಳಾಗಿದೆ. ಧಾರ್ಮಿಕ ಆವರಣದಲ್ಲಿ ನಿರಂತರ ವಾಗ್ವಾದಗಳಿಗೆ ಕಾರಣವಾಗಿರುವ ಜೈನಧರ್ಮವು ಮನುಷ್ಯ ಜೀವಿಯ ಬದುಕನ್ನು ಶಾಂತ ಮತ್ತು ಅಹಿಂಸೆಯ ಸಂಸರ್ಗದಲ್ಲಿ ನಡೆಸಿಕೊಂಡು ಹೋಗುವುದರಲ್ಲಿ ಅತಿದೊಡ್ಡ ಪಾತ್ರವನ್ನು ನಿರ್ವಹಿಸುತ್ತಿದೆ. ಇಂತಹ ಧರ್ಮವು ಕರ್ನಾಟಕದಲ್ಲಿ ಮೊದಲು ನೆಲೆಕಂಡದ್ದು ಶ್ರವಣಬೆಳಗೊಳದಲ್ಲಿ ಎಂದು ಜಿನಧರ್ಮದ ಐತಿಹ್ಯಗಳು ತಿಳಿಹೇಳುತ್ತವೆ.[1] ಶ್ರವಣಬೆಳಗೊಳಕ್ಕೆ ಈ ಧರ್ಮ ನೇರವಾಗಿ ಬಂತೇ ಅಥವಾ ಉತ್ತರ ಕರ್ನಾಟಕಕ್ಕೆ ಬಂದು ಈ ಧರ್ಮ ಆನಂತರ ದಕ್ಷಿಣ ಕರ್ನಾಟಕಕ್ಕೆ ಪ್ರವೇಶಿಸಿತೇ ಅಥವಾ ಉತ್ತರ ಭಾರತದಿಂದ ಪೂರ್ವತೀರದ ಕಡಲಮಾರ್ಗವಾಗಿ ಸಂಚರಿಸಿ ಕಾಂಚಿಯನ್ನು ಪ್ರವೇಶಿಸಿ ನಂತರ ದಕ್ಷಿಣಾ ಪಥಕ್ಕೆ ಬಂದು ಮೇಲ್ಮುಖವಾಗಿ ಮುಂದುವರಿದು ಶ್ರವಣಬೆಳಗೊಳ ಆನಂತರ ಉತ್ತರ ಕರ್ನಾಟಕಕ್ಕೆ ಪಸರಿಸಿತೇ ಈ ವಿಚಾರಗಳ ಬಗ್ಗೆ ನಿರ್ದಿಷ್ಟ ಅಧ್ಯಯನಗಳ ಅವಶ್ಯಕತೆ ತೋರುತ್ತದೆ.[2] ಈವರೆಗೆ

ಜೈನಧರ್ಮ ಸಾಗಿಬಂದ ಮಾರ್ಗವನ್ನು ಐತಿಹ್ಯಗಳು ತಿಳಿಸುವುದಿಲ್ಲ. ಇದು ನಮ್ಮ ಅಧ್ಯಯನ ಕ್ಷಿತಿಜದಾಚೆಗಿರುವುದರಿಂದ ಅದಕ್ಕೆ ಒತ್ತುಕೊಡದೆ ಧಾರ್ಮಿಕ ಆಚರಣೆ ಅದರಲ್ಲೂ ವಿಶೇಷವಾಗಿ ಜೈನ ಶ್ರಾವಕ ಮೂಲಮಾತೃಕೆಗಳು ಮತ್ತು ಜೀವನ ಸಂಸ್ಕಾರಗಳು, ವ್ರತ/ನೋಂಪಿ ಮತ್ತು ಸಾಮಾಜಿಕ ಆಚರಣೆಗಳನ್ನು ಪರಿಚಯ ಮಾಡುವ ಹಾಗೂ ಸ್ಥಾನಿಕ ಧರ್ಮಗಳ ಆಚರಣೆಗಳಲ್ಲಿನ ಪ್ರಾದೇಶಿಕ ವ್ಯತ್ಯಾಸಗಳು, ಹಬ್ಬಗಳು, ಸಂಸ್ಕಾರಗಳು ಇತ್ಯಾದಿ ವಿವರಗಳನ್ನು ಈ ಅಧ್ಯಾಯದಲ್ಲಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ. ಒಟ್ಟಾರೆ ಈ ಅಧ್ಯಾಯದಲ್ಲಿ ಜೈನ ಧಾರ್ಮಿಕ ಸಿದ್ಧಾಂತ, ಶೋಡಷ ಸಂಸ್ಕಾರಗಳು, ಹಬ್ಬಗಳು ಮತ್ತು ನೋಂಪಿಗಳೆಂಬ ಮೂರು ಉಪಾಖ್ಯಾನದಲ್ಲಿ ಜೈನ ಧರ್ಮ ಮತ್ತು ಸಂಸ್ಕೃತಿಯ ಕಿರುಪರಿಚಯವನ್ನು ಮಾಡಿಕೊಡಲು ಪ್ರಯತ್ನಿಸಲಾಗುವುದು.

4.1. ಜೈನ ಧರ್ಮದ ಶ್ರಾವಕಾಚಾರ

ಜೈನಧರ್ಮದಲ್ಲಿ ವಿಶೇಷವಾಗಿ ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ ಎರಡು ರೀತಿಯಾದ ಆಚರಣೆಗಳನ್ನು ಕಾಣಬಹುದು. ಅದೆಂದರೆ ಸಾಮಾನ್ಯ ಜೈನ ಧರ್ಮೀಯರ ಅಂದರೆ ಶ್ರಾವಕಾಚಾರ ಮತ್ತು ಜೈನ ಮುನಿಗಳ ಆಚಾರ. ಇದು ಜೈನ ಧರ್ಮದ ಆಚಾರ ಸಂಸ್ಕೃತಿಯನ್ನು ನಿರ್ದೇಶಿಸುತ್ತದೆ. ಗೃಹಸ್ಥರು ಆಚರಿಸುವ ಧರ್ಮಾಚರಣೆಯನ್ನು ಶ್ರಾವಕ ಧರ್ಮವೆಂದು ಕರೆಯಲಾಗುತ್ತದೆ. ಇನ್ನೊಂದು ರೀತಿಯಲ್ಲಿ ಇದನ್ನು ಗೃಹಸ್ಥರ ಧಾರ್ಮಿಕಾಚರಣೆ, ಕಥನ ಮುಖಿಯಾದ ಚಲನೆಯ ಸಂಕೇತವೇ ಶ್ರಾವಕರೂಪಿ. ಮುನಿಗಳಿಗೆ ಇರುವಂತೆ ಜೈನಾಚಾರ ಮತ್ತು ತತ್ವ ಸಿದ್ಧಾಂತಗಳು ಶ್ರಾವಕರಿಗೂ ಅನ್ವಯವಾಗುತ್ತವೆ. ಜೈನಮುನಿಗಳು ಆಚರಿಸುವ ವ್ರತಗಳನ್ನು ಅಥವಾ ಆಚರಣೆಗಳನ್ನು ಮಹಾವ್ರತಗಳು ಅಥವಾ ಮಹಾ ಆಚರಣೆಗಳೆಂತಲೂ ಅದೇ ತತ್ವ ಮತ್ತು ಸಿದ್ಧಾಂತದ ಹಿನ್ನೆಲೆಯಲ್ಲಿ ಶ್ರಾವಕನು ಆಚರಿಸುವ ಆಚರಣೆಗಳು ಅಣುರೂಪಿ ಆಚರಣೆಗಳಾಗಿ ಮುಂದುವರಿಯುತ್ತವೆ. ಆದರೆ ಇವುಗಳಲ್ಲಿನ ಕೆಲವೊಂದು ಆಚರಣೆಗಳಲ್ಲಿ ಶ್ರಾವಕರಿಗೆ ರಿಯಾಯಿತಿಯುಂಟು.

ಐದು ಅಣುವ್ರತಗಳನ್ನು ಮೂರು ಗುಣವ್ರತಗಳನ್ನು ಹಾಗೂ ನಾಲ್ಕು ಶಿಕ್ಷಾ ವ್ರತಗಳನ್ನು ಪಾಲಿಸುವುದರ ಮೂಲಕ ಜೈನ ಗೃಹಸ್ಥರು ಶ್ರಾವಕ ರೂಪಿಗಳಾಗುತ್ತಾರೆ. ಈ ಆಚರಣೆಗಳ ಮೂಲಕ ಶ್ರಾವಕರು ಭೋಗ ಸುಖಗಳನ್ನು ತ್ಯಜಿಸಿ ಕರ್ಮಬಂಧಗಳಿಂದ ಮುಕ್ತರಾಗಿ ಮುನಿ ಅವಸ್ಥೆಯನ್ನು ತಲುಪಲು ಸಿದ್ಧವಾಗುತ್ತಾರೆ. ಹೀಗಾಗಿ ಜೈನಗೃಹಸ್ಥರು ಸಂಸಾರದಲ್ಲಿದ್ದುಕೊಂಡೇ ಲೌಕಿಕ ಪ್ರಪಂಚದೊಂದಿಗೆ ಹೊಂದಿರುವ ಸಂಬಂಧವನ್ನು ಹಂತ ಹಂತವಾಗಿ ಕಳಚಿಕೊಳ್ಳಲು ಪ್ರಯತ್ನಿಸಬೇಕು. ಅದಕ್ಕಾಗಿ ಜೈನ ತತ್ವ ಮತ್ತು ಸಿದ್ಧಾಂತಗಳು ಪೂರಕವಾಗಿ ಸಹಕರಿಸುತ್ತವೆ. ಜೈನ

ಸಂಸ್ಕೃತಿಯ ಮೂಲ ಮಾತೃಕೆಗಳು ಆತ್ಮನು ತಳಹಂತದಿಂದ ಉದ್ಭವವಾಗಿ ಉನ್ನತ ಸ್ತರಕ್ಕೆ ಹಂತಹಂತವಾಗಿ ಬೆಳೆದು ಬರುವುದನ್ನು ಪ್ರತಿಪಾದಿಸುತ್ತದೆ. ಸತ್ಯ, ಅಹಿಂಸೆ, ಆಸ್ತೇಯ, ಅಪರಿಗ್ರಹ ಮತ್ತು ಬ್ರಹ್ಮಚರ್ಯ ಎಂಬುವು ಐದು ಅಣುವ್ರತಗಳು. ಈ ಐದು ಅಣುವ್ರತಗಳನ್ನು ಮುನಿಗಳು ಸಮಗ್ರ ರೂಪದಿಂದ ಆಚರಿಸುತ್ತಾರೆ. ಅಲ್ಲಿ ಅರೆಕೊರೆಗಳಿರುವುದಿಲ್ಲ. ಮೇಲು ನೋಟಕ್ಕೆ ಅಥವಾ ಹೆಸರಿಗೆ ಮಾತ್ರವಾಗುವ ಅಹಿಂಸೆಯನ್ನು ಅವರು ಪರಿಭಾವಿಸುವುದಿಲ್ಲ. ಮುನಿಗಳು ಅಹಿಂಸೆಯ ತಳಕ್ಕೆ ಇಳಿದು ಅದನ್ನು ಪರಿಪೂರ್ಣ ಪ್ರಮಾಣದಲ್ಲಿ ಆಚರಿಸುತ್ತಾರೆ. ಆದ್ದರಿಂದ ಅವರಿಗೆ ಆ ಅಹಿಂಸೆಯ ಸಮಗ್ರ ಸ್ವರೂಪ ತಿಳಿಯುತ್ತದೆ. ಹಾಗಾಗಿ ಈ ಐದೂ ಅಣುವ್ರತಗಳನ್ನು ಅವರ ಸಂದರ್ಭದಲ್ಲಿ 'ಮಹಾವ್ರತ' ಎನ್ನಲಾಗಿದೆ.

ಅಣುವ್ರತ : ಶ್ರಾವಕರು ಕುಟುಂಬದ ವಲಯದೊಳಗಿದ್ದು, ಸಾಮಾನ್ಯ ಗೃಹಸ್ಥರಿಗಿಂತ ಧಾರ್ಮಿಕ ಸ್ತರದ ಕಡೆಗೆ ಸ್ವಲ್ಪಮಟ್ಟಿಗೆ ಹೆಚ್ಚಿನ ಒಲವು ಇರುವವರು. ಹಾಗಾಗಿ ಈ ಶ್ರಾವಕರಿಗೆ ಧಾರ್ಮಿಕ ರೀತಿ–ನೀತಿಗಳ ಆಚರಣೆಯನ್ನು ಪೂರ್ಣ ಪ್ರಮಾಣದಲ್ಲಿ ಆಚರಿಸಲು ಸಾಧ್ಯವಾಗುವುದಿಲ್ಲ. ಆದರೆ ಅವುಗಳ ಸ್ಥೂಲ ರೂಪವನ್ನು ಅವರು ಗ್ರಹಿಸಬಲ್ಲರು. ಪರಿಭಾವಿಸಬಲ್ಲ ಅಣುವ್ರತಗಳ ಬಗ್ಗೆ ಅಮಿತಗತಿ ಆಚಾರ್ಯರ ಮಾತು ಹೀಗಿದೆ.

> **ಹಿಂಸಾ ಸತ್ಯಸ್ತೇಯಾಬ್ರಹ್ಮ ಪರಿಗ್ರಹ ನಿವೃತ್ತಿ ರೂಪಾಣಿ ॥**
> **ಜ್ಞೇಯಾನ್ಯಣುವ್ರತಾನಿ ಸ್ಥೂಲಾನಿ ಭವಂತಿ ಪಂಚಾತ್ರ ॥**[3]

ಸ್ಥೂಲ ಹಿಂಸೆ, ಸುಳ್ಳು, ಕಳವು, ಬ್ರಹ್ಮಚರ್ಯ ಮತ್ತು ಪರಿಗ್ರಹಗಳಿಂದ ಮುಕ್ತನಾಗುವುದೇ ಪರಿಚಾಣು ವ್ರತಪಾಲನೆಯ ಮಾರ್ಗ ಎಂದು ಆಚಾರ್ಯರು ಭಾವಿಸುತ್ತಾರೆ. ಸಂಸಾರದ ಒಳಗಿದ್ದುಕೊಂಡು ಈ ಅಣುವ್ರತಗಳ ಆಚರಣೆಯಲ್ಲಿದ್ದರೆ ಭಾವಶುದ್ಧಿಯಾಗುತ್ತದೆ. ಭಾವಶುದ್ಧಿ ಎಂದರೆ ಸಾತ್ವಿಕ ಜೀವನವನ್ನು ಆ ಜೀವವು/ಆತ್ಮವು ಪ್ರವೇಶಿಸಿದೆ ಎಂದರ್ಥ. ಈ ಬಗೆಯ ಅಣುವ್ರತಗಳ ಪಾಲನೆಯು ವ್ಯಕ್ತಿತ್ವಗಳನ್ನು ಧರ್ಮಮುಖಿಯಾಗಿಸುವುದಲ್ಲದೆ ತನ್ನದಲ್ಲದ್ದನ್ನು ತನ್ನದೆಂದೇ ಭಾವಿಸಿ ಪ್ರೀತಿಸಿ ವಿಶ್ವಾಸದಿಂದ ವಿಶ್ವವನ್ನು ನೋಡುವುದನ್ನು ಕಲಿಸುತ್ತದೆ. ತನ್ನದೇ ಆದ ಮತ್ತು ತನ್ನದಲ್ಲದ ವಸ್ತುಗಳ ಮೇಲಿನ ಮಮಕಾರಗಳನ್ನು ಕಡಿಮೆ ಮಾಡುತ್ತದೆ. ಅಂದರೆ ಜೀವ ಒಂದಕ್ಕೆ ಅಂಟಿಕೊಂಡು ಇನ್ನೊಂದನ್ನು ಕಡೆಗಣಿಸಬಾರದು ಎಂಬುದು ಇದರ ಆಂತರ್ಯದ ದೃಷ್ಟಿ.

ಅಹಿಂಸಾ ಪರಮೋಧರ್ಮ ಎನ್ನುವುದು ಜೈನ ಧರ್ಮದ ಪ್ರಮುಖ ಸಿದ್ಧಾಂತ ಮತ್ತು ಆಚರಣೆ. ಅಹಿಂಸೆಯ ಮೇಲೆಯೆ ಜೈನಧರ್ಮದ ಎಲ್ಲ ಆಚರಣೆಗಳೂ ನಿಂತಿವೆ ಈ

ಆಚರಣೆಯನ್ನು ಅದನ್ನು ಉಸಿರಾಗಿಸಿಕೊಂಡಾಗ ಮಾತ್ರ ಮಾನವ ಕಾಯ, ವಾಚ ಮನಸಾ ಯಾರಿಗೂ ಹಿಂಸೆ ಮಾಡದಂತೆ ಜೀವಿಸಬಹುದು. ಪರರಿಂದಲೂ ಹಿಂಸೆ ಮಾಡಿಸದಿರುವುದು, ಹಿಂಸೆಗೆ ಸಮ್ಮತಿ ಕೊಡದಿರುವುದು ಅಹಿಂಸೆಯ ಅಣುವ್ರತವೆನಿಸುತ್ತದೆ.[4] ಹಿಂಸೆಯನ್ನು ಮೀರಿ ಅಹಿಂಸೆಯ ಒಡಲನ್ನು ಜೀವವು ಪ್ರವೇಶಿಸಬೇಕಾದರೆ ಹಲವಾರು ಪರೀಕ್ಷೆಗಳು ಎದುರಾಗುತ್ತವೆ. ಆ ಪರೀಕ್ಷೆಗಳು ಜೀವವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಹಿಂಸೆಯಲ್ಲಿ ಮತ್ತೂ ಒಳಗಿಳಿದು ಸಂಕಲ್ಪಿ ಹಿಂಸಾ, ಆರಂಭ ಹಿಂಸಾ, ಔದ್ಯೋಗಿಕಾ ಹಿಂಸಾ ಮತ್ತು ವಿರೋಧಿ ಹಿಂಸಾ ಎಂಬ ನಾಲ್ಕು ಭೇದಗಳನ್ನು ತಿಳಿಸುತ್ತದೆ. ಈ ನಾಲ್ಕು ಹಿಂಸೆಗಳಲ್ಲಿ ಶ್ರಾವಕರು ಸಂಕಲ್ಪಿ ಹಿಂಸಾವನ್ನು ತ್ಯಜಿಸಬೇಕಾಗುತ್ತದೆ. ಉದ್ದೇಶಪೂರ್ವಕವಾದ ಹಿಂಸೆ; ಸಂಕಲ್ಪಿ ಹಿಂಸಾ; ಇದನ್ನು ತ್ಯಾಗ ಮಾಡದೆ ಶ್ರಾವಕ ಅಥವಾ ಜೈನ ಗೃಹಸ್ಥ ಜೀವನವು ಮುಂದಿನ ಹಂತಕ್ಕೆ ಸಾಗುವುದಿಲ್ಲ. ಆದರೆ ಉಳಿದ ಮೂರು ಹಿಂಸೆಗಳನ್ನು ಶ್ರಾವಕರು ಸಂಸಾರದಲ್ಲಿದ್ದುಕೊಂಡು ಆಚರಿಸಲು ಸಾಧ್ಯವಿಲ್ಲ. ಆ ಹಿಂಸೆ ಜೀವಗಳೊಡನೆ ಬೆರೆತುಹೋಗಿರುತ್ತವೆ. ಇವು ಜೀವಕ್ಕೆ ಗೊತ್ತಿಲ್ಲದೆಯೇ ಕಾರ್ಯಾಚರಣೆ ನಡೆಸುತ್ತವೆ. ಹಾಗಾಗಿ ಆ ಜೀವವು ತಾನು ಗೊತ್ತಿಲ್ಲದೇ ಮಾಡಿದ ಅನುಭವಕ್ಕೆ ಬರುವ ಹಿಂಸೆಯಿಂದ ಮುಕ್ತವಾಗಲು ಆರು ಆಚರಣೆಗಳನ್ನು ಅಥವಾ ಕ್ರಿಯೆಗಳನ್ನು ಅನುಸರಿಸಬೇಕಾಗುತ್ತದೆ. ಅವೇ ದೇವಪೂಜಾ, ಗುರುಸೇವೆ, ಸ್ವಾಧ್ಯಾಯ, ಸಂಯಮ, ತಪ ಮತ್ತು ದಾನ.[5]

ದೇವಪೂಜಾ : ಅರಹಂತರೂ, ಸಿದ್ಧರೂ, ಆಚಾರ್ಯರು, ಉಪಾಧ್ಯಾಯರು, ಸರ್ವಸಾಧುಗಳು, ಜಿನಧರ್ಮ, ಜಿನವಾಣಿ, ಜಿನಪ್ರತಿಮೆ ಮತ್ತು ಜಿನಮಂದಿರ ಎಂಬ ನವದೇವತೆಗಳನ್ನು ನಿತ್ಯವೂ ಪೂಜಿಸಿ, ಜಲ, ಗಂಧ, ಅಕ್ಷತೆ, ದೀಪ, ಧೂಪ, ಫಲ, ಪುಷ್ಪ, ಚರುಗಳೆಂಬ ಅಷ್ಟ ದ್ರವ್ಯಗಳನ್ನು ಪೂಜೆಗಳಲ್ಲಿ ಬಳಸಿ ತನ್ನ ಜೀವನ್ಮುಕ್ತಿಗೆ ಮಾರ್ಗ ಮಾಡಿಕೊಳ್ಳಬೇಕು.

ಗುರುಸೇವೆ : ಜೈನಧರ್ಮದಲ್ಲಿ ಗುರು, ಮುನಿಗಳಿಗೆ ಅತ್ಯುನ್ನತವಾದ ಸ್ಥಾನವನ್ನು ನೀಡಲಾಗಿದೆ. ಅವರು ಜೈನಧರ್ಮದ ಸೈದ್ಧಾಂತಿಕ ನೆಲೆಗಟ್ಟನ್ನು ಧಾರ್ಮಿಕಾವರಣವನ್ನು ಪೋಷಿಸುತ್ತಾರೆ. ಹೀಗಾಗಿ ಜಿನನ ನಂತರದ ಪೂಜೆ ಗುರುಗಳಿಗೆ ಸಲ್ಲುತ್ತದೆ. ಆದ್ದರಿಂದ ಶ್ರಾವಕರು ತಮ್ಮ ಲೌಕಿಕ ಜೀವನದ ಆಚಾರಗಳ ದೋಷಪರಿಹಾರಕ್ಕಾಗಿ ಮುನಿಗಳಿಗೆ ಆಹಾರ ನೀಡುವ ಮತ್ತು ಮುನಿಗಳು ಶ್ರಾವಕರು ನೀಡಿದ ಆಹಾರವನ್ನು ಸ್ವೀಕರಿಸಿ ಜಿನಧರ್ಮದ ಪ್ರಚಾರ ಕಾರ್ಯದಲ್ಲಿ ಆತನು ಭಾಗಿಯಾಗುವಂತೆ ಮಾಡುವುದರ ಮೂಲಕ ಶ್ರಾವಕನ ಕರ್ಮವನ್ನು ಕಳೆಯುತ್ತಾರೆ. ಇದರಿಂದ

ಜೈನಧರ್ಮಕ್ಕೆ ಶ್ರಾವಕ ಮತ್ತು ಮುನಿಗಳ ನಡುವಿನ ಬಾಂಧವ್ಯ ಮತ್ತು ಅನುಸಂಧಾನ ಪ್ರಕ್ರಿಯೆ ಸಿದ್ಧಿಸಿ ಸಿದ್ಧರಾಗುವ ಮಾರ್ಗ ತೆರೆದುಕೊಳ್ಳುತ್ತದೆ.

ಸ್ವಾಧ್ಯಾಯ : ಜೈನಧರ್ಮದಲ್ಲಿ ಕಂಡುಬಂದ ಸನಾತನ ಆಚಾರ್ಯರುಗಳು ಧಾರ್ಮಿಕ ಸೈದ್ಧಾಂತಗಳನ್ನು ಹಂತಹಂತವಾಗಿ ರೂಪಿಸಿ ಅವುಗಳನ್ನು ಸಂರಕ್ಷಿಸಿಕೊಂಡುಬಂದಿದ್ದಾರೆ. ಅವರು ರಚಿಸಿರುವ ಜೈನಧರ್ಮ ಶಾಸ್ತ್ರಗಳನ್ನು ಯೋಗ್ಯತಾನುಸಾರ ಅಧ್ಯಯನ ಮಾಡಿ ಮನನ ಮಾಡಿಕೊಂಡು ಅವುಗಳನ್ನು ತನ್ನ ಆಚರಣೆಯಲ್ಲಿ ಶ್ರಾವಕನು ತಂದುಕೊಳ್ಳಬೇಕಾಗುತ್ತದೆ. ಶಾಸ್ತ್ರಗಳಲ್ಲಿ ಹೇಳಿದ ಶ್ರಾವಕಾಚಾರ ಇತ್ಯಾದಿಗಳನ್ನು ಅಳವಡಿಸಿಕೊಳ್ಳುವುದರಿಂದ ಆತ್ಮಕಲ್ಯಾಣವಾಗಿ ಜೀವನ್ಮುಕ್ತನಾಗುವ ಮಾರ್ಗ ಸುಗಮವಾಗುತ್ತದೆ.

ಸಂಯಮ : ಶ್ರಾವಕನು ಆಚರಿಸುವ ಷಟ್ಕರ್ಮಗಳಲ್ಲಿ ಸಂಯಮ ಪ್ರಮುಖವಾದುದು. ಶ್ರಮಣರ ದಶಧರ್ಮಗಳಲ್ಲಿ ಸಂಯಮವು ಪ್ರಮುಖ ಆಚರಣೆಯಾಗಿದೆ. ವ್ರತ, ಸಮಿತಿಗಳ ಧಾರಣೆ, ಅನುಪಾಲನೆ, ಕಾಶಾಯ, ದಂಡ, ಇಂದ್ರಿಯಗಳ ನಿಗ್ರಹ ತ್ಯಾಗ, ಜಯ ಇವು ಸಂಯಮವನ್ನು ಬೆಳೆಸುತ್ತವೆ. ಬಾಹ್ಯಾಬ್ಯಂತರ ಪರಿಗ್ರಹ ತ್ಯಾಗ, ಮನಸಾ, ವಾಚ, ಕಾಯ ರೂಪದಲ್ಲಿ ನಿವೃತ್ತಿ ಅನಾರಂಭ, ಸಾಧಾರಣ ರೂಪದಿಂದ ಸಂಯಮದ ಲಕ್ಷಣಗಳಾಗಿವೆ. ವಿಶೇಷ ರೂಪದಿಂದ ಅವಸ್ಥೆಯಾಗಿದೆ.

ತಪ : ತಪ ಎಂದರೆ ಏಕಾಂತದಲ್ಲಿ ಕುಳಿತು ಸಮಾಹಿಕ ಮಾಡುವುದು, ಆತ್ಮಧ್ಯಾನದಲ್ಲಿ ತಲ್ಲೀನನಾಗುವುದು ಎಂದರ್ಥವಿದೆ. ಕರ್ಮಕ್ಷಯಕ್ಕಾಗಿ ತಪಿಸುವುದೇ ತಪಃ. ಐದು ಇಂದ್ರಿಯ ವಿಷಯಗಳನ್ನು ನಾಲ್ಕು ಕಾಶಾಯಗಳನ್ನು ನಿಗ್ರಹಿಸಿ ಶುಭಧ್ಯಾನ ಪ್ರಾಪ್ತಿಗಾಗಿ ಯಾರು ಆತ್ಮವಿಚಾರ ಮಾಡುವರೋ ಅವರಿಗೆ ನಿಯಮದಿಂದ ತಪಃ ಉಂಟಾಗುತ್ತದೆ. ಇದೂ ಕೂಡ ಆತ್ಮವನ್ನು ಜೀವನ್ಮುಕ್ತದ ಮಾರ್ಗದೆಡೆಗೆ ಕರೆದೊಯ್ಯುತ್ತದೆ.

ದಾನ : ಇದು ಜೈನಧರ್ಮದಲ್ಲಿ ಒಂದು ಧಾರ್ಮಿಕ ಪರಿಭಾಷೆ. ದಾನದಿಂದ ಆತ್ಮ ಕಲ್ಯಾಣವಾಗುತ್ತದೆಂಬುದು ಜೈನಧರ್ಮದ ಸದಭಿಪ್ರಾಯ. ಸತ್ಪಾತ್ರರಿಗೆ ಆಹಾರ, ಅಭಯ, ಔಷಧ ವಿದ್ಯೆಗಳನ್ನು ನೀಡುವುದು ದಾನದ ಪರಿಮಿತಿಯಲ್ಲಿ ಬರುತ್ತದೆ. ಧರ್ಮಸಾಧನೆಗಾಗಿ ಜಿನಮಂದಿರಗಳ ನಿರ್ಮಾಣ, ಜೀರ್ಣೋದ್ಧಾರ, ಜಿನ ಪ್ರತಿಮೆಗಳ ಸ್ಥಾಪನೆ ಧರ್ಮಗ್ರಂಥಗಳನ್ನು ಮುದ್ರಿಸಿ ದಾನ ಮಾಡುವುದು, ಪ್ರಚಾರ ಮಾಡುವುದು ಇತ್ಯಾದಿ ಈ ದಾನದ ವ್ಯಾಪ್ತಿಯಲ್ಲಿ ಬರುತ್ತದೆ. ಈ ರೀತಿಯ ಆರು ದೈನಿಕ ಕ್ರಿಯಾಚರಣೆಗಳನ್ನು ಪಾಲನೆ ಮಾಡುವುದರಿಂದ ಶ್ರಾವಕರ ಕರ್ಮವು ನಾಶವಾಗಿ ಆತ್ಮಬಲ ಪ್ರವೃದ್ಧಿಯಾಗುತ್ತದೆ.

ಸತ್ಯ : ಪಂಚಾಣು ವ್ರತಗಳಲ್ಲಿ ಎರಡನೆಯದು ಅಣುವ್ರತ.[6] ತನಗೆ ಕಂಡುದುದನ್ನು ಇದ್ದುದನ್ನು ಇರುವಂತೆ ಹೇಳುವುದು ಸತ್ಯ. ಹಾಗೆ ಮಾಡದಿರುವುದು ಅಸತ್ಯವೇ. ಸಮಂತ ಭದ್ರಾಚಾರ್ಯರು ಸತ್ಯದ ಲಕ್ಷಣವನ್ನು ಹೀಗೆ ಹೇಳಿದ್ದಾರೆ.

> **ಸ್ಥೂಲ ಮಲೀಕಂ ನ ವದತಿ ನ ಪರಾನ್‌ವಾದಯತಿ ಸತ್ಯಮಪಿ ಪಿಪದೇ ।**
> **ಯತ್ತದ್ವದಂತಿ ಸುತಃ ಸ್ಥೂಲವದ್ವಾದಿರ ಮಣಃ ನಿಪುಣಾ ॥**[7]

ಅಂದರೆ ಸ್ಥೂಲ ಅಸತ್ಯ ಮಾತನಾಡದೆ, ಪರರಿಂದ ಮಾತನಾಡಿಸದೆ, ಪರರಿಗೆ ದುಃಖ ಅಥವಾ ಸಂಕಟವನ್ನು ಉಂಟುಮಾಡುವ ಸತ್ಯವನ್ನು ಸಹ ಮಾತನಾಡದೆ, ಪರರಿಂದ ಕೂಡ ಮಾತನಾಡಿಸದೆ ಇರುವ ನಡತೆಯನ್ನು ಸ್ಥೂಲ ಅಸತ್ಯದ ತ್ಯಾಗ ಅಥವಾ ಸತ್ಯಾಣುವ್ರತವೆಂದು ಕರೆಯುತ್ತಾರೆ. ಇಂತಹ ಗುಣ ಸ್ವಭಾವವನ್ನು ಹೊಂದಿರುವ ಶ್ರಾವಕನು ಸಮಾಜದಲ್ಲಿ ಪೂಜನೀಯನಾಗುತ್ತಾನೆ.

ಆಚಾರ್ಯವ್ರತ : ಪಂಚ ಅಣುವ್ರತಗಳಲ್ಲಿ ಮೂರನೆಯದು. ಮತ್ತೆ ಸಮಂತಭದ್ರಾಚಾರ್ಯರು ತಮ್ಮ 'ರತ್ನಕರಂಡಕಶ್ರಾವಕಾಚಾರ' ದಲ್ಲಿ ಹೇಳಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

> **ನಿಹಿತಂ ವಾ ಪತಿತಂ ವಾ ಸುವಿಸ್ಮೃತಂ ವಾ ಪರಸ್ವಮವಿಸೃಷ್ಟಮ್ ।**
> **ವಾಯರತಿಯನ್ನು ಚ ದಕ್ತೇ ತದ ಕೃಶಾಚಾರ್ಯ ಮಪಾರ ಮಣಮ್ ॥**[8]

ಕದಿಯದಿರುವುದು ಶ್ರಾವಕನ ಬಹು ಮುಖ್ಯ ಲಕ್ಷಣ. ಇದರೊಡನೆ ಅಪಹರಿಸದಿರುವುದೂ ಇದೆ.

ಬ್ರಹ್ಮಚರ್ಯ ವ್ರತ : ಇದು ಪರಸ್ತ್ರೀಯನ್ನು ಸೋದರಿಯಂತೆ ಕಾಣಬೇಕು ಎನ್ನುವ ವ್ರತ. ವ್ಯವರಹಾನಯದ ದೃಷ್ಟಿಯಿಂದ ಸ್ತ್ರೀಸ್ಮರಣೆ ಮಾಡದಿರುವುದು, ಸ್ತ್ರೀ ವಿಷಯದ ಕಥೆ ಕೇಳುವುದನ್ನು ತ್ಯಾಗ ಮಾಡುವುದು ಬ್ರಹ್ಮಚರ್ಯವಾಗುತ್ತದೆ.[9]

ಪರಿಗ್ರಹ ಪರಿಮಾಣ ವ್ರತ : ಕಾಯ, ವಾಚ, ಮನಸ್ಸು, ಧನ, ಧಾನ್ಯ, ದ್ರವ್ಯ ಮೊದಲಾದ ವಸ್ತುಗಳ ಮೇಲೆ ಒಂದು ನಿಗದಿತ ಪ್ರಮಾಣವನ್ನು ಮೀರಿ ಹಕ್ಕು ಸ್ಥಾಪಿಸದಿರುವುದು ಪರಿಗ್ರಹ ಪರಿಮಾಣು ವ್ರತವಾಗುತ್ತದೆ.[10] ಅಂತಹ ಶ್ರಾವಕನ ಮನಸ್ಸು ಶುದ್ಧ ಸ್ಥಿತಿಯಿಂದ ಕೂಡಿರುತ್ತದೆ. ಮಾತ್ರವಲ್ಲ, ಸಮ್ಮೋಹಗೊಳಿಸುವ ಯಾವುದೇ ವಸ್ತುವಿನಿಂದ ದೂರ ಉಳಿಯುವ ಶಕ್ತಿ ಪಡೆದಿರುತ್ತಾನೆ. ಅಂದರೆ ಲೋಭ, ಮೋಹಗಳನ್ನು ನಾಶ ಮಾಡಿ ಸಮತಾ ಭಾವದ ಜೀವನವನ್ನು ನಡೆಸುವುದು ಈ ವ್ಯಾಪ್ತಿಗೆ ಬರುತ್ತದೆ. ಜೈನಧರ್ಮದಲ್ಲಿ ಮಹತ್ವದ ಸಂಗತಿಯನ್ನು ಹೇಳುವಾಗ ಕಾಯ, ವಾಚಾ, ಮನಸ್ಸು ಮೂರನ್ನೂ ಪರಿಭಾವಿಸುವ ಕ್ರಮ ಸಾಮಾನ್ಯ ಯಾಕೆಂದರೆ, ಈ ಮೂರೂ

ಶುದ್ಧವಾಗಿದ್ದರೆ ಸಹಜವಾಗಿಯೇ ಜೀವವೂ ಶುದ್ಧವಾಗಿರುತ್ತದೆ. ಇದಕ್ಕೆ ವೈದಿಕ ಧರ್ಮವೂ ಹೊರತಲ್ಲ.

ಗುಣವ್ರತಗಳು : ಪಂಚಾಣು ವ್ರತಗಳ ವಿಕಾಸ ಯಾವ ಆಚಾರದಿಂದಾಗುತ್ತದೆಯೋ ಅದನ್ನು ಗುಣವ್ರತವೆಂದು ಭಾವಿಸಲಾಗಿದೆ.[11] ತನ್ನಲ್ಲಿಯ ಸದ್ಗುಣಗಳನ್ನು ಹಾಗೂ ತಾನು ಆಚರಿಸಬೇಕಾಗಿರುವ ಪಂಚಾಣು ವ್ರತಗಳ ಅಭಿವೃದ್ಧಿ ಪಡಿಸುವ ಕಾರಣವಾದ ವ್ರತಗಳೇ ಗುಣವ್ರತಗಳು.

ಗುಣವ್ರತಗಳಲ್ಲಿ ಮೂರು ಭೇದಗಳಿವೆ : ದಿಗ್ವ್ರತ, ಅನರ್ಥದಂಡವ್ರತ, ಭೋಗೋಪಭೋಗ ಪರಿಮಾಣ ವ್ರತ. ಇವು ಶ್ರಾವಕರನ್ನು ಗುಣಸ್ಥಾಯಿ ಮಾರ್ಗದಲ್ಲಿ ನಡೆಸಿಕೊಂಡು ಹೋಗುವುದರ ಜೊತೆಗೆ ಯಾವುದನ್ನು ದೂರವಿಡಬೇಕು ಎಂಬುದನ್ನೂ ಸೂಚಿಸುತ್ತವೆ.[12]

ಜೀವನ ಪರ್ಯಂತ ಹತ್ತು ದಿಕ್ಕುಗಳಲ್ಲಿ ಸಂಚರಿಸುವುದನ್ನು ಇಂತಿಷ್ಟು ಯೋಜನೆಗಳೆಂದು ಸೀಮಾರೇಖೆಯನ್ನು ನಿರ್ಧರಿಸಿಕೊಳ್ಳುವುದಕ್ಕೆ ದಿಗ್ವ್ರತವೆನ್ನಲಾಗುತ್ತದೆ. ಆ ಸೀಮಾರೇಖೆಯಿಂದ ಆಚೆಗೆ ಹೋಗದಿರುವುದರಿಂದ ಅಲ್ಲಿ ನಡೆಯುವ ಹಿಂಸಾದಿ ರೂಪಗಳಿಂದ ಈ ಜೀವವು ಹೊರಗೆ ಉಳಿಯುತ್ತದೆ.

ನಿರ್ಧರಿಸಿಕೊಳ್ಳಲಾಗದ ಸೀಮಾರೇಖೆಯೊಳಗೆ ಕಾಯ, ವಾಚ, ಮನಸ್ಸುಗಳಿಂದ ಯಾವ ಪ್ರಯೋಜನವಿಲ್ಲದೆ ಸಂಭವಿಸುವ ಪಾಪವನ್ನು ತ್ಯಾಗ ಮಾಡುವುದಕ್ಕೆ ಅನರ್ಥ ದಂಡವ್ರತವೆಂದು ಹೇಳಲಾಗಿದೆ. ಒಂದು ರೀತಿಯಲ್ಲಿ ಅಶುಭವಾದ ಕಾಯಾ, ವಾಚಾ, ಮನಸ್ಸು ಈ ವ್ಯಾಪ್ತಿಯಲ್ಲಿ ಸೇರುತ್ತವೆ. ಅನರ್ಥದಂಡ ವ್ರತದಲ್ಲಿ ಪಾಪೋಪದೇಶ, ಹಿಂಸಾದಾನ, ಅಪಧ್ಯಾನ, ದುಃಶ್ರುತಿ, ಪ್ರಮಾದ ಚರ್ಯೆ ಎಂದು ಐದು ಭೇದಗಳಿವೆ. ಇವುಗಳನ್ನು ವರ್ಜಿಸುವ ಮೂಲಕ ವ್ಯಕ್ತಿತ್ವವನ್ನು ಆತ್ಮಪೂರ್ವಕವಾಗಿ ಶುದ್ಧ ಮಾಡಿಕೊಳ್ಳುವುದು ಜೀವಿಯ ಅಗತ್ಯವಾಗುತ್ತದೆ.

ಅಶ್ಲೀಲ ವಚನವನ್ನಾಡುವುದು, ಕಾಯಚೇಷ್ಟೆ ಮಾಡುವುದು, ವ್ಯರ್ಥವಾಗಿ ಮಾತಾಡುವುದು, ಹೆಚ್ಚಾಗಿ ಭೋಗ ಸಾಮಗ್ರಿಗಳನ್ನು ಸಂಗ್ರಹಿಸುವುದು, ವಿಚಾರ ಮಾಡದೆ ಕಾರ್ಯ ಮಾಡುವುದು ಅನರ್ಥದಂಡ ವ್ರತದ ಅತಿಚಾರಗಳು. ಇವುಗಳು ಶ್ರಾವಕರಾಗಿರುವವರಿಗೆ ವರ್ಜ್ಯ, ಜೈನಧರ್ಮದಲ್ಲಿ ಶ್ರಾವಕರ ಸಂಸಾರಿಗಳು ಗೃಹಸ್ಥರಾಗಿದ್ದರೂ, ಅವರು ಹೆಚ್ಚಿನ ಮನ್ನಣೆಗೆ ಪಾತ್ರನಾಗುತ್ತಾರೆ.

ಭೋಗ ಮತ್ತು ಉಪಭೋಗ ಸಾಧನಗಳನ್ನು ಕೆಲವು ಸಮಯದವರೆಗೆ ಅಥವಾ ಜೀವನ ಪರ್ಯಂತವಾಗಿ ತ್ಯಾಗ ಮಾಡುವುದು ಭೋಗೋಪಭೋಗ ತ್ಯಾಗ ವ್ರತ ಎನ್ನಿಸಿಕೊಳ್ಳುತ್ತದೆ. 'ಪ್ರೀತಿ,

ಮೋಹ, ಮಮತೆಗಳನ್ನು ಕಡಿಮೆಮಾಡಿಕೊಳ್ಳಲು ಪರಿಗ್ರಹದ ಪರಿಮಾಣವನ್ನು ಮಾಡಿಕೊಳ್ಳುವುದು ಭೋಗೋಪಭೋಗ ಪರಿಮಾಣ ವ್ರತ'ವಾಗುತ್ತದೆ. ಈ ಮೂರು ವ್ರತಗಳ ಆಚರಣೆಯಿಂದ ಸಂಚಯ ವೃತ್ತಿಗಳು ನಿಯಂತ್ರಣವಾಗುತ್ತವೆ. ಇಂದ್ರಿಯ ಲಾಲಸೆಗಳು ದಮನವಾಗಿ ದಾನಶೀಲತೆಯ ಜಾಗೃತವಾಗುತ್ತದೆ.

ಶಿಕ್ಷಾವ್ರತಗಳು : ಗೃಹಸ್ಥರು ಸಂಯಮ ಮತ್ತು ಚಾರಿತ್ರ್ಯಶುದ್ಧಿ ಬೆಳೆಸಿಕೊಳ್ಳಲು ಮತ್ತು ಮುನಿಯ ಅವಸ್ಥೆ ಧಾರಣೆ ಮಾಡುವುದಕ್ಕೆ ಅಗತ್ಯವಾಗಿ ಬೇಕಾಗುವ ಪೂರ್ವ ಶಿಕ್ಷಣವನ್ನು ಶಿಕ್ಷಾವ್ರತವೆಂದು ಹೇಳಲಾಗುತ್ತದೆ.[13]

ಜಿನಸ್ಮರಣೆ ಮಾಡುತ್ತ ಸುಖ ದುಃಖಗಳಲ್ಲಿ ಶತ್ರು, ಮಿತ್ರರೊಡನೆ ಸಮಭಾವದಿಂದ ಇರುವುದು ಮತ್ತು ಎಲ್ಲ ಆಗುಹೋಗುಗಳನ್ನು ಸಮಚಿತ್ತದಿಂದ ಪರಿಗ್ರಹಿಸುವುದನ್ನು ಸಾಮಾಯಿಕ ಶಿಕ್ಷಾವ್ರತ ಎನ್ನಲಾಗುತ್ತದೆ. ಪ್ರತಿ ಮಾಸದಲ್ಲಿ ಬರುವ ಎರಡು ಅಷ್ಟಮಿ ಮತ್ತು ಎರಡು ಚತುರ್ದಶಿ ದಿನಗಳಲ್ಲಿ ಪೂರ್ಣ ಉಪವಾಸ ಮಾಡುವುದು ಹಾಗೂ ಈ ದಿನಗಳ ಹಿಂದಿನ, ಮುಂದಿನ ದಿನಗಳಾದ ಸಪ್ತಮಿ ತ್ರಯೋದಶಿ ಮತ್ತು ನವಮಿ, ಹುಣ್ಣಿಮೆ, ಅಮಾವಾಸ್ಯೆ ದಿನಗಳಲ್ಲಿ ಒಮ್ಮೆ ಮಾತ್ರ ಊಟ ಮಾಡುವ ಆಚರಣೆಗೆ ಪ್ರೋಷಧೋಪವಾಸ ಶಿಕ್ಷಾವ್ರತವೆಂದು ಹೇಳಲಾಗಿದೆ. ಇಲ್ಲಿ ಶ್ರಾವಕನಿಗೆ ಚತುರ್ವಿಧ ಆಹಾರಗಳು ಎಂದರೆ ಅನ್ನ, ಪಾನ, ಖಾದ್ಯ, ಲೇಹ್ಯಗಳು ವರ್ಜ್ಯವಾಗಿರುತ್ತವೆ.

ಸಂಯಮವನ್ನು ಪಾಲಿಸುವ ಮತ್ತು ಸಂಯಮವನ್ನು ಒಂದು ಜೀವನ ದೃಷ್ಟಿಕೋನವಾಗಿ ಮಾಡಿಕೊಂಡಿರುವ ಅತಿಥಿ ಅಭ್ಯಾಗತರಿಗೆ ತಾನು ಮಾಡಿಕೊಂಡಿರುವ ಆಹಾರದಲ್ಲೇ ವಿಭಾಗ ಮಾಡಿಕೊಳ್ಳುವುದನ್ನು ಹಂಚಿಕೊಳ್ಳಬೇಕು. ಇದಕ್ಕಾಗಿ ಯಾವುದೇ ರೀತಿಯ ಲಾಭವನ್ನು ಅಪೇಕ್ಷಿಸದೆ ಆಹಾರ ದಾನ ಮಾಡುವುದು ಅತಿಥಿ ಸಂವಿಭಾಗ ಶಿಕ್ಷಾವ್ರತ ಎನ್ನಿಸಿಕೊಳ್ಳುತ್ತದೆ.

ಶ್ರಾವಕ ಧರ್ಮದ ಪ್ರತಿಮೆಗಳು : ಈ ಹಿಂದೆ ನಾವು ನೋಡಿರುವಂತೆ ಜೈನ ಗೃಹಸ್ಥರು ಸಂಸಾರಿ ಎಂಬ ಕಾರಣಕ್ಕಾಗಿ ಧಾರ್ಮಿಕ ಉನ್ನತಿಯ ಹಾದಿಗೆ ನಿರಾಕರಿಸಲ್ಪಡುವುದಿಲ್ಲ. ಅವನನ್ನೂ ಅತ್ತ ಕರೆದೊಯ್ಯುವ ಕಾರಣದಿಂದಲೇ ಅವನನ್ನು ಶ್ರಾವಕನೆಂದು ಗೌರವದಿಂದ ಕರೆಯಲಾಗುತ್ತದೆ. ಇಲ್ಲಿ ಈ ಶ್ರಾವಕ ಪಂಚಾಣುವ್ರತಗಳು, ಮೂರು ಗುಣವ್ರತಗಳು, ನಾಲ್ಕು ಶಿಕ್ಷಾವ್ರತಗಳನ್ನು ಪಾಲನೆ ಮಾಡಿಕೊಂಡು ತನ್ನ ವೃತ್ತಿ ಜೀವನದಲ್ಲಿ ಮುಖಾಮುಖಿಯಾಗುವ ಸುಖ, ಸಂತೋಷಗಳನ್ನು ಅನುಭವಿಸುತ್ತಿರುತ್ತಾನೆ. ಆದರೆ ಶ್ರಾವಕನ ಮುಂದಿನ ನಡೆಗೆ ಪೂರಕವಾಗುವಂತೆ ಈ ಸುಖಸಂತೋಷವೇ ಅವನ ಅಜ್ಞೇಯ ಸಾಧನಗಳಾಗುವುದಿಲ್ಲ. ಆದ್ದರಿಂದ ಆ ಸುಖ

ಸಂತೋಷಗಳೆಂಬ ಭೋಗಗಳಿಂದ ಅವನು ಹೊರಬಂದು ತನ್ನ ಸಾಧನ ಪಥಕ್ಕೆ ಅಡ್ಡಿಯಾಗಿರುವ ಕರ್ಮ ಬಂಧನಗಳಿಂದ ಬಿಡುಗಡೆ ಹೊಂದಬೇಕು. ಬಂಧಗಳು ಚಲನೆಯನ್ನು ನಿಯಂತ್ರಿಸುತ್ತವೆ. ಶ್ರಾವಕನ ಸಾಧನೆಗೆ ಅವು ಯಾವಾಗಲೂ ಅಡ್ಡಿಯೇ ಆದ್ದರಿಂದ ಅವನ ಮುಂದಿನ ಗುರಿಯಾಗಿರುವ ಮುನಿ ಅವಸ್ಥೆಗೆ ಏರಲು ಹನ್ನೊಂದು ಹಂತಗಳನ್ನು ಏರಬೇಕು. ಇವುಗಳನ್ನು ಪ್ರತಿಮೆಗಳೆಂದೂ, ನೆಲೆಗಳೆಂದೂ, ಹೇಳಲಾಗಿದೆ.[14]

ದರ್ಶನ ಪ್ರತಿಮೆ : ದರ್ಶನ ಪ್ರತಿಮೆಯೆಂದರೆ ಜಿನ ದರ್ಶನವನ್ನು ಅದರ ಪುಣ್ಯ ಪ್ರಮಾಣದಲ್ಲಿ ಅರ್ಥೈಸಿಕೊಂಡು ತನ್ನ ಆಶ್ರಮ/ ಜೀವನ ಶೈಲಿಗೆ ತಕ್ಕಂತೆ ಅಳವಡಿಸಿಕೊಳ್ಳುವುದಾಗಿದೆ. ದರ್ಶನ ಪ್ರತಿಮೆಯನ್ನು ಪ್ರವೇಶಿಸುವವರು ಜೀವ, ಅಜೀವ, ಧರ್ಮ, ಅಧರ್ಮ, ಆಕಾಶಗಳು ಎಂಬ ಪಂಚ ದ್ರವ್ಯಗಳನ್ನು ಕಾಲನ ಸ್ವರೂಪದ ಹಿನ್ನೆಲೆಯಲ್ಲಿ ತಿಳಿದಿರಬೇಕು. ಇನ್ನೊಂದು ಸ್ತರದಲ್ಲಿ ಜೀವ, ಅಜೀವ, ಅಸ್ತವ, ಬಂಧ, ಸಂವರ, ನಿರ್ಜರಾ, ಮೋಕ್ಷಗಳೆಂದು ಸಪ್ತ ತತ್ವಗಳಿವೆ. ಇವುಗಳೊಡನೆ ಪಾಪ, ಪುಣ್ಯ, ಪಾಪಪ್ರಜ್ಞಾ ಸೇರಿದರೆ ನವಪದಾರ್ಥಗಳಾಗುತ್ತವೆ. ಇವುಗಳ ಅರಿವೂ ಶ್ರಾವಕನಿಗಿರಬೇಕು.

ಹಾಗೆಯೇ ಪಂಚಪರಮೇಷ್ಠಿಗಳ ಗುಣಗಳನ್ನು ಪೂರ್ಣ ಸ್ಥಿತಿಯಲ್ಲಿ ಅರಿತು ಜಪಿಸುತ್ತಿರಬೇಕು. ಪಂಚಾಣುವ್ರತಗಳನ್ನು ಪಾಲಿಸಬೇಕು, ಮಧು, ಮದ್ಯ, ಮಾಂಸ ತ್ಯಜಿಸಿ ನೀರನ್ನು ಸೋಸಿ ಸೇವಿಸಬೇಕು. ರಾತ್ರಿಯ ಭೋಜನವನ್ನು ತ್ಯಜಿಸಬೇಕು. ಹಾಗೆ ಮಾಡುವುದರಿಂದ ದೇಹ ಮತ್ತು ಮನಸ್ಸಿಗೆ ಆಯಾಚಿತವಾಗಿ ದೊರೆಯುವ ಆಲಸ್ಯ ದೂರವಾಗುತ್ತದೆ. ಅವೆರಡೂ ಸುಸ್ಥಿತಿಯಲ್ಲಿ ಉಳಿದು ಜಿನಾಗಮನಕ್ಕೆ ಮುಂದಾಗಬಹುದು. ಹೀಗೆ ವಿರಕ್ತ ಸ್ಥಿತಿಯನ್ನು ಪಡೆದುಕೊಂಡು ಜಿನಧರ್ಮದಲ್ಲಿ ಶ್ರದ್ಧೆ ಮತ್ತು ನಂಬಿಕೆಯನ್ನಿಡುವುದೇ ದರ್ಶನ ಪ್ರತಿಮೆ.

ವ್ರತ ಪ್ರತಿಮೆ : ದರ್ಶನ ಪ್ರತಿಮೆಯನ್ನು ಆಚರಿಸಿಕೊಂಡು, ಅರ್ಥಮಾಡಿಕೊಂಡು ಶ್ರಾವಕನು ತನ್ನ ಮುಂದಿನ ಹೆಜ್ಜೆಯಾಗಿ ವ್ರತಪ್ರತಿಮಾಚರಣೆಗೆ ಮುಂದಾಗುತ್ತಾನೆ. ಅಂದರೆ ದರ್ಶನ ಪ್ರತಿಮೆಯ ಗುಣಗಳನ್ನೂ ಮೈಗೂಡಿಸಿಕೊಂಡು ಅವುಗಳನ್ನೇ ಧ್ಯಾನ ಮಾಡುತ್ತಾ ಮುಂದುವರಿಯುವುದು ವ್ರತ ಪ್ರತಿಮಾ ವ್ಯಾಪ್ತಿಗೆ ಬರುತ್ತದೆ. ಈ ವ್ರತ ಪ್ರತಿಮಧಾರಿಗಳು ಐದು ಅಣುವ್ರತ, ಮೂರು ಗುಣವ್ರತ, ನಾಲ್ಕು ಶಿಕ್ಷಾವ್ರತಗಳನ್ನು ಪಾಲಿಸುತ್ತಾನೆ. ಹಾಗಾಗಿ ಅವರು ಶ್ರಾವಕತ್ವಕ್ಕೆ ಪ್ರವೇಶ ಪಡೆದು ಗೃಹಸ್ಥ ಅಥವಾ ಸಂಸಾರಿತನದಿಂದ ಸ್ವಲ್ಪಮಟ್ಟಿಗೆ ಬಿಡುಗಡೆ ಹೊಂದಿರುತ್ತಾರೆ. ಆಗ ಅವರಿಗೆ ಸಂಸಾರದ ವ್ಯಾಮೋಹ ಗಾಢವಾಗಿರುವುದಿಲ್ಲ. ಆದ್ದರಿಂದ ವ್ರತಪ್ರತಿಮಾಧಾರಿಯೂ ತನ್ನ ಪಥವನ್ನು ನಿರ್ದಿಷ್ಟವಾಗಿ ಗುರುತಿಸಿಕೊಂಡು ಮುಂದುವರಿಯುತ್ತಾನೆ.

ಸಾಮಾಯಿಕ ಪ್ರತಿಮಾ : ಮುಂದಿನ ನೆಲೆ ಸಾಮಾಯಿಕ ಪ್ರತಿಮೆಯದು. ಇಲ್ಲಿ ಶ್ರಾವಕ ತನ್ನ ಹಿಂದಿನ ಎರಡೂ ನೆಲೆಗಳನ್ನು ಪೂರ್ಣ ಸ್ಥಿತಿಯಲ್ಲಿ ಮುಖಾಮುಖಿಯಾಗಿ ಜಿನಧರ್ಮದೆಡೆಗೆ ಸಾಗಬೇಕೆನ್ನುವ ತನ್ನ ಅಭೀಪ್ಸೆಯನ್ನು ಗಟ್ಟಿ ಮಾಡಿಕೊಳ್ಳುತ್ತಾನೆ. ಆದ್ದರಿಂದ ವ್ರತ ಪ್ರತಿಮಾ ಶ್ರಾವಕನ ಎಲ್ಲಾ ವ್ರತಾಚರಣೆಗಳ ಜೊತೆಗೆ ಮೂರು ಸಂಧ್ಯಾ ಕಾಲಗಳಲ್ಲಿಯೂ ವಿಧಿಪೂರ್ವಕವಾಗಿ ಸಾಮಾಯಿಕ ಮಾಡುವುದು ಈ ಪ್ರತಿಮೆಯ ಕೇಂದ್ರವಾಗಿರುತ್ತದೆ. ಇದರ ಸಾಧನೆಯು ದರ್ಶನ ಪ್ರತಿಮಾ ಮತ್ತು ವ್ರತ ಪ್ರತಿಮೆಯನ್ನು ದೃಢಗೊಳಿಸಿ ಮತ್ತು ಮುಂದಿನ ಒಂದು ಪಥವನ್ನು ಆಚರಿಸಲು ಮನಸ್ಸನ್ನು ಇನ್ನಷ್ಟು ಖಚಿತಗೊಳಿಸುತ್ತದೆ.

ಪ್ರೋಷಧೋಪವಾಸ ಪ್ರತಿಮಾ : ಇಲ್ಲಿ ಸಾಮಾಯಿಕ ಪ್ರತಿಮಾ ಶ್ರಾವಕನು ಪಾಲಿಸುವ ಆಚರಣೆಯೊಡನೆ ಈ ಹಿಂದೆ ತಿಳಿಸಿರುವಂತೆ ಪ್ರತಿ ಮಾಸದಲ್ಲೂ ಬರುವ ಅಷ್ಟಮಿ ಚತುರ್ದಶಿಗಳಲ್ಲಿ ಉಪವಾಸವನ್ನು ಮಾಡುವುದು ಮೊದಲಾದ ಶುಭಾಚರಣೆಗಳನ್ನು ಪಾಲಿಸಿಕೊಂಡು ವ್ರತಧಾರಿಯಾಗುವುದು ಪ್ರೋಷಧೋಪವಾಸ ಪ್ರತಿಮಾ ಎನ್ನಿಸುತ್ತದೆ.

ಸಚಿತ್ರ ತ್ಯಾಗ ಪ್ರತಿಮಾ : ಇಲ್ಲಿ ಸೂಕ್ಷ್ಮ ಜೀವಿಯ ಪ್ರಾಣ ಹಾನಿಯಾಗದಂತೆ ನೋಡಿಕೊಳ್ಳುವುದರಲ್ಲಿ ಎಚ್ಚರ ವಹಿಸಬೇಕು. ಈ ಹಂತದಲ್ಲಿರುವ ಶ್ರಾವಕನು ಈ ಹಿಂದಿನ ನಾಲ್ಕೂ ನೆಲೆಗಳನ್ನು ಕಾಯ, ವಾಚಾ, ಮನಸಾ ಪೂರ್ವಕವಾಗಿ ಪಾಲಿಸುವವನಾಗಿರಬೇಕು. ಹಸಿರು ಎಲೆ, ತರಕಾರಿ, ಫಲ ಮುಂತಾದ ವನಸ್ಪತಿಗಳನ್ನು ಹಾಗೂ ಕಂದಮೂಲಗಳನ್ನು ಸೇವಿಸುವಂತಿಲ್ಲ. ಶೋಧಿಸದೆ ಇರುವ ನೀರನ್ನು ಕುಡಿಯುವಂತಿಲ್ಲ. ಇದನ್ನು ಪಾಲಿಸುತ್ತಾ ಜಿನ ನಾಮಸ್ಮರಣೆ ಮಾಡುವುದು ಇಲ್ಲಿನ ಪ್ರಮುಖ ಅಂಶ.

ರಾತ್ರಿ ಭೋಜನ ತ್ಯಾಗ ಪ್ರತಿಮಾ : ಜೈನಧರ್ಮೀಯರು ಹೊತ್ತು ಮುಳುಗಿದ ನಂತರ ಊಟ ಮಾಡುವಂತಿಲ್ಲ. ಹಿಂಸೆಯನ್ನು ತಪ್ಪಿಸುವುದೇ ಇದರ ಪ್ರಮುಖ ಉದ್ದೇಶವಾಗಿದೆ. ಆದ್ದರಿಂದ ಹೊತ್ತು ಮುಳುಗುವ ಮುನ್ನ ಊಟ ಮಾಡುವುದು ಪದ್ಧತಿ. ಇಲ್ಲಿ ರಾತ್ರಿ ಭೋಜನ ತ್ಯಜಿಸಲ್ಪಡುತ್ತದೆ.

ಬ್ರಹ್ಮಚರ್ಯ ಪ್ರತಿಮಾ : ವಿವಾಹಿತ ಸ್ತ್ರೀ, ಪರ ಪುರುಷರೊಡನೆ ಸಂಬಂಧ ಇಟ್ಟುಕೊಳ್ಳದಿರುವುದು, ಕಾಯಾ, ವಾಚಾ, ಮನಸಾದಿಂದ ಸ್ತ್ರೀಸಂಗವನ್ನು ಸಂಪೂರ್ಣವಾಗಿ ತ್ಯಾಗ ಮಾಡುವುದು, ಪೌಷ್ಟಿಕವಾದ ಆಹಾರ ಸೇವಿಸದಿರುವುದು, ಶೃಂಗಾರ, ನೃತ್ಯ, ಸಂಗೀತ ಮೊದಲ್ಗೊಂಡು ವಿಲಾಸ–ಭೋಗರೂಪಿ ದೃಶ್ಯಗಳನ್ನು ನೋಡದೆ ಇರುವುದರ ಕಡೆಗೆ ಬದ್ಧತೆ ತೋರುವುದು ಬ್ರಹ್ಮಚರ್ಯ ಪ್ರತಿಮಾಧಾರಿಯ ಕರ್ತವ್ಯವಾಗಿರುತ್ತದೆ.

ಆರಂಭತ್ಯಾಗ ಪ್ರತಿಮಾ : ವ್ಯವಸಾಯ, ವ್ಯಾಪಾರ ಮತ್ತು ಇತರೆ ಜೀವನ ವೃತ್ತಿಯನ್ನು ನಿರ್ವಹಿಸದಿರುವುದು ಜೊತೆಗೆ ಗೃಹ ಕಾರ್ಯಗಳಿಗೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ತ್ಯಾಗ ಮಾಡಿ ಪೂರ್ವಾರ್ಜಿತವಾದ ಸಂಪತ್ತಿನಿಂದಲೇ ತನ್ನ ಜೀವನವನ್ನು ನಿರ್ವಹಣೆ ಮಾಡಿಕೊಳ್ಳುವುದು ಆರಂಭ ತ್ಯಾಗ ಪ್ರತಿಮಾಧಾರಿಯ ಲಕ್ಷಣವಾಗಿರುತ್ತದೆ. ತನಗಾಗಿ, ತನ್ನ ಉಳಿವಿಗಾಗಿ ಮಾಡುವುದೇ ಶ್ರೇಷ್ಠ ಎಂಬ ಸಾಮಾನ್ಯ ಪ್ರಾಥಮಿಕ ಅಗತ್ಯ ಕೂಡ ಇಲ್ಲಿ ಸುಳಿಯುವಂತಿಲ್ಲ. ಇದರ ಅಂಗವಾಗಿ ಶ್ರಾವಕನು ತನ್ನ ಅಗತ್ಯಗಳನ್ನು ಸಹಜವಾಗಿ ಲಭ್ಯ ಪ್ರಾಕೃತಿಕ ಕೊಡುಗೆಗಳಿಂದಲೇ ಪೂರೈಸಿಕೊಳ್ಳಬೇಕು. ತನ್ನ ಆಹಾರಕ್ಕೂ ಶ್ರಮ ಹಾಕುವಂತಿಲ್ಲ. ಅಂತಹ ಸ್ಥಿತಿಯಿಂದ ತಾನು ತನ್ನ ದೇಹವನ್ನು ಸಲಹಿದೆ ಎಂಬ ಅಭಿಮಾನವೂ ಆತನಲ್ಲಿ ಉಳಿಯುವಂತಿಲ್ಲ.

ಪರಿಗ್ರಹ ತ್ಯಾಗ ಪ್ರತಿಮಾ : ತನಗೆ ಪ್ರಾಥಮಿಕ ಅಗತ್ಯಕ್ಕೆ ಬೇಕಾದ ವಸ್ತುಗಳನ್ನು ಮಾತ್ರ ತನ್ನ ಬಳಿ ಇಟ್ಟುಕೊಂಡು ಉಳಿದ ಎಲ್ಲ ವಸ್ತುಗಳನ್ನು ಹಾಗೂ ಉಳಿದ ಲೌಕಿಕ ಮೂಲವಾದ ವ್ಯವಹಾರಗಳು, ಮಮಕಾರಗಳನ್ನು ಶ್ರಾವಕನು ಈ ಹಂತದಲ್ಲಿ ತ್ಯಾಗ ಮಾಡಬೇಕು. ಶ್ರಾವಕನು ಸಂಸಾರ ಮೂಲದಿಂದ ಬಂದವನಾಗಿರುತ್ತಾನೆ. ಈ ಬಂಧನವನ್ನು ಇಲ್ಲವಾಗಿಸಿಕೊಳ್ಳುವುದೇ ಪರಿಗ್ರಹ ತ್ಯಾಗ ಪ್ರತಿಮಾಧಾರಿಯ ಮುಖ್ಯ ಆಶಯವಾಗಿರುತ್ತದೆ. ಸಂಸಾರದಿಂದ ಬಂಧ ಮುಕ್ತವಾಗುವುದು ಇಲ್ಲಿನ ಪ್ರಥಮ ಆದ್ಯತೆ.

ಅನುಮತಿ ತ್ಯಾಗ ಪ್ರತಿಮಾ : ಪರಿಗ್ರಹ ತ್ಯಾಗ ಪ್ರತಿಮಾಧಾರಿಯು ಲೌಕಿಕ ಬಂಧನಗಳಿಂದ ಮುಕ್ತನಾಗುತ್ತಾನೆ. ಅನುಮತಿ ತ್ಯಾಗ ಪ್ರತಿಮಾದಲ್ಲಿ ಶ್ರಾವಕನು ಶ್ರಾವಕನಾಗಿ ಉಳಿದಿರುವುದಿಲ್ಲ. ಲೌಕಿಕ ಮೋಹಗಳನ್ನು ತ್ಯಜಿಸಿದಾಗಲೇ ಅವನು ಶ್ರಾವಕತ್ವವನ್ನು ಕಳೆದುಕೊಂಡು ಮುಂದಿನ ಹೆಜ್ಜೆಯತ್ತ ದೃಷ್ಟಿ ನೆಟ್ಟಿರುತ್ತಾನೆ. ಹಾಗಾಗಿ ಐಹಿಕ ಕಾರ್ಯಗಳಲ್ಲಿ ಸಲಹೆ, ಅನುಮತಿ ಕೊಡುವುದರಿಂದಲೂ ಅವನು ಹೊರಗುಳಿದಿರುತ್ತಾನೆ. ಅಂದರೆ ಒಂದು ರೀತಿಯ ನಿರ್ಲಿಪ್ತ ಸ್ಥಿತಿಗೆ ಅವನ ಸರ್ವಸ್ವ ತೆರೆದುಕೊಂಡಿರುತ್ತದೆ. ಆದ್ದರಿಂದ ಐಹಿಕ ಬಂಧನಗಳು ಅವನನ್ನು ಬಾಧಿಸುವುದಿಲ್ಲ.

ಅನುಮತಿ ತ್ಯಾಗ ಪ್ರತಿಮಾಧಾರಿಯು ಲೌಕಿಕ ಪ್ರಪಂಚದಲ್ಲಿ ತನ್ನ ಪಾತ್ರ ನಶ್ವರತೆಯನ್ನು ಮನಗಂಡು ನಿರ್ಲಿಪ್ತ ಮನೋಭಾವದಿಂದ ಮನೆಯನ್ನು ತೊರೆಯುತ್ತಾನೆ. ಮಂದಿರ, ಚೈತ್ಯಾಲಯಗಳು ಅವನ ವಾಸ ಸ್ಥಾನಗಳಾಗುತ್ತವೆ. ಏಕಾಂತ ಸ್ಥಳ ಅವನಿಗೆ ಪ್ರಿಯವಾಗುತ್ತದೆ. ಅಲ್ಲಿ ಸ್ವಾಧ್ಯಾಯ, ಸಾಮಾಯಿಕಗಳಲ್ಲಿ ತನ್ನ ಅಮೂಲ್ಯ ಸಮಯವನ್ನು ಮೋಕ್ಷ ಸಾಧನೆಗಾಗಿ

ವಿನಿಯೋಗಿಸಿಕೊಳ್ಳುತ್ತಾನೆ. ಆಮಂತ್ರಣ ಕೊಡುವ ಸ್ಥಳಗಳಿಂದ ಮಾತ್ರ ಆಹಾರ ಸ್ವೀಕರಿಸುತ್ತಾನೆ. ಇದಕ್ಕೆ ಅವನ ಮನೆಯೂ ಹೊರತಾಗಿರುವುದಿಲ್ಲ.

ಉದ್ದಿಷ್ಟ ತ್ಯಾಗ ಪ್ರತಿಮಾ : ಶ್ರಾವಕರ ಹನ್ನೊಂದು ನೆಲೆಗಳಲ್ಲಿ ಇದು ಕೊನೆಯದು. ಆದ್ದರಿಂದ ಇದಕ್ಕೆ ಹೆಚ್ಚಿನ ಮಹತ್ವ ಇದೆ. ಶ್ರಾವಕನು ತನ್ನ ಲೌಕಿಕದ ಎಲ್ಲಾ ಬಂಧಗಳನ್ನು ಕಳಚಿಕೊಂಡು ಧರ್ಮದ ಅನುಗಮನ ಸ್ಥಿತಿಯತ್ತ ಚಲಿಸುವ ಮಹತ್ವದ ಭಾಗ. ಇಲ್ಲಿ ಲೌಕಿಕದ ಬಂಧಗಳು ಸಂಪೂರ್ಣವಾಗಿ ವರ್ಜ್ಯವಾಗಿ ಧರ್ಮ ಬಹುಮುಖಿ ಆಯಾಮಗಳಲ್ಲಿ ಹತ್ತಿರವಾಗುತ್ತದೆ.

ಶ್ರಾವಕ ತನಗಾಗಿ ತಯಾರಿಸಿದ ಭೋಜನವನ್ನೂ ತ್ಯಾಗ ಮಾಡುತ್ತಾನೆ. ಈ ಹಿಂದಿನ ಅನುಮತಿ ತ್ಯಾಗ ಪ್ರತಿಮಾಧಾರಿಯು ತನಗಾಗಿ ತಯಾರಿಸಿದ ಆಹಾರವನ್ನು ಸ್ವೀಕರಿಸುತ್ತಿದ್ದ. ಆದರೆ ಇಲ್ಲಿ ಅದಕ್ಕೂ ಮಾನ್ಯತೆ ಇಲ್ಲ. ಇಲ್ಲಿ ನಿರಾಕರಣೆ ಒಂದು ಮೌಲ್ಯವಾಗಿ ಅವನನ್ನು ತನ್ನದೇ ದಾರಿಯಲ್ಲಿ ಮುನ್ನಡೆಸುತ್ತದೆ. ಈ ನಿರಾಕರಣೆಯ ಸ್ಥಿತಿಯು ಅವನಲ್ಲಿ ಯಾವುದರ ಬಗ್ಗೆಯೂ ಮೋಹವೂ ಬಯಕೆಯೂ ಇಲ್ಲದಂತೆ ಪರಿವರ್ತಿಸುತ್ತದೆ. ಈ ರಕ್ಷಣೆ ಅವನನ್ನು ಮುಂದಿನ ಹಂತಕ್ಕೆ ಸುಲಭವಾಗಿ ಕೊಂಡೊಯ್ಯುತ್ತದೆ.

ಈ ಪ್ರತಿಮಾಧಾರಿ ಶ್ರಾವಕರನ್ನು ಕ್ಷುಲ್ಲಕ ಮತ್ತು ಐಲಕರೆಂದು ಎರಡು ಭೇದಗಳಲ್ಲಿ ಗುರುತಿಸಲಾಗಿದೆ. ಕ್ಷುಲ್ಲಕರು ಪಾತ್ರೆಯಲ್ಲಿ, ಮುನಿಗಳು ಕರ ಪಾತ್ರೆಯಲ್ಲಿ ಆಹಾರ ಸ್ವೀಕರಿಸಿದ ನಂತರ ತಾವು ಸ್ವೀಕರಿಸುತ್ತಾರೆ. ಕ್ಷುಲ್ಲಕರು ಲಂಗೋಟಿಯೊಡನೆ ತುಂಡು ವಸ್ತ್ರವನ್ನು ಧರಿಸುತ್ತಾರೆ. ಆದರೆ ಐಲಕರು ಲಂಗೋಟಿಯನ್ನು ಮಾತ್ರ ಧರಿಸುತ್ತಾರೆ. ಕ್ಷುಲ್ಲಕರಿಗೆ ಕೇಶಲೋಚನ ಅನಿವಾರ್ಯವಲ್ಲ, ಐಲಕರಿಗೆ ಅದು ಅನಿವಾರ್ಯ.

ಶ್ರಾವಕನು ಮೊದಲ ನೆಲೆಯನ್ನು ಸ್ವತಂತ್ರವಾಗಿ ಆವಿರ್ಭವಿಸಿಕೊಂಡು ನಂತರದ ನೆಲೆಗಳನ್ನು ಹಿಂದಿನ ನೆಲೆಗಳೊಡನೆ ಅಥವಾ ಪ್ರತಿಮಾಗಳೊಡನೆ ಪಾಲನೆ ಮಾಡಿಕೊಂಡು ಹೋಗಬೇಕಾಗುತ್ತದೆ. ಹನ್ನೊಂದನೆಯ ಪ್ರತಿಮಾಧಾರಣೆಗೆ ಬರುವ ವೇಳೆಗೆ ಶ್ರಾವಕ ಮಾಗಿರುತ್ತಾನೆ. ಧರ್ಮದೊಡನೆ ಅವನಿಗೆ ಅವಿನಾಭಾವ ಸಂಬಂಧ ಸಾಧ್ಯವಾಗಿರುತ್ತದೆ.

ಆದರೆ ಧರ್ಮಮೂಲ ಸಂಗತಿಯೊಂದು ಇಲ್ಲಿ ಎದುರಾಗುತ್ತದೆ. ಈ ಹನ್ನೊಂದು ಹಂತದ ಪ್ರತಿಮಾಧಾರಕ ಶ್ರಾವಕರಲ್ಲಿ, ಮೊದಲ ಆರು ಹಂತದ ಶ್ರಾವಕ ಸಾಧಕರನ್ನು ಜಘನ್ಯರೆಂದೂ ಆನಂತರದ ಮೂರು ಹಂತದವರನ್ನು ಮಧ್ಯಮರೆಂದೂ, ಉಳಿದ ಎರಡು ಹಂತದವರನ್ನು ಉತ್ಕೃಷ್ಟರೆಂದೂ ಹೇಳಲಾಗಿದೆ. ಇದು ಶ್ರಾವಕರು ಆರಂಭದಿಂದಲೇ ಲೌಕಿಕ ಬಂಧನಗಳಿಂದ

ಯಾವ ಪ್ರಮಾಣದಲ್ಲಿ ಬಿಡುಗಡೆ ಹೊಂದುತ್ತಾರೆ ಎಂಬುದನ್ನು ಆಧರಿಸಿರುತ್ತದೆ. ಅದರ ಮೇಲೆ ಈ ಮೌಲ್ಯಧಾರಣೆಯನ್ನು ಜೈನ ದಾರ್ಶನಿಕತೆಗೆ ಅನುಗುಣವಾಗಿ ನಿರ್ಧರಿಸಲಾಗಿದೆ.

4.2. ಜೈನಧರ್ಮದ ಮುನಿಯಾಚಾರ

ಶ್ರಾವಕನು ಹನ್ನೊಂದನೆಯ ಪ್ರತಿಮಾ ಹಂತ ತಲುಪಿ, ಉತ್ಕೃಷ್ಟವಾದ ಬಳಿಕ ಮುನಿ ಆಚಾರ ಧಾರಣೆ ಮಾಡಲು ಅರ್ಹನಾಗುತ್ತಾನೆ. ಆಗಮ ಶಾಸ್ತ್ರಗಳಲ್ಲಿ ಮುನಿಗಳ ಆಚರಣೆಯನ್ನು ಪಟ್ಟಿ ಮಾಡಲಾಗಿದೆ. ಇಪ್ಪತ್ತೊಂದು ಮೂಲ ಗುಣಗಳು, ಹತ್ತು ಧರ್ಮಗಳು, ಮೂರು ಗುಪ್ತಿಗಳು, ಇಪ್ಪತ್ತೆರಡು ಪರೀಷಹಗಳು, ಹನ್ನೆರಡು ಅನುಪ್ರೇಕ್ಷೆಗಳು, ಹನ್ನೆರಡು ತಪಗಳು, ಧ್ಯಾನ ಮತ್ತು ಮಾರಣಾಂತಿಕ ಸಲ್ಲೇಖನಾ ಈ ರೀತಿಯಾದ ಮುನಿ ಆಚಾರಗಳ ಆಚರಣೆ ಮಾಡುವವರನ್ನು ಸಾಧು, ಯತಿ, ಭಿಕ್ಷು, ತಪಸ್ವಿ, ಸಂಯಮಿ, ಯೋಗಿ, ಶ್ರಮಣ ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ.[15] ಮುನಿಧರ್ಮ ಆಚರಣೆಯಲ್ಲಿ ಸರ್ವೋತ್ಕೃಷ್ಟತೆಯನ್ನು ತಲುಪಿದ ತರುವಾಯ ಜೀವವು ತನ್ನ ಶುದ್ಧ, ಶಾಶ್ವತ, ಅನಂತಜ್ಞಾನ, ದರ್ಶನ, ಸುಖ ಮತ್ತು ವೀರ್ಯಗಳಿಂದ ಯುಕ್ತನಾಗಿ ಜೀವದ ಅಂತಿಮ ಅವಸ್ಥೆಯಾದ ಸಿದ್ಧಪರಮೇಷ್ಠಿ ಅವಸ್ಥೆಗೆ ತಲುಪಿ ಅವರು ಮುಕ್ತಿಯನ್ನು ಹೊಂದುತ್ತಾರೆ. ಪರಿಪೂರ್ಣಶುದ್ಧಾತ್ಮನ ಗುಣಗಳ ಪ್ರಾಪ್ತಿಗಾಗಿ ಸಿದ್ಧಪರಮೇಷ್ಠಿಗಳನ್ನು "ಓಂ ನಮಃ ಸಿದ್ಧೇಭ್ಯಃ" ಎಂದು ಪಠಿಸುತ್ತಾರೆ.

ಇಪ್ಪತ್ತೆಂಟು ಮೂಲ ಗುಣಗಳು : ಮುನಿಗಳಿಗೆ ಇಪ್ಪತ್ತೆಂಟು ಮೂಲ ಗುಣಗಳಿರುತ್ತವೆ.[16] ಅವುಗಳೆಂದರೆ ಐದು ಮಹಾವ್ರತಗಳು, ಐದು ಸಮಿತಿಗಳು, ಐದು ಪಂಚೇಂದ್ರಿಯ ನಿರೋಧ, ಆರು ಅವಶ್ಯಕ, ಅದಂತಧಾವನ, ಅಸ್ನಾನ, ಶೂಶಯನ, ಸ್ಥಿತಿಭೋಜನ, ಏಕಭುಕ್ತಿ, ಕೇಶಲೋಚನ ಮತ್ತು ನಗ್ನತೆ ಈ ಮೂಲಗುಣಗಳು ಅವುಗಳ ಸ್ವರೂಪ ಹೀಗಿದೆ :

ಐದು ಮಹಾವ್ರತಗಳು : ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹ ಈ ಐದು ಮಹಾವ್ರತಗಳನ್ನು ಮುನಿಯು ಯಾವುದೇ ರೀತಿಯ ಅತಿಚಾರಗಳಿಗೆ ಆಸ್ಪದ ನೀಡದೆ ಕಟ್ಟುನಿಟ್ಟಾಗಿ ಪರಿಪೂರ್ಣನಾಗಿ ಆಚರಿಸಬೇಕು.[17]

ಐದು ಸಮಿತಿಗಳು : ವ್ರತ ಆಚರಣೆಯ ಉದ್ದೇಶಕ್ಕಾಗಿ ಎಚ್ಚರಿಕೆಗಳನ್ನು ತೆಗೆದುಕೊಳ್ಳಲು ಈರ್ಯ, ಭಾಷಾ, ಏಷಣಾ, ಆದಾನ ನಿಕ್ಷೇಪಣಾ ಮತ್ತು ವ್ಯುತ್ಸರ್ಗ ಎಂಬ ಐದು ಸಮಿತಿಗಳಿವೆ.[18] ಯಾವುದೇ ಜೀವ ಜಂತುಗಳಿಗೆ ಪ್ರಾಣ ಹಾನಿಯಾಗದಂತೆ ಹಗಲು ಹೊತ್ತು ಮಾತ್ರ ನಾಲ್ಕು ಮೊಳ ದೂರದವರೆಗೆ ನೆಲವನ್ನು ನೋಡಿಕೊಂಡು ನಡೆಯುವುದು ಈರ್ಯಾ ಸಮಿತಿಯಾದರೆ, ಹಿತ ಮಿತ ಮಾತುಗಳನ್ನಾಡುವುದು ಭಾಷಾ ಸಮಿತಿಯಾಗಿದೆ. ಶ್ರಾವಕರು ಕೊಡುವ ಆಹಾರವನ್ನು ಎಲ್ಲ

ರೀತಿಯಲ್ಲು ಶುದ್ಧವಾಗಿರುವಂತೆ ಎಚ್ಚರ ವಹಿಸುವುದು ಏಷಣಾ ಸಮಿತಿಯಾದರೆ, ಶಾಸ್ತ್ರ, ಕಮಂಡಲ, ಪಿಂಛ ಮೊದಲಾದ ತನ್ನ ವಸ್ತುಗಳನ್ನು ಇಡುವ ಮತ್ತು ತೆಗೆದುಕೊಳ್ಳುವ ಸಮಯದಲ್ಲಿ ಎಚ್ಚರಿಕೆಯ ಆದಾನ ನಿಕ್ಷೇಪಣಾ ಸಮಿತಿಯಾಗಿದೆ. ಇದೇ ರೀತಿ ಮಲ ಮೂತ್ರಗಳನ್ನು ಕ್ರಿಮಿಕೀಟಗಳು ಇಲ್ಲದ ಸ್ಥಳದಲ್ಲಿ ವಿಸರ್ಜನೆ ಮಾಡುವುದನ್ನು ಪ್ರತಿಷ್ಠಾಪನಾ ಅಥವಾ ವ್ಯುತ್ಸರ್ಗ ಸಮಿತಿ ಎನ್ನಲಾಗುತ್ತದೆ.

ಐದು ಪಂಚೇಂದ್ರಿಯ ನಿರೋಧ : ಮುನಿಯು ತನ್ನ ಪಂಚೇಂದ್ರಿಯಗಳಾದ ಕಿವಿ, ಕಣ್ಣು, ಮೂಗು, ನಾಲಿಗೆ ಮತ್ತು ಚರ್ಮಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ರಾಗ–ದ್ವೇಷ ಮಾಡದಿರುವುದು ಪಂಚೇಂದ್ರಿಯ ನಿರೋಧಕವಾಗಿದೆ.[19]

ಆರು ಅವಶ್ಯಕಗಳು : ಮುನಿಗಳು ಮಾಡಲೇಬೇಕಾಗಿರುವ ಸಾಮಾಯಿಕ ಸ್ತುತಿ, ವಂದನೆ, ಪ್ರತಿಕ್ರಮಣ, ಪ್ರತ್ಯಾಖ್ಯಾನ ಮತ್ತು ಕಾಯೋತ್ಸರ್ಗ ಎಂಬ ಆರು ಕ್ರಿಯೆಗಳಿಗೆ ಅವಶ್ಯಕ ಕ್ರಿಯೆಗಳು ಎನ್ನುತ್ತಾರೆ.[20] ರಾಗ–ದ್ವೇಷ, ಮೋಹ, ಮಾನ ಇತ್ಯಾದಿ ಭಾವನೆಗಳ ರಹಿತನಾಗಿ ಸದಾ ಕಾಲದಲ್ಲಿಯೂ ಸಮತಾಭಾವನೆಯಿಂದ ತ್ರಿಕಾಲಗಳಲ್ಲಿಯೂ ಸಮತಾಭಾವನೆಯಿಂದ 'ಸಾಮಾಯಿಕ' ಮಾಡುವುದು, ಇಪ್ಪತ್ನಾಲ್ಕು ತೀರ್ಥಂಕರರ ಗುಣಗಾನದ 'ಸ್ತುತಿ' ಮಾಡುವುದು, ಕಾಯಾ, ವಾಚಾ, ಮನಸಾ ಣಮೋಕಾರ ವಂದನೆ ಮಾಡುವುದು, ಸ್ವತಃ ತಾನು ಮಾಡಿದ ಅಪರಾಧಗಳನ್ನು ಶೋಧನೆ ಮಾಡಿಕೊಳ್ಳುವುದು 'ಪ್ರತಿಕ್ರಮಣ'ವಾಗುತ್ತದೆ. ಭವಿಷ್ಯದಲ್ಲಿ ಉಂಟಾಗಬಹುದಾದ ದೋಷಗಳಿಂದ ಉಳಿಯಲು ಯೋಗ್ಯವಲ್ಲದ ವಸ್ತುಗಳನ್ನು ತ್ಯಾಗ ಮಾಡುವುದು 'ಪ್ರತ್ಯಾಖ್ಯಾನ'ವಾಗಿದೆ. ಶರೀರದ ಮಮತ್ವವನ್ನು ತ್ಯಾಗ ಮಾಡಿ ಪಂಚಪರಮೇಷ್ಠಿಗಳ ಸ್ಮರಣೆ ಮಾಡುತ್ತಾ ಅದರಲ್ಲೇ ಲೀನನಾಗುವುದು 'ಕಾಯೋತ್ಸರ್ಗ'ವಾಗಿದೆ. ಈ ರೀತಿಯ ಆರು ಅವಶ್ಯಕ ಕ್ರಿಯೆಗಳನ್ನು ಮುನಿಗಳು ಪ್ರತಿನಿತ್ಯ ಎರಡು ಸಮಯದಲ್ಲಿ ಮಾಡಬೇಕು. [21]

ಅಸ್ನಾನ : ಮುನಿಗಳು ಸ್ನಾನ ಮಾಡದಿರುವುದು; **ಅದಂತ ಧಾವನ** : ಹಲ್ಲುಗಳನ್ನು ಉಜ್ಜದಿರುವುದು; **ಭೂಶಯನ** : ಮುನಿಯು ಧ್ಯಾನ, ಸ್ವಾಧ್ಯಾಯ ಮತ್ತು ವಿಶ್ರಾಂತಿ ಮಾಡಲು ನೆಲದಲ್ಲಿ ಮರದ ಹಲಗೆಯ ಮೇಲೆ, ಒಣಗಿದ ಹುಲ್ಲು ಅಥವಾ ಚಾಪೆಯ ಮೇಲೆ ವಿಶ್ರಾಂತಿಯನ್ನು ಹೊಂದುವುದು; **ಸ್ಥಿತಿ ಭೋಜನ** : ಮುನಿಯು ತನ್ನ ಕರಪಾತ್ರೆ ಅಥವಾ ಪಾಣಿಪಾತ್ರೆ ಬೊಗಸೆಯಿಂದ ಆಹಾರವನ್ನು ನಿಂತುಕೊಂಡು ಸೇವಿಸುವುದು. **ಏಕಭುಕ್ತಿ** : ಮುನಿಗಳು ದಿನಕ್ಕೆ ಒಂದೇ ಸಲ ಆಹಾರವನ್ನು ಸೇವಿಸಬೇಕು; **ಕೇಶಲೋಚನ** : ಎರಡು ತಿಂಗಳಿಂದ ನಾಲ್ಕು ತಿಂಗಳ ಮಧ್ಯದಲ್ಲಿ ತಮ್ಮ ಕೈಗಳಿಂದ ತಲೆ, ಗಡ್ಡ, ಮೀಸೆಗಳ ಕೂದಲುಗಳನ್ನು ಕಿತ್ತುಕೊಳ್ಳುವುದು ಕೇಶಲೋಚನವಾಗಿದೆ; **ನಗ್ನತಾ** :

ಮುನಿಗಳು ನಿರ್ವಿಕಾರ ದಿಗಂಬರ ಅವಸ್ಥೆಯಲ್ಲಿ ಇರುವುದು; **ದಶಧರ್ಮಗಳು** : ಮುನಿಗಳು ಉತ್ತಮ ಕ್ಷಮೆ, ಉತ್ತಮ ಮಾರ್ದವ, ಉತ್ತಮ ಅರ್ಜವ, ಉತ್ತಮ ಶೌಚ, ಉತ್ತಮ ಸತ್ಯ, ಉತ್ತಮ ಸಂಯಮ, ಉತ್ತಮ ತಪ, ಉತ್ತಮ ತ್ಯಾಗ, ಉತ್ತಮ ಅಕಿಂಚನ್ಯ, ಉತ್ತಮ ಬ್ರಹ್ಮಚರ್ಯ ಈ ರೀತಿಯಾಗಿ ಹತ್ತು ಧರ್ಮಗಳನ್ನು ಮಾಡುವುದು.[22]

1. **ಉತ್ತಮ ಕ್ಷಮಾ** : ಕ್ರೋಧವನ್ನುಂಟು ಮಾಡುವ ಬೈಗುಳ, ನಿಂದೆ, ಹೊಡೆತ ಮುಂತಾದ ಅವಮಾನ ಪರಿಸ್ಥಿತಿಯಲ್ಲಿಯೂ ಮನಸ್ಸನ್ನು ಕಲುಷಿತವಾಗದಂತೆ ನೋಡಿಕೊಳ್ಳುವುದು.

2. **ಉತ್ತಮ ಮಾರ್ದವ** : ಕುಲ, ಜಾತಿ, ರೂಪ, ಜ್ಞಾನ, ತಪ, ವೈಭವ, ಪ್ರಭುತ್ವ, ಶೀಲ, ಸಂಪತ್ತು ಮುಂತಾದ ಅಭಿಮಾನ ಮಾಡುವಂತಹ 'ಮದ'ವೆಂಬ ಮಾನ ಕಷಾಯವನ್ನು ಜಯಿಸಿ ಸದಾಕಾಲ ಮೃದುಸ್ವಭಾವದಿಂದ ವಿನಯರಾಗಿರುವುದು.

3. **ಉತ್ತಮ ಆರ್ಜವ** : ಮನದಲ್ಲಿ ಒಂದು, ಮಾತಿನಲ್ಲಿ ಇನ್ನೊಂದು, ಕೃತಿಯಲ್ಲಿ ಬೇರೊಂದು ಮಾಡುವ ಮಯಾಚಾರ ಕಷಾಯವನ್ನು ಜಯಿಸಿ ಮನ, ವಚನ, ಕಾಯದಲ್ಲಿ ಏಕರೂಪವಾಗಿ ನಡೆದುಕೊಳ್ಳುವುದು.

4. **ಉತ್ತಮ ಶೌಚ** : ಮದ ಮತ್ತು ಕ್ರೋಧಗಳನ್ನು ಹೆಚ್ಚಿಸುವ ಪ್ರಬಲ ದುರ್ಭಾವನೆಯಾಗಿರುವ ಲೋಭ ಕಷಾಯವನ್ನು ಜಯಿಸಿ, ಮನಸ್ಸನ್ನು ಪವಿತ್ರಗೊಳಿಸುವುದು.

5. **ಉತ್ತಮ ಸತ್ಯ** : ಅಸತ್ಯವಚನ ಮತ್ತು ಬೇರೆಯವರಿಗೆ ಅಪ್ರಿಯವಾದ ಮಾತುಗಳನ್ನು ತ್ಯಾಗ ಮಾಡಿ ಹಿತ–ಮಿತ–ಪ್ರಿಯ ಮಾತನಾಡುವುದು.

6. **ಉತ್ತಮ ಸಂಯಮ** : ಪಂಚೇಂದ್ರಿಯಗಳ ಮೇಲೆ ನಿಯಂತ್ರಣ ಇರಿಸಿಕೊಳ್ಳುವುದು, ಅಂದರೆ ಪಂಚೇಂದ್ರಿಯಗಳ ಮೇಲೆ ಜಯ ಸಾಧಿಸುವುದು ಉತ್ತಮ ಸಂಯಮವಾಗಿದೆ.

7. **ಉತ್ತಮ ತಪ** : ವಿಷಯ ಕಷಾಯಗಳನ್ನು ನಿಗ್ರಹಿಸಿ ಹನ್ನೆರಡು ಪ್ರಕಾರದ ತಪದಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳುವುದು.

8. **ಉತ್ತಮ ತ್ಯಾಗ** : ಯಾವ ಪ್ರತ್ಯುಪಕಾರವನ್ನು ಬಯಸದೆ ತನ್ನಲ್ಲಿರುವ ಜ್ಞಾನ ಮುಂತಾದ ಸಂಪತ್ತನ್ನು ಬೇರೆಯವರ ಹಿತ ಮತ್ತು ಕಲ್ಯಾಣಕ್ಕಾಗಿ ದಾನ ಮಾಡುವುದು.

9. **ಉತ್ತಮ ಅಕಿಂಚನ್ಯ** : ಮನೆ–ಮಠ, ಧನ–ದ್ರವ್ಯ, ಬಂಧು–ಬಾಂಧವರು, ಶತ್ರು–ಮಿತ್ರ ಮತ್ತು ಶರೀರ ಇವುಗಳ ಮಮತ್ವವನ್ನು ಬಿಟ್ಟು ಅನಾಸಕ್ತಿ ಭಾವವನ್ನು ಉತ್ಪನ್ನಗೊಳಿಸುವುದು.

10. **ಉತ್ತಮ ಬ್ರಹ್ಮಚರ್ಯ** : ರಾಗೋತ್ಪಾದಕ ಪರಿಸ್ಥಿತಿಯಲ್ಲಿಯೂ ಮನಸ್ಸನ್ನು ಕಾಮವೇದನೆಯಿಂದ ವಿಚಲಿತಗೊಳಿಸದೆ ಆತ್ಮ ಚಿಂತನೆಯಲ್ಲಿ ತೊಡಗಿಸುವುದು.

ಮೂರು ಗುಪ್ತಿಗಳು : ಪಾಪ ಕ್ರಿಯೆಗಳಿಂದ ಆತ್ಮನನ್ನು ರಕ್ಷಿಸುವುದು ಗುಪ್ತಿ.[23] ಮನಸ್ಸನ್ನು ರಾಗ–ದ್ವೇಷದಿಂದ ಪ್ರಭಾವಿತನಾಗದಂತೆ ಇಟ್ಟುಕೊಳ್ಳುವುದೆ ಮನೋಗುಪ್ತಿ.

ಅಸತ್ಯವಾಣಿಯನ್ನು ನಿರೋಧ ಮಾಡುವುದು ಅಥವಾ ಮೌನವಾಗಿರುವುದು 'ವಚನ ಗುಪ್ತಿ'. ಶರೀರವನ್ನು ವಶದಲ್ಲಿಟ್ಟುಕೊಂಡು ಹಿಂಸಾದಿ ಕ್ರಿಯೆಗಳಿಂದ ದೂರ ಇರುವುದು 'ಕಾಯ ಗುಪ್ತಿ'. ಈ ರೀತಿಯಾಗಿ ಕಾಯ, ವಾಚಾ, ಮನಸಾ ಗುಪ್ತಿಗಳನ್ನು ಪಾಲಿಸುವುದರಿಂದ ಆತ್ಮಶುದ್ಧಿ, ಸಂಯಮಗಳು ವೃದ್ಧಿಯಾಗಿ ಆತ್ಮವನ್ನು ಕಷಾಯದಿಂದ ರಕ್ಷಿಸುತ್ತದೆ.

ಇಪ್ಪತ್ತೆರಡು ಪರೀಷಹಗಳು : ಪರೀಷಹ ಶಬ್ದವು 'ಪರಿ' ಮತ್ತು 'ಸಹ' ಶಬ್ಧಗಳ ಸಮ್ಮಿಲನವಾಗಿದೆ. ಪರಿ ಎಂದರೆ ಎಲ್ಲ ಕಡೆಯಿಂದಲು ಎಂದು'ಸಹ' ಎಂದರೆ ಸಹನೆ ಮಾಡುವುದಾಗಿದೆ.[24] ಎಂದರೆ ಆಂತರಿಕವಾಗಿ ಬಾಹ್ಯವಾಗಿ ಉಂಟಾಗುವ ಎಲ್ಲಾ ವಿಧವಾದ ಕಷ್ಟ, ದುಃಖಗಳನ್ನು ಸಮತೆಯಿಂದ ಸಹನೆ ಮಾಡುವುದೆ ಪರೀಷಹದ ಜಯವಾಗಿದೆ. ಸಮತಾ ಭಾವನೆಯನ್ನು ಪರೀಕ್ಷಿಸುವಂತಹ ಅನೇಕ ಪರಿಸ್ಥಿತಿಗಳು ದಿಗಂಬರಮುನಿಗಳಿಗೆ ಎದುರಾಗುತ್ತವೆ. ಇಂತಹ ಇಪ್ಪತ್ತೆರಡು ಪರಿಸ್ಥಿತಿಗಳನ್ನು ಅವುಗಳ ವಿಶೇಷ ರೂಪದಿಂದ ವಿಭಜಿಸಲಾಗಿದ್ದು, ಅವುಗಳು ಕ್ರಮವಾಗಿ ಹೀಗಿವೆ: ಹಸಿವು, ಬಾಯಾರಿಕೆ, ಶೀತ, ಉಷ್ಣ, ಸೊಳ್ಳೆ ಕಡಿತ, ನಗ್ನತೆ, ಆರತಿ, ಸ್ತ್ರೀ, ಚರ್ಯ, ನಿಷದ್ಯಾ, ಶಯ್ಯಾ, ಆಕ್ರೋಶ, ವಧೆ, ಯಾಚನಾ, ಅಲಾಭ, ರೋಗ, ತೃಣಸ್ಪರ್ಷ, ಮಲ, ಸತ್ಕಾರ, ಪುರಸ್ಕಾರ, ಪ್ರಜ್ಞಾ, ಅಜ್ಞಾನ ಮತ್ತು ಅದರ್ಶನ. ಈ ರೀತಿಯಾಗಿ ಮುನಿಗಳ ಜೀವನದಲ್ಲಿ ಎದುರಾಗುವ ಪರಿಸ್ಥಿತಿಗಳನ್ನು ಸಮತಾಭಾವದಿಂದ ಜಯಿಸುವುದರಿಂದ ಪೂರ್ಣವಾಗಿ ಇಂದ್ರಿಯ ವಿಜಯಿಗಳಾಗಿ ಯೋಗಿಗಳಾಗುತ್ತಾರೆ.

ಹನ್ನೆರಡು ಅನುಪ್ರೇಕ್ಷೆಗಳು : ಯಾವುದಾದರೂ ವಸ್ತು ವಿಷಯವನ್ನು ಮತ್ತೆ ಮತ್ತೆ ಚಿಂತನೆ ಮಾಡುವುದನ್ನು ಅನುಪ್ರೇಕ್ಷೆ ಎಂದು ಹೇಳುತ್ತಾರೆ. ಇವುಗಳು ಮುನಿಗಳ ಆಧ್ಯಾತ್ಮಜೀವನದಲ್ಲಿ ನೈತಿಕ ಮತ್ತು ಪಾರಮಾರ್ಥಿಕ ತತ್ತ್ವಗಳ ಬಗ್ಗೆ ಇರಬಹುದಾದ ಸಂಶಯಗಳನ್ನು ನಿವಾರಿಸುವುದರ ಜೊತೆಗೆ ಕರ್ಮಕ್ಷಯಕ್ಕೆ ಕಾರಣವಾಗುತ್ತವೆ. ಈ ಅನುಪ್ರೇಕ್ಷೆಗಳನ್ನು ಭಾವನೆಗಳು ಎಂದು

ಹೇಳಲಾಗುತ್ತದೆ. ಅನಿತ್ಯ, ಅಶರಣ, ಸಂಸಾರ, ಏಕತ್ವ, ಅನ್ಯತ್ವ, ಅಶುಚಿತ್ವ, ಅಸ್ರವ, ಸಂವರ, ನಿರ್ಜರಾ, ಲೋಕ, ಬೋಧಿದುರ್ಲಭ ಮತ್ತು ಧರ್ಮಗಳೇ ಅನುಪ್ರೇಕ್ಷೆ ಭಾವನೆಗಳು. [25]

ಜೀವನ ನಶ್ವರ ನಾನು ನನ್ನದು, ನಿನ್ನದು ಎಂಬುದರ ಚಿಂತನೆ ಹಾಗೂ ಲೋಕದಲ್ಲಿರುವ ಯಾವುದೊಂದು ಸ್ಥಿರವಲ್ಲ ಎನ್ನುವ ಭಾವನೆಯು ಅನಿತ್ಯಭಾವನೆ.

ಜನ್ಮ ಜರಾ ಮರಣಗಳಿಂದ ಬಿಡುಗಡೆ ಆತ್ಮನಲ್ಲಿದೆ ಎನ್ನುವುದು ಆಶರಣ ಭಾವನೆಯಾಗಿದೆ. ಜೀವವು ಮೋಹಕ್ಕೆ ವಶವಾಗಿ ದುಃಖವನ್ನು ಹೊಂದುತ್ತದೆಂಬ ಭಾವನೆಯು ಸಂಸಾರ ಅನುಪ್ರೇಕ್ಷೆ ಎನ್ನಿಸುತ್ತದೆ. ಒಬ್ಬಂಟಿಗನಾಗೇ ಹುಟ್ಟಿ ಒಬ್ಬಂಟಿಗನಾಗೇ ಸಾಯುತ್ತೇನೆನ್ನುವುದು 'ಏಕತ್ವಭಾವನೆಯಾಗುತ್ತದೆ' ದೇಹಾದಿಸಮಸ್ತ ಇಂದ್ರಿಯವು ಆತ್ಮನಿಂದ ಬೇರೆಯಾಗಿದೆ ಎನ್ನುವುದು ಅನ್ಯತ್ವಭಾವನೆ.

ಈ ಶರೀರವು ರಕ್ತ, ಮಾಂಸ, ಮಲ ಮೂತ್ರಾದಿಗಳಿಂದ ಕೂಡಿರುವುದರಿಂದ ಪ್ರೀತಿಸುವುದು ಶೃಂಗರಿಸುವುದು ನಿಷ್ಫಲವಾಗಿದೆ ಎನ್ನುವುದು ಅಶುಚಿತ್ವ ಭಾವನೆ. ಕಾಯ, ವಾಚಾ, ಮನಸಾ ಪ್ರವೃತ್ತಿಯಿಂದ ಮತ್ತು ಕ್ರೋಧಾದಿ ಕಷಾಯಗಳಿಂದ ಕರ್ಮಗಳು ಹರಿದು ಬರುವುದಕ್ಕೆ ಆಸ್ರವ ಎನ್ನಲಾಗುತ್ತದೆ. ಕರ್ಮಬಂಧವನ್ನು ತಡೆಯುವುದು ಸಂವರ ಭಾವನೆ. ಕರ್ಮ ಕ್ಷಯವಾಗುವಂತೆ ಮಾಡುವುದು ನಿರ್ಜರಭಾವನೆ.

ಆರು ದ್ರವ್ಯಗಳಿಂದ ಕೂಡಿರುವ ಈ ಲೋಕದಲ್ಲಿ ನಾನು ಅಜ್ಞಾನಿಯಾಗಿ ದುಃಖಕ್ಕೆ ಪಾತ್ರನಾಗಿದ್ದೇನೆ ಎನ್ನುವುದು ಲೋಕಭಾವನೆ. ಪೂರ್ವಾರ್ಜಿತ ಪುಣ್ಯದ ಫಲದಿಂದ ಮನುಷ್ಯನಾಗಿ ಹುಟ್ಟಿದ್ದೇನೆ. ಸಮ್ಯಕ್ ದರ್ಶನ–ಜ್ಞಾನ–ಚರಿತ್ರೆಗಳೆಂಬ ರತ್ನತ್ರಯಗಳನ್ನು ಪ್ರಾಪ್ತ ಮಾಡಿಕೊಳ್ಳುವುದು ದುರ್ಲಭವೆಂದು ಚಿಂತಿಸುವುದು ಬೋಧಿದುರ್ಲಭ ಭಾವನೆಯಾಗುತ್ತದೆ. ನಿಜವಾದ ಧರ್ಮದ ಸ್ವರೂಪವನ್ನು ತಿಳಿದು ಸಾಂಸಾರಿಕ ದುಃಖದಿಂದ ಮುಕ್ತಿ ಪಡೆಯುವ ಚಿಂತನೆಯನ್ನು ಮಾಡುವುದೇ ಧರ್ಮ ಭಾವನೆಯಾಗಿದೆ. ಹೀಗೆ ಹನ್ನೆರಡು ಪ್ರಕಾರದ ಭಾವನೆಗಳಿಂದ ಮುನಿಗಳು ತಮ್ಮ ಆಚಾರದಲ್ಲಿ ದೃಢತೆಯನ್ನು ಹೊಂದುವುದರ ಜೊತೆಗೆ ಸ್ಥಿರತೆಯನ್ನು ಸಂಪಾದಿಸುತ್ತಾರೆ. ಇಲ್ಲಿ ಜೈನಧರ್ಮದ ಸಂಸ್ಕೃತಿ ಆಶಯಗಳು ಘನೀಭೂತವಾಗಿ ಹರಡಿಕೊಳ್ಳುತ್ತವೆ.

ಹನ್ನೆರಡು ತಪಗಳು : ಕರ್ಮಕ್ಷಯಕ್ಕಾಗಿ ದೇಹ ಇಂದ್ರಿಯ ವಿಷಯಗಳ ಪ್ರವೃತ್ತಿ ಮತ್ತು ಮನ, ವಚನ, ಕಾಯ ತಡೆದು ಅವುಗಳನ್ನು ದಂಡಿಸುವುದು ತಪವಾಗಿದೆ.[26] ಇದರಲ್ಲಿ ಮುಖ್ಯವಾಗಿ ಬಾಹ್ಯ ಮತ್ತು ಅಭ್ಯಂತರ ಎಂದು ಎರಡು ಭೇದಗಳಿವೆ. ಬಾಹ್ಯ ತಪಗಳಲ್ಲಿ ಆನಶನ, ಅವಮೌದಾರ್ಯ,

ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ ಮತ್ತು ವಿವಿಕ್ತಶಯ್ಯಾಸನ, ಕಾಯಕ್ಲೇಶ ಎಂದು ಆರು ವಿಧಗಳಿವೆ. ಇವುಗಳಿಂದ ನಿರೋಧಕ ಶಕ್ತಿ ಹೆಚ್ಚುತ್ತದೆ. ವೀತರಾಗ ಭಾವನೆ ಶುದ್ಧವಾಗಿ ದೃಢವಾಗುತ್ತದೆ.

ಆಹಾರತ್ಯಾಗ 'ಅನಶನ'ವಾದರೆ, ಅಲ್ಪ ಆಹಾರಸೇವನೆ 'ಅವಮೌದಾರ್ಯ' ತಪವಾಗಿದೆ. ಆಹಾರ ಸೇವನೆಗೆ ಮೊದಲು ಯಾವುದಾದರೊಂದು ನಿಯಮವನ್ನು ಕೈಗೊಂಡು ಅದು ಕೈಗೂಡಿದರೆ ಮಾತ್ರ ಆಹಾರ ಸ್ವೀಕರಿಸುವುದು. ಇಲ್ಲವಾದರೆ ಉಪವಾಸವಿರುವುದಾಗಿ ನಿಯಂತ್ರಿಸಿಕೊಳ್ಳುವುದಕ್ಕೆ 'ವೃತ್ತಿಪರಿಸಂಖ್ಯಾನ' ತಪ ಎನ್ನಲಾಗುತ್ತದೆ. ಹಾಲು, ತುಪ್ಪ, ಎಣ್ಣೆ, ಮೊಸರು, ಸಿಹಿ ಮತ್ತು ಉಪ್ಪು ಈ ರೀತಿ ಆರು ರಸಗಳನ್ನು ಅಥವಾ ಇವುಗಳಲ್ಲಿ ಕೆಲವನ್ನು ಅಥವಾ ಎಲ್ಲವನ್ನೂ ತ್ಯಜಿಸುವುದು 'ರಸಪರಿತ್ಯಾಗ' ತಪವಾಗುತ್ತದೆ. ಏಕಾಂತ ಸ್ಥಳದಲ್ಲಿ ಸಿದ್ಧಿಗಾಗಿ ಆಸನವನ್ನು ಹಾಕುವುದು ಮಲಗುವುದು 'ವಿವಿಕ್ತಶಯ್ಯಾಸನ' ತಪವೆನಿಸುತ್ತದೆ. ಅನೇಕ ರೀತಿಯ ಆಸನಗಳಿಂದ ಶರೀರವನ್ನು ದಂಡಿಸಿಕೊಳ್ಳುತ್ತ ಧ್ಯಾನಮಾಡುವುದು 'ಕಾಯಕ್ಲೇಶ' ತಪವಾಗಿದೆ. ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ ಮತ್ತು ಧ್ಯಾನದು ಆರು, ಅಭ್ಯಂತರ ಅಥವಾ ಆಂತರಿಕ ತಪಗಳಿವೆ.

ಧರ್ಮಾಚರಣೆಯಲ್ಲಿ ಅರಿವಿಲ್ಲದೆ ಜರುಗುವ ದೋಷಗಳ ಪರಿಹಾರಕ್ಕಾಗಿ ಆಲೋಚನ, ಪ್ರತಿಕ್ರಮಣ ಮೊದಲಾದ ಚಿತ್ತಶೋಧಕ ಕ್ರಿಯೆಗಳಲ್ಲಿ ಪ್ರವೃತ್ತನಾಗುವುದು 'ಪ್ರಾಯಶ್ಚಿತ್ತ ತಪ' ಎನ್ನಲಾಗಿದೆ. ಜ್ಞಾನ-ದರ್ಶನ-ಚಾರಿತ್ರ ಮತ್ತು ಉಪಚಾರಗಳ ಸಾಧನೆಯಲ್ಲಿ ವಿಶೇಷ ರೂಪದಿಂದ ಪ್ರವೃತ್ತನಾಗುವುದು 'ವಿನಯ' ತಪವಾಗಿದೆ. ಭಕ್ತಿಯಿಂದ ಸಮ್ಯತ್ವದಿಂದ ಭೂಷಿತನಾದ ಮುನಿಯ ಸೇವೆ ಹಾರೈಕೆ ಔಷಧೋಪಚಾರ ಮಾಡುವುದು 'ವೈಯಾವೃತ್ಯ' ತಪ, ಧರ್ಮಶಾಸ್ತ್ರಗಳ ವಾಚನಪ್ರಶ್ನೆ ಕೇಳುವುದು, ಅನುಚಿಂತನ ಉಪದೇಶ ಇವೆಲ್ಲವೂ 'ಸ್ವಾಧ್ಯಾಯ' ತಪ. ಅಹಂಕಾರ ಮತ್ತು ಮಮಕಾರವನ್ನು ತ್ಯಾಗ ಮಾಡುವುದು 'ವ್ಯುತ್ಸರ್ಗ' ತಪ, ಅಂತರಂಗದ ತಪವು 'ಧ್ಯಾನ'. ಇದರಲ್ಲಿ ಆರ್ತ, ರೌದ್ರ, ಧರ್ಮ ಮತ್ತು ಶುಕ್ಲ ಎಂಬ ನಾಲ್ಕು ಪ್ರಕಾರವಿದೆ. ಆರ್ತ ಮತ್ತು ರೌದ್ರ ಧ್ಯಾನಗಳ ಪರಿಣಾಮ ಅಶುಭ/ ಕರ್ಮಗಳ ಬಂಧವಾಗುವುದರಿಂದ ತ್ಯಾಜ್ಯವಾಗಿದೆ. ಧರ್ಮ ಮತ್ತು ಶುಕ್ಲಧ್ಯಾನದ ಪರಿಣಾಮ ದೃಷ್ಟಿಯು ಶುದ್ಧವಾಗಿ ಶ್ರದ್ಧೆಯು ದೃಢಗೊಳ್ಳುತ್ತದೆ. ಬುದ್ಧಿಯು ನಿರ್ಮಲವಾಗಿ ಚಾರಿತ್ರ ಶುದ್ಧಿಯಾಗುವುದರ ಜೊತೆಗೆ ಆತ್ಮನಿಂದ ಶರೀರದ ಪರಿತ್ಯಾಗವಾಗಿ 'ಸಿದ್ಧ'ರ ಅವಸ್ಥೆಗೆ ಧಾರಣ ಮಾಡಿಬಿಡುತ್ತಾರೆ.

ಸಲ್ಲೇಖನ ಅಥವಾ ಸಮಾಧಿ ಮರಣ : ಸಮಂತಭದ್ರಾಚಾರ್ಯರು 'ರತ್ನಕರಂಡಕ ಶ್ರಾವಕಾಚಾರ'ದಲ್ಲಿ ಸಲ್ಲೇಖನದ ಬಗ್ಗೆ ಹೀಗೆ ಬೋಧಿಸಿದ್ದಾರೆ.

ಸಲುಪಸರ್ಗೇ ದುರ್ಭಿಕ್ಷೇ ಜರಸಿ ರುಜಾಯಾಂ ಚ ನಿಃ ಪ್ರತಿಕಾರೇ ।

ಧರ್ಮಾಯ ತನು ವಿಮೋಚನ ಮಾಹುಃ ಸಲ್ಲೇಖನ ಮಾರ್ಯ ॥[27]

ಅನಿವಾರ್ಯವಾದ ಉಪಸರ್ಗ, ಬರಗಾಲ, ವೃದ್ಧಾಪ್ಯ ಮತ್ತು ಅಸಾಧ್ಯರೋಗ ಉಂಟಾದಾಗ ಧರ್ಮರಕ್ಷಣೆಗಾಗಿ ಶರೀರವನ್ನು ತ್ಯಾಗ ಮಾಡುವುದು ಸಲ್ಲೇಖನ. ಸಲ್ಲೇಖನವ್ರತಧಾರಣ ಮಾಡುವವರು ಹಿಂಸೆಗೆ ಕಾರಣವಾಗುವಂತಹ ಎಲ್ಲ ಕಷಾಯಗಳನ್ನು ಕ್ಷೀಣಿಸುತ್ತಾರೆಂದು ಆಚಾರ್ಯರು ಈ ವ್ರತಕ್ಕೆ 'ಅಹಿಂಸಾಸಿದ್ಧಿ' ಎಂದಿದ್ದಾರೆ.

4.3. ಧಾರ್ಮಿಕ ಆಚರಣೆಗಳು

ಪ್ರತಿಯೊಬ್ಬ ಶ್ರಾವಕರು ದೇವಪೂಜೆ, ಗುರುಸೇವೆ, ಸ್ವಾಧ್ಯಾಯ, ಸಂಯಮ ತಪ, ದಾನ ಇತ್ಯಾದಿ ಕರ್ತವ್ಯಗಳನ್ನು ಪಾಲಿಸಬೇಕು; ಇವುಗಳಲ್ಲಿ ಪ್ರಥಮ ಪ್ರಾಶಸ್ತ್ಯ ದೇವಪೂಜೆಗೆ. ಇದರಿಂದ ಪೂಜಕನಿಗೆ ಕರ್ಮ ನಾಶವಾಗಿ ಪುಣ್ಯ ಪ್ರಾಪ್ತಿಯಾಗುವುದು. ಇದರ ಹಿಂದಿರುವ ಉದ್ದೇಶ ಅಂತರಂಗದ ರಾಗ ದ್ವೇಷಗಳು ನಾಶವಾಗಿ ಮನಸ್ಸು ಪರಿಶುದ್ಧವಾಗುತ್ತದೆಂಬುದು. ಶ್ರಾವಕನು ತನ್ನ ಮನೆಗಳಲ್ಲಿ ಜಿನ ಬಿಂಬಗಳನ್ನಿಟ್ಟು ಪೂಜಿಸುತ್ತಾನೆ. ಅದಕ್ಕಾಗಿ ಮನೆಯಲ್ಲಿ ದೇವರ ಕೋಣೆ ಅಥವಾ ದೇವರ ಗೂಡು ಎಂದು ಕರೆಯುವ ಸ್ಥಳವಿರುತ್ತದೆ. ಜೈನ ಅರಸರ ಅರಮನೆಯಲ್ಲಿ ಪ್ರತ್ಯೇಕ ಬಸದಿಯನ್ನೇ ಹೊಂದಿರುತ್ತಾರೆ. ಇವನ್ನು ದರ್ಶನ ಬಸದಿ ಎಂದೂ ಕರೆಯುತ್ತಾರೆ. ಸರ್ವೇಸಾಮಾನ್ಯವಾಗಿ ಮನೆಯಲ್ಲಿ ಶಿಲೆಯ ಅಥವಾ ಪಂಚಲೋಹದ ಸಣ್ಣ ತೀರ್ಥಂಕರ ಪ್ರತಿಮೆಯನ್ನು ಇಟ್ಟು ಪೂಜಿಸುತ್ತಾರೆ. ಹಲವರು ಜಿನ ಪ್ರತಿಮೆಯ ಜೊತೆಗೆ ಪಂಚಪರಮೇಷ್ಠಿ ಪ್ರತಿಮೆಗಳು, ನವದೇವತೆಗಳ ಪ್ರತಿಮೆ, ಬ್ರಹ್ಮ, ಯಕ್ಷ ಹಾಗೂ ಯಕ್ಷ ಯಕ್ಷಿಯರ ಪ್ರತಿಮೆಗಳನ್ನು ಇಟ್ಟು ಪೂಜಿಸುತ್ತಾರೆ. ಯಕ್ಷಿಯರಲ್ಲಿ ಪದ್ಮಾವತಿ ಕೂಷ್ಮಾಂಡಿನಿಯರು ಸರ್ವೇ ಸಾಮಾನ್ಯವಾಗಿ ಕಂಡುಬರುತ್ತಾರೆ. ಶಾಸ್ತ್ರಗಳು, ಮನೆಗಳಲ್ಲಿ ಪೂಜಿಸುವ ಪ್ರತಿಮೆಗಳು 11 ಅಂಗುಲಗಳಿಗಿಂತ ಹೆಚ್ಚು ಎತ್ತರವಿರಬಾರದೆಂಬ ನಿರ್ಬಂಧ ವಿಧಿಸಿರುವುದರಿಂದ ಗೃಹಸ್ಥರು ಪೂಜಿಸುವ ಪ್ರತಿಮೆಗಳು ಮೂರು, ಐದು, ಏಳು, ಒಂಭತ್ತು, ಹನ್ನೊಂದು ಅಂಗುಲ ಎತ್ತರವಿರುತ್ತದೆ. ಬಸದಿಯ ಗರ್ಭಗುಡಿಯಲ್ಲಿ 24 ತೀರ್ಥಂಕರರಲ್ಲಿ ಯಾವ ತೀರ್ಥಂಕರರ ಮೂಲ ವಿಗ್ರಹವನ್ನು ಸ್ಥಾಪಿಸಿರುತ್ತಾರೋ ಆ ತೀರ್ಥಂಕರರ ಹೆಸರಿನಿಂದ ಅದನ್ನು ಕರೆಯುತ್ತಾರೆ. ಗರ್ಭಗುಡಿಯ ನವರಂಗದ ಎದುರಿನಲ್ಲಿರುವ ಗಂಧಕುಟಿಯಲ್ಲಿ ಇತರ ಜಿನ ಬಿಂಬಗಳಿರುತ್ತವೆ.

ಜೈನರ ಆರಾಧನೆಗಳಲ್ಲಿ ಪ್ರಥಮ ಪ್ರಾಶಸ್ತ್ಯ ಪಂಚಪರಮೇಷ್ಠಿಗೆ ಮತ್ತು ನವದೇವತೆಗಳಿಗೆ ಅರಹಂತರು ಸಿದ್ಧರು, ಆಚಾರ್ಯರು ಉಪಾಧ್ಯಾಯರು ಮತ್ತು ಸರ್ವ ಸಾಧುಗಳನ್ನು

ಪಂಚಪರಮೇಷ್ಟಿಗಳೆಂದು ಕರೆಯುತ್ತಾರೆ. ಅರಹಂತರು, ಸಿದ್ಧರು, ಆಚಾರ್ಯರು ಉಪಾಧ್ಯಾಯರು ಮತ್ತು ಸರ್ವಸಾಧುಗಳ ಬಿಂಬಗಳನ್ನು ಒಂದೇ ಲೋಹದ ಫಲಕದಲ್ಲಿ ಇರಿಸಿ ಪೂಜಿಸುತ್ತಾರೆ. ಮಧ್ಯದಲ್ಲಿ ಅರಹಂತರ ಬಿಂಬವು ಅದರ ಸುತ್ತಲೂ ಕ್ರಮವಾಗಿ ಅವರವರ ಸ್ಥಾನಕ್ಕೆ ಅನುಗುಣವಾಗಿ ಉಳಿದವರ ಬಿಂಬಗಳು ಇರುವಂತೆ ರಚಿಸಿರುತ್ತಾರೆ. ಇವರಲ್ಲಿ ಅರಹಂತರು ಅಂದರೆ ತೀರ್ಥಂಕರರು ಸಶರೀರ ಪರಮಾತ್ಮ ಧರ್ಮದ ತತ್ತ್ವಗಳನ್ನು ಎಲ್ಲಾ ಜೀವಿಗಳಿಗೆ ಉಪದೇಶಿಸಿದವರು. ಋಷಭ ದೇವನಿಂದ ವರ್ಧಮಾನದವರೆಗಿನ 24 ತೀರ್ಥಂಕರರಲ್ಲಿ ಒಬ್ಬರ ಪ್ರತಿಮೆ ಅರಹಂತನ ಸ್ಥಾನದಲ್ಲಿರುತ್ತದೆ. ಸಿದ್ಧರು ಶರೀರರಹಿತ ಪರಮಾತ್ಮ ವ್ಯಕ್ತಿಯೋರ್ವನು ತನ್ನ ಸಾಧನೆಯಿಂದ ಸಿದ್ಧತ್ವದ ಪದವಿಗೇರಬಹುದು. ಈ ಪದವಿಗೇರಿದ ಅನೇಕರು ಜೈನ ಪರಂಪರೆಯಲ್ಲಿ ಕಂಡುಬರುತ್ತಾರೆ. ಉಳಿದ ಮೂವರು ಜೈನರಿಗೆ ಗುರು ಸಮಾನರು. ಇವರಲ್ಲಿ ಆಚಾರ್ಯರು, ದೀಕ್ಷೆಯನ್ನೀಯುವ ಗುರುಗಳಾಗಿಯೂ; ಉಪಾಧ್ಯಾಯರು ಜ್ಞಾನವನ್ನೀಯುವ ಮುನಿಗಳಾಗಿಯೂ ಹಾಗೂ ಸಾಧುಗಳು ತಮ್ಮ ಆತ್ಮೋನ್ನತಿಗಾಗಿ ಸಾಧನೆ ಮಾಡಿರುವುದರಿಂದ ಇವರೆಲ್ಲರೂ ಸಾಧಕರಿಗೆ ಆದರ್ಶರೂ ಮತ್ತು ಪೂಜ್ಯರೂ ಆಗಿದ್ದಾರೆ. ಪಂಚಪರಮೇಷ್ಟಿಗಳ ಜೊತೆಗೆ ಜಿನಧರ್ಮ, ಜಿನಾಗಮ, ಜಿನಶ್ರುತ, ಜಿನಚೈತ್ಯಾಲಯ ಈ ನಾಲ್ಕನ್ನು ಪರಮ ಪವಿತ್ರವೆಂದು ನೆನೆದು ನವದೇವತೆಗಳನ್ನು ಆರಾಧಿಸುತ್ತಾರೆ ಮತ್ತು ನಮಸ್ಕರಿಸುತ್ತಾರೆ. ಪಂಚಪರಮೇಷ್ಟಿಗಳನ್ನು ಕುರಿತು ಧ್ಯಾನಿಸಿ ವಂದನೆ ಮಾಡುವುದೇ ಜೈನ ಪರಂಪರೆಯ ಪಂಚನಮಸ್ಕಾರ ವಿಧಿಯಾಗಿದೆ. ಇದನ್ನು ಪಂಚ ನಮಸ್ಕಾರ ಮಂತ್ರವೆಂದು ಕರೆಯುತ್ತಾರೆ. ಇದು ಜೈನರ ಧ್ಯಾನ ವಿಧಿಯಾಗಿದೆ.

ದೀಕ್ಷೆಯನ್ನು ಪಡೆದ ಪ್ರತಿಯೊಬ್ಬ ಜಿನ ಶ್ರಾವಕನು ಬಸದಿಗೆ ಹೋಗಿ ಅಥವಾ ಮನೆಯ ಒಳಗಡೆಯಲ್ಲಿರುವ ಜಿನನನ್ನು ವಂದಿಸಿ ಭಕ್ತಿಯಿಂದ 108 ಸಲ ಪಂಚನಮಸ್ಕಾರವನ್ನು ಪಠಿಸುತ್ತಾನೆ. ಸಾಮಾನ್ಯವಾಗಿ ಬಸದಿಗಳಲ್ಲಿ ಹಾಗೂ ಮನೆಗಳಲ್ಲಿ ನವದೇವತೆಗಳ ಪ್ರತಿಮೆ ಇರುತ್ತವೆ.

ಬಸದಿಗಳಲ್ಲಿ ಸಾಮಾನ್ಯವಾಗಿ ಹಲವಾರು ಪ್ರತಿಮೆಗಳಿರುತ್ತವೆ. ಹೆಚ್ಚಿನ ಬಿಂಬಗಳು ಆಯಾ ಊರಿನ ಶ್ರಾವಕರು ವ್ರತ ನೋಂಪಿಗಳನ್ನು ಆಚರಿಸಿ ಉದ್ಯಾಪನೆ ಮಾಡಿದ ಸಂದರ್ಭಗಳಲ್ಲಿ ಬಸದಿಗೆ ನೀಡಿದವುಗಳಾಗಿರುತ್ತವೆ. ಮೂಲ ತೀರ್ಥಂಕರ ವಿಗ್ರಹದ ಹೊರತಾಗಿ ವೃಷಭದೇವನಿಂದ ವರ್ಧಮಾನ ಮಾಹವೀರನವರೆಗಿನ 24 ಪ್ರತ್ಯೇಕ ಬಿಂಬಗಳು ಶೃತ, ಗಣಧರನ ಪಾದುಕೆ, ಸರ್ವಾಹ್ಣಯಕ್ಷ, ಅಷ್ಟಮ ನಂದೀಶ್ವರ ಪ್ರತಿಮೆ, ಇತರ ಯಕ್ಷ ಯಕ್ಷಿಯರು ಸರಸ್ವತಿ ಹೀಗೆ ಅನೇಕ ಬಿಂಬಗಳಿರುತ್ತವೆ. ಇವುಗಳ ಜೊತೆಗೆ ಅನೇಕ ಯಂತ್ರಗಳ ಆರಾಧನೆಯೂ ಜೈನರಲ್ಲಿ ಪ್ರಚಲಿತದಲ್ಲಿದೆ. ಕಲಿಕುಂಡ ಯಂತ್ರ, ಶೋಡಷ ಭಾವನ ಯಂತ್ರ, ಭಕ್ತಾಮರ ಯಂತ್ರ,

ಮೃತ್ಯುಂಜಯ ಯಂತ್ರ, ಸಿದ್ಧಚಕ್ರ ಯಂತ್ರ, ಶಾಂತಿಚಕ್ರ ಯಂತ್ರ ಮುಂತಾದ ಅನೇಕ ಯಂತ್ರಗಳನ್ನು ತಾಮ್ರದ ತಗಡಿನ ಮೇಲೆ ಬರೆದು ಅದನ್ನು ಭಕ್ತಿಪೂರ್ವಕವಾಗಿ ಪೂಜಿಸುವುದನ್ನು ಕಾಣಬಹುದಾಗಿದೆ. ಯಂತ್ರಗಳನ್ನು ಯಂತ್ರಾರಾಧನೆಯ ಸಂದರ್ಭಗಳಲ್ಲಿ ವಿಧಿವತ್ತಾಗಿ ಪೂಜಿಸುತ್ತಾರೆ. ಪ್ರತಿಯೊಂದು ಯಂತ್ರಗಳ ಆರಾಧನೆಯಿಂದ ಶ್ರಾವಕನು ಹೊಂದುವ ಫಲಪ್ರಾಪ್ತಿಯನ್ನು ಶಾಸ್ತ್ರಗ್ರಂಥಗಳು ವಿವರಿಸುತ್ತವೆ. ಶ್ರಾವಕರು ತನಗೆ ಜೀವನದಲ್ಲಿ ಎದುರಾದ ಕಷ್ಟಗಳನ್ನು ಪರಿಹರಿಸಿಕೊಳ್ಳಲು ಯಂತ್ರಾರಾಧನೆಯನ್ನು ಕೈಗೊಳ್ಳುತ್ತಾನೆ. ಇದನ್ನು ತನ್ನ ಊರಿನ ಬಸದಿಯಲ್ಲಾಗಲೀ, ಮನೆಯಲ್ಲಾಗಲೀ ನಡೆಸುತ್ತಾನೆ. ಅವರವರ ಮನೆಯಲ್ಲಿರುವ ಜಿನಪ್ರತಿಮೆಗಳನ್ನು ಗಂಡಸರು ಹಾಗೂ ಹೆಂಗಸರು ಪೂಜಿಸಬಹುದು. ಆದರೆ ಬಸದಿಯಲ್ಲಿ ಮಾತ್ರ ಪುರೋಹಿತರು ಅಥವಾ ಇಂದ್ರರು ಪೂಜಿಸುವುದು ಸಂಪ್ರದಾಯವಾಗಿದೆ.

ಪೂಜಾವಿಧಾನಗಳು : ಜೈನರ ಪೂಜಾವಿಧಾನದಲ್ಲಿ ನಿತ್ಯಪೂಜೆ, ನೈಮಿತ್ತಿಕ ಪೂಜೆಗಳೆಂದು ಎರಡು ಪ್ರಕಾರಗಳುಂಟು. ನಿತ್ಯಪೂಜೆ ಎಂದರೆ ಪ್ರತಿದಿನ ಜಿನಪ್ರತಿಮೆಗೆ ಜಲ, ಕ್ಷೀರ, ಪಂಚಾಮೃತಗಳನ್ನು ಅಭಿಷೇಕ ಮಾಡಿ, ಮಂತ್ರಪೂರ್ವಕವಾಗಿ ಆರತಿ ಮಾಡುವ ಪೂಜೆ. ಜೈನರ ಮನೆಗಳಲ್ಲಿ ಹಾಗೂ ಬಸದಿಗಳಲ್ಲಿ ಇದು ಪ್ರತಿದಿನ ನಡೆಯುತ್ತದೆ. ವಿಶೇಷ ಪರ್ವ, ಉತ್ಸವಾದಿ ದಿನಗಳಲ್ಲಿ ನಡೆಸುವ –ಅಷ್ಟಾಹ್ನಿಕ ಪೂಜೆ, ಐಂದ್ರಧ್ವಜ ಪೂಜೆ, ಚತುರ್ಮುಖ ಪೂಜೆ, ಕಲ್ಪದ್ರುಮ ಪೂಜೆ, ಮಹಾಭಿಷೇಕ ಪೂಜೆಗಳನ್ನು ನೈಮಿತ್ತಿಕ ಪೂಜೆಗಳೆಂದು ಕರೆಯುತ್ತಾರೆ. [28]

ಎಲ್ಲಾ ಜೈನ ಶ್ರಾವಕರ ಮನೆಗಳಲ್ಲೂ, ಬಸದಿಗಳಲ್ಲೂ ನಡೆಯುವ ಪೂಜಾವಿಧಾನಗಳು ಜೈನ ಸಂಹಿತಾಶಾಸ್ತ್ರದಲ್ಲಿ ವಿವರಿಸಲ್ಪಟ್ಟ ಪೂಜಾವಿಧಾನಗಳೇ ಆಗಿವೆ. [29] ಇಲ್ಲಿಯ ಜೈನಮತೀಯರು ವೈದಿಕ ದೇವರನ್ನೂ, ನಾಗಾರಾಧನೆಯನ್ನು ಆಚರಿಸಿಕೊಂಡು ಬರುತ್ತಿದ್ದರೂ ಇವುಗಳು ಜೈನಪೂಜಾ ಪದ್ಧತಿಗಳ ಮೇಲೆ ಪ್ರಭಾವ ಬೀರಿಲ್ಲ. ವೈದಿಕ ದೇವತೆಗಳನ್ನು ಬ್ರಾಹ್ಮಣರಿಂದ ಸ್ಥಳೀಯ ಪದ್ಧತಿಗಳಿಗೆ ಅನುಗುಣವಾಗಿ ಪೂಜಿಸುವ ಪದ್ಧತಿ ಇದೆ. ಶ್ರಾವಕರು ಇವುಗಳನ್ನು ನೇರವಾಗಿ ಪೂಜಿಸುವುದಿಲ್ಲ.

ಜೈನ ದೇವ ಪೂಜಾ ಪದ್ಧತಿಯಲ್ಲಿ ಆಹ್ವಾನ, ಸ್ಥಾಪನಾ, ಸನ್ನಧೀಕರಣ, ಪೂಜನ ಮತ್ತು ವಿಸರ್ಜನವೆಂಬ ಐದು ಅಂಗಗಳಿವೆ. ಅಷ್ಟವಿಧಾರ್ಚನೆಯಲ್ಲಿ ದೇವಪೂಜೆಗೆ, ಜಲ, ಗಂಧ, ಅಕ್ಷತೆ, ದೀಪ, ಧೂಪ, ಫಲ, ಪುಷ್ಪ ಮತ್ತು ಚರು ಎಂಬ ಎಂಟು ಬಗೆಯ ವಸ್ತುಗಳನ್ನು ಬಳಸುತ್ತಾರೆ. ಪ್ರತಿಯೊಂದು ಅರ್ಚನಾ ದ್ರವ್ಯದ ಅರ್ಥವನ್ನು ಇವುಗಳಿಂದ ಪೂಜಕನಿಗೆ ಆಗುವ ಲಾಭಗಳನ್ನೂ ಹೀಗೆ ಸಂಕಲಿಸಬಹುದು.[30]

ಜಲಧಾರೆಯಿಂದ ಕರ್ಮನಾಶವೂ, ಅಕ್ಷತೆಯಿಂದ ಅಕ್ಷಯ ಸುಖ ಪ್ರಾಪ್ತಿಯೂ; ದೀಪದಿಂದ ಅನಂತ ಜ್ಞಾನವೂ ಪ್ರಾಪ್ತಿಯಾಗುತ್ತದೆಂದು ನಂಬುತ್ತಾರೆ. ಜೈನರು ಅರ್ಚನಾದ್ರವ್ಯಗಳನ್ನು ಬಸದಿಗೆ ಕೊಡುವ ಪದ್ಧತಿಯಿದೆ. ಬಸದಿಗೆ ಹೋದಾಗ ಸ್ತೋತ್ರಗಳನ್ನು ಪಠಿಸುತ್ತ ಜಿನನಿಗೆ ನಮಸ್ಕರಿಸುತ್ತಾರೆ. ನವದೇವತೆಗಳನ್ನು ಧ್ಯಾನಿಸುತ್ತ, ಪುಂಜವನ್ನು ಇಡುವ, ಅವುಗಳ ಮೇಲೆ ಪುಷ್ಪವನ್ನು ಹಾಗೂ ಒಣಗಿದ ಹಣ್ಣುಗಳನ್ನು ಸಮರ್ಪಿಸಿ ನಮಸ್ಕರಿಸುತ್ತಾರೆ. ಇದನ್ನು ಕೂಡ ನಿತ್ಯಪೂಜೆಯೆಂದೇ ಭಾವಿಸಲಾಗುತ್ತದೆ. ಹೊಸ ಜಿನಮಂದಿರವನ್ನು ಕಟ್ಟಿಸುವುದು ಜಿನಪ್ರತಿಮೆಗಳನ್ನು ಮಾಡಿಸುವುದು, ದಾನದತ್ತಿಗಳನ್ನು ನೀಡುವುದು, ಮುನಿಗಳಿಗೆ ಆಹಾರವನ್ನು ದಾನ ಮಾಡುವುದು, ಬಡವರಿಗೆ ಆಹಾರ, ಅಭಯ, ವಿದ್ಯೆ, ಔಷಧಿಗಳನ್ನು ದಾನ ನೀಡುವುದು ಇವೆಲ್ಲವನ್ನೂ ನಿತ್ಯಪೂಜೆಯೆಂದೇ ಭಾವಿಸುತ್ತಾರೆ. ಇವಲ್ಲದೇ ಪೂಜೆಯಲ್ಲಿ ಸೂಕ್ಷ್ಮ ವಿಚಾರಗಳಿವೆ. ಇವುಗಳನ್ನು ನಾಮಪೂಜೆ, ಸ್ಥಾಪನಾಪೂಜೆ, ದ್ರವ್ಯಪೂಜೆ, ಕ್ಷೇತ್ರಪೂಜೆ, ಕಾಲಪೂಜೆ ಮತ್ತು ಭಾವಪೂಜೆ ಎಂದು ವಿಂಗಡಿಸುತ್ತಾರೆ. ಜಿನನ ಹೆಸರನ್ನು ಉಚ್ಚರಿಸುತ್ತಾ ನಾಮ ಒಂದಕ್ಕೆ ಒಂದೊಂದಾಗಿ ಪುಷ್ಪಗಳನ್ನು ಸಮರ್ಪಿಸಿ ಅಷ್ಟೋತ್ತರ ಪೂಜೆಯಂತೆ ಆಚರಿಸುತ್ತಾರೆ. ಅದು ಜನರಲ್ಲಿ 'ನಾಮಪೂಜೆ' ಯಾಗುತ್ತದೆ. ಜಿನಪ್ರತಿಮೆಯೊಂದರಲ್ಲಿ ಜಿನನ ಮೂಲಗುಣಗಳನ್ನೆಲ್ಲಾ ಆಹ್ವಾನಿಸಿ, ಜಿನಬಿಂಬದ ಎದುರುಗಡೆ ನಿಲ್ಲುವುದು, ಸಮರ್ಪಣಾ ಭಾವದಿಂದ ಪ್ರದಕ್ಷಿಣೆ ಬಂದು ನಮಸ್ಕರಿಸುವುದು ಮಾಡಿದರೆ 'ದ್ರವ್ಯಪೂಜೆ'ಯಾಗುತ್ತದೆ. ಜಿನನ ಜನ್ಮಕ್ಷೇತ್ರ, ಪರಿನಿಷ್ಕ್ರಮಣ ಕ್ಷೇತ್ರ, ಕೇವಲ ಜ್ಞಾನಕ್ಷೇತ್ರಗಳನ್ನು ಸಂದರ್ಶಿಸಿ ನಮಸ್ಕರಿಸಿ ಪೂಜಿಸಿದರೆ ಅದು ಕ್ಷೇತ್ರ ಪೂಜೆಯಾಗುತ್ತದೆ. ಇದರಿಂದಾಗಿ ಜೈನ ಶ್ರಾವಕರು, ಪಾವಾಪುರಿ, ಚಂಪಾಪುರಿ, ಸಮ್ಮೇದ ಶಿಖರ್ಜಿ ಮೊದಲಾದ ಕ್ಷೇತ್ರಗಳಲ್ಲಿ ಯಾತ್ರೆ ಹೋಗುವ ಸಂಪ್ರದಾಯವನ್ನು ಬೆಳೆಸಿಕೊಂಡಿದ್ದಾರೆ. ಜಿನನ ಅವತಾರ ಕಾಲದಲ್ಲಿ ಯಾವ ದಿನ ತೀರ್ಥಂಕರರು ಮಾತೆಯ ಗರ್ಭಕ್ಕೆ ಅವಿರ್ಭವಿಸಿದ ದಿವಸ, ಆ ತೀರ್ಥಂಕರನನ್ನು ಆರಾಧಿಸಲು ನಡೆಸುವ ಅಭಿಷೇಕ, ಪೂಜೆಗಳನ್ನು 'ಕಾಲಪೂಜೆ' ಎಂದು ಕರೆಯುತ್ತಾರೆ. ಈ ಎಲ್ಲಾ ಬಾಹ್ಯ ವಿಧಾನಗಳನ್ನು ಮನಸ್ಸಿನಲ್ಲಿಯೇ ಜಿನನ ಗುಣಗಳ ಚಿಂತನೆ ಮಾಡುವುದನ್ನು 'ಭಾವಪೂಜೆ' ಅಥವಾ 'ನಿಶ್ಚಯಪೂಜೆ'ಯೆಂದೂ ಕರೆಯುತ್ತಾರೆ. ಇದು ಎಲ್ಲಾ ಪೂಜೆಗಳಿಗಿಂತ ಶ್ರೇಷ್ಠವೆಂದು ಭಾವಿಸಲಾಗಿದೆ. ಇದನ್ನು ಪ್ರಥಮ ಹಂತದಲ್ಲಿ ಮಾಡುವುದು ಸಾಧ್ಯವಿಲ್ಲ. ಹಾಗಾಗಿ ಹಂತಹಂತವಾಗಿ ಸಾಧನೆಯಲ್ಲಿ ಮೇಲಕ್ಕೆ ಏರಿದ ಶ್ರಾವಕನು ಸಾಧಿಸಬಲ್ಲ ಅಥವಾ ಮುನಿಗಳು (ದಿಗಂಬರಮುನಿ) ಇದನ್ನು ಮಾಡಬಲ್ಲರು. ಅವರಿಗೆ ಐಹಿಕದ ಯಾವ ಸಂಬಂಧವೂ ಇರುವುದಿಲ್ಲ. ಇಂಥ ಹಂತಕ್ಕೆ ಪ್ರತಿಯೊಬ್ಬ ಜೈನಮತೀಯನೂ ಏರಬೇಕೆಂಬುದೇ ಜೈನಮತದ ಘನ ಉದ್ದೇಶ. ಈ ಹಂತದಲ್ಲಿ ಆರಾಧಕನು, ತಾನೇ ತನ್ನ ಮೂಲಕ ಉಪಾಸನೆ

ಮಾಡಲು ಶಕ್ತನಾಗಿರುತ್ತಾನೆ. ತಾನೇ ಆರಾಧ್ಯ ಮತ್ತು ಆರಾಧಕನೆಂಬ ಏಕೀ ಭಾವದಿಂದ ಧ್ಯಾನಿಸುತ್ತಾನೆ.

ಅಭಿಷೇಕ ವಿಧಾನಗಳು : ಜಿನನಿಗೆ ಅಥವಾ ತೀರ್ಥಂಕರನಿಗೆ ಜಲಾಭಿಷೇಕ, ಕ್ಷೀರಾಭಿಷೇಕ, ಪಂಚಾಮೃತಾಭಿಷೇಕ ಮತ್ತು ಮಹಾಭಿಷೇಕ ಎಂಬ ಅನೇಕ ಪ್ರಕಾರದ ಅಭಿಷೇಕಗಳಿವೆ. ಶುದ್ಧವಾದ ನೀರಿನಿಂದ ಜಿನನಿಗೆ ಅಭಿಷೇಕ ಮಾಡುವುದೇ ಜಲಾಭಿಷೇಕ. ಹಸುವಿನ ಹಾಲಿಗೆ ಸುಗಂಧದ್ರವ್ಯಗಳನ್ನು ಸೇರಿಸಿ ಅಭಿಷೇಕ ಮಾಡುವುದು ಕ್ಷೀರಾಭಿಷೇಕ. ಶುದ್ಧ ಜಲ, ಹಾಲು, ಎಳನೀರು, ಮೊಸರು ಮತ್ತು ತುಪ್ಪದಿಂದ ಅಭಿಷೇಕ ಮಾಡುವುದು ಪಂಚಾಮೃತ ಅಭಿಷೇಕ. ಶುದ್ಧವಾದ ದ್ರವ್ಯಗಳಿಂದ ಕಲಶ ಸ್ಥಾಪನೆ ಮಾಡಿ, ಅವುಗಳನ್ನು ಬಳಸಿ ಮಾಡುವ ಅಭಿಷೇಕವನ್ನು ಮಹಾಭಿಷೇಕ ಎಂದು ಕರೆಯುತ್ತಾರೆ. ಈ ಬಗೆಯ ಮಹಾಭಿಷೇಕದಲ್ಲಿ ಜಲ, ಎಳನೀರು, ಕಬ್ಬಿನಹಾಲು, ಕ್ಷೀರ, ಅರಿಸಿನ, ಶ್ರೀಗಂಧ, ಚಂದನ, ಅಷ್ಟಗಂಧ, ಕಲ್ಕಚೂರ್ಣ, ಪುಷ್ಪ ಮುಂತಾದ ವಸ್ತುಗಳನ್ನು ಬಳಸುತ್ತಾರೆ. ಈ ಅಭಿಷೇಕ ಕ್ರಮದಲ್ಲಿ 108 ಕಲಶಗಳಿಂದ 1008 ಕಲಶಗಳ ಸ್ಥಾಪನೆ ಮಾಡುತ್ತಾರೆ. ಶ್ರಾವಕರು ತಮ್ಮ ಅನುಕೂಲತೆಗೆ ತಕ್ಕಂತೆ ಈ ಕಲಶಗಳ ಸಂಖ್ಯೆಯನ್ನು ತಮ್ಮ ಶಕ್ತ್ಯಾನುಸಾರ ಬದಲಾವಣೆ ಮಾಡಿಕೊಳ್ಳುತ್ತಾರೆ. ಅಭಿಷೇಕದ ಕ್ರಮದ ಆರಂಭದಲ್ಲಿ ಸಂಕಲ್ಪ ಮಾಡಿ, ಕಲಶಸ್ಥಾಪನೆ ನೆರವೇರಿಸಿ, ಅನಂತರ ಪೀಠಪ್ರಕ್ಷಾಳನ, ಪೀಠಸ್ಥಾಪನೆ, ಅಭಿಷೇಕ ಹಾಗೂ ಪೂಜೆಗಳು ನಡೆಯುತ್ತವೆ. ಅನಂತರ ಅಷ್ಟವಿಧಾರ್ಚನೆ, ಸಹಸ್ರನಾಮ ಪಠನಪೂರ್ವಕ ಪುಷ್ಪಾರ್ಚನೆ ನಡೆಯುತ್ತದೆ. ಬಳಿಕ ಮಹಾ ಅರ್ಘ್ಯವನ್ನು ಎತ್ತುತ್ತಾರೆ. ಆ ಬಳಿಕ ಶಾಂತಿಧಾರೆ, ಪುಷ್ಪಾಂಜಲಿಗಳನ್ನು ಅರ್ಪಿಸಿ, ವಿಸರ್ಜಿಸುತ್ತಾರೆ. ಯಾವುದೇ ಪೂಜೆ ಅಭಿಷೇಕಗಳ ಕೊನೆಯಲ್ಲಿ ಲೋಕಶಾಂತಿಗಾಗಿ, ಪ್ರಾರ್ಥನೆಯನ್ನು ಹೀಗೆ ನೆರವೇರಿಸುತ್ತಾರೆ.

ಕ್ಷೇಮಂ ಸರ್ವಪ್ರಜಾನಾಂ ಪ್ರಭವತು ಬಲವಾನ್
ಧಾರ್ಮಿಕೋ ಭೂಮಿ ಪಾಲಃ ಕಾಲೇ ಕಾಲೇ ಚ ಸಮ್ಯಗ್ವರ್ಷತು
ಮಘವಾ ವ್ಯಾಧಯೋ ಯಾಂತುನಾಶಂ
ದುರ್ಭಿಕ್ಷಂ ಚೋರಮಾರೀ ಕ್ಷಣಮಪಿ ಜಗತಾಂ
ಮಾಸ್ಮಭೂಜ್ಜೀವಲೋಕೇ ಜೈನೇಂದ್ರಂ ಧರ್ಮಚಕ್ರಂ
ಪ್ರಭವತು ಸತತಂ ಸರ್ವ ಸೌಖ್ಯ ಪ್ರದಾಯೀ[31]

"ಸರ್ವ ಪ್ರಜೆಗಳಿಗೂ ಕ್ಷೇಮವಾಗಲಿ, ರಾಜನು ಧರ್ಮದಂತೆ ಭೂಮಿಯನ್ನು ಪಾಲಿಸಲಿ, ರೋಗರುಜಿನಗಳು ಬಾರದಿರಲಿ, ಕಾಲಕಾಲಕ್ಕೆ ಮಳೆ ಬರಲಿ, ದುರ್ಭಿಕ್ಷ, ಕಳ್ಳತನ ಮಾರಿಗಳು

ಜನರನ್ನು ಪೀಡಿಸದಿರಲಿ, ನಿರಂತರವಾಗಿ ಜಿನೇಂದ್ರನ ಧರ್ಮಚಕ್ರವು ಸುತ್ತುತ್ತಿರಲಿ ಎನ್ನುವುದು" ಈ ಪ್ರಾರ್ಥನೆಯ ಅರ್ಥವಾಗಿದೆ.

ಹೋಮವಿಧಾನ : ಜೈನ ಶ್ರಾವಕರು ತಮ್ಮ ಮನೆಗಳಲ್ಲಿ ವಿವಾಹ, ಉಪನಯನ, ಸೂತಕ–ಪಾತಕ, ಗೃಹಪ್ರವೇಶ, ಗೃಹಪೀಡೆ ಮುಂತಾದ ಸಂದರ್ಭಗಳಲ್ಲಿ ಶಾಂತಿ ಹೋಮವನ್ನು ಆಚರಿಸುವ ಪದ್ಧತಿ ಸಾಮಾನ್ಯವಾಗಿ ಕಂಡುಬರುತ್ತದೆ. ಈ ವಿಧಿಯನ್ನು ಪುರೋಹಿತರ ಮೂಲಕವೇ ನೆರವೇರಿಸುವುದು ಸಂಪ್ರದಾಯ. ಇದರಲ್ಲಿ ಜಲಹೋಮ, ವಾಲುಕಾ ಹೋಮ ಮತ್ತು ಕುಂಡ ಹೋಮ ಎಂಬ ಮೂರು ಪ್ರಭೇದಗಳಿವೆ.[32]

ಜಲಹೋಮ : ಜಲಹೋಮವೆಂದರೆ ನೆಲವನ್ನು ಸಾರಿಸಿ ಶುದ್ಧಗೊಳಿಸಿ ಅದರ ಮೇಲೆ ಗಂಧೋದಕವನ್ನು ಪ್ರೋಕ್ಷಿಸಿ, ರಂಗವಲ್ಲಿಯನ್ನು ಬರೆದು, ತೊಳೆದ ಅಕ್ಕಿಯ ಪುಂಜದ ಮೇಲೆ ಮಣ್ಣಿನಿಂದ ಅಥವಾ ತಾಮ್ರದಿಂದ ತಯಾರಿಸಿದ ದುಂಡಾದ ಕುಂಭವನ್ನು ಸ್ಥಾಪಿಸಿ, ಅದರಲ್ಲಿ ನೀರನ್ನು ತುಂಬುತ್ತಾರೆ. ಆ ಬಳಿಕ ವಿಧಿಪೂರ್ವಕವಾಗಿ ಗಂಧ, ಅಕ್ಷತೆ, ಫಲ, ಪುಷ್ಪ ಮುಂತಾದವುಗಳಿಂದ ಅರ್ಚನೆಯನ್ನು ಮಾಡಿ, ಅಗ್ನಿ ಸ್ಥಾಪನೆಮಾಡಿ ವಿಧಿವತ್ತಾದ ಆಹುತಿಗಳನ್ನು ನೀಡಿ ಹೋಮವನ್ನು ನೆರವೇರಿಸುತ್ತಾರೆ.

ವಾಲುಕಾಹೋಮ : ಈ ಹೋಮ ಭೂಮಿಯನ್ನು ಸಾರಿಸಿ ಗಂಧೋದಕವನ್ನು ಪ್ರೋಕ್ಷಿಸಿ ಶುದ್ಧಗೊಳಿಸುತ್ತಾರೆ. ರಂಗವಲ್ಲಿಯನ್ನು ಬರೆದು ಅದರ ಮೇಲೆ ಒಂದು ಮೊಳ ಉದ್ದ ಮತ್ತು ಅಗಲಕ್ಕೆ ಮರಳನ್ನು ಹರಡಿ, ಶಿಖರಾಕಾರವಾಗಿ ಸಮಿತ್ತು ಕಡ್ಡಿಗಳನ್ನಿಟ್ಟು ವಿಧಿಪೂರ್ವಕವಾಗಿ ಅರ್ಚನೆಯನ್ನು ಮಾಡುತ್ತಾರೆ.

ಕುಂಡ ಹೋಮ : ಕುಂಡ ಹೋಮದಲ್ಲಿ ಚತುರಸ್ರಕುಂಡಹೋಮ, ವೃತ್ತಕುಂಡಹೋಮ, ಮತ್ತು ತ್ರಿಕೋಣ ಕುಂಡಹೋಮ ಎಂಬ ಮೂರು ಪ್ರಕಾರಗಳಿವೆ. ಚತುರಸ್ರ ಕುಂಡಹೋಮದಲ್ಲಿ ಹೋಮಕುಂಡವು ಒಂದು ಮೊಳ ಉದ್ದ ಮತ್ತು ಅಗಲವಾಗಿದ್ದು ಬಲಭಾಗದಲ್ಲಿ ತ್ರಿಕೋಣ ಕುಂಡವೂ ಎಡಭಾಗದಲ್ಲಿ ವೃತ್ತಕುಂಡವೂ ಇರುತ್ತದೆ. ಪ್ರತಿಯೊಂದು ಕುಂಡದಲ್ಲಿಯೂ ಕ್ರಮವಾಗಿ ಐದು, ನಾಲ್ಕು, ಮೂರು ಅಂಗುಲ ಅಗಲದ ಮೇಖಲೆ ಜಗಲಿ(ಪಟ್ಟಿ)ಯನ್ನು ಮಾಡುತ್ತಾರೆ. ಮಧ್ಯದ ಚತುರಸ್ರ ಕುಂಡಕ್ಕೆ ತೀರ್ಥಂಕರ ಕುಂಡವೆಂದೂ ತ್ರಿಕೋಣ ಕುಂಡಕ್ಕೆ ಗಣಧರ ಕುಂಡವೆಂದೂ ವೃತ್ತಕುಂಡಕ್ಕೆ ಶೇಷಕೇವಲಿ ಕುಂಡವೆಂದೂ ಕರೆಯುತ್ತಾರೆ. ಈ ಕುಂಡಗಳ ಒಳಗಿನ ಭಾಗದಲ್ಲಿ ಶಾಸ್ತ್ರೋಕ್ತವಾಗಿ ವೇದಿಕೆಯನ್ನು ರಚಿಸಿ ನಾಲ್ಕೂ ಕಡೆಗಳಲ್ಲಿ ಕಂಬಗಳನ್ನಿಟ್ಟು ಅವುಗಳಿಗೆ ಬಾಳೆಕಂದು, ಕಬ್ಬಿನ ಜಲ್ಲೆಗಳನ್ನು, ತಳಿರು, ತೋರಣ, ಪುಷ್ಪಮಾಲೆ, ಘಂಟೆಗಳನ್ನೂ ಮೇಲೆ

ಚಂದ್ರೋಪವನ್ನೂ ಕಟ್ಟಿ ವೇದಿಕೆಯ ಸುತ್ತಲೂ ಕಲಶ, ಕನ್ನಡಿ, ಚಾಮರ, ಧೂಪ, ಪಟ್ಟಿಧ್ವಜ ಮೊದಲಾದ ಮಂಗಲದ್ರವ್ಯಗಳನ್ನು ಇರಿಸುತ್ತಾರೆ. ಒಳಗೆ ದೇವರ ಪ್ರತಿಮೆಯನ್ನೂ ಅದರ ಉಭಯ ಪಾರ್ಶ್ವಗಳಲ್ಲಿ ಯಕ್ಷಯಕ್ಷಿಯನ್ನೂ ಧರ್ಮಚಕ್ರ, ಛತ್ರತ್ರಯವನ್ನೂ ಇಟ್ಟು, ಮುಂದೆ ಅಕ್ಕಿಯನ್ನು ಹರಡಿ ಅದರ ಮೇಲೆ ಫಲ, ಪುಷ್ಪಾದಿಗಳಿಂದಲಂಕರಿಸಿದ ಪೂರ್ಣಕಲಶವನ್ನು ಸ್ಥಾಪಿಸಿ ಅನಂತರ ಹೋಮವಿಧಿಯನ್ನು ನಡೆಸುತ್ತಾರೆ. ಬಸದಿಗಳಲ್ಲಿ ನಡೆಯುವ ಪಂಚಕಲ್ಯಾಣ ಮಹೋತ್ಸವ, ಪ್ರತಿಷ್ಠಾ ಸಂದರ್ಭಗಳಲ್ಲಿ ಈ ಹೋಮವನ್ನು ಆಚರಿಸುತ್ತಾರೆ. ಮನೆಯಲ್ಲಿ ಶುಭ ಸಂದರ್ಭಗಳಲ್ಲಿ ಜಲಹೋಮ, ವಾಲುಕಾಹೋಮವನ್ನು ನೆರವೇರಿಸುತ್ತಾರೆ. ಯಾವುದೇ ಹೋಮ ವಿಧಾನದಲ್ಲೂ ಹಿಂಸೆಗೆ ಆಸ್ಪದವಿಲ್ಲ. ಸಾತ್ವಿಕ ಅರ್ಚನೆಗಳ ಮುಖಾಂತರವಾಗಿಯೇ ನೆರವೇರಿಸುತ್ತಾರೆ. ಜೈನ ಶ್ರಾವಕ ವರ್ಗದಲ್ಲಿ ಪ್ರಚಲಿತವಿರುವ ಧಾರ್ಮಿಕ ಆಚರಣೆಗಳು ವೈವಿಧ್ಯಮಯವಾಗಿವೆ. ಅಧ್ಯಯನ ದೃಷ್ಟಿಯಿಂದ ಅವುಗಳನ್ನು ಹೀಗೆ ಸಂಕಲಿಸಲಾಗಿದೆ.

4.4. ಪರ್ವಾಚರಣೆಗಳು

ಜೈನದರ್ಮೀಯರು ಆಚರಿಸುವ ಪರ್ವಗಳಿಗೆ ಇತರ ಧರ್ಮಗಳಲ್ಲಿರುವಂತೆಯೇ ಧಾರ್ಮಿಕ ಹಿನ್ನೆಲೆಯಿದೆ. ಪರ್ವಗಳಲ್ಲಿಯೂ ನಿತ್ಯಪರ್ವ– ನೈಮಿತ್ತಿಕ ಪರ್ವಗಳೆಂದು ಎರಡು ವಿಧಗಳಿವೆ. ಮಾಸದ ಬಿದಿಗೆ, ಪಂಚಮಿ, ಅಷ್ಟಮಿ, ಏಕಾದಶಿ ಮತ್ತು ಚತುರ್ದಶಿ ತಿಥಿಗಳೆಂದು ಪಂಚಪರ್ವಗಳನ್ನು ನಿತ್ಯಪರ್ವಗಳೆಂದು ಆಚರಿಸುತ್ತಾರೆ. ಈ ತಿಥಿಗಳಲ್ಲಿ ಶ್ರಾವಕರು ಏಕಭುಕ್ತ, ಧ್ಯಾನ, ಪೂಜೆ ಮುಂತಾದ ವ್ರತಾಚರಣೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ಪಂಚಪರ್ವಗಳ ಆಚರಣೆಯಲ್ಲೂ ಅಷ್ಟಮಿ ಮತ್ತು ಚತುರ್ದಶಿಗಳು ಸಾರ್ವತ್ರಿಕವಾಗಿ ಮತ್ತು ವಿಶೇಷವಾಗಿ ಆಚರಣೆಯಲ್ಲಿವೆ. ಉಳಿದವು ವಿರಳವಾಗಿ ಆಚರಣೆಯಲ್ಲಿರುವುದು ಕಂಡುಬರುತ್ತದೆ. ಈ ಪರ್ವದಿನಗಳನ್ನು ಹಬ್ಬವೆಂದು ಕರೆಯುವ ರೂಢಿಯಿಲ್ಲ. ನೈಮಿತ್ತಿಕ ಪರ್ವಗಳಾದ ಯುಗಾದಿ, ಮಹಾವೀರಜಯಂತಿ, ಅಕ್ಷಯ ತದಿಗೆ, ನವರಾತ್ರಿ, ದೀಪಾವಳಿ, ಮೊದಲಾದವುಗಳನ್ನು ಹಬ್ಬವೆಂದು ಕರೆಯುವ ವಾಡಿಕೆ ಇದೆ. ಇವುಗಳಲ್ಲೂ ಕೆಲವು ಸಾರ್ವತ್ರಿಕ ವ್ಯಾಪ್ತಿಯುಳ್ಳವೂ ಮತ್ತೆ ಕೆಲವು ಪ್ರಾದೇಶಿಕ ವ್ಯಾಪ್ತಿಯುಳ್ಳವಾಗಿದೆ.

ಯುಗಾದಿ ಹಬ್ಬ : ಯುಗಾದಿ ಸಮಸ್ತ ಭಾರತೀಯರಿಗೆ ಪವಿತ್ರವಾದ ಹಬ್ಬ.[33] ಇದರಲ್ಲಿ ಸೌರಮಾನ ಮತ್ತು ಚಾಂದ್ರಮಾನ ಯುಗಾದಿಯೆಂದು ಎರಡು ಆಚರಣೆಗಳಿವೆ. ಈ ಪ್ರದೇಶದಲ್ಲಿನ ಜೈನಮತೀಯರು ಚಾಂದ್ರಮಾನ ಯುಗಾದಿಯನ್ನು ಆಚರಿಸುತ್ತಾರೆ. ಹೊಸ ಸಂವತ್ಸರದ ಆರಂಭವು ತಮಗೆ ವರ್ಷಪೂರ್ತಿ ಶುಭವನ್ನುಂಟು ಮಾಡಿ ಸಕಲ ಐಶ್ವರ್ಯಗಳು ವೃದ್ಧಿಯಾಗಲೆಂದೂ

'ಶ್ರೀಮುಖದರ್ಶನ'ವೆಂಬ ಆಚರಣೆಯನ್ನು ಯುಗಾದಿಯಂದು ನಡೆಸುತ್ತಾರೆ. ಹಬ್ಬದ ಹಿಂದಿನ ರಾತ್ರಿ ಶ್ರಾವಕರ ಮನೆಗಳಲ್ಲಿ ಹಬ್ಬದ ಸಿದ್ಧತೆಗಳು ಪ್ರಾರಂಭವಾಗುತ್ತವೆ. ವೃಷಭ ತೀರ್ಥಂಕರನ ಬಿಂಬವಿದ್ದರೆ, ಅದರ ಎದುರುಗಡೆಯಲ್ಲಿ ಕಲಶ ಸ್ಥಾಪನೆ ಮಾಡುತ್ತಾರೆ. ಒಂದೊಮ್ಮೆ ವೃಷಭತೀರ್ಥಂಕರನ ಬಿಂಬಲವಿಲ್ಲದಿದ್ದರೆ ಅದರ ಸ್ಥಾನದಲ್ಲಿ ಕಲಶಸ್ಥಾಪನೆ ಮಾಡಿ ಪುಷ್ಪಾದಿಗಳಿಂದ ಅಲಂಕರಿಸುತ್ತಾರೆ. ಯುಗಾದಿಯಂದು ಸೂರ್ಯೋದಯವಾಗುವ ಮುನ್ನವೇ ಎದ್ದು ಸ್ನಾನಾದಿ ನಿತ್ಯಕರ್ಮಗಳನ್ನು ಪೂರ್ಣಗೊಳಿಸಿ ಶುಚಿರ್ಭೂತರಾಗಿ, ಆ ಕಲಶದ ಎದುರು ದೀಪವನ್ನು ಪ್ರಜ್ವಲಿಸಿ, ಮನೆಯವರೆಲ್ಲರೂ ಅಷ್ಟವಿಧಾರ್ಚನೆಗಳಿಂದ ಆ ಕಲಶವನ್ನು ಪೂಜಿಸುತ್ತಾರೆ. ಈ ಕ್ರಮವನ್ನು ಶ್ರೀ ಮುಖದರ್ಶನವೆಂದು ಕರೆಯುತ್ತಾರೆ. ಕೆಲವರು ನಿತ್ಯ ಉಪವಾಸ ವ್ರತಗಳನ್ನು ಕೈಗೊಳ್ಳುತ್ತಾರೆ. ಮತ್ತೆ ಕೆಲವರು ಏಕಭುಕ್ತವ್ರತವನ್ನು ಪಾಲಿಸುತ್ತಾರೆ. ಯುಗಾದಿಯಂದು ಊರಿನ ಬಸದಿಗಳನ್ನು ತಳಿರುತೋರಣಗಳಿಂದ ಶೃಂಗರಿಸಿ ಪೂಜೆ, ಅಭಿಷೇಕ, ಧಾರ್ಮಿಕ ಉಪನ್ಯಾಸ, ಪುರಾಣ ಶ್ರವಣ ಮುಂತಾದ ಕಾರ್ಯಗಳನ್ನು ನಡೆಸುತ್ತಾರೆ.

ಈ ಹಬ್ಬದ ಆಚರಣೆಯ ಕುರಿತು ಜೈನ ಮತೀಯರಲ್ಲಿ ಭಿನ್ನಾಭಿಪ್ರಾಯವಿದೆ "....ಇದು ಜೈನ ಧರ್ಮ ಸಂಬಂಧಿಯಾದ ನಿಮಿತ್ತವುಳ್ಳ ಹಬ್ಬವಲ್ಲ. ಆದರೆ ಪ್ರದೇಶವೊಂದರ ಜನತೆಯಲ್ಲಿ ಬಾಹುಳ್ಯರೂಪದಿಂದ ಆಚರಣೆಯಲ್ಲಿರುವ ಈ ಹಬ್ಬದ ದಿನಕ್ಕೆ ಧಾರ್ಮಿಕ ಆಚಾರವನ್ನು ರೂಢಿಸಿ ಆಚರಣೆಯಲ್ಲಿ ತಂದುಕೊಳ್ಳಲಾಗಿದೆಯೆಂದು"[34] ಭಾವಿಸುತ್ತಾರೆ. ಯುಗಾದಿಯ ಆಚರಣೆಯು ಈ ದೇಶದಲ್ಲಿ ಸಾರ್ವತ್ರಿಕವಾಗಿ ನೆರವೇರುವ ಹಬ್ಬ. ಈ ಆಚರಣೆಯು ಒಂದು ಧರ್ಮಕ್ಕೆ ಅಥವಾ ಜನಾಂಗಕ್ಕೆ ಮಾತ್ರ ಸೀಮಿತವಾದದ್ದಲ್ಲ. ಭಾರತೀಯರೆಲ್ಲರೂ ತಮ್ಮದೇ ಆದ ಧಾರ್ಮಿಕ ಚೌಕಟ್ಟಿನೊಳಗೆ ಈ ಹಬ್ಬವನ್ನು ಆಚರಿಸುತ್ತಾರೆ. ಇದರ ಹಿಂದಿನ ಉದ್ದೇಶ ಹೊಸ ವರ್ಷದ ಸ್ವಾಗತ. ಇದೇ ಹಿನ್ನೆಲೆಯಲ್ಲಿ ಜೈನಮತೀಯರೂ, ತಮ್ಮ ಧಾರ್ಮಿಕ ನೆಲೆಯಲ್ಲಿ ಈ ಹಬ್ಬವನ್ನು ಸ್ವೀಕರಿಸಿ ಆಚರಿಸುತ್ತಿದ್ದಾರೆ. ಜೈನ ಪುರಾಣಗಳು ವೃಷಭದೇವನನ್ನು ಆದಿಪುರುಷ, ಆದಿಬ್ರಹ್ಮ, ಯುಗಾದಿ ಪುರುಷನೆಂದು ಕರೆದು ಗೌರವಿಸುತ್ತವೆ. ಜೈನ ಪರಂಪರೆಯು ಕಲಿಯುಗದ ಆರಂಭದಲ್ಲಿ ಆತನು ಅಂದರೆ ಆದಿಪುರುಷ ಹುಟ್ಟಿ ಜನತೆಗೆ ಧರ್ಮವನ್ನೂ ವೃತ್ತಿಗಳನ್ನು ಅರುಹಿ ಮನುಕುಲದ ವಿಕಾಸಕ್ಕೆ ನಾಂದಿ ಹಾಡಿದನೆಂದು ಹೇಳಲಾಗುತ್ತದೆ. ಪ್ರಥಮ ತೀರ್ಥಂಕರನಾಗಿ ಧರ್ಮವನ್ನು ಬೆಳಗಿದವನು ವೃಷಭದೇವ. ಈ ಹಿನ್ನೆಲೆಯಲ್ಲಿ ಆತನನ್ನು ಯುಗಪುರುಷ (ಯುಗಾದಿಪುರುಷ)ನೆಂದು ಜೈನರು ಕರೆಯುತ್ತಾರೆ. ಈ ಪುಣ್ಯ ಪುರುಷನ ಸ್ಮರಣೆಗಾಗಿ ಹೊಸವರ್ಷದ ಆರಂಭದಲ್ಲಿ ವೃಷಭದೇವನ ಬಿಂಬವನ್ನು ಪೂಜಿಸಿ, ಗೌರವಿಸುವ ಆಚರಣೆ ರೂಢಿಯಲ್ಲಿದೆ.

ಮಹಾವೀರ ಜಯಂತಿ : ಚೈತ್ರಮಾಸದ ಬಹುಳ ತ್ರಯೋದಶಿಯಲ್ಲಿ ಇಪ್ಪತ್ತನಾಲ್ಕನೆಯ ಜೈನ ತೀರ್ಥಂಕರರಾದ ಮಹಾವೀರಸ್ವಾಮಿಯ ಜನ್ಮದಿನೋತ್ಸವ ಇದು ಜೈನಮತೀಯರಿಗೆ ಬಹಳ ಪವಿತ್ರ ದಿನವಾಗಿದೆ. ಸಾಮೂಹಿಕವಾಗಿ ಬಹಳ ಸಡಗರದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಎಲ್ಲಾ ಜೈನರ ಬಸದಿಗಳಲ್ಲಿ ಮಹಾವೀರನ ಪ್ರತಿಮೆಗೆ ವಿಶೇಷಪೂಜೆ, ಅಭಿಷೇಕಗಳು ನೆರವೇರುತ್ತವೆ. ಮಹಾವೀರನು ಬೋಧಿಸಿದ ತತ್ವಗಳನ್ನು ಮನನ ಮತ್ತು ಪಠಣ ಮಾಡುತ್ತಾರೆ. ಸಭೆ, ಸಮಾರಂಭ, ಉತ್ಸವಗಳನ್ನೂ ಆಚರಿಸುತ್ತಾರೆ. ಅಂದು ಕೆಲವು ಶ್ರಾವಕರು ನಿಟ್ಟು ಉಪವಾಸ, ಏಕಭುಕ್ತ ಮುಂತಾದ ವ್ರತಗಳನ್ನೂ ಕೈಗೊಳ್ಳುತ್ತಾರೆ. ಬಡಬಗ್ಗರಿಗೆ ದಾನಧರ್ಮಗಳನ್ನು ನಡೆಸುತ್ತಾರೆ. ರೋಗಿಗಳಿಗೆ ಉಪಚಾರ, ಉಚಿತ ಔಷಧ, ಹಣ್ಣುಹಂಪಲುಗಳನ್ನು ದಾನ ಮಾಡುತ್ತಾರೆ. ಅಂದು ವಿಶೇಷವಾಗಿ ಅಹಿಂಸಾವ್ರತವನ್ನು ಪಾಲಿಸುತ್ತಾರೆ.[35]

ಅಕ್ಷಯತದಿಗೆ : ವೈಶಾಖ ಮಾಸದ ಶುದ್ಧ ತೃತೀಯ ದಿನದಂದು ಅಕ್ಷಯತದಿಗೆಯೆಂದು ಜೈನ ಧರ್ಮೀಯರು ಆಚರಿಸುತ್ತಾರೆ. ಪುರಾಣಗಳಲ್ಲಿ ಹೇಳಿರುವಂತೆ ಆ ದಿನ ಹಸ್ತಿನಾಪುರದ ರಾಜನಾದ ಶ್ರೇಯಾಂಸನು, ಆರು ತಿಂಗಳ ಕಾಲ ಅನಶನವ್ರತಧಾರಿಯಾಗಿದ್ದ ವೃಷಭನಾಥನಿಗೆ ಇಕ್ಷುರಸವನ್ನು ಆಹಾರವಾಗಿ ನೀಡಿ ಅಕ್ಷಯಸುಖವನ್ನು ಪಡೆದನೆಂದು ಜೈನಪುರಾಣಗಳು ಉಲ್ಲೇಖಿಸುತ್ತವೆ. ಇದರ ಸ್ಮರಣೆಗಾಗಿ ಶ್ರಾವಕರು ವೃಷಭನಾಥ ತೀರ್ಥಂಕರನಿಗೆ ವಿಶೇಷವಾಗಿ ಪೂಜೆ, ಅಭಿಷೇಕಗಳನ್ನು ನಡೆಸುತ್ತಾರೆ. ಅಂದು ಶ್ರಾವಕನು ವಿಶೇಷವಾಗಿ ಅಭಿಷೇಕದಲ್ಲಿ ಕಬ್ಬಿನ ಹಾಲನ್ನು ಉಪಯೋಗಿಸುತ್ತಾರೆ. ವೃಷಭದೇವನ ಚರಿತ್ರೆಯ ಪಠನ, ಉತ್ಸವಗಳೂ ಸಹ ಜರುಗುತ್ತವೆ. ಅಂದು ಶ್ರಾವಕನು ವಿಶೇಷವಾಗಿ ದಿಗಂಬರ ಮುನಿಗಳಿಗೆ ಆಹಾರ ದಾನಮಾಡಲು ಆಸಕ್ತಿ ವಹಿಸುತ್ತಾರೆ.[36]

ಶ್ರುತಪಂಚಮಿ : ಶ್ರುತಪಂಚಮಿ ಜೈನಮತದವರಿಗೆ ಅತ್ಯಂತ ಮಹತ್ವದ ದಿನವಾಗಿದೆ. ಇದನ್ನು ಜ್ಯೇಷ್ಠ ಶುದ್ಧ ಪಂಚಮಿಯಂದು ಆಚರಿಸುತ್ತಾರೆ. ಅಂದು ಜಿನಮಂದಿರಗಳಲ್ಲಿ ಸರಸ್ವತಿ ಪೂಜೆಯನ್ನೂ, ಶ್ರುತಸ್ಕಂದ, ಶಾಸ್ತ್ರಗ್ರಂಥಗಳ ಪೂಜೆಯನ್ನು ನೆರವೇರಿಸುತ್ತಾರೆ. ತೀರ್ಥಂಕರನ ವಾಣಿಯೇ ಸರಸ್ವತಿಯೆಂದು ಜೈನರು ಭಾವಿಸುತ್ತಾರೆ. ಪಂಪ ಕವಿಯು "ಪರಮ ಜಿನೇಂದ್ರವಾಣಿಯೇ ಸರಸ್ವತಿ ಬೇರದು ಪೆಣ್ಣರೂಪಂ ಧರಿಸಿನಿಂದುದಲ್ತು"[37] ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ಶ್ರುತಾವತಾರ ಗ್ರಂಥದಲ್ಲಿ ಇಂದ್ರನಂದಿಯು ಜಿನವಾಣಿ ಸರಸ್ವತಿ, ಸಮ್ಯಗ್‌ಜ್ಞಾನದ ಸಂಗ್ರಹವೇ ಶಾಸ್ತ್ರವೆಂದು ಹೇಳುತ್ತಾನೆ. ಈ ದೃಷ್ಟಿಯಿಂದಲೂ ಶ್ರುತಪಂಚಮಿ ಆರಾಧನೆ ಜೈನರಿಗೆ ಜ್ಞಾನದ ಆರಾಧನೆಯಾಗಿದೆ.

ಶ್ರುತಪಂಚಮಿ ಹಿನ್ನೆಲೆಯನ್ನು ಜೈನಪುರಾಣವು ಹೀಗೆ ವಿವರಿಸುತ್ತವೆ. "ವೃಷಭದೇವನಿಂದ ಮೊದಲ್ಗೊಂಡು ವರ್ಧಮಾನ ಮಹಾವೀರನವರೆಗಿನ ತೀರ್ಥಂಕರರು ಜನತೆಗೆ ಉಪದೇಶಿಸಿದ ವೇದಗಳು ದ್ವಾದಶಾಂಗವಾಗಿದ್ದವು. ಮಹಾವೀರನ ತರುವಾಯ ಇವನ್ನು ಗೌತಮಗಣಧರರೇ ಮೊದಲಾದ ಕೇವಲಿಗಳು ಪ್ರಚಾರ ಮಾಡುತ್ತ ಬಂದರು. ಕಾಲಕ್ರಮೇಣ ದ್ವಾದಶಾಂಗದಲ್ಲಿ ಹೆಚ್ಚಿನ ಅಂಗಗಳು ನಷ್ಟವಾಗುತ್ತ ಬಂದು, ಒಂದು ಅಂಗದಷ್ಟು ವೇದವು ಅಹಿಬಲಾಚಾರ್ಯ ಮೊದಲಾದ ಕೆಲವೇ ಗುರುಗಳಲ್ಲಿ ಉಳಿದಿತ್ತು. ಈ ಪವಿತ್ರವಾದ ಜ್ಞಾನಭಂಡಾರವು ಅಳಿಯುತ್ತ ಬಂದಿರುವುದನ್ನು ಗಮನಿಸಿದ ಪುಷ್ಪದಂತ ಮತ್ತು ಭೂತಬಲಿ ಆಚಾರ್ಯರು ತಮ್ಮ ಗುರುಗಳಾದ ಆಚಾರ್ಯಧರಸೇನರ ಆದೇಶದಂತೆ ಇದನ್ನು ಲಿಪಿಬದ್ಧಗೊಳಿಸಲು ನಿರ್ಧರಿಸಿದರು. ಹೀಗೆ ಲಿಪಿಬದ್ಧಗೊಳಿಸಿ ಜ್ಯೇಷ್ಠ ಶುದ್ಧ ಪಂಚಮಿಯಂದು ಈ ಗ್ರಂಥವನ್ನು ಪೂರ್ಣಗೊಳಿಸಿ, ಮುನಿ-ಆರ್ಯಿಕಾ-ಶ್ರಾವಕ-ಶ್ರಾವಿಕೆಯರೆಂಬ ಚತುಃಸಂಘಗಳನ್ನು ಸೇರಿಸಿ ಭಕ್ತಿಭಾವದಂದ ಪೂಜಿಸಿದರೆಂದು ಹೇಳಲಾಗಿದೆ."[38] ಅಂದಿನಿಂದ ಮೊದಲ್ಗೊಂಡು ಈ ಪುಣ್ಯದಿನದ ಸ್ಮರಣೆಗಾಗಿಯೂ ಮತ್ತು ಶಾಸ್ತ್ರಗ್ರಂಥದ ಮೇಲಿನ ಗೌರವದಿಂದಲೂ ಶ್ರುತಪಂಚಮಿಯನ್ನು ಪರ್ವವಾಗಿ ಜೈನರು ಆಚರಣೆಗೆ ತಂದರು.

ಅಷ್ಟಾಹ್ನಿಕ : ಆಷಾಢ, ಕಾರ್ತಿಕ, ಫಾಲ್ಗುಣ ಮಾಸಗಳ ಶುಕ್ಲಪಕ್ಷದ ಅಷ್ಟಮಿಯಂದು ಹುಣ್ಣಿಮೆಯವರೆಗೆ ಅಷ್ಟಾಹ್ನಿಕ ಪರ್ವವನ್ನು ಜೈನ ಆಚರಿಸುತ್ತಾರೆ. ಈ ಎಂಟೂ ದಿನಗಳಲ್ಲಿ ಇಂದ್ರಾದಿ ದೇವತೆಗಳು ಅಷ್ಟಮನಂದೀಶ್ವರ ದ್ವೀಪಗಳಿಗೆ ಹೋಗಿ ಅಲ್ಲಿ ಜಿನನ ಪೂಜೆಯನ್ನು ಮಹಾವೈಭವದಿಂದ ನೆರವೇರಿಸುತ್ತಾರೆ ನಂಬಿಕೆ ಇದೆ. ಈ ನಂಬಿಕೆಯಂತೆ ಇಲ್ಲಿಯೂ ನಂದೀಶ್ವರ ದ್ವೀಪಗಳನ್ನು ರಚಿಸಿ ಪೂಜಾದಿಗಳನ್ನು ನಡೆಸುತ್ತಾರೆ.[39]

ಪ್ರತಿಯೊಂದು ಬಸದಿಗಳಲ್ಲಿಯೂ ಅಷ್ಟಮ ನಂದೀಶ್ವರ ದ್ವೀಪಗಳ ಕಂಚಿನ ದ್ವೀಪಗಳಿರುತ್ತವೆ. ಈ ದ್ವೀಪದ ನಾಲ್ಕೂ ದಿಕ್ಕುಗಳಲ್ಲಿಯೂ ಕ್ರಮವಾಗಿ, ಒಂದು ಅಂಜನಗಿರಿ, ನಾಲ್ಕುದಧಿಮುಖ, ಎಂಟು ರತಿಕರ ಹೀಗೆ ಹದಿಮೂರರಂತೆ ಒಟ್ಟು ಐವತ್ತೆರಡು ಪರ್ವತಗಳಿರುತ್ತವೆ.

ಕೆಲವರು ಶುಕ್ಲಪಕ್ಷದ ಅಷ್ಟಮಿಯಿಂದ ಹುಣ್ಣಿಮೆಯವರೆಗೆ ಅಷ್ಟಾಹ್ನಿಕ ನೋಂಪಿ ವ್ರತವನ್ನೂ ಕೈಗೊಳ್ಳುತ್ತಾರೆ. ಇದರಿಂದ ಕರ್ಮಕ್ಷಯವಾಗಿ ಪುಣ್ಯಬಂಧವಾಗುತ್ತದೆಂದು ನಂಬುತ್ತಾರೆ. ಈ ಪರ್ವಗಳ ಆಚರಣೆಯು ಕ್ರಿ.ಪೂ.ಕಾಲದಿಂದಲೇ ಪ್ರಚಾರದಲ್ಲಿತ್ತೆಂದು ತೋರುತ್ತದೆ. ರವಿಷೇಣನ ಪದ್ಮಪುರಾಣದಲ್ಲಿ ದಶರಥರಾಜನು ಆಷಾಢ ತಿಂಗಳಲ್ಲಿ ಅಷ್ಟಾಹ್ನಿಕ ಪರ್ವವನ್ನು ವೈಭವದಿಂದ ನಡೆಸಿದಂತೆ ವರ್ಣಿಸಲಾಗಿದೆ. ಕಾರ್ತಿಕ ಅಷ್ಟಾಹ್ನಿಕ ಪರ್ವವನ್ನು ಆಚರಿಸಿ ಮೈನಾ ಸುಂದರಿಯು

ತನ್ನ ಪತಿಯಾದ ಶ್ರೀಪಾಲರಾಜನ ಕುಷ್ಠರೋಗವನ್ನು ವಾಸಿಮಾಡಿಕೊಂಡಂತೆ ಶ್ರೀಪಾಲಚರಿತ್ರೆ ಗ್ರಂಥದಲ್ಲಿ ವಿವರಿಸಿದೆ. ಅಷ್ಟಾಹ್ನಿಕ ಪರ್ವದಿನಗಳಲ್ಲಿ ಸಾಧನೆ ಮಾಡಿದ ತಾರ್ಕಿಕ ಚೂಡಾಮಣಿ ಅಕಲಂಕದೇವನು ಬೌದ್ಧರನ್ನು ವಾದದಲ್ಲಿ ಸೋಲಿಸಿದನೆಂದು ಹೇಳಲಾಗಿದೆ. ಈ ಎಲ್ಲಾ ದೃಷ್ಟಾಂತಗಳು ಅಷ್ಟಾಹ್ನಿಕ ಪರ್ವದ ಆಚರಣೆಯಲ್ಲಿ ಶ್ರಾವಕರಿಗೆ ಇನ್ನಷ್ಟು ದೃಢನಂಬಿಕೆಯನ್ನು ಹುಟ್ಟಿಸಲು ಕಾರಣವಾಗಿದೆಯೆನ್ನಬಹುದು.

ಮೋಕ್ಷ ಸಪ್ತಮಿ ಅಥವಾ ಮುಕುಟ ಸಪ್ತಮಿ : ಇಪ್ಪತ್ತಮೂರನೇ ತೀರ್ಥಂಕರರಾದ ಭಗವಾನ್ ಪಾರ್ಶ್ವನಾಥ ತೀರ್ಥಂಕರನು ಶ್ರಾವಣ ಶುದ್ಧ ಸಪ್ತಮಿಯ ದಿನ ಸಮ್ಮೇಧ ಶೈಲದ ಶಿಖರದಲ್ಲಿ ಮುಕ್ತಿಯನ್ನು ಪಡೆದರು. ಅಂದಿನಿಂದ ಆ ದಿನವನ್ನು "ಮೋಕ್ಷಸಪ್ತಮಿ"ಯನ್ನಾಗಿ ಆಚರಿಸುವಸಂಪ್ರದಾಯ ಜೈನ ಸಂಸ್ಕೃತಿಯಲ್ಲಿ ನಡೆದುಬಂದಿದೆ. ಆ ದಿನ ಜಿನಬಸದಿಗಳಲ್ಲಿ ಯಾಗಮಂಡಲಾರಾಧನೆ, ಮಹಾಭಿಷೇಕಗಳನ್ನು ಮಾಡುತ್ತಾರೆ. ಯಥಾಶಕ್ತಿಯಿಂದ ವ್ರತಗಳನ್ನು ಆಚರಿಸಿ, ಚತುರ್ವಿಧ ದಾನಗಳನ್ನು ನೀಡುತ್ತಾರೆ. ಪಾರ್ಶ್ವನಾಥ ತೀರ್ಥಂಕರರ ಪವಿತ್ರ ಜೀವನದ ಆದರ್ಶ ತತ್ವಗಳನ್ನು ಸ್ಮರಿಸಿಕೊಳ್ಳುವುದು ಮುಖ್ಯ ಉದ್ದೇಶ. ಕೆಲವೆಡೆ ರಥೋತ್ಸವಾದಿಗಳನ್ನು ಮಾಡುವುದೂ ಉಂಟು.[40]

ವೀರ ಶಾಸನ ಜಯಂತಿ ಆರಂಭವಾದ ಕಥೆ : ಸುಮಾರು 2572 ವರ್ಷಗಳ ಹಿಂದೆ ಮಹಾವೀರರು 12 ವರ್ಷ 5 ತಿಂಗಳು ಘೋರ ತಪಸ್ಸನ್ನಾಚರಿಸಿ 4 ಘಾತಿ ಕರ್ಮಗಳನ್ನು ನಾಶ ಮಾಡಿಕೊಂಡು ಕೇವಲ ಜ್ಞಾನವನ್ನು ಪಡೆದು ಜಿನನೆನಿಸಿಕೊಂಡರು. ಮಹಾವೀರರಿಗೆ ಕೇವಲ ಜ್ಞಾನವಾದಾಗ ದೇವಾನುದೇವತೆಗಳು ಸ್ವರ್ಗಲೋಕದಲ್ಲಿ ಜಯಕಾರ ಮಾಡುತ್ತಾ ಪುಷ್ಪವೃಷ್ಟಿ ಮಾಡಿದರು. ಇಂದ್ರನ ಆಜ್ಞೆಯಂತೆ ಕುಬೇರನು ಸಮವಸರಣ ರಚನೆ ಮಾಡಿದನು. ಇತರ ದೇವತೆಗಳ ಸಮೂಹವು ವಾದ್ಯಗೋಷ್ಠಿಗಳೊಂದಿಗೆ ಭೂಮಿಗೆ ಆಗಮಿಸಿತು. ಸಮಸ್ತ ರಿದ್ದಿಗಳಿಂದ ಕೂಡಿದ ಸಮವಸರಣದಲ್ಲಿ ತೀರ್ಥಂಕರ ಮಹಾವೀರರು ಚತುರ್ಮುಖ ಬ್ರಹ್ಮನಾಗಿ ಗಂಧ ಕುಟಿಯ ಮಧ್ಯದಲ್ಲಿ ಪಾದಪೀಠ ಸಹಿತ ಸಿಂಹಾಸನಾರೂಢರಾದರು. ಹಾಗೆಯೇ ಸ್ವರ್ಗಲೋಕದ ದೇವತೆಗಳು, ಭವನವಾಸಿ ದೇವತೆಗಳು, ಜ್ಯೋತಿಷ್ಯ ದೇವತೆಗಳು, ವೆಂತರರು, ಕಲ್ಪವಾಸಿ ದೇವಿಯರು, ಮನುಷ್ಯರು ತಿರ್ಯಂಚ ಪ್ರಾಣಿಗಳು ಭೇದಭಾವವನ್ನು, ವೈರತ್ವವನ್ನು ಮರೆತು ತಮ್ಮ ತಮ್ಮ ಸ್ಥಾನಗಳಲ್ಲಿ ನೆಲೆಸಿದವು. ತೀರ್ಥಂಕರರ ದಿವ್ಯಧ್ವನಿಯ ನಿರೀಕ್ಷೆಯಲ್ಲಿದ್ದರು. ಮೂರು ಪ್ರಹರ ಸಮಯ ಕಳೆದ ಮೇಲೂ ತೀರ್ಥಂಕರರು ಧ್ವನಿಮಾಡದಿದ್ದರಿಂದ 66 ದಿನಗಳ ಪರ್ಯಂತ ಕಾಯುವಿಕೆ ಮುಂದುವರಿಯಿತು. ಆಗ ಇಂದ್ರನು ಗಣಧರರ ಅವಶ್ಯಕತೆಯನ್ನು ತಿಳಿದುಕೊಳ್ಳುತ್ತಾನೆ.

ಈ ಮಧ್ಯದಲ್ಲಿ ವಿದ್ವಾಂಸನಾದ ಬ್ರಾಹ್ಮಣನು ತನ್ನ ಸಹೋದರರಾದ ವಾಯುಭೂತಿ, ಅಗ್ನಿಭೂತಿ ಮತ್ತು ತನ್ನ 1500 ಶಿಷ್ಯರೊಂದಿಗೆ ದೇವತೆಗಳನ್ನು ಸಂತುಷ್ಟಿಗೊಳಿಸಲು ಒಂದು ಮಹಾಯಜ್ಞವನ್ನು ಕೈಗೊಂಡಿದ್ದನು. ಆಕಾಶದಲ್ಲಿ ದೇವತೆಗಳು ವಿಮಾನದಲ್ಲಿ ಸಂಚರಿಸುವುದನ್ನು ಕಂಡು ಆನಂದಭರಿತನಾಗಿ ತನ್ನ ಯಜ್ಞ ಸಂಪೂರ್ಣತ್ವಕ್ಕಾಗಿ ಅವರು ಆಗಮಿಸಿದ್ದಾರೆಂದು ಸಂತೋಷಗೊಂಡನು. ಆದರೆ ವಿಮಾನ ಅವನನ್ನು ದಾಟಿ ಮುಂದೆ ಹೋದದ್ದರಿಂದ ಕ್ರೋಧಕ್ಕೊಳಗಾದನು. ಬೇರೆ ಯಾರೋ ಯಜ್ಞವನ್ನು ಮಾಡುತ್ತಿದ್ದಾರೆ ದೇವತೆಗಳೆಲ್ಲಾ ಅಲ್ಲಿಗೆ ಹೋಗಿದ್ದಾರೆ ಎಂದು ಭಾವಿಸಿದನು. ಇಂದ್ರಭೂತಿಯ ಈ ಅಹಂಕಾರ ಭಾವವನ್ನು ಅರಿತುಕೊಂಡ ಇಂದ್ರನು ಬ್ರಾಹ್ಮಣನ ಅಹಂಕಾರವನ್ನು ಶಮನ ಮಾಡಲು ಬ್ರಾಹ್ಮಣವೇಷ ಧಾರಿಯಾಗಿ ಇಂದ್ರಭೂತಿಯ ಯಜ್ಞಶಾಲೆಯನ್ನು ಪ್ರವೇಶಿಸಿದನು. ಅಲ್ಲದೆ ಇಂದ್ರಭೂತಿಯನ್ನು ಸಂಧಿಸಿ ನನ್ನ ಗುರುಗಳು ಈಗ ಮೌನವ್ರತಧಾರಿಗಳಾಗಿದ್ದಾರೆ. ಹಾಗಾಗಿ ನನ್ನ ಸಂದೇಹವನ್ನು ನಿವಾರಿಸಲು ಈ ಶ್ಲೋಕದ ಅರ್ಥವನ್ನು ನನಗೆ ವಿವರಿಸಬೇಕೆಂದು ಕೇಳಿಕೊಂಡನು. ಮೊದಲು ನೀನು ನನ್ನ ಶಿಷ್ಯನಾದಲ್ಲಿ ನೀನು ತಂದಿರುವ ಸಮಸ್ಯಾತ್ಮಕ ಶ್ಲೋಕದ ಅರ್ಥವನ್ನು ಹೇಳುವೆನು ಎಂದು ಇಂದ್ರಭೂತಿಯು ಬ್ರಾಹ್ಮಣವೇಷಧಾರಿ ಇಂದ್ರನಿಗೆ ಹೇಳಿದನು.

ಆಗ ಇಂದ್ರನು ನಿಮ್ಮ ತರ್ಕವನ್ನು ಸ್ವೀಕರಿಸಿದ್ದೇನೆ. ಒಂದು ವೇಳೆ ನೀವು ನನ್ನ ಸಮಸ್ಯಾತ್ಮಕ ಶ್ಲೋಕದ ಅರ್ಥ ಹೇಳದಿದ್ದರೆ ನೀವು ನನ್ನ ಗುರುಗಳ ಶಿಷ್ಯರಾಗಬೇಕೆಂದು ಪಂಥಾಹ್ವಾನ ನೀಡಿದನು. ತನ್ನ ಜ್ಞಾನದ ಮೇಲೆ ವಿಶ್ವಾಸವಿದ್ದ ಇಂದ್ರಭೂತಿ ಅದಕ್ಕೊಪ್ಪಿಕೊಂಡನು. ಇಂದ್ರನು ಹೇಳಿದ ಶ್ಲೋಕವನ್ನು ಕೇಳಿದ ಇಂದ್ರಭೂತಿ ಗಾಬರಿಗೊಂಡನು. ಕಾರಣ ಈವರೆಗೂ ಅಂತಹ ಶ್ಲೋಕವನ್ನು ಆತ ಕೇಳಿರಲಿಲ್ಲ. ಆದರೂ ಸೋಲೊಪ್ಪಿಕೊಳ್ಳದೆ ಇದಕ್ಕೆ ಉತ್ತರವನ್ನು ನಿನ್ನ ಗುರುವಿನ ಮುಂದೆಯೇ ಹೇಳುತ್ತೇನೆಂದು ಆತನ ಗುರುವಿನ ಬಳಿಗೆ ಬಂದನು. ಆಗ ಆತನ ಸಹೋದರರು, ಸಹೋದರ ವಾಯುಭೂತಿ, ಅಗ್ನಿಭೂತಿ 1500 ಶಿಷ್ಯರು ಮಹಾವೀರರಿದ್ದ ಸಮವಸರಣ ಮಂಟಪದ ಬಳಿಗೆ ಬಂದು ಸೇರಿದರು. ಮಾನಸ್ತಂಭ ನೋಡಿದೊಡನೆಯೇ ಇಂದ್ರಭೂತಿಯ ಗರ್ವವೆಲ್ಲವೂ, ದುರಭಿಮಾನವೆಲ್ಲವೂ ನಾಶವಾಗಿ ಶಾಂತಿ, ವೀತರಾಗತೆ ಅನುಭವ ಪಡೆದನು. ಭಗವಂತರ ಹಾಗೂ ಸಮವಸರಣದ ವೈಭವವನ್ನು ಕಂಡು ಪ್ರಭಾವಿತನಾದನು. ಮಿಥ್ಯತ್ವವನ್ನು ಕಳೆದು ಕೇಶಲೋಚನವನ್ನು ಮಾಡಿಕೊಂಡು ಪೂರ್ಣ ದಿಗಂಬರ ಮುನಿಯಾದನು. ಮಹಾವೀರ ಸ್ವಾಮಿಗೆ ನಮಸ್ಕರಿಸಿ ಅವರ ಶಿಷ್ಯನಾದನು. ಈತನ ಸಹೋದರರು ಮತ್ತು ಶಿಷ್ಯರು ಅವನನ್ನುಸರಿಸಿದರು. ಹೀಗೆ ಭಗವಾನ್ ಮಹಾವೀರರು ಶ್ರೇಷ್ಠರಾದ 1503 ಶಿಷ್ಯರನ್ನು ಇಂದ್ರಭೂತಿ ಮತ್ತು ಉಳಿದ ಶಿಷ್ಯರಿಗೆ ಜಿನದೀಕ್ಷೆಯನ್ನು ನೀಡಿ ಇಂಥಹ ಶುಭ ಸಂದರ್ಭದಲ್ಲಿ

ಗುರುಪೌರ್ಣಿಮೆಯನ್ನು ವೀರ ಶಾಸನ ಜಯಂತಿಯನ್ನು ಆಚರಿಸುವುದು ಅಂದಿನಿಂದ ನಡೆದುಕೊಂಡುಬಂದಿದೆ. ಹೀಗೆ ಗಣಧರರ ಉಪಸ್ಥಿತಿಯಲ್ಲಿ ದಿವ್ಯ ತೀರ್ಥಂಕರರ ಪ್ರಥಮ ಧರ್ಮೋಪದೇಶದ ದಿನವನ್ನು ವೀರಶಾಸನ ಜಯಂತಿ ಎಂದು ಆಚರಿಸಲಾಗುತ್ತದೆ.[41]

ಉಪಾಕರ್ಮ : ನೂಲುಶ್ರಾವಣ ಹಬ್ಬಶ್ರಾವಣಮಾಸದ ಹುಣ್ಣಿಮೆಯಂದು ಆಚರಿಸುತ್ತಾರೆ. ಈ ಹಬ್ಬಕ್ಕೆ ಸ್ಥಳೀಯರು ಜನಿವಾರದ ಹಬ್ಬ ಅಥವಾ ಉಪಾಕರ್ಮವೆಂತಲೂ ಕರೆಯುತ್ತಾರೆ.[42] ಇದನ್ನು ಶ್ರವಣ ನಕ್ಷತ್ರದಂದೇ ಆಚರಿಸುವ ಪದ್ಧತಿ ಇದೆ. ಹುಣ್ಣಿಮೆಯ ದಿನ ಶ್ರವಣ ನಕ್ಷತ್ರ ಬಂದರಂತೂ ತುಂಬಾ ಪ್ರಶಸ್ತ್ಯ. ಆದರೆ ಕೆಲವೊಮ್ಮೆ ಈ ನಕ್ಷತ್ರವು ಹುಣ್ಣಿಮೆಯ ಮೊದಲನೆಯ ದಿನ ಅಥವಾ ಮಾರನೆಯ ದಿನ ಬಂದಾಗ, ಹುಣ್ಣಿಮೆಯ ದಿನವನ್ನು ಬಿಟ್ಟು ಶ್ರವಣನಕ್ಷತ್ರವನ್ನೇ ಆಯ್ದುಕೊಳ್ಳುತ್ತಾರೆ.

ಬಸದಿಗಳಲ್ಲಿ ಶ್ರಾವಕರೆಲ್ಲ ಸೇರಿ ಹೊಸ ಯಜ್ಞೋಪವೀತವನ್ನು ಧರಿಸುವುದರ ಮೂಲಕ ಈ ಹಬ್ಬ ಆಚರಿಸುತ್ತಾರೆ. ನೂಲು ಶ್ರಾವಣದಂದು ಬಸದಿಯಲ್ಲಿ ಪುರೋಹಿತರು ವಿಶೇಷ ಅಭಿಷೇಕ, ಪೂಜೆಗಳನ್ನು ಮಾಡಿ ಹೋಮಕಾರ್ಯವನ್ನು ನೆರವೇರಿಸುತ್ತಾರೆ. ಹೊಸ ಜನಿವಾರವನ್ನು ಹೋಮಕುಂಡದ ಮುಂದಿಟ್ಟು ಅರ್ಚನೆ ಮುಗಿದ ನಂತರ ಎಲ್ಲರೂ ಯಜ್ಞಕುಂಡಕ್ಕೆ ಪ್ರದಕ್ಷಿಣೆ ಬಂದು ಮಂತ್ರಪುರಸ್ಸರವಾಗಿ ಹೊಸ ಯಜ್ಞೋಪವೀತವನ್ನು ಧರಿಸುತ್ತಾರೆ. ಆ ಬಳಿಕ ಪಂಚನಮಸ್ಕಾರ ಮತ್ತು ಧ್ಯಾನ ಮಾಡಿದ ಮೇಲೆ, ಇಂದ್ರರೂ ಎಲ್ಲಾ ಶ್ರಾವಕರಿಗೂ ಬ್ರಹ್ಮಚರ್ಯ, ಏಕಭುಕ್ತ, ಅಹಿಂಸೆ ಮೊದಲಾದ ವ್ರತಗಳ ಮಹತ್ವವನ್ನು ತಿಳಿಹೇಳುತಾರೆ. ಉಪನಯನವಾದ ಶ್ರಾವಕರು ಇದನ್ನು ಧರಿಸಲೇಬೇಕೆಂಬ ನಿಯಮವಿದೆ. ಉಳಿದವರು ಆ ದಿವಸದ ಮಟ್ಟಿಗಾದರೂ ಧರಿಸಬೇಕು. ಈ ಆಚರಣೆಯಂದು ಸ್ತ್ರೀಯರು ಬಸದಿಗೆ ಬಂದು ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಪರಿಪಾಠವಿಲ್ಲ. ಪುರುಷರು ಬಸದಿಯಿಂದ ಮನೆಗೆ ತಂದ ಗಂಧಪ್ರಸಾದವನ್ನು ಮಾತ್ರ ಸ್ವೀಕರಿಸುತ್ತಾರೆ.

ಗೌರಿ ಹಬ್ಬ : ಭಾದ್ರಪದ ಮಾಸದ ಶುಕ್ಲತದಿಗೆಯಂದು ಗೌರಿ ಹಬ್ಬವನ್ನು ಜೈನರು ಆಚರಿಸುವ ಪದ್ಧತಿ ಇದೆ. ಗೌರಿ ಹಬ್ಬದಂದು ಹನ್ನೊಂದನೆಯ ತೀರ್ಥಂಕರ ಶ್ರೇಯಾಂಸ ತೀರ್ಥಂಕರನಿಗೆ ಅಭಿಷೇಕ, ಪೂಜೆ, ಅರ್ಚನೆಗಳನ್ನು ಬಸದಿಯಲ್ಲಿ ನಡೆಸುತ್ತಾರೆ.[43] ಈ ತೀರ್ಥಂಕರನ ಯಕ್ಷಿಯಾದ ಗೌರೀದೇವಿಗೆ ಷೋಡಶೋಪಚಾರ ಪೂಜೆಯನ್ನು ಮಾಡಿ ಸುಮಂಗಲಿಯರಿಗೆ ಬಾಗಿನ ಕೊಡುತ್ತಾರೆ. ಕೆಲವು ಸ್ತ್ರೀಯರು ಗೌರೀನೋಂಪಿಯನ್ನು ಕೈಗೊಳ್ಳುತ್ತಾರೆ. ವೈದಿಕ ಪದ್ಧತಿಯ ಗೌರೀಪೂಜೆ, ಗೌರೀವ್ರತ, ಮಂಗಳಗೌರೀವ್ರತಗಳು ಇದಕ್ಕೆ ಸಂವಾದಿಯಾಗಿವೆ. ಜೈನರು

ಗೌರೀಯಕ್ಷಿಯನ್ನು ಪೂಜಿಸುವುದು, ಸಾಂಸ್ಕೃತಿಕ ಸಮನ್ವಯದ ದೃಷ್ಟಿಯಿಂದ ಎಂಬುದು ಕೆಲ ವಿದ್ವಾಂಸರ ಅಭಿಪ್ರಾಯ.

ದಶಲಕ್ಷಣ ಪರ್ವ : ಜೈನಧರ್ಮೀಯರು ದಶಲಕ್ಷಣ ಪರ್ವಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ನೀಡುತ್ತಾರೆ. ಏಕೆಂದರೆ ಸಾಧಕನು ತನ್ನ ದೌರ್ಬಲ್ಯಗಳನ್ನು ಗೆದ್ದು ಆತ್ಮಕಲ್ಯಾಣ ಮಾಡಿಕೊಳ್ಳಲು ಈ ಪರ್ವವು ವಿಶೇಷವಾಗಿ ಸಹಕಾರಿಯಾಗಿದೆ.[44] ಧರ್ಮದ ಹತ್ತು ತತ್ವಗಳನ್ನು ವಿಶೇಷವಾಗಿ ಪಾಲಿಸುವುದೇ ದಶಲಕ್ಷಣಪರ್ವ. ಶ್ರಾವಕನು ಆತ್ಮವಿರೋಧಿ, ಶತ್ರುಗಳಾದ ಕ್ರೋಧ, ಮಾನ, ಮಾಯೆ, ಲೋಭ, ಹಿಂಸೆ, ಸುಳ್ಳು, ಕಳ್ಳತನ, ಪರಿಗ್ರಹ ಮೊದಲಾದವುಗಳನ್ನು ಮೆಟ್ಟಿ ನಿಂತಾಗ ಮಾತ್ರ ಧರ್ಮವನ್ನು ಯಥಾವತ್ತಾಗಿ ಪಾಲಿಸಲು ಸಾಧ್ಯವಾಗುತ್ತದೆ. ಅದಕ್ಕಾಗಿ ದಶಲಕ್ಷಣದಲ್ಲಿ ಉಲ್ಲೇಖಿಸಿರುವ ಉತ್ತಮ ಕ್ಷಮಾ, ಉತ್ತಮ ಮಾರ್ದವ, ಉತ್ತಮ ಅರ್ಜವ, ಉತ್ತಮ ಸತ್ಯ, ಉತ್ತಮ ಶೌಚ, ಉತ್ತಮ ಸಂಯಮ, ಉತ್ತಮ ತಪ, ಉತ್ತಮ ತ್ಯಾಗ, ಉತ್ತಮ ಅಕಿಂಚನ್ಯ ಮತ್ತು ಉತ್ತಮ ಬ್ರಹ್ಮಚರ್ಯವೆಂಬ ಹತ್ತು ತತ್ವಗಳನ್ನು ಹತ್ತು ದಿನಗಳ ಪರ್ಯಂತ ಕಾಲ-ಭಕ್ತಿನಿಷ್ಠೆಗಳಿಂದ ಆಚರಿಸುತ್ತಾರೆ.

ಈ ಪರ್ವವನ್ನು ಬಸದಿಗಳಲ್ಲಿ ಶ್ರಾವಕರು ಸಾಮೂಹಿಕವಾಗಿ ಆಚರಿಸುತ್ತಾರೆ. ಭಾದ್ರಪದಮಾಸದ ಶುಕ್ಲಪಕ್ಷದ ಪಂಚಮಿಯಿಂದ ಮೊದಲ್ಗೊಂಡು ಚತುರ್ದಶಿಯವರೆಗೆ ದಶಲಕ್ಷಣ ಪರ್ವವನ್ನು ಆಚರಿಸುತ್ತಾರೆ. ಇದೇ ಈ ಮಾಸದಲ್ಲಿ ಪುಷ್ಪಾಂಜಲಿ, ಸುಗಂಧ ದಶಮಿ, ರತ್ನತ್ರಯ, ಷೋಡಶ ಭಾವನೆ- ಮುಂತಾದ ಆಚರಣೆಗಳೂ ಇರುವುದರಿಂದ ಈ ಮಾಸವನ್ನು ಹಬ್ಬಗಳ ರಾಜನೆಂದೂ ಕರೆಯುತ್ತಾರೆ. ಶ್ರಾವಣ ಮಾಸವು ಮಳೆಗಾಲವಾದ ಕಾರಣ ಹಿಂದಿನ ಕಾಲದಲ್ಲಿ ಓಡಾಟ ರಹಿತಕಾಲವಾಗಿದ್ದರಿಂದ ವ್ಯವಸಾಯ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ಶ್ರಾವಕರು ಸ್ವಲ್ಪಮಟ್ಟಿಗೆ ವಿರಾಮದಲ್ಲಿರುತ್ತಿದ್ದರು. ಜೈನಮುನಿಗಳು ಮಳೆಗಾಲದ ನಾಲ್ಕು ತಿಂಗಳು ಸಂಚರಿಸಬಾರದೆನ್ನುವ ನಿಯಮವೂ ಇರುವುದರಿಂದ ಚಾತುರ್ಮಾಸ ವ್ರತವನ್ನು ಕೈಗೊಂಡು ಅವರು ಬಸದಿಯಲ್ಲಿ ವಾಸವಿರುತ್ತಿದ್ದರು. ಅವರಿಂದ ಧರ್ಮೋಪದೇಶವನ್ನು ಆಲಿಸಲು ಶ್ರಾವಕರಿಗೆ ಅನುಕೂಲವಾಗಿರುತ್ತದೆ. ಈ ಪರ್ವದ ಆಚರಣೆಯನ್ನು ಬಸದಿಗಳಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸುವುದನ್ನು ಕಾಣಬಹುದು.

ಹತ್ತು ದಿನಗಳ ಪರ್ಯಂತ ಶ್ರಾವಕರು ಪ್ರಾತಃಕಾಲದಲ್ಲಿ ಬಸದಿಗೆ ತೆರಳಿಗೆ ವಿಶೇಷ ಪೂಜೆ, ಅಭಿಷೇಕಗಳಲ್ಲಿ ಭಾಗಿಗಳಾಗುತ್ತಾರೆ. ಬಸದಿಯಲ್ಲಿ ಮುನಿಗಳು ನೆಲೆಸಿದ್ದರೆ ಅವರಿಗೆ ಭಕ್ತಿಯಿಂದ ಆಹಾರದಾನ ಮಾಡುತ್ತಾರೆ. ಸಾಯಂಕಾಲದ ಸಮಯದಲ್ಲಿ ಪುನಃ ಬಸದಿಯಲ್ಲಿ ಸಾಮೂಹಿಕವಾಗಿ

ಅಷ್ಟಮಂಗಲ ಪೂಜೆ ನೆರವೇರಿಸುತ್ತಾರೆ. ತರುವಾಯ ಪಂಚನಮಸ್ಕಾರ ಪಠಣ, ಆತ್ಮಧ್ಯಾನದಲ್ಲಿ ನಿರತರಾಗುತ್ತಾರೆ. ಆ ದಿನದಲ್ಲಿ ಪಾಲಿಸಬೇಕಾದ ಧರ್ಮತತ್ವದ ಚಿಂತನೆಯಲ್ಲಿ ತೊಡಗುತ್ತಾರೆ. ಆ ಸಂದರ್ಭದಲ್ಲಿ ಮುನಿಗಳು ಬಸದಿಯಲ್ಲಿ ಚಾತುರ್ಮಾಸದಲ್ಲಿದ್ದರೆ, ಆ ದಿನದ ತತ್ವಾಚರಣೆಯ ಬಗ್ಗೆ ಸಾದ್ಯಂತವಾಗಿ ವಿವರಿಸುತ್ತಾರೆ. ಇಲ್ಲವೇ ವಿದ್ವಾಂಸರನ್ನು ಆಮಂತ್ರಿಸಿ ಧಾರ್ಮಿಕ ಸಭೆಯನ್ನು ನಡೆಸಿ ಸಂಬಂಧಪಟ್ಟ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಸಂದೇಹಗಳನ್ನು ಪರಿಹರಿಸಿಕೊಳ್ಳುತ್ತಾರೆ. ಹತ್ತು ದಿನಗಳ ಕಾಲವೂ ಕೆಲವು ಶ್ರಾವಕರು ಉಪವಾಸ ವ್ರತವನ್ನು ಕೈಗೊಳ್ಳುತ್ತಾರೆ ಮತ್ತೆ ಕೆಲವರು ಏಕಭುಕ್ತ ದ್ರವಪದಾರ್ಥಸೇವನೆ ಮುಂತಾದ ವ್ರತವನ್ನು ಅನುಸರಿಸುತ್ತಾರೆ.

ಜೈನಶಾಸ್ತ್ರ ಗ್ರಂಥಗಳು ಈ ಹತ್ತೂ ತತ್ವಗಳ ಸ್ವರೂಪವನ್ನು ಹೀಗೆ ವಿವರಿಸುತ್ತದೆ: "ದಶಲಕ್ಷಣ ಧರ್ಮವು ಪರವಸ್ತುವಲ್ಲ; ಅದು ಆತ್ಮನ ಸ್ವಭಾವವಾಗಿದೆ. ಕ್ರೋಧ, ಮಾನ ಕಷಾಯವೇ ಮೊದಲಾದ ಕರ್ಮಜನಿತ ಉಪಾಧಿಗಳು ಇಲ್ಲದಂತಾದಾಗ, ಆತ್ಮನ ಯಥಾರ್ಥ ಸ್ವರೂಪವು ಪ್ರಕಟಗೊಳ್ಳುತ್ತದೆ. ಕ್ರೋಧವನ್ನು ಕ್ಷಮೆಯ ಮೂಲಕ ಗೆಲ್ಲಬಹುದು. ಅಭಿಮಾನವನ್ನು ಮಾರ್ದವದಿಂದ (ಮೃದು ಸ್ವಭಾವ) ನಾಶಪಡಿಸಬಹುದು. ಕಪಟವಿಲ್ಲದ ಆರ್ಜವ, ಲೋಭ ನಾಶವಾದಾಗ ಶೌಚಗುಣ, ಅಸತ್ಯ ಕಳೆದುಕೊಂಡಾಗ ಸತ್ಯ, ಕಷಾಯಗಳು ನಷ್ಟವಾದರೆ ಸಂಯಮ, ಇಚ್ಛೆ ಇಲ್ಲದಿದ್ದಲ್ಲಿ ತಪ, ಮಮತ್ವವು ದೂರವಾದಾಗ ತ್ಯಾಗ, ಪರದ್ರವ್ಯದ ಮೇಲಿನ ಆಸೆಯನ್ನು ಪೂರ್ತಿಯಾಗಿ ತ್ಯಜಿಸಿದಾಗ ಆಕಿಂಜನ್ಯ, ವೇದನೀಯ ಕರ್ಮದ ಅಭಾವವಾಗುವುದರಿಂದ ಬ್ರಹ್ಮಚರ್ಯದ ಪಾಲನೆ ಸಾಧ್ಯವಾಗುತ್ತದೆ. ಈ ಧರ್ಮದ ಸಂಪತ್ತನ್ನು ಕಳ್ಳರು ಕದಿಯಲಾರರು. ರಾಜನು ಬಲಾತ್ಕಾರದಿಂದ ಕಸಿದುಕೊಳ್ಳಲಾರ. ಯಾರಿಂದಲೂ ಈ ಧರ್ಮವನ್ನು ಕೆಡಿಸಲು ಸಾಧ್ಯವಿಲ್ಲ. ಈ ಧರ್ಮಪಾಲನೆ ಬಹು ಸುಲಭವಾದುದು. ಬಾಲಕ, ವೃದ್ಧ, ತರುಣ, ರೋಗಿ, ನಿರೋಗಿ ಎಲ್ಲರೂ ಸಹಜವಾಗಿ ಧಾರಣೆಮಾಡಿಕೊಂಡು ದುಃಖ, ಅಪಮಾನ, ಕ್ಲೇಶ, ಭಯ, ವಿಷಾದ, ಕಲಹ ಮೊದಲಾದವುಗಳನ್ನು ಗೆಲ್ಲಬಹುದು. ಹಾಗೂ ಅತ್ಯಂತ ಸುಲಭವಾಗಿ ಸಮ್ಯಗ್ ದರ್ಶನ, ಜ್ಞಾನ, ಚಾರಿತ್ರ್ಯಗಳನ್ನು ಸಾಧಿಸಿ ಮೋಕ್ಷವನ್ನು ಪಡೆಯಬಹುದೆಂದು ಹೇಳಲಾಗಿದೆ. ಜೈನಧರ್ಮದ ಸಮಗ್ರ ತತ್ವಗಳು ಈ ಪರ್ವದ ಆಚರಣೆಯಲ್ಲಿ ಅಡಕವಾಗಿರುವುದರಿಂದ ಜೈನಮತೀಯರಿಗೆ ಅತ್ಯಂತ ಮಹತ್ವದ ಪರ್ವವಾಗಿರುವುದು ಸಹಜವೇ ಆಗಿದೆ.

ನವರಾತ್ರಿ : ಧಾರ್ಮಿಕ ಹಿನ್ನೆಲೆಯಲ್ಲಿ ಜೈನಮತೀಯರು ನವರಾತ್ರಿ ಹಬ್ಬವನ್ನು ಆಚರಿಸುತ್ತಾರೆ. ಆಶ್ವೀಜಮಾಸದ ಶುಕ್ಲ ಪಾಡ್ಯದಿಂದ ದಶಮಿಯವರೆಗೆ ಆಚರಿಸುವ ಈ ಹಬ್ಬದಲ್ಲಿ ವೃಷಭದೇವನ

ಮಗನಾದ ಭರತ ಚಕ್ರವರ್ತಿಯ ದಿಗ್ವಿಜಯ ಯಾತ್ರೆಯನ್ನು ಸ್ಮರಿಸಲಾಗುತ್ತಿದೆ.[45] ಈ ದಿನಗಳಲ್ಲಿ ಎಲ್ಲಾ ಬಸದಿಗಳಲ್ಲೂ ವಿಶೇಷ ಪೂಜೆ, ಉತ್ಸವಗಳು ನೆರವೇರುತ್ತವೆ. ಜೊತೆಗೆ ಶ್ರಾವಕರು ಈ ಅವಧಿಯಲ್ಲಿ ತಮ್ಮ ತಮ್ಮ ಕುಲದೇವತೆಗಳಾದ ಬ್ರಹ್ಮಯಕ್ಷ, ಜ್ವಾಲಾಮಾಲಿನೀ, ಪದ್ಮಾವತೀ, ಕುಷ್ಮಾಂಡಿನೀದೇವಿ ಮೊದಲಾದ ಯಕ್ಷಯಕ್ಷಿಯರ ಪೂಜೆಯನ್ನು ಮಾಡುವುದರಿಂದ ತಮ್ಮ ಇಷ್ಟಾರ್ಥಗಳು ನೆರವೇರುತ್ತವೆ ಎಂಬ ನಂಬಿಕೆಯಿಂದ ಜೈನ ಗೃಹಸ್ಥರು ವಿಶೇಷವಾಗಿ ಯಕ್ಷಿಯರನ್ನು ಪೂಜಿಸುತ್ತಾರೆ. ಜೈನ ಸ್ತ್ರೀಯರು ಅರ್ಚನೆ, ನೋಂಪಿ ವ್ರತಗಳನ್ನು ನಡೆಸಿ ಬಾಗಿನವನ್ನು ನೀಡುತ್ತಾರೆ.

ನವರಾತ್ರಿಯ ಒಂಭತ್ತು ದಿನಗಳಲ್ಲಿ ಜೈನರು ವಿಶೇಷವಾಗಿ ಕೆಲವು ದೇವತೆಗಳನ್ನು ಆ ದಿನದಂದೇ ಆಚರಣೆ ಮಾಡುವ ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ಪ್ರತಿಪದಿಯ ದಿನ ಚಕ್ರಧರೆ ದ್ವಿತೀಯದಂದು ಕೂಷ್ಮಾಂಡಿನಿಯನ್ನು ಹೀಗೆ ಮುಂದುವರಿದು ಬಹುಭಾಗ್ಯವಂತೆಯನ್ನೂ ಅರ್ಚನೆ ಮಾಡುವವರೆಗೆ ಧಾರ್ಮಿಕ ಸಾಹಿತ್ಯದಲ್ಲಿ ಈ ಕೆಳಗಿನ ಉಲ್ಲೇಖ ಕಂಡುಬರುತ್ತದೆ.

ಪ್ರತಿಪದದಿ ಚಕ್ರಧರೆ ದ್ವಿತಯೊಳು ಕೂಷ್ಮಾಂಡಿ
ತೃತಿಯೋಳು ಶ್ರೀಗೌರಿ ಚತುರ್ಥಿಯಲಿ ಕಾಳೀ
ನುತಚರಿತನಂತಮತಿ ಪಂಚಮಿಯ ದಿನದಂದು
ಕ್ಷಿತನುತೆಯು ಜ್ವಾಲಿನಿಯು ಷಷ್ಠದಿನದಿ
ಎಸೆವ ಸಪ್ತಮಿ ದಿನದಿ ಅಸಮಗುಣೆ ಪದ್ಮಿಣೆಯು
ಶಶಿವದನೆ ಬಹುರೂಪಿಣೀ ಅಷ್ಟಮಿ ದಿನದಿ
ಲೇಸೆನಿಪ ನವಮಿ ದಿನ ಸುದತಿ ಸಿದ್ದಾಯಿನಿಯು
ದಸಮಿಯಲಿ ಭಾರತಿಯು ಬಹುಭಾಗ್ಯಯುತೆಯೂ

ಅಂದರೆ ಮೊದಲನೇ ದಿನ ಚಕ್ರೇಶ್ವರಿ ದೇವಿ, ಎರಡನೇ ದಿನ ಕೂಷ್ಮಾಂಡಿನಿ ದೇವಿ, ಮೂರನೇ ದಿನ ಶ್ರೀಗೌರಿ, ನಾಲ್ಕನೇ ದಿನ ಮಹಾಕಾಳಿ, ಐದನೇ ದಿನ ಅನಂತಮತಿ ದೇವಿ, ಆರನೇ ದಿನ ಜ್ವಾಲಾಮಾಲಿನಿ ದೇವಿ, ಏಳನೇ ದಿನ ಪದ್ಮಾವತಿ ದೇವಿ, ಎಂಟನೇ ದಿನ ಶ್ರೀ ಬಹುರೂಪಿಣೀ ದೇವಿ, ಒಂಭತ್ತನೇ ದಿನ ಸಿದ್ದಾಯಿನಿದೇವಿ ಮತ್ತು ಕೊನೆಯ ಹತ್ತನೇ ದಿನದಂದು ಸರಸ್ವತಿ ದೇವಿಯರನ್ನು ಅಲಂಕಾರ ಮಾಡಿ ಪೂಜೆ ಮತ್ತು ಆರತಿ ಮಾಡಬೇಕು.

ನವರಾತ್ರಿಯ ಅಷ್ಟಮಿಯು ಜೈನರಲ್ಲಿ ಜೀವದಯಾಷ್ಟಮಿಯೆಂದು ಪ್ರಸಿದ್ಧವಾಗಿದೆ. ಜೀವಹಿಂಸೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆನ್ನುವುದು ಈ ಆಚರಣೆಯ ಉದ್ದೇಶ. ಕೆಲವು ಸ್ತ್ರೀಯರು ಜೀವದಯಾಷ್ಟಮಿ ನೋಂಪಿಯನ್ನೂ ಆಚರಿಸುತ್ತಾರೆ. ಜೀವ ದಯಾಷ್ಟಮಿಯ

ಮಹತ್ವವನ್ನು ಸಾರುವ ಯಶೋಧರ ಚರಿತ್ರೆ ಮುಂತಾದ ಗ್ರಂಥಗಳನ್ನು ಅಂದು ಪಠಣ ಮಾಡುತ್ತಾರೆ.

ನವಮಿಯಂದು ಜಿನಶಾಸನದ (ಧರ್ಮ) ಸಂರಕ್ಷಣೆಯನ್ನು ಮಾಡುತ್ತಿರುವ ಯಕ್ಷಯಕ್ಷಿ ದೇವತೆಗಳ ಆಯುಧಗಳನ್ನು ಪೂಜಿಸುವ ಪದ್ಧತಿ ಇದೆ. ಅಂದು ಬಸದಿಯಲ್ಲಿರುವ ಯಕ್ಷ ಯಕ್ಷಿಯರಿಗೆ ಷೋಡಶೋಪಚಾರ ಪೂಜೆಗಳು ನಡೆಯುತ್ತವೆ.

ದೀಪಾವಳಿ : ವರ್ಧಮಾನ ಮಹಾವೀರನು ಮುಕ್ತಿ ಪಡೆದ ನೆನಪಿಗಾಗಿ ದೀಪಾವಳಿ ಹಬ್ಬವನ್ನು ಆಚರಿಸುತ್ತಾರೆ. ಇದನ್ನು ಮಹಾವೀರ ನಿರ್ವಾಣ ಮಹೋತ್ಸವ ಅಥವಾ ವೀರನಿರ್ಮಾಣಪರ್ವವೆಂದೂ ಕರೆಯುತ್ತಾರೆ.[46] ಕಾರ್ತಿಕ ಬಹುಳ ಚತುರ್ದಶಿ ರಾತ್ರಿ ಕೊನೆಯಾಗುವಾಗ ಸ್ವಾತಿ ನಕ್ಷತ್ರದಲ್ಲಿ ಮಹಾವೀರನ ನಿರ್ವಾಣವಾಗುತ್ತದೆ. ಶಾಲಿವಾಹನ ಶಕೆಯ ಮಾನಗಳ ಗಣನೆಯ ಆಧಾರದಂತೆ ಈ ಸಮಯವು ಅಶ್ವೀಜ ಬಹುಳ ಚತುರ್ದಶಿ ಕಳೆದು ಬೆಳಗಿನ ಜಾವದೊಡನೆ ಸರಿಹೊಂದುತ್ತದೆ. ಸುಮಾರು ಮೂವತ್ತು ವರ್ಷಗಳ ಕಾಲ ತನ್ನ ಜ್ಞಾನಜ್ಯೋತಿಯಿಂದ ಸತ್ಯ, ಅಹಿಂಸೆ ದಿವ್ಯ ಸಂದೇಶವನ್ನು ಜನತೆಗೆ ಸಾರಿ, ಲೋಕದ ಅಜ್ಞಾನವೆಂಬ ಕತ್ತಲನ್ನು ನಿವಾರಣೆ ಮಾಡಿದ ಮಹಾವೀರ ತೀರ್ಥಂಕರನ ಸ್ಮರಣೆಯ ಅಂಗವಾಗಿ ದೀಪಗಳನ್ನು ಬೆಳಗಿಸಿ ಈ ಹಬ್ಬವನ್ನು ಆಚರಿಸುತ್ತಾರೆ.

ಶ್ರಾವಕರು ಬಸದಿಗಳಲ್ಲಿ ಮಹಾವೀರ ತೀರ್ಥಂಕರಮೂರ್ತಿಗೆ ಪಂಚಾಮೃತ ಅಭಿಷೇಕ, ಪೂಜೆಗಳನ್ನು ನೆರವೇರಿಸುತ್ತಾರೆ. ಚತುರ್ವಿಧ ದಾನ, ಉತ್ಸವ, ಮೆರವಣಿಗೆಗಳನ್ನು ಮಾಡಿ ತೀರ್ಥಂಕರ ಉಪದೇಶವನ್ನು ಪಠಣ ಮತ್ತು ಮನನ ಮಾಡುತ್ತಾರೆ. ವ್ರತದ ದಿನ ಉಪವಾಸ, ಏಕಭುಕ್ತ ವ್ರತವನ್ನು ಕೈಗೊಂಡು ಅಹಿಂಸಾ ವ್ರತವನ್ನು ಕಟ್ಟುನಿಟ್ಟಾಗಿ ಆಚರಿಸಲು ಪ್ರಯತ್ನಿಸುತ್ತಾರೆ.

ಜಿನರಾತ್ರಿ : ವೃಷಭನಾಥ ತೀರ್ಥಂಕರರು ಮಾಘಮಾಸ ಬಹುಳ ಚತುರ್ದಶಿಯಂದು ನಿರ್ವಾಣ ಹೊಂದಿದರು. ಅಂದು ಮುಂಜಾನೆ ಸೂರ್ಯೋದಯದ ಸಮಯದಲ್ಲಿ ಅವರು ದೇಹವನ್ನು ತ್ಯಜಿಸಿ ಜೀವನ ಮುಕ್ತಿಯನ್ನು ಹೊಂದಿದ ಮಹಿಮೆಯನ್ನು ಕೊಂಡಾಡಲು ಜೈನರು ಅಂದು ಮೊದಲ್ಗೊಂಡು ಮಾಘಮಾಸ ಚತುರ್ದಶಿಯನ್ನು ಜಿನರಾತ್ರಿಯೆಂದು ಆಚರಿಸುತ್ತಾರೆ.[47] ಆ ದಿನ ವೃಷಭನಾಥನ ಶರೀರದ ಅವಶೇಷಗಳನ್ನು ದಹನಮಾಡಿದುದರ ಪ್ರತೀಕವಾಗಿ ಹೋಮವನ್ನು ನೆರವೇರಿಸಿ ಆತನ ಚರಿತ್ರೆಯನ್ನು ಮನನ ಮಾಡುತ್ತಾರೆ. ಬಸದಿಯಲ್ಲಿ ವೃಷಭನಾಥನ ಬಿಂಬಕ್ಕೆ ಅಭಿಷೇಕ ಪೂಜೆ, ನೆರವೇರಿಸುತ್ತಾರೆ. ಉತ್ಸವಗಳನ್ನು ಕೆಲವರು ಚತುರ್ವಿಧ ದಾನಗಳನ್ನೂ ಶಾಸ್ತ್ರಗ್ರಂಥಪಠಣ, ವ್ರತಾಚರಣೆಗಳನ್ನೂ ನಡೆಸುತ್ತಾರೆ.[48]

ಸುಗಂಧ ದಶಮೀಪರ್ವ : ಭಾದ್ರಪದ ಶುದ್ಧ ದಶಮಿಯ ದಿನ ಸುಗಂಧ ದಶಮೀಪರ್ವವನ್ನು ಆಚರಿಸುತ್ತಾರೆ. ಈ ದಿನ ಧರ್ಮಗಳಲ್ಲಿನ "ಸಂಯಮ" ಎಂಬ ಧರ್ಮದ ಆಚರಣೆಗೆ ಮಹತ್ವ ನೀಡಲಾಗುತ್ತದೆ. ಅಂದು ಜಿನಮಂದಿರಗಳಲ್ಲಿ ಸುಗಂಧಮಯವಾದ ಧೂಪ, ಧೂಮಗಳಿಂದ ವೈಭವದ ಪೂಜೆಯನ್ನು ನೆರವೇರಿಸುತ್ತಾರೆ. ಈ ದಿನದಂದು ಉತ್ತರಭಾರತದ ಪ್ರಮುಖ ನಗರಗಳಲ್ಲಿ ದೊಡ್ಡ ಉತ್ಸವವಾಗಿ ಇದನ್ನು ಆಚರಿಸುವುದನ್ನು ಕಾಣಬಹುದು.[49]

ಅನಂತಚತುರ್ದಶಿ ವ್ರತ : ಭಾದ್ರಪದ ಶುದ್ಧ ತ್ರಯೋದಶಿಯಂದು ಅನಂತಚತುರ್ದಶಿ ವ್ರತವನ್ನು ಆಚರಿಸಲಾಗುತ್ತದೆ. ಅಂದರೆ ಗೌರೀ ನೋಂಪಿಯ ಹತ್ತು ದಿನಗಳ ನಂತರ ಈ ಹಬ್ಬ ಬರುತ್ತದೆ. ಈ ದಿನ ದಶಲಕ್ಷಣ ಪರ್ವದಲ್ಲಿ ಅಂತರ್ಗತವಾದ ಅಕಿಂಚಿನ್ಯ ಎಂಬ ಧರ್ಮದ ಆಚರಣೆಯೇ ಪ್ರಮುಖವಾಗಿರುತ್ತದೆ. ವ್ರತದಂದು ಆದಿತೀರ್ಥಂಕರನನ್ನು ಮೊದಲ್ಗೊಂಡು 14ನೆಯ ತೀರ್ಥಂಕರನಾದ ಅನಂತ ತೀರ್ಥಂಕರರ ಪೂಜೆಯನ್ನು ತುಂಬ ವೈಭವದಿಂದ ಆಚರಿಸುತ್ತಾರೆ. ಅನಂತ ಸುಖಕ್ಕೆ ಕಾರಣವಾದ ಅನಂತ ತೀರ್ಥಂಕರರ ಪೂಜೆಯೇ ಪ್ರಮುಖವಾಗಿರುವ ಈ ವ್ರತ. ಅನಂತಪದ್ಮನಾಭ ವ್ರತವನ್ನು ಅಥವಾ ಅನಂತ ಚತುರ್ದಶಿಯೆಂದು ಆಚರಿಸುತ್ತಾರೆ.[50] ಹಿಂದೂಗಳಲ್ಲಿ ಇದು ಅನಂತ ಪದ್ಮನಾಭ ವ್ರತವೆಂಬ ಹೆಸರಿನಿಂದ ಆಚರಣೆಯಲ್ಲಿದೆ. ಜಿನಮಂದಿರಗಳಲ್ಲಿ ಈ ಹಬ್ಬದ ದಿನದಂದು ಜಿನಮೂರ್ತಿಗೆ ಪಂಚಾಮೃತಾದಿ ಅಭಿಷೇಕಗಳನ್ನು ಮಾಡಿ ಹದಿನಾಲ್ಕು ಬಗೆಯ ಹೂವು, ಹದಿನಾಲ್ಕು ಬಗೆಯ ಫಲ, ಚರುಗಳಿಂದ ಪೂಜಿಸಿ ಅರ್ಚನೆ ಮಾಡುತ್ತಾರೆ. ಕೆಲವರು ಅನಂತನ ದಾರವನ್ನು ಕೈಗೆ ಧರಿಸುತ್ತಾರೆ. ಯಥಾಶಕ್ತಿಯಿಂದ ಉಪವಾಸ ವ್ರತವನ್ನು ಆಚರಿಸಿ ಷಡ್‌ರಸಗಳನ್ನು ತ್ಯಜಿಸಿ ಮಿತಾಹಾರದಲ್ಲಿದ್ದು ವ್ರತ ಆಚರಿಸುವುದು ಕಂಡುಬರುತ್ತದೆ.

ರತ್ನತ್ರಯ ಪರ್ವ : ರತ್ನತ್ರಯ ಪರ್ವವು ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ ಮತ್ತು ಸಮ್ಯಗ್ ಚಾರಿತ್ರ್ಯಗಳೆಂಬ ಮೂರು ರತ್ನಗಳನ್ನು ಭಾವಿಸಿ ಭಾದ್ರಪದ ಶುದ್ಧ ತ್ರಯೋದಶಿಯಿಂದ ಪೌರ್ಣಮಿಯವರೆಗಿನ ಮೂರು ದಿನಗಳಲ್ಲಿ ಪ್ರತಿದಿನ ಒಂದೊಂದು ರತ್ನವನ್ನು ಅರ್ಚಿಸುವ ಪದ್ಧತಿ ಕಂಡುಬರುತ್ತದೆ.[51] ತ್ರಯೋದಶಿಯ ದಿನ ಸಮ್ಯಗ್ ದರ್ಶನ, ಚತುರ್ದಶಿ ದಿನ ಸಮ್ಯಗ್ ಜ್ಞಾನ, ಪೌರ್ಣಮಿಯಂದು ಸಮ್ಯಗ್ ಚಾರಿತ್ರ್ಯಗಳೆಂದು ಭಾವಿಸಿ ಆ ದಿನಗಳಲ್ಲಿ ಬಸದಿಯಲ್ಲಿ ವಿಶೇಷ ಅಭಿಷೇಕಗಳನ್ನು ಪೂಜೆಗಳನ್ನು ನೆರವೇರಿಸಿ ಉಪವಾಸ ವ್ರತಾಚರಣೆಯನ್ನು ಆಚರಣೆಯಲ್ಲಿ ಇಟ್ಟುಕೊಂಡಿದ್ದಾರೆ. ಈ ವ್ರತವು ಸಮ್ಯಗ್ ಭಾವಕ್ಕೆ ಪೂರಕವಾಗಿರುವುದರಿಂದ ಆತ್ಮ ಶುದ್ಧಿಯ ಸಾಧನವಾಗಿದೆ ಎಂದು ನಂಬಲಾಗಿದೆ.

ಷೋಡಶ ಭಾವನಾ ಪರ್ವ : ಷೋಡಶ ಭಾವನಾ ಪರ್ವವನ್ನು ಭಾದ್ರಪದ, ಮಾಘ ಮತ್ತು ಚೈತ್ರ ಮಾಸಗಳ ಕೃಷ್ಣಪಕ್ಷದ ಮುಂದಿನ ಮಾಸಗಳ ಶುಕ್ಲಪಕ್ಷದ ಪಾಡ್ಯದವರೆಗೆ ಆಚರಿಸಬೇಕು. ಇದನ್ನೂ ವಿಶೇಷವಾಗಿ ಭಾದ್ರಪದ ಮಾಸದಲ್ಲಿ ಆಚರಿಸುವ ಸಂಪ್ರದಾಯವೇ ಹೆಚ್ಚು. ಈ ಪರ್ವದ ಆಚರಣೆಗೆ ಆಧಾರವಾಗಿರುವ ಷೋಡಶ ಕಾರಣಗಳನ್ನು ತಿಳಿಯಬಹುದು.

ಭಾದ್ರಪದ ಬಹುಳ ಪಾಡ್ಯ	ದರ್ಶನವಿಶುದ್ಧಿ
ಭಾದ್ರಪದ ಬಹುಳ ಬಿದಿಗೆ	ವಿನಯ ಸಂಪನ್ನತೆ
ಭಾದ್ರಪದ ಬಹುಳ ತದಿಗೆ	ಶೀಲವ್ರತೇಷ್ವನತೀಚಾರ
ಭಾದ್ರಪದ ಬಹುಳ ಚೌತಿ	ಅಭೀಕ್ಷ್ಣ ಜ್ಞಾನೋಪಯೋಗ
ಭಾದ್ರಪದ ಬಹುಳ ಪಂಚಮಿ	ಸಂವೇಗ
ಭಾದ್ರಪದ ಬಹುಳ ಷಷ್ಠಿ	ಶಕ್ತಿತಸ್ತ್ಯಾಗ
ಭಾದ್ರಪದ ಬಹುಳ ಸಪ್ತಮಿ	ತಪ
ಭಾದ್ರಪದ ಬಹುಳ ಅಷ್ಟಮಿ	ಸಾಧು ಸಮಾಧಿ
ಭಾದ್ರಪದ ಬಹುಳ ನವಮಿ	ವೈಯಾವೃತ್ಯ
ಭಾದ್ರಪದ ಬಹುಳ ದಶಮಿ	ಅರ್ಹದ್ಭಕ್ತಿ
ಭಾದ್ರಪದ ಬಹುಳ ಏಕಾದಶಿ	ಆಚಾರ್ಯಭಕ್ತಿ
ಭಾದ್ರಪದ ಬಹುಳ ದ್ವಾದಶಿ	ಬಹುಶ್ರುತಭಕ್ತಿ
ಭಾದ್ರಪದ ಬಹುಳ ತ್ರಯೋದಶಿ	ಪ್ರವಚನಭಕ್ತಿ
ಭಾದ್ರಪದ ಬಹುಳ ತ್ರಯೋದಶಿ	ಅವಶ್ಯಕಾಪರಿಹಾಣಿ
ಭಾದ್ರಪದ ಬಹುಳ ಅಮಾವಾಸ್ಯೆ	ಮಾರ್ಗಪ್ರಭಾವನಾ
ಆಶ್ವೀಜ ಶುದ್ಧಪಾಡ್ಯ	ಪ್ರವಚನವಾತ್ಸಲ್ಯ

ಈ ಮೇಲಿನ ಕೋಷ್ಟಕದಲ್ಲಿ ಅಡಕ ಮಾಡಿರುವ ಷೋಡಶ ಭಾವನೆಗಳನ್ನು ವೃದ್ಧಿಗೊಳಿಸಲು ಅಭೀಪ್ಸೆಯಿಂದ ಜಿನ ಮೂರ್ತಿಗೆ ಪ್ರತಿದಿನವೂ ಅಭಿಷೇಕ, ಅಷ್ಟವಿದಾರ್ಚನೆ ಮೊದಲಾದ ಪೂಜೆಗಳನ್ನು ನೆರವೇರಿಸಿ ಏಕಭುಕ್ತರಾಗಿ ವ್ರತ ಆಚರಿಸುವುದು ಪದ್ಧತಿ.[52]

ಶ್ರುತಪೂಜೆ: "ಮೌಲಾದೌ ಪೂಜಯೇ ದೇವೀಂ, ಶ್ರವಣಾಂತೇ ವಿಸರ್ಜಯೇತ್" ಎಂಬಂತೆ ಆಶ್ವೀಜ ಮಾಸದಲ್ಲಿ ಬರುವ ಮೂಲಾ ನಕ್ಷತ್ರದ ಮೊದಲ ಭಾಗದಲ್ಲಿ ಶ್ರುತದೇವಿಯನ್ನು ಸ್ಥಾಪಿಸಿ, ಶ್ರವಣನಕ್ಷತ್ರದ ಅಂತಿಮಭಾಗದಲ್ಲಿ ವಿಸರ್ಜಿಸಬೇಕು. ಆ ದಿನ ಮನೆಯಲ್ಲಿರುವ ತಾಡಪತ್ರ ಮತ್ತು

ಪುಸ್ತಕಗಳನ್ನು ಒಂದು ಪೀಠದಲ್ಲಿಟ್ಟು ಅಷ್ಟವಿಧಾರ್ಚನಾದಿಗಳಿಂದ ಪೂಜಿಸಬೇಕು. ಆನಂತರ ಸರಸ್ವತೀ ಮೂಲಮಂತ್ರಗಳನ್ನು ಬಿಳಿ ಹೂವುಗಳ ಅರ್ಚನೆಯ ಮೂಲಕ ಉಚ್ಚರಿಸಿ ಜಪ ಮಾಡಬೇಕು. ಇದರಿಂದ ಮನೆಯಲ್ಲಿ ಮಕ್ಕಳಿಗೆ ವಿದ್ಯೆಯು ಬಂದು ವೃದ್ಧಿಸುತ್ತಾರೆಂಬ ನಂಬಿಕೆ ಇದೆ.[53]

ಜೀವದಯಾಷ್ಟಮಿಯವ್ರತ : ಜೀವದಯಾಷ್ಟಮಿವ್ರತದ ಮಹತ್ವವನ್ನು ತಿಳಿಸುವ ಹಲವಾರು ಕಾವ್ಯಗಳು ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಸಿದ್ಧಿಯಾಗಿವೆ. ಅವುಗಳಲ್ಲಿ ಕನ್ನಡದಲ್ಲಿ ಜನ್ನ ಕವಿಯಿಂದ ರಚಿತವಾದ ಯಶೋಧರ ಚರಿತೆ ವಿಶೇಷ ಪ್ರಚಾರದಲ್ಲಿದೆ. ರಾಮಪುರದ ದೊರೆಯಾಗಿದ್ದ ಮಾರಿದತ್ತನು ಚಂಡಮಾರಿದೇವಿಗೆ ಬಲಿಕೊಡಲು ಎಲ್ಲಾ ಜಾತಿಯ ಪ್ರಾಣಿಗಳ ಗಂಡು ಮತ್ತು ಹೆಣ್ಣುಗಳ ಜೋಡಿಯನ್ನು ಸಿದ್ಧಪಡಿಸುತ್ತಾನೆ. ಅಂತಹ ಬಲಿಗಾಗಿಯೇ ಅಭಯರುಚಿ ಮತ್ತು ಅಭಯಮತಿ ಎಂಬ ಅಣ್ಣ ತಂಗಿಯರನ್ನು ಎಳೆ ತರಿಸುತ್ತಾನೆ. ಆ ಚಿಕ್ಕ ವಯಸ್ಸಿನ ಮಕ್ಕಳು ಸ್ವಲ್ಪವೂ ಭಯಪಡದೆ, ಮಾರಿದತ್ತನಿಗೆ ಧರ್ಮೋಪದೇಶವನ್ನು ಮಾಡಿ, ಅವನ ಮನಸ್ಸನ್ನು ಅಹಿಂಸಾಧರ್ಮದತ್ತ ಸೆಳೆದರು. ಅಂದಿನಿಂದ ಅವನು ಚಂಡಮಾರಿಗೆ ಬಲಿ ನೀಡುವುದನ್ನು ಬಿಟ್ಟು, ಅಹಿಂಸಾದಿ ವ್ರತಗಳನ್ನು ಆಚರಿಸಲು ಮೊದಲಿಟ್ಟನು. ಆ ದಿನವು ಅಶ್ವೀಜಶುದ್ಧ ಅಷ್ಟಮಿಯ ದಿನವಾಗಿದ್ದು, ಅದನ್ನು "ಜೀವದಯಾಷ್ಟಮಿ" ಎಂಬ ಹೆಸರಿನಿಂದ ವ್ರತವನ್ನು ಆಚರಿಸತೊಡಗಿದನು.[54]

ಸಂಕ್ರಾಂತಿ : ಜೈನ ಸಿದ್ಧಾಂತದ ದೃಷ್ಟಿಯಿಂದ ಈ ಹಬ್ಬದ ಆಚರಣೆಗೆ ವಿಶೇಷ ಮಹತ್ವವೇನೂ ಇಲ್ಲ. ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸಿದ ದಿನವನ್ನು ಸಂಕ್ರಾಂತಿ ಹಬ್ಬವನ್ನಾಗಿ ಆಚರಿಸುತ್ತಾರೆ. ಇದು ಸಾಮಾನ್ಯವಾಗಿ ಪುಷ್ಯ ಬಹುಳದಲ್ಲಿ ಬೀಳುತ್ತವೆ. ಪ್ರತಿವರ್ಷ ಜನವರಿ ಹದಿನಾಲ್ಕು ಅಥವಾ ಹದಿನೈದನೇ ದಿನದಂದು ಬರುತ್ತದೆ. ಇದನ್ನು ಉತ್ತರಾಯಣ ಪುಣ್ಯಕಾಲವೆಂದೂ ಹೇಳುತ್ತಾರೆ. ಈ ಹಬ್ಬದಲ್ಲಿ ಎಳ್ಳು ಮೊದಲಾದ ವಸ್ತುಗಳನ್ನು ಮನೆ ಮನೆಗೆ ಆಡಂಬರದಿಂದ ಬೀರುವ ಸಂಪ್ರದಾಯವಿದೆ. ಈ ದಿನ ಎಳ್ಳು-ಬೆಲ್ಲ ದಾನಮಾಡಿದರೆ ಅಷ್ಟು ಒಳ್ಳೆಯದೆಂಬ ನಂಬಿಕೆ ಇದೆ. ಸೂರ್ಯಾರ್ಘ್ಯ, ನದೀಸ್ನಾನ ಮೊದಲಾದವುಗಳಿಗೆ ವಿಶೇಷ ಗಮನ ನೀಡುತ್ತಾರೆ.

> **ಸೂರ್ಯಾರ್ಘ್ಯೋ ಗ್ರಹಣಸ್ನಾನಂ, ಸಂಕ್ರಾಂತೇ ದ್ರವಿಣ ವ್ಯಯಃ ।**
> **ಸಂಧ್ಯಾಸೇವಾಗ್ನಿ ಸತ್ಕಾರೋ, ದೇಹ ಗೇಹಾರ್ಚನಾ ವಿಧಿಃ ॥**
> **ಗೋಪೃಷ್ಠಾಂತ ನಮಸ್ಕಾರ ಸ್ತನ್ಮೂತ್ರಸ್ಯ ನಿಷೇವಣಂ ।**

ರತ್ನವಾಹನ ಭೂವೃಕ್ಷ ಶಸ್ತ್ರ ಶೈಲಾದಿ ಸೇವನಂ ॥

ಇದರ ಪ್ರಕಾರ ಸೂರ್ಯನಿಗೆ ಅರ್ಘ್ಯ ಕೊಡುವುದು, ಗ್ರಹಣದಲ್ಲಿ ನದೀ ಸ್ನಾನ ಮಾಡುವುದು ಮೊದಲಾದುವುದನ್ನು ಲೋಕಮೂಢವೆಂದು ಹೇಳಿ ನಿಷೇಧಿಸಿದ್ದಾರೆ. ಆದುದರಿಂದ ಇವೇ ಪ್ರಧಾನವಾಗಿರುವ ಈ ಸಂಕ್ರಾಂತಿ ಹಬ್ಬದ ಆಚರಣೆ ಜೈನರಿಗೆ ನಿಷಿದ್ಧ. ಆದರೂ ಸ್ಥಾನಿಕ ಸಂಪ್ರದಾಯದ ಬಹುಮುಖಿ ಸಮಾಜದ ಒತ್ತಡಕ್ಕೆ ಮಣಿದು ಈ ಆಚರಣೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ.[55]

ಸ್ಥಳೀಯ ಆಚರಣೆಗಳು : ಜೈನರು ನಿತ್ಯಪೂಜೆ, ನೈಮಿತ್ತಿಕಪೂಜೆ ಮತ್ತು ವಿಶೇಷ ಪರ್ವಗಳ ಹೊರತಾಗಿ, ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಕೆಲವೊಂದು ಮಹತ್ತ್ವದ ಆಚರಣೆಗಳನ್ನು ನಡೆಸುತ್ತಾರೆ. ಶ್ರಾವಕನು ಸೇವಾರೂಪದಲ್ಲಿ ಇಂಥ ಆಚರಣೆಗಳನ್ನು ನಡೆಸುವುದು ಸಾಮಾನ್ಯವಾಗಿ ಕಂಡುಬರುತ್ತದೆ ಅಥವಾ ತನ್ನ ಇಷ್ಟಾರ್ಥ ಪೂರೈಕೆಗಾಗಿ ಅಥವಾ ಸಂತೃಪ್ತಿಗಾಗಿಯೂ ನಡೆಸುತ್ತಾರೆ. ಮನೆಯಲ್ಲಿ ಸಾವು ಸಂಭವಿಸಿದಾಗ, ಸೂತಕ ಕಳೆದ ಬಳಿಕ, ಆ ಮನೆಯವರು ತಮಗಾದ ದುಃಖವನ್ನು ಮರೆಯಲು ಮತ್ತು ಸತ್ತವನ ದೇಹಸಂಸ್ಕಾರಗಳಿಂದ, ತಮ್ಮ ಆತ್ಮನಿಗೆ ಉಂಟಾದ ದೋಷಗಳನ್ನು ನಿವಾರಿಸಿಕೊಳ್ಳಲು ಬಸದಿಯಲ್ಲಿ ಅಭಿಷೇಕ, ಸಂಘಸಂತರ್ಪಣೆ, ಪೂಜೆ, ಶಾಸ್ತ್ರದಾನ ಮುಂತಾದವುಗಳನ್ನು ಮಾಡುತ್ತಾರೆ. ಕೆಲವು ಬಾರಿ ವಾಸಿಯಾಗದ ಕಾಯಿಲೆ ಬಂದಾಗಲೋ ಭೀಕರವಾದ ಕಷ್ಟಗಳು ಎದುರಾದಾಗಲೋ ಅವುಗಳ ಶಮನಕ್ಕಾಗಿ ಬಸದಿಗಳಲ್ಲಿ ಬೇರೆ ಬೇರೆ ರೀತಿಯ ಆರಾಧನೆ ಪೂಜೆಗಳನ್ನು ನಡೆಸುತ್ತಾರೆ. ಹೊಸದಾಗಿ ಜಿನಮಂದಿರಗಳನ್ನು ನಿರ್ಮಿಸಿದಾಗ, ಇಲ್ಲವೇ ಶಿಥಿಲವಾದ ಜಿನಮಂದಿರವನ್ನು ಜೀರ್ಣೋದ್ಧಾರಗೊಳಿಸಿದಾಗ ಆ ಊರಿನ ಶ್ರಾವಕರೆಲ್ಲರೂ ಸೇರಿ ಜಿನನ ಪ್ರತಿಷ್ಠಾಪನೆ ಪಂಚಕಲ್ಯಾಣ ಮಹೋತ್ಸವ ಅಥವಾ ಶುದ್ಧ ಸಂಪ್ರೋಕ್ಷಣೆಯನ್ನು ನಡೆಸುವ ಪದ್ಧತಿಯಿದೆ. ರತ್ನಾಕರನು ಒಂದೆಡೆ ಇಂಥ ಸಾಂದರ್ಭಿಕ ಆಚರಣೆಗಳನ್ನು ಪ್ರಸ್ತಾವಿಸುತ್ತ "...... ಭೂಕಂಪ, ಸೂರ್ಯ, ಚಂದ್ರಗ್ರಹಣ, ಕ್ಷಾಮ, ಗ್ರಹಗಳ ಪೀಡೆ, ವ್ಯಂತರ ದೇವತೆಗಳ ಭೀತಿ, ರೋಗದುಃಖ, ದುಷ್ಕಾಲಸ್ಥಿತಿ, ಗೋವುಗಳ ಸಮೂಹಕ್ಕೆ ಮನುಷ್ಯರಿಗೆ ಆನೆ ಕುದುರೆಗಳಿಗೆ ಕ್ರೂರವಾದ ರೋಗವು ಬಂದಾಗ, ದುಃಸ್ವಪ್ನವು ಬಿದ್ದಾಗ, ಇನ್ನೂ ಅನೇಕ ರೀತಿಯ ದುಃಖಗಳು ಬಂದಾಗ ಇವುಗಳ ನಿವಾರಣೆಗೆ ಮಹಾಭಿಷೇಕ–ಕಲಿಕುಂಡ ಯಂತ್ರಗಳ ಆರಾಧನೆ ಸಂಘಪೂಜಾ ಕಾರ್ಯಗಳನ್ನು ರಾಜನು ನಡೆಸಬೇಕೆಂದು ತಿಳಿಸುತ್ತಾನೆ".[56] ಶ್ರಾವಕನು ಯಾವುದೇ ಆರಾಧನೆ, ಪೂಜೆಯನ್ನು ನಡೆಸಿದರೂ ಕೀರ್ತಿಯ ಆಸೆಗಾಗಿ ಮಾಡಕೂಡದು. ಭಾವಶುದ್ಧಿಯಿಂದ ಮಾಡಬೇಕು. ಭಾವಶುದ್ಧಿಯಿಲ್ಲದ ಯಾವುದೇ ಪೂಜೆಯನ್ನು ಜೈನಧರ್ಮವು

ಒಪ್ಪುವುದಿಲ್ಲ. ಜೈನಧರ್ಮೀಯರು ಆಚರಿಸುವ ಸಾಂದರ್ಭಿಕ ಆಚರಣೆಗಳನ್ನು ಹೀಗೆ ಹೆಸರಿಸಬಹುದು. ಪ್ರತಿಷ್ಠಾವಿಧಿ, ಪಂಚಕಲ್ಯಾಣ ಮಹೋತ್ಸವ, ಮಹಾಮಸ್ತಕಾಭಿಷೇಕ ಮತ್ತು ನೋಂಪಿ ವ್ರತಗಳು– ಶಕ್ತಿ ಆರಾಧನೆ ಕೆಲವು ಸಾಂದರ್ಭಿಕ ಆಚರಣೆಗಳಾಗಿವೆ.

ಪ್ರತಿಷ್ಠಾವಿಧಿ : ಪ್ರತಿಷ್ಠಾವಿಧಿ, ಪಂಚಕಲ್ಯಾಣ ಮಹೋತ್ಸವಗಳೆಲ್ಲವೂ ಜೈನ ಧರ್ಮೀಯರ ವೈಶಿಷ್ಟ್ಯವೇ ಆಗಿದೆ. ಇವುಗಳನ್ನು ವೈಯಕ್ತಿಕವಾಗಿ ಅಥವಾ ಸಾರ್ವಜನಿಕವಾಗಿ ನೆರವೇರಿಸಿದರೂ, ಇದರಿಂದ ಆತ್ಮೋನ್ನತಿಯಾಗಿ ಸದ್ಗತಿ ಸಿಗಲೆಂಬ ಉದ್ದೇಶದಿಂದಲೇ ಆಚರಿಸುತ್ತಾರೆ. ಇಂಥ ಪುಣ್ಯಕಾರ್ಯಕ್ಕೆ ದಾನ ನೀಡುವುದು, ಆ ಕಾರ್ಯಕ್ರಮ ವೀಕ್ಷಿಸುವುದು ಕೂಡ ಪುಣ್ಯವೆಂದು ಜನರು ಭಾವಿಸುತ್ತಾರೆ. ಜೈನಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖಿಸಿರುವಂತೆ ಪ್ರತಿಷ್ಠಾ ವಿಧಿಗಳು ನೆರವೇರುತ್ತವೆ. ಮೂರು ರೀತಿಯ ಪ್ರತಿಷ್ಠಾ ವಿಧಿಗಳು ಇಲ್ಲಿ ಆಚರಣೆಯಲ್ಲಿವೆ. ಅವುಗಳೆಂದರೆ, ವ್ಯಾಸಪ್ರತಿಷ್ಠೆ, ಮಧ್ಯಮಪ್ರತಿಷ್ಠೆ ಮತ್ತು ಲಘುಪ್ರತಿಷ್ಠೆ.[57]

ವ್ಯಕ್ತಿಯು ತನ್ನ ಆರ್ಥಿಕ ಶಕ್ತಿಗೆ ಅನುಗುಣವಾಗಿ ಈ ಮೂರರಲ್ಲಿ, ಯಾವುದಾದರೂ ಒಂದು ವಿಧಾನವನ್ನು ಆಯ್ದುಕೊಂಡು ಪ್ರತಿಷ್ಠಾಪನೆಯನ್ನು ನೆರವೇರಿಸುತ್ತಾನೆ. ವ್ಯಾಸ ಪ್ರತಿಷ್ಠೆಯು ಒಂಭತ್ತು ದಿನಗಳಿಂದ ಹದಿನೈದು ದಿನಗಳವರೆಗೂ ವಿಸ್ತರಿಸಿರುತ್ತದೆ. ಧರ್ಮ ಪ್ರಭಾವನೆಯೇ ಪ್ರತಿಷ್ಠಾಪಕನ ಉದ್ದೇಶವಾಗಿರಬೇಕು. ವಿಸ್ತಾರವಾದ ಪಂಚಕಲ್ಯಾಣ ವಿಧಿಯ ಮೂಲಕ ಮತ್ತು ವಿವಿಧ ಆರಾಧನೆಗಳ ಮೂಲಕ ನೆರವೇರಿಸುತ್ತಾರೆ. ಶ್ರಾವಕನು ತನ್ನ ಶಕ್ತಿಗೆ ಅನುಗುಣವಾಗಿ, ಮಧ್ಯಮ ವಿಧಿಯಲ್ಲಿ ಏಳು ಅಥವಾ ಐದು ದಿನಗಳಲ್ಲಿ ಮೂರ್ತಿ ಮತ್ತು ಮಂದಿರವನ್ನು ಶುದ್ಧಿ ಮಾಡುವುದನ್ನು ಮಧ್ಯಮ ಪ್ರತಿಷ್ಠಾವಿಧಿ ಎನ್ನುತ್ತಾರೆ. ಶ್ರಾವಕನು ಸಂಕಲ್ಪಪೂರ್ವಕವಾಗಿ ಮೂರು ದಿನಗಳಲ್ಲಿ ಎಲ್ಲಾ ವಿಧಿಗಳನ್ನು ಸಂಕ್ಷಿಪ್ತವಾಗಿ ಮಾಡಿ, ಮೂರ್ತಿಯನ್ನು ಪ್ರತಿಷ್ಠಾಪಿಸುವುದಕ್ಕೆ ಲಘು ಪ್ರತಿಷ್ಠೆಯೆನ್ನುತ್ತಾರೆ. ಶ್ರಾವಕರು ಯಾವುದೇ ಪ್ರತಿಷ್ಠಾವಿಧಾನವನ್ನು ಆರಿಸಿಕೊಳ್ಳಲಿ, ಆದರೆ ಆ ಸಂದರ್ಭದಲ್ಲಿ ನಡೆಯುವ ಧಾರ್ಮಿಕ ವಿಧಿವಿಧಾನಗಳು ಮಾತ್ರ ಒಂದೇ ರೀತಿಯಲ್ಲಿರುತ್ತವೆ. ಅಂದರೆ ಅಂಕುರಾರ್ಪಣ, ವೇದಿನಿರ್ಮಾಣ, ಮಂಟಪಶುದ್ಧಿ, ವಾಸ್ತುಬಲಿ, ಧ್ವಜಾರೋಹಣ, ಭೇರಿತಾಡನ, ಜಲಯಾತ್ರಾ ಮಹೋತ್ಸವ, ಗರ್ಭಾವತರಣ, ಕಲ್ಯಾಣ, ಧಾಮ ಸಂಪ್ರೋಕ್ಷಣೆ ಅಥವಾ ವಿಮಾನಶುದ್ಧಿ, ಜನ್ಮಾಭಿಷೇಕ, ಕಲ್ಯಾಣ ಪರಿನಿಷ್ಕ್ರಮಣ ಕಲ್ಯಾಣ, ಕೇವಲ ಜ್ಞಾನಕಲ್ಯಾಣ, ನಿರ್ವಾಣ ಕಲ್ಯಾಣ, ಅವಭೃತಸ್ನಾನ ಮುಂತಾದ ಧಾರ್ಮಿಕ ಕ್ರಿಯೆಗಳು ಜರುಗುತ್ತವೆ. ಈ ಕ್ರಿಯೆಗಳನ್ನು ಬಸದಿಯಲ್ಲಿರುವ ತೀರ್ಥಂಕರನ ಸಮಗ್ರ ಬದುಕನ್ನು ಸಾಂಕೇತಿಕವಾಗಿ, ಧಾರ್ಮಿಕ ಆಚರಣೆಗಳ ಮೂಲಕ ಅಭಿವ್ಯಕ್ತಗೊಳಿಸುವ ವಿಧಾನವೆಂದೂ ಅರ್ಥೈಸಬಹುದಾಗಿದೆ. ಜೈನರ

ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ, ಯಾವುದೇ ತೀರ್ಥಂಕರನ ಪ್ರತಿಷ್ಠಾ ಮಹೋತ್ಸವ ನಡೆದರೂ ಈ ಧಾರ್ಮಿಕ ಕ್ರಿಯೆಗಳಲ್ಲಿ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲ.

ಪಂಚಕಲ್ಯಾಣ ಮಹೋತ್ಸವ : ಬಸದಿಗಳಲ್ಲಿ ಪ್ರತಿಷ್ಠಾವಿಧಿ, ಮಹಾಭಿಷೇಕಗಳು ನಡೆದರೂ ಅದರಲ್ಲಿ ಜಿನನ ಪಂಚಕಲ್ಯಾಣ ವಿಧಿಯು ಮುಖ್ಯಭಾಗವಾಗಿರುತ್ತವೆಂಬುದನ್ನು ಗಮನಿಸಬೇಕು. ಈ ಧಾರ್ಮಿಕ ಕಲಾಪಗಳು ಎಲ್ಲಿ ನಡೆಯುತ್ತದೋ, ಆ ಊರಿನ ಎಲ್ಲಾ ಶ್ರಾವಕರು ಉತ್ಸಾಹದಿಂದ ಭಾಗವಹಿಸುತ್ತಾರೆ. ಬಸದಿಯ ಸುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಿ, ಚಪ್ಪರವನ್ನು ಹಾಕಿ ತಳಿರುತೋರಣಗಳಿಂದ ಶೃಂಗರಿಸುತ್ತಾರೆ. ಊರ, ಪರವೂರ ಜನರೆಲ್ಲರೂ ಆಗಮಿಸುವುದರಿಂದ ಅವರ ವಸತಿಗೂ, ಸಂಘಸಂತರ್ಪಣೆಗೂ ಅನುಕೂಲವಾಗುವಂತೆ ಭೋಜನಶಾಲೆ, ಸಭಾಭವನ ಮುಂತಾದ ವ್ಯವಸ್ಥೆಗಳನ್ನು ಮಾಡುತ್ತಾರೆ. ಕೆಲವೊಮ್ಮೆ ಖರ್ಚು ವೆಚ್ಚಗಳನ್ನು ಶ್ರಾವಕರು ಒಂದೊಂದು ದಿನದ ಅಥವಾ ಕಲಾಪದ ವೆಚ್ಚವನ್ನು ತಾವೇ ವಹಿಸಿಕೊಳ್ಳುವುದರ ಮೂಲಕ ನೆರವೇರಿಸುತ್ತಾರೆ.[58]

ಪುರೋಹಿತರು ಶುಭಮುಹೂರ್ತದಲ್ಲಿ ಧಾರ್ಮಿಕ ವಿಧಿಯನ್ನು ಆರಂಭಿಸುತ್ತಾರೆ. ಯಾವ ತೀರ್ಥಂಕರರ ಪ್ರತಿಮೆಯ ಪ್ರತಿಷ್ಠಾಕಾರ್ಯವು ನಡೆಯುತ್ತದೆಯೋ ಆ ತೀರ್ಥಂಕರರ ಜನ್ಮನಕ್ಷತ್ರಕ್ಕೆ ಹೊಂದಿಕೊಳ್ಳುವಂತೆ ಧಾರ್ಮಿಕ ಕ್ರಿಯೆಗಳನ್ನು ಯೋಜಿಸಿ ನೆರವೇರಿಸುತ್ತಾರೆ. ಅಂಕುರಾರ್ಪಣ ವಿಧಿಯೊಡನೆ ಧಾರ್ಮಿಕ ಕ್ರಿಯೆಗಳು ಆರಂಭಗೊಳ್ಳುತ್ತವೆ. ಈ ವಿಧಿಯಲ್ಲಿ ಶುದ್ಧವಾಗಿರುವ ನವಧಾನ್ಯಗಳನ್ನು ಮೊದಲಿನ ದಿನ ನೀರಿನಲ್ಲಿ ನೆನೆಸಿ, ಮರುದಿನ ಸುಡುಮಣ್ಣು, ಒಣಗೊಬ್ಬರಗಳನ್ನು ಅದಕ್ಕೆ ಬೆರೆಸಿ ಅದನ್ನು ಅಗಲವಾದ ಬಾಂಡ ಅಥವಾ ಕುಂಭಗಳಲ್ಲಿ ಮಂತ್ರಪೂರ್ವಕವಾಗಿ ಬಿತ್ತುತ್ತಾರೆ. ಅನಂತರ ಸುವಾಸಿನಿಯರು ನಿತ್ಯವಿಧಿಯಾದ ಬಳಿಕ ಗಂಧೋದಕವನ್ನು ಎರೆಯುತ್ತಾರೆ. ಯಾಗವೇದಿಯ ಪಾವಿತ್ರ್ಯಕ್ಕೆ ಮತ್ತು ಶೋಭೆಗೆ ಈ ವಿಧಿಯನ್ನು ನಡೆಸುತ್ತಾರೆ.

ಮುಂದುವರಿದು ಮಂಟಪ ಶುದ್ಧಿ, ವೇದಿನಿರ್ಮಾಣ ಕಾರ್ಯಗಳು ನಡೆಯುತ್ತವೆ. ಯಜ್ಞ ಕಾರ್ಯಕ್ಕೆ ಮೀಸಲಾದ ಸ್ಥಳಕ್ಕೆ ವೇದಿಯೆಂದು ಹೆಸರು. ಅಲ್ಲಿ ಪಂಚವರ್ಣಗಳಿಂದ ವಿವಿಧ ರೀತಿಯ ಮಂಡಲಗಳನ್ನು ಬರೆದು ಪಂಚಕುಂಭಸ್ಥಾಪನೆ ಮಾಡಿ ವಾಸ್ತುಬಲಿಯನ್ನು ನಡೆಸುತ್ತಾರೆ. ವಾಸ್ತುಬಲಿ ಪ್ರತಿಷ್ಠಾವಿಧಾನದ ಬಹು ಮುಖ್ಯವಾದ ಅಂಗವಾಗಿದೆ. ಸಿಡಿಲು, ಅಗ್ನಿಪ್ರಕೋಪ, ಮಳೆ ಬಿರುಗಾಳಿ ಮೊದಲಾದ ಆಕಸ್ಮಿಕಗಳಿಂದ ಬಸದಿಗೆ ಬರಬಹುದಾದ ಸಂಕಷ್ಟಗಳನ್ನು ಹೋಗಲಾಡಿಸುವ ಉದ್ದೇಶದಿಂದ ಮತ್ತು ಬಸದಿಯ ಸರ್ವರಕ್ಷಣೆಗಾಗಿ ನಲ್ವತ್ತೆಂಟು ವಾಸ್ತುದೇವತೆಗಳನ್ನು ವಿಧಿಪೂರ್ವಕವಾಗಿ ಆಹ್ವಾನಿಸಿ ಪೂಜೆ, ಆರಾಧನೆಗಳಿಂದ ತೃಪ್ತಿಪಡಿಸಿ ಅವರ

ಶ್ರೀರಕ್ಷೆಯನ್ನು ಪಡೆಯುವ ಉದ್ದೇಶದಿಂದ ಈ ವಿಧಿಯನ್ನು ನಡೆಸುತ್ತಾರೆ. ತೀರ್ಥಂಕರರ ಸಮವಸರಣ ಸಂದರ್ಭದಲ್ಲಿ ಧರ್ಮಚಕ್ರವನ್ನು ಹೊತ್ತ ಸರ್ವಾಹ್ಣಯಕ್ಷ ಎತ್ತರದ ಸ್ತಂಭದ ಮೇಲೆ ಕುಳಿತು ಭೇರಿಯನ್ನು ಬಾರಿಸುತ್ತ ಲೋಕದ ಸಮಸ್ತ ಜೀವಿಗಳನ್ನೂ ಆಹ್ವಾನಿಸುತ್ತಾನೆ ಎಂಬ ನಂಬಿಕೆ ಇದೆ. ತೀರ್ಥಂಕರರ ದಿವ್ಯಧ್ವನಿ ಮೊಳಗುವುದೆಂದೂ, ಎಲ್ಲಾ ಜೀವಿಗಳು ಬಂದು ಉಪದೇಶವನ್ನು ಆಲಿಸಿ ಆತ್ಮಕಲ್ಯಾಣವನ್ನು ಮಾಡಿಕೊಳ್ಳಬೇಕೆಂದೂ ಕೂಗಿ ಕೂಗಿ ಕರೆಯುತ್ತಾನೆ. ಇದರ ಸಂಕೇತವಾಗಿ ಮಾಡುವ ಆಚರಣೆಯೇ ಧ್ವಜಾರೋಹಣ ಮತ್ತು ಭೇರಿತಾಂಡನ ವಿಧಿಗಳಾಗಿವೆ. ಇದರಿಂದ ಧ್ವಜದಲ್ಲಿ ಧರ್ಮಚಕ್ರವನ್ನು ತಲೆಯಮೇಲೆ ಹೊತ್ತುನಿಂತ ಸರ್ವಾಹ್ಣ ಯಕ್ಷನ ಚಿತ್ರವನ್ನು ಬರೆದಿರುತ್ತಾರೆ.

ಜಲಯಾತ್ರಾ ಮಹೋತ್ಸವದಲ್ಲಿ, ಜಿನಮಾತೆಯ ಗರ್ಭಶೋಧನೆಗಾಗಿ ಶಚಿದೇವಿಯು ಶ್ರೀ, ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮೀಕಾಂತಿ ಮತ್ತು ಪುಷ್ಠಿಯೆಂಬ ಅಷ್ಟಕನ್ನಿಕೆಯರಿಂದ ಗರ್ಭಶೋಧನ ನಡೆಸುವ ವಿಧಾನದ ಧಾರ್ಮಿಕ ವಿಧಿಯಾಗಿ ಮರುಸೃಷ್ಟಿ ಮಾಡಲಾಗುತ್ತದೆ. ತೀರ್ಥಂಕರರ ಗರ್ಭಾವತರಣ ಕಲ್ಯಾಣವನ್ನು ಅನೇಕ ದೇವಾನುದೇವತೆಗಳು ಹರಸುವುದರಿಂದ ಅವರೆಲ್ಲರನ್ನೂ ಆಹ್ವಾನಿಸಿ, ಪೂಜಿಸುವ ವಿಧಾನವನ್ನು ಮಹಾಯಾಗ ಮಂಡಲಾರಾಧನೆಯೆಂದು ಕರೆಯಲಾಗುತ್ತದೆ. ತೀರ್ಥಂಕರನ ಜನ್ಮವಾಗುವಾಗ ಜಗತ್ತಿನಲ್ಲಿ ದುರ್ಭಿಕ್ಷೆ, ಕ್ಷೋಭೆ, ಕಷ್ಟ, ಬಡತನಗಳಿರಬಾರದೆಂದು ದೇವೇಂದ್ರನು ಕುಬೇರ ಮೊದಲಾದ ದೇವತೆಗಳನ್ನು ಭೂಲೋಕಕ್ಕೆ ಕಳುಹಿಸಿಕೊಟ್ಟು ಎಲ್ಲವೂ ಸುಭಿಕ್ಷವಾಗಿರುವಂತೆ ವ್ಯವಸ್ಥೆ ಮಾಡುತ್ತಾನೆ. ಈ ವಿಧಿಯನ್ನು ಶಾಂತಿ ಚಕ್ರಾರಾಧನೆಯ ಮೂಲಕ ಆಚರಿಸುತ್ತಾರೆ. ಚತುರ್‌ದಿಕ್‌ಧಾಮ ಸಂಪ್ರೋಕ್ಷಣೆಯೆಂದರೆ, ಬಸದಿಯ ಮುಂಭಾಗದಲ್ಲಿ ಒಂದು ದರ್ಪಣವನ್ನು ಮಂತ್ರ ಪುರಸ್ಸರವಾಗಿ ಸ್ಥಾಪಿಸಿ ಅದರಲ್ಲಿ ಬಸದಿಯ ಪ್ರತಿಬಿಂಬವು ಬೀಳುವಂತೆ ಮಾಡುವ ಪೂಜಾವಿಧಿಯನ್ನು ನೆರವೇರಿಸಿ, ಬಸದಿಯ ನಾಲ್ಕೂ ದಿಕ್ಕಿನಲ್ಲಿ ಸ್ಥಾಪಿಸಿರುವ ಕಲಶಗಳಿಂದ ಅಭಿಷೇಕವನ್ನು ಮಾಡುವುದಾಗಿದೆ. ಅನಂತರ ಅಭಿಷೇಕದ ನೀರನ್ನು ಬಸದಿಯ ಸುತ್ತಲೂ ಮಂತ್ರಪೂರ್ವಕವಾಗಿ ಪ್ರೋಕ್ಷಿಸುತ್ತಾರೆ. ನೂತನ ಜಿನಮಂದಿರದ ಶುದ್ಧಿ ಇದರ ಉದ್ದೇಶ. ಈ ಧಾಮ ಸಂಪ್ರೋಕ್ಷಣೆಯ ಮುಂದುವರಿದ ರೂಪವೇ ವಿಮಾನಶುದ್ಧಿ. ಜಿನನು ಹುಟ್ಟಿದ ಕೂಡಲೇ ಕೆಲವು ಅತಿಶಯಗಳು ಜರುಗುತ್ತವೆ. ದಶ ದಿಕ್ಕುಗಳಲ್ಲಿ ಪ್ರಸನ್ನತೆಯ ವಾತಾವರಣ ಸೃಷ್ಟಿಯಾಗುತ್ತದೆ. ತಂಪಾದ ಸುಗಂಧಪೂರಿತ ಗಾಳಿಯು ಬೀಸಿ ಉತ್ಸಾಹದ ವಾತಾವರಣ ಸೃಷ್ಟಿಯಾಗುತ್ತದೆ. ಆಕಾಶ ಮತ್ತು ಸರೋವರಗಳು ಶುಭ್ರವಾಗುತ್ತವೆ. ಸ್ವರ್ಗದಲ್ಲಿ ಘಂಟಾನಾದವೂ, ಪಾತಾಳದಲ್ಲಿ ಶಂಖನಾದವೂ, ಜ್ಯೋತಿರ್ಲೋಕದಲ್ಲಿ ಸಿಂಹನಾದವೂ, ವ್ಯಂತರಲೋಕದಲ್ಲಿ ನಗಾರಿನಾದವೂ ತಂತಾನೆ ಮೊಳಗುತ್ತವೆ. ದೇವೇಂದ್ರನ ಸಿಂಹಾಸನ

ಕಂಪಿಸುತ್ತದೆ. ಸಮುದ್ರ ಉಕ್ಕೇರಿ ಕಲ್ಪವೃಷ್ಟಿಯಾಗುತ್ತದೆ. ಈ ಬಗೆಯ ಅತಿಶಯಗಳಿಂದ ಮಹಾಜಿನನ ಆಗಮನವರಿತು ದೇವೇಂದ್ರನು ತನ್ನ ಐರಾವತನನ್ನು ಶೃಂಗರಿಸಿ, ಸಪತ್ನೀಕನಾಗಿ ತನ್ನ ಪರಿವಾರ ಸಮೇತ ಜಿನಬಾಲಕನಲ್ಲಿಗೆ ಬಂದು ಜಿನಮಾತೆಗೆ ಮಾಯಾನಿದ್ರೆಯನ್ನು ಬರಿಸುತ್ತಾನೆ. ಜಿನಬಾಲಕನಿಗೆ ಜನ್ಮಾಭಿಷೇಕ ನೆರವೇರಿಸಿ ಅನಂತರ ಮೇರುಪರ್ವತದ ಪಾಂಡುಕ ಶಿಲೆಯ ಬಳಿಗೆ ಜಿನಬಾಲಕನನ್ನು ಕರೆದೊಯ್ದು ಮಹಾವೈಭವದಿಂದ ಕ್ಷೀರಸಮುದ್ರದ ಜಲದಿಂದ ಅಭಿಷೇಕವನ್ನು ನಡೆಸುತ್ತಾನೆ. ಈ ಪವಿತ್ರ ಕಾರ್ಯದಲ್ಲಿ ಎಲ್ಲಾ ದೇವತೆಗಳೂ ನೆರವಾಗುತ್ತಾರೆ. ಅಲ್ಲಿಯೇ ಜಿನಬಾಲಕನ ಕರ್ಣಭೇದಿ, ಅಲಂಕಾರ, ವಸ್ತ್ರ ಜಾತಕರ್ಮ ಮೊದಲಾದ ಸಂಸ್ಕಾರಗಳೂ ನೆರವೇರುತ್ತವೆ. ಸಂತೋಷದಿಂದ ಎಲ್ಲರೂ ನರ್ತಿಸುತ್ತಾರೆ. ಅನಂತರ ಬಾಲಕನನ್ನು ಮಾತೆಯ ಮಡಿಲಿಗೆ ಮರಳಿಸಿ ಎಲ್ಲರೂ ಸ್ವರ್ಗಲೋಕಕ್ಕೆ ತೆರಳುತ್ತಾರೆ. ಈ ಭಾಗವನ್ನು ಪ್ರತಿಷ್ಠಾವಿಧಿಯಲ್ಲಿ ಮರುಸೃಷ್ಟಿ ಮಾಡುವುದಕ್ಕೆ ನೆರವೇರಿಸುವುದಕ್ಕೆ ಜನ್ಮಾಭಿಷೇಕ ಕಲ್ಯಾಣವೆಂದು ಹೆಸರು. ಪ್ರತಿಷ್ಠಾಚಾರ್ಯನು ಪ್ರತಿಷ್ಠಾಪಕನಿಂದ ತೀರ್ಥಂಕರಮೂರ್ತಿಗೆ ಆಕಾರಶುದ್ಧಿ, ಅಭಿಷೇಕ ಮೊದಲಾದವುಗಳನ್ನು ಮಂತ್ರಪೂರ್ವಕವಾಗಿ ಆಚರಿಸುತ್ತಾರೆ.

ದೀಕ್ಷಾಕಲ್ಯಾಣ ಸಮಯದಲ್ಲಿ ಜಿನಬಾಲಕನು ಬಾಲ್ಯವನ್ನು ಕಳೆದು, ಯೌವನಾವಸ್ಥೆಗೆ ಬಂದಾಗ ಆತನ ತಂದೆ ಮಾನವರೂಪಿ ಜಿನನಾದವಗೆರಾಜ್ಯಭಾರವನ್ನು ವಹಿಸಿಕೊಡುತ್ತಾನೆ. ಈ ಸಂದರ್ಭದಲ್ಲೂ ದೇವೇಂದ್ರನು ಆಗಮಿಸಿ ರಾಜ್ಯಾಭಿಷೇಕ ಕಾರ್ಯವನ್ನು ನಡೆಸುತ್ತಾನೆಂಬ ನಂಬಿಕೆ ಇದೆ. ಐವತ್ತಾರು ದೇಶದ ರಾಜರು ಉಪಸ್ಥಿತರಿದ್ದು ಕಾಣಿಕೆಯನ್ನು ಅರ್ಪಿಸುತ್ತಾರೆ. ಜಿನಕುಮಾರನು ಚಕ್ರವರ್ತಿಯಾಗಿ ಭೋಗ್ಯ ಭಾಗ್ಯಗಳನ್ನು ಅನುಭವಿಸುತ್ತಿರುವಾಗ ಭೋಗದ ಅತಿಶಯತೆಯಲ್ಲಿ ತನ್ನ ಜನ್ಮ ಉದ್ದೇಶವನ್ನು ಹಾಗೂ ತನ್ನ ಧರ್ಮ ಕರ್ತವ್ಯದಿಂದ ವಿಮುಖನಾದಾಗ ದೇವೇಂದ್ರನೇ ಭೋಗದ ಚಕ್ರವರ್ತಿಯಾದ ಜಿನನಿಗೆ ಜೀವನ ನಶ್ವರತೆಯನ್ನು ಮನದಟ್ಟು ಮಾಡಿಕೊಡಬೇಕಾಗುತ್ತದೆ. ಜಿನಕುಮಾರ ಭೋಗ ಭಾಗ್ಯಗಳಿಗೆ ತಿಲಾಂಜಲಿಯಿತ್ತು, ದೀಕ್ಷೆಯನ್ನು ಸ್ವೀಕರಿಸಿ ತಪಶ್ಚರ್ಯಕ್ಕೆ ತೆರಳುತ್ತಾನೆ.

ಈ ಪುರಾಣ ವಿಷಯಗಳನ್ನು ಮರುಸೃಷ್ಟಿ ಮಾಡಿ ತೋರಿಸುವ ಧಾರ್ಮಿಕವಿಧಿಯೇ ದೀಕ್ಷಾ ಕಲ್ಯಾಣ. ಸ್ವರ್ಗಲೋಕದಿಂದ ಬಂದ ಪಲ್ಲಕ್ಕಿಯಲ್ಲಿ ಜಿನ ಕುಮಾರನನ್ನು ಕುಳ್ಳಿರಿಸಿ ಪಲ್ಲಕ್ಕಿಯನ್ನು ಹೊತ್ತುಕೊಂಡು ದೀಕ್ಷಾವನಕ್ಕೆ ತೆರಳುತ್ತಾರೆ. ದೀಕ್ಷಾಮಂಟಪದಲ್ಲಿ ಜಿನಕುಮಾರನನ್ನು ಕುಳ್ಳಿರಿಸಿ ಆತನ ವಸ್ತ್ರ, ಆಭರಣಗಳನ್ನು ತೆಗೆದು ಕೇಶಲೋಚನವನ್ನು ಮಾಡುತ್ತಾರೆ. ನಂತರ ಅಷ್ಟಾವಿಧರ್ಚನೆ, ಪೂಜೆಗಳು ನೆರವೇರಿದ ಬಳಿಕ, ಕೇಶಲೋಚ ಮಾಡಿದ ಕೇಶಗಳನ್ನು

ದೇವೇಂದ್ರನು ರತ್ನಖಚಿತ ಕರಂಡಕದಲ್ಲಿಟ್ಟು ವೈಭವದಿಂದ ಸಮುದ್ರಕ್ಕೆ ಬಿಡುತ್ತಾನೆ. ಈ ವಿಧಿಗಳನ್ನು ಮಂತ್ರಪೂರ್ವಕವಾಗಿ ಪುರೋಹಿತರು ನಡೆಸುತ್ತಾರೆ. ಮುಂದುವರಿದು ನಾಂದಿಮಂಗಲ, ಯಾಗಮಂಡಲಾರಾಧನೆಗಳೂ ನೆರವೇರುತ್ತವೆ.

ತಪಶ್ಚರ್ಯನಿರತನಾದ ಜಿನಕುಮಾರನಿಗೆ ಮತಿ, ಶ್ರುತ, ಅವಧಿ, ಜ್ಞಾನವನ್ನೊಳಗೊಂಡ ಮನಃಪರ್ಯಾಯಜ್ಞಾನವೂ ಪ್ರಾಪ್ತವಾಗುತ್ತದೆ. ಘಾತಿಕರ್ಮಗಳನ್ನು ನಾಶಮಾಡಿದ ಮೇಲೆ ಕೇವಲ ಜ್ಞಾನವು ಪ್ರಾಪ್ತವಾಗುತ್ತದೆ. ಕೇವಲಜ್ಞಾನ ಕಲ್ಯಾಣದ ಆಚರಣೆಯಲ್ಲಿ ಇದನ್ನು ವಿಧಿಪೂರ್ವಕವಾಗಿ ಪುನಃ ಆಚರಿಸುತ್ತಾರೆ. ಈ ಸಂದರ್ಭದಲ್ಲೂ ದೇವೇಂದ್ರನೇ ಆಗಮಿಸಿ, ಸಮವಸರಣ ಮಂಟಪದ ರಚನೆಯನ್ನು ಮಾಡಿ ತೀರ್ಥಂಕರನ ಧರ್ಮೋಪದೇಶಕ್ಕೆ ವ್ಯವಸ್ಥೆ ಮಾಡುತ್ತಾನೆ ಎಂಬ ನಂಬಿಕೆಯಿದೆ. ಇದರ ಅಂಗವಾಗಿ ಪ್ರತಿಷ್ಠಾವಿಧಿಯಲ್ಲಿ ಪುರೋಹಿತರು ತೀರ್ಥಂಕರ ಪ್ರತಿಮೆ ಸ್ಥಾಪನೆಯನ್ನು ಮಾಡುತ್ತಾರೆ. ಮಂತ್ರನ್ಯಾಸ, ಅಂತನ್ಯಾಸ, ನಮನೋನ್ಮಿಲನಗಳನ್ನು ನಡೆಸಿ, ಹತ್ತು ಅತಿಶಯಗಳ ಸ್ಥಾಪನೆ, ಹದಿನಾಲ್ಕು ಅತಿಶಯಗಳ ಸಂಕಲ್ಪ, ಎಂಟು ಪ್ರಾತಿಹಾರ್ಯಗಳ ರಚನೆ, ಲಾಂಛನ ಸ್ಥಾಪನೆ, ಯಕ್ಷ–ಯಕ್ಷಿಯರ ಸ್ಥಾಪನಾವಿಧಿಯನ್ನು ನೆರವೇರಿಸುತ್ತಾರೆ. ತೀರ್ಥಂಕರನಿಗೆ ಸಮ್ಯಗ್ ದರ್ಶನ, ಜ್ಞಾನ, ಚಾರಿತ್ರ್ಯಗಳ ಪೂರ್ತಿಯೂ ಬಾಹ್ಯಾಭ್ಯಂತರದ ತಪಸ್ಸುಗಳ ಪೂರ್ತಿಯೂ ಈ ಅವಸ್ಥೆಯಲ್ಲಿಯೇ ಆಗುವುದರಿಂದ, ಅದನ್ನೂ ಕೂಡ ವಿಧಿವತ್ತಾಗಿ ನೆರವೇರಿಸಲಾಗುತ್ತದೆ.

ಕಲ್ಯಾಣವಿಧಿಯ ಕೊನೆಯ ಕಾರ್ಯಕ್ರಮ ತೀರ್ಥಂಕರನ ನಿರ್ವಾಣ. ತೀರ್ಥಂಕರನಿಗೆ ಕೇವಲ ಜ್ಞಾನವಾದರೂ ಸಂಯೋಗ ಕೇವಲಿ ಅವಸ್ಥೆಯಿರುತ್ತದೆ. ಇದರಿಂದ ಮುಕ್ತಿ ಸಾಧ್ಯವಾಗುವುದಿಲ್ಲ. ಹಾಗಾಗಿ ದಿವ್ಯ ಧ್ವನಿಯನ್ನು ನಿರೋಧಿಸಿದ ತೀರ್ಥಂಕರರು, ಸಮವಸರಣಮಂಟಪದಿಂದ ಹೊರಬಂದು ಯೋಗನಿರೋಧವನ್ನು ಕೈಗೊಂಡು ಶುಕ್ಲಧ್ಯಾನದಿಂದ ದೇಹವನ್ನು ತ್ಯಜಿಸಿ ಮುಕ್ತಿಯನ್ನು ಹೊಂದುತ್ತಾರೆ. ಸ್ವರ್ಗಾಧಿಪತಿಯಾದ ದೇವೇಂದ್ರನು ತನ್ನ ಪರಿವಾರ ಸಮೇತನಾಗಿ ಬಂದು ನಿರ್ವಾಣ ಕಲ್ಯಾಣದ ಸಂಸ್ಕಾರವನ್ನು ನೆರವೇರಿಸುತ್ತಾನೆ. ಇದರ ಅನುಕರಣೆಯನ್ನೇ ನಿರ್ವಾಣ ಕಲ್ಯಾಣವಿಧಿಯಲ್ಲಿ ನೆರವೇರಿಸಲಾಗುತ್ತದೆ. ಯಾಗಮಂಟಪದಲ್ಲಿ ತೀರ್ಥಂಕರ ಬಿಂಬವನ್ನು ಸ್ಥಾಪಿಸಿ, ಪ್ರತ್ಯೇಕವಾಗಿ ಅಷ್ಟಗುಣಗಳ ಪೂಜೆಯನ್ನು ಮತ್ತು ಶುದ್ಧ ಭಕ್ತಿ, ಶ್ರುತಭಕ್ತಿ, ಚಾರಿತ್ರ್ಯ ಭಕ್ತಿ, ಯೋಗಭಕ್ತಿ, ಶಾಂತಿಭಕ್ತಿ ಹಾಗೂ ನಿರ್ವಾಣಭಕ್ತಿಗಳನ್ನು ವ್ಯಕ್ತಪಡಿಸಿ ಅಭಿಷೇಕವಿಧಿಯನ್ನು ನೆರವೇರಿಸಲಾಗುತ್ತದೆ. ಅನಂತರ ಶ್ರುತಪೂಜೆ, ಗಂಗಾಪೂಜೆಯನ್ನು ಮಾಡಿ, ಮಾರನೆಯ ದಿನ ಅವಭೃತಸ್ನಾನ, ಮಹಾಹೋಮ, ಧ್ವಜಾವರೋಹಣ, ಕಂಕಣ ವಿಸರ್ಜನೆ

ಮೊದಲಾದ ಕ್ರಿಯೆಗಳನ್ನು ನೆರವೇರಿಸಿ ಪ್ರತಿಷ್ಠಾವಿಧಿಯನ್ನು ಪೂರೈಸುತ್ತಾರೆ. ಇದರ ಅಂಗವಾಗಿ ಶ್ರೀ ಬಲಿ ಉತ್ಸವ, ಧರ್ಮೋಪದೇಶಗಳೂ ಜರುಗುತ್ತವೆ.

ಮಹಾಮಸ್ತಕಾಭಿಷೇಕ : ಕರ್ನಾಟಕದಲ್ಲಿ ಬಾಹುಬಲಿ ಅಥವಾ ಗೊಮ್ಮಟೇಶ್ವರನ ಸ್ಥಾಪನೆ ಮತ್ತು ಮಹಾಮಸ್ತಕಾಭಿಷೇಕಗಳು ವಿಶೇಷವಾಗಿದೆ ಹಾಗೂ ರಾಜ್ಯದ ಎಲ್ಲಾ ಗೊಮ್ಮಟ ಕ್ಷೇತ್ರಗಳಿಗೆ ಇದು ವಿಶಿಷ್ಟವೂ ಆಗಿದೆ.[59]

ಬಾಹುಬಲಿ ತೀರ್ಥಂಕರನಲ್ಲ. ಇವನು ಪ್ರಥಮ ತೀರ್ಥಂಕರನಾದ ವೃಷಭದೇವನ ಮಗನಾಗಿದ್ದು, ಜಿನಧರ್ಮಾಚರಣೆಯಿಂದ ಕೇವಲ ಜ್ಞಾನವನ್ನು ಪಡೆದು ಮೋಕ್ಷಕ್ಕೆ ಹೋದವನು. ಈ ಕಾರಣದಿಂದ ಕರ್ನಾಟಕದ ದಿಗಂಬರ ಬಾಹುಬಲಿಯನ್ನು ಜೈನಮತೀಯರು ವಿಶೇಷವಾಗಿ ಪೂಜಿಸುತ್ತಾರೆ. ಆದರೆ ತೀರ್ಥಂಕರನಂತೆ ಇವನಿಗೆ ಪಂಚಕಲ್ಯಾಣ ಮಹೋತ್ಸವವನ್ನು ನೆರವೇರಿಸುತ್ತಾರೆ. ಹನ್ನೆರಡು ವರ್ಷಗಳಿಗೊಮ್ಮೆ ಮಹಾಮಸ್ತಕಾಭಿಷೇಕವನ್ನು ಮಾತ್ರ ನೆರವೇರಿಸುತ್ತಾರೆ. ಸಾಮಾನ್ಯವಾಗಿ ಇಂಥ ಮಹಾಮಸ್ತಕಾಭಿಷೇಕ ವಿಧಿವಿಧಾನದಲ್ಲಿ ಬಾಹುಬಲಿಗೆ ದೀಕ್ಷಾಕಲ್ಯಾಣ, ಕೇವಲ ಜ್ಞಾನ ಕಲ್ಯಾಣ ಮತ್ತು ನಿರ್ವಾಣ ಕಲ್ಯಾಣಗಳನ್ನು ಮಾತ್ರ ನೆರವೇರಿಸುತ್ತಾರೆ.

ಮಂಡ್ಯ ಜಿಲ್ಲೆಯಲ್ಲಿ ಬಸ್ತಿ ಹೊಸಕೋಟೆಯಲ್ಲಿ ಅರೆತಿಪ್ಪೂರಿನಲ್ಲಿ ಬಾಹುಬಲಿಯ ವಿಗ್ರಹವಿದ್ದು ನಿತ್ಯಾರಾಧನೆಗಳು ಜರುಗದಿದ್ದರೂ ಕೆಲವು ಆಸಕ್ತರು ಸೇರಿ ಮಹಾಮಸ್ತಕಾಚರಣೆಯನ್ನು ಇಲ್ಲಿ ನೆರವೇರಿಸುತ್ತಿದ್ದಾರೆ. ಇದು ಕೇವಲ ಕ್ಷೇತ್ರವನ್ನು ಜಿನ ಧರ್ಮೀಯರಿಗೆ ಪರಿಚಯಿಸುವ ದೃಷ್ಟಿಯನ್ನು ಉದ್ದೇಶವಾಗಿ ಹೊಂದಿದೆ.

ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕವು ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಖ್ಯಾತಿಯನ್ನು ಪಡೆದ ಮಹಾನ್ ಧಾರ್ಮಿಕ ಆಚರಣೆಯಾಗಿದೆ. ಪ್ರತಿವರ್ಷ ಕಾಲದಲ್ಲೂ ಪ್ರಕೃತಿ ಬಾಹುಬಲಿಯ ಭವ್ಯಮೂರ್ತಿಗೆ ಮಹಾಮಜ್ಜನವನ್ನು ಮಾಡಿಸುತ್ತ ಬಂದಿದ್ದಾಳೆ. ಹನ್ನೆರಡು ವರ್ಷಗಳಿಗೊಮ್ಮೆ ನಡೆಸಲಾಗುವ ಮಾನವಕೃತ ಮಜ್ಜನವು ಸಾಂಸ್ಕೃತಿಕ, ರಾಜಕೀಯ, ಸೌಂದರ್ಯಾತ್ಮಕ, ಆಧ್ಯಾತ್ಮಿಕ ಆಯಾಮಗಳನ್ನು ಹೊಂದಿದೆ. "ಎನ್ನವನ್ನೂ ಬೌದ್ಧಿಕ ನಿಕಷಕ್ಕೆ ಒಡ್ಡುವ ಅತಿನಾಗರಿಕತೆಯ ಫಲಿತವಾಗಿ ಮಾನವ ರಾಗಭಾವಗಳು ಭವ್ಯತೆಯ ನೆಲೆಯಲ್ಲಿ ತಮ್ಮ ರೂಕ್ಷತೆಯನ್ನು ಕಳೆದುಕೊಳ್ಳದಂತಾಗಿದೆ" ಎಂದು ವಿಷಾದವನ್ನು ವಿದ್ವಾಂಸರು ವ್ಯಕ್ತಪಡಿಸುತ್ತಾರೆ. "ಸುಪ್ತಪ್ರಜ್ಞೆಯ ಆಳದ ಕಾಮವಾಂಛಗಳು ಭವ್ಯತಾನುಭಾವದ ಸ್ತರದಲ್ಲಿ ಕರಗಿ ಆಧ್ಯಾತ್ಮಿಕ ಗುಣವಾಗಿ ಆವಿಷ್ಕಾರಗೊಳ್ಳುವ ಸಾಧನವಾಗಿ ಧರ್ಮಗಳು ಮುಖ್ಯವೆಂಬುದು" ವಿದ್ವಾಂಸರ ಅಭಿಪ್ರಾಯ. ಮೊದಲನೆ ಕಾಮದೇವನಾದ ಬಾಹುಬಲಿಯಲ್ಲಾದ ಆಂತರಿಕ ವಿಕಾಸ, ಆತನು ಸಾಧಿಸಿದ

ಪರಿಪೂರ್ಣ ಸ್ಥಿತಿಯನ್ನು ಆರಾಧಿಸಿ ಅವೆಲ್ಲವನ್ನೂ ಮೈದುಂಬಿಕೊಳ್ಳುವ ಜನಮಾನಸದ ಅಭೀಪ್ಸೆಯೇ ಈ ಮಹಾಮಸ್ತಕಾಭಿಷೇಕ ಮಹೋತ್ಸವ. ಭರತ ಬಾಹುಬಲಿ ದ್ಯುತಪ್ರಸಂಗದಲ್ಲಿ ಬಾಹುಬಲಿಯು ವೈರಾಗ್ಯ ಪಡೆದು ತಪಸ್ಸನ್ನಾಚರಿಸಿ ಕೇವಲ ಜ್ಞಾನವನ್ನು ಪಡೆದ ಬಾಹುಬಲಿಗೆ ಭರತನಿಂದ ಸಂದ ಪೂಜೆಯೇ ಈ ಮಹಾಮಸ್ತಕಾಭಿಷೇಕದ ವಿವರಣೆ ಎಂದು ಮಹಾಪುರಾಣ ಮೊದಲಾದ ಕನ್ನಡ ಭಾಷೆಯ ಬಾಹುಬಲಿ ಸಂಬಂಧಿತ ಸಾಹಿತ್ಯದಲ್ಲಿ ಉಲ್ಲೇಖಿತವಾಗಿವೆ. ಇದರೊಟ್ಟಿಗೆ ಚಾವುಂಡರಾಯನಿಂದ ಗೊಮ್ಮಟಮೂರ್ತಿ ಸ್ಥಾಪನೆಯ ಪ್ರಸಂಗವೂ ಅನೇಕ ಸಾಹಿತ್ಯ ಕೃತಿಗಳಲ್ಲಿ ವರ್ಣಿತವಾಗಿವೆ. ಕರ್ನಾಟಕದಲ್ಲಿ ಅನೇಕ ಕಡೆ ಬಾಹುಬಲಿ ಮೂರ್ತಿಯನ್ನು ಕಾಣುತ್ತೇವೆ. ಮಂಡ್ಯ ಜಿಲ್ಲೆಯ ಅರೆತಿಪ್ಪೂರಿನಲ್ಲಿ ಬಸ್ತಿ ಹೊಸಕೋಟೆಯಲ್ಲಿ ಬಾಹುಬಲಿ ಮೂರ್ತಿ ಕಂಡುಬರುತ್ತದೆ. ಇಷ್ಟೇ ಅಲ್ಲದೆ ಭಾರತದಾದ್ಯಂತ ಕರ್ನಾಟಕದಾದ್ಯಂತ ಅನೇಕ ಬಾಹುಬಲಿಯ ಮೂರ್ತಿಗಳನ್ನು ಗುರುತಿಸಿ ಅವುಗಳ ಕಾಲ, ಇತ್ಯಾದಿಗಳ ಅಧ್ಯಯನವನ್ನು ಸಮಗ್ರವಾಗಿ ಮಾಡುವ ಪ್ರಯತ್ನಗಳು ನಡೆದಿವೆ. ಇವೆಲ್ಲವೂ ಕರ್ನಾಟಕದಲ್ಲಿ ಬಾಹುಬಲಿ ಶಿಲ್ಪದ ಪ್ರಖ್ಯಾತಿಯನ್ನು ಮತ್ತು ಆ ಪ್ರಸಂಗದಿಂದಾಗಿ ಜೈನ ಸಮುದಾಯಕ್ಕೆ ತನ್ನ ಲೌಕಿಕ ನಶ್ವರತೆಯನ್ನು ಅಲೌಕಿಕ ಶಾಶ್ವತತೆಯನ್ನು ಅರುಹುವ ಪ್ರಯತ್ನವು ಕಂಡುಬರುತ್ತದೆ.

1550ರಲ್ಲಿ ರಚಿತವಾದ ದೊಡ್ಡಯ್ಯ ಕವಿಯ ಬಾಹುಬಲಿ ಶತಕದಲ್ಲಿ ಮೊಟ್ಟಮೊದಲ ಬಾರಿಗೆ ಗೊಮ್ಮಟನಿಗೆ ನಡೆದ ಮಹಾಮಸ್ತಕಾಭಿಷೇಕದ ವಿವರ ದೊರಕುತ್ತದೆ. ಆತನು ಸೂಚಿಸಿರುವ ಪಂಚಾಂಗದ (ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರ್ಣ) ವಿವರಗಳನ್ನು ಆಧರಿಸಿ ಆನಂತರದ ಕಾಲಧರ್ಮಕ್ಕನುಗುಣವಾಗಿ ಬಾಹುಬಲಿ ಮೂರ್ತಿಯು ಕ್ರಿ.ಶ. 981ರ ಮಾರ್ಚ್ 13ರಂದು ಪ್ರತಿಷ್ಠಾಪನೆಯಾಗಿದೆ ಎಂದು ತಿಳಿದುಬರುತ್ತದೆ. ಬೆಳಗೊಳದ ಗೊಮ್ಮಟೇಶ್ವರ ಚರಿತ್ರೆಯನ್ನು ಬರೆದ ಅನಂತಕವಿಯು ರಾಮ-ಲಕ್ಷ್ಮಣ ಪೂಜಿತ ಬಾಹುಬಲಿ ಮೂರ್ತಿಗೆ ಚಾವುಂಡರಾಯನಿಂದ ಶಿಲ್ಪಿಗಳ ಮೂಲಕ ಕಾಂತಿಯುತವಾಗುವಂತೆ ಒಪ್ಪಿಕ್ಕಲಾಯಿತು ಎಂದು ದಾಖಲಿಸಿದ್ದಾನೆ. ಅಂದರೆ ಅನಂತ ಕವಿಯ ಪ್ರಕಾರ ಬಾಹುಬಲಿ ಮೂರ್ತಿ ಮೊದಲೇ ಇದ್ದುದು ಚಾವುಂಡರಾಯನಿಂದ ಸುಂದರಗೊಂಡಿತೆಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

ಬಾಹುಬಲಿ ಸ್ವಾಮಿಯು ತೀರ್ಥಂಕರನಲ್ಲದ ಕಾರಣ ಆತನಿಗೆ ಪಂಚಕಲ್ಯಾಣ ಮಹೋತ್ಸವಗಳನ್ನು ನೆರವೇರಿಸಲು ಸಾಧ್ಯವಿಲ್ಲ. ಹಾಗಾಗಿ ಆತನಿಗೆ ಕೇವಲ ಜ್ಞಾನವಾದ ಸಂದರ್ಭದಲ್ಲಿ ಭರತ ಮತ್ತು ದೇವೇಂದ್ರಾದಿಗಳು ಮಾಡಿದ ಪೂಜೆಯೊಂದಿಗೆ ಇಂದಿನವರೆಗೂ ನೆರವೇರಿಸುತ್ತಿರುವ ಅಭಿಷೇಕಾದಿ ಪೂಜೆಗಳನ್ನು ಮಹಾಮಸ್ತಕಾಭಿಷೇಕ ಪೂಜೆಯೆಂದು

ಕರೆಯಲಾಗುತ್ತದೆ. ಚಾವುಂಡರಾಯನು ಇಲ್ಲಿ ಬಾಹುಬಲಿ ಮೂರ್ತಿಯನ್ನು ಕೆತ್ತಿಸಿದುದಕ್ಕೆ ಒಂದು ವಿಶೇಷವಾದ ಸಂದರ್ಭದ ಉಲ್ಲೇಖವಿದೆ. ಅದರಂತೆ ಪೌದನಪುರದಲ್ಲಿ ಭರತ ಸ್ಥಾಪಿಸಿದ ಬಾಹುಬಲಿ ಮೂರ್ತಿಯನ್ನು ಚಾವುಂಡರಾಯನು ತನ್ನ ತಾಯಿಯ ತಾಯಿಗೆ ದರ್ಶನ ಮಾಡಿಸಲಾರದೆ ಹೋದುದಕ್ಕಾಗಿ ಗೊಮ್ಮಟನ ಮೂರ್ತಿಯನ್ನು ನಿರ್ಮಾಣ ಮಾಡಿದನೆಂದು ಪ್ರತೀತಿ ಇದೆ.

ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿರುವ ವರದರಾಜ ಸ್ವಾಮಿ ದೇವಾಲಯದ ಪ್ರತಿಷ್ಠೆಯಲ್ಲಿಯೂ ಇದೇ ಬಗೆಯ ಐತಿಹ್ಯ ಇರುವುದನ್ನು ಇಲ್ಲಿ ಸ್ಮರಿಸಬಹುದು. ಹೊಯ್ಸಳ ದೊರೆ ವಿಷ್ಣುವರ್ಧನನು ತನ್ನ ತಾಯಿಗೆ ಕಂಚಿಯಲ್ಲಿರುವ ವರದನಾಥ ಸ್ವಾಮಿಯನ್ನು ದರ್ಶನ ಮಾಡಿಸಲಾಗದೆ ಹೋದ ಕಾರಣ ಅದೇ ಬಗೆಯ ಮೂರ್ತಿಯನ್ನು ಮದ್ದೂರಿನ ನರಸಿಂಹಸ್ವಾಮಿ ದೇವಾಲಯದ ಪಕ್ಕದಲ್ಲಿ ನಿರ್ಮಿಸಿ ಅದನ್ನು ಪ್ರತಿಷ್ಠಾಪಿಸಿ ತನ್ನ ತಾಯಿಗೆ ಕಂಚಿಯ ವರದರಾಜ ಸ್ವಾಮಿಯ ದರ್ಶನ ಮಾಡಿಸಿದಂತೆ ಪ್ರತೀತಿಯಿದೆ. ಇಂದಿಗೂ ಈ ದೇವಾಲಯವನ್ನು ಇಲ್ಲಿ ಕಾಣಬಹುದು. ಚಾವುಂಡರಾಯನು ಗೊಮ್ಮಟ ಮೂರ್ತಿಗೆ ಮಹಾಮಸ್ತಕಾಭಿಷೇಕ ಮಾಡಿಸಿದ ಸಂದರ್ಭವನ್ನು ಬೊಪ್ಪಣ ಕವಿಯ ಗೊಮ್ಮಟ ಸ್ತುತಿಯಲ್ಲಿ ಕಾಣಬಹುದು.

ಇದರಲ್ಲಿಯೂ ಕೂಡ ಈ ಮೊದಲು ಹೇಳಿದಂತೆ ಭರತನಿರ್ಮಿತ ಬಾಹುಬಲಿ ಪ್ರತಿಮೆಯ ಪ್ರತಿಷ್ಠಾಪನ ವಿಧಿಯ ಕಾಲದಲ್ಲಿ ನಡೆದ ಮಹಾಮಸ್ತಕಾಭಿಷೇಕದ ಆಚರಣೆಯ ಅನುಸರಣೆಯೇ ಇಲ್ಲಿಯೂ ಕಂಡುಬರುತ್ತದೆ. ಇದು ಕರ್ನಾಟಕದ ಎಲ್ಲ ಗೊಮ್ಮಟ ಮೂರ್ತಿಗಳಿಗೆ ನೆರವೇರುವ ಮಸ್ತಕಾಭಿಷೇಕದ ಪರಂಪರೆಯನ್ನು ಸೃಷ್ಟಿಸಿದೆ. ಮಹಾಮಸ್ತಕಾಭಿಷೇಕ ವಿಧಿಯನ್ನು ಪ್ರತ್ಯೇಕವಾಗಿ ದಾಖಲಿಸುವ ಯಾವ ಆಕರ ಗ್ರಂಥಗಳೂ ಇಲ್ಲ. ಆದರೆ ನೇಮಿಚಂದ್ರಾಚಾರ್ಯರು ರಚಿಸಿರುವ ಪ್ರತಿಷ್ಠಾ ತಿಲಕಂ ಕೃತಿಯೇ ಪಂಚಕಲ್ಯಾಣ ಪೂಜಾಕಾರ್ಯ ನಿರ್ವಹಣೆಗೆ ಅರ್ಚಕರು ಆಧರಿಸಿರುವ ಗ್ರಂಥ. ದಕ್ಷಿಣ ಭಾರತದ ಎಲ್ಲ ಕಡೆ ಪ್ರತಿಷ್ಠಾ ತಿಲಕ ಪೂಜಾವಿಧಾನವನ್ನು ಜೈನರು ಅನುಸರಿಸುವುದನ್ನು ಕಾಣುತ್ತೇವೆ. ಜಿನಮೂರ್ತಿಗೆ ಅಭಿಷೇಕ ಮಾಡುವ ವಿಷಯದಲ್ಲಿ ವಿದ್ವಾಂಸರಲ್ಲಿ ಮತ್ತು ಪಂಥಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ದಕ್ಷಿಣ ಭಾರತದ ದಿಗಂಬರ ಪಂಥೀಯರು ಪಂಚಾಮೃತಾಭಿಷೇಕವನ್ನು ಒಪ್ಪಿ, ನೆರವೇರಿಸಿಕೊಂಡು ಹೋಗುತ್ತಿದ್ದಾರೆ.

ಶಾಂತಿರಾಜ ಶಾಸ್ತ್ರಿಗಳ ಪ್ರಕಾರ ಜಲಾಭಿಷೇಕವೇ ಶ್ರೇಷ್ಠವಾದುದು. ಇದಕ್ಕೆ ಜೈನ ಶೃತಿಗಳ ಸಮ್ಮತವೂ ಇದೆ. ಅಲ್ಲದೆ ಕೆಲವೊಂದು ಸಂದರ್ಭಗಳಲ್ಲಿ ಅಭಿಷೇಕಕ್ಕೆ ಬಳಸುವ ಇತರ ವಸ್ತುಗಳೆಲ್ಲವೂ ಭಕ್ತಿಪರವಶತೆಯ ದ್ಯೋತಕಗಳಾಗಿ ರೂಢಿಗೆ ಬಂದಿವೆ. ಪಂಚಾಮೃತ

ಸ್ನಾನವಿಧಿಯಲ್ಲಿ ಅಥವಾ ಅಭಿಷೇಕ ವಿಧಿಯಲ್ಲಿ ಮೊದಲನೆಯ ಹಂತದಲ್ಲಿ ಜಲಕ್ಕೇ ಹೆಚ್ಚಿನ ಪ್ರಾಶಸ್ತ್ಯ. ಎರಡನೆಯ ಹಂತ ಹಾಲು, ನಂತರ ಶುದ್ಧ ನೀರು, ಮೂರನೆಯ ಹಂತದಲ್ಲಿ ಜಲ ಮತ್ತು ಹಣ್ಣುಗಳು ಹಾಗೂ ತರುರಸಗಳನ್ನು ಗೋರಸವನ್ನು ಬಳಸಲಾಗುತ್ತದೆ. ಅಂದರೆ ಹಾಲು, ತುಪ್ಪ, ಮೊಸರನ್ನು ಬಳಸಬೇಕೆಂದು ಹೇಳುತ್ತಾರಾದರೂ ಕೆಲವೊಮ್ಮೆ ದ್ರಾಕ್ಷಿ ಇತ್ಯಾದಿ ಒಣ ಹಣ್ಣುಗಳನ್ನು ಇಡಿಯಾಗಿ ಅಭಿಷೇಕದಲ್ಲಿ ಬಳಸುವುದುಂಟು.

ಕೆಲವೊಂದು ಕಾವ್ಯಗಳಲ್ಲಿ ಕಾಕಂಬಿ, ಬೆಲ್ಲದ ತುರಿ, ತೆಂಗಿನ ತುರಿ ಅಭಿಷೇಕಗಳು ಕಂಡುಬರುತ್ತವೆಂದು ಶಾಂತಿರಾಜ ಶಾಸ್ತ್ರಿಗಳು ಅಭಿಪ್ರಾಯ ಪಡುತ್ತಾರೆ. ಭುಜಬಲಿ, ಅನಂತಕವಿ, ದೊಡ್ಡಯ್ಯ ಕವಿಗಳು ಮಹಾಮಸ್ತಕಾಭಿಷೇಕದ ಪ್ರತ್ಯಕ್ಷದರ್ಶಿಗಳಾಗಿದ್ದು ತಮ್ಮ ವರ್ಣನೆಯಲ್ಲಿ ತೆಂಗಿನತುರಿ ಇತ್ಯಾದಿಗಳನ್ನು ಬಳಸಿದುದನ್ನು ಉಲ್ಲೇಖಿಸುತ್ತಾರೆ. ಇತ್ತೀಚಿಗೆ ಮಹಾಮಸ್ತಕಾಭಿಷೇಕವು ಅನೇಕ ದಿನಗಳವರೆಗೆ ಮುಂದುವರಿಯುವುದರಿಂದ ಶುದ್ಧತೆಯ ದೃಷ್ಟಿಯಿಂದ ತುಪ್ಪ, ಮೊಸರು ಇತ್ಯಾದಿ ಗೋರಸಗಳನ್ನು ತ್ಯಜಿಸಲಾಗಿದೆ. ಅದಕ್ಕೆ ತೀವ್ರ ಅಹಿಂಸಾವ್ರತವೂ ಕಾರಣವೆಂದು ತಿಳಿದುಬಂದಿದೆ. ಆದರೆ ಗೊಮ್ಮಟನ ಪಾದದಲ್ಲಿ ಇಟ್ಟಿರುವ ಲೋಹದ ಮೂರ್ತಿಗೆ ಈ ಎಲ್ಲ ಅಭಿಷೇಕವನ್ನು ನೆರವೇರಿಸುವ ಸಂಪ್ರದಾಯವಿದೆ.

ಇದಲ್ಲದೆ ಅಭಿಷೇಕದಲ್ಲಿ ತೊಡಗುವ ಎಲ್ಲ ಪುರೋಹಿತರಿಗೆ ಒಂದು ತಿಂಗಳ ಮುಂಚೆ ಕಂಕಣ ಧಾರಣೆ ಮಾಡಿಸಿ ಬ್ರಹ್ಮಚರ್ಯ ವ್ರತವನ್ನು ಕಟ್ಟುನಿಟ್ಟಾಗಿ ಪಾಲಿಸಲು ವ್ಯವಸ್ಥೆ ಮಾಡಲಾಗುತ್ತದೆ. ಬಾಹುಬಲಿ ಮೂರ್ತಿಗೆ ಮಹಾಮಸ್ತಕಾಭಿಷೇಕ ನೆರವೇರಿಸುವ ಮುನ್ನ ಸ್ಥಳೀಯ ಸಂಪ್ರದಾಯದಂತೆ ಕ್ಷೇತ್ರದ ಅಧಿಪತಿಯಾದ ನೇಮಿನಾಥ ತೀರ್ಥಂಕರರಿಗೆ ಪಂಚಕಲ್ಯಾಣ ಮಹೋತ್ಸವವನ್ನು ಗುಳ್ಳಕಾಯಿ ಅಜ್ಜಿಯ ಮೂಲಕ ಚಾವುಂಡರಾಯನ ಅಹಂಕಾರ ಮುರಿದ ಕೂಷ್ಮಾಂಡಿನಿ ಯಕ್ಷಿಯ ಪೂಜೆಯನ್ನು ಸ್ಥಾನಿಕ ಪರಂಪರೆಗೆ ಅನುಗುಣವಾಗಿ ಅರ್ಚಿಸಿ, ಪೂಜೆಯನ್ನು ನೆರವೇರಿಸಿ ಆನಂತರ ಮಹಾಮಸ್ತಕಾಭಿಷೇಕ ವಿಧಿಯನ್ನು ಪ್ರಾರಂಭಿಸಲಾಗುತ್ತದೆ. ಪ್ರಾರಂಭದಲ್ಲಿ ಪುರೋಹಿತರುಗಳು 1008 ಕಲಶಗಳನ್ನು ಸ್ಥಾಪಿಸಿ ದೇವತೆಗಳನ್ನಾಹ್ವಾನಿಸಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಆಂತರಿಕ, ಬಾಹ್ಯ, ಅಡಚಣೆಗಳಾಗದಿರಲು ಶುದ್ಧೀಕರಣ ಕ್ರಿಯೆಯನ್ನು ನಡೆಸಿ ನೂರೆಂಟು ಗುಣಗಳ ಸಂಕೇತಕ್ಕನುಗುಣವಾಗಿ ಈ ಕಲಶಗಳನ್ನು ಸ್ಥಾಪಿಸಲಾಗುತ್ತದೆ.

ಮಧ್ಯದಲ್ಲಿ ಪೂರ್ಣಕುಂಭವೂ ಇರುತ್ತದೆ. ಕರ್ಪೂರ, ಅಗರು, ಶ್ವೇತಚಂದನ, ರಕ್ತಚಂದನ, ಜಟಾಮಾಂಸಿ, ಕಚೋರ, ಕುಂಕುಮ ಕೇಸರಿ, ಪಚ್ಚಕರ್ಪೂರ, ಸಿದ್ಧಾರ್ಥಕ ಇತ್ಯಾದಿ

ಚೂರ್ಣಗಳಿಂದ ಸುಗಂಧಪೂರಿತವಾದ ಜಲವನ್ನು ಈ ಪೂರ್ಣಕುಂಭಗಳಲ್ಲಿ ತುಂಬಿಸುತ್ತಾರೆ. ಇಡೀ ಮಹಾಮಸ್ತಕಾಭಿಷೇಕವು ಮಠಾಧೀಶರ ನೇತೃತ್ವದಲ್ಲಿ ಮುಖ್ಯ ಆಚಾರ್ಯರು ಮುನಿಗಳ ನೇತೃತ್ವದಲ್ಲಿ ನೆರವೇರುತ್ತದೆ. ಅಭಿಷೇಕದ ಕ್ರಮ ಹೀಗಿರುತ್ತದೆ. ಮೊದಲಿಗೆ ಜಲಾಭಿಷೇಕ, ಅನಂತರ ಕ್ರಮವಾಗಿ ಎಳನೀರು, ಇಕ್ಷುರಸ, ಹಾಲು, ಕಲ್ಕಚೂರ್ಣ ಅಭಿಷೇಕ ನೆರವೇರುತ್ತದೆ. ಅಭಿಷೇಕದ ಮಹಾವಸ್ತು ಕಾಶಾಯ ದೇವದಾರು, ಜಾಯಿಕಾಯಿ, ಅತ್ತಿ, ಆಲ, ಚಕ್ಕೆ ಇತ್ಯಾದಿ ಸರ್ವ ಔಷಧಯುಕ್ತ ಬೇರುಗಳನ್ನು ಕುದಿಸಿ, ಕಷಾಯವನ್ನು ತಯಾರು ಮಾಡಲಾಗಿರುತ್ತದೆ. ಶುದ್ಧ ಜಲಹೊಂದಿದ ಚತುಷ್ಕೋನ ಕುಂಭಾಭಿಷೇಕಗಳ ನಂತರ ಶ್ವೇತ ಹಾಗೂ ರಕ್ತಚಂದನ, ಗಂಧಾಭಿಷೇಕ, ಅಷ್ಟಚೂರ್ಣಗಳು ಅಂದರೆ, ಗಂಧಾಷ್ಟ, ಶುದ್ಧ ಕೇಸರಿ ಇತ್ಯಾದಿ ಅಭಿಷೇಕಗಳು ನೆರವೇರುತ್ತವೆ. ಆನಂತರ ಸುವರ್ಣಪುಷ್ಪ ವೃಷ್ಟಿ, ರತ್ನಪುಷ್ಪವೃಷ್ಟಿ ನೆರವೇರುತ್ತದೆ. ಕೊನೆಯಲ್ಲಿ ಪೂರ್ಣಕುಂಭವನ್ನು ಬಳಸಿ ಅಭಿಷೇಕ ಮಾಡಲಾಗುತ್ತದೆ. ಇದು ಇಡೀ ವಿಶ್ವಕ್ಕೆ ಎಲ್ಲ ಚರಾಚರ ಜೀವರಾಶಿಗಳಿಗೆ ಶಾಂತಿಯನ್ನು ಒದಗಿಸುವ ಮಹಾಸಂಕಲ್ಪದಿಂದ ನೆರವೇರುವ ಅಭಿಷೇಕವಾಗಿದೆ.

ಮಹಾಮಸ್ತಕಾಭಿಷೇಕದ ಜಲ ಮತ್ತು ಇತ್ಯಾದಿಗಳನ್ನು ಹೊಸ ಬಟ್ಟೆಯಲ್ಲಿ ಸಂಗ್ರಹಿಸಿ ಒಣಗಿಸಿ, ಅದನ್ನು ಪೂಜಾದಿ ಗೃಹಗಳಲ್ಲಿ ಇಟ್ಟುಕೊಳ್ಳುವ ಸಂಪ್ರದಾಯವಿದೆ. ಸೂತಕಾದಿಗಳ ನಂತರ ಆ ಬಟ್ಟೆಯನ್ನು ಶುದ್ಧ ಜಲದಲ್ಲಿ ಅದ್ದಿ ಸೂತಕ ನಿವಾರಣೆಗೆ ಗೃಹಗಳಿಗೆ ಸಂಪ್ರೋಕ್ಷಿಸುವ ಪದ್ಧತಿ ಕೂಡ ಕಂಡುಬರುತ್ತದೆ. (ಈ ವಿವರಗಳನ್ನು 2018ರ ಮಹಾಮಸ್ತಕಾಭಿಷೇಕದ ಮುಖ್ಯ ಅರ್ಚಕರಾಗಿದ್ದ ಶಾಂತಿರಾಜ ಶಾಸ್ತ್ರಿಗಳು ಮತ್ತು ಅಲ್ಲಿನ ಭಟ್ಟಾರಕರಾದ ಚಾರುಕೀರ್ತಿ ಮಹಾಸ್ವಾಮಿಗಳು ಮತ್ತು ಇತರ ಪಂಡಿತವರ್ಗದ ಸಲಹೆಯನ್ನು ಆಧರಿಸಿ ಸಂಕಲಿಸಲಾಗಿದೆ.)

ನೋಂಪಿ ವ್ರತಗಳು : ಶಕ್ತಿಯ ಆರಾಧನೆಯು ಜೈನರ ಆರಾಧನೆಗಳಲ್ಲಿ ಬಹುಮುಖ್ಯವಾದದ್ದು. ಇದರಲ್ಲಿ ನೋಂಪಿ ದೇವತೆಯ ಆಚರಣೆಯಲ್ಲಿನ ಮಾತೃ ಆರಾಧನೆಯ ಪರಿಕಲ್ಪನೆಯು ತೀರ ಪ್ರಾಚೀನವಾದುದು. ಇದು ಮೂಲ ದ್ರಾವಿಡ ಕಾಲದಿಂದಲೂ ಬೆಳೆದುಬಂದ ಪದ್ಧತಿಯಾಗಿದ್ದು, ಸಿಂಧೂ ಸರಸ್ವತೀ ನಾಗರೀಕತೆಯ ಕಾಲದಲ್ಲೇ ಮಾತೃಕಾರಾಧನೆ ಇದ್ದುದಕ್ಕೆ ಆಧಾರವಿದೆ. ಆನಂತರ ವೈದಿಕ ಸಂಸ್ಕೃತಿಯು ಇದನ್ನು ಅಳವಡಿಸಿಕೊಂಡಿತು. ಕ್ರಿ.ಶ. ಆರಂಭ ಕಾಲದಿಂದಲೇ ತೀರ್ಥಂಕರರ ಜೊತೆಗೆ ಆತನ ಯಕ್ಷ-ಯಕ್ಷಿಯರನ್ನು ಪೂಜಿಸುವ ಸಂಪ್ರದಾಯವೂ ಪ್ರಾರಂಭವಾಯಿತು. ಆನಂತರದ ಕಾಲದಲ್ಲಿ ಸ್ವತಂತ್ರವಾಗಿ ಯಕ್ಷಿಯರನ್ನು ಪೂಜಿಸುವ ಸಂಪ್ರದಾಯ ಬೆಳೆವಣಿಗೆ ಹೊಂದಿತು. ಆ ಬಳಿಕ ನೋಂಪಿ ಆಚರಣೆಯಲ್ಲಿ ಇದಕ್ಕೆ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು.[60]

ಜೈನಮತೀಯರು ವ್ರತಗಳನ್ನು ವಿಶಿಷ್ಟವಾಗಿ ಆಚರಿಸಿಕೊಂಡು ಬಂದಿರುವುದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಮಂಡ್ಯ ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಬಸದಿಗಳು ಹಾಗೂ ಅಲ್ಲಿರುವ ಜಿನಬಿಂಬಗಳು ನೋಂಪಿಯ ಜನಪ್ರಿಯತೆಯನ್ನು ನಮಗೆ ಸಾರುತ್ತವೆ. ನೋಂಪಿಯ ಉದ್ಯಾಪನೆಯ (ಮುಕ್ತಾಯದ) ಸಂದರ್ಭದಲ್ಲಿ, ಯಕ್ಷ ಯಕ್ಷಿ ಸಹಿತ ಜಿನಬಿಂಬವನ್ನು ಬಸದಿಗೆ ದಾನನೀಡುವ ವಿಧಿಯಿದೆ. ಇದೇ ಬಗೆಯಲ್ಲಿ ಅನಂತ ನೋಂಪಿ, ಶ್ರೀ ಪಂಚಮಿ ನೋಂಪಿ, ನಂದೀಶ್ವರನ ನೋಂಪಿ, ಜೀವ ದಯಾಷ್ಟಮಿ ನೋಂಪಿ ಹೀಗೆ ಹತ್ತು ಹಲವಾರು ನೋಂಪಿಗಳ ಉಲ್ಲೇಖಗಳು ಜೈನ ಸಂಪ್ರದಾಯದಲ್ಲಿ ಕಂಡುಬರುತ್ತವೆ. ನೋಂಪಿಯ ಕಥೆಗಳನ್ನೊಳಗೊಂಡ ತಾಡವೋಲೆಯ ನೂರಾರು ಹಸ್ತಪ್ರತಿಗಳು ಈಗಲೂ ಕಂಡುಬರುತ್ತಿರುವುದು ಜೈನಮತೀಯರು ನೋಂಪಿಯ ಬಗ್ಗೆ ಹೊಂದಿದ್ದ ಅಗಾಧ ನಂಬಿಕೆ ಮತ್ತು ಶ್ರದ್ಧೆಯನ್ನು ಸಾಕ್ಷೀಕರಿಸುತ್ತವೆ.[61]

ಮಾತೃದೇವತೆಯ ಆರಾಧನಾ ಇತಿಹಾಸ ಗಮನಿಸಿದಾಗ ನೋಂಪಿಯ ಆಚರಣೆಯಲ್ಲಿ ಗಮನಿಸಬಹುದು. ಸ್ತ್ರೀ ವಿಗ್ರಹದ ಬಳಿ ಗಂಡಿನ ವಿಗ್ರಹವಿರುವುದನ್ನು ಸ್ತ್ರೀ ದೇವತೆಯು ಗಂಡ ಅಥವಾ ಮಗನ ಜೊತೆಯಲ್ಲಿ ಇರುವುದರಿಂದ ಪುರುಷ ಶಕ್ತಿ ಸಂವರ್ಧನೆಯಾಗುತ್ತದೆಯೆಂಬ ನಂಬಿಕೆಯಿದೆ. ಜೈನ ವಾಸ್ತು ಪರಂಪರೆಯಲ್ಲಿ ವೃಷಭದೇವನಿಂದ ಮೊದಲ್ಗೊಂಡು ವರ್ಧಮಾನನವರೆಗಿನ ಇಪ್ಪತ್ತನಾಲ್ಕು ತೀರ್ಥಂಕರರ ಜೊತೆಗೆ, ಯಕ್ಷ ಯಕ್ಷಿಯರನ್ನು ಆಯಾ ತೀರ್ಥಂಕರರ ಜೊತೆ ಜೊತೆಯಲ್ಲಿಯೇ ಸ್ಥಾಪಿಸುತ್ತಾರೆ.[62] ಯಕ್ಷ ಯಕ್ಷಿಯರಲ್ಲಿ ಹೆಚ್ಚು ಜನಪ್ರಿಯರಾದವರೆಂದರೆ ಧರಣೇಂದ್ರ, ಸರ್ವಾಹ್ಣ, ಬ್ರಹ್ಮ ಮತ್ತು ವಿಜಯರೆಂಬ ನಾಲ್ಕು ಜನ ಯಕ್ಷರು ಮತ್ತು ಚಕ್ರೇಶ್ವರಿ, ಅಂಬಿಕೆ (ಕೂಷ್ಮಾಂಡಿನಿ), ಪದ್ಮಾವತಿ ಮತ್ತು ಜ್ವಾಲಾಮಾಲಿನಿಯರೆಂಬ ಯಕ್ಷಿಯರು.[63] ಇವರಲ್ಲಿ ಅಂಬಿಕಾ ಯಕ್ಷಿಯಂತೂ ತನ್ನ ತೊಡೆಯ ಮೇಲೆ ಪ್ರಭಂಕರ ಶುಭಂಕರರೆಂಬ ಮಕ್ಕಳನ್ನು ಕುಳ್ಳಿರಿಸಿಕೊಂಡಿರುತ್ತಾಳೆ. ಈಕೆಯ ಪಾದದ ಬಳಿ ಪತಿ ಸೋಮಶರ್ಮ ಸಿಂಹರೂಪಿಯಾಗಿರುತ್ತಾನೆ.[64] ಈ ಯಕ್ಷಿಯರನ್ನು ಜೈನರು ಮಾತೃದೇವತೆಯಾಗಿ, ಸಂತಾನಾಭಿವೃದ್ಧಿಗೆ ಬೆಳೆಗಳ ರಕ್ಷಣೆಗೆ, ಪಶು ಮತ್ತು ಮಾನವರ ಆರೋಗ್ಯದಾಯಿನಿಯಾಗಿ, ವಿಶೇಷವಾಗಿ ಆರಾಧಿಸುತ್ತಾರೆ. ಈ ಯಕ್ಷಿಯರಿಗೆ ನೋಂಪಿಯ ಆರಾಧನೆಯಲ್ಲೂ ಮುಖ್ಯ ಸ್ಥಾನವಿದೆ.

ನೋಂಪಿಯೆಂದರೆ, ಕಾಮ್ಯ ಸಾಧನೆಗಾಗಿ ಕೈಗೊಳ್ಳುವ ವ್ರತ. ನೋಂಪಿಗೆ ವಿಧಿಪೂರ್ವಕವಾಗಿ ಧಾರ್ಮಿಕ ನಿಯಮಗಳನ್ನು ಅನುಸರಿಸಿ ಆರಾಧಿಸುವ ಆರಾಧನೆ ಎಂಬ ಅರ್ಥವೂ ಇದೆ. ಈ ನೋಂಪಿಗಳು–ವ್ರತಗಳು ಮಾನವನ ಕಾಮ್ಯಪ್ರಾಪ್ತಿ, ಆತ್ಮೋನ್ನತಿಗೆ ಮತ್ತು

ಕರ್ಮಕ್ಷಯಕ್ಕೆ ಅಗತ್ಯವೆಂದು ಜೈನರು ಭಾವಿಸಿದ್ದಾರೆ. ಉಪಾಸನೆ, ಅಭಿಷೇಕ, ಪೂಜಾವಿಧಿಗಳಿಂದ ಶುಭ ಪರಿಣಾಮಗಳುಂಟಾಗುತ್ತವೆಂದು ಜೈನಾಚಾರ್ಯರುಗಳೂ ನಂಬಿದ್ದರು. ಯಕ್ಷ ಯಕ್ಷಿ ಮೊದಲಾದ ದೇವತೆಗಳ ಪೂಜೆಯು ನಿಶ್ಚಯ ನಯದ ದೃಷ್ಟಿಯಿಂದ ಮಿಥ್ಯಾತ್ವವೆಂದು ಆಶಾಧರಸೂರಿ ಮೊದಲಾದವರು ಖಂಡಿಸಿದ್ದರೂ ಪೂಜ್ಯಪಾದ ಏಲಾಚಾರ್ಯ, ಅಕಳಂಕ, ಮಲ್ಲಷೇಣ ಮೊದಲಾದವರು ವ್ಯವಹಾರ ದೃಷ್ಟಿಯಿಂದ ವ್ರತ, ಪೂಜೆಗಳು ಅಗತ್ಯವೆಂದು ಸಾರಿದರು. ಯಕ್ಷ–ಯಕ್ಷಿಯರು ತೀರ್ಥಂಕರರ ಸೇವೆಯಲ್ಲಿ ನಿರತರಾಗಿರುವುದರಿಂದ ಅವರನ್ನು ಸಮ್ಯಕ್ಯ ದೃಷ್ಟಿಯವರೆಂದು ಭಾವಿಸಿ ಪೂಜಿಸಬೇಕು. ಇಲ್ಲವಾದರೆ ಜನಸಾಮಾನ್ಯರು ಉಪಾಯವಿಲ್ಲದೆ ಮಾರಿ ಮಸಣಿ ಮೊದಲಾದ ಕ್ಷುದ್ರ ದೇವತೆಗಳ ಪೂಜೆಗೆ ತೊಡಗಿಯಾರು ಎಂದು ಸೋಮದೇವರು ಎಚ್ಚರಿಸುತ್ತಾ ಹೀಗೆ ದಾಖಲಿಸುತ್ತಾನೆ.

ಸರ್ವ ಏವಹಿ ಜೈನಾನಾಣ ಪ್ರಮಾಣಂ ಲೌಕಿಕೋ ವಿಧಿಃ
ಯತ್ರ ಸಮ್ಯಕ್ತ್ವ ಹಾನಿರ್ನಯತ್ರ ನವ್ರತ ದೂಷಣಮ್[65]

ಎಲ್ಲಿ ಸಂಯುಕ್ತ್ವಕ್ಕೆ ಹಾನಿಯಿಲ್ಲವೋ ಅಂಥ ವ್ರತವು ದೂಷಣಕಾರಿಯಾಗದು ಎಂದು ಸ್ಪಷ್ಟಪಡಿಸುತ್ತಾನೆ. ಜೈನ ಧರ್ಮೀಯರಲ್ಲಿ ಆರಾಧನೆ, ಪೂಜಾಪದ್ಧತಿಗಳು ಆರಂಭದಲ್ಲಿ ಇರಲಿಲ್ಲವೆಂದೂ ಜೈನಪುರಾಣಗಳು ರಚನೆಗೊಂಡ ಬಳಿಕ ಹೆಚ್ಚಾದವೆಂಬ ಅಭಿಪ್ರಾಯವಿದೆ. 700ರ ಶ್ರವಣ ಬೆಳಗೊಳದ ಶಾಸನದಲ್ಲಿ ಸಸಿಮತಿಗಂತಿಯರು "ನೆರೆದಾದ ವ್ರತಶೀಲ ನೋಂಪಿ ಗುಣದಿಂದ ನೋಂತು ತೀರ್ಥಗಿರಿ ಮೇಲೆ ಸ್ವರ್ಗಾಲಯಕ್ಕೆ ದಾರ್"[66] ಎಂದು ಉಕ್ತವಾಗಿದೆ. ಇದರಿಂದ ಕರ್ನಾಟಕದಲ್ಲಿ ಜೈನಧರ್ಮವು ಪ್ರವರ್ಧಮಾನಕ್ಕೆ ಬರುವ ಹೊತ್ತಿಗೆ ಇಂಥ ಆಚರಣೆಗಳೆಲ್ಲವೂ ಅದರಲ್ಲಿ ಅಡಕವಾಗಿದ್ದವೆಂದು ಹೇಳಬಹುದು.

ಈ ಹಿಂದೆ ಪ್ರಸ್ತಾಪಿಸಿರುವಂತೆ ಜೈನ ಧರ್ಮೀಯರು ನೋಂಪಿ ಆಚರಣೆಯನ್ನು ವ್ಯಾಪಕವಾಗಿ ಆಚರಿಸಿಕೊಂಡು ಬಂದಿದ್ದು ಇಂದಿಗೂ ಇದು ಜೀವಂತವಾಗಿರಲು ಸಹಕಾರಿಯಾಗಿದೆ. ಇದನ್ನು ವೈಯಕ್ತಿಕವಾಗಿ, ಸಾಮೂಹಿಕವಾಗಿಯೂ ಆಚರಿಸುವುದನ್ನು ಕಾಣಬಹುದು. ಗಂಡಸರು, ಹೆಂಗಸರು, ಮಕ್ಕಳು ವಯಸ್ಸಿನ ನಿರ್ಬಂಧವಿಲ್ಲದೆ ನೋಂಪಿಗಳನ್ನು ಧಾರ್ಮಿಕವಾಗಿ ಆಚರಿಸುತ್ತಾರೆ. ನೋಂಪಿ ಆಚರಿಸುವಾಗ, ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ.

ತ್ರಿಕರಣಪೂರ್ವಕವಾಗಿ ಪರಿಶುದ್ಧತೆಯಿಂದ ಈ ನೋಂಪಿ ವ್ರತವನ್ನು ಆಚರಿಸಬೇಕು. ವ್ರತಪಾಲನೆಗೆ ಬಸದಿಗಳು ಪ್ರಶಸ್ತವಾದ ಸ್ಥಳ, ರಾಗ, ದ್ವೇಷ, ಭೋಗ, ಮದ, ಮಾತ್ಸರ್ಯಗಳಿಗೆ

ತಿಲಾಂಜಲಿ ಕೊಡಬೇಕು. ಶಯ್ಯಾಸುಖ ತ್ಯಾಗ ಮಾಡಬೇಕು. ಬ್ರಹ್ಮಚರ್ಯಪಾಲನೆ ಕಡ್ಡಾಯ, ಏಕಭುಕ್ತ, ಉಪವಾಸ, ಪುರಾಣ ಶ್ರವಣ, ಲಘು ಆಹಾರ ಸೇವನೆ (ಹಾಲು, ಗಂಜಿ, ಹಣ್ಣು) ಇತ್ಯಾದಿ ಪಾಲಿಸಬೇಕಾಗುತ್ತದೆ. ಯಾವುದೇ ನೋಂಪಿಯ ಆಚರಣೆಗೆ ಶ್ರಾವಕನು ವ್ರತಸ್ಥನಾದರೆ ಅದಕ್ಕೆ ಸಂಬಂಧಿಸಿದ ಪುರಾಣ ಕಥೆಯಲ್ಲಿರುವ ವಿಧಾನಗಳನ್ನೇ ಅನುಸರಿಸಬೇಕಾಗುತ್ತದೆ. ಯಾರು ಯಾವುದೇ ನೋಂಪಿಗಳನ್ನು ಎಷ್ಟು ಭಾರಿ ಬೇಕಾದರೂ ಆಚರಿಸಬಹುದು. ಆದರೆ ಎಲ್ಲಿ ನೋಂಪಿಯನ್ನು ಆಚರಿಸುತ್ತಾರೋ ಅಲ್ಲಿಯೇ ಅದರ ಉದ್ಯಾಪನೆ ಮಾಡಬೇಕೆಂಬ ನಿಯಮವಿದೆ.

ನೋಂಪಿ ಆಚರಣೆಯ ಕಾಲದಲ್ಲಿ ಬಸದಿಯನ್ನು ಬದಲಾಯಿಸಬೇಕಾಗಿ ಬಂದ ಸಂದರ್ಭಗಳಲ್ಲಿ ಮೊದಲು ಆರಂಭಿಸಿದ ಬಸದಿಯಿಂದ ದಾರವನ್ನು ಪಡೆದು, ಅನಂತರ ಅದನ್ನು ಹೊಸ ಬಸದಿಯಲ್ಲಿ ಕೊಟ್ಟು ನೋಂಪಿಯನ್ನು ಮುಂದುವರಿಸಬೇಕಾಗುತ್ತದೆ. ಎಲ್ಲಾ ನೋಂಪಿಗಳ ಆಚರಣಾ ಕ್ರಮ ಒಂದೇ ಆಗಿದ್ದರೂ ಆಚರಣೆಯಲ್ಲಿ ವ್ಯತ್ಯಾಸಗಳಿರುತ್ತವೆ. ರವಿವಾರದ ನೋಂಪಿ, ಶುಕ್ರವಾರದ ನೋಂಪಿಗಳನ್ನು ಕೇವಲ ಒಂದು ದಿನ ಆಚರಿಸುತ್ತಾರೆ. ಸಹಸ್ರನಾಮದ ನೋಂಪಿಯನ್ನು ಎರಡು ದಿನ ಮತ್ತು ಪುಷ್ಪಾಂಜಲಿ, ಉಪಸರ್ಗನಿವಾರಣೆ, ಸಿದ್ಧರ ನೋಂಪಿ ಮುಂತಾದವನ್ನು ಮೂರು ದಿನಗಳ ಪರ್ಯಂತ ಆಚರಿಸಬೇಕಾಗುತ್ತದೆ. ಇದೇ ರೀತಿ ಕಲಶ, ಬಾಗಿನ, ಚರು, ಅಕ್ಷತೆ, ಪುಂಜ, ಗಂಧ, ಎಲೆ, ಅಡಿಕೆ ಮೊದಲಾದ ಪೂಜಾದ್ರವ್ಯಗಳನ್ನು ಇಡುವ ಸಂಖ್ಯೆ ಸಹ ಒಂದೊಂದು ನೋಂಪಿಗೂ ಬೇರೆಬೇರೆಯಾಗಿರುತ್ತವೆ. ಒಂದು ನೋಂಪಿಯನ್ನು ಪ್ರಾರಂಭಿಸಿದ ಮೇಲೆ ಅದನ್ನು ಇಂತಿಷ್ಟು ವರ್ಷಗಳ ಕಾಲ ಆಚರಿಸಲೇಬೇಕೆಂಬ ನಿಯಮವಿದೆ. ಪುಷ್ಪಾಂಜಲಿ ನೋಂಪಿಯನ್ನು ಮೂರು ವರ್ಷ ಸತತವಾಗಿ ಆಚರಿಸಬೇಕು. ಚಂದನಷಷ್ಠೀ ನೋಂಪಿಯನ್ನು ಆರುವರ್ಷಗಳ ಕಾಲ ಆಚರಿಸಬೇಕು. ಉಪಸರ್ಗ ನಿವಾರಣಾ ನೋಂಪಿಯನ್ನು ಒಂಭತ್ತು ವರ್ಷ, ಮಂಗಳವಾರ ನೋಂಪಿಯನ್ನು ಹನ್ನೆರಡು ವರ್ಷ, ಅನಂತ ನೋಂಪಿಯನ್ನು ಹದಿನಾಲ್ಕು ವರ್ಷಗಳ ಕಾಲ ಆಚರಿಸಿ ಆ ಬಳಿಕ ವಿಧಿವತ್ತಾಗಿ ಉದ್ಯಾಪನೆಯನ್ನು ಮಾಡಬೇಕು. ಹಾಗೆ ಮಾಡದೆ ಮಧ್ಯದಲ್ಲಿ ಆ ನೋಂಪಿಯನ್ನು ಬಿಟ್ಟರೆ, ಉದ್ದೇಶಿತ ಫಲಪ್ರಾಪ್ತಿಯಾಗುವುದಿಲ್ಲ.[67]

ಅಷ್ಟಾಹ್ನಿಕ ಪರ್ವದ ಸಂದರ್ಭದಲ್ಲಿಯೇ ಸಾಮಾನ್ಯವಾಗಿ ನೋಂಪಿ ಆಚರಣೆಯನ್ನು ಪ್ರಾರಂಭಿಸುತ್ತಾರೆ. ಪ್ರತಿ ನೋಂಪಿಯ ಆಚರಣೆಗೆ ನಿಗದಿಯಾದ ಮಾಸ, ತಿಥಿ, ನಕ್ಷತ್ರಗಳಂದು ಆಚರಿಸಬೇಕೆಂದು ಪುರಾಣಗಳು ವಿಧಿಸಿವೆಯೋ ಅಂದೇ ಪುರಾಣಗಳಲ್ಲಿ ದಾಖಲಾಗಿರುವ ವಿಧಿವಿಧಾನಗಳಿಗೆ ಅನುಗುಣವಾಗಿ ಆಚರಿಸುತ್ತಾರೆ. ಶ್ರಾವಣಮಾಸದ ಶುದ್ಧ ಪಂಚಮಿಯಲ್ಲಿ ನಾಗರಪಂಚಮಿ; ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯೆಂದು ಶಿವರಾತ್ರಿ ಮತ್ತು ಭಾದ್ರಪದ

ಮಾಸ ಶುಕ್ಲಪಕ್ಷದ ತದಿಗೆಯ ದಿವಸ ಗೌರೀ ನೋಂಪಿಯನ್ನೂ ಆಚರಿಸುತ್ತಾರೆ. ಆಷಾಢ, ಶ್ರಾವಣ, ಭಾದ್ರಪದ, ಅಶ್ವೀಜಮಾಸಗಳಲ್ಲಿ ಹೆಚ್ಚಾಗಿ ನೋಂಪಿಗಳು ಆಚರಣೆಯಲ್ಲಿರುತ್ತವೆ. ಈ ಕಾಲವನ್ನು ಚಾತುರ್ಮಾಸವೆಂದೂ ಕರೆಯುತ್ತಾರೆ. ಇದು ವರ್ಷ ಋತುವೇ ಆಗಿರುವುದರಿಂದ ಜೈನಯತಿಗಳು ಬಸದಿಯಲ್ಲಿ ಚಾತುರ್ಮಾಸಕ್ಕೆ ತಂಗಿರುತ್ತಾರೆ. ಇದರಿಂದ ನೋಂಪಿಯನ್ನು ಆಚರಿಸುವ ಶ್ರಾವಕ ವ್ರತಿಕರಿಗೆ ಧರ್ಮ ಮಾರ್ಗದರ್ಶನ ಮಾಡುವುದಕ್ಕೂ ಹಾಗೂ ಧರ್ಮೋಪದೇಶಕ್ಕೂ ಸಕಾಲವಾಗಿರುತ್ತದೆ.

ನೋಂಪಿಗಳಲ್ಲಿ ನಿರ್ದಿಷ್ಟವಾದ ತೀರ್ಥಂಕರ ಮತ್ತು ಯಕ್ಷ ಯಕ್ಷಿಯರನ್ನು ಪೂಜಿಸಬೇಕೆಂಬ ನಿಯಮವಿದೆ.[68] ಶುಕ್ರವಾರ ನೋಂಪಿಯಲ್ಲಿ ಚಂದ್ರನಾಥ ತೀರ್ಥಂಕರ ಹಾಗೂ ಜ್ವಾಲಾಮಾಲಿನೀ ಯಕ್ಷಿಯನ್ನು ನಾಗರಪಂಚಮಿ ನೋಂಪಿಯಲ್ಲಿ ಪಾರ್ಶ್ವನಾಥ ತೀರ್ಥಂಕರ ಹಾಗೂ ಪದ್ಮಾವತೀ ಯಕ್ಷಿಯನ್ನು ಮತ್ತು ಗೌರೀ ನೋಂಪಿಯಲ್ಲಿ ಶ್ರೇಯಾಂಸ ತೀರ್ಥಂಕರ ಹಾಗೂ ಗೌರಿ ಯಕ್ಷಿಯನ್ನು ವಿಧಿವತ್ತಾಗಿ ಪೂಜೆ ಮಾಡಿ ಬಾಗಿನವನ್ನು ಸಮರ್ಪಿಸುತ್ತಾರೆ. ನೋಂಪಿ ವ್ರತದ ಕೊನೆಯಲ್ಲಿ ಉದ್ಯಾಪನೆ ಮಾಡುವಾಗ ಆಯಾ ನೋಂಪಿ ವ್ರತದ ಅಧಿದೇವತೆ ತೀರ್ಥಂಕರ ಮತ್ತು ಯಕ್ಷ ಯಕ್ಷಿಯರ ಕಾಮ್ಯ ಪ್ರತಿಮೆ ಮಾಡಿಸಿ ಬಸದಿಗೆ ದಾನ ನೀಡುತ್ತಾರೆ. ಕೆಲವು ಸಲ ಮುನಿಗಳಿಗೆ ಶಾಸ್ತ್ರಗ್ರಂಥ, ನವಿಲುಗರಿಯ ಪಿಂಛ, ಕಮಂಡಲುಗಳನ್ನೂ ಬಸದಿಗೆ ಮಂಗಲ ಉಪಕರಣಗಳನ್ನೂ ದಾನನೀಡಲಾಗುತ್ತದೆ.

ನೋಂಪಿ/ವ್ರತಗಳು ಜನಪ್ರಿಯವಾಗಲು ಕಾರಣವೆಂದರೆ, ಇದರಿಂದ ಪ್ರಾಪ್ತವಾಗುವ ಫಲಪ್ರಾಪ್ತಿಯ ಆಕರ್ಷಣೆ. ಇದಕ್ಕೆ ಮನಸೋತ ಅಂದಿನ ರಾಜರು, ರಾಣಿಯರು, ಮಂತ್ರಿಗಳು, ಅಧಿಕಾರಿಗಳು ಮತ್ತು ಜನಸಾಮಾನ್ಯರೆಲ್ಲರೂ ತಮಗೆ ಬೇಕಾದ ನೋಂಪಿಯನ್ನು ಆಯ್ದುಕೊಂಡರು. ಜೊತೆಗೆ ಆಯಾ ನೋಂಪಿಯ ಕಥೆಗಳಲ್ಲಿ ಹೇಳಿರುವ ಉತ್ತಮ ಫಲಗಳನ್ನು ಪಡೆದವರ ಪೂರ್ವಕಥೆಯನ್ನು ನಂಬಿ ತಾವು ಅದನ್ನು ಪಡೆಯಲು ಆಚರಿಸಿದ್ದಾರೆ.

ಜಿನದತ್ತ ಎನ್ನುವವನಿಗೆ ಔದುಂಬರ ಕುಷ್ಠರೋಗ ಬರುತ್ತದೆ. ಆತನ ಪತ್ನಿ ಇದನ್ನು ಕಂಡು ಭಯಗ್ರಸ್ತಳಾಗುತ್ತಾಳೆ. ದುಃಖದಿಂದ ಉದ್ವೇಗಗೊಂಡು ಚಿಂತಿತೆಯಾದಾಗ ಆಕೆಗೆ 'ಜೈನಂಗೆವಿಸ್ಮಯೋನಾಸ್ತಿ' ದಿವ್ಯವಚನವು ನೆನಪಾಗುತ್ತದೆ. ತನ್ನನ್ನು ತಾನೇ ಸಮಾಧಾನಪಡಿಸಿಕೊಂಡ ಆಕೆ ಶುಚಿರ್ಭೂತಳಾಗಿ ಚಂದ್ರನಾಥನಿಗೆ ಮತ್ತು ಜ್ವಾಲಾಮಾಲಿನಿಗೆ ಅಭಿಷೇಕ ಪೂಜೆಯನ್ನು ಮಾಡಿಸಿ, ತನ್ನ ಗಂಡನ ಕುಷ್ಠರೋಗವುವಾಸಿಯಾಗದಿದ್ದರೆ ತಾನು ಸನ್ಯಾಸ ಸ್ವೀಕರಿಸುವುದಾಗಿ ಪ್ರತಿಜ್ಞೆ ಮಾಡುತ್ತಾಳೆ. ಆಗ ಚಂದ್ರನಾಥನ ಯಕ್ಷಿಯಾದ ಜ್ವಾಲಾಮಾಲಿನಿಯ ಅವಧಿ ಜ್ಞಾನದಿಂದ

ಜಿನದತ್ತೆಯ ಪ್ರತಿಜ್ಞೆಯನ್ನು ಅರಿತು ಅವಳೆದುರು ಪ್ರತ್ಯಕ್ಷಳಾಗಿ ವಿಚಾರಿಸುತ್ತಾಳೆ. ಜಿನದತ್ತೆಯು ತನ್ನ ಗಂಡನು ಅನುಭವಿಸುತ್ತಿರುವ ಕುಷ್ಠರೋಗದ ವಿಚಾರವನ್ನು ಅರುಹಿ ಪರಿಹಾರ ಬೇಡಿಕೊಂಡಾಗ ಚಂದನಷಷ್ಠೀ ನೋಂಪಿಯನ್ನು ಆಚರಿಸಿ ಗಂಡನನ್ನು ರೋಗದಿಂದ ಮುಕ್ತಿಗೊಳಿಸುವ ದಾರಿ ತೋರುತ್ತಾಳೆ.[69] ಆದಿತ್ಯವಾರದ ನೋಂಪಿ, ಶುಕ್ರವಾರದ ನೋಂಪಿ, ಮಂಗಳವಾರದ ನೋಂಪಿ, ಗೌರಿ ನೋಂಪಿ ಮುಂತಾದ ನೋಂಪಿಗಳಲ್ಲಿ ತೀರ್ಥಂಕರ ಪಾರ್ಶ್ವನಾಥ ಜಿನನ ಯಕ್ಷಿ ಪದ್ಮಾವತಿ, ಚಂದ್ರನಾಥ ತೀರ್ಥಂಕರನ ಯಕ್ಷಿ ಜ್ವಾಲಾಮಾಲಿನಿ, ಶ್ರೇಯಾಂಸ ತೀರ್ಥಂಕರನ ಯಕ್ಷಿ ಗೌರಿದೇವಿಯ ಆರಾಧನೆ ಪ್ರಮುಖರಾಗಿದ್ದು, ಸ್ತ್ರೀಯರ ಬಯಕೆಗಳನ್ನು ಅವರು ಪೂರೈಸುತ್ತಾರೆಂಬ ನಂಬಿಕೆ ಇದೆ. ಇದರಿಂದ ಶ್ರಾವಕಿಯರು ವಿಶೇಷವಾಗಿ ಇಂಥ ನೋಂಪಿಗಳನ್ನು ಆಚರಿಸುತ್ತಾರೆ. ಇನ್ನೂ ಕೆಲವು ನೋಂಪಿಯ ಕಥೆಗಳಲ್ಲಿ ಸೂಚಿತವಾಗಿರುವ ಫಲಪ್ರಾಪ್ತಿಯ ವಿವರಗಳನ್ನು ಹೀಗೆ ಸಂಕಲಿಸಬಹುದು.[70]

ರವಿವಾರದ ನೋಂಪಿಯಾಚರಣೆಯಿಂದ ದಾರಿದ್ರ್ಯ ನಿವಾರಣೆಯಾಗಿ, ಸ್ವರ್ಗ ಮೋಕ್ಷಪ್ರಾಪ್ತಿಯಾಗುತ್ತದೆ. ಅನಂತನೋಂಪಿ ಆಚರಣೆಯು ಅತಿಶಯ ಗಣ್ಯ, ಇಷ್ಟಾರ್ಥ ಸಿದ್ಧಿಪ್ರಾಪ್ತಿ ಸಿದ್ಧಿಸುತ್ತದೆ. ಗೌರಿನೋಂಪಿಯ ಉದ್ಯಾಪನೆಯಿಂದ ಸೌಭಾಗ್ಯವತಿಯಾಗಿ ಧನ, ಕನಕ ಪ್ರಾಪ್ತಿಯೊಂದಿಗೆ ತುಂಬುಜೀವನ ಲಭ್ಯವಾಗುತ್ತದೆ. ಶ್ರಾವಕಿ ಸೌಭಾಗ್ಯದ ನೋಂಪಿ ಆಚರಣೆ ಮಾಡುವುದರಿಂದ ತನ್ನ ಗಂಡನಿಗೆ ಪ್ರಾಣವಲ್ಲಭೆಯಾಗುತ್ತಾಳೆ. ಸೂತಕ ಪರಿಹಾರದ ನೋಂಪಿ ಆಚರಿಸಿಕೊಂಡ ಶ್ರಾವಕನು ಅರಸರ ಬಸಿರಲ್ಲಿ ಹುಟ್ಟಿ ಅನಂತಭೋಗ ಸುಖ ಪಡೆದು ದೇವತೆಗಳಿಗೆ ಸಮಾನರಾದ ಮಕ್ಕಳನ್ನು ಪಡೆಯುತ್ತಾರೆ. ಸಿದ್ಧರ ನೋಂಪಿಯು ಆಯುಷ್ಯವೃದ್ಧಿಸಿ, ಗಂಡುಮಕ್ಕಳನ್ನು ಪಡೆದು ಸುಖವಾದ ಬದುಕಿಗೆ ದಾರಿಮಾಡಿಕೊಡುತ್ತದೆ. ಶ್ರಾವಕ ಶ್ರಾವಕಿಯರು ನಿರತಿಶಯನೋಂಪಿ ಆಚರಣೆ ಮಾಡಿದರೆ ಮಕ್ಕಳ ಮದುವೆಯಾಗಿ, ಕುಟುಂಬ ಅವರ ಸಂಪತ್ತು ಪ್ರಾಪ್ತಿಯಾಗುತ್ತದೆ. ದೀಪಾವಳಿ ನೋಂಪಿ ಆಚರಣೆಯಿಂದ ಶ್ರಾವಕ ಶ್ರಾವಕಿಯರು ಅಪಾರ ಐಶ್ವರ್ಯಕ್ಕೆ ಒಡೆಯರಾಗಿ ಸಂತಾನ, ಭೋಗೋಪಸುಖ, ಜೀವನ ನಡೆಸಿ ಸಮಾಧಿವಿಧಿಯಿಂದ ಸ್ವರ್ಗ ವಾಸಿಗಳಾಗುತ್ತಾರೆ.

ಸರ್ವಾರ್ಥಸಿದ್ಧಿಯ ನೋಂಪಿಯು ಸರ್ವಾಂಗ ಸೌಂದರ್ಯ, ರೂಪ, ವಿಲಾಸ, ಐಶ್ವರ್ಯಪ್ರಾಪ್ತಿಗಾಗಿ ಆಚರಿಸುವ ವ್ರತವಾಗಿದೆ. ನಾಗರಪಂಚಮಿಯು ಸಂತಾನಪ್ರಾಪ್ತಿ, ಐಶ್ವರ್ಯ, ಸತ್ಫಲ, ಪ್ರಾಪ್ತಿಗಾಗಿ ಆಚರಿಸುವ ನೋಂಪಿಯಾಗಿದೆ. ಹೀಗೆ ಪ್ರತಿಯೊಂದು ನೋಂಪಿಯು ಕಾಮ್ಯಾರಾಧನೆಯ ನೋಂಪಿಗಳಾಗಿವೆ. ಕಷ್ಟಗಳ ಸುಳಿಯಲ್ಲಿ ಸಿಲುಕಿ ತತ್ತರಿಸುವ ಸಾಮಾನ್ಯ

ಜನರನ್ನು ಅದರಿಂದ ಬಿಡುಗಡೆಗೊಳಿಸಲು ರಹದಾರಿ ಕಲ್ಪಿಸಿಕೊಟ್ಟ ಆಚರಣೆಗಳೇ ನೋಂಪಿಗಳು. ಈ ಆಸರೆಯಾವಲಂಬನೆಯು ಮಂಡ್ಯ ಜಿಲ್ಲೆಯ ಶ್ರಾವಕ ಶ್ರಾವಕಿಯರ ಅಂತರಂಗದ ಬದುಕಿಗೂ ಸಂಜೀವಿನಿಯಾಗಿ ಪರಿಣಮಿಸಿತು. ಹೀಗಾಗಿ ಮಾತೃದೇವತೆಯ ಆರಾಧನೆಯು ಇಲ್ಲಿಯ ಜೈನಧರ್ಮದ ಶಾಸನ ದೇವತೆಗಳ ಆರಾಧನೆಯ ಮೂಲಕ ಮತ್ತಷ್ಟು ವಿಸ್ತಾರವಾಗಿ ಮತ್ತು ವ್ಯಾಪಕವಾಗಿ ಆಚರಣೆಗೊಂಡಿತೆನ್ನಬಹುದು.

4.5. ಜೀವನ ಸಂಸ್ಕಾರಗಳು

ಜಿನ ಸಮುದಾಯದಲ್ಲಿ ಬಳಕೆಯಲ್ಲಿರುವ ಮತ್ತೊಂದು ಬಗೆಯ ಅಚರಣೆಯೆಂದರೆ ಹುಟ್ಟಿನಿಂದ ಸಾವಿನವರೆಗೆ ವೈದಿಕರಲ್ಲಿ ಇರುವಂತೆ ಆಚರಣೆಯಲ್ಲಿರುವ ಷೋಡಶ ಸಂಸ್ಕಾರಗಳು ಬಹುತೇಕ ಎಲ್ಲಾ ಆಚರಣೆಗಳು ವೈದಿಕ ಷೋಡಶ ಪ್ರಕ್ರಿಯೆಯೊಂದಿಗೆ ಸಂವಾದಿಯಾಗಿದ್ದು ಅಚರಣೆಯಲ್ಲಿ ಕೆಲವು ವ್ಯತ್ಯಯಗಳನ್ನು ಮಾತ್ರ ಗುರುತಿಸಬಹುದಾಗಿದೆ.

ಷೋಡಶ ಸಂಸ್ಕಾರಗಳನ್ನು ಷೋಡಶ ಕ್ರಿಯೆಗಳೆಂದೂ ಕರೆಯುತ್ತಾರೆ. ಜೈನರ ಧಾರ್ಮಿಕ ಆಚರಣೆಗಳಲ್ಲಿ ಷೋಡಶ ಕ್ರಿಯೆಯು ಬಹುಮುಖ್ಯವಾದುದು. ಪ್ರತಿಯೊಬ್ಬ ವ್ಯಕ್ತಿಯು ಹುಟ್ಟಿನಿಂದ ಮೊದಲ್ಗೊಂಡು, ಮರಣದವರೆಗಿನ ವಿವಿಧ ಹಂತಗಳಲ್ಲಿ ಪಾಲಿಸಲೇಬೇಕಾದ ಧಾರ್ಮಿಕ ವಿಧಿವಿಧಾನಗಳಿವು. ಜೀವನದ ಒಂದೊಂದು ಪ್ರಮುಖ ಹಂತದಲ್ಲೂ ಧಾರ್ಮಿಕತೆಯನ್ನು ತುಂಬಿ, ಆ ಹಂತದ ಉದ್ದೇಶವನ್ನು ಮನವರಿಕೆ ಮಾಡಿಕೊಡುವುದು ಇವುಗಳ ಉದ್ದೇಶವಾಗಿದೆ. ಇವುಗಳನ್ನು ಹೇಗೆ ಆಚರಿಸಬೇಕೆನ್ನುವುದರ ಕುರಿತು ಜೈನ ಶಾಸ್ತ್ರಗ್ರಂಥಗಳಲ್ಲಿ ವಿಸ್ತಾರವಾಗಿ ಪ್ರತಿಪಾದಿಸಲಾಗಿದೆ.[71]

ಸಂಸ್ಕಾರವೆಂದರೆ ಪವಿತ್ರವಾದ ಧಾರ್ಮಿಕವೂ ವಿಧಿವಿಧಾನಗಳ ಅನುಷ್ಠಾನದಿಂದ ಪ್ರಾಪ್ತವಾಗುವ ಒಂದು ವಿಶಿಷ್ಟವಾದ ಸಂಸ್ಕಾರವೆಂದು ಅರ್ಥಮಾಡಿಕೊಳ್ಳಲಾಗುತ್ತಿದೆ. ದೇಹ ಮತ್ತು ಮನಸ್ಸುಗಳಲ್ಲಿ ಮೂಡಿದ ಪವಿತ್ರತೆಯ ಅರಿವು ಈ ಸಂಸ್ಕಾರಗಳಿಂದ ಆತನಲ್ಲಿ ಉಂಟಾಗುತ್ತದೆ. ಕಾಳಿದಾಸನು ಸಂಸ್ಕಾರದ ಬಗ್ಗೆ ಹೇಳುವ ಮಾತನ್ನು ಹೀಗೆ ಸಂಕಲಿಸಬಹುದು. "ಹುಟ್ಟಿ ಬಂದಾಗ ಮನುಷ್ಯನ ದೇಹವು ಖನಿಯಿಂದ ಆಗತಾನೇ ಹೊರತೆಗೆದ ಅಶುದ್ಧ ರತ್ನದಂತಿರುತ್ತದೆ. ಆದರೆ ಅದು ಶುದ್ಧಿಯನ್ನು ಹೊಂದಿ ರತ್ನಶೋಧಕನ ಕೈಯಿಂದ ಕಾಂತಿಯನ್ನು ಪಡೆಯುವಂತೆ ಸಂಸ್ಕಾರಗಳಿಂದ ಮನುಷ್ಯನ ಮನಸ್ಸು ಒಂದು ರೀತಿಯ ಹದವನ್ನೂ ಓಜಸ್ಸನ್ನೂ ಪಡೆಯುತ್ತದೆ....."[72] ಅಂದರೆ ವರ್ಣಚಿತ್ರವು ಬಗೆಬಗೆಯ ಬಣ್ಣಗಳು ಮೇಳವಿಸಿಕೊಂಡು ಚಿತ್ರಕಾರನ

ಮನಸ್ಸಿನ ಭಾವನೆಯ ಒಂದು ನಿರ್ದಿಷ್ಟ ಸುಂದರವಾದ ಕಲಾಕೃತಿಯಾಗಿ ರೂಪುಗೊಳ್ಳುವಂತೆ, ಸಂಸ್ಕಾರಗಳಿಂದ ಮನುಷ್ಯನ ವ್ಯಕ್ತಿತ್ವವು ಸುಂದರವಾಗಿ ಅರಳುತ್ತದೆ.

ಜೈನಧರ್ಮದ ಪ್ರಕಾರ ಜನ್ಮಜನ್ಮಾಂತರದ ಕರ್ಮಬಂಧಗಳ ಕಾರಣದಿಂದ ಆತ್ಮನು ರೂಪಧಾರಣೆ ಮಾಡುತ್ತಾನೆ. ದೇವ, ಮನುಷ್ಯ, ನರಕ ತಿರ್ಯಂಚ ಚತುರ್ಗತಿಯಲ್ಲಿ ಮನುಷ್ಯ ಜೀವವು ಶ್ರೇಷ್ಠವಾದುದು. ಏಕೆಂದರೆ ಆತ್ಮನಿಗೆ ಅಂಟಿದ ಕರ್ಮಬಂಧಗಳನ್ನು ಕಳಚಿಕೊಂಡು ಮುಕ್ತಾತ್ಮನಾಗುವುದಕ್ಕೆ ಮನುಷ್ಯ ಜನ್ಮ ಮಾತ್ರ ಸಾಧಕವಾಗುತ್ತದೆ. ದೇವಗತಿಗೆ ಹೋಗಿ ಸುಖವನ್ನು ಅನುಭವಿಸಿದರೂ ಅಲ್ಲಿ ಆತನಿಗೆ ಬಿಡುಗಡೆಯಿಲ್ಲ. ಮರಳಿ ಮನುಷ್ಯ ಜನ್ಮಕ್ಕೆ ಬಂದು ಕರ್ಮಗಳನ್ನು ಜಯಿಸಿ ಮುಕ್ತನಾಗಬೇಕಾಗುತ್ತದೆ. ಜೀವಿಯು ತಾಯಿಯ ಗರ್ಭಕ್ಕೆ ಬರುವ ಮೊದಲೇ ಹಿಂದಿನ ಜನ್ಮದ ಸಂಸ್ಕಾರದ ಫಲದಿಂದಾಗಿ ಆತನ ಮುಂದಿನ ಜನ್ಮದ ವಂಶ ಗೋತ್ರವೆಲ್ಲವೂ ನಿರ್ಧರಿಸಲ್ಪಡುತ್ತದೆ. ಈ ಜನ್ಮದಲ್ಲಿಯೇ ಆತನಿಗೆ ಆತ್ಮಕಲ್ಯಾಣ ಮಾಡಿಕೊಳ್ಳಲು ಸಾಧ್ಯವಾಗಲಿ ಎಂಬ ದೃಷ್ಟಿಯಿಂದ ಗರ್ಭಧಾರಣೆಯ ಸಂದರ್ಭದಿಂದಲೇ ಅನೇಕ ಸಂಸ್ಕಾರಗಳನ್ನು ಶಾಸ್ತ್ರಕಾರರು ವಿಧಿಸಿರುತ್ತಾರೆ. ಜೈನಮತೀಯರಲ್ಲಿ ಆಚರಣೆಯಲ್ಲಿರುವ ಸಂಸ್ಕಾರವಿಧಿಗಳೆಂದರೆ,[73]

ಗರ್ಭದಾನ, ಪ್ರಮೋದ, ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪವೇಶನ, ಅನ್ನಪ್ರಾಶನ, ಗಮನ, ಚೌಲ, ಅಕ್ಷರಾಭ್ಯಾಸ, ಪುಸ್ತಕಗ್ರಹಣ, ಉಪನಯನ, ಸಮಾವರ್ತನ, ವಿವಾಹ, ಸಮಾಧಿಮರಣ.

ವೈದಿಕ ಧರ್ಮದಲ್ಲಿ ವಿವರಿಸಲ್ಪಟ್ಟ ಸಂಸ್ಕಾರಗಳಿಗೂ, ಮೇಲೆ ವಿವರಿಸಿದ ಜೈನಮತದಲ್ಲಿರುವ ಸಂಸ್ಕಾರಗಳಿಗೂ ಯಾವ ವ್ಯತ್ಯಾಸಗಳೂ ನಮಗೆ ಕಂಡುಬರುವುದಿಲ್ಲ. ವೈದಿಕದಲ್ಲಿರುವ ಅಂತ್ಯೇಷ್ಟಿಯು ಜೈನಮತದಲ್ಲಿ ಸಮಾಧಿ ಮರಣವಾಗಿದೆ. ಮನುಸ್ಮೃತಿ, ಗೃಹ್ಯಸೂತ್ರ, ಧರ್ಮೋತ್ತರಪುರಾಣ – ಮುಂತಾದ ಪ್ರಾಚೀನ ವೈದಿಕ ಗ್ರಂಥಗಳಲ್ಲಿ ಉಕ್ತವಾಗಿರುವ ಸಂಸ್ಕಾರಗಳು, ಬ್ರಾಹ್ಮಣರಿಗೆ ಮಾತ್ರ ವಿಧಿಸಲಾಗಿದ್ದರೂ ಮುಂದೆ, ಈ ನಿಯಮವು ಸಡಿಲಗೊಂಡು ಶೂದ್ರವರ್ಗವೊಂದನ್ನು ಬಿಟ್ಟು ಕ್ಷತ್ರಿಯ, ವೈಶ್ಯರಿಗೂ ಅನ್ವಯವಾದವು. ಈ ಹಂತದಲ್ಲಿ ಇದು ಜೈನಮತದಲ್ಲಿಯೂ ನುಸುಳಿರಬೇಕು. ಏಕೆಂದರೆ ವರ್ಣವ್ಯವಸ್ಥೆ, ಸಂಸ್ಕಾರವಿಧಿ ಮುಂತಾದ ಅಂಶಗಳನ್ನು ಪ್ರತಿಪಾದಿಸುವ ಜೈನ ಗ್ರಂಥಗಳು, ವೈದಿಕ ಗ್ರಂಥಗಳಷ್ಟು ಪ್ರಾಚೀನವಲ್ಲ. ಮೇಲೆ ವಿವರಿಸಿದ ಹದಿನಾರು ಸಂಸ್ಕಾರಗಳಲ್ಲಿ ಕೆಲವು ಸಂಸ್ಕಾರಗಳು ಮಾತ್ರ ಇಲ್ಲಿ ಜೈನರಲ್ಲಿ ಆಚರಣೆಯಲ್ಲಿವೆ. ಉದಾಹರಣೆಗೆ ಗರ್ಭದಾನ, ಸೀಮಂತ, ಜಾತಕರ್ಮ, ಚೌಲ, ಉಪನಯನ, ಸಮಾವರ್ತನ, ವಿವಾಹ ಇಲ್ಲಿನ ಜೈನ ಸಮುದಾಯದಲ್ಲಿ ಆಚರಣೆಯಲ್ಲಿ ಕಂಡುಬರುವ

ಸಂಸ್ಕಾರಗಳು. ಮಿಕ್ಕವು ಕಣ್ಮರೆಯಾಗುತ್ತಾ ಬಂದಿವೆ.[74] ಅದರಲ್ಲೂ ಉಪನಯನ, ಸಮಾವರ್ತನ ಕ್ರಿಯೆಗಳನ್ನು ಈಗೀಗ ವಿವಾಹದ ಅಂಗವಾಗಿ ಆಚರಿಸುವ ಪದ್ಧತಿ ಪ್ರಾರಂಭವಾಗಿದೆ.

ಗರ್ಭದಾನ : ಗೃಹಸ್ಥಜೀವನದಲ್ಲಿ ತನ್ನ ಸಂತಾನವನ್ನು ವೃದ್ಧಿಸಲು, ಪಿತೃಋಣ ಪರಿಹಾರಕ್ಕಾಗಿ ನೆರವೇರಿಸುವ ಪವಿತ್ರವಾದ ಕಾರ್ಯ ಹಾಗೂ ಗೃಹಸ್ಥನ ಕರ್ತವ್ಯಗಳಲ್ಲಿ ಪ್ರಮುಖವೆಂದು ಪರಿಗಣಿಸಲಾಗಿದೆ.[75] ವಿವಾಹಿತ ದಂಪತಿಗಳು ಯುಕ್ತ ಕಾಲದಲ್ಲಿ ಜೊತೆಗೂಡಿ ಪಿತೃಋಣ ಪರಿಹರಿಸಿಕೊಳ್ಳಲು ವಂಶೋದ್ಧಾರಕ್ಕಾಗಿ ಗಂಡುಮಗುವನ್ನು ಪಡೆಯಬೇಕೆನ್ನುವುದು ಇದರ ಉದ್ದೇಶವಾಗಿದೆ. ಏಕೆಂದರೆ ಶಾಸ್ತ್ರದಲ್ಲಿ ವಿವರಿಸಲ್ಪಟ್ಟ ಎಲ್ಲ ಸಂಸ್ಕಾರಗಳು ಹೆಣ್ಣಿಗೆ ಅನ್ವಯವಾಗುವುದಿಲ್ಲ. ಗಂಡು ಸಂತಾನವನ್ನು ದೃಷ್ಟಿಯಲ್ಲಿರಿಸಿಕೊಂಡೇ ಈ ಎಲ್ಲಾ ಸಂಸ್ಕಾರ ವಿಧಿ ವಿಧಾನಗಳನ್ನು ಹೇಳಲಾಗಿದೆ. ವಿವಾಹದ ಆನಂತರ, ದಂಪತಿಗಳ ಪ್ರಥಮ ಸಮಾಗಮವನ್ನು ನಿಷೇಕಶಾಸ್ತ್ರದ ಮೂಲಕ ಆಚರಿಸುವ ಪದ್ಧತಿ ಚಾಲ್ತಿಯಲ್ಲಿದೆ. ಮದುವೆಯ ವಿಧಿವಿಧಾನಗಳಲ್ಲಿ ನಡೆಯುವ ನಾಗವಲಿ ಇದಕ್ಕೆ ಪೂರಕವಾಗಿದೆ.

ಗರ್ಭದಾನ ವಿಧಿಗಳೆಲ್ಲವೂ ಇಂದ್ರ ಅಥವಾ ಪುರೋಹಿತನ ನೇತೃತ್ವದಲ್ಲಿ ಮಂತ್ರಪೂರ್ವಕವಾಗಿ ನೆರವೇರುತ್ತದೆ. ಈ ವಿಧಿಯ ಆಚರಣೆಯ ಸಂದರ್ಭದಲ್ಲಿ ಶಾಂತಿ ಹೋಮ ನಡೆಸಿ, ವಿಧಿಪೂರ್ವಕವಾಗಿ ದಂಪತಿಗಳನ್ನು ಆಶೀರ್ವದಿಸುತ್ತಾರೆ. ಯಾವುದೇ ಹೋಮವನ್ನು ಆರಂಭಿಸುವ ಮೊದಲು ಸಂಕಲ್ಪವನ್ನು ಮಾಡುವುದು ಜೈನ ಸಂಪ್ರದಾಯ ಅಂತೆಯೇ ಈ ಸಂದರ್ಭದಲ್ಲಿಯೂ ಸತ್ ಸಂಕಲ್ಪವನ್ನು ನೆರವೇರಿಸುತ್ತಾರೆ. ಆನಂತರ ಶುದ್ಧಿಕ್ರಿಯೆ ನೆರವೇರುತ್ತದೆ. ಇದನ್ನು ಪುಣ್ಯಾಹವಾಚನವೆಂದು ಕರೆಯುತ್ತಾರೆ. ಸಂಸ್ಕೃತ ಶ್ಲೋಕರೂಪದಲ್ಲಿರುವ, ಇದರ ಕನ್ನಡಾನುವಾದ ಹೀಗಿದೆ.

"ಗರ್ಭದಾನ ಕ್ರಿಯೆಯಲ್ಲಿ ಹೆಸರಿನ ಸ್ತ್ರೀಯು, ಜಲಸ್ನಾನ ಮಂತ್ರಸ್ನಾನಗಳಿಂದ ಪವಿತ್ರಳೂ ದೇವತಾರ್ಚನೆ, ಹೋಮ, ದಾನಗಳಿಂದ ಪರಿಶುದ್ಧಳೂ ಹಿತವೂ ಮಿತವೂ ರುಚಿಕರವೂ ಆದ ಆಹಾರವನ್ನು ಸೇವಿಸುವವಳೂ ತನ್ನ ಪತಿಯೊಡನೆ ಇರುವವಳೂ ಶಾಂತಿ ಭಟ್ಟಾರಕರು ಮೊದಲಾದ ಮಂಗಲ ಮಹಾಪುರುಷರ ಸ್ಮರಣೆಯಲ್ಲಿರುವವಳೂ ಆದ ಈ ಸ್ತ್ರೀಗೆ ಶುಭಸ್ವಪ್ನಪೂರ್ವಕವಾಗಿ ಸತ್ಪುತ್ರಗರ್ಭಪ್ರಾಪ್ತಿಗೋಸ್ಕರ ಈ ಹೋಮ ವಿಧಾನದ ಪ್ರಾರಂಭದಲ್ಲಿ ಪುಣ್ಯಾಹವಾಚನವನ್ನು ಮಾಡುತ್ತೇವೆ"– ಎಂದು ಪುರೋಹಿತರು ಸಂಕಲ್ಪವನ್ನು ಪ್ರಕಟಿಸುತ್ತಾರೆ.

ಹೋಮದಲ್ಲಿ ಅಗ್ನಿಸ್ಥಾಪನೆಯಾಗುವವರೆಗೂ ಹೋಮಕುಂಡದ ಹಸೆಯ ಮೇಲೆ ತೆರೆಯ ಎರಡೂ ಪಕ್ಕಗಳಲ್ಲಿ ಬಾಳೆ ಎಲೆಯ ಅಗ್ರದ ಮೇಲೆ ಅಕ್ಕಿಯನ್ನು ಹರಡಿ, ಅದರಲ್ಲಿ ಸ್ವಸ್ತಿಕವನ್ನು

ಬರೆದು ಅವುಗಳ ಮೇಲೆ ಸ್ನಾನಾದಿ ನಿತ್ಯಕರ್ಮ ಅನುಷ್ಠಾನಾದಿಗಳಿಂದ ಶುದ್ಧರಾಗಿ, ವಸ್ತ್ರಾಭರಣಗಳಿಂದ ಅಲಂಕೃತರಾಗಿರುವ ದಂಪತಿಗಳನ್ನು ಪರಸ್ಪರ ಎದುರು ಬದುರಾಗಿ ನಿಲ್ಲಿಸುತ್ತಾರೆ. ಮಂಗಲಸ್ತೋತ್ರ, ಮಂಗಲಾಕಷ್ಟಕಗಳನ್ನು ಹೇಳಿ, ಆಶೀರ್ವದಿಸುತ್ತಾರೆ. ಆ ಬಳಿಕ ಕನ್ನಡಿಯಲ್ಲಿ ದಂಪತಿಗಳ ಮುಖವನ್ನು ತೋರಿಸುವುದು, ಪತಿಯು ಪತ್ನಿಯ ಹಣೆಗೆ ಕುಂಕುಮ, ಗಂಧಾಕ್ಷತೆಯನ್ನು ಇಡುವುದು, ಪತ್ನಿಯು ಪತಿಗೆ ಫಲವನ್ನು ಕೊಡುವುದು ಇತ್ಯಾದಿ ವಿಧಿಗಳು ನೆರವೇರಿದ ಮೇಲೆ, ದಂಪತಿಗಳ ಮೇಲು ವಸ್ತ್ರದ ಸೆರಗು ಗಂಟುಹಾಕಿ ಹಸೆಯ ಮೇಲೆ ಕುಳ್ಳಿರಿಸುತ್ತಾರೆ. ಆಜ್ಯಾಹುತಿಯ ಆನಂತರ ಶಾಂತಿಮಂತ್ರ ಪೂರ್ವಕವಾಗಿ ದಂಪತಿಗಳಿಗೆ ಪುಣ್ಯಜಲ ಸೇಚನೆಯನ್ನು ಮಾಡಿಸುತ್ತಾರೆ. ಆಮೇಲೆ ದಂಪತಿಗಳನ್ನು ದಕ್ಷಿಣೋತ್ತರವಾಗಿ ಕುಳ್ಳಿರಿಸಿ, ಪತಿಯಿಂದ ಗರ್ಭದಾನ ಮಂತ್ರಗಳನ್ನು ಹೇಳಿಸುತ್ತಾರೆ. ಆ ಬಳಿಕ ಪುರೋಹಿತರು ದಂಪತಿಗಳನ್ನು ಆಶೀರ್ವದಿಸುವ ಸೂಕ್ತಿಯ ಕನ್ನಡಾನುವಾದ ಹೀಗಿದೆ :

"........ ಉತ್ತಮ ಜಾತಿಗೆ ಪಾತ್ರನಾಗು, ಉತ್ತಮ ಗೃಹಸ್ಥಧರ್ಮಕ್ಕೆ ಪಾತ್ರನಾಗು, ಮುನೀಶ್ವರ ಪದವಿಗೆ ಪಾತ್ರನಾಗು, ಸುರೇಂದ್ರ ಪದವಿಗೆ ಪಾತ್ರನಾಗು, ಸಾಮ್ರಾಜ್ಯ ಪದವಿಗೆ ಪಾತ್ರನಾಗು, ಅರ್ಹತ್ ಪದವಿಗೆ ಪಾತ್ರನಾಗು, ಪರಮ ಕೈವಲ್ಯ ಪದವಿಗೆ ಪಾತ್ರನಾಗು......"ಎಂದು ಆಶೀರ್ವದಿಸಿದ ಬಳಿಕ ಹೋಮವಿಧಿಯನ್ನು ಸಂಪನ್ನಗೊಳಿಸುತ್ತಾರೆ. ಸುಮಂಗಲಿಯರಿಂದ ದಂಪತಿಗಳಿಗೆ ಆರತಿ, ಹಿರಿಯರಿಂದ ಆಶೀರ್ವಾದಗಳು ನಡೆದ ಬಳಿಕ, ಪುತ್ರವತಿಯರಾದ ಐದು ಮಂದಿ ಸುಮಂಗಲಿಯರಿಗೆ ಅರಿಶಿನ, ಕಾಡಿಗೆ, ಫಲವಸ್ತು, ಕಂಠಸೂತ್ರ, ಕುಂಕುಮ, ಅಕ್ಷತೆ, ಪರಿಮಳದ್ರವ್ಯ, ವೀಳ್ಯದ ಎಲೆ, ಅಡಿಕೆ ಮುಂತಾದವುಗಳನ್ನು ಒಳಗೊಂಡ ಬಾಗಿನವನ್ನು ವಧುವಿನಿಂದ ಕೊಡಿಸುತ್ತಾರೆ. ಆ ಬಳಿಕ ವಧುವಿಗೆ ತುಪ್ಪ, ಸಕ್ಕರೆ, ಶರದಾಲಿ, ಬಿಲ್ವ, ತಾವರೆಯ ಬೇರು, ಅಷ್ಟಗಂಧ- ಕಲ್ಕ- ಇವುಗಳ ಮಿಶ್ರಣಮಾಡಿ ಸೇವಿಸಲು ನೀಡುತ್ತಾರೆ. ಸಹಪಂಕ್ತಿ ಭೋಜನದೊಡನೆ ಸಂಸ್ಕಾರ ವಿಧಿವಿಧಾನಗಳು ಕೊನೆಗೊಳ್ಳುತ್ತವೆ.

ಪ್ರಮೋದ : ಸ್ತ್ರೀಯು ಗರ್ಭ ಧರಿಸಿರುವುದು ನಿಶ್ಚಿತವಾದ ಮೇಲೆ, ಗರ್ಭಾತ್ ತೃತೀಯ ಮಾಸದಲ್ಲಿ ಗರ್ಭಿಣಿಗೆ ನೆರವೇರಿಸುವ ಧಾರ್ಮಿಕ ವಿಧಿಯೇ ಪ್ರಮೋದ ಅಥವಾ ಪ್ರೀತಿ. ಈ ವಿಧಿಯ ಆಚರಣೆಯಲ್ಲೂ ಹೋಮಾದಿ ಕ್ರಿಯೆಗಳನ್ನು ನಡೆಸುತ್ತಾರೆ. ಈ ಸಂದರ್ಭದಲ್ಲಿ ಪತಿಪತ್ನಿಯರನ್ನು ಅಭಿಮುಖವಾಗಿ ಕುಳ್ಳಿರಿಸಿ, ಪತಿಯಿಂದ ಪತ್ನಿಯ ಹೊಟ್ಟೆಯ ಮೇಲೆ ದರ್ಭೆಯ ಕೂರ್ಚೆಯಿಂದ ಮಂತ್ರಪೂರ್ವಕವಾಗಿ ಪುಣ್ಯಜಲ, ಮಂತ್ರಾಕ್ಷತೆಯ ಸಂಪ್ರೋಕ್ಷಣೆ ಮಾಡಿ ಆಶೀರ್ವಾದ ಮಾಡುತ್ತಾರೆ. ಮಂತ್ರಾಶೀರ್ವಾದದ ಅರ್ಥ "...... ಮೂರು ಲೋಕಗಳಿಗೆ

ಸ್ವಾಮಿಯಾಗು, ಮೂರು ಕಾಲಗಳ ಜ್ಞಾನವುಳ್ಳವನಾಗು, ಮೂರು ರತ್ನಗಳಿಗೆ ಸ್ವಾಮಿಯಾಗು....." ಎಂದಾಗಿರುತ್ತದೆ. ಈಗಾಗಲೇ ಪ್ರಸ್ತಾಪಿಸಿದಂತೆ ಈ ಆಚರಣೆ ಇಂದಿನ ಸಮಾಜದಲ್ಲಿ ಅತಿ ವಿರಳವಾಗಿ ಕಂಡುಬರುತ್ತದೆ.[76]

ಪುಂಸವನ : ಈ ಸಂಸ್ಕಾರವನ್ನು ಗರ್ಭದ ಐದನೆಯ ತಿಂಗಳಲ್ಲಿ ನೆರವೇರಿಸುತ್ತಾರೆ. ವೈದಿಕರಲ್ಲಿ ಇದನ್ನು ಮೂರು ಅಥವಾ ನಾಲ್ಕನೆಯ ತಿಂಗಳುಗಳಲ್ಲಿ ಆಚರಿಸುವ ಪದ್ಧತಿಯಿದೆ.[77] ಗರ್ಭಿಣಿಯ ಗರ್ಭವನ್ನು ಶುದ್ಧಗೊಳಿಸುವುದು ಇದರ ಪ್ರಮುಖ ಉದ್ದೇಶ. ತೀರ್ಥಂಕರರ ಪಂಚಕಲ್ಯಾಣ ಆಚರಣೆಯ ಸಂದರ್ಭದಲ್ಲಿ, ಹೇಳಿರುವಂತೆ, ಆಗಮಿಸಿ ಪವಿತ್ರಜಲ, ಕಷಾಯಗಳ ಮೂಲಕ ಜಿನಮಾತೆಯ ಗರ್ಭಶುದ್ಧೀ ಕಾರ್ಯವನ್ನು ನಡೆಸುತ್ತಾರೆಂದು ನಂಬಿಕೆ ಇದೆ. ಗರ್ಭಿಣಿಯ ಶಾರೀರಿಕ ಮತ್ತು ಮಾನಸಿಕ ಆರೋಗ್ಯ ರಕ್ಷಣೆಗಾಗಿ ಇದನ್ನು ಮಾಡುತ್ತಾರೆ. ಈ ಸಂಸ್ಕಾರದ ಸಂದರ್ಭದಲ್ಲಿಯೂ ವಿಧಿ ವಿಧಾನಗಳಲ್ಲಿ ಹೋಮಾದಿ ಧಾರ್ಮಿಕಗಳನ್ನು ಆಚರಿಸುತ್ತಾರೆ. ಆ ಸಂದರ್ಭದಲ್ಲಿ ಗರ್ಭಿಣಿಯನ್ನು ಬಿಳಿಬಣ್ಣದ ವಸ್ತ್ರ, ಉಚಿತಾಭರಣಗಳಿಂದ ಅಲಂಕರಿಸಿ ಹಸೆಯ ಮೇಲೆ ಪತಿಯೊಡನೆ ಕುಳ್ಳಿರಿಸುತ್ತಾರೆ. ಗರ್ಭಿಣಿಯ ಕೊರಳಿಗೆ ಗೋದಿಮಾಲೆಯನ್ನು ಪತಿಯಿಂದ ಹಾಕಿಸುತ್ತಾರೆ. ಅನಂತರ ಆತನು ಮಂತ್ರಗಳನ್ನು ಹೇಳಿ, ಪತ್ನಿಯ ಹೊಟ್ಟೆಯ ಮೇಲೆ ಗಂಧೋದಕ, ಮಂತ್ರಾಕ್ಷತೆಗಳನ್ನು ಸಂಪ್ರೋಕ್ಷಣೆ ಮಾಡಿ ಆಶೀರ್ವದಿಸುತ್ತಾನೆ. ಗರ್ಭಸ್ಥ ಶಿಶುವಿಗೆ ಸ್ವರ್ಗಾವತಾರ ಮಹೋತ್ಸವಕ್ಕೆ ಪಾತ್ರನಾಗು; ಮಹಾಮೇರು ಪರ್ವತದಲ್ಲಿ ಜನ್ಮಾಭಿಷೇಕ ಮಹೋತ್ಸವಕ್ಕೆ ಪಾತ್ರನಾಗು; ದೀಕ್ಷೆಗೆ ಹೊರಡುವ ಮಹೋತ್ಸವಕ್ಕೆ ಪಾತ್ರನಾಗು; ಅರ್ಹತ್ ಪರಮೇಶ್ವರರ ಪದವಿಯ ಮಹೋತ್ಸವಕ್ಕೆ ಪಾತ್ರನಾಗು ಮತ್ತು ಪರಮ ಕೈವಲ್ಯ ಮಹೋತ್ಸವಕ್ಕೆ ಪಾತ್ರನಾಗು ಎಂದು ಹರಸುತ್ತಾರೆ ಅಥವಾ ಆಶೀರ್ವದಿಸುತ್ತಾರೆ.

ಭ್ರೂಣವನ್ನು ಚೈತನ್ಯಗೊಳಿಸಿ ಪುರುಷಸಂತಾನವನ್ನು ಪಡೆಯಲೆಂದೇ ಪುಂಸವನ ಆಚರಣೆ ಮಾಡುತ್ತಾರೆ. ಈ ಸಂದರ್ಭದಲ್ಲಿ ವಟಶುಂಗ, ಸಹದೇವಿ, ವಿಶ್ವದೇವನೆಂಬ ವನಸ್ಪತಿಗಳನ್ನು ಹಾಲಿನೊಂದಿಗೆ ಪುಡಿಮಾಡಿ ಗರ್ಭಿಣಿಯ ಮೂಗಿನ ಹೊಳ್ಳೆಯಲ್ಲಿ ಮೂರು ನಾಲ್ಕು ತೊಟ್ಟನ್ನು ಹಾಕುತ್ತಾರೆ. ಇದು ಗಂಡುಸಂತಾನ ಪಡೆಯುವ ಅಭಿಲಾಷೆಯಿಂದ ನಡೆಸುವ ವಿಧಿ ಹಾಗೂ ಹೀಗೆ ಮಾಡುವುದರಿಂದ ಗಂಡು ಸಂತಾನವಾಗುತ್ತದೆಂಬ ನಂಬಿಕೆ ಇದೆ ಮತ್ತು ಇದಕ್ಕೆ ಆಯುರ್ವೇದ ಶಾಸ್ತ್ರದ ಸಮರ್ಥನೆಯೂ ಇದೆ. ಆದರೆ ಈ ಚಿಕಿತ್ಸಾ ಪದ್ಧತಿ ಈಗ ಆಚರಣೆಯಲ್ಲಿ ಕಂಡುಬರುವುದಿಲ್ಲ.

ಸೀಮಂತ ಕ್ರಿಯೆ : ಗರ್ಭಿಣಿ ಸ್ತ್ರೀಗೆ ಏಳನೆಯ ತಿಂಗಳಲ್ಲಿ ತಲೆಗೂದಲಿನ ಮಧ್ಯದಲ್ಲಿ ಸೀಮಾ ಎಂದು ಕರೆಯುವ ಬೈತಲೆಯನ್ನು ಬಿಡಿಸಿ ಕೆಲವು ಆಚರಣೆಗಳು ನೆರವೇರಿಸುವುದನ್ನು ಸೀಮಂತ ಅಥವಾ ಬಯಕೆ ಶಾಸ್ತ್ರವೆಂದು ಕರೆಯುತ್ತಾರೆ. ಗರ್ಭಿಣಿಗೆ ದುಷ್ಟಶಕ್ತಿಗಳು ಪೀಡಿಸಬಾರದೆಂಬ ಉದ್ದೇಶದಿಂದ ಜೈನಮತೀಯರು ಮತ್ತು ಗರ್ಭ ಶಿಶುವಿನ ರಕ್ಷಣೆಗಾಗಿ ಯಂತ್ರವನ್ನು ಗರ್ಭಿಣಿ ಕಟ್ಟುತ್ತಾರೆ. ಆಕೆಯ ಬಯಕೆಗಳೆಲ್ಲವನ್ನೂ ಪೂರೈಸುತ್ತಾರೆ. ಈ ಸಂದರ್ಭದಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯ ದೃಷ್ಟಿಯಿಂದ ಹಲವಾರು ಸೂಚನೆಯನ್ನು ಕೊಡುತ್ತಾರೆ. ಗರ್ಭಿಣಿಯು ರತಿಭೋಗವನ್ನು ತ್ಯಜಿಸಿ ಶಾರೀರಿಕ ಶ್ರಮದ ಕೆಲಸ ಮಾಡದೆ, ಹಗಲುನಿದ್ದೆ ಮಾಡದೇ, ಭೀತಿಗೆ ಕಾರಣವಾಗುವ ಘಟನೆಗಳನ್ನು ನೋಡದೆ ಹಾಗೂ ಮಂಡಿಯೂರಿ ಕುಳಿತುಕೊಳ್ಳದಿರುವಂತೆ ಹಿರಿಯರು ಆಗ್ರಹ ಪೂರ್ವಕವಾಗಿ ಹೇಳುತ್ತಾರೆ. ಈ ಆಚರಣೆಯ ಹಿಂದೆ ತಾಯಿ ಮಗುವಿನ ಆರೋಗ್ಯದ ಕಾಳಜಿ ಹುದುಗಿದೆಯೆಂಬುದು ಸ್ಪಷ್ಟವಾಗುತ್ತದೆ. ಬಸದಿಗೆ ಪುಂಜ (ನವಧಾನ್ಯ) ಕೊಡುವುದು, ದೇವರ ನಂದಾದೀಪಕ್ಕೆ ಎಣ್ಣೆ ಕೊಡುವುದು, ನವಗ್ರಹ ಶಾಂತಿಯನ್ನು ಮಾಡಿಸುವುದು– ಹೀಗೆ ಅನೇಕ ಕಾರ್ಯಗಳನ್ನು ನಡೆಸುತ್ತಾರೆ. ಇದಕ್ಕೆ 'ಶಾಂತಿ ರಕ್ಷಾರ್ಥ'ವೆಂದೂ ಕರೆಯುತ್ತಾರೆ. ಧಾರ್ಮಿಕ ವಿಧಿವಿಧಾನಗಳನ್ನು ಬಸದಿಗಳಲ್ಲಿಯೇ ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಗರ್ಭಿಣಿಗೆ ಮಂಗಲಸ್ನಾನ ಮಾಡಿಸಿ, ಅರಿಶಿನಬಣ್ಣದ ಸೀರೆಯನ್ನು ಉಡಿಸಿ, ವಿವಿಧ ಆಭರಣಗಳಿಂದ ಅಲಂಕರಿಸಿ ಹಸೆಯ ಮೇಲೆ ಪತಿಯೊಡನೆ ಕುಳ್ಳಿರಿಸುತ್ತಾರೆ. ಆಗ ಹಿರಿಯಳೂ ಲಕ್ಷಣವತಿಯೂ ಪುತ್ರವತಿಯೂ ಆದ ಸುಮಂಗಲೆಯೋರ್ವಳು ಗರ್ಭಿಣಿಯ ಕೇಶಮಧ್ಯದಲ್ಲಿ ತೈಲ ಮಿಶ್ರಿತವಾದ ಚಂದ್ರವನ್ನು ಹಚ್ಚಿ ಮೂರು ಸಲ ಬೈತಲೆಯನ್ನು ತೆಗೆಯುತ್ತಾಳೆ. ಅತ್ತಿಮರದ ಚಕ್ಕೆಯ ಪುಡಿಯನ್ನು ಆಕೆಯ ಹೊಟ್ಟೆಯ ಮೇಲೂ ಮಸ್ತಕಕ್ಕೂ ಪ್ರೋಕ್ಷಿಸುತ್ತಾರೆ. ಅತ್ತಿಕಾಯಿಯ ಮಾಲೆಯನ್ನು ಮಂತ್ರಪೂರ್ವಕವಾಗಿ ಆಕೆಯ ಕೊರಳಿಗೆ ಹಾಕುತ್ತಾರೆ. ಆನಂತರ ಗಂಧೋದಕ, ಮಂತ್ರಾಕ್ಷತೆಗಳನ್ನು ಪ್ರೋಕ್ಷಿಸಿ ಪುಂಸವನ ವಿಧಿಯಲ್ಲಿರುವಂತೆ ಪತಿಯು ಆಶೀರ್ವಾದವನ್ನು ಮಾಡುತ್ತಾನೆ. ಸುಮಂಗಲಿಯರು ಹಾಡನ್ನು ಹಾಡಿ, ಆರತಿ ಬೆಳಗುತ್ತಾರೆ. ಬಂಧು– ಬಳಗದವರೆಲ್ಲರೂ ತಾವು ತಯಾರಿಸಿಕೊಂಡು ಬಂದ ಬಯಕೆ ನಿವಾರಕ ಭಕ್ಷ್ಯಗಳನ್ನು ಗರ್ಭಿಣಿಗೆ ನೀಡಿ, ಶುಭವನ್ನು ಕೋರುತ್ತಾರೆ. ಗುರುಹಿರಿಯರಿಗೆ ತಾಂಬೂಲವನ್ನಿತ್ತು ಗೌರವಿಸುತ್ತಾರೆ. ನೆರೆದ ಸ್ತ್ರೀಯರಿಗೆ ಹೂವು, ಹಣ್ಣು, ಅರಿಶಿನ, ಕುಂಕುಮಗಳನ್ನು ನೀಡಿ ಆ ಬಳಿಕ ಸಹಪಂಕ್ತಿ ಭೋಜನ ನೆರವೇರಿಸುವುದರೊಂದಿಗೆ ವಿಧಿಯನ್ನು ಮುಕ್ತಾಯ ಮಾಡುತ್ತಾರೆ.[78]

ಜಾತಕರ್ಮ : ಮಗು ಹುಟ್ಟಿದ ನಂತರ ಅದೇ ದಿನದಂದು ನಡೆಸುವ ಕ್ರಿಯೆಗೆ ಜಾತಕರ್ಮ ಅಥವಾ ಪ್ರಿಯೋದ್ಭವಕ್ರಿಯೆಯೆಂದೂ ಕರೆಯುತ್ತಾರೆ. ಮಗು ಜನಿಸಿದ ಹತ್ತು ದಿನಗಳವರೆಗೆ ಜೈನ ಬ್ರಾಹ್ಮಣರು ಅಥವಾ ಇಂದ್ರವರ್ಗ ಅಥವಾ ಪುರೋಹಿತರು, ಹನ್ನೆರಡನೆಯ ದಿನಗಳವರೆಗೆ ಕ್ಷತ್ರಿಯರೂ, ಹದಿನಾಲ್ಕು ದಿನಗಳವರೆಗೆ ವೈಶ್ಯರೂ ಸೂತಕವನ್ನು ಆಚರಿಸುತ್ತಾರೆ. ಗರ್ಭಿಣಿ ಸ್ತ್ರೀಯನ್ನು ಹೆರಿಗೆ ಸಂದರ್ಭದಲ್ಲಿ ಪ್ರಸೂತಿಕಾ ಗೃಹದಲ್ಲಿಟ್ಟು ಎಲ್ಲಾ ರೀತಿಯ ಅಗತ್ಯ ಮುಂಜಾಗರೂಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಕೆಲವು ಮನೆಗಳಲ್ಲಿ ಇದಕ್ಕೆಂದೇ ಮೀಸಲಾದ ಕೊಠಡಿಯೂ ಇರುತ್ತದೆ. ಈ ಸಂದರ್ಭದಲ್ಲಿ ಮಗುವಿನ ಜನನವು ಸುಲಭವಾಗಲೆಂದು ಪುರೋಹಿತರು ಬಂದು ಮಂತ್ರೋಚ್ಚಾರಣೆ ಸಹಿತ ಧಾರ್ಮಿಕ ವಿಧಿಯನ್ನು ನಡೆಸುತ್ತಾರೆ. ಮಗು ಜನಿಸಿ, ಹೊಕ್ಕಳು ಬಳ್ಳಿಯನ್ನು ಬೇರ್ಪಡಿಸಿದ ಮೇಲೆ, ಮಗುವಿನ ಮೈತೊಳೆದು ತಾಯಿಯಿಂದ ಸ್ತನ್ಯಪಾನ ಮಾಡಿಸುತ್ತಾರೆ. ಈ ವಿಧಿಯನ್ನು ಮಗುವು ಹುಟ್ಟಿದ ದಿನದಂದೇ ನಡೆಸಬೇಕೆಂದು ಶಾಸ್ತ್ರ ನಿಬಂಧನೆ ಇದ್ದರೂ ಸೂತಕ ಕಳೆದ ನಂತರ ಹನ್ನೆರಡನೇ ದಿನ ಈ ವಿಧಿಯನ್ನು ಆಚರಿಸುವ ಪದ್ಧತಿ ಇದೆ. ಇತರ ಸಂಸ್ಕಾರಗಳಲ್ಲಿರುವಂತೆ ಹೋಮ ಮುಂತಾದ ಶುದ್ಧಿ ವಿಧಿವಿಧಾನಗಳು ಜರುಗುತ್ತವೆ. ತಾಯಿ ಮತ್ತು ಮಗುವಿಗೆ ಗಂಧೋದಕ, ಸೇಚನೆಯ ಆನಂತರ ತಂದೆಯು ಮಂತ್ರಪುರಸ್ಸರವಾಗಿ ಪುತ್ರನ ಮುಖವನ್ನು ನೋಡುತ್ತಾನೆ. ಆತನಿಗೆ ಗಂಧೋದಕ ಸೇಚನೆಯನ್ನು ಮಾಡುತ್ತ ಹೀಗೆ ಆಶೀರ್ವದಿಸುತ್ತಾನೆ.

"ಎಲೈ ಪುತ್ರನೇ, ಕುಲ, ಜಾತಿ, ವಯಸ್ಸು, ರೂಪ, ಗುಣ, ಶೀಲ, ಅಖಂಡೈಶ್ವರ್ಯ, ಸೌಮ್ಯಕಾರತ್ವ ಈ ಗುಣಗಳಿಂದ ಕೂಡಿದ ನಿನ್ನ ತಾಯಿಯು ಸಮ್ಯಗ್ ದೃಷ್ಟಿಯುಳ್ಳವಳಾಗಿದ್ದಾಳೆ. ಆದುದರಿಂದ ನೀನು ದಿವ್ಯಚಕ್ರ, ವಿಜಯಚಕ್ರ, ಪರಮಚಕ್ರಗಳೆಂಬ ಮೂರು ಚಕ್ರಗಳನ್ನು ಅನುಕ್ರಮವಾಗಿ ಪಡೆದು ಸಂತೋಷವನ್ನು ಹೊಂದು".[79]

ನಾಮಕರ್ಮ : ಜಾತಕ ಕರ್ಮ ಸಂಸ್ಕಾರದ ನಂತರ ನಾಮಕರ್ಮ, ಸಂಸ್ಕಾರ ಅಥವಾ ಮಗುವಿಗೆ ಹೆಸರಿಡುವ ಪದ್ಧತಿ ನೆರವೇರುತ್ತದೆ. ಮಗು ಹುಟ್ಟಿದ ಹನ್ನೆರಡನೆಯ ದಿನ ಜೈನ ಪುರೋಹಿತರು, ಹದಿನಾರನೆಯ ದಿನ ಇತರರೂ ಈ ವಿಧಿಯನ್ನು ನೆರವೇರಿಸುತ್ತಾರೆ. ಬಸದಿಯಲ್ಲಿ ಪುತ್ರನ ಅಥವಾ ಪುತ್ರಿಯ ಆಗಮ ಉದ್ದೀಶವಾಗಿ ಧಾರ್ಮಿಕ ವಿಧಿಯನ್ನು ನಡೆಸಿದ ಬಳಿಕ, ಮನೆಯಲ್ಲಿ ಇದನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಮಗುವಿಗೆ ಹೆಸರಿಡುವುದರ ಜೊತೆಗೆ, ಕಿವಿ ಚುಚ್ಚುವುದು, ತೊಟ್ಟಿಲಿಗೆ ಹಾಕುವ ಶಾಸ್ತ್ರವನ್ನು ಆಚರಿಸುತ್ತಾರೆ. ಪುರೋಹಿತರು ಹೋಮಾದಿ ಧಾರ್ಮಿಕ ಕ್ರಿಯೆಗಳನ್ನು ನೆರವೇರಿಸಿದ ನಂತರ ಮಗುವಿನ ತಂದೆಯು ಶುದ್ಧವಾದ ಅಕ್ಕಿಯನ್ನು ಒಂದು

ತಟ್ಟೆಯಲ್ಲಿ ಹರಡಿ, ಅದರ ಮೇಲೆ ಅರಿಶಿನಪುಡಿಯನ್ನು ಹರಡಿ, ತನ್ನ ಮಗುವಿಗೆ ಇಡಲಿರುವ ಹೆಸರನ್ನು ಚಿನ್ನದ ಸಲಾಕೆಯಿಂದ ಬರೆಯುತ್ತಾನೆ. ಹರಿವಾಣದಲ್ಲಿ ಹಾಲು, ತುಪ್ಪ ಸಹಿತವಾಗಿ ತಾನು ಮಗುವಿಗಾಗಿ, ತಂದ ಹೊಸ ಆಭರಣಗಳನ್ನಿಟ್ಟು ಅದನ್ನು ಪುರೋಹಿತರಿಗೆ ನೀಡುತ್ತಾನೆ. ಪುರೋಹಿತರು ಮಂತ್ರಪೂರ್ವಕವಾಗಿ, ತಂದೆಯ ಹೆಸರನ್ನು ಹೇಳಿ ಆತನು ತನ್ನ ಮಗುವಿಗೆ ಇಟ್ಟ ಹೆಸರನ್ನು ಮೂರು ಬಾರಿ ನೆರೆದ ಜನರಿಗೆ ತಿಳಿಸುತ್ತಾರೆ. ತರುವಾಯ ಇಂದ್ರರು ಸುಮಂಗಲಿಯರು ಮಗುವಿಗೆ ಆಶೀರ್ವಾದ ಮಾಡಿಕೊಟ್ಟ ಹೊಸ ಆಭರಣಗಳನ್ನು ತೊಡಿಸಿ, ಹಾಲು, ತುಪ್ಪವನ್ನು ಊಡಿಸಿ ತೊಟ್ಟಿಲಲ್ಲಿಟ್ಟು ಜೋಗುಳ ಹಾಡಿ ಮಗುವನ್ನು ತೂಗುತ್ತಾರೆ.

ಸಾಮಾನ್ಯವಾಗಿ ಮಗುವಿಗೆ ಜ್ಯೋತಿಷಶಾಸ್ತ್ರದ ನೆರವನ್ನು ಪಡೆದು ಜನನ ನಕ್ಷತ್ರಕ್ಕೆ ಸರಿಹೊಂದುವ ಹೆಸರನ್ನೂ ಇಡಲಾಗುತ್ತದೆ. ಸಂತಾನದ ಬಗ್ಗೆ ಹರಕೆ ಹೊತ್ತವರು ತಾವು ಯಾವ ದೇವರಿಗೆ ಹರಕೆ ಹೊತ್ತಿರುತ್ತಾರೋ ಅಲ್ಲಿಗೆ ಮಗುವನ್ನು ಕರೆದುಕೊಂಡು ಹೋಗಿ ನಾಮಕರಣ ವಿಧಿಯನ್ನು ನಡೆಸುತ್ತಾರೆ. ಹೆಚ್ಚಾಗಿ ಹುಂಬುಚದ ಪದ್ಮಾವತಿಗೆ ಹರಕೆ ಹೇಳಿಕೊಳ್ಳುವುದು ವಾಡಿಕೆ. ಮಗುವನ್ನು ಅಲ್ಲಿಗೆ ಕರೆದೊಯ್ದು, ಶಾಸ್ತ್ರವನ್ನು ನೆರವೇರಿಸುತ್ತಾರೆ. ಇದೇ ರೀತಿ ಬ್ರಹ್ಮದೇವನಿಗೆ ಕೂಷ್ಮಾಂಡಿನೀ, ಜ್ವಾಲಾಮಾಲಿನಿ ದೇವಿಯರಿಗೆ ಹರಕೆ ಹೊತ್ತಿದ್ದರೆ ಅವರ ಕ್ಷೇತ್ರಕ್ಕೆ ಮಗುವನ್ನು ಕರೆದೊಯ್ದು ನಾಮಕರ್ಮ ವಿಧಿಯನ್ನು ನಡೆಸುತ್ತಾರೆ.

ತೊಟ್ಟಿಲುಶಾಸ್ತ್ರ ನೆರವೇರಿಸಲು ಮಗುವಿನ ತೊಟ್ಟಿಲನ್ನು ಬಗೆಬಗೆಯ ಹೂವುಗಳಿಂದ ಅಲಂಕರಿಸುತ್ತಾರೆ. ಪುರೋಹಿತರು ಪಂಚವರ್ಣಗಳಿಂದ ಮಂಡಲ ಬರೆದು ಹೋಮವನ್ನು ನಡೆಸಿದ ಬಳಿಕ, ತೊಟ್ಟಿಲು ಪೂಜಿಸುತ್ತಾರೆ. ಮಗುವನ್ನು ತೊಟ್ಟಿಲಿಗೆ ಹಾಕುವ ಮೊದಲು ಗುಂಡುಕಲ್ಲನ್ನು ಮೂರು ಬಾರಿ ಇಟ್ಟು ತೆಗೆಯುತ್ತಾರೆ. ಪ್ರಾಯಶಃ ತೊಟ್ಟಿಲು ಸರಿಯಾಗಿದೆಯೇ ಎಂದು ಖಚಿತ ಪಡಿಸಿಕೊಳ್ಳಲು ಮುನ್ನೆಚ್ಚರಿಕೆಯ ಕ್ರಮವಾಗಿ ಈ ಪದ್ಧತಿಯನ್ನು ಆಚರಣೆಗೆ ತಂದಿರಬೇಕು. ಮಗುವಿನ ಕೈಗೆ ಬೆಳ್ಳಿಯ ಅಥವಾ ಬಂಗಾರದ ರೂಪಾಯಿಯೊಂದನ್ನು ಕೊಟ್ಟು ತೊಟ್ಟಿಲಿಗೆ ಹಾಕಿ, ಮಗುವಿರುವ ತೊಟ್ಟಿಲು ತೂಗಿದ ಬಳಿಕ, ಸಮಾರಂಭಕ್ಕೆ ಬಂದಿದ್ದ ಆಪ್ತರು ತಾವು ತಂದ ಉಡುಗೊರೆಯನ್ನು ಮಗುವಿನ ಕೈಗೆ ಕೊಟ್ಟು ತೊಟ್ಟಿಲು ತೂಗುತ್ತಾರೆ. ಈ ಸಂದರ್ಭವೂ ಕೂಡ ಔತಣದ ಊಟದೊಂದಿಗೆ ಮುಕ್ತಾಯವಾಗುತ್ತದೆ.[80]

ಉಪವೇಶನ ಮತ್ತು ಬಹಿರ್ಯಾನ : ಮಗುವಿಗೆ ಮೂರು ಅಥವಾ ಐದು ತಿಂಗಳಾದಾಗ ಈ ವಿಧಿಯನ್ನು ಅಚರಿಸಲಾಗುತ್ತಿದೆ. ಮೊದಲಬಾರಿಗೆ ಮಗುವನ್ನು ಮನೆಯ ಹೊಸ್ತಿಲನ್ನು ದಾಟಿ ಹೊರಗೆ ತರುವ ಆಚರಣೆಯನ್ನು ಈ ವಿಧಿ ಅಥವಾ ಸಂಸ್ಕಾರದಲ್ಲಿ ಬಹಿರ್ಯಾನವೆನ್ನುತ್ತಾರೆ.

ಮಗುವನ್ನು ಪಲ್ಯಂಕಾಸನದಲ್ಲಿ ಕುಳ್ಳಿರಿಸುವ ಪದ್ಧತಿಯೂ ಇರುವುದರಿಂದ ಇದಕ್ಕೆ ಉಪವೇಶನ ಕ್ರಿಯೆಯೆನ್ನುತ್ತಾರೆ. ಇದು ಕೂಡ ಮಗುವಿನ ತಂದೆ-ತಾಯಿಯರಿಗೆ, ಬಂಧುಗಳಿಗೆ ಸಂಭ್ರಮದ ಆಚರಣೆಯಾಗಿರುತ್ತದೆ. ಬೆಳೆಯುವ ಮಗುವಿನ ವಿಸ್ಮಯ, ಕುತೂಹಲ ಮತ್ತು ದೇಹದ ಅಂಗಾಂಗಗಳ ವಿಕಾಸಕ್ಕೆ ಮನೆಯ ಒಳಗಡೆಯ ಆವರಣವು ಸಾಲುವುದಿಲ್ಲ. ಅದಕ್ಕಾಗಿ ಬಾಹ್ಯ ಪ್ರಪಂಚಕ್ಕೆ ಮಗು ಪ್ರವೇಶ ಮಾಡಬೇಕಾಗುತ್ತದೆ. ಈ ವಿಧಿ ಆಚರಣೆಯಲ್ಲಿ ಬಸದಿಯಲ್ಲಿ ಪೂಜೆ, ಅಭಿಷೇಕ, ಶಾಂತಿಹೋಮಾದಿ ಕ್ರಿಯೆಗಳನ್ನು ನಡೆಸುತ್ತಾರೆ. ಮಗುವಿಗೆ ಜಿನನ ದರ್ಶನ ಮಾಡಿಸಿ, ಮಗುವನ್ನು ಪಲ್ಯಂಕಾಸನ ಭಂಗಿಯಲ್ಲಿ ಕುಳ್ಳಿರಿಸುತ್ತಾರೆ. ಬಲತೊಡೆಯ ಕೆಳಗೆ ಎಡಪಾದವೂ, ಎಡದ ತೊಡೆಯ ಕೆಳಗೆ ಬಲಪಾದವು ಬರುವಂತೆ ಕುಳ್ಳಿರಿಸಿದರೆ ಪಲ್ಯಂಕಾಸನವಾಗುತ್ತದೆ. ತೀರ್ಥಂಕರರುಗಳು ಧ್ಯಾನಕ್ಕೆ ಇದೇ ಭಂಗಿಯಲ್ಲಿ ಕುಳಿತುಕೊಳ್ಳುತ್ತಿದ್ದುದನ್ನು ನೆನಪಿಸಿಕೊಳ್ಳಬಹುದು. ತೀರ್ಥಪ್ರಸಾದಗಳನ್ನು ಮಗುವಿಗೆ ಸಂಪ್ರೋಕ್ಷಿಸಿ ಪುರೋಹಿತರು ಹೀಗೆ ಆಶೀರ್ವದಿಸುತ್ತಾರೆ. ದಿವ್ಯಸಿಂಹಾಸನಕ್ಕೆ ಪಾತ್ರನಾಗು; ವಿಜಯಸಿಂಹಾಸನಕ್ಕೆ ಪಾತ್ರನಾಗು ಮತ್ತು ಪರಮ ಸಿಂಹಾಸನಕ್ಕೆ ಪಾತ್ರನಾಗು.

ಆ ಬಳಿಕ ಮಗುವಿನ ಸಹಿತ ಬಸದಿಗೆ ಬೆಳೆಯುವ ಮಗುವಿಗೆ ಜಿನನ ದರ್ಶನ ಮಾಡಿಸಿ, ಭವ್ಯ ಜಗತ್ತಿನ ವೈಭವವನ್ನು ತೋರಿಸುವ ಈ ಸಂಸ್ಕಾರವು ಚೇತೋಹಾರಿಯಾದುದು ಪ್ರದಕ್ಷಿಣೆಬಂದು, ಮಗುವನ್ನು ಮನೆಗೆ ಕರೆತರುತ್ತಾರೆ.[81]

ಅನ್ನಪ್ರಾಶನ : ಸಾಮಾನ್ಯವಾಗಿ ಈ ಸಂಸ್ಕಾರವನ್ನು ಏಳನೆಯ ತಿಂಗಳಲ್ಲಿ ನಡೆಸುತ್ತಾರೆ. ಮಗುವಿಗೆ ತಾಯಿ ಹಾಲಿನ ಬದಲಿಗೆ ಅನ್ನ, ಇತ್ಯಾದಿ ಆಹಾರವನ್ನು ಮೊದಲ ಬಾರಿಗೆ ಉಣಿಸುವ ಮೊದಲು ಆಚರಿಸುವ ಸಂಸ್ಕಾರವಿಧಿ. ಮಗುವಿನ ಶಾರೀರಿಕ ಬೆಳವಣಿಗೆಗೆ ತಾಯಿಯ ಹಾಲು ಸಾಲುವುದಿಲ್ಲ. ಆರು ತಿಂಗಳಲ್ಲಿ ಸ್ತನ್ಯಪಾನವನ್ನು ಕಡಿಮೆ ಮಾಡಿ ಪೋಷಕಾಂಶವುಳ್ಳ ಆಹಾರವನ್ನು ಈ ವಿಧಿಯ ನಂತರ ನೀಡಲಾಗುತ್ತದೆ. ಪುಣ್ಯಾಜಲ, ಮಂತ್ರಾಕ್ಷತೆಗಳಿಂದ ಆಶೀರ್ವದಿಸಿ ಐದು ಬಗೆಯ ಸಿಹಿಪದಾರ್ಥಗಳಿಂದ ಕೂಡಿದ ಅನ್ನವನ್ನು ಐದು ಜನ ಸುಮಂಗಲಿಯರು ಮಗುವಿಗೆ ಉಣಿಸುತ್ತಾರೆ.[82]

ಗಮನಕ್ರಿಯೆ : ಒಂಭತ್ತನೇ ತಿಂಗಳಲ್ಲಿ ಸಾಮಾನ್ಯವಾಗಿ ಮಗು ನಡೆಯುತ್ತದೆ. ಗಮನವೆಂದರೆ ಮಗುವನ್ನು ನಡೆಸುವುದು ಎಂದರ್ಥ. ಆಗ ಮಗುವಿಗೆ ಹೂ ಮುಡಿಸಿ, ಆಭರಣ ತೊಡಿಸಿ, ಹೊಸ ಬಟ್ಟೆ ಹಾಕಿ, ಇತರ ಸಂಸ್ಕಾರಗಳಲ್ಲಿ ನೆರವೇರುವಂತೆ ಹೋಮಾದಿ ಕ್ರಿಯೆಗಳನ್ನು ನಡೆಸುತ್ತಾರೆ. ಪುಣ್ಯಾಜಲ ಸೇಚನೆ, ಮಂತ್ರಾಕ್ಷತೆಗಳಿಂದ ಆಶೀರ್ವದಿಸಿ ಹಸೆಮಣೆಯ ಮೇಲೆ ಬಿಳಿಯ ಬಟ್ಟೆಯನ್ನು

ಹಾಸಿ, ಅದರ ಮೇಲೆ ಮಗುವಿನ ಬಲಗಾಲನ್ನು ಮುಂದುಮಾಡಿ ಉತ್ತರಾಭಿಮುಖವಾಗಿ ನಡೆಸುತ್ತಾರೆ. ಈ ಪದ್ಧತಿಯನ್ನು ಇತ್ತೀಚೆಗೆ ಸರ್ವೇಸಾಮಾನ್ಯವಾಗಿ ಬಿಟ್ಟುಬಿಟ್ಟಿದ್ದಾರೆ.[83]

ಚೌಲಕ್ರಿಯೆ : ಬಾಲಕನಿಗೆ ಮೂರು ವರ್ಷ ತುಂಬಿದಾಗ ಚೌಲಕ್ರಿಯೆ ಅಥವಾ ಈ ಸಂಸ್ಕಾರ ವಿಧಿಯನ್ನು ನಡೆಸುತ್ತಾರೆ. ಹಾಗೂ ಇದಕ್ಕೆ ಚೂಡಾಕರ್ಮ ಅಥವಾ ಕೇಶವಪನ ಕ್ರಿಯೆಯೆಂದೂ ಕರೆಯುವ ಪದ್ಧತಿ ಇದೆ.[84] ತಲೆಯ ಜುಟ್ಟನ್ನು ಹಿಂದೆ ಬಿಟ್ಟು ಮುಂಭಾಗದಲ್ಲಿ ಹುಟ್ಟು ಕೇಶವನ್ನು ವಪನ ಮಾಡಿಸುತ್ತಾರೆ. ಸೌಂದರ್ಯ ಮತ್ತು ದೀರ್ಘ ಆಯಸ್ಸನ್ನು ಕೋರುವುದು ಈ ವಿಧಿಯ ಉದ್ದೇಶ. ಕ್ಷೌರ ಮಾಡಿಸಿ, ಕೈ ಕಾಲುಗಳ ಬೆರಳುಗಳ ಉಗುರುಗಳನ್ನು ವಿಧಿವತ್ತಾಗಿ ಕತ್ತರಿಸುವುದರಿಂದ ಶರೀರದ ಮಲಿನತೆ ಕಳೆದು, ಜೀವಚೈತನ್ಯ ಹೆಚ್ಚುತ್ತದೆ. ತಲೆಯ ಒಳಗೆ ನೆತ್ತಿಯ ಬಳಿ ರಕ್ತವಾಹಿನಿಯ ಸಂಧಿಸ್ಥಾನವಿದೆಯೆಂದೂ, ನೆತ್ತಿಯ ಸುಳಿಯಲ್ಲಿ ಅಧಿಪತಿಯೆಂಬ ಪ್ರಮುಖ ಸ್ಥಾನವಿದ್ದು ಈ ಜಾಗಕ್ಕೆ ಪೆಟ್ಟು ಬಿದ್ದಲ್ಲಿ ಮನುಷ್ಯನು ಕೂಡಲೇ ಸಾಯುತ್ತಾನೆಂದೂ ಈ ದೃಷ್ಟಿಯಿಂದ ಶಿಖೆಯನ್ನು ಬಿಡುವುದು ಆರೋಗ್ಯ ರಕ್ಷಣೆಯ ಸಂಕೇತವೆಂದೂ ಈ ಸಂಸ್ಕಾರ ವಿಧಿಯನ್ನು ಸಮರ್ಥಿಸಲಾಗುತ್ತದೆ.

ಸುಮುಹೂರ್ತದಲ್ಲಿ ಶಾಂತಿಹೋಮವನ್ನು ನೆರವೇರಿಸಿ, ಹಸೆಮಣೆಯಲ್ಲಿ ಬಾಲಕನನ್ನು ತಂದೆ-ತಾಯಿಯರ ಜೊತೆಯಲ್ಲಿ ಕೂರಿಸುತ್ತಾರೆ. ಮಿಥುನರಾಶಿಯ ಸಂಕೇತವಾಗಿ ಎಳ್ಳು, ಕನ್ಯಾರಾಶಿ ಉದ್ದು, ಧನಸ್ಸು ರಾಶಿಯ ಗೋಧಿ, ಮೀನ ರಾಶಿಯ ಭತ್ತ, ವೃಷಭ ರಾಶಿಯ ಬನ್ನಿಸೊಪ್ಪು ಮತ್ತು ಮೇಷರಾಶಿಯ ಗೋಮಯವನ್ನು ಹಸೆಮಣೆಯನ್ನು ಮುಂದೆ ಕ್ರಮವರಿತ್ತು ಅಲಂಕರಿಸುತ್ತಾರೆ. ಅಲ್ಲದೆ ಜೊತೆಗೆ ಕತ್ತಿ, ಸಾಣೆಕಲ್ಲು, ಕತ್ತರಿ ಮತ್ತು ದರ್ಭೆಯ ಏಳು ಕೂರ್ಚಗಳನ್ನು ಒಳಗೊಂಡ ಒಂದು ತಟ್ಟೆಯನ್ನೂ ಇರಿಸುತ್ತಾರೆ. ಹೋಮ ಇತ್ಯಾದಿ ಧಾರ್ಮಿಕ ಕ್ರಿಯೆಗಳು ನಡೆದು ಆಜ್ಯಾಹುತಿಯಾಗಿ, ಮಂಗಳಸ್ತೋತ್ರ, ಆಶೀರ್ವಾದದ ನಂತರ ತಾಯಿಯ ತೊಡೆಯ ಮೇಲೆ ಬಾಲಕನನ್ನು ಉತ್ತರಾಭಿಮುಖವಾಗಿ ಕುಳ್ಳಿರಿಸುತ್ತಾರೆ. ತಂದೆಯು ದಕ್ಷಿಣಾಭಿಮುಖವಾಗಿ ಕುಳಿತು, ಬಾಲಕನ ನೆತ್ತಿಗೆ ಹಾಲು, ತುಪ್ಪ, ಬೆಣ್ಣೆ, ಮೊಸರನ್ನು ಸೇಚಿಸಿ ಮುಳ್ಳುಹಂದಿಯ ಮುಳ್ಳಿನಿಂದಾಗಲೀ, ಕಗ್ಗಲಿಯ ಕಡ್ಡಿಯಿಂದಾಗಲೀ ಬಲಪಾರ್ಶ್ವದಲ್ಲಿ ಕೂದಲುಗಳನ್ನು ಎತ್ತಿ ಐದು ದರ್ಭೆಯನ್ನು ಕೈಯಲ್ಲಿ ಬರಿಗೈಯಲ್ಲಿ ಹಿಡಿದು ಅದರೊಂದಿಗೆ ಚಂದನಲಿಪ್ತವಾದ ಕತ್ತರಿಯಿಂದ ಮಂತ್ರಪೂರ್ವಕವಾಗಿ ಕತ್ತರಿಸುತ್ತಾನೆ. ತಾಯಿಯು ಇದನ್ನು ಬನ್ನಿಸೊಪ್ಪು, ಹಾಲು, ತುಪ್ಪಗಳಿಂದ ಮಿಶ್ರಮಾಡಿದ ಗೋಮಯದ ಪಾತ್ರೆಯಲ್ಲಿ ಹಾಕುತ್ತಾಳೆ. ಪಂಚನಮಸ್ಕಾರ ಪೂರ್ವಕವಾಗಿ ಐದು ಬಾರಿ ಕತ್ತರಿಸಿದ

ಬಳಿಕ, ತಲೆಗೆ ಬಿಸಿನೀರನ್ನು ಸೇಚಿಸಿ ಕ್ಷೌರಿಕನ ಸಹಾಯದಿಂದ ವಪನ ಮಾಡಿಸುತ್ತಾರೆ. ಹರಕೆ ಹೇಳಿಕೊಂಡವರು ಆಯಾ ಕ್ಷೇತ್ರಕ್ಕೆ ತೆರಳಿ ಮುಡಿಯೊಪ್ಪಿಸುವ ಸಂಪ್ರದಾಯವಿದೆ.[85]

ಅಕ್ಷರಾಭ್ಯಾಸ : ಮಗುವಿಗೆ ಐದನೆಯ ವರ್ಷ ತುಂಬಿದಾಗ, ಅಕ್ಷರಾಭ್ಯಾಸವನ್ನು ಮಾಡಿಸುತ್ತಾರೆ. ಈ ವಿಧಿಯು ವಿದ್ಯಾಭ್ಯಾಸದ ಆರಂಭವನ್ನು ಸೂಚಿಸುತ್ತದೆ ಹಾಗೂ ಲಿಪಿಸಂಖ್ಯಾನ ಸಂಗ್ರಹವೆಂದೂ ಕರೆಯುತ್ತಾರೆ.[86] ಅಕ್ಷರಾಭ್ಯಾಸಕ್ಕೆ ಗೊತ್ತು ಪಡಿಸಿದ ದಿನದಂದು ಬಸದಿಯಲ್ಲಿ ಅಭಿಷೇಕ ಪೂಜೆಯನ್ನು ನಡೆಸಿ ಪಂಚ ಪರಮೇಷ್ಠಿಗಳನ್ನೂ, ಶ್ರುತ, ಗುರುಗಳನ್ನೂ ಪೂಜಿಸಿ ಮನೆಯಲ್ಲಿ ಶಾಂತಿಹೋಮ ಇತರ ಸಂಸ್ಕಾರಗಳಲ್ಲಿ ನೆರವೇರಿಸಿದಂತೆಯೇ ಆಚರಿಸಿ, ಬಾಲಕನನ್ನು ಪುಣ್ಯಾಹಜಲ, ಮಂತ್ರಾಕ್ಷತೆಗಳಿಂದ ಆಶೀರ್ವದಿಸಿ, ದೊಡ್ಡ ತಟ್ಟೆಯಲ್ಲಿ ಅಕ್ಕಿಯನ್ನು ಹರಡಿ, ಅದರ ಮೇಲೆ ಅರಿಸಿನ ಪುಡಿಯನ್ನು ಹರಹಿ, ಅದನ್ನು ಬಾಲಕನಿಂದ ಗಂಧ, ಪುಷ್ಪಾಕ್ಷತೆಯಿಂದ ಪೂಜಿಸಿ, ಮಂತ್ರಪೂರ್ವಕವಾಗಿ ಓಂಕಾರವನ್ನು ಬರೆಸುತ್ತಾರೆ. ಅನಂತರ ಒಂದೊಂದಾಗಿ ಸ್ವರಾಕ್ಷರ, ವ್ಯಂಜನಾಕ್ಷರಗಳನ್ನು ಬರೆಸುತ್ತಾರೆ.

ಪುಸ್ತಕ ಗ್ರಹಣ : ಅಕ್ಷರಾಭ್ಯಾಸ ಸಂಸ್ಕಾರಗಳಿಂದ ಬಾಲಕ ಬಾಲಕಿಗೆ ಪುಸ್ತಕವನ್ನು ಕೊಟ್ಟು ಓದಿಸುವ ವಿಧಿಗೆ ಪುಸ್ತಕ ಗ್ರಹಣವೆನ್ನುತ್ತಾರೆ. ಅಕ್ಷರಾಭ್ಯಾಸದ ಧಾರ್ಮಿಕ ವಿಧಿವಿಧಾನಗಳು ಇಲ್ಲಿಯೂ ಪುನರಾವರ್ತನೆ ಮಾಡಿ, ಬಳಿಕ ಪುಸ್ತಕವನ್ನು ಪೂಜಿಸಿ, ಮನೆತನದ ಗುರುವು ಪುಸ್ತಕದಲ್ಲಿನ ಮಂಗಲಶ್ಲೋಕವನ್ನು ಬಾಲಕ, ಬಾಲಕಿಗೆ ಓದಿ ಹೇಳಿ, ಬಳಿಕ ಬಾಲಕನಿಗೆ ಪುಸ್ತಕವನ್ನು ಕೊಟ್ಟು ಅವನಿಂದ ಪುಸ್ತಕ ಓದಿಸುತ್ತಾನೆ. ಈ ಧಾರ್ಮಿಕ ವಿಧಿಯ ಅಥವಾ ಸಂಸ್ಕಾರದ ನಂತರ ಬರುವ ಉಪನಯನ, ಸಮಾವರ್ತನ, ವಿವಾಹ ಮತ್ತು ಸಮಾಧಿ, ಮರಣ ವಿಧಿಗಳು, ಧಾರ್ಮಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಬಹು ಮುಖ್ಯವಾದ ಕ್ರಿಯೆಗಳಾಗಿವೆ. ಜೈನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಇದನ್ನು ವಿಸ್ತಾರವಾಗಿ ವಿವರಿಸುವ ಅಗತ್ಯವಿದೆ. ಆದ್ದರಿಂದ ಇಲ್ಲಿ ಧಾರ್ಮಿಕ ಕಲಾಪಗಳನ್ನಷ್ಟೇ ವಿವರಿಸಲಾಗಿದೆ.[87]

ಉಪನಯನ : ಬಾಲಕನಿಗೆ ಗರ್ಭಾತ್ ಅಷ್ಟಮ ಅಥವಾ ದಶವರ್ಷಗಳು ತುಂಬುವ ಮೊದಲು ಮುಂಜಿ ಬಂಧನವನ್ನು ಮಾಡಿ ಉಪದೇಶವನ್ನು ಕೊಟ್ಟು ಗುರುವಿನ ಬಳಿಗೆ ಕರೆದೊಯ್ಯುವ ಕ್ರಿಯೆಯನ್ನು ಉಪನಯನ ಎಂದು ಕರೆಯುತ್ತಾರೆ. ಈ ಸಂಸ್ಕಾರವನ್ನು ಜೈನ ಬ್ರಾಹ್ಮಣನಿಗೆ ಅಥವಾ ಇಂದ್ರವರ್ಗದ ಬಾಲಕನಿಗೆ ಎಂಟನೆಯ ವರ್ಷದಲ್ಲೂ, ಕ್ಷತ್ರಿಯನಿಗೂ ಒಂಭತ್ತನೆಯ ವರ್ಷದಲ್ಲೂ ವೈಶ್ಯನಿಗೆ ಹತ್ತನೆಯ ವರ್ಷದಲ್ಲೂ ಆಚರಿಸುತ್ತಾರೆ.[88] ಬಾಲಕನ ಜೀವನದಲ್ಲಿ ಪ್ರಮುಖ ಘಟ್ಟ. ಜನ್ಮದಿಂದ ಜಾತಿಯೂ, ಕರ್ಮದಿಂದ ದ್ವಿಜತ್ವವೂ ಅಥವಾ ಎರಡನೆಯ ಜನ್ಮ

ಬರುತ್ತದೆಯಾದ್ದರಿಂದ ತ್ರೈವರ್ಣದವರು ಈ ಕ್ರಿಯೆಯನ್ನು ಆಚರಿಸುತ್ತಾರೆ.[89] ಉಪನಯನವಾದವನನ್ನು ದ್ವಿಜನೆಂದು ಕರೆಯುತ್ತಾರೆ. ಉಪದೇಶವನ್ನು ಪಡೆದು ಎರಡನೆಯ ಜನ್ಮವನ್ನು ಪಡೆದವರು ಎಂದರ್ಥ. ಈ ವಿಧಿಯಲ್ಲಿ ಬಾಲಕನಿಗೆ ಆಚಾರ ಸಂಬಂಧವಾದ ಜ್ಞಾನಚಕ್ಷುವು ಪ್ರಾಪ್ತವಾಗುವುದರಿಂದ ಉಪನಯನ ಬೇರೊಂದು ಕಣ್ಣು, ಎರಡನೆಯ ಕಣ್ಣು ಎಂಬ ಹೆಸರು ಅನ್ವರ್ಥಕವಾಗುತ್ತದೆ. ಈ ವಿಧಿ ಅಥವಾ ಸಂಸ್ಕಾರ ನೆರವೇರಿಸಿರುವುದರಿಂದ ವ್ರತ, ಪೂಜಾದಿ, ಅನುಷ್ಠಾನಕ್ಕೆ ಬಾಲಕನು ಯೋಗ್ಯನಾಗುತ್ತಾನೆ. ಜ್ಯೋತಿಷ್ಯಶಾಸ್ತ್ರವೂ ಇದಕ್ಕೆ ಸಾಕಷ್ಟು ಮಹತ್ವವನ್ನು ನೀಡಿದೆ.[90]

ಈ ಧಾರ್ಮಿಕ ವಿಧಿವಿಧಾನಗಳನ್ನು ವಟುವಿಗೆ ಉತ್ತಮ ಫಲ ನೀಡುವ ತಿಥಿ, ವಾರ, ನಕ್ಷತ್ರಗಳನ್ನು ನೋಡಿ ಬಸದಿಯಲ್ಲಿ ನೆರವೇರಿಸುತ್ತಾರೆ. ಮುನಿಗಳಿಂದಾಗಲೀ, ಮಠಾಧಿಪತಿಗಳಾದ ಭಟ್ಟಾರಕರಿಂದಾಗಲೀ ವ್ರತಿಕನಿಗೆ ವ್ರತೋಪದೇಶ ಮಾಡಿಸುತ್ತಾರೆ. ಬಸದಿಯಲ್ಲಿ ಅಷ್ಟಾವಿಧಾರ್ಚನೆ, ಪೂಜೆ, ಅಭಿಷೇಕ, ಶಾಂತಿಹೋಮ ಕ್ರಿಯೆಗಳನ್ನು ನೆರವೇರಿಸಿ ವ್ರತಿಕನಿಗೆ ಆಶೀರ್ವಾದವನ್ನು ಮಾಡುತ್ತಾರೆ. ಸ್ನಾನ, ಅಲಂಕಾರಗಳನ್ನು ಮಾಡಿಸಿ ವ್ರತಿಕನನ್ನು ಹಸೆಯ ಮೇಲೆ ಕುಳ್ಳಿರಿಸಿ ಸುಮಂಗಲಿಯರಿಂದ ಎಣ್ಣೆ ಒತ್ತಿಸಿ, ಗೋವಿನ ಹೆಜ್ಜೆಯಷ್ಟು ಅಳತೆಯ ಜುಟ್ಟನ್ನು ಬಿಟ್ಟು ಪುನಃ ವಪನ ಮಾಡಿಸುತ್ತಾರೆ. ವಪನದ ನಂತರ ವ್ರತಿಕನಿಗೆ ಮಂಗಳಸ್ನಾನವನ್ನು ಮಾಡಿಸಿ, ಹೋಮವನ್ನು ನೆರವೇರಿಸಿದ ಬಳಿಕ ಉತ್ತರಾಭಿಮುಖವಾಗಿ ಕುಳ್ಳಿರಿಸಿ ತಂದೆಯು ಆತನಿಗೆ ಎದುರಾಗಿ ಕುಳಿತುಕೊಳ್ಳುತ್ತಾನೆ. ತಂದೆಯು ಮಗನ ಹಣೆಗೆ ತಿಲಕವನ್ನಿಟ್ಟು, ಸೊಂಟಕ್ಕೆ ಕೌಪೀನ ಬಂಧನಗೋಸ್ಕರ ದರ್ಭೆ ಹುಲ್ಲಿನ ಮೂರು ಹುರಿಗಳಿಂದ ಹೆಣೆಯಲ್ಪಟ್ಟ ಮೌಂಜಿಯನ್ನು (ಉಡುದಾರ) ಕಟ್ಟಿ, ಕಾಶಾಯದ ಸಂಕೇತವಾಗಿ ಅರಿಶಿಣದ ವಸ್ತ್ರವನ್ನು ಉಡಿಸಿ, ಉತ್ತರೀಯವನ್ನು ಹೊದಿಸುತ್ತಾರೆ. ಅನಂತರ ವಿಧಿಪೂರ್ವಕವಾಗಿ ಶ್ರೀಗಂಧ, ಅರಿಶಿಣದಿಂದ ಕೂಡಿದ ಯಜ್ಞೋಪವೀತವನ್ನು ತೊಡಿಸುತ್ತಾರೆ. ಇವೆಲ್ಲವೂ ಆಯಾ ಮಂತ್ರೋಪದೇಶದೊಂದಿಗೆ ನಡೆಯುತ್ತವೆ. ಅನಂತರ ಪಂಚನಮಸ್ಕಾರ ಮಂತ್ರೋಪದೇಶ, ಶೌಚ, ಅಚಮನ, ಅರ್ಘ್ಯ ಮುಂತಾದ ಸಂಧ್ಯಾವಂದನಾ ಕ್ರಿಯೆಗಳನ್ನು ವಿಸ್ತಾರವಾಗಿ ಹೇಳಿಕೊಡುತ್ತಾರೆ.

ಧಾರ್ಮಿಕ ವಿಧಿಗಳು ಪೂರ್ಣಗೊಂಡ ಬಳಿಕ, ಪುಣ್ಯಾಹವಾಚನ ಮಂತ್ರವನ್ನು ಹೇಳಿ ತೀರ್ಥಂಕರನಿಗೆ ಪ್ರದಕ್ಷಿಣೆ ಬಂದು ದೇವ, ಗುರು, ಶಾಸ್ತ್ರಗಳಿಗೆ ವ್ರತಿಕನು ನಮಸ್ಕರಿಸುತ್ತಾನೆ. ಅನಂತರ ಮಂಡಲಗಳಾದ ಅಗ್ನಿಮಂಡಲ, ವಾಯುಮಂಡಲ, ಜಲಮಂಡಲ, ಭೂಮಂಡಲ, ಆಕಾಶಮಂಡಲಗಳನ್ನು ಬರೆದು, ಅದರ ಮೇಲೆ ದರ್ಭೆಯನ್ನು ಹರಡಿ ಅದರ ಮೇಲೆ ಅರಿಶಿಣ

ವಸ್ತ್ರವೊಂದನ್ನು ಹಾಕಿ, ಸ್ವಸ್ತಿಕವನ್ನು ಬರೆದು ಅದರ ಮೇಲೆ ವ್ರತಿಕನನ್ನು ಕುಳ್ಳಿರಿಸುತ್ತಾರೆ. ಆತನ ಬೊಗಸೆಯಲ್ಲಿ ಅಕ್ಕಿಯನ್ನು ಹರಡಿ ಬೀಜಾಕ್ಷರಗಳನ್ನು ಸಾಂಕೇತಿಕವಾಗಿ ಬರೆದು, ಅದರ ಮೇಲೆ ಫಲವನ್ನು ಇಟ್ಟು ವ್ರತೋಪದೇಶ ಮಾಡುತ್ತಾರೆ. ಮುಖ್ಯವಾಗಿ ಸಮ್ಯಗ್‌ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್ ಚಾರಿತ್ರ್ಯಗಳ ಸ್ವರೂಪವನ್ನು ಪಂಚಾಣುವ್ರತ-ಸಪ್ತಶೀಲ ವ್ರತಗಳ ಮಹತ್ವವನ್ನು ಉಪದೇಶಿಸುತ್ತಾರೆ. ಅಭಕ್ಷವಸ್ತುಗಳ ತ್ಯಾಗ, ಸಪ್ತವ್ಯಸನ ತ್ಯಾಗ, ರಾತ್ರಿ ಭೋಜನ ತ್ಯಾಗ, ಅಭಕ್ಷಪಂಚಫಲ ತ್ಯಾಗ, ಸೋಸಿದ ನೀರು ಕುಡಿಯುವುದು ಇತ್ಯಾದಿ ವಿಚಾರಗಳನ್ನು ತಿಳಿಸುತ್ತಾರೆ. ಸಾಮೂಹಿಕ, ಷೋಡಶಭಾವನೆ, ದಶಧರ್ಮ, ದ್ವಾದಶಾನುಪ್ರೇಕ್ಷೆ, ಚೈತ್ಯಭಕ್ತಿ, ಪಂಚಗುರುಭಕ್ತಿ, ಶಾಂತಿಭಕ್ತಿ, ಸಮಾಧಿಭಕ್ತಿಗಳನ್ನು ವಿವರಿಸಿ ವಿದ್ಯಾಭ್ಯಾಸ ಪೂರ್ತಿಯಾಗುವವರೆಗೆ ನಿತ್ಯನೈಮಿತ್ತಿಕ ಅನುಷ್ಠಾನಗಳನ್ನು ಪಾಲಿಸುವಂತೆ ಆಗ್ರಹಿಸುತ್ತಾರೆ.[91] ಬ್ರಹ್ಮಚರ್ಯವ್ರತವನ್ನು ಶಯ್ಯಾತ್ಯಾಗವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸುತ್ತಾರೆ. ಹೀಗೆ ವ್ರತಿಕನಿಗೆ ಉಪದೇಶವನ್ನು ನೀಡಿ ಶ್ರಾವಕಚಾರ ಸಂಬಂಧ ಗ್ರಂಥಗಳನ್ನು ಕೊಟ್ಟು, ವ್ರತಿಕನು ಬ್ರಾಹ್ಮಣ (ಇಂದ್ರ) ನಾದರೆ ಮುತ್ತುಗ, ಕ್ಷತ್ರಿಯನಾದರೆ ಕಗ್ಗಲಿ, ವೈಶ್ಯನಾದರೆ ಅತ್ತಿ ಈ ಮರಗಳ ದಂಡವನ್ನು ಆತನಿಗೆ ನೀಡುತ್ತಾರೆ. ಅನಂತರ ಗುರುವಿನ ಆಜ್ಞೆ ಪಡೆದು ಕೈಯಲ್ಲಿ ಭಿಕ್ಷಾಪಾತ್ರೆಯನ್ನು ಹಿಡಿದು ಶ್ರಾವಕರ ಮನೆಗೆ ಹೋಗಿ ಭಿಕ್ಷೆಯನ್ನು ಯಾಚಿಸಿ, ಸಂಗ್ರಹಿತ ಭಿಕ್ಷೆಯಲ್ಲಿ ಮೂರು ಪಾಲನ್ನು ಮಾಡಿ ಒಂದು ಭಾಗವನ್ನು ಬಸದಿಗೂ, ಇನ್ನೊಂದನ್ನು ಗುರುವಿಗೂ ಮತ್ತೊಂದನ್ನು ತಾನೂ ಇಟ್ಟುಕೊಂಡು ವಿದ್ಯಾಭ್ಯಾಸವನ್ನು ಮುಂದುವರಿಸುತ್ತಾನೆ. ಈ ವ್ರತವನ್ನು ಸಾಂಕೇತಿಕವಾಗಿ ಮಾತ್ರ ಇಂದಿನ ದಿನಗಳಲ್ಲಿ ಮಾಡುತ್ತಾರೆ. ಆದರೆ ವಿಧಿವತ್ತಾವ ವಿಧಿವಿಧಾನಗಳು ಜನಸಾಮಾನ್ಯರಲ್ಲಿ ಆಚರಣೆಯಲ್ಲಿಲ್ಲ.[92]

ಸಮಾವರ್ತನ : ಬ್ರಹ್ಮಚರ್ಯ ಸಹಿತವಾದ ವಿದ್ಯಾಭ್ಯಾಸವೇ ಇಂದಿನ ಸಮಾಜದಲ್ಲಿ ಕಂಡುಬರುತ್ತಿಲ್ಲ. ವ್ಯಕ್ತಿಯು ಬಸದಿಯಲ್ಲಿದ್ದು ಧಾರ್ಮಿಕ ಶಿಕ್ಷಣವನ್ನು ಪಡೆಯುತ್ತಿಲ್ಲ. ಬದಲಿಗೆ ತಂದೆಯ ಜೊತೆಯಲ್ಲಿಯೇ ಉಳಿದು, ಪ್ರಾಪಂಚಿಕ ಶಿಕ್ಷಣದತ್ತ ವಾಲಿರುವುದರ ಹಿನ್ನೆಲೆಯಲ್ಲಿ ಇವೆಲ್ಲವೂ ಕೇವಲ ಔಪಚಾರಿಕ ಸಂಸ್ಕಾರಗಳಾಗಿದ್ದು ಮೂಲ ಉದ್ದೇಶ ಮತ್ತು ಮಹತ್ವವನ್ನು ಕಳೆದುಕೊಂಡಿವೆ. ವಿದ್ಯಾಭ್ಯಾಸವನ್ನು ಪೂರೈಸಿದ ವ್ರತಿಕನು, ವಿದ್ಯಾವಂತನಾಗಿ ಉಪನಯನ ಸೂಚಕವಾದ ತನ್ನ ಉಡುಗೆ ತೊಡುಗೆ ಇತ್ಯಾದಿಗಳನ್ನು ಬಿಡುವುದಕ್ಕೆ ಸಮವರ್ತನ ಕ್ರಿಯೆ (ವ್ರತಾವತರಣದ ಕ್ರಿಯೆ) ಯೆಂದು ಕರೆಯುತ್ತಾರೆ. ತನಗೆ ಯೋಗ್ಯವಾದ ಶಾಸ್ತ್ರಾಭ್ಯಾಸವನ್ನು ಪೂರೈಸಿದ ಬ್ರಹ್ಮಚಾರಿಯು ಸ್ನಾನ, ಸಂಧ್ಯಾವಂದನೆ, ಅರ್ಚನೆ, ಹೋಮಕಾರ್ಯಗಳನ್ನು ಪೂರೈಸಿದ ಬಳಿಕ ತನ್ನ ವಿದ್ಯಾಗುರುಗಳಿಗೆ ಹಸುವನ್ನು ದಾನ ನೀಡುತ್ತಾನೆ. ಅವರಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆದು ಅಗ್ನಿ, ಯಮ, ನೈರುತ್ಯ ದಿಕ್ಕುಗಳನ್ನು ಬಿಟ್ಟು ಬೇರೆ ದಿಕ್ಕಿನಲ್ಲಿರುವ

ಅರಳಿಮರದ ಬಳಿಗೆ ಹೋಗಿ ಪ್ರದಕ್ಷಿಣೆ ಮಾಡಿ ತಾನು ಧರಿಸಿದ ಮೌಂಜಿ, ದಂಡವನ್ನು ಮರದ ಕೊಂಬೆಗೆ ಕಟ್ಟುತ್ತಾನೆ. ಆ ಮರದಿಂದ ಒಂದು ಗೇಣು ಪ್ರಮಾಣದ ಸಮಿತ್ತನ್ನು ತಂದು ಮನೆಯಲ್ಲಿ ಹೋಮವಿಧಿಯನ್ನು ಮಾಡುತ್ತಾನೆ. ಶಾಂತಿಮಂತ್ರದ ಪಠಣದ ಅನಂತರ ಚಂದನ, ಪುಷ್ಪಮಾಲೆ, ಕುಂಡಲ, ಉಂಗುರ ಮುಂತಾದವುಗಳನ್ನು ಧರಿಸಿ, ಹೋಮವಿಧಿಯನ್ನು ಪೂರೈಸಿ, ಬಂಧುಗಳನ್ನು ಸತ್ಕರಿಸುತ್ತಾನೆ. ಈ ಕ್ರಿಯೆಯನ್ನು ಈಗ ಮದುವೆಯ ಸಂದರ್ಭದಲ್ಲಿ ಸಾಂಕೇತಿಕವಾಗಿ ನಡೆಸುವುದು ಕಂಡುಬರುತ್ತಿದೆ.[93]

ವಿವಾಹ : ವಿವಾಹವು ಮಾನವ ಜೀವಿತದಲ್ಲಿ ಪ್ರಮುಖ ಕ್ರಿಯೆಯಾಗಿದೆ. ಸ್ವಜಾತೀಯ ಕನ್ಯೆಯನ್ನು ಅಗ್ನಿಸಾಕ್ಷಿಯಾಗಿ ತನ್ನ ಸಹಧರ್ಮಿಣಿಯಾಗಿ ಸ್ವೀಕರಿಸುವುದಕ್ಕೆ ವಿವಾಹವೆಂದು ಕರೆಯುತ್ತಾರೆ. ಸಪ್ತಪರಮಸ್ಥಾನಗಳು ಲಭ್ಯವಾಗಲೆಂದು ಇದನ್ನು ಜೈನಮತೀಯರು ಆಚರಿಸುತ್ತಾರೆ. ಆರೋಗ್ಯವಂತರಾದ ಪುರುಷ ಮತ್ತು ಕನ್ಯೆಯು ಸತಿ-ಪತಿಯರಾಗಿ ಧರ್ಮಸಮ್ಮತವಾಗಿ ಸಂತಾನಾಭಿವೃದ್ಧಿಯಿಂದ ಕುಲದ ಅಭಿವೃದ್ಧಿಗಾಗಿ ಸ್ತ್ರೀಪುರುಷರು ಕೈಗೊಳ್ಳುವ ದೀಕ್ಷೆಯೇ ವಿವಾಹ. ಜೈನಮತೀಯರಲ್ಲಿ ಸ್ವಗೋತ್ರ ವಿವಾಹ ನಿಷೇಧವಾಗಿದೆ.[94] ತಾಯಿ, ತಂಗಿ, ಮಗಳು, ಅತ್ತೆ, ತಂದೆಯ ಮಗಳು ಈ ಐದೂ ವಿಧವಾದ ಸಂಬಂಧವುಳ್ಳ ಕನ್ಯೆಯನ್ನು ಮದುವೆಯಾಗುವಂತಿಲ್ಲ. ಬೇರೆ ಗೋತ್ರದಲ್ಲಿ ಹುಟ್ಟಿದ ಶುಭ ಲಕ್ಷಣಗಳಿಂದ ಕೂಡಿರುವ ಆರೋಗ್ಯವಂತಳಾದ ರೂಪ ಗುಣ ಚಾರಿತ್ರ್ಯಗಳಿಂದ ಕೂಡಿರುವ ಸೋದರ ಅತ್ತೆಯ, ಸೋದರಮಾವನ ಮಗಳನ್ನಾಗಲೀ ಅಥವಾ ವರನಿಗೆ ಆತನ ಮನೆಯವರಿಗೆ ಸಮ್ಮತವಾದ ಇತರ ಕುಟುಂಬದ ಕುಲೀನೆಯಾದ ಕನ್ಯೆಯಾಗಲೀ, ಮದುವೆಯಾಗಬಹುದು. ವಧುವಿನ ತಂದೆಯ ಒಪ್ಪಿಗೆ ಪಡೆದು, ಅಗ್ನಿಸಾಕ್ಷಿಯಾಗಿ ಧಾರಾಪೂರ್ವಕ ವಧುವನ್ನು ಸ್ವೀಕರಿಸುವ ಪದ್ಧತಿಯು ಜೈನರಲ್ಲಿ ಪ್ರಚಲಿತವಿದೆ.[95]

ನಿಶ್ಚಿತಾರ್ಥವನ್ನು ವಧು-ವರರ ಮನೆಯವರು ನಡೆಸಿದ ಬಳಿಕ ಚಪ್ಪರ ಮುಹೂರ್ತದಿಂದ ಮೊದಲ್ಗೊಂಡು ಅಂಕುರಾರ್ಪಣ, ತೋರಣಮುಹೂರ್ತ, ತಾಳಿಬಂದಿ, ಧಾರೆ, ನಾಗಬಲಿ ಶಾಸ್ತ್ರಿ ಇತ್ಯಾದಿಗಳು ನಡೆಯುತ್ತವೆ. ಈ ವಿಧಿಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳೂ ಇವೆ. ಚಪ್ಪರದಿಂದಲಂಕೃತವಾದ ವಿವಾಹವೇದಿಕೆಯಲ್ಲಿ ಪುರೋಹಿತನು ಪುಣ್ಯಾಹವಾಚನ, ಷಟ್‌ಕುಮಾರ ಪೂಜೆ, ದರ್ಭಸ್ಥಾಪನೆಗಳನ್ನು ಮಾಡಿದ ನಂತರ ಮುಹೂರ್ತ ಕಂಬವನ್ನು ಮುತ್ತೈದೆಯರಿಂದ ಪೂಜಿಸಿ ಈಶಾನ್ಯ ದಿಕ್ಕಿನಲ್ಲಿ ಮುಹೂರ್ತ ಕಂಬವನ್ನಿಡುವ ಮರು ಜಗಲಿಗಳಿಂದ ಕೂಡಿದ ಪೀಠದ ಮೇಲೆ ಪಾತಿಯಲ್ಲಿ ಹಾಲು, ತುಪ್ಪ, ಪಂಚರತ್ನಗಳನ್ನು ಹಾಕಿಸಿ ಸ್ಥಾಪಿಸುತ್ತಾರೆ. ಮದುವೆಗೆ ಯಾವ

ವಿಘ್ನವೂ ಬಾರದೇ ಇರಲೆಂದು ವಧುವರರಿಗೂ ಅವರ ತಂದೆತಾಯಿಯರಿಗೂ ಕಂಕಣವನ್ನು ಕಟ್ಟುತ್ತಾರೆ.[96]

ಮೊದಲ ದಿನ ವಧುವರರ ಮನೆಗಳಲ್ಲಿ ನವಗ್ರಹಶಾಂತಿ ಹೋಮ, ಅಂಕುರಾರ್ಪಣವಿಧಿಯನ್ನೂ ನೆರವೇರಿಸುತ್ತಾರೆ. ಆರತಿ ಬೆಳಗಿ ನೆಂಟರಿಷ್ಟರು ಸೇರಿ ಎಲ್ಲರನ್ನೂ ಸತ್ಕರಿಸುವುದಕ್ಕೆ ಗ್ರಹಯಜ್ಞ ವಿಧಿಯೆನ್ನುತ್ತಾರೆ. ಅನಂತರ ವರನನ್ನು ವೈಭವದಿಂದ ವಧುವಿನ ಮನೆಗೆ ಕರೆತರುತ್ತಾರೆ. ವರನ ದಿಬ್ಬಣವು ವಧುವಿನ ಮನೆಗೆ ಬಂದಾಗ ವರನನ್ನು ವಸ್ತ್ರಾಭರಣ, ಫಲ, ತಾಂಬೂಲಗಳನ್ನು ನೀಡಿ, ಸತ್ಕಾರದೊಡನೆ ಬರಮಾಡಿಕೊಳ್ಳುತ್ತಾರೆ. ವಧುವಿನ ಸಹೋದರನು ವರನ ಕಾಲಿಗೆ ನೀರು ಹಾಕಿ ಮೂರು ಸಲ ತೊಳೆಯುತ್ತಾನೆ. ಕಂಚಿನ ಪಾತ್ರೆಯಲ್ಲಿ ಮಧುಸಹಿತ ಹಾಲು ಮತ್ತು ಮೊಸರನ್ನ ಮಧುಪರ್ಕವೆಂದು ಮಂತ್ರಸಹಿತವಾಗಿ ವರನಿಗೆ ಕುಡಿಯಲು ಕೊಡುತ್ತಾರೆ. ಆ ಬಳಿಕ ವರನ ಕಡೆಯವರು ವಧುವಿಗಾಗಿ ತಂದ ಸೀರೆ, ಆಭರಣಗಳನ್ನು ಪುಷ್ಪಮಾಲೆಯನ್ನು ವಧುವಿಗೆ ಕೊಟ್ಟು ಸತ್ಕರಿಸುತ್ತಾರೆ. ವಧುವರರಿಗೆ ಪ್ರತ್ಯೇಕವಾಗಿ ಸುಮಂಗಲಿಯರು ಅರಿಶಿಣ ಮತ್ತು ಎಣ್ಣೆಯನ್ನು ಹಚ್ಚಿ ಪವಿತ್ರ ಜಲದಿಂದ ಸ್ನಾನ ಮಾಡಿಸುತ್ತಾರೆ. ಈ ಎಲ್ಲಾ ವಿಧಿಗಳು ನಡೆದ ಬಳಿಕ ವಧು ವರನನ್ನು ವಿವಾಹ ವೇದಿಕೆಯಲ್ಲಿ ಅಂತರಪಟ ಎರಡು ಬದಿಯಲ್ಲಿ ಮುಹೂರ್ತ ನಿರೀಕ್ಷಣೆಗೆ ಅಣಿ ಮಾಡುತ್ತಾರೆ. ವೇದಿಕೆಯ ಪಶ್ಚಿಮದ ಅಕ್ಕಿಯ ರಾಶಿಯ ಮೇಲೆ ವರನು ಪೂರ್ವಾಭಿಮುಖವಾಗಿ ನಿಲ್ಲುತ್ತಾನೆ.[97] ಪೂರ್ವದಿಕ್ಕಿನ ಅಕ್ಕಿಯ ಮೇಲೆ ವಧುವು ಪಶ್ಚಿಮಾಭಿಮುಖಳಾಗಿ ನಿಲ್ಲುತ್ತಾಳೆ.

ಮಂಗಲಾಷ್ಟಕ ಆಶೀರ್ವಚನಗಳು ಮುಗಿದು ಶುಭಮುಹೂರ್ತದಲ್ಲಿ ಅಂತರಪಟ ಸರಿಸಿದಾಗ ವಧು-ವರರು ಪರಸ್ಪರ ಮುಖಾವಲೋಕನ ಮಾಡಿಕೊಳ್ಳುತ್ತಾರೆ. ಬೆಲ್ಲ ಜೀರಿಗೆಯನ್ನು ಪರಸ್ಪರರೂ ವಿನಿಯಮ ಮಾಡಿಕೊಂಡ ಬಳಿಕ ಪುಷ್ಪಮಾಲೆಯನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಅನಂತರ ವರನ ಕೈ ಬೊಗಸೆಯಲ್ಲಿ ವಧುವಿನ ಕೈ ಬೊಗಸೆಯನ್ನು ಇಡಿಸಿ ಅದರಲ್ಲಿ ವೀಳ್ಯೆದೆಲೆ, ಅಕ್ಕಿ, ತೆಂಗಿನಕಾಯಿ, ಚಿನ್ನವನ್ನಿಟ್ಟು ಮಂತ್ರಪೂರ್ವಕವಾಗಿ ತೀರ್ಥಪ್ರಸಾದ ಜಲವನ್ನು ವಧುವಿನ ತಂದೆ ತಾಯಿಯರು ಗಿಂಡಿಯಿಂದ ಧಾರೆಧಾರೆಯಾಗಿ ಎರೆದು ಮಗಳನ್ನು ಒಪ್ಪಿಸುತ್ತಾರೆ. ಅನಂತರ ಕುಲೀನ ವನಿತೆಯರು ದಂಪತಿಗಳಿಗೆ ಅಕ್ಷತೆಯನ್ನು ಹಾಕಿ ಆಶೀರ್ವದಿಸುತ್ತಾರೆ. ಮುಂದೆ ಪುರೋಹಿತರು ಶಾಂತಿಹೋಮವಿಧಿಯನ್ನು ಆರಂಭಿಸುತ್ತಾರೆ. ಪೂರ್ಣಾಹುತಿಗೆ ಮೊದಲು ವಧುವರರು ಹಸೆಯ ಮೇಲಿಂದ ಎದ್ದು ಅಗ್ನಿಗೆ ಉತ್ತರಾಭಿಮುಖವಾಗಿ ನಿಂತು ಲಾಜಾಹುತಿಯನ್ನು ಕೊಡುತ್ತಾರೆ. ವಧುವರರ ಕೈಯಿಂದ

ಅಷ್ಟವಿಧಾರ್ಚನೆಯನ್ನು ಮಾಡಿಸಿದ ಬಳಿಕ, ಹೋಮಾಗ್ನಿಗೆ ಆಜ್ಯಾಹುತಿಯನ್ನು ಮೂರು ಸಲ ಮಾಡಿಸಿ, ಕ್ಷೀರದಿಂದ ಅಗ್ನಿಗೆ ಸೇಚನೆಯನ್ನು ಮಾಡಿಸಿ, ಪೂರ್ಣಾರ್ಘ್ಯವನ್ನು ಹೋಮಕ್ಕೆ ನೀಡಿ ಮೂರು ಪ್ರದಕ್ಷಿಣೆಯನ್ನು ಮಾಡಿ ಶಾಂತಿಧಾರೆಯನ್ನೂ ಪುಷ್ಪಾಂಜಲಿಯನ್ನೂ ನೆರವೇರಿಸುತ್ತಾರೆ.[98]

ಅನಂತರ ಅಗ್ನಿಯ ಉತ್ತಮ ದಿಕ್ಕಿನಲ್ಲಿ ವಿಶಾಲವಾದೊಂದು ಶಿಲೆಗೆ ಹಸಿನೂಲನ್ನು ಸುತ್ತಿ, ಉಪ್ಪು ಜೀರಿಗೆ-ಅರಿಶಿನ ಬೆಲ್ಲ ಸಹಿತವಾಗಿ ಪಶ್ಚಿಮಾಭಿಮುಖವಾಗಿ ಸ್ಥಾಪಿಸಿರುವ ಕಲ್ಲಿನ ಮೇಲೆ, ಏಳು ಉಪ್ಪಿನ ಮತ್ತು ಅಕ್ಕಿಯ ಪುಂಜಗಳನ್ನಿಟ್ಟು ಸಪ್ತ ಪರಮಸ್ಥಾನವೆಂದು ಭಾವಿಸಿ ಪೂಜಿಸುತ್ತಾರೆ. ವರನು ವಧುವಿನೊಂದಿಗೆ ಆ ಶಿಲೆಯ ಪುಂಜವನ್ನು ಮಂತ್ರಸಹಿತವಾಗಿ ಮುಟ್ಟಿ ವಂದಿಸುತ್ತಾನೆ. ಪುರೋಹಿತರು ಪೂರ್ಣಾಹುತಿಯನ್ನು ಮುಗಿಸಿ, ದಂಪತಿಗಳನ್ನು ಅಗ್ನಿಗೆ ಪ್ರದಕ್ಷಿಣೆ ಬರಿಸಿ, ಹೋಮಭಸ್ಮವನ್ನು ಕೊಟ್ಟು ಹಸೆಯ ಮೇಲೆ ನಿಲ್ಲಿಸುತ್ತಾರೆ. ಅನಂತರ ಪರಸ್ಪರರು ಏಳೇಳು ಸಪ್ತಪದಿ ವಾಕ್ಯಗಳ ಪ್ರತಿಜ್ಞೆಯನ್ನು ಕೈಗೊಳ್ಳುತ್ತಾರೆ. ವರನು ವಧುವನ್ನು ಕುರಿತು ತಿಳಿಹೇಳುವ ಕ್ರಮ ಹೀಗಿದೆ[99] :

"ಕುಟುಂಬದ ಜನರಿಗೆ ವಿನಯದಿಂದ ಅವಶ್ಯಕ ಸೇವೆಯನ್ನೂ ಮಾಡಬೇಕು ಹಾಗೂ ನನ್ನ ಆಜ್ಞೆಯನ್ನು ಎಂದಿಗೂ ಮೀರಬಾರದು, ಯಾರೊಂದಿಗೂ ಕಠೋರವಾದ ಮಾತನ್ನು ಎಂದಿಗೂ ಆಡಬಾರದು. ಸದ್ಗೃಹಸ್ಥರಾದ ನನ್ನ ಮಿತ್ರರುಮನೆಗೆ ಬಂದಾಗ ಊಟೋಪಚಾರದಲ್ಲಿ ವಿನಯ ಮತ್ತು ಸಂಯಮವಿರಬೇಕು. ರಾತ್ರಿ ವೇಳೆ ಮತ್ತೊಬ್ಬರ ಮನೆಗೆ ವಿನಾಕಾರಣ ಹೋಗಬಾರದು. ಹೆಚ್ಚು ಜನರಿರುವ ಅಪರಿಚಿತರ ಸ್ಥಳಕ್ಕೆ ಹೋಗಬಾರದು. ಮಿಥ್ಯಾಧರ್ಮಿಗಳೂ, ಮದ್ಯಪಾನ ಮಾಡುವವರ ಮುಂತಾದ ಧರ್ಮಕರ್ಮ ವಿಮುಖರಾದವರ ಮನೆಗೆ ಹೋಗಬಾರದು".

ನನ್ನಿಂದ ಹೇಳಲ್ಪಟ್ಟ ಈ ವಚನಗಳನ್ನು ನೀನು ಅಂಗೀಕರಿಸುವುದಾದರೆ ನನ್ನ ಎಡಪಾರ್ಶ್ವದಲ್ಲಿ ಬಂದು ನಿಲ್ಲು ಎನ್ನುತ್ತಾನೆ. ಅದಕ್ಕೆ ವಧುವು ತಥಾಸ್ತು ಎಂದು ಒಪ್ಪಿಗೆ ನೀಡಿ ದೇವರು ನಮಗೆ ಒಳಿತನ್ನು ಮಾಡಲಿ, ನಿಮ್ಮ ಮಾತಿಗೆ ಒಪ್ಪಿಗೆಯಿದೆ ಎಂದು ವಿನಯದಿಂದ ನುಡಿದು ಪತಿಯ ಎಡಭಾಗದಲ್ಲಿ ನಿಲ್ಲುತ್ತಾಳೆ. ವಧುವು ವರನನ್ನು ಕುರಿತು ತಿಳಿಹೇಳುವ ಮಾತುಗಳು ಹೀಗಿವೆ.

ಪರ ಸ್ತ್ರೀಯರ ಸಂಬಂಧ ಮಾಡಬಾರದು. ವೇಶ್ಯೆಯರ ಸಂಗಕ್ಕೆ ಬೀಳಬಾರದು; ಜೂಜಾಡಬಾರದು; ಉದ್ಯೋಗದಿಂದ ದ್ರವ್ಯವನ್ನು ಸಂಪಾದಿಸಿ ವಸ್ತ್ರಾಭರಣಗಳಿಂದ ಪೋಷಿಸಿ ನನ್ನನ್ನು ರಕ್ಷಿಸಬೇಕು; ಧರ್ಮಕಾರ್ಯಕ್ಕೆ ಹೋಗುವಾಗ ನನ್ನನ್ನು ಬಿಡದೆ ಕರೆದುಕೊಂಡು ಹೋಗಬೇಕು; ಗುಪ್ತ ವಿಷಯವನ್ನು ನನ್ನಲ್ಲಿ ಹೇಳದೇ ಇರಬಾರದು ಹಾಗೆ; ನನ್ನ ಗುಪ್ತ

ವಿಷಯವನ್ನು ಮತ್ತೊಬ್ಬರೊಡನೆ ಹೇಳಬಾರದು ಎಂದು ಹೇಳಿದಾಗ ಹಾಗೇ ಆಗಲಿಯೆಂದು ಭರವಸೆ ನೀಡಿ ಭಗವಂತನು ಕಲ್ಯಾಣವನ್ನುಂಟು ಮಾಡುತ್ತಾರೆ ಎಂದು ಅಭಯ ನೀಡುತ್ತಾನೆ. ಅನಂತರ ಕಂಕಣ ವಿಸರ್ಜನೆಯನ್ನು ಮಂತ್ರಪೂರ್ವಕವಾಗಿ ಮಾಡಿಸುತ್ತಾರೆ.

ನಾಗಬಲಿಶಾಸ್ತ್ರ : ಈ ಶಾಸ್ತ್ರವನ್ನು ಧಾರೆಯಾದ ನಾಲ್ಕನೆಯ ದಿನ ಮಾಡುವುದು ಪದ್ಧತಿ ಆದರೆ ಇತ್ತೀಚೆಗೆ ಮದುವೆಯೆಂದರೆ ನೆರವೇರಿಸುವ ಸಂಪ್ರದಾಯ ಬೆಳೆದಿದೆ. ನಾಗೋಲೆ ಶಾಸ್ತ್ರವೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ರಾತ್ರಿಯ ಸಮಯ ಈ ಕ್ರಿಯೆಯನ್ನು ನಡೆಸುವುದು ಪದ್ಧತಿ.[100]

ವಿವಾಹಮಂಟಪದ ಉತ್ತರದಿಕ್ಕಿನಲ್ಲಿ ಮಂಟಪವನ್ನು ಕಟ್ಟಿ ಅದನ್ನು ಚೆನ್ನಾಗಿ ಅಲಂಕರಿಸುತ್ತಾರೆ. ಮಧ್ಯದ ವೇದಿಕೆಯಲ್ಲಿ ಪಂಚಚೂರ್ಣಗಳನ್ನು ಉಪಯೋಗಿಸಿ ಅಷ್ಟದಳ ಪದ್ಮ ಮಂಡಲವನ್ನು ಬರೆದು ಕಮಲದ ಕರ್ಣಿಕೆಯನ್ನು ಪಂಚರತ್ನ ಸಪ್ತಧಾನ್ಯ, ದರ್ಭೆ, ದೂರ್ವಾಂಕುರಗಳಿಂದ ಸಿಂಗರಿಸುವರು. ಮಧ್ಯದಲ್ಲಿ ಕಳಶ ಕುಂಭವನ್ನು ಸ್ಥಾಪಿಸುತ್ತಾರೆ. ಪೂರ್ವದಿಕ್ಕಿನಲ್ಲಿ ವಾಸುಕಿ, ಶಂಖಪಾಲ, ಕುಲಿಶ, ಕರ್ಕೋಟಕ, ತಕ್ಷಕ, ಪದ್ಮ, ಚಕ್ರಿ, ಅನಂತರೆಂಬ ನಾಗದೇವತೆಗಳ ಮಂತ್ರ ಬರೆದು ಸ್ಥಾಪಿಸುತ್ತಾರೆ. ಜೊತೆಗೆ ಇಂದ್ರ, ಅಗ್ನಿ, ಯಮ, ನಿರುತಿ, ವರುಣ, ವಾಯು, ಕುಬೇರ ಮತ್ತು ಈಶ್ವರರೆಂಬ ಅಷ್ಟದಿಕ್ಪಾಲಕರನ್ನು ಸಾಂಕೇತಿಕವಾಗಿ ಅವರವರ ದಿಕ್ಕುಗಳಲ್ಲಿ ಸ್ಥಾಪಿಸುತ್ತಾರೆ. ಪೂರ್ಣಕಲಶಗಳನ್ನು ಮಂಟಪದ ನಾಲ್ಕೂ ದಿಕ್ಕುಗಳಲ್ಲಿ ಸ್ಥಾಪಿಸುತ್ತಾರೆ. ಈ ಮಂಟಪದ ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿ ಕ್ರಮವಾಗಿ ಆನೆ, ಕುದುರೆ, ಆನೆ, ವೃಷಭಗಳ ಚಿತ್ರವನ್ನು ಬರೆದು, ದಕ್ಷಿಣ ದ್ವಾರದಲ್ಲಿ ಕನ್ಯೆಯ ಗೋತ್ರ ಸೂತ್ರಗಳನ್ನೂ ಉತ್ತರ ದ್ವಾರದಲ್ಲಿ ವರನ ಗೋತ್ರ ಸೂತ್ರವನ್ನೂ ಬರೆಯುತ್ತಾರೆ. ವಧುವರರು ಮಂಗಲಸ್ನಾನವನ್ನು ಪೂರೈಸಿ ಬಸದಿಗೆ ಹೋಗಿ ಪೂಜೆ, ಅಭಿಷೇಕಗಳನ್ನು ಪೂರೈಸಿಕೊಂಡು ಮಂಟಪಕ್ಕೆ ಬರುತ್ತಾರೆ. ವಧುವಿನ ತಾಯಿಯೂ ಕೂಡ ಸ್ನಾನಾಲಂಕಾರಗಳಿಂದ ಭೂಷಿತರಾದ ಒಂಭತ್ತು ಮಂದಿ ಸುಮಂಗಲಿಯರೊಡನೆ ಕೂಡಿಕೊಂಡು ಮಂಟಪವನ್ನು ಪ್ರವೇಶಿಸಿ, ಕ್ರಮವಾಗಿ ನಾಗದೇವತೆಗಳನ್ನೂ ಅಷ್ಟದಿಕ್ಪಾಲಕರನ್ನೂ ಭಕ್ತಿಯಿಂದ ಪೂಜಿಸುತ್ತಾಳೆ.[101] ಈ ಎಲ್ಲಾ ದೇವತೆಗಳು ದೀರ್ಘಾಯು, ಆರೋಗ್ಯ, ಭಾಗ್ಯ, ಶಕ್ತಿಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತಾಳೆ. ವಧುವರರೂ ಕೂಡ ಈ ಮಂಡಲಕ್ಕೆ ಅರ್ಘ್ಯವನ್ನು ಕೊಟ್ಟು ಪ್ರದಕ್ಷಿಣೆ ಮಾಡುತ್ತಾರೆ. ಹಾಗೆ ಪ್ರದಕ್ಷಿಣೆ ಬಂದು ವಧುವು ತನ್ನ ಗೋತ್ರ–ಸೂತ್ರಗಳನ್ನು ಬರೆದಿಟ್ಟ ಹಾಗೂ ಕುದುರೆಯ ಚಿತ್ರ ಇರುವಲ್ಲಿ ನಿಂತಾಗ, ವರನು ತನ್ನ ಗೋತ್ರ–ಸೂತ್ರವನ್ನು ಬರೆದಿಟ್ಟ, ವೃಷಭ ಚಿತ್ರದ ಹತ್ತಿರವಿರುವಾಗ ವಧುವು 'ನಾವು ಸತಿಪತಿಗಳಾದ ಮೇಲೂ ಈ ಭೇದ ಬೇಕೆ? ಎಂದು ಕೇಳುತ್ತಾಳೆ. ಅದಕ್ಕೆ ವರನು, ನಿಜ ಈ

ವ್ಯತ್ಯಾಸ ಸರಿಯಿಲ್ಲ; ನೀನು ನನ್ನ ವಂಶ, ಗೋತ್ರಕ್ಕೆ ಬಂದುಬಿಡು ಎಂದು ಆಹ್ವಾನಿಸುತ್ತಾನೆ. ಆಗ ವಧುವು 'ನೀವು ನನ್ನನ್ನು ನಿಮ್ಮವಂಶ-ಗೋತ್ರಕ್ಕೆ ಬರಮಾಡಿಕೊಳ್ಳುವುದು ನಿಜವಾದಲ್ಲಿ ಅದರ ಕುರುಹಾಗಿ ನಿಮ್ಮ ಕೊರಳಲ್ಲಿರುವ ಸಂಬಂಧಮಾಲೆಯನ್ನು ನನ್ನ ಕೊರಳಿಗೆ ಹಾಕಿ ನನ್ನಕೈ ಹಿಡಿದು ಕರೆಸಿಕೊಳ್ಳಬೇಕು ಎಂದಾಗ, ವರನು ಒಪ್ಪಿ ಸಂಬಂಧಮಾಲೆಯನ್ನು ಆಕೆಯ ಕೊರಳಿಗೆ ಹಾಕುತ್ತಾನೆ. ಮುಂದೆ ವಧು-ವರರಲ್ಲಿ ಸರಸಸಲ್ಲಾಪಗಳು ನಡೆದು ವಿಧಿಯು ಕೊನೆಗೊಳ್ಳುತ್ತದೆ.[102]

ಸಮಾಧಿ ಮರಣ : ಜೈನಮತೀಯರಾದ ಪ್ರತಿಯೊಬ್ಬನೂ ತನ್ನ ಜೀವಿತದ ಕೊನೆಯ ಹಂತವಾಗಿ ಸಮಾಧಿ ಮರಣವನ್ನು ಬಯಸುತ್ತಾನೆ. ಸಲ್ಲೇಖನವೆನ್ನುವುದು, ಮೃತ್ಯುವಿನ ಬಗ್ಗೆ ಭಯಪಡದೆ, ಅದನ್ನು ನಿರ್ಭಯವಾಗಿ ಎದುರಿಸುವ ಸಿದ್ಧತೆಯಾಗಿದೆ. ವ್ಯಕ್ತಿಯೋರ್ವನು ಮಾನಸಿಕವಾಗಿ ತಾನು ಮೃತ್ಯುವನ್ನು ಗೆಲ್ಲುತ್ತೇನೆ ಎಂದು ದೃಢಸಂಕಲ್ಪ ಮಾಡಿಕೊಂಡಾಗ, ಆಮರಣಾಂತ ಉಪವಾಸವ್ರತವನ್ನು ಕೈಗೊಳ್ಳುತ್ತಾನೆ. "ಸಲ್ಲೇಖನವೆನ್ನುವುದು ಅಹಿಂಸಾ ವ್ರತ ಸಾಧನೆಯ ಶ್ರೇಷ್ಠ ಮತ್ತು ಗೌರವಪೂರ್ಣವಾದ ಆಚರಣೆಯಾಗಿದೆ. ಅಲ್ಲದೆ ಸಮಾಧಿಯು ತನ್ನನ್ನು ಅರಿಯುವ ಪ್ರಕ್ರಿಯೆಯ ತುರ್ಯಾವಸ್ಥೆ, ಯಾರು ಸ್ವಾರ್ಥವಿಲ್ಲದೆ ತನ್ನನ್ನು ಅಂದರೆ, ಧರ್ಮ-ಕರ್ಮ ಸಮಾಗಮವನ್ನು ಅದರಿಂದಾದ ಚೌಕಿಕ ಮತ್ತು ಆದಿಚೌಕಿಕ ಚಟುವಟಿಕೆಗಳನ್ನು ಅರಿಯುತ್ತಾರೋ ಅವರೆ ಸಿದ್ಧರೂ ಮತ್ತು ಆ ಪ್ರಕ್ರಿಯೆ ಸಿದ್ಧಿ ಎಂದಾಗುತ್ತದೆ".[103]

ಮುನಿಗಳಾಗಲೀ, ಜೈನ ಶ್ರಾವಕನಾಗಲೀ ಕ್ಷಾಮಕಾಲದಲ್ಲಿ ಅಥವಾ ಮುಪ್ಪಿನಲ್ಲಿ ವಾಸಿಯಾಗದ ರೋಗ ಬಂದಾಗ ಅವುಗಳಿಗೆ ಪರಿಹಾರವಿಲ್ಲವೆಂದು ಖಚಿತವಾದಾಗ ಮಾತ್ರ ಧಾರ್ಮಿಕ ವಿಧಿಗಳಿಗೆ ಅನುಗುಣವಾಗಿ ಸಲ್ಲೇಖನ ವ್ರತ ಸ್ವೀಕರಿಸಬಹುದಾಗಿದೆ.[104] ಈ ಸಂದರ್ಭದಲ್ಲಿ ಅನ್ನಪಾನಾದಿಗಳನ್ನು ತ್ಯಜಿಸಿ, ಎಲ್ಲಾ ರೀತಿಯ ಮನೋ ವ್ಯಾಪಗಳೆಲ್ಲವನ್ನು ಬಿಟ್ಟು ತನ್ನ ಕರ್ಮಗಳನ್ನು ಯೋಚಿಸಿ ಧರ್ಮದಿಂದ ವಿಮುಖವಾದಕ್ಕೆ ಆತ್ಮಧ್ಯಾನದಲ್ಲಿ ನಿರತನಾಗಿ ಪ್ರಾಣ ತ್ಯಾಗ ಮಾಡುವುದೇ ಆಗಿದೆ. ಹೀಗೆ ಪ್ರಾಣವನ್ನು ತ್ಯಜಿಸುವ, ಸಮಾಧಿ ಮರಣಕ್ರಿಯೆಯು ಇಂದಿಗೂ ಆಚರಣೆಯಲ್ಲಿದೆ.

ಸಾವಿನಿಂದ ಬದುಕನ್ನು ಕೊನೆಗೊಳಿಸಿಕೊಳ್ಳಲು ಎರಡು ಮಾರ್ಗಗಳಿವೆ ಎಂದು 24ನೆಯ ತೀರ್ಥಂಕರ ಭಗವಾನ್ ಮಹಾವೀರರು ಹೇಳಿದ್ದಾರೆಂದು ತಿಳಿದುಬರುತ್ತದೆ. ಒಂದು ಸ್ವ-ಇಚ್ಛೆಯಿಂದ ತನ್ನ ಇಹದ ಜಂಜಾಟದಿಂದ ಮುಕ್ತವಾಗಲು ಮರಣವನ್ನಪ್ಪಿಕೊಳ್ಳುವುದು ಎರಡನೆಯದು ಇಚ್ಛೆಗೆ ವಿರುದ್ಧವಾಗಿ ಲೌಕಿಕಕ್ಕೆ ಅಂಟಿಕೊಂಡೇ ಇದ್ದು ಧರ್ಮ ನಿಯಮಗಳನ್ನು ಮೀರಿ ಸಾವಿಗೆ ಹೆದರಿ ಸಾಯುವುದು.[105]ಬದುಕಿನಲ್ಲಿ ಉತ್ತಮವಾದುದನ್ನು ಮಾಡಲು ಅವಕಾಶ

ಬಂದಾಗ ಮಾಡದೆ ಅದನ್ನು ಕಳೆದುಕೊಂಡು ದುಃಖಿಸುತ್ತ ಸಾಯುವ ಪ್ರಕ್ರಿಯೆಯೇ ಇಚ್ಛೆಗೆ ವಿರುದ್ಧವಾದ ಸಾವು ಎಂದು ತಿಳಿದುಬರುತ್ತದೆ. ಪಂಚೇಂದ್ರಿಯಗಳನ್ನು, ಹರಿಷಡ್ವರ್ಗಗಳನ್ನು ನಿಯಂತ್ರಿಸಿಕೊಂಡು ಲೌಕಿಕ ವಾಂಛೆಗಳನ್ನು ಅಭೀಷ್ಟೆಗಳನ್ನು ಗೆದ್ದು ಯಾರಿಗೂ ತೊಂದರೆ ಕೊಡದೆ ಶಾಂತ ರೀತಿಯಿಂದ ಯಾರು ಸಾವನ್ನಪ್ಪುತ್ತಾರೋ ಅದನ್ನು ಮುನಿ ಹಾಗೂ ಧರ್ಮ ಮಾರ್ಗದಲ್ಲಿ ಮುನ್ನಡೆದ ಜೈನ ಗೃಹಸ್ಥರು ಸಂಪಾದಿಸುತ್ತಾರೆಂದು ತಿಳಿದುಬರುತ್ತದೆ.

ಸಾವು ಅಥವಾ ತನ್ನ ಲೌಕಿಕದ ಕರ್ತವ್ಯಗಳು ಪೂರ್ಣವಾದುದು ಅರಿವಾದಾಗ ಧರ್ಮಕ್ಕೆ ಅನುಸಾರವಾಗಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ತ ಸನ್ಯಾಸಗಳನ್ನು ಸ್ವೀಕರಿಸಿ ವೃದ್ಧಾಪ್ಯದಲ್ಲಿ ಅಥವಾ ಗುಣವಾಗದ ಅನಾರೋಗ್ಯಪೀಡಿತವಾದಾಗ ಕ್ಷಾಮ, ಡಾಮರಗಳಲ್ಲಿ ತನ್ನ ಬದುಕು ಸಾಧ್ಯವೇ ಇಲ್ಲ ಎನ್ನುವ ಅನಿವಾರ್ಯ ಸ್ಥಿತಿಯನ್ನು ಮುನಿಯಾಗಲಿ, ಶ್ರಾವಕನಾಗಲಿ ತಲುಪಿದಾಗ ಸಲ್ಲೇಖನ ವ್ರತವನ್ನು ಕೈಗೊಳ್ಳಬಹುದು ಎಂದು ಜೈನಧರ್ಮ ಶ್ರುತಿಗಳು ದಾಖಲಿಸುತ್ತವೆ. ಅವನು ತನ್ನೆಲ್ಲ ಕಷಾಯವನ್ನು ತ್ಯಜಿಸಿ ಲೌಕಿಕ ಸಂಬಂಧಗಳನ್ನು ಬಿಟ್ಟು ವೈರಾಗ್ಯ ನಿಯಮಗಳನ್ನನುಸರಿಸಿ ನಿಧಾನವಾಗಿ ಅಥವಾ ಆ ಕ್ಷಣದಿಂದ ಅನ್ನ, ಆಹಾರಗಳನ್ನು ತ್ಯಜಿಸಿ ಆತ್ಮಸ್ವರೂಪವನ್ನು ಧ್ಯಾನಿಸುತ್ತ ದೇಹದಿಂದ ಬಿಡುಗಡೆ ಹೊಂದುವುದೇ ಸಲ್ಲೇಖನ.

ಜೈನ ಧರ್ಮೀಯರಲ್ಲಿ ಕರ್ಮಕ್ಕೆ ಹೆಚ್ಚು ಮಹತ್ವವಿದೆ. ಆತ್ಮನನ್ನು ಚಿರಂತನವೂ, ನಿರಂತನವೂ ಎಂದು ಭಾವಿಸಲಾಗಿದೆ. ಪರಿಶುದ್ಧ ಮತ್ತು ಪರಿಪೂರ್ಣ ಆತ್ಮಸ್ವರೂಪವನ್ನು ಅಂತರ್ದರ್ಶನ, ಅನಂತಜ್ಞಾನ, ಅನಂತಸುಖ, ಅನಂತ ಶಕ್ತಿಗಳಿಂದ ಕೂಡಿದವನೂ ಎಂದೂ ಭಾವಿಸಲಾಗಿದೆ. ಬಹಳ ಜನ್ಮಗಳಿಂದ ಕರ್ಮದೊಂದಿಗೆ ಸಂಬಂಧ ಹೊಂದಿರುವ ಆತ್ಮವು ಅಸಂಖ್ಯಾತ ಹುಟ್ಟು ಸಾವುಗಳನ್ನೆದುರಿಸಿ ಪಕ್ವವಾಗುತ್ತದೆ. ಈ ಧರ್ಮದ ಉದ್ದೇಶ ಜೀವನ್ಮರಣ ಚಕ್ರದಿಂದ ಮುಕ್ತವಾಗುವುದು. ಅದನ್ನು ಆತ್ಮನಿಗೆ ಆರೋಪಿಸುವುದು ಅದಕ್ಕಾಗಿಯೇ ಈ ಸಲ್ಲೇಖನವನ್ನು ಆಚರಿಸಲಾಗುತ್ತದೆ.

ಎರಡನೆಯ ಶತಮಾನದಲ್ಲಿ ಜೀವಿಸಿದ್ದ ಆಚಾರ್ಯ ಸಮಂತಭದ್ರರ ಕೃತಿ ರತ್ನಕರಂಡಕ ಶ್ರಾವಕಾಚಾರದಲ್ಲಿ ಈ ವ್ರತವನ್ನು ಸನ್ಯಾಸ ಮರಣವೆಂದೂ ಹೆಸರಿಸಲಾಗಿದೆ.[106] ವ್ರತಸ್ಥನು ತನ್ನದು ಎಂಬುದೆಲ್ಲವನ್ನೂ ಬಿಟ್ಟು ನಿರ್ಗುಣ ನಿರಾಕಾರನಾಗುವ ಹಂತದಲ್ಲಿ ಮಾತ್ರ ಈ ವ್ರತವನ್ನಾಚರಿಸಬೇಕೆಂದು ಹೇಳುತ್ತಾರೆ. ತನ್ನ ಜೀವಿತದ ಎಲ್ಲ ಸಹಪಾಠಿಗಳಲ್ಲಿ ವಿನಯಾತಿ ವಿನಯದಿಂದ ಕ್ಷಮೆಯಾಚಿಸಿ ತನ್ನ ಗುರುವಿನೊಂದಿಗೆ ತಾನು ಮಾಡಿದ ಪಾಪಗಳಿಗೆ ಪ್ರಾಯಶ್ಚಿತ್ತವನ್ನು ಬೇಡಿ ತನ್ನ ಜೀವಿತದ ಕರ್ಮಗಳೆಲ್ಲದ್ದಕ್ಕೂ ಗುರುವಿನಿಂದ ಪಶ್ಚಾತ್ತಾಪ ವ್ರತವನ್ನು

ಅನುಸರಿಸಿ ದುಃಖ, ಭಯ, ವಿಷಾದ, ಪ್ರೀತಿ, ದ್ವೇಷ ಇತ್ಯಾದಿ ಪೂರ್ವಾಗ್ರಹಗಳನ್ನು ತೊರೆದು ಮನೋಬಲವನ್ನು ನಿಗ್ರಹಿಸಿ ಆಹಾರವನ್ನು ತ್ಯಜಿಸಿ ಕೇವಲ ಹಾಲು, ಮಜ್ಜಿಗೆಯಂಥ ದ್ರವವನ್ನು ಸ್ವೀಕರಿಸಿ ನಂತರ ಅವನ್ನೂ ತ್ಯಜಿಸಿ ಕೇವಲ ಬಿಸಿನೀರನ್ನು ಕುಡಿಯುತ್ತ ಅದನ್ನೂ ಕಡಿಮೆ ಮಾಡುತ್ತಾ ಣಮೋಕಾರ ಮಂತ್ರ ಪೂರ್ಣದಲ್ಲಿ ಲೀನವಾಗಿ ದೇಹ ತ್ಯಜಿಸಬೇಕೆಂದು ತಿಳಿಸುತ್ತದೆ.

ಇಂತಹ ವ್ರತವನ್ನು ಸಲ್ಲೇಖನ ಅಥವಾ ಸಮಾಧಿ ಮರಣವೆಂದು ಕರೆಯಲಾಗುತ್ತದೆ. ಆಚಾರ್ಯ ಉಮಾಸ್ವಾಮಿಯವರು ಸಾವು ಖಚಿತವಾಗಿದ್ದಾಗ ಮಾತ್ರ ಸಲ್ಲೇಖನ ವ್ರತವನ್ನು ಸ್ವ ಇಚ್ಛೆಯಿಂದ ಸ್ವೀಕರಿಸಬೇಕೆಂದು ಅರುಹಿದ್ದಾರೆ.[107]

ಆಚಾರಾಂಗ ಸೂತ್ರವು ಮೂರು ಬಗೆಯ ಸಲ್ಲೇಖನ ವ್ರತಗಳನ್ನು ಸೂಚಿಸುತ್ತದೆ. ಅವು ಭಕ್ತ ಪ್ರತ್ಯಾಖ್ಯಾನ ಮರಣ, ಇಂಗಿತ ಮರಣ ಹಾಗೂ ಪಾದ ಪದ್ಮೋಪಗಮನ ಮರಣ. ಈ ಮರಣಗಳಲ್ಲಿ ಮೊದಲನೆಯದು ಮುನಿಗಳಿಗೆ ಮಾತ್ರ ಲಭ್ಯವಾಗುತ್ತದೆ. ಅದು ಅತಿ ಹೆಚ್ಚು ಅಧ್ಯಯನ ಮಾಡಿದ ತುಂಬು ಸಂಯಮಿಗೆ ಮಾತ್ರ ಲಭ್ಯ. ಇವುಗಳಲ್ಲಿ ಎರಡನೆಯದು ಇನ್ನೂ ಕ್ಲಿಷ್ಟವಾದುದು. ಯತಿಯು ತನ್ನ ಸ್ಥಾನದಿಂದ ಅಲುಗಾಡದೆ ಇದ್ದು ಎಲ್ಲ ಬಗೆಯ ಚಲನೆಗಳನ್ನು ನಿಷೇಧಿಸಿ ಪಡೆಯುವುದು ಇಂಗಿತ ಮರಣ. ಮೂರನೆಯದು ಇವೆರಡಕ್ಕಿಂತಲೂ ಕ್ಲಿಷ್ಟಕರವಾದುದು. ಯತಿಯು ನೆಲವನ್ನು ಚೆನ್ನಾಗಿ ಪರಿಶೀಲಿಸಿ ಅಲ್ಲಿ ಉದ್ದಕ್ಕೆ ಮಲಗಿಬಿಡಬೇಕು. ತನ್ನ ದೇಹಕ್ಕೆ ಏನಾಗುತ್ತದೆ ಎಂದು ಯೋಚಿಸಬಾರದು. ದೇಹಕ್ಕಾಗುವ ಎಲ್ಲ ಕಷ್ಟಗಳನ್ನು ಸಹಿಸಬೇಕು. ಯಾವ ಲೌಕಿಕ ವಿಚಾರಗಳನ್ನು ಮಾಡದೆ ಭ್ರಮಾತೀತವಾಗಿ ಆತ್ಮನಿಗೆ ಸದ್ ಚಿಂತನೆಯನ್ನು ಬೋಧಿಸುತ್ತ ನಿರ್ವಾಣ ಸಾಧಿಸಬೇಕು. ಇದು ಅತಿ ಕ್ಲಿಷ್ಟಕರವೂ ಮತ್ತು ಸಾಧಿಸಲಸಾಧ್ಯವಾದುದು.

ಇದೇ ವ್ರತದ ಬಗೆಗೆ ಪ್ರಸ್ತಾಪಿಸುವ ಆಚಾರ್ಯ ಕುಂದಕುಂದರು ಸಮಾಧಿಮರಣವು ಬಾಲಮರಣ, ಬಾಲಪಂಡಿತ ಮರಣ ಮತ್ತು ಪಂಡಿತ ಮರಣವೆಂದು ವಿಭಾಗಿಸುತ್ತಾರೆ. ಬಾಲಮರಣವೆಂದರೆ ಸಮ್ಯಗ್ ದರ್ಶನವನ್ನು ಹೊಂದಿ ಪೂರ್ಣ ಆತ್ಮನಿಯಂತ್ರಣವನ್ನು ಹೊಂದಿಲ್ಲದ ವ್ಯಕ್ತಿ ಅನುಭವಿಸುವುದು. ಬಾಲ ಪಂಡಿತ ಮರಣವೆಂದರೆ ಐದನೆಯ ಗುಣಸ್ಥಾನವನ್ನು ತಲುಪಿದ ವ್ಯಕ್ತಿಯು ಏಕೇಂದ್ರೀಯ ಜೀವಿಗಳಿಗೆ ಹಿಂಸೆಯಾಗುವುದನ್ನು ತಡೆಯಲಾರದ ಆತ್ಮಸಂಯಮದ ಬಗ್ಗೆ ನಿರ್ಧರಿಸಲಾಗದ ಸ್ಥಿತಿಯಲ್ಲಿ ಮರಣಿಸುವ ಶ್ರಾವಕನ ಮರಣ. ಪಂಡಿತ ಮರಣವೆಂದರೆ ತನ್ನಾತ್ಮನ ಬಗೆಗೆ ಪೂರ್ಣ ಜ್ಞಾನ ಹೊಂದಿರುವ ಯತಿಯ ಮರಣ. ಇದನ್ನು ತೀರ್ಥಂಕರರು ಗಣಧರರು, ಪ್ರಾಪ್ತ ಮಾಡಿಕೊಳ್ಳುತ್ತಾರೆನ್ನುತ್ತಾರೆ. ಈ ಬಗೆಯ ಮರಣ ವ್ರತವನ್ನು ಕೈಗೊಳ್ಳುವವರು ಅದು ಈ ರೀತಿ ಅತಿಚಾರ ಅಥವಾ ವ್ರತಭಂಗವಾಗದಂತೆ

ನೋಡಿಕೊಳ್ಳಬೇಕು. ತನ್ನ ಸಾವು ಒಂದಿಷ್ಟು ತಡವಾಗಿ ಬಂದಿದ್ದರೆ ಚೆನ್ನಾಗಿತ್ತೆಂಬ ಭಾವನೆಗೆ ಅವಕಾಶ ಕೊಡುವುದು. ಸಾವು ಬೇಗ ಬಂದುಬಿಡಲಿ ಎಂದು ಆಶಿಸುವುದು, ಸಾವಿನ ಕೊಕ್ಕೆಗಳನ್ನು ಹೇಗೆ ಸಹಿಸುವುದೆಂಬ ಚಿಂತೆಗೆ ಅವಕಾಶ ಕೊಡುವುದು, ಮರಣಕಾಲದಲ್ಲಿ ತನ್ನ ನೆಂಟರು, ಮಿತ್ರರನ್ನು ನೆನಪಿಸಿಕೊಳ್ಳುವುದು, ತನ್ನ ತಪಸ್ಸಿಗೆ ಯಾವುದಾದರೂ ಫಲವನ್ನು ಆಶಿಸುವುದು.

4.6. ವರ್ಣಾಶ್ರಮ ಪದ್ಧತಿ/ತ್ರೈವರ್ಣ ಪದ್ಧತಿ

ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ವೇದಕಾಲದಿಂದಲೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರರೆಂಬ ನಾಲ್ಕು ವರ್ಣಗಳು ಮಹತ್ವದ ಪಾತ್ರವನ್ನು ವಹಿಸುತ್ತಾ ಬಂದಿವೆ. ಆರಂಭದಲ್ಲಿ ಉದ್ಯೋಗ ವೃತ್ತಿಗಳ ಆಧಾರದ ಮೇಲೆ ಇವನ್ನು ಗುರುತಿಸಲಾಗಿತ್ತು. ಇದು ಕ್ರಮೇಣವಾಗಿ ಸಂಕೀರ್ಣಗೊಂಡು ಸಮಾಜದಲ್ಲಿ ಜಾತಿ–ಉಪಜಾತಿಗಳಾಗಿ ಬೆಳೆಯುತ್ತಾ ಬಂದವು. ಈ ವ್ಯವಸ್ಥೆಯು ಅತಿ ಪ್ರಾಚೀನ ಕಾಲಘಟ್ಟದಲ್ಲಿಯೇ ಕರ್ನಾಟಕದ ಸಮಾಜದಲ್ಲಿ ಕಾಲಿರಿಸಿತ್ತು. ವರ್ಣಾಶ್ರಮ ಧರ್ಮವನ್ನು ರಕ್ಷಿಸುವುದು ರಾಜನ ಪವಿತ್ರ ಕರ್ತವ್ಯವೆಂಬ ಭಾವನೆಯು ಕರ್ನಾಟಕವನ್ನಾಳಿದ ಎಲ್ಲಾ ಕಾಲದ ರಾಜ ಮನೆತನದಲ್ಲಿ ಸ್ಥಿರಗೊಂಡ ಬಳಿಕ, ಇಲ್ಲಿಯ ಅರಸರು ಇದನ್ನು ತಾತ್ವಿಕವಾಗಿ ಅಂಗೀಕರಿಸಲೇಬೇಕಾಯಿತು. ಕಾಲಕ್ರಮೇಣ ಜೈನಮತದ ಒಳಗಡೆಯಲ್ಲಿಯೇ ಧರ್ಮ ವ್ಯವಸ್ಥೆ ಅಥವಾ ಬ್ರಾಹ್ಮಣ, ಕ್ಷತ್ರಿಯ, ವರ್ಣಾಶ್ರಮ ಪದ್ಧತಿ ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ಮೂರು ರೀತಿಯ ವರ್ಣ ವ್ಯವಸ್ಥೆ ಹುಟ್ಟಿಕೊಂಡಿತು. ಕ್ರಿ.ಶ. ಸುಮಾರು 9ನೆಯ ಶತಮಾನದಲ್ಲಿ ರಚನೆಯಾದ ಜಿನಸೇನರಿಂದ ಪೂರ್ವಪುರಾಣದಲ್ಲಿ ಪ್ರಥಮ ಬಾರಿಗೆ ಜೈನಧರ್ಮದ ತ್ರೈವರ್ಣದ ಬಗ್ಗೆ ಉಲ್ಲೇಖಗಳು ಕಂಡುಬರುತ್ತವೆ.[108]

ಕ್ರಿಸ್ತಪೂರ್ವ ಕಾಲದ ಜೈನ ಸಂಸ್ಕೃತ ಪ್ರಾಕೃತಾದಿ ಗ್ರಂಥಗಳಲ್ಲಿ ವರ್ಣಾಶ್ರಮ ಧರ್ಮದ ಉಲ್ಲೇಖಗಳು ನಮಗೆ ಕಂಡುಬಂದರೂ, ಅವು ಅಂದಿನ ಆರ್ಯಧರ್ಮದ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ದಾಖಲಿಸಿರುವುದೇ ಆಗಿವೆ.[109] ಜೈನಧರ್ಮವು ಸ್ಥಾಪನೆಗೊಂಡ ಬಳಿಕ, ಅದು ವರ್ಣಾಶ್ರಮಧರ್ಮ ರಹಿತ, ಪಶುಬಲಿ ಮುಕ್ತವಾದ ಸಾಮಾಜಿಕ ವ್ಯವಸ್ಥೆಯನ್ನು ರೂಢಿಸಿಕೊಂಡು ಬಂದಿತ್ತು. ಏಕೆಂದರೆ ಜೈನಧರ್ಮದಲ್ಲಿ ಆಂತರಿಕ ಭೇದಭಾವಕ್ಕೆ ಅವಕಾಶಗಳಿರಲಿಲ್ಲ. ಇತರ ಧರ್ಮೀಯರು ಜೈನಮತವನ್ನು ಪ್ರಚಾರಗೊಳಿಸಿದ ಎಲ್ಲಾ ತೀರ್ಥಂಕರರೂ ಕ್ಷತ್ರಿಯ ವರ್ಗಕ್ಕೆ ಸೇರಿದವರಾಗಿದ್ದರಿಂದ ಜೈನರನ್ನು ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕ್ಷತ್ರಿಯ ವರ್ಗದವರಾಗಿ ಗುರುತಿಸುತ್ತಿದ್ದಂತೆ ತೋರುತ್ತದೆ. ಕಾರಣವೆಂದರೆ,

ಕಾಲಕಳೆದಂತೆ ಅವರು ರಾಜ್ಯಾಡಳಿತದ ಜೊತೆಗೆ ವ್ಯಾಪಾರವನ್ನು ಪ್ರಧಾನ ವೃತ್ತಿಯನ್ನಾಗಿ ಅವಲಂಬಿಸಿದ್ದರಿಂದ ಇದೇ ಅಭಿಪ್ರಾಯ ಅನಂತರವೂ ಮುಂದುವರಿಯಿತು.

ಚತುಃಸಂಘ ವ್ಯವಸ್ಥೆ : ತೀರ ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ಅಂದರೆ ವೃಷಭದೇವನ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಜೈನಮತವು ಎರಡು ರೀತಿಯಾಗಿ ಗುರುತಿಸುತ್ತದೆ. ಮನುಷ್ಯನು ಆಹಾರವನ್ನು ಉತ್ಪಾದಿಸದೇ ಸಿಗುವ ಗಡ್ಡೆ ಗೆಣಸುಗಳನ್ನೇ ಆಹಾರವಾಗಿ ಪ್ರಕೃತಿಯಿಂದ ಪಡೆದು ಜೀವಿಸುತ್ತಿದ್ದ ಕಾಲ. ಈ ಕಾಲದಲ್ಲಿ ವೃಷಭದೇವನು ಜನರಿಗೆ ಆರು ಬಗೆಯ ಉದ್ಯೋಗಗಳನ್ನು ತಿಳಿಸಿದನೆಂದು ಹೇಳಲಾಗುತ್ತದೆ.[110] ಮುಂದೆ ವರ್ಧಮಾನ ಮಹಾವೀರನು ಜೈನ ಸಮುದಾಯದಲ್ಲಿ ಹೊಸ ರೀತಿಯ ಸಾಮಾಜಿಕ ಕಟ್ಟುಪಾಡನ್ನು ರೂಢಿಗೆ ತಂದನು. ಅಂದಿನ ಸಮಾಜದಲ್ಲಿ ಆಚರಣೆಯಲ್ಲಿದ್ದ ಚಾತುವರ್ಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿ ಚತುಃಸಂಘ ಪದ್ಧತಿಯನ್ನು ಅನುಸರಿಸುವಂತೆ ಬೋಧಿಸಿದನು.[111] ಜೈನಮತವನ್ನು ಅಂಗೀಕರಿಸಿದ ಸಮಸ್ತ ಜನಾಂಗವೂ ಈ ಚತುಃಸಂಘ ವ್ಯವಸ್ಥೆಯಲ್ಲಿ ಬರುತ್ತಿದ್ದರು. ಅವುಗಳೆಂದರೆ ಮುನಿ, ಆರ್ಯಿಕಾ, ಶ್ರಾವಕ ಮತ್ತು ಶ್ರಾವಿಕಾ. ಇವರನ್ನೇ ಚತುಃಸಂಘವೆಂದು ಕರೆಯಲಾಗುತ್ತಿತ್ತು.[112] ಇಲ್ಲಿ ಜಾತಿಭೇದದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಕಾರಣ ಇವುಗಳಲ್ಲಿ ಮೊದಲಿನವೆರಡು ಸನ್ಯಾಸಿಗಳ ವರ್ಗದಾದರೆ ಉಳಿದವೆರಡು ಗೃಹಸ್ಥ ಜೀವನಕ್ಕೆ ಸಂಬಂಧಿಸಿದವು. ಇವುಗಳಿಗೆ ನಿರ್ದಿಷ್ಟವಾದ ಕರ್ತವ್ಯಗಳನ್ನು ಹೇಳಲಾಗಿದೆ. ಶ್ರಾವಕ ಶ್ರಾವಿಕಾ ವರ್ಗ ಮುನಿಗಳಿಗೆ ಆಹಾರವನ್ನು ನೀಡಿ, ಅವರು ಧ್ಯಾನದಲ್ಲಿ ಕಾಲಕಳೆಯುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹಾಗೂ ಗೃಹಸ್ಥರು ಜಿನಧರ್ಮ ಪಥದಿಂದ ವಿಚಲಿತರಾಗದಂತೆ ಉಪದೇಶಗಳ ಮೂಲಕ ಸರಿದಾರಿಯಲ್ಲಿ ನಡೆಸುವುದು ಮುನಿಗಳ ಕರ್ತವ್ಯವಾಗಿತ್ತು. ಹೀಗಾಗಿ ಈ ಎರಡೂ ವಿಭಾಗಗಳು ಪರಸ್ಪರ ಪೂರಕವಾಗಿದ್ದವು. ಒಂದು ಮತ್ತೊಂದನ್ನು ನಿಯಂತ್ರಿಸುತ್ತಿತ್ತು. ಮುನಿಗಳು ಶೀಲಭ್ರಷ್ಟರೂ, ದುರಾಚಾರಿಗಳಾದರೆ, ಗೃಹಸ್ಥರಿಂದ ಅವರಿಗೆ ಮನ್ನಣೆ ಸಿಗುತ್ತಿರಲಿಲ್ಲ. ದಾರಿ ತಪ್ಪಿದ ಶ್ರಾವಕ ಶ್ರಾವಕಿಯರಿಂದ ಮುನಿಗಳು ಆಹಾರ ಸ್ವೀಕರಿಸುತ್ತಿರಲಿಲ್ಲ. ಈ ಕಟ್ಟುಪಾಡುಗಳು ಈ ವರ್ಗಗಳನ್ನು ಧರ್ಮದ ಚೌಕಟ್ಟಿನಲ್ಲಿ ಇಡುತ್ತಿದ್ದವು.

ತ್ರೈವರ್ಣ ವ್ಯವಸ್ಥೆ : ಶೂದ್ರರನ್ನು ಒಳಗೊಂಡು ಸಮಾಜದ ಎಲ್ಲಾ ವರ್ಗದವರಿಗೂ ಜೈನಸಂಘದಲ್ಲಿ ಪ್ರವೇಶಿಸುವ ಸ್ವಾತಂತ್ರ್ಯವಿತ್ತು. ಜೈನಧರ್ಮವು ಶೂದ್ರವರ್ಗವನ್ನು ಎಂದೂ ಕೀಳಾಗಿ ಕಾಣದೆ ಬಹಳ ಉದಾರವಾಗಿ ನಡೆಸಿಕೊಂಡು ಬಂದಿದೆ. ಉಪಕರಣ, ಆಚಾರ, ಶರೀರಶುದ್ಧಿ ಸಂಸ್ಕಾರಗಳಿಂದ ಶೂದ್ರನೂ ಜೈನಧರ್ಮದ ಅಧಿಕಾರಿಯಾಗುತ್ತಾನೆ. ಏಕೆಂದರೆ ಕಾಲಲಬ್ಧಿಯಿಂದಾಗಿ

ಹೀನಜಾತಿಯವರೂ ಧರ್ಮಕ್ಕೆ ಅಧಿಕಾರಿಯಾಗುತ್ತಾರೆ' ಎಂದು ಆಶಾಧರಸೂರಿಗಳು ಸ್ಪಷ್ಟವಾಗಿ ತಿಳಿಸುತ್ತಾರೆ.[113] ಅಹಿಂಸಾ ವ್ರತವನ್ನು ಆಚರಿಸುವ ಯಮಚಂಡಾಲನನ್ನು ಕೂಡ ಜಿನೇಂದ್ರನು ಬೂದಿಮುಚ್ಚಿದ ಕೆಂಡಕ್ಕೆ ಸಮಾನನಾದ ನರಶ್ರೇಷ್ಠನೆಂದು ಮನ್ನಿಸುತ್ತಾನೆಯೆಂದಿದ್ದಾರೆ. ಕರ್ನಾಟಕಕ್ಕೆ ಆಗಮಿಸಿದ ಜೈನಧರ್ಮವು ಈ ಪ್ರದೇಶದಲ್ಲಿ ನೆಲೆ ನಿಲ್ಲುವ ಹೊತ್ತಿಗೆ, ವರ್ಣವ್ಯವಸ್ಥೆಯು ಶೂದ್ರವರ್ಗವನ್ನು ಸಂಪೂರ್ಣವಾಗಿ ಆವರಿಸಿಕೊಂಡಿದ್ದಿತು. ವೃತ್ತಿಪ್ರಧಾನವಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಗವನ್ನು ಮಾತ್ರ ವೃತ್ತಿ ಆಯ್ಕೆಯಲ್ಲಿ ಸ್ವಾತಂತ್ರ್ಯ ಉಳಿಸಿಕೊಂಡಿದ್ದವು. ಇವರುಗಳನ್ನೇ ತ್ರೈವರ್ಣಿಕರೆಂದು ಕರೆಯಲಾಗುತ್ತದೆ. ಜೈನ ಕವಿಗಳಾದ ಕಲ್ಯಾಣಕೀರ್ತಿ, ಆದಿಯಪ್ಪ, ಸಾಳ್ವ, ರತ್ನಾಕರವರ್ಣಿ ಮೊದಲಾದವರು ಇಲ್ಲಿಯ ಸಮಾಜದ ಚಿತ್ರವನ್ನು ನೀಡುವಾಗ ತ್ರೈವರ್ಣಿಕರೆಂದು ಹೆಸರಿಸುತ್ತಾರೆ.[114]

ಈ ಮೂರು ವರ್ಗದಲ್ಲಿ ಭೇದಭಾವವಿರಲಿಲ್ಲ. ಪರಸ್ಪರ ವಿವಾಹ, ಸಹಪಂಕ್ತಿ ಭೋಜನಗಳನ್ನೂ ಮಾಡಬಹುದಾಗಿತ್ತು. ಇದು ಆಚಾರ ಭೇದವಾಗಿತ್ತೇ ವಿನಾ ಜಾತಿಭೇದವಾಗಿರಲಿಲ್ಲ. ಜೈನಮತದಲ್ಲಿ ಜಾತಿಗೆ ಮಹತ್ವ ನೀಡದೆ ಗುಣಗಳಿಗೆ ಮಾತ್ರ ಮಹತ್ವವನ್ನು ನೀಡಲಾಗಿತ್ತು. ಅಹಿಂಸಾದಿ ವ್ರತಾಚರಣೆ ಮಾತ್ರ ವ್ಯಕ್ತಿಯು ಶ್ರೇಷ್ಠನಾಗುತ್ತಾನೆಯೇ ಹೊರತು ಜನ್ಮ ಅಥವಾ ವೃತ್ತಿಯಿಂದಲ್ಲ. ಇಲ್ಲಿನ ತ್ರೈವರ್ಣ ವ್ಯವಸ್ಥೆಯು, ಸಾಮಾಜಿಕವಾಗಿ ಜೀವಂತ ಸಂಪ್ರದಾಯವನ್ನೇನೂ ಸೂಚಿಸುವುದಿಲ್ಲ. ಬದಲಾಗಿ ಹಿಂದಿನಿಂದ ಹೆಸರಿಸಿಕೊಂಡು ಬಂದ ಹೆಸರುಗಳಷ್ಟೇ ಆಗಿದ್ದವು. ಇದಕ್ಕಿಂತ ಮಹಾವೀರನು ಪ್ರಚಾರಗೊಳಿಸಿದ ಚತುಃಸಂಘವ್ಯವಸ್ಥೆಯು ಜೈನ ಸಮಾಜದಲ್ಲಿ ಹೆಚ್ಚು ವ್ಯಾಪಕವಾಗಿತ್ತು. ಚತುಃಸಂಘ ವ್ಯವಸ್ಥೆಯಲ್ಲಿ ಜೈನರ ಆಚರಣೆಗಳೆಲ್ಲವೂ ಸಮ್ಮಿಲಿತಗೊಂಡಿದ್ದವು. ಈ ಪ್ರದೇಶದ ಯಾವುದೇ ಜೈನ ಶಾಸನದಲ್ಲೂ ತ್ರೈವರ್ಣದ ಪದ್ಧತಿಯ ಉಲ್ಲೇಖವಿಲ್ಲ. ಬದಲಾಗಿ ಚತುಃಸಂಘವನ್ನೇ ಪದೇ ಪದೇ ದಾಖಲಿಸುತ್ತವೆ. ಜೈನ ಅರಸ, ಅಧಿಕಾರಿ ಅಥವಾ ಸಾಮಾನ್ಯ ಪ್ರಜೆ ಯಾವುದೇ ಧಾರ್ಮಿಕ- ಸಾಮಾಜಿಕ ಕೆಲಸವನ್ನು ಮಾಡುವಾಗಲೂ ಚತುಃಸಂಘ ಅದರ ನಿಯಮಗಳನ್ನು ಅನುಸರಿಸಿ ಕರ್ತವ್ಯಪರರಾಗುತ್ತಿದ್ದರು, ಧಾರ್ಮಿಕ ಕೆಲಸವನ್ನು ನಿರ್ವಹಿಸುತ್ತಿದ್ದರು.

4.7. ಒಳಪಂಗಡಗಳು

ಜೈನ ಸಮಾಜದಲ್ಲಿ ಚತುಃಸಂಘ ಪದ್ಧತಿ ದೃಢಗೊಳ್ಳುತ್ತಿರುವಂತೆ ತ್ರೈವರ್ಣ ವ್ಯವಸ್ಥೆಯು ಗಟ್ಟಿಯಾಗಿ ನೆಲೆಕಂಡುಕೊಂಡಿತ್ತು. ಅಲ್ಲದೆ ಇದೇ ಭಿನ್ನವಾದ ಜಾತಿಪದ್ಧತಿಯೂ ಜೈನಮತೀಯರಲ್ಲಿ ಪ್ರಚಾರವಾಗತೊಡಗಿತ್ತು. ಕಾಲಾನಂತರದಲ್ಲಿ ಇವರಲ್ಲಿ ಸಹ ಜೈನ ಬ್ರಾಹ್ಮಣರು ಅಥವಾ ಇಂದ್ರರು

ಅಥವಾ ಪುರೋಹಿತರು, ಜೈನಶೆಟ್ಟರು ಮತ್ತು ಜೈನರು ಎಂಬ ಮೂರು ಒಳಪಂಗಡಗಳು ಅವರವರ ವೃತ್ತಿಯನ್ನು ಆಧರಿಸಿ ರೂಪುಗೊಂಡವು.[115]ಈ ಪಂಗಡಗಳಲ್ಲಿ ಆಂತರಿಕವಾಗಿ ಅಥವಾ ಆಚರಣೆಯಲ್ಲಿ ಯಾವ ಬೇಧಭಾವವೂ ಇರಲಿಲ್ಲ. ಇವು ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಇವು ಪ್ರತ್ಯೇಕ ಜಾತಿಯ ಸ್ವರೂಪವನ್ನು ಪಡೆದುಕೊಂಡವು. ತ್ರೈವರ್ಣದ ಹಿನ್ನೆಲೆಯಲ್ಲಿ ಇಂದ್ರರನ್ನು ಬ್ರಾಹ್ಮಣ ವರ್ಗವೆಂದೂ, ಶೆಟ್ಟರನ್ನು ಕ್ಷತ್ರಿಯರೆಂದೂ, ಜೈನರನ್ನು ವೈಶ್ಯರೆಂದೂ ಕರೆಯಬಹುದಾಗಿದೆ. ವೃತ್ತಿಯ ಹಿನ್ನೆಲೆಯಲ್ಲಿ ಹೇಳುವುದಾದರೆ ಬಸದಿಯಲ್ಲಿ ಪೂಜೆ, ಶ್ರಾವಕರ ಮನೆಗಳಲ್ಲಿ ಹೋಮ ಹವನಾದಿ ಕಾರ್ಯಗಳನ್ನು ನಿರ್ವಹಿಸುವುದು ಇಂದ್ರರ ಕರ್ತವ್ಯವಾಯಿತು.[116] ಇಂದ್ರರಿಗೆ ಅಥವಾ ಪುರೋಹಿತರಿಗೆ ಜೈನಸಮಾಜದ ಮೇಲೆ ಹೇಳಿಕೊಳ್ಳುವಂಥ ಪ್ರಭಾವವಾಗಲೀ, ಹಿಡಿತವಾಗಲೀ ಇರಲಿಲ್ಲ. ಆದರೆ ಜೈನಮಠಗಳಿಗೆ ಇಂಥ ಅಧಿಕಾರವಿತ್ತು. ರಾಜ್ಯಾಡಳಿತ, ವ್ಯಾಪಾರಗಳನ್ನು ನೋಡಿಕೊಳ್ಳುವುದು ಜೈನಶೆಟ್ಟರ ಕರ್ತವ್ಯವಾದರೆ, ವ್ಯವಸಾಯ- ಪಶುಪಾಲನೆಗಳನ್ನು ಮಾಡುವುದು ಜೈನರ ಕರ್ತವ್ಯವೆನಿಸಿತು. ಆರ್ಥಿಕ ಮತ್ತು ಸಾಮಾಜಿಕವಾಗಿ ಜೈನಶೆಟ್ಟರು ಉಳಿದವರಿಗಿಂತ ಹೆಚ್ಚು ಪ್ರಭಾವಶಾಲಿಗಳಾಗಿದ್ದರು. ಅರಮನೆಯಂಥ ಮನೆಗಳಲ್ಲಿ ವಾಸವಾಗಿರುತ್ತಿದ್ದರು. ರಾಜ್ಯ, ಮಾಗಣೆ, ಗ್ರಾಮಮಟ್ಟದ ಅಧಿಕಾರ, ಭೂ-ಆಸ್ತಿಗಳ ಒಡೆತನ, ವ್ಯಾಪಾರ ವೃತ್ತಿಗಳಿಂದಾಗಿ ಆರ್ಥಿಕ ಹಿಡಿತ ಇವೆಲ್ಲವೂ ಇವರ ವಶವಿದ್ದುದರಿಂದ ಸಹಜವಾಗಿಯೇ ಅಪಾರವಾದ ಗೌರವಕ್ಕೆ ಪಾತ್ರರಾಗಿದ್ದರು. ಜೈನರು ವ್ಯವಸಾಯದ ಜೊತೆಗೆ ಗ್ರಾಮಗಳ ಮಟ್ಟದ ಅಧಿಕಾರವನ್ನು ಹೊಂದಿದ್ದರಲ್ಲದೇ ಯುದ್ಧದಲ್ಲಿ ಸೈನಿಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಹೀಗಾಗಿ ಇವರನ್ನು ಕೂಡ ಕ್ಷತ್ರಿಯರೆಂದು ಪರಿಗಣಿಸಬಹುದಾಗಿದೆ. ಈ ಮೂರು ವರ್ಗಗಳೊಳಗೆ ಸೂಕ್ಷ್ಮವಾದ ಆಚಾರ ವ್ಯತ್ಯಾಸಗಳು ಇದ್ದುದರಿಂದ, ಪರಸ್ಪರ ವೈವಾಹಿಕ ಸಂಬಂಧಗಳು ನಡೆಯುತ್ತಿರಲಿಲ್ಲ. ಜೈನ ಶೆಟ್ಟರು ಹೊರಗಿನಿಂದ ಇಲ್ಲಿಗೆ ಬಂದು ನೆಲೆಸಿದವರಾದ ಕಾರಣ, ಪ್ರತ್ಯೇಕತೆಯನ್ನು ಉಳಿಸಿಕೊಂಡರು. ಜೈನರು ಸ್ಥಳೀಯರೇ ಆಗಿರುವ ಕಾರಣ, ಕೆಲವು ಆಚಾರಗಳಲ್ಲಿ ಸ್ಥಳೀಯ ಸಂಸ್ಕೃತಿಯ ಪ್ರಭಾವವನ್ನು ಉಳಿಸಿಕೊಂಡಿದ್ದರು. ಮದುವೆ, ಹುಟ್ಟು-ಸಾವುಗಳಂತಹ ಕೆಲವು ಆಚರಣೆಗಳಲ್ಲಿ ಮಾತ್ರ ಈ ಸೂಕ್ಷ್ಮ ವ್ಯತ್ಯಾಸಗಳು ಗೋಚರಿಸುತ್ತವೆ.

4.8. ಕುಟುಂಬ ವ್ಯವಸ್ಥೆ

ಜೈನ ಕುಟುಂಬ ವ್ಯವಸ್ಥೆಯಲ್ಲಿ ಕುಟುಂಬಗಳೇ ಹೆಚ್ಚಾಗಿ ತಂದೆ, ತಾಯಿ, ಬಂಧು ಬಳಗಗಳೆಲ್ಲವೂ ಕೂಡಿ ಬಾಳುವುದು ಕಂಡುಬರುತ್ತವೆ. ಉದ್ಯೋಗ, ಅಧಿಕಾರ, ಆಸ್ತಿಗಳ ಒಡೆತನಗಳು ವಂಶಪಾರಂಪರ್ಯವಾಗಿ ಹಸ್ತಾಂತರವಾಗುತ್ತವೆ. ಉತ್ತರಾಧಿಕಾರಿಗಳಾಗಲೀ ಹತ್ತಿರದ

ಬಂಧುಗಳಾಗಲೀ ಇಲ್ಲದವರು ಸತ್ತರೆ, ಅವರ ಆಸ್ತಿಯು ಆ ಊರಿನ ಬಸದಿಗೆ ದೇವದಾಯವಾಗಿ ಸೇರಿಕೊಂಡು ಧಾರ್ಮಿಕ ಕಾರ್ಯಗಳಿಗೆ ಬಳಸಲಾಗುತ್ತದೆ. ಸಂಸಾರದ ನಿರ್ವಹಣೆಗೆ ಮೀರಿದ ಹೆಚ್ಚಿನ ಆಸ್ತಿ, ಐಶ್ವರ್ಯವನ್ನು ಗಳಿಸಿದ ವ್ಯಕ್ತಿಗಳು ತಾವು ಬದುಕಿರುವಾಗಲೇ ಸ್ಥಳೀಯ ಬಸದಿ, ಮಠಗಳಿಗೆ ದಾನ ನೀಡುತ್ತಿದ್ದರು. ಹೀಗೆ ದಾನ ನೀಡುವುದೂ ಕೂಡ, ಪವಿತ್ರ ಕರ್ತವ್ಯಗಳ ಭಾಗವೇ ಆಗಿರುತ್ತಿತ್ತು.[117]

ಕುಟುಂಬ ಪದ್ಧತಿಯಲ್ಲಿ, ಆಯಾ ಕುಟುಂಬದ ಹಿರಿಯನಿಗೆ ವಿಶೇಷ ಗೌರವಗಳು ಸಲ್ಲುತ್ತಿದ್ದವು. ಆತನೇ ಕುಟುಂಬದ ಯಜಮಾನನಾಗಿರುತ್ತಿದ್ದನು. ಮನೆತನದ ಎಲ್ಲಾ ಜವಾಬ್ದಾರಿಗಳನ್ನೂ ಕುಟುಂಬದ ಹಿರಿಯ ಅಥವಾ ಯಜಮಾನ ನಿರ್ವಹಿಸುತ್ತಿದ್ದನು. ಏಕ ಪತ್ನಿತ್ವ ಸಾಮಾನ್ಯವಾಗಿ ರೂಢಿಯಲ್ಲಿತ್ತು. ಕೆಲವರಲ್ಲಿ ಅಂದರೆ ಶ್ರೀಮಂತರು ಆಡಳಿತ ವ್ಯವಸ್ಥೆಯ ಭಾಗವಾಗಿದ್ದ ಕುಟುಂಬಗಳಲ್ಲಿ ಬಹುಪತ್ನಿತ್ವವೂ ರೂಢಿಯಲ್ಲಿತ್ತು. ಪಿರಿಯರಸಿ, ಪಟ್ಟದ ಪಿರಿಯರಸಿಯೆಂಬ ಮಾತು ಶಾಸನವೊಂದರಲ್ಲಿ ಕಂಡುಬರುತ್ತದೆ. ಹೀಗಾಗಿ ರಾಜನ ಕುಟುಂಬ ವರ್ಗದಲ್ಲಿ ಪಟ್ಟದ ರಾಣಿಗೆ ವಿಶೇಷ ಗೌರವಾದರಗಳಿದ್ದವು. ಆದರೆ ಶ್ರೀ ಜನಸಾಮಾನ್ಯರ ಕುಟುಂಬಗಳಲ್ಲಿ ಬಹುಪತ್ನಿತ್ವ ಅಷ್ಟಾಗಿ ರೂಢಿಯಲ್ಲಿದ್ದಂತೆ ತಿಳಿದುಬರುವುದಿಲ್ಲ. ಆದರೆ ಶ್ರೀಮಂತರು, ವಿಶೇಷವಾಗಿ ಆಸ್ತಿಗಳನ್ನು ಹೊಂದಿದವರು, ಉಪಪತ್ನಿಯರನ್ನು ಹೊಂದಿರುತ್ತಿದ್ದರು. ವಿಧವಾವಿವಾಹ ರೂಢಿಯಲ್ಲಿರಲಿಲ್ಲ. ಆದರೆ ತ್ರಿವರ್ಗದ ಅಂತಿಮ ಸ್ತರದ ಜೈನರಲ್ಲಿ ಸ್ವಲ್ಪಮಟ್ಟಿಗೆ ಈ ಪದ್ದತಿ ರೂಢಿಯಲ್ಲಿದ್ದಂತೆ ಕಂಡುಬರುತ್ತದೆ.[118]

ಜೈನಶ್ರೇಷ್ಠಿಗಳು ವಾಸಿಸುವ ಮನೆಗಳು ಮೂರು, ನಾಲ್ಕು ಚೌಕಿಗಳಿಂದ ಕೂಡಿದ, ಎರಡು-ಮೂರು ಅಂತಸ್ತಿನ ದೊಡ್ಡ ಮನೆಗಳಾಗಿದ್ದವು. ಗೋಡೆಗಳು ಬಲವಾಗಿದ್ದು, ಮಣ್ಣಿನಿಂದಲೇ ನಿರ್ಮಿಸಿ ಮೇಲೆ ಹುಲ್ಲು ಅಥವಾ ಹಂಚನ್ನು ಹೊದಿಸುತ್ತಿದ್ದರು. ಮಂಡ್ಯ ಜಿಲ್ಲೆಯಲ್ಲಿ ಜೈನರ ಅರಸ ಅರಮನೆಗಳು ಕಂಡುಬಂದಿಲ್ಲ. ಅಲ್ಲದೆ ಅರಸು ಜನಾಂಗದಲ್ಲಿ ಜಿನಧರ್ಮ ಪರಿಪಾಲಿಸುವವರು ಇದ್ದವೆಂದು ತಿಳಿದುಬರುತ್ತದೆಯಾದರೂ ಆ ವರ್ಗ ಅರಮನೆಗಳು ಇತ್ಯಾದಿಗಳು ಕಂಡುಬಂದಿಲ್ಲ. ಅಡಿಗೆ ಕೋಣೆ, ಇನ್ನೊಂದೆಡೆ ವಾಸದ ಕೋಣೆ, ಇತ್ಯಾದಿ ವಾಸದ ಅವಶ್ಯಕತೆ ಪೂರೈಸುವ ಬೇರೆ ಬೇರೆ ಕೊಠಡಿಗಳಿದ್ದವು. ರಜೋದರ್ಶನವಾದ ಸ್ತ್ರೀಯು ತನಗೆ ಮೀಸಲಾದ ಬೇರೆಯದೆ ಕೊಠಡಿಯ ರಜೋದರ್ಶನಾಂತ್ಯದವರೆಗೆ ಅಂದರೆ 5 ದಿನಗಳ ಪರ್ಯಂತ ಅದೇ ಕೊಠಡಿಯಲ್ಲಿ ವಾಸಿಸಬೇಕಿತ್ತು. ಮುಟ್ಟಾದ ಸ್ತ್ರೀಯರಿಗೆ ಮನೆಯ ಒಳಭಾಗಕ್ಕೆ ಪ್ರವೇಶವಿರಲಿಲ್ಲ. ಅವರಿಗಾಗಿ ಮನೆಗೆ

ಹೊಂದಿಕೊಂಡಂತೆ ಪ್ರತ್ಯೇಕ ಕೋಣೆ, ಅದಕ್ಕೆ ತಾಗಿ ಪ್ರಸೂತಿಕೋಣೆ ಹೀಗೆ ಮನೆಯ ಒಳ ರಚನೆಯಿರುತ್ತಿತ್ತು. ಉಪ್ಪರಿಗೆಯ ಮೇಲೆ ಗಾಳಿ, ಬೆಳಕಿಗಾಗಿ ಗವಾಕ್ಷಿಗಳಿರುತ್ತಿದ್ದವು.[119]

4.9. ಆಹಾರ

ಜೈನಮತಸ್ಥರು ಶುದ್ಧ ಶಾಕಾಹಾರಿಗಳು, ಅಕ್ಕಿ ದ್ವಿದಳಧಾನ್ಯ, ಹಾಲು, ಹಣ್ಣು, ತರಕಾರಿಗಳನ್ನು ಆಹಾರ ಪದಾರ್ಥಗಳಾಗಿ ಉಪಯೋಗಿಸುತ್ತಾರೆ. ಎಲ್ಲರ ಮನೆಯಲ್ಲಿಯೂ ದೋಸೆ, ಇಡ್ಲಿ, ಕಡುಬು, ಅವಲಕ್ಕಿ, ರೊಟ್ಟಿ ಮುಖ್ಯವಾದ ಆಹಾರವಾಗಿರುತ್ತದೆ. ಸೂರ್ಯಾಸ್ಥವಾದ ಬಳಿಕ ಯಾರೂ ಆಹಾರವನ್ನು ಸ್ವೀಕರಿಸುವುದಿಲ್ಲ. ಇದಕ್ಕೆ ಹೊಸ ವ್ರತವೆಂದು ಕರೆಯುತ್ತಾರೆ. ನೀರನ್ನು ಸೋಸಿ ಕುಡಿಯುತ್ತಾರೆ. ನೀರಿನಲ್ಲಿ ಸೂಕ್ಷ್ಮ ಜೀವಜಂತುಗಳು ಇರುತ್ತವೆಯೆಂಬ ಕಾರಣದಿಂದ ಜೀವಹಿಂಸೆಯನ್ನು ತಡೆಗಟ್ಟಲು ಹೀಗೆ ಮಾಡುತ್ತಾರೆ.

ಮಧು, ಮದ್ಯ, ಮಾಂಸ, ಅತ್ತಿ, ಆಲ, ಬಸರಿ ಹಣ್ಣುಗಳು, ಅಭಕ್ಷ ಪದಾರ್ಥಗಳನ್ನು ಸೇವಿಸುವುದಿಲ್ಲ, ಸ್ವೀಕರಿಸುವುದಿಲ್ಲ. ಅಹಿಂಸಾ ಇತ್ಯಾದಿ ವ್ರತಗಳನ್ನು ಕಟ್ಟುನಿಟ್ಟಾಗಿ ಪಾಲಿಸುವವರು ಬಹುಬೀಜ ಫಲಗಳನ್ನೂ, ಗಡ್ಡೆಗೆಣಸುಗಳನ್ನೂ ಬದನೆ, ಮುಂತಾದವುಗಳನ್ನು ವರ್ಜಿಸುತ್ತಾರೆ. ಕೆಲವರಂತೂ ಇಂಥ ಅಭಕ್ಷಗಳನ್ನು ಸ್ವೀಕರಿಸುವುದಿಲ್ಲವೆಂದು ವ್ರತವನ್ನು ಕೈಗೊಳ್ಳುವುದಿದೆ.[120] ನೋಂಪಿ/ವ್ರತವನ್ನು ಹಿಡಿದಿರುವ ಶ್ರಾವಕರು ದಿನದಲ್ಲಿ ಒಂದೇ ಊಟ ಮಾಡುತ್ತಾರೆ. ಊಟ ಮಾಡುವಾಗ ಮೌನವ್ರತವನ್ನು ಪಾಲಿಸುತ್ತಾರೆ. ಊಟ ಮಾಡುವ ಮುನ್ನ ಮನೆಯಲ್ಲಿರುವವರು ವ್ರತಕ್ಕೆ ಸಂಬಂಧಪಟ್ಟ ಅಣತಿಯನ್ನು ಹೇಳುತ್ತಾರೆ. ಜೈನರು ತಯಾರಿಸುವ ಭಕ್ಷ್ಯಗಳಲ್ಲಿ ಕಟ್ಟಮಂಡಿಗೆ, ತರಗು, ಬೆಲ್ಲಂಚಕ್ಕುಲಿ ವಿಶಿಷ್ಟವಾದವುಗಳು. ಜೈನರ ಉಪ್ಪಿನಕಾಯಿ ತುಂಬ ಪ್ರಸಿದ್ಧ. ನಾಲ್ಕು-ಐದು ಬಗೆಯ ಉಪ್ಪಿನಕಾಯಿಯನ್ನು ಹಾಕುತ್ತಾರೆ. ಮಾವಿನಕಾಯಿಯಿಂದ, ಮಿಡಿ, ಕೊಚ್ಚಿ, ಕೆತ್ತೆಪುಡಿ ಮುಂತಾದ ಹೆಸರಿನ ಬಗೆಬಗೆಯ ಉಪ್ಪಿನಕಾಯಿ ಮಾಡುತ್ತಾರೆ. ಜೊತೆಗೆ ನಿಂಬೆಹಣ್ಣು, ಕಂಚಿಕಾಯಿಗಳಿಂದಲೂ ಉಪ್ಪಿನಕಾಯಿ ಮಾಡುತ್ತಾರೆ. ಮೂರು ನಾಲ್ಕು ವರ್ಷಗಳ ಕಾಲ ಕೆಡದಂತೆ ಉಪ್ಪಿನಕಾಯನ್ನು ಹಾಕಬಲ್ಲರು.

ಯಾವುದೇ ಜನಾಂಗವಾದರೂ ತಮ್ಮ ಆಹಾರ ಸೇವನೆಯಲ್ಲಿ ಆಯಾ ಪರಿಸರದಲ್ಲಿ ಬೆಳೆಯುವ ವಸ್ತುಗಳನ್ನೇ ವಿಶೇಷವಾಗಿ ಉಪಯೋಗಿಸುತ್ತಾರೆ. ಆಯಾ ಪ್ರದೇಶದ ಹವಾಮಾನ, ಋತು ಬದಲಾವಣೆಗೆ ಹೊಂದಿಕೊಂಡು ಒಂದೊಂದು ರೀತಿಯ ಆಹಾರವನ್ನು ಉಪಯೋಗಿಸುತ್ತಾರೆ. ಭತ್ತ, ತೆಂಗು, ತರಕಾರಿ ಸೊಪ್ಪುಗಳು ಸಹಜವಾಗಿ ಬೆಳೆಯುವ ಆಹಾರ ಪದಾರ್ಥಗಳಾಗಿರುವುದರಿಂದ, ಜೈನಮತೀಯರ ಅಡುಗೆಯಲ್ಲಿ ಅಕ್ಕಿ, ತೆಂಗಿನಕಾಯಿಗಳು

ಮುಖ್ಯಪಾತ್ರವನ್ನು ವಹಿಸುತ್ತವೆ. ಇವರು ಭೂಮಾಲೀಕರಾಗಿ ಇರುವುದರಿಂದ, ಇವರ ಗೇಣಿದಾರರು ಅಥವಾ ಒಕ್ಕಲುಗಳು ತಾವು ಬೆಳೆದ ವಸ್ತುಗಳನ್ನು ಕಾಣಿಕೆಯಾಗಿ ನೀಡುವ ಸಂಪ್ರದಾಯವಿದೆ. ಪಲ್ಯ, ಕೂಟು, ಸಾರು, ತಂಬಳಿ, ಗೊಜ್ಜು, ಚಟ್ನಿ ಇತ್ಯಾದಿ ದಿನನಿತ್ಯದ ಅಡಿಗೆಯಲ್ಲಿ ಇರುತ್ತವೆ. ವಿಶೇಷವಾಗಿ ಶ್ರಾದ್ಧದ ತಿಥಿ ಊಟಗಳಲ್ಲಿ ಬಾಳೇಕಾಯಿ, ಪದಾರ್ಥಗಳು, ಉದ್ದಿನವಡೆ ಇರಲೇಬೇಕು. ಶುಭಕಾರ್ಯಕ್ರಮದ ಸಂತರ್ಪಣೆಯಲ್ಲಿ ಇವುಗಳ ಬಳಕೆ ನಿಷೇಧ. ಮದುವೆಯ ಊಟದಲ್ಲಿ ಪಾಯಸ, ಹೋಳಿಗೆ, ಮುಂತಾದ ಭಕ್ಷ್ಯಗಳಿರುತ್ತವೆ. ಸ್ತ್ರೀಯರ ಬಯಕೆ ಶಾಸ್ತ್ರದಲ್ಲಿ ಮಂಡಿಗೆ ಇರಲೇಬೇಕು. ಶ್ರಾವಕರು ಉಪ್ಪು, ಖಾರ, ಹುಳಿಯನ್ನು ಧಾರಾಳವಾಗಿ ಬಳಸಿದರೆ ಮುನಿಗಳಿಗೆ ನೀಡುವ ಭಿಕ್ಷೆಯಲ್ಲಿ ಇವನ್ನು ಬಳಸುವುದಿಲ್ಲ. ಸಪ್ಪೆಯಾಗಿ ಆಹಾರವನ್ನು ತಯಾರಿಸುತ್ತಾರೆ. ಹಬ್ಬದ ಅಡುಗೆಯಲ್ಲಿ ಮೂರ್‍ನಾಲ್ಕು ರೀತಿಯ ಸಿಹಿ ಭಕ್ಷ್ಯಗಳು, ಎಣ್ಣೆಯಲ್ಲಿ ಕರಿದ ಪದಾರ್ಥಗಳು ಇರುತ್ತವೆ. ಊಟವಾದ ಬಳಿಕ ತಾಂಬೂಲ ಸೇವನೆಯಿರುತ್ತದೆ.[121]

ಶ್ರಾವಕರು ತಮ್ಮ ಮನೆಗಳಲ್ಲಿ ಮದುವೆ, ಉಪನಯನ, ರಕ್ಷಾರ್ಥ (ಗರ್ಭಿಣಿಯರಿಗೆ ಮಾಡುವ ಬಯಕೆಯ ಶಾಸ್ತ್ರ) ಅಭಿಷೇಕ (ಸತ್ತಾಗ ಮಾಡುವ ಧಾರ್ಮಿಕ ವಿಧಿ) ಹಾಗೂ ಮಾಲಕಾರ್ಯ (ಪಿತೃಗಳಿಗೆ ಅನ್ನ ಹಾಕುವ ವಿಧಿ) – ಹೀಗೆ ಯಾವುದೇ ಕಾರ್ಯಗಳನ್ನು ನಡೆಸಿದರೂ ತಮ್ಮ ಕುಟುಂಬದವರನ್ನೂ ಬಂಧುಬಳಗದವರನ್ನೂ ಆಮಂತ್ರಿಸಲೇ ಬೇಕಾಗುತ್ತದೆ. ಈ ಕಾರ್ಯವನ್ನು ಎಲ್ಲಿ ನಡೆಸುತ್ತಾರೋ ಆ ಊರಿನಲ್ಲಿ ವಾಸವಿರುವ ಮತೀಯರನ್ನು ಆಮಂತ್ರಿಸುತ್ತಾರೆ. ಹಿಂದೆ ಮದುವೆಯ ಕಾರ್ಯ ನಡೆದಾಗ, ಸ್ವತಃ ಮದುಮಗನೇ ವಾದ್ಯಸಮೇತ ಪ್ರತಿಯೊಬ್ಬರ ಮನೆಗೆ ಮೆರವಣಿಗೆಯಲ್ಲಿ ಹೋಗಿ ಆಮಂತ್ರಿಸಬೇಕಿತ್ತು. ಈಗ ಈ ಸಂಪ್ರದಾಯವಿಲ್ಲ. ಮಠದ ಭಟ್ಟಾರಕರನ್ನು ಇಂಥ ಸಂದರ್ಭದಲ್ಲಿ ಗೌರವಪೂರ್ವಕವಾಗಿ ಬರಮಾಡಿಕೊಂಡು, ಪಾದಪೂಜೆ ಮಾಡಿ ಆದರಾತಿಥ್ಯವನ್ನು ನೀಡಿ ಉಪಚರಿಸುತ್ತಾರೆ. ಸಮುದಾಯ ಸಂಸ್ಕೃತಿಯಲ್ಲಿ ಪರಸ್ಪರ ತಿಳುವಳಿಕೆ, ಪ್ರೀತಿ, ವಿಶ್ವಾಸಗಳು ಹೆಚ್ಚಿಸಲು ಇಂಥ ಆಚರಣೆಗಳು ಪೂರಕವಾಗುತ್ತವೆ. ಇಂಥ ಸಂದರ್ಭಗಳಲ್ಲಿ ಜೈನಮತೀಯರು ತಮ್ಮ ನಡುವಿನ ಜಾತಿಪದ್ಧತಿಯನ್ನು ಮರೆತು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ.

ಮುನಿಭಿಕ್ಷೆ : ಜೈನಧರ್ಮೀಯರಲ್ಲಿ ವಿಶಿಷ್ಟವಾಗಿ ನಡೆದುಕೊಂಡು ಬಂದಿರುವ ಆಚಾರವೇ ಮುನಿಭಿಕ್ಷೆ. ಇದು ಅತ್ಯಂತ ಗೌರವದ ಹಾಗೂ ಪುಣ್ಯದ ಕೆಲಸ. ದಿಗಂಬರ ಮುನಿಗಳು ಅಥವಾ ನಿರ್ಗ್ರಂಥರು ತಮಗಾಗಿಯೇ ಸಿದ್ಧಪಡಿಸಿದ ಆಹಾರವನ್ನು ಸ್ವೀಕರಿಸಬಾರದೆಂಬ ನಿಯಮವಿದೆ. ಆದ್ದರಿಂದ ಮುನಿಗಳು ಶ್ರಾವಕರ ಮನೆಗಳಿಗೆ ಭಿಕ್ಷೆಗೆ ತೆರಳುತ್ತಾರೆ. ತಮ್ಮ ಮನೆಗೆ ಮುನಿಗಳು

ಆಹಾರಕ್ಕೆ ಬರುತ್ತಾರೆಂದು ತಿಳಿದಾಗ, ಆ ಮನೆಯವರು ತುಂಬಾ ಉತ್ಸಾಹದಿಂದ ಬರಮಾಡಿಕೊಳ್ಳುತ್ತಾರೆ. ಭಿಕ್ಷೆಗೆ ಬಂದ ಮುನಿಗಳಿಗೆ ಏನಾದರೂ ಅಂತರ್ಯವಾಗದಂತೆ ಗಮನಹರಿಸುತ್ತಾರೆ. ಒಂದು ಪಕ್ಷ ಹಾಗಾದರೆ ಮುನಿಗಳು ಆ ಮನೆಯಲ್ಲಿ ಭಿಕ್ಷೆಯನ್ನು ಸ್ವೀಕರಿಸದೆ ಹಿಂತಿರುಗುತ್ತಾರೆ. ಅಂತರ್ಯವೆಂದರೆ, ಆಹಾರ ಪದಾರ್ಥಗಳಲ್ಲಿ ದೋಷ ಕಂಡುಬರುವುದು; ಮನೆಯ ಬೆಕ್ಕು, ನಾಯಿ ಇತ್ಯಾದಿ ಪ್ರಾಣಿಗಳು ಎದುರಾಗುವುದು; ಏನಾದರೂ ಹಿಂಸಾ ಪ್ರವೃತ್ತಿ ಕಣ್ಣಿಗೆ ಬೀಳುವುದು ಇತ್ಯಾದಿ. ಹೀಗಾಗಿ ತುಂಬಾ ಎಚ್ಚರಿಕೆಯಿಂದ ಮತ್ತು ಶುದ್ಧವಾಗಿ ಆಹಾರವನ್ನು ತಯಾರಿಸಿ ನವವಿಧಭಕ್ತಿ ಪೂರ್ವಕವಾಗಿ ಶ್ರಾವಕರು ಮುನಿಗಳಿಗೆ ಆಹಾರದಾನ ಮಾಡುವ ವಿಧಿವಿಧಾನವನ್ನು ಮುನಿಭಿಕ್ಷೆ ಎನ್ನುತ್ತಾರೆ.[122]

ಸಂಸಾರವನ್ನು ತ್ಯಜಿಸಿದ ಸಾಧುಗಳಲ್ಲಿ ಮುನಿ, ಆರ್ಯಿಕ, ಕ್ಷುಲ್ಲಕ, ಐಲಕರೆಂಬ ವಿಭಾಗಗಳಿರುತ್ತವೆ. ಇವರಲ್ಲಿ ಮುನಿಗಳೆಂದರೆ ಈ ಮೊದಲೆ ಉಲ್ಲೇಖಿಸಿರುವಂತೆ ಬಟ್ಟೆಯನ್ನು ಧರಿಸದ ನಿರ್ಗಂಥರು, ಮುನಿವ್ರತ ಸ್ವೀಕರಿಸಿರುವ ಸ್ತ್ರೀಯರು ಬಿಳಿಬಟ್ಟೆಯನ್ನು ಸ್ವೀಕರಿಸಿರುವ ಸ್ತ್ರೀಯರನ್ನು ಮಾತಾಜಿಯರೆಂದೂ ಆರ್ಯಿಕೆಯರೆಂದೂ ಕರೆಯುತ್ತಾರೆ. ಇವರಿಗಿಂತ ಕೆಳಸ್ತರದಲ್ಲಿರುವವರು ಕ್ಷುಲ್ಲಕರು. ಇವರು ಕಾವಿಬಟ್ಟೆಯನ್ನು ಧರಿಸುವ ಸಾಧುಗಳು. ಮಠಾಧಿಪತಿಗಳಾದ ಭಟ್ಟಾರಕರು ಈ ವರ್ಗಕ್ಕೆ ಸೇರುತ್ತಾರೆ. ಇವರಿಗಿಂತ ಕೆಳಗಿರುವವರು ಐಲಕರು. ಇವರು ಬಿಳಿಯ ಬಟ್ಟೆಯನ್ನು ಮಾತ್ರ ಧರಿಸುತ್ತಾರೆ. ಈ ಎಲ್ಲಾ ಸಾಧುಗಳು ಒಂದು ಗುಂಪಾಗಿ ಇರುವುದಕ್ಕೆ 'ಸಂಘ'ವೆಂದು ಹೆಸರು. ಮುನಿಗಳು ಶರೀರ ಶುದ್ಧಿಗಾಗಿ ಕಮಂಡಲು ಮತ್ತು ಪಿಂಛವನ್ನು ಮಾತ್ರ ಹಿಡಿದಿರುತ್ತಾರೆ. ಶ್ರಾವಕರ ಮನೆಗೆ ಬಂದು ಆಹಾರ ಸ್ವೀಕರಿಸುವ ಕ್ರಮಕ್ಕೆ, ಭ್ರಮರೀ ವೃತ್ತಿ ಅಥವಾ ಗೋಚರೀ ವೃತ್ತಿಯೆಂದೂ ಕರೆಯುತ್ತಾರೆ. ಭ್ರಮರೀ ವೃತ್ತಿಯೆಂದರೆ, ಭ್ರಮರಗಳು ಹೂವುಗಳಲ್ಲಿಯ ಮಕರಂದವನ್ನು ಹೀರುವಾಗ, ಹೂವುಗಳಿಗೆ ತೊಂದರೆಯಾಗದಂತೆ ಹೀರುತ್ತವೆಯೋ ಅದೇ ರೀತಿ ಮುನಿಗಳು, ಗೃಹಸ್ಥರಿಗೆ ಯಾವುದೇ ತೊಂದರೆಯೂ ಆಗದಂತೆ ಪದ್ಧತಿಯ ಪ್ರಕಾರ ಆಹಾರವನ್ನು ಸ್ವೀಕರಿಸಿ ಬರುತ್ತಾರೆ. ಗೋಚರೀವೃತ್ತಿಯೆಂದರೆ, ಹಸುಗಳ ಮುಂದೆ ನಾನಾ ರೀತಿಯ ಬೆಲೆಬಾಳುವ ವಸ್ತು, ಭೂಷಣಗಳನ್ನು ಧರಿಸಿ ಕೈಯಲ್ಲಿ ಹುಲ್ಲನ್ನು ಹಿಡಿದುಕೊಂಡು ಹೋದರೆ, ಅದು ಹುಲ್ಲನ್ನು ಮಾತ್ರ ನೋಡುವಂತೆ, ಮುನಿಗಳು ಭಿಕ್ಷೆಗೆ ಹೋದಾಗ ಆ ಮನೆಯವರ ಸಾಮಾಜಿಕ ಅಂತಸ್ತು, ಶ್ರೀಮಂತಿಕೆ, ಆಸ್ತಿ ವಸ್ತ್ರಭೂಷಣಗಳನ್ನು ನೋಡದೆ ಆಹಾರವನ್ನಷ್ಟೇ ಸ್ವೀಕರಿಸುತ್ತಾರೆ.[123]

ಮುನಿಗಳು ಶ್ರಾವಕರ ಮನೆಗೆ ಆಹಾರಕ್ಕೆ ಬರುವಾಗ ಆಹಾರಮುದ್ರೆಯೆಂದು ಕರೆಯುವ ತಮ್ಮ ಬಲಗೈ ಬೆರಳುಗಳನ್ನು ಮಡಚಿ ಭುಜದ ಮೇಲೆ ಇಟ್ಟುಕೊಂಡು ಬರುತ್ತಾರೆ.[124] ಮುನಿಗಳು ಬರುತ್ತಿರುವುದನ್ನು ಕಂಡು ಆಹಾರ ನೀಡಿ ಸಂಕಲ್ಪಿಸಿರುವ ಶ್ರಾವಕನು, ವಿನಯದಿಂದ ಅವರನ್ನು ತಡೆದು ನಿಲ್ಲಿಸಿ, ಮೂರು ಪ್ರದಕ್ಷಿಣೆ ಮಾಡಿ ನಮ್ರತೆಯಿಂದ ಮನವಚನ ಕಾಯ ಶುದ್ಧಿಯಿದೆ; ನೀರು ಆಹಾರ ಶುದ್ಧಿಯಿದೆ, ಎಂದು ಹೇಳಿ ತನ್ನ ಮನೆಗೆ ಮುನಿಗಳನ್ನು ಆಮಂತ್ರಿಸುತ್ತಾನೆ. ಅವರು ನಿಂತಾಗ, 'ಭೂಮಿ, ಶುದ್ಧಿ ಕರೋಮಿ' ಎನ್ನುತ್ತ ನೀರನ್ನು ಸಿಂಪಡಿಸುತ್ತ ತನ್ನ ಮನೆಯೊಳಗೆ ಕರೆದೊಯ್ಯುತ್ತಾನೆ. ಮನೆಯಲ್ಲಿ ಉಚ್ಚಾಸನ ನೀಡಿ ಆಸೀನರಾಗುವಂತೆ ಪ್ರಾರ್ಥಿಸುತ್ತಾನೆ. ಬಳಿಕ, ಎದುರುಗಡೆ ಹರಿವಾಣವನ್ನಿಟ್ಟು ಅವರ ಪಾದ ಪ್ರಕ್ಷಾಳನ ಮಾಡಿ ಗೌರವ ಸಲ್ಲಿಸುತ್ತಾನೆ. ಕಸಕಡ್ಡಿಗಳು ಕೆಳಗೆ ಬಿದ್ದು ಆಹಾರ ಅಶುದ್ಧವಾಗದಂತೆ ಮೇಲೆ ಬಿಳಿವಸ್ತ್ರವೊಂದನ್ನು ಕಟ್ಟುತ್ತಾರೆ. ಆನಂತರ ಮುನಿಗಳ ಮುಂದೆ ಚೌಕಿ ಇಲ್ಲವೇ ಮಣೆಯ ಮೇಲೆ ಗಂಧದಿಂದ ಸ್ವಸ್ತಿಕವನ್ನು ಬರೆದು,

ರಯಣತ್ತಯಂಚ ವಂದೆ ಚೌವ್ವೀಸ ಜಿಣಂಚಸವ್ವದಾ ವಂದೇ
ಪಂಚಗುರೂಣಾಂ ವಂದೇ ಚಾರಣ ಚರಣಂ ಸದಾ ವಂದೇ[125]

ಎಂದು ಶ್ಲೋಕವನ್ನು ಹೇಳುತ್ತಾ ಕ್ರಮದಿಂದ 3, 24, 5, 4 ಅಂಕೆಗಳನ್ನು ಬರೆದು ಎಡಗಡೆಯಿಂದ ನಾಲ್ಕು ಅಂಕಿಯ ಪುಂಜವನ್ನು ಇಟ್ಟು, ಪ್ರಥಮಾನುಯೋಗ, ಕರುಣಾಯೋಗ, ಚರಣಾನುಯೋಗ, ದ್ರವ್ಯಾನುಯೋಗವೆಂದು ಹೇಳಿ ಆ ಬಳಿಕ ಮೂರು ಪುಂಜವನ್ನು ಇಟ್ಟು ಸಮ್ಯಗ್‌ದರ್ಶನ, ಸಮ್ಯಗ್ ಜ್ಞಾನ, ಸಮ್ಯಗ್‌ಚಾರಿತ್ರೆಭ್ಯೋ ನಮಃ ಎಂದು ಪಠಿಸುತ್ತಾನೆ. ಇವೆಲ್ಲವೂ ಜೈನ ತೀರ್ಥಂಕರರ ಶಾಸ್ತ್ರಗಳ ಸ್ಮರಣೆಗಾಗಿ ಮಾಡುವ ಕ್ರಿಯೆಗಳಾಗಿವೆ. ಮುಂದುವರಿದು ಸಂಕ್ಷಿಪ್ತವಾಗಿ ಶ್ರುತಪೂಜೆ, ಗಣಧರರ ಪೂಜೆ, ಆಗಮಿಸಿದ ಮುನಿಗಳ ಪೂಜೆಗಳನ್ನು ಮಂತ್ರಪೂರ್ವಕವಾಗಿ ಮಾಡಿ, ಅರ್ಘ್ಯವನ್ನು ನೀಡಿ, ಶಾಂತಿಧಾರೆ ಎರೆದು ಪುಷ್ಪವನ್ನು ಅರ್ಪಿಸುತ್ತಾನೆ. ಮುನಿಗಳಿಗೆ ಪಂಚಾಂಗ ನಮಸ್ಕಾರ ಮಾಡಿ, ಅವರ ಹಸ್ತವನ್ನು ಬಿಸಿನೀರಿನಿಂದ ತೊಳೆದು ಶುಚಿಗೊಳಿಸುತ್ತಾನೆ. ಅನಂತರ ತಾವು ತಯಾರಿಸಿದ ಅಡಿಗೆಯನ್ನು ಶುದ್ಧ ಪಾತ್ರೆಯಲ್ಲಿ ತಂದಿಡುತ್ತಾರೆ. ಮುನಿಗಳು ಕಾರ್ಯೋತ್ಸರ್ಗ ಭಂಗಿಯಲ್ಲಿ ನಿಂತು, ಹಸ್ತವನ್ನು ಜೋಡಿಸಿ ನಿಲ್ಲುತ್ತಾರೆ. ಮುನಿಗಳ ಹಸ್ತದಲ್ಲಿ ಜಾಗ್ರತೆಯಾಗಿ ಆಹಾರವನ್ನು ನೀಡುತ್ತಾರೆ. ಒಂದೊಂದು ತುತ್ತನ್ನು ನೀಡುವಾಗಲೂ ಶೋಧಿಸಿ, ಎಚ್ಚರಿಕೆಯಿಂದ ಅವರ ಕೈಗಳಲ್ಲಿ ಇಡುತ್ತಾರೆ. ಅವರು ಹಸ್ತವನ್ನು ಮಡಚಿದಾಗ, ಈ ವಸ್ತು ಅವರಿಗೆ ಇಷ್ಟವಿಲ್ಲವೆಂದು ತಿಳಿದು, ಬೇರೆ ವಸ್ತುವನ್ನು ನೀಡುತ್ತಾರೆ. ಆಹಾರ ದಾನ ಮುಗಿದ ಅನಂತರ ಅವರ ಕೈಕಾಲುಗಳನ್ನು ಸ್ವಚ್ಛವಾಗಿ ತೊಳೆದು ಒರೆಸುತ್ತಾನೆ. ಯಾವುದೇ ತೊಂದರೆಯಾಗದೆ ಸ್ವೀಕರಿಸಿದರೆ,

ಮನೆಯವರೆಲ್ಲರೂ ತುಂಬ ಸಂತೋಷಪಡುತ್ತಾರೆ. ಮುನಿಗಳ ಪ್ರಕ್ಷಾಳನಂದಿ ಕ್ರಿಯೆಗಳು ಮುಗಿದ ಬಳಿಕ, ಅವರ ಕೈಗೆ ಪಿಂಛವನ್ನು ನೀಡಿ ಉಚಿತ ಆಸನದಲ್ಲಿ ಕುಳ್ಳಿರಿಸಿ, ಮನೆಯವರೆಲ್ಲರೂ ಅವರಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆಯುತ್ತಾರೆ. ಮುನಿಗಳ ಕಮಂಡಲವನ್ನು ಸ್ವಚ್ಛವಾಗಿ ತೊಳೆದು, ಬಿಸಿನೀರನ್ನು ತುಂಬಿಕೊಟ್ಟು ಜಯಕಾರ ಮಾಡುತ್ತ ಮುನಿಗಳನ್ನು ಅವರ ನಿವಾಸಕ್ಕೆ ಕಳುಹಿಸಿಕೊಡುತ್ತಾರೆ.[126] ಇತ್ತೀಚಿನ ದಿನಗಳಲ್ಲಿ ಮುನಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ಬದಲಾಗುತ್ತಿರುವ ನಾಗರೀಕತೆ, ಜೀವನವಿಧಾನ ಇದಕ್ಕೆ ಕಾರಣವಿರಬಹುದು. ಈ ಪ್ರದೇಶದಲ್ಲಿ ಮುನಿಗಳ ಸಂಖ್ಯೆ ತೀರಾ ಕಡಿಮೆ.

4.10. ಸೂತಕ ವಿಚಾರ

ಜೈನಧರ್ಮದಲ್ಲಿ ಆರಂಭದಿಂದಲೂ ಸೂತಕದ ಆಚರಣೆಯು ಪ್ರಚಲಿತವಿದೆ.[127] ಸೂತಕವೆಂದರೆ ಅಶೌಚ, ಅಶುದ್ಧಿಯೆಂದು ಅರ್ಥ ಮಾಡುತ್ತಾರೆ. ಈ ಪ್ರದೇಶ ಅಥವಾ ಜೈನಮತೀಯರಲ್ಲಿ ತ್ರೈವರ್ಣಿಕಾಚಾರದಲ್ಲಿ ವಿವರಿಸಲ್ಪಟ್ಟಂತೆ ಸೂತಕಗಳ ಆಚರಣೆಯನ್ನು ಪಾಲಿಸುತ್ತಾರೆ. ಜಿನ ಧರ್ಮೀಯರಲ್ಲಿ ಜನನ ಸೂತಕ, ಮರಣ ಸೂತಕ ಮತ್ತು ಸ್ತ್ರೀಯರ ಋತುಸಂಬಂಧಿ ಸೂತಕ ಎಂಬ ಮೂರು ವಿಧದ ಸೂತಕಗಳನ್ನು ಸಾಮಾನ್ಯವಾಗಿ ಅನುಸರಿಸುತ್ತಾರೆ. ಈ ಸೂತಕಗಳೆಲ್ಲವೂ ಗೃಹಸ್ಥರಿಗೆ ಮಾತ್ರ ಅನ್ವಯಿಸುತ್ತವೆ. ಗೃಹತ್ಯಾಗಿಗಳಾದ ಮುನಿಗಳಿಗೆ, ಭಟ್ಟಾರಕರಿಗೆ, ಕ್ಷುಲ್ಲಕರಿಗೆ ಇದು ಅನ್ವಯಿಸುವುದಿಲ್ಲ. ಸೂತಕವೆನ್ನುವುದು ಜನನ, ಮರಣ ಮತ್ತು ರಜೋದರ್ಶನ ಕಾಲದಲ್ಲಿ ಮನಸ್ಸಿನ ಮೇಲಾಗುವ ಪ್ರಭಾವವೆಂದು ಜೈನಮತೀಯರು ನಂಬಿದ್ದಾರೆ. ವ್ಯಕ್ತಿಯ ಹುಟ್ಟು ಮತ್ತು ಸಾವಿನ ಸಂದರ್ಭದಲ್ಲಿ ಆತ್ಮನಿಗೆ ಸುಖದುಃಖದಿಂದ ಕರ್ಮಬಂಧವಾಗುತ್ತದೆ. ಅದನ್ನು ಪರಿಹರಿಸಿಕೊಳ್ಳಲು ಸೂತಕದ ಆಚರಣೆಯ ಮೂಲಕ ಪ್ರಯತ್ನಿಸುತ್ತಾರೆ. ಸಾಮಾಜಿಕ ಜೀವನದಲ್ಲಿ ಅಥವಾ ಕುಟುಂಬದಲ್ಲಿ, ಅಪ್ಪ, ಅಮ್ಮ ಹೆಂಡತಿ, ಬಂಧುಬಳಗದವರು, ಮಿತ್ರರು ಮರಣ ಹೊಂದಿದಾಗ ದುಃಖವೂ, ಜನನದಿಂದ ಆನಂದವೂ ಉಂಟಾಗುತ್ತದೆ. ಅತಿಯಾದ ದುಃಖ ಮತ್ತು ಸುಖಗಳೆರಡೂ ಮನಸ್ಸಿನ ಮೇಲೆ ಪರಿಣಾಮವನ್ನು ಬೀರುತ್ತವೆ. ಈ ಬಗೆಯ ಮಾನಸಿಕ ಪರಿಸ್ಥಿತಿ ಮುಂದುವರಿದರೆ ಮನಸ್ಸಿನಲ್ಲಿ ರಾಗ, ದ್ವೇಷಗಳಿಗೆ ಎಡೆಮಾಡಿಕೊಡುತ್ತದೆ. ಈ ಮನೋ ವಿಕೃತಿಯಿಂದ ಆತ್ಮನು ಕಲುಷಿತಗೊಳ್ಳುತ್ತಾನೆ. ಜೈನಧರ್ಮದಲ್ಲಿ ಇದನ್ನೇ ಕರ್ಮ ಕಟ್ಟುವುದು ಎನ್ನುತ್ತಾರೆ. ವ್ಯಕ್ತಿಗಳಿಗೆ ರಾಗದಿಂದ ಶುಭಕರ್ಮಬಂಧವೂ, ದ್ವೇಷದಿಂದ ಅಶುಭಕರ್ಮ ಬಂಧವೂ ಉಂಟಾಗುತ್ತದೆ. ಗೃಹತ್ಯಾಗಿಗಳಾದ ಮುನಿಗಳಿಗೆ ಸಮಸ್ಥಿತಿಯಲ್ಲಿ ಚಿತ್ತಸ್ಥೈರ್ಯ ಇರುವುದರಿಂದ ಅವರು ಯಾವ

ಸಂದರ್ಭದಲ್ಲೂ ತಮ್ಮ ಮನಸ್ಸನ್ನು ಹರಿಯಗೊಡುವುದಿಲ್ಲ. ಸಂಸಾರದ ಎಲ್ಲಾ ಬಂಧನಗಳಿಂದ ಹೊರಬಂದು ಪಾರಮಾರ್ಥಿಕ ಸಾಧನೆಯಲ್ಲಿಯೇ ಅವರ ಮನಸ್ಸು ನಿಲುಗಡೆ ಪಡೆದಿರುವುದರಿಂದ, ಅವರಿಗೆ ಕರ್ಮಬಂಧವಾಗುವುದಿಲ್ಲ ಹೀಗಾಗಿ ಅವರಿಗೆ ಸೂತಕವೂ ಇಲ್ಲ.[128]

ಮರಣ ಸೂತಕ ವಿಚಾರ : ದೇವಪೂಜೆ, ಗುರುಸೇವೆ, ಶಾಸ್ತ್ರಪಠಣ ಮುಂತಾದ ಷಟ್ಕರ್ಮಗಳನ್ನು ಜೈನ ಗೃಹಸ್ಥರು ಯಾವುದೇ ಸೂತಕದಲ್ಲಿರುವಾಗಲೂ ಮಾಡುವಂತಿಲ್ಲ. ಇವೆಲ್ಲವನ್ನೂ ನಿಷೇಧಿಸಲಾಗಿದೆ. ಅಂದರೆ ಸೂತಕದ ಸಂದರ್ಭದಲ್ಲಿ ಮೃತನ ಕುಟುಂಬದವರನ್ನು ದೈನಂದಿನ ಬದುಕಿನಿಂದ ಪ್ರತ್ಯೇಕಗೊಳಿಸಲಾಗುತ್ತಿದೆ. ಇಲ್ಲಿಯ ಜೈನ ಸಮಾಜದಲ್ಲಿರುವ ಇಂದ್ರು, ಜೈನಶೆಟ್ಟರು ಮತ್ತು ಜೈನರು ಆಚರಿಸುವ ಸೂತಕದ ದಿನಗಳಲ್ಲಿ ಹಿಂದೆ ವ್ಯತ್ಯಾಸಗಳಿದ್ದರೂ ಈಗ ಜೈನ ಇಂದ್ರರು, 10 ದಿನಗಳ ಮರಣ ಮತ್ತು ಜನನ ಸೂತಕ, ನಾಲ್ಕು ದಿನಗಳ ರಜೋದರ್ಶನ ಜಿನಶೆಟ್ಟರು ಮತ್ತು ಜೈನರಲ್ಲಿ ಸಾಮಾನ್ಯ ಆಚರಣೆಯಾಗಿ ಕಂಡುಬರುತ್ತದೆ.[129]

ಆದರೆ ಹಿಂದೆ ಈ ಮೂರು ವರ್ಗಗಳು ಪ್ರತ್ಯೇಕತೆಯನ್ನುಳಿಸಿಕೊಂಡಿದ್ದವು. ಕೆಲವೊಮ್ಮೆ ಜನನ–ಮರಣ ಸಂಬಂಧಿಯಾದ ಸೂತಕಗಳು ಏಕಕಾಲದಲ್ಲಿ ಸಂಭವಿಸಿದರೆ, ಜನನ ಸೂತಕ ಕಳೆಯುವಾಗಲೇ ಮರಣ ಸೂತಕವೂ ಕಳೆದುಹೋಗುತ್ತದೆ. ಜೈನಮತೀಯರು ತಮ್ಮ ಸಂಬಂಧಿಗಳಲ್ಲದವರ ಶವವನ್ನು ನೋಡಿದರೂ, ಅಶೌಚವೆಂದು ಭಾವಿಸುತ್ತಾರೆ. ಮನೆಗೆ ಬಂದು ಸ್ನಾನಮಾಡಿ ಜನಿವಾರವನ್ನು ಬದಲಾಯಿಸಿಕೊಳ್ಳುವುದರ ಮೂಲಕ ಅಶೌಚವನ್ನು ಪರಿಹರಿಸಿಕೊಳ್ಳುತ್ತಾರೆ. ಸಂಬಂಧಿಕರಲ್ಲಿ ಯಾರಾದರೂ ಸತ್ತಾಗ ಹೆಣವನ್ನು ಮುಟ್ಟದೆ ಮೂರು ದಿನಗಳ ಸೂತಕವನ್ನೂ, ಅದನ್ನು ಹೊತ್ತರೆ ಏಳು ದಿನಗಳ ಸೂತಕವನ್ನೂ ಆಚರಿಸಬೇಕೆಂಬ ನಿಯಮವಿದೆ. ಇದನ್ನು ತ್ರೈವರ್ಣಿಕಾಚಾರದಲ್ಲಿ ಹೀಗೆ ವಿವರಿಸಲಾಗಿದೆ.

ದರ್ಶನೇ ಸ್ನಾನ ಮಾಪ್ನೋತಿ। ಸ್ಪರ್ಶನೇ ಚ ದಿನತ್ರಯಂ ।
ಧಾರಿತೇ ಸಪ್ತರಾತ್ರಂ ತು। ಸೂತಕಂ ಪರಿಕೀರ್ತಿತಂ ॥[130]

ಸಾಮಾನ್ಯವಾಗಿ ಜನನ ಸೂತಕಕ್ಕಿಂತ ಮರಣ ಸೂತಕದಲ್ಲಿ ಹೆಚ್ಚಿನ ಆಚರಣೆಗಳಿರುತ್ತವೆ. ಈ ಸೂತಕದ ಅವಧಿಯು ಕಳೆದ ಬಳಿಕ ಬಸದಿಯಲ್ಲಿ ತೀರ್ಥಂಕರನಿಗೆ ಅಭಿಷೇಕ ಪೂಜೆ ಮಾಡಿಸಿ, ಸಂಘ ಮಾಡಿಸಿ ಸಂಘ ಸಂತರ್ಪಣೆ ನಡೆಸಬೇಕಾಗುತ್ತದೆ. ಈ ಯಾವ ಆಚರಣೆಗಳನ್ನು ಮೃತ ವ್ಯಕ್ತಿಯ ಆತ್ಮೋದ್ಧಾರಕ್ಕಾಗಿ ಆಚರಿಸುವುದಿಲ್ಲ. ಬದಲಿಗೆ ಮೃತವ್ಯಕ್ತಿಯ ದಹನದಿಂದಾದ ಮೃತವ್ಯಕ್ತಿಯ ದೋಷ ಅದರಿಂದ ಆತನ ಕುಟುಂಬ ವರ್ಗದವರಿಗೆ ಅಸಾತಾವೇದನೀಯ ಕರ್ಮಾಸ್ರವಕ್ಕೆ ಕಾರಣವಾಗುವುದರಿಂದ, ಅದನ್ನು ಪರಿಹರಿಸಿಕೊಳ್ಳಲು ಮಾಡಿಸುತ್ತಾರೆ.[131] ತಮ್ಮ

ತಮ್ಮ ಅನುಕೂಲತೆಗೆ ತಕ್ಕಂತೆ ಬಸದಿಯಲ್ಲಿ 21, 51, 101, 501 ಕಲಶಸ್ಥಾಪನೆ ಮಾಡಿ ತೀರ್ಥಂಕರನಿಗೆ ಅಭಿಷೇಕವನ್ನು ಮಾಡಿಸುತ್ತಾರೆ. ಜೊತೆಗೆ ಪಂಚಾಮೃತ ಅಭಿಷೇಕ, ಪೂಜೆಗಳೂ ಜರುಗುತ್ತವೆ. ಕೆಲವೊಮ್ಮೆ ಯಾವುದಾದರೂ ಶಾಸ್ತ್ರಗ್ರಂಥವನ್ನು ಅಚ್ಚುಹಾಕಿಸಿ ಮೃತನ ಕಡೆಯವರು ನೆರೆದ ಜನರಿಗೆ ದಾನರೂಪದಲ್ಲಿ ಹಂಚುತ್ತಾರೆ. ಮೃತನ ಸಂಬಂಧಿಕರು ಬೇರೆ ಬೇರೆ ಬಸದಿಗಳಿಗೆ ಧ್ರುವನಿಧಿಯನ್ನು ಮೃತನ ಹೆಸರಿನಲ್ಲಿ ದಾನ ನೀಡುತ್ತಾರೆ. ಅದರಿಂದ ಬರುವ ಆದಾಯದಿಂದ ಪ್ರತಿವರ್ಷ ಒಂದು ದಿನ ಪೂಜೆ ನಡೆಯುವಂತೆಯೂ ವ್ಯವಸ್ಥೆ ಮಾಡುತ್ತಾರೆ. ಮೃತನ ಅಭಿಷೇಕ ನಡೆಸಿದ ಬಸದಿಗೆ ಪೂಜಾಪರಿಕರಗಳನ್ನು ದಾನವಾಗಿ ನೀಡುತ್ತಾರೆ. ಇಂತಹ ಕಲಾಪ, ಪೂಜೆ, ಅಭಿಷೇಕಗಳನ್ನು ನಡೆಸುವ ಮೂಲಕ ಹಾಗೂ ನೋಡುವುದರ ಮೂಲಕ ಆತ್ಮನ ಕರ್ಮಬಂಧ ವಿಮೋಚನೆಯಾಗುತ್ತದೆಂದು ತಿಳಿಯಲಾಗುತ್ತಿದೆ.[132]

ಋತುಸಂಬಂಧಿ ಸೂತಕ : ಸ್ತ್ರೀಯರಿಗೆ ಋತುಸಂಬಂಧಿಯಾದ ಸೂತಕವು ನಾಲ್ಕು ದಿನಗಳವರೆಗೆ ಇರುತ್ತದೆ. ಐದನೆಯ ದಿನ ಸ್ನಾನಮಾಡಿ ಒಳಕ್ಕೆ ಬರಬಹುದು. ಋತುವಾದ ನಾಲ್ಕು ದಿನಗಳ ಕಾಲವೂ ಆಕೆ ಅಶೌಚಳಾಗಿರುವುದರಿಂದ ಪ್ರತ್ಯೇಕ ಕೋಣೆಯಲ್ಲಿ ಇರುತ್ತಾಳೆ. ಕೆಲವು ಸಂಪ್ರದಾಯಸ್ಥ ಮನೆತನಗಳಲ್ಲಿ ಮುಟ್ಟಿನವರಿಗೆಂದೇ ಪ್ರತ್ಯೇಕ ಕೋಣೆಯಿರುತ್ತದೆ. ಈ ನಾಲ್ಕು ದಿನಗಳ ಕಾಲ ಆಕೆಯು ಶುಭಕ್ರಿಯೆಗಳನ್ನು ಮಾಡಕೂಡದು. ಪಂಚನಮಸ್ಕಾರವನ್ನು ಮನಸ್ಸಿನಲ್ಲಿಯೇ ಪಠಿಸಬಹುದಲ್ಲದೇ, ಅದನ್ನು ಗಟ್ಟಿಯಾಗಿ ಉಚ್ಚರಿಸುವಂತಿಲ್ಲ. ಪ್ರಥಮ ಬಾರಿ ಋತುವಾದಾಗ ನೀರ ಮದುವೆಯೆಂಬ ಶಾಸ್ತ್ರವನ್ನೂ ನಡೆಸುವುದಿದೆ.[133]

ಜನನ ಸೂತಕಗಳು : ಜನನ ಸೂತಕದಲ್ಲಿ ಗಂಡುಮಗು ಜನಿಸಿದರೆ ತಾಯಿಗೆ 30 ದಿನಗಳ ಸೂತಕವೂ ಹೆಣ್ಣುಮಗು ಜನಿಸಿದರೆ 40 ದಿನಗಳ ಸೂತಕವನ್ನೂ ಸಾಮಾನ್ಯವಾಗಿ ಆಚರಿಸುತ್ತಾರೆ. ಗರ್ಭಪಾತವುಂಟಾದರೆ 10 ದಿನಗಳ ಸೂತಕವನ್ನು ತಾಯಿಯು ಆಚರಿಸುತ್ತಾಳೆ. ಹುಟ್ಟಿದ ಮಗುವು ಸತ್ತರೆ, ತಾಯಿಗೆ 10 ದಿನ ಸೂತಕವೂ, ತಂದೆಗೆ 3 ದಿನಗಳ ಸೂತಕವೂ ಇರುತ್ತದೆ. ಜನನವಾದ 10 ದಿನಗಳ ಒಳಗಾಗಿ ಮಗುವು ಸತ್ತರೆ, ಜನನ ಸೂತಕವು ಕಳೆಯುವಾಗಲೇ ಮರಣ ಸೂತಕವೂ ಕಳೆದು ಹೋಗುತ್ತದೆ. ಸೂತಕವು ಕಳೆದ ಬಳಿಕ ಪುರೋಹಿತರು ಆಗಮಿಸಿ, ಶಾಂತಿಹೋಮವನ್ನು ನಡೆಸಿ, ತೀರ್ಥವನ್ನು ಸಂಪ್ರೋಕ್ಷಿಸಿ ಮನೆಯನ್ನು ಶುದ್ಧಗೊಳಿಸುತ್ತಾರೆ.[134]

ಶವಸಂಸ್ಕಾರ : ಜೈನಮತೀಯರಲ್ಲಿ ಗೃಹಸ್ಥರ ಹಾಗೂ ಮುನಿಗಳ ಶವವನ್ನು ಅಗ್ನಿ ಸಂಸ್ಕಾರ ಮಾಡುತ್ತಾರೆ. ಶವಸಂಸ್ಕಾರಕ್ಕೆ ಮಾವು, ಹಲಸು, ಶ್ರೀಗಂಧ, ಚಂದನ ಕಟ್ಟಿಗೆಯನ್ನು ಬಳಸುತ್ತಾರೆ. ಜೊತೆಗೆ ಹಾಲು, ತುಪ್ಪವನ್ನು ಹಾಕುವ ಪದ್ಧತಿಯಿದೆ. ಮೃತ ದೇಹವನ್ನು ಮನೆಯಲ್ಲಿ ಹೆಚ್ಚು ಕಾಲ

ಇಡದೆ ಆದಷ್ಟು ಬೇಗ ಸಂಸ್ಕಾರ ಮಾಡುತ್ತಾರೆ. ಮೃತದೇಹವನ್ನು ಹೆಚ್ಚು ಸಮಯ ಇಟ್ಟುಕೊಂಡರೆ ಸೂಕ್ಷ್ಮಜೀವಿಗಳು, ದೇಹದಲ್ಲಿ ಹುಟ್ಟಿಕೊಳ್ಳುತ್ತವೆ ಮತ್ತು ಅದನ್ನು ದಹಿಸಿದಾಗ ಪ್ರಾಣಿ ಹಿಂಸೆಯಾಗುತ್ತದೆಂದೂ, ಅದನ್ನು ತಡೆಯಲು ಬೇಗನೆ ದಹನ ಮಾಡುತ್ತಾರೆ.[135]

ಯಾರಾದರೂ ಮರಣ ಹೊಂದಿದಾಗ ಗ್ರಾಮದಿಂದ ವಾಸವಾಗಿರುವ ಭಾಗದಲ್ಲಿ ಕುಟುಂಬದ ಎಲ್ಲಾ ಸದಸ್ಯರಿಗೆ ಶೀಘ್ರವಾಗಿ ಸುದ್ಧಿಯನ್ನು ಮುಟ್ಟಿಸುತ್ತಾರೆ. ಶವಕ್ಕೆ ಬಿಳಿಬಟ್ಟೆಯನ್ನು ಹೊದಿಸಿ ಹೊರ ಜಗುಲಿಯ ಮೇಲೆ ಮಲಗಿಸುತ್ತಾರೆ. ತಲೆಯ ಹಿಂಭಾಗದಲ್ಲಿ ಬಾಳೆ ಎಲೆಯ ಮೇಲೆ ಅಕ್ಕಿಯನ್ನಿಟ್ಟು, ತೆಂಗಿನಕಾಯಿ ಒಡೆದು ದೀಪ ಉರಿಸಿ ಇಡುವ ಪದ್ಧತಿ ಕೆಲವೆಡೆ ಬಳಕೆಯಲ್ಲಿದೆ. ಬಿದಿರು ಮತ್ತು ತೆಂಗಿನ ಗರಿಯಿಂದ ಚಟ್ಟವನ್ನು ತಯಾರಿಸಿ ಶವವನ್ನು ಅದರ ಮೇಲೆ ಇಟ್ಟು ಸ್ಮಶಾನಕ್ಕೆ ಸಾಗಿಸುತ್ತಾರೆ. ಬಂಧುಬಾಂಧವರು, ಊರವರು ಎಲ್ಲರೂ ಅಂತ್ಯಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ಮೃತನ ಹತ್ತಿರದ ಸಂಬಂಧಿಕರು ಹೆಣವನ್ನು ಹೊರುವುದು ಸಂಪ್ರದಾಯ. ಶವ ಸಾಗಿಸುವಾಗ ದಾರಿ ಮಧ್ಯದಲ್ಲಿ ಅಥವಾ ಅರ್ಧ ದಾರಿ ಸಾಗಿದ ಬಳಿಕ ಹೆಗಲನ್ನು ಬದಲಾಯಿಸುತ್ತಾರೆ. ಸ್ಮಶಾನಕ್ಕೆ ಹೋದ ಬಳಿಕ ಅಲ್ಲಿ ಸಿದ್ಧಪಡಿಸಿದ ಸಿದಿಗೆಯ ಮೇಲೆ ಹೆಣವನ್ನು ಪೂರ್ವ ದಿಕ್ಕಿಗೆ ಅಥವಾ ಉತ್ತರ ದಿಕ್ಕಿಗೆ ಶವದ ತಲೆಯು ಬರುವಂತೆ ಮಲಗಿಸಿ, ಮೂರು ಸುತ್ತು ಅಪ್ರದಕ್ಷಿಣೆ ಬಂದು, ಮೃತ ವ್ಯಕ್ತಿಯ ಹಿರಿಯ ಮಗನಿಂದ ಬೆಂಕಿ ಕೊಡಿಸುತ್ತಾರೆ. ಹೆಣ ಸುಡುವಾಗ ಅದರ ಮೇಲೆ ಯಾವ ವಸ್ತ್ರವೂ ಇಲ್ಲದಂತೆ ನೋಡಿಕೊಳ್ಳುತ್ತಾರೆ. ಅನಂತರ ಎಲ್ಲರೂ ಮನೆಗೆ ಬಂದು ಸ್ನಾನ ಮಾಡುತ್ತಾರೆ.

ಮರುದಿನ ಪುನಃ ಹಾಲು, ತುಪ್ಪಗಳೊಡನೆ ಸ್ಮಶಾನಕ್ಕೆ ತೆರಳಿ, ಹೊತ್ತಿ ಉರಿಯದೇ ಇರುವ ಕಟ್ಟಿಗೆ, ಭಸ್ಮವಾಗದೇ ಇರುವ ಅಸ್ತಿಯ ಭಾಗಗಳನ್ನು ಒಟ್ಟುಸೇರಿಸಿ ಬೆಂಕಿಕೊಟ್ಟು ಬರುತ್ತಾರೆ. ಇದಕ್ಕೆ ಕೊಳ್ಳಿ ಕೊಡುವುದು, ಮರುಕೊಳ್ಳಿಯೆಂದು ಕರೆಯುತ್ತಾರೆ. ಮೂರನೆಯ ದಿನ ಪುನಃ ಸ್ಮಶಾನಕ್ಕೆ ತೆರಳಿ, ಬೂದಿಯನ್ನು ಅಸ್ತಿಯ ಚೂರುಗಳನ್ನು ಒಟ್ಟುಮಾಡುತ್ತಾರೆ. ಸ್ವಲ್ಪ ಭಾಗವನ್ನು ಮಡಿಕೆಯಲ್ಲಿ ತುಂಬಿ ಅಲ್ಲಿಯೇ ಹುಗಿಯುತ್ತಾರೆ. ಉಳಿದವನ್ನು ಹರಿಯುವ ಹೊಳೆ ಅಥವಾ ನದಿಯಲ್ಲಿ ವಿಸರ್ಜಿಸುತ್ತಾರೆ. ಹುಗಿದ ಸ್ಥಳದಲ್ಲಿ ಬಾಳೆಯ ಗಿಡವನ್ನು ನೆಡುತ್ತಾರೆ. ಮುಂದೆ ಧೂಪೆಯನ್ನು ಅಲ್ಲಿಯೇ ರಚಿಸುತ್ತಾರೆ. ಅದೇ ದಿನ ಕ್ಷೌರಿಕನು ಆಗಮಿಸಿ ಮೃತ ಕುಟುಂಬದ ಪುರುಷರ ತಲೆಗೂದಲನ್ನು ಮೀಸೆಯನ್ನೂ ವಪನ ಮಾಡುತ್ತಾನೆ.[136] ಅಂದು ಆಗಮಿಸಿದ ಮೃತನ ಬಂಧುಗಳು, ಹದಿನಾರನೆಯ ದಿನ ಬಸದಿಯಲ್ಲಿ ನಡೆಸುವ ಪೂಜೆ, ಅಭಿಷೇಕದ ಕುರಿತು ನಿರ್ಧಾರ ತೆಗೆದುಕೊಳ್ಳುತ್ತಾರೆ. [137]

ಈ ರೀತಿಯ ಅಂತ್ಯಸಂಸ್ಕಾರದ ಕುರಿತು ವಿದ್ವಾಂಸರು ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಯಾವುದೇ ಒಬ್ಬ ವ್ಯಕ್ತಿಯ ಸಾವು ಅದು ಒಂದು ಕುಟುಂಬಕ್ಕೆ ಸಂಬಂಧಿಸಿದ್ದಾದರೂ, ಅದಕ್ಕೂ ಮೀರಿ ಅದು ಸಮಾಜದ ಆಗುಹೋಗುಗಳಿಗೆ ಸಂಬಂಧಿಸಿದ್ದೆಂದು ಭಾವಿಸುತ್ತಾರೆ. ಅಂತ್ಯ ಸಂಸ್ಕಾರದಲ್ಲಿ ಮೃತನ ರಕ್ತಬಾಂಧವರೇ ನಿರ್ಣಾಯಕ ಸ್ಥಾನವನ್ನು ವಹಿಸುವುದು. ಸಮಾಜ ರೂಪುಗೊಳ್ಳುವುದಕ್ಕೆ ಹಿಂದಿನ ಬಂಧುತ್ವದ ವ್ಯವಸ್ಥೆಯನ್ನು ಸಾಂಕೇತಿಸುವುದಾಗಿ ಹೇಳುತ್ತಾರೆ. ಹೆಣವನ್ನು ಎತ್ತುವಲ್ಲಿಂದ ಆರಂಭವಾಗಿ ಕೊನೆಗೆ ಅಭಿಷೇಕ, ಪೂಜೆ ಸಂಘಸಂತರ್ಪಣೆಯ ವರೆಗಿನ ಸಮಗ್ರ ಕಲಾಪದಲ್ಲಿ ಮೃತನ ಹಿರಿಯ ಮಗ ಇಲ್ಲವೇ ಮೃತನ ಸಹೋದರ ಮುಖ್ಯಪಾತ್ರ ವಹಿಸುತ್ತಾನೆ. ದೈಹಿಕವಾಗಿ ಆತ ಅಸಮರ್ಥನಾದರೆ ಸಾಂಕೇತಿಕವಾಗಿ ಅವನ ಕೈಮುಟ್ಟಿಸಿ ಉಳಿದವರು ಆ ಕೆಲಸ ಮಾಡುತ್ತಾರೆ. ಶವಸಂಸ್ಕಾರದಲ್ಲಿ ಬಳಸುವ ಬಿದಿರು, ಧೋಪೆಯ ಎದುರು ಹುಗಿಯುವ ಬಾಳೆಯ ಗಿಡ ಕೂಡ ಬಂಧುತ್ವದ ಸಂಕೇತವೆಂದು ಅರ್ಥಮಾಡುತ್ತಾರೆ. ಬಾಳೆ ಬಿದಿರುಗಳು ಬೃಹತ್ತಾದ ಬುಡವನ್ನು ಹೊಂದಿದ್ದು, ಅದೇ ಬುಡದಿಂದ ಮರಿಗಳು ಕವಲೊಡೆಯುತ್ತವೆ. ಒಂದೇ ಬುಡದಿಂದ ಹೊರಟ ಅನೇಕ ಕವಲುಗಳು ಎಂಬ ಕಲ್ಪನೆಯು ಕುಲದ ಕಲ್ಪನೆಯನ್ನು ಚೆನ್ನಾಗಿ ಹೋಲುತ್ತವೆಂದು ಅರ್ಥೈಸಲಾಗುತ್ತದೆ.

ಮಾಲಕಾರ್ಯ : ಸತ್ತ ಪಿತೃಗಳಿಗೆ ವರ್ಷಕ್ಕೊಮ್ಮೆ ಅನ್ನಹಾಕುವ ಕ್ರಿಯೆಗೆ, ಮಾಲಕಾರ್ಯವೆಂದು ಹೆಸರು. ವಾಸ್ತವಿಕವಾಗಿ ಜೈನಧರ್ಮದ ತತ್ವದಂತೆ ಸತ್ತ ವ್ಯಕ್ತಿಗೂ, ಆತನ ಕುಟುಂಬ ವರ್ಗದವರಿಗೂ ಯಾವುದೇ ಸಂಬಂಧಗಳಿರುವುದಿಲ್ಲ. ಆದರೆ ಸ್ಥಳೀಯ ಸಂಸ್ಕೃತಿಯ ಪ್ರಭಾವದಿಂದಾಗಿ, ಇದು ಜೈನಮತೀಯರಲ್ಲಿ ರೂಢಿಗೆ ಬಂದಿದೆ. ಇದು ವೈದಿಕ ಧರ್ಮದ ಪ್ರಭಾವವೆಂದು ತೋರುತ್ತದೆ. ತಂದೆ ಅಥವಾ ತಾಯಿ ಮೃತರಾದ ದಿನದಂದು ಅವರ ಮಕ್ಕಳು ಇದನ್ನು ಆಚರಿಸುತ್ತಾರೆ.

ಉಪ್ಪಿನಕಾಯಿಯಿಂದ ಮೊದಲ್ಗೊಂಡು ಎಲ್ಲಾ ರೀತಿಯ ಭಕ್ಷ್ಯಗಳನ್ನು ಅದೇ ದಿನ ತಯಾರಿಸಬೇಕು. ಆ ದಿನ ಬಸದಿಯಲ್ಲಿ ವಿಶೇಷ ಪೂಜೆ, ಅಭಿಷೇಕಗಳು ನಡೆದ ಬಳಿಕ, ಮನೆಯ ಯಜಮಾನನು ಕೋಣೆಯಲ್ಲಿ ಎಲೆಯನ್ನು ಹಾಕಿ, ಅದರಲ್ಲಿ ಅಡಿಗೆಯನ್ನು ಸ್ವತಃ ಯಜಮಾನನು ಬಡಿಸುತ್ತಾನೆ. 16 ಎಲೆಯನ್ನು ಸಾಲಾಗಿಯೂ, ಇನ್ನೆರಡು ಎಲೆಯನ್ನು ಪ್ರತ್ಯೇಕವಾಗಿಯೂ ಇಡಲಾಗುತ್ತದೆ. ಬಡಿಸಿಯಾದ ಬಳಿಕ ಹಿರಿಯರನ್ನು ಪ್ರಾರ್ಥಿಸಿ, ಬಾಗಿಲನ್ನು ಮುಚ್ಚಿ ಎಲ್ಲರೂ ಹೊರಬರುತ್ತಾರೆ. ಸ್ವಲ್ಪ ಸಮಯದ ಬಳಿಕ ಬಾಗಿಲನ್ನು ತೆರೆದು, 16 ಎಲೆಗಳನ್ನು ಸಂಬಂಧಪಟ್ಟ ಊರಿನ ಜನರಿಗೆ ನೀಡುತ್ತಾರೆ. ಉಳಿದ ಎರಡು ಎಲೆಗಳಲ್ಲಿ ಒಂದನ್ನು ಹಸುವಿಗೂ ಇನ್ನೊಂದನ್ನು

ಕಾಗೆಗೂ ನೀಡುತ್ತಾರೆ. ಕಾಗೆ ಹಾರಿ ಬಂದು ಎಲೆಯಲ್ಲಿರುವ ಅನ್ನವನ್ನು ತಿಂದ ಬಳಿಕ ಮನೆಯಲ್ಲಿ ಎಲ್ಲರೂ ಊಟ ಮಾಡುತ್ತಾರೆ. ಈ ಅಡುಗೆಯನ್ನು ಕೆಲವು ಮನೆತನಗಳಲ್ಲಿ ಹೆಂಗಸರು ಮಾಡುವುದಿಲ್ಲ. ದೇವರ ಕೋಣೆಗಂತೂ ಹೆಂಗಸರಿಗೆ ಪ್ರವೇಶವಿರುವುದಿಲ್ಲ. ಗಂಡಸರೇ ಅಡುಗೆ ಕೆಲಸವನ್ನು ನಿರ್ವಹಿಸುತ್ತಾರೆ. [138]

4.11. ಉಡುಗೆ- ತೊಡುಗೆಗಳು

ಭಾರತೀಯ ಸಂಸ್ಕೃತಿಯಲ್ಲಿ ಬಟ್ಟೆ ಅವರ ಧರ್ಮ ಮತ್ತು ಸಾಮಾಜಿಕ ಜೀವನ ಹಂತದ ಅಭಿವ್ಯಕ್ತಿಯಾಗಿರುತ್ತದೆ. ಹಾಗಾಗಿ ಸಂಸ್ಕೃತಿಯಲ್ಲಿ ಯಾವುದೇ ಜನಾಂಗವನ್ನು ಗುರುತಿಸುವಲ್ಲೂ ಅವರು ಧರಿಸುವ ಉಡುಗೆ ತೊಡುಗೆಗಳು ಬಹುಮಟ್ಟಿಗೆ ಸಹಾಯಕವಾಗುತ್ತವೆ. ತೊಡುವ ಉಡುಗೆ, ಆಭರಣಗಳಿಂದಲೇ ವ್ಯಕ್ತಿಯು ಇಂಥ ವರ್ಗಕ್ಕೆ ಸೇರಿದವನೆಂಬುದನ್ನು ಸುಲಭವಾಗಿ ಗುರುತಿಸುವಷ್ಟರ ಮಟ್ಟಿಗೆ ಇವು ವೈಶಿಷ್ಟ್ಯಪೂರ್ಣ ವಾಗಿರುತ್ತಿದ್ದವು. ಆದರೆ ಸಂಸ್ಕೃತಿ, ಸಂಕರಣಗೊಂಡಂತೆ ಮನುಷ್ಯನ ಅಭಿರುಚಿ ಪ್ರಾದೇಶಿಕ ವೈಶಿಷ್ಟ್ಯಗಳು ಈಗ ಮಹತ್ವ ಕಳೆದುಕೊಳ್ಳುತ್ತಿವೆ.

ಧರಿಸುವ ಬಟ್ಟೆ, ಆಭರಣಗಳು ಅವರ ಬಾಹ್ಯ ಸೌಂದರ್ಯದ ಪ್ರತೀಕಗಳಾಗಿರುವಂತೆ, ಅವರ ಅಂತರಂಗದ ಅಭಿವ್ಯಕ್ತಿಯೂ ಆಗಿರುತ್ತವೆ. ಮನುಷ್ಯನ ಅಂತರಂಗದಲ್ಲಿ ಸೌಂದರ್ಯಪ್ರಜ್ಞೆಯು ವಿಕಾಸಗೊಂಡರೆ ಆಂತರಿಕವಾಗಿ ಸುಪ್ತವಾಗಿರುವ ಕಲಾಪ್ರಜ್ಞೆಯೂ ಉತ್ತಮವಾಗಿ ಅಭಿವ್ಯಕ್ತಗೊಳ್ಳುತ್ತವೆ. ಇದರಿಂದಾಗಿ ಬಾಹ್ಯಾಭಿವ್ಯಕ್ತಿಯಲ್ಲಿ ಕುಶಲತೆ, ಹೊಸತನಗಳು ಕಂಡುಬರುತ್ತವೆ. ಜೊತೆಗೆ ಆಯಾ ಪ್ರದೇಶದ ಹವಾಮಾನ ಪರಿಸರಕ್ಕೆ ಹೊಂದಿಕೊಂಡು ಅಲ್ಲಿಯ ಜನಾಂಗವು ತಮ್ಮ ಸಂಪ್ರದಾಯ, ಅಭಿರುಚಿಗೆ ತಕ್ಕಂತೆ ಉಡಿಗೆ ತೊಡಿಗೆಗಳ ವಿನ್ಯಾಸವನ್ನು ರೂಪಿಸಿಕೊಳ್ಳುತ್ತವೆ. ಪ್ರಾದೇಶಿಕ ಜನಾಂಗಗಳ ಅಧ್ಯಯನದಿಂದ ಉಡುಗೆಯ ವ್ಯತ್ಯಾಸ ಮತ್ತು ಸ್ಥಾನಿಕ ಶೈಲಿಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದು. ಆದರೆ ಮಂಡ್ಯ ಜಿಲ್ಲೆಯಲ್ಲಿ ಜೈನರು ಜಿಲ್ಲೆಯ ಸಂಸ್ಕೃತಿಗೆ ಹೊರತಾದ ಯಾವ ವಿಶಿಷ್ಟ ಬಗೆಯ ಬಟ್ಟೆ ಅಥವಾ ತೊಡುಗೆಯ ಕ್ರಮವನ್ನು ಅನುಸರಿಸುವುದಿಲ್ಲ.

4.12. ನಂಬಿಕೆಗಳು

ಮಂಡ್ಯಜಿಲ್ಲೆಯ ಜೈನಮತೀಯರು ಶಿಷ್ಟ ಸಂಸ್ಕೃತಿಗೆ ಸೇರಿದವರಾಗಿದ್ದರೂ ಕೂಡ, ಸ್ಥಳೀಯ ಜಾನಪದ ಸಂಸ್ಕೃತಿಯಲ್ಲಿ ಪ್ರಚಲಿತವಿರುವ ಕೆಲವು ನಂಬಿಕೆಗಳನ್ನು ರೂಢಿಸಿಕೊಂಡು ಬಂದಿರುವುದು; ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಪಿತೃಪೂಜೆ, ದೇವತೆಗಳ

ಆರಾಧನೆ, ತಾಂತ್ರಿಕ ಆರಾಧನೆಗಳೆನ್ನಬಹುದು. ಈ ಆರಾಧನೆಗಳ ಹಿನ್ನೆಲೆಯಲ್ಲಿ ದೈವ, ದೇವರುಗಳಂಥ ಅಮಾನುಷಶಕ್ತಿಗಳ ಮೇಲಿರುವ ನಂಬಿಕೆ ಮತ್ತು ಭಯಗಳೇ ಮೂಲ ಕಾರಣವಾಗಿದೆ. ಉದಾಹರಣೆಗೆ : ಸಂತಾನಭಾಗ್ಯಕ್ಕಾಗಿ ನಾಗನಿಗೆ ಹರಕೆ ಹೇಳಿಕೊಳ್ಳುವುದು, ಮನೆಯ ಹತ್ತಿರ ಸರ್ಪ ಬಂದರೆ ಮೈಲಿಗೆಯಾಗಿದೆಯೆಂದು ಭಾವಿಸುವುದು, ಸರ್ಪ ಕನಸಿನಲ್ಲಿ ಕಂಡರೆ ಪದ್ಮಾವತೀ ಅಮ್ಮನ ಹರಕೆ ಬಾಕಿಯಿದೆಯೆನ್ನುವುದು, ಇಷ್ಟದೇವರಿಗೆ ಮುಡಿಪು ತೆಗೆದಿಡುವುದು, ಕೆಟ್ಟ ಸಮಾಚಾರ ಕೇಳಿದರೆ ದೇವರಿಗೆ ತುಪ್ಪದ ದೀಪ ಹಚ್ಚುವುದು ಮುಂತಾದವುಗಳನ್ನು ಗಮನಿಸಬೇಕು.[139]

ನಂಬಿಕೆಗಳಲ್ಲಿ ಬಹುತೇಕವಾದವುಗಳು ಮೂಢನಂಬಿಕೆಗಳೇ ಆಗಿವೆ. ಕೆಲವು ನಂಬಿಕೆಗಳಲ್ಲಿ ಸತ್ಯ, ಸಾಮಾನ್ಯಜ್ಞಾನ, ಪೌರಾಣಿಕ, ಐತಿಹಾಸಿಕ ಕಥಾಂಶಗಳೂ ಅಡಕವಾಗಿರುತ್ತವೆ. ಜನರು ತಮ್ಮ ಸಂಸ್ಕೃತಿಯನ್ನು ರೂಪಿಸಿಕೊಳ್ಳುವಾಗ ಅವರ ಧಾರ್ಮಿಕ ಚಟುವಟಿಕೆಗಳಿಗೆ ತಕ್ಕಂತೆ ಕೆಲವು ನಂಬಿಕೆಗಳ ರೂಪ ತಾಳುತ್ತವೆ. ಅದರಲ್ಲೂ ಧಾರ್ಮಿಕ ಆವರಣದೊಳಗೆ ಜೀವಿಸುವ ಮನುಷ್ಯನು ತನ್ನ ನಂಬಿಕೆಗಳಿಗೆ ಧಾರ್ಮಿಕತೆಯ ಛಾಪನ್ನು ಒತ್ತಿರುತ್ತಾನೆ. ಜೈನಧರ್ಮದಲ್ಲಿ ಆತ್ಮನ ಅಮರತ್ವಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಹೀಗಾಗಿ ಭೂತ, ಭವಿಷ್ಯತ್ತು, ಪುನರ್ಜನ್ಮಗಳಲ್ಲಿ ಇವರಿಗೆ ವಿಶೇಷ ನಂಬಿಕೆಗಳಿವೆ. ಬದುಕಿನಲ್ಲಿ ಎದುರಾಗುವ ಸುಖ–ದುಃಖಗಳಿಗೆ ಹಿಂದಿನ ಜನ್ಮದ ಪಾಪಕರ್ಮವೇ ಕಾರಣವೆಂದು ಭಾವಿಸುತ್ತಾರೆ.[140] ಶಕುನಗಳಲ್ಲಿ ಮತ್ತು ಕನಸುಗಳಲ್ಲಿ ಇವರು ತುಂಬಾ ನಂಬಿಕೆಯನ್ನು ಇಡುತ್ತಾರೆ. ಕೆಟ್ಟ ಕನಸುಗಳಾದರೆ, ಏನೋ ಅನಿಷ್ಟವಿದೆಯೆಂದೂ ಒಳ್ಳೆಯ ಕನಸುಗಳಾದರೆ ಉತ್ತಮ ಫಲಪ್ರಾಪ್ತಿಯೆಂದೂ ಭಾವಿಸುತ್ತಾರೆ. ತೀರ್ಥಂಕರರ ಪುರಾಣಗಳಲ್ಲಿ ಜಿನಮಾತೆಗೆ ಬೀಳುವ ಕನಸುಗಳು, ಮುಂದೆ ಆಕೆಯು ಉತ್ತಮ ಮಗುವನ್ನು ಪಡೆಯುತ್ತಾಳೆಂಬುದರ ಸೂಚನೆ ಎಂದೂ ಆತನೆ ತೀರ್ಥಂಕರನಾಗಿ ಸಕಲ ಜೀವಿಗಳನ್ನು ಉದ್ಧರಿಸುತ್ತಾನೆಂದೂ ತಿಳಿಸುತ್ತವೆ. ಜೈನಮತಿಯರು ಮಾಡಿಸುವ ವಾಸ್ತುಪೂಜೆ, ನವಗ್ರಹಶಾಂತಿ ವಿಧಾನದಲ್ಲಿ ಗರ್ಭಿಣಿ ಸ್ತ್ರೀಗೆ ಶಾಂತಿ, ರಕ್ಷಾರ್ಥಗಳನ್ನು ಮಾಡಿಸಿ ಯಂತ್ರವನ್ನು ಕಟ್ಟಿಸುವ ಹಿನ್ನೆಲೆಯಲ್ಲಿ ಅತಿಮಾನುಷ ಶಕ್ತಿಯ ಭಯದಿಂದ ರಕ್ಷಣೆ ಪಡೆಯುವ ಮನೋಧರ್ಮ ಅಡಗಿದೆಯೆನ್ನಬಹುದು. ಮಾನವರು ಪ್ರಕೃತಿಯೊಡನೆ ಹೊಂದಿರುವ ಸತತ ಸಂಪರ್ಕದಿಂದಾಗಿ, ಅದರಲ್ಲುಂಟಾದ ಬದಲಾವಣೆಗಳನ್ನು ಗಮನಿಸಿ ಕೆಲವು ನಂಬಿಕೆಗಳು ಹುಟ್ಟಿಕೊಂಡಿವೆ.[141] ಉದಾ: ಸೂರ್ತ ಗುಡಿ ಕಟ್ಟಿದರೆ ಸೂರೆಲ್ಲಮಳೆ, ತಿಂಗಳು ಗುಡಿ ಕಟ್ಟಿಸಿದರೆ ತಿಂಗಳು ಮಳೆಯಿಲ್ಲ. ಇದನ್ನು ಸಾರ್ವತ್ರಿಕ ನಂಬಿಕೆಯೆಂದು ಕರೆಯಬಹುದು. ಇದೇ ರೀತಿ ಗಾದೆ, ಒಗಟುಗಳ ರೂಪದಲ್ಲಿಯೂ ಹಲವಾರು ನಂಬಿಕೆಗಳು ಬೆಳೆದುಕೊಂಡು ಬಂದಿವೆ. ಬದುಕಿನಲ್ಲಿ ಘಟಿಸುವ ಹಬ್ಬಹರಿದಿನ, ಹುಟ್ಟು–

ಸಾವು, ಕಾಲ, ನಿದ್ದೆ, ವಾರ, ಒಡಹುಟ್ಟಿದವರು, ವಿವಾಹ, ದೇಹಕ್ಕೆ ಸಂಬಂಧಿಸಿದ ವಿವರಗಳು ಕೂಡ ಹಲವಾರು ನಂಬಿಕೆಗೆ ಕಾರಣವಾಗಿವೆ. ಜೈನ ಧರ್ಮೀಯರಲ್ಲಿ ಕಂಡುಬರುವ ನಂಬಿಕೆಗಳನ್ನು ಈ ಕೆಳಗಿನಂತೆ ಸಂಕಲಿಸಬಹುದು.[142]

ಹೊತ್ತು ಮುಳುಗಿದ ಮೇಲೆ ತಿನ್ನಬಾರದು, ಮಂಗಳವಾರ ಮಗಳನ್ನು ಕಳುಹಿಸಬಾರದು, ಶುಕ್ರವಾರ ಸೊಸೆಯನ್ನು ಕಳುಹಿಸಬಾರದು. ಮದುವೆಯಾದ ವರ್ಷ ಮೂರು ತಲೆ ಕಾಣಬಾರದು, ತಂದೆತಾಯಿಯರಿಗೆ ಕೇಡು, ತಂದೆ ಸತ್ತಮೇಲೆ ತಂದೆಯ ಮನೆಯಲ್ಲಿ ನಿಲ್ಲಬಾರದು, ಮಳೆ ನಿಂತಮೇಲೆ ಮರದ ಬುಡದಲ್ಲಿ ನಿಲ್ಲಬಾರದು. ಹಾಗಲಕಾಯಿ ಕಹಿಯೆಂದು ಬಿಸಾಡಬಾರದು, ಅತ್ತೆ ಬೈದಳೆಂದು ಓಡಬಾರದು. ಅಮಾವಾಸ್ಯೆಯಂದು ಹುಟ್ಟಿದರೆ ತಂದೆಗೆ ಕೇಡು, ಉಪ್ಪಿನ ಸಾಲ ಇರಲೇಬಾರದು. ಮುಂತಾದ ಗಾದೆಗಳಲ್ಲಿ ಜಿನಧರ್ಮೀಯರ ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಿರುವ ನಂಬಿಕೆಗಳನ್ನು ಗುರುತಿಸಬಹುದು. ಜೈನ ಧರ್ಮಾಚರಣೆಯ ತತ್ತ್ವ 'ಜೈನರಿಗೆನೆಂಟ ಇಲ್ಲ'ಎಂಬ ಗಾದೆಯಲ್ಲಿ ಅಡಗಿದೆಯೆನ್ನಬಹುದು. ಮಧ್ಯಾಹ್ನ ಬ್ರಾಹ್ಮಣನ ಹಿಂದೆ, ಸಂಜೆ ಜೈನರ ಹಿಂದೆ ನಡೆಯಲು ಸಾಧ್ಯವಿಲ್ಲ ಎಂಬ ಗಾದೆಯ ಹಿಂದೆ ಬ್ರಾಹ್ಮಣರು ಮಧ್ಯಾಹ್ನದ ಹೊತ್ತು ಮನೆಯಲ್ಲಿ ಅಥವಾ ದೇವಾಲಯದಲ್ಲಿ ಪ್ರಸಾದದ ಪೂರ್ವ ಪಂಕ್ತಿಗೆ ತೆರಳುವ ಆತುರದಲ್ಲಿ ವೇಗವಾಗಿ ನಡೆಯುತ್ತಾನೆ. ಅದರಂತೆ ಜೈನರು ಸೂರ್ಯ ಮುಳುಗುವ ಮೊದಲು ಊಟಮಾಡುವ ಪದ್ಧತಿಯನ್ನು ಹೊಂದಿರುವುದರಿಂದ ಸೂರ್ಯ ಮುಳುಗಿದರೆ ಊಟ ತಪ್ಪುತ್ತದೆಂಬ ಕಾರಣದಿಂದ ಜೈನರು ತ್ವರೆಯಿಂದ ಮನೆಗೆ ಹೋಗುತ್ತಿದ್ದುದರಿಂದ ಈ ಗಾದೆ ಹುಟ್ಟಿಕೊಂಡಿರಬೇಕು.

ಶಕುನ : ಕನಸಿನಂತೆ ನಂಬಿಕೆಯ ಒಂದು ಭಾಗವಾದ ಶಕುನದಲ್ಲಿ ಜೈನಮತೀಯರಿಗೆ ತುಂಬ ವಿಶ್ವಾಸವಿದೆ. ಶಕುನವನ್ನು ಭವಿಷ್ಯ ಸೂಚಕವೆಂದು ಇವರು ಪರಿಗಣಿಸುತ್ತಾರೆ. ಗಂಡಸರಿಗೆ ಬಲಗಣ್ಣು ಅದುರಿದರೆ ಉತ್ತಮ, ಎಡಗಣ್ಣು ಅದುರಿದರೆ ಕೇಡು; ಹೆಂಗಸರಿಗೆ ಎಡಗಣ್ಣು ಅದುರಿದರೆ ಉತ್ತಮ, ಬಲಗಣ್ಣು ಅದುರಿದರೆ ಕೇಡು, ಒಂಟಿ ಸೀನು ಸೀನಬಾರದು, ಒಳ್ಳೆಯ ಕೆಲಸಕ್ಕೆ ಹೊರಟಾಗ ಬೆಕ್ಕು ಅಡ್ಡ ಬರಬಾರದು, ಹಾಗೆ ಬಂದರೆ ಉದ್ದೇಶಿತ ಕೆಲಸ ನಡೆಯುವುದಿಲ್ಲವೆಂದು ಭಾವಿಸುತ್ತಾರೆ. ಈ ಶಕುನಗಳು ಸಾಮಾನ್ಯವಾಗಿ ಸಮಾಜದ ಎಲ್ಲಾ ವರ್ಗದಲ್ಲಿ ಕೂಡ ಪ್ರಚಲಿತದಲ್ಲಿದೆ.[143]

ಶಕುನಗಳನ್ನು, ಶುಭಶಕುನ ಮತ್ತು ಅಪಶಕುನಗಳೆಂದು ಎರಡು ರೀತಿಯಲ್ಲಿ ವರ್ಗೀಕರಿಸಬಹುದು. ಶಕುನಗಳು ಯಾವ ಕಾಲದಲ್ಲೇ ಆಗಿರಲಿ, ಯಾವ ಸ್ಥಳದಲ್ಲೇ ಆಗಿರಲಿ ಅಥವಾ ಅದು ಆಕಸ್ಮಿಕವಾಗಿ ಕಂಡುಬಂದರೂ ಅದಕ್ಕೆ ತನ್ನದೇ ಆದ ಅರ್ಥಕಲ್ಪಿಸಲಾಗುತ್ತದೆ.

ಬಿಳಿಯ ಹೂಗಳು, ತುಂಬಿದ ಕೊಡ, ಕಲಶ ಕಂಡರೆ ಅದು ಶುಭಶಕುನ. ಫಲಭರಿತ ತೆಂಗಿನಮರ, ಹೂವು, ಅರಳಿನಿಂತ ಪಾರಿಜಾತವೃಕ್ಷ ಅತ್ಯುತ್ತಮ ಶಕುನಗಳೆಂದು ಪರಿಗಣಿಸುತ್ತಾರೆ. ನಾಯಿ ಮನೆಪ್ರವೇಶಿಸಿ ಬೊಗಳಿದರೆ ಮನೆಯ ಯಜಮಾನ ಸಾಯುತ್ತಾನೆ, ಗೂಗೆ ಮನೆಯೊಳಗೆ ಬಂದರೆ ಮನೆ ಬಿಡಬೇಕು, ಮಂಗಳಕಾರ್ಯದಲ್ಲಿ ದೀಪ ನಂದಿದರೆ ಅದು ಅಪಶಕುನ ಮತ್ತು ಯಾವುದೋ ಕೇಡಿನ ಮುನ್ಸೂಚನೆ ಎಂದು ನಂಬುತ್ತಾರೆ. ದೇವರಲ್ಲಿ ಹೂ-ಕೇಳಿ ಪ್ರಸಾದ ಆಗದಿದ್ದರೆ ದೇವರ ಅನುಗ್ರಹವಾಗಲಿಲ್ಲವೆಂದು ಅರ್ಥಮಾಡಿಕೊಂಡು, ಅದಕ್ಕಾಗಿ ಪುನಃ ಪೂಜೆ, ಪ್ರಾರ್ಥನೆ ಸಲ್ಲಿಸಿ ಪೂಜೆ ಕಟ್ಟಿಸುತ್ತಾರೆ. ನರಿ ರಾತ್ರಿಯ ಸಮಯದಲ್ಲಿ ಊಳುವುದು, ಧೂಮಕೇತು ಉಲ್ಕಾಪಾತವಾಗುವುದು ಅಪಶಕುನವೆಂದು ಜೈನಮತೀಯರು ಭಾವಿಸುತ್ತಾರೆ. [144]

4.13. ಯಂತ್ರ-ಮಂತ್ರ-ತಂತ್ರಗಳು

ಜೈನಧರ್ಮದಲ್ಲಿ ಕ್ರಿಶ್ತಶಕದ ಆರಂಭ ಕಾಲದಿಂದಲೂ ಯಂತ್ರ-ತಂತ್ರ-ಮಂತ್ರಗಳ ಉಪಾಸನೆ ನಡೆಯುತ್ತಿದೆ. ಪ್ರಾಚೀನ ಕರ್ನಾಟಕದಲ್ಲಿ ಜೀವಿಸಿದ್ದ ಅನೇಕ ಜೈನಾಚಾರ್ಯರು ಸ್ತೋತ್ರ-ಮಂತ್ರ-ಯಂತ್ರಗಳ ರಚನಾಕಾರರಾಗಿದ್ದರು.[145] ಆಚಾರ್ಯರಾದ ಕುಂದಕುಂದರು, (ಕ್ರಿ.ಶ. 44) ಸಮಂತಭದ್ರರು (ಕ್ರಿ.ಶ. 400) ವಕ್ರಗ್ರೀವರು (ಕ್ರಿ.ಶ. ಸು : 55) ಪೂಜ್ಯಪಾದರು (ಕ್ರಿ.ಶ. ಸು. 600) ಅಕಲಂಕರು (ಕ್ರಿ.ಶ. 700), ಮಾನತುಂಗರು (ಕ್ರಿ.ಶ. ಸು. 800) ಮುಂತಾದ ಆಚಾರ್ಯರುಗಳು ಜೈನಧರ್ಮ ಪರಂಪರೆಯ ಆಧ್ಯಾತ್ಮಕ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿದ ಮುನಿಶ್ರೇಷ್ಠರೂ ದಾಷ್ಟಾರರು ಆಗಿದ್ದರಲ್ಲದೆ ವೈದ್ಯರಾಗಿಯೂ, ಮಂತ್ರ, ತಂತ್ರಗಳಲ್ಲಿ ನಿಷ್ಣಾತರೂ ಆಗಿದ್ದರು.[146] ಇವರಲ್ಲಿ ಸಮಂತಭದ್ರರಂತೂ ಜ್ವಾಲಾಮಾಲಿನೀ ಯಕ್ಷಿಯ ಸಹಾಯದಿಂದ ತಮಗಾದ ಭಸ್ಮಕ ರೋಗವನ್ನು ನಿವಾರಿಸಿಕೊಂಡುದುದಕೆ ಉಲ್ಲೇಖವಿದೆ.[147] ಅಕಲಂಕರು ಜೈನ ಶಾಸನ ಯಕ್ಷಿಯನ್ನು ಒಲಿಸಿಕೊಂಡು, ಇತರ ಧರ್ಮೀಯರನ್ನು ವಾದದಲ್ಲಿ ಸೋಲಿಸುತ್ತಿದ್ದರಂತೆ.

ಶ್ರವಣಬೆಳಗೊಳದ ಚಾರುಕೀರ್ತಿ ಪಂಡಿತರ ಕುರಿತಾಗಿಯೂ ಇದೇ ರೀತಿಯ ಐತಿಹ್ಯವಿದೆ. ಬೇಲೂರಿನಲ್ಲಿ ಹೊಯ್ಸಳರಾಜನಾಗಿದ್ದ ಬಿಟ್ಟಿದೇವನು ವೈಷ್ಣವ ಧರ್ಮವನ್ನು ಸ್ವೀಕರಿಸಿದಾಗ ಇಲ್ಲಿಯ ಜೈನರಿಗೆ ತೊಂದರೆಯಾಯಿತೆಂದೂ ಇದರಿಂದ ಭೂಮಿಯು ಬಾಯಿಬಿಟ್ಟಾಗ, ಶ್ರವಣಬೆಳಗೊಳದಿಂದ ಚಾರುಕೀರ್ತಿ ಪಂಡಿತರು ಆಗಮಿಸಿ, ಸಾವಿರ ಕುಂಬಳಕಾಯಿಯನ್ನು ಅಭಿಮಂತ್ರಿಸಿ ಅದನ್ನು ಮುಚ್ಚಿಸಿದರೆಂದೂ ಹೇಳಲಾಗುತ್ತಿದೆ.[148] ಪದ್ಮಾವತೀ, ಕಲ್ಪ, ಭೈರವ ಪದ್ಮಾವತೀ ಕಲ್ಪ, ಜ್ವಾಲಾಮಾಲಿನೀ ಕಲ್ಪ ಮೊದಲಾದ ತಾಂತ್ರಿಕ ಗ್ರಂಥಗಳ ರಚನೆಯ ಬಳಿಕವಂತೂ ಕರ್ನಾಟಕದಾದ್ಯಂತ ವಿಶೇಷವಾಗಿ ತಾಂತ್ರಿಕ ಆರಾಧನೆಗಳು ಅತಿ ಎನಿಸುವಷ್ಟು ಹೆಚ್ಚಿಕೊಂಡವು.

ಶಾಸನ ದೇವತೆಗಳನ್ನು ಋದ್ಧಿಮಂತ್ರದ ಮೂಲಕ ಸಿದ್ಧಮಾಡಿಕೊಂಡು ಅಮಾನುಷಶಕ್ತಿಯನ್ನು ಪಡೆದುಕೊಳ್ಳುವ ಪ್ರಯತ್ನಗಳು ಅಧಿಕವಾದವು. ಜೈನ ಪುರೋಹಿತರಲ್ಲಿ ಅನೇಕರು ಈ ಸಿದ್ಧಿಯನ್ನು ಪಡೆದುಕೊಂಡುದಕ್ಕೆ ನಿದರ್ಶನಗಳಾಗಿ ತಂತ್ರಾರಾಧನೆಗೆ ಸಂಬಂಧಪಟ್ಟ ಅನೇಕ ಕೈಬರಹದ ಗ್ರಂಥಗಳು ಇವರ ಮನೆಗಳಲ್ಲಿ ಉಳಿದುಬಂದಿವೆ. ಭೂತ, ಪಿಶಾಚ, ವ್ಯಂತರ ಮೊದಲಾದ ದುಷ್ಟಶಕ್ತಿಗಳಿಂದ ಪೀಡಿತರಾದವರಿಗೆ ಇವರು ವಿಭೂತಿ, ಕುಂಕುಮ, ಮಂತ್ರಿಸಿಕೊಟ್ಟೋ ಅಥವಾ ಯಂತ್ರವನ್ನು ಕೊಟ್ಟು ಪರಿಹಾರ ನೀಡುತ್ತಾರೆ.[149]

ಮಂಡ್ಯ ಜಿಲ್ಲೆಯಲ್ಲಿ ಅಮಾನುಷ ಶಕ್ತಿಗಳ ತೊಂದರೆಗೆ, ಗಾಳಿ ಸೋಂಕೆಂದು ಕರೆಯುತ್ತಾರೆ. ಇಲ್ಲಿಯ ಜೈನಗೃಹಸ್ಥರು ಯಂತ್ರ, ತಂತ್ರ, ಮಂತ್ರಗಳಲ್ಲಿ ಆಹಾರವಾದ ವಿಶ್ವಾಸಗಳನ್ನು ಹೊಂದಿದ್ದಾರೆ. ಯಂತ್ರ ತಂತ್ರಗಳ ಸಾಮರ್ಥ್ಯದಿಂದ ಯಾವುದೇ ರೀತಿಯ ದೈಹಿಕ, ಮಾನಸಿಕ ತೊಂದರೆಗಳಿಂದ ಪಾರಾಗಬಹುದೆಂದು ನಂಬಿದ್ದಾರೆ. ಕರ್ನಾಟಕದ ಇತರೆಡೆಗಳಲ್ಲಿ ಕಂಡುಬರುವ ಕೆಲವು ಶಾಸನೋಕ್ತ ದೃಷ್ಟಾಂತಗಳು, ಸಮಾಜದಲ್ಲಿ ಇಂಥ ನಂಬಿಕೆಗಳು ಬೆಳೆದು ಬಂದಿರುವುದಕ್ಕೆ ಕಾರಣವನ್ನು ಸ್ಪಷ್ಟಪಡಿಸುತ್ತವೆ. ಉದಾ, ಹಾವು ಕಚ್ಚಿದಾಗ ಶ್ರದ್ಧಾಭಕ್ತಿಯಿಂದ ಪಂಚಪರಮೇಷ್ಠಿಗಳನ್ನು ಮರೆ ಹೊಕ್ಕು ವಿಷವನ್ನು ಹೋಗಲಾಡಿಸಿಕೊಂಡ ಘಟನೆಯೊಂದನ್ನು ಡಾ॥ ಚಿದಾನಂದಮೂರ್ತಿ ಅವರು ಉರಗ, ಪಿಶಾಚ, ಭೂತ, ಪಕ್ಷಿ, ನವಗ್ರಹಗಳು ಜೈನ ಮುನಿಗಳ ಮುಂದೆ ನಿಲ್ಲುತ್ತಿರಲಿಲ್ಲ. ತ್ರೈಕಾಲ್ಯಯೋಗಿಯೆನ್ನುವವರ ಬಗ್ಗೆ ಒಂದು ಶಾಸನವು ವಿವರಿಸುತ್ತಾ ಅವನ ತಪಶ್ಚರ್ಯದ ಸಾಮರ್ಥ್ಯವು ಎಷ್ಟಿತ್ತೆಂದರೆ ಬ್ರಹ್ಮರಾಕ್ಷಸವೊಂದು ಅವನ ಶಿಷ್ಯವಾಗಿತ್ತು. ಅವರ ಸ್ಮರಣಮಾತ್ರದಿಂದ ಮಹಾನವಗ್ರಹಗಳು ಬಿಟ್ಟು ಓಡುತ್ತಿದ್ದವೆಂದು ಹೇಳುತ್ತದೆ.[150]

ಬಳಕೆಯಲ್ಲಿರುವ ಯಂತ್ರೋಪಾಸನೆಗಳು, ವೈವಿಧ್ಯಮಯವಾಗಿವೆ ಹಾಗೂ ಮೂರ್ತಿ ಪೂಜೆಯಷ್ಟೇ ಯಂತ್ರಪೂಜೆಗಳಿಗೂ ಸಾಕಷ್ಟು ಪ್ರಾಮುಖ್ಯತೆ ನೀಡಿರುವುದು ಅಧ್ಯಯನ ಕಾಲದಲ್ಲಿ ನೆರವೇರಿಸಿದ ಕ್ಷೇತ್ರಕಾರ್ಯದಲ್ಲಿ ಕಂಡುಬಂದಿತು. ಯಂತ್ರಗಳಲ್ಲಿ ವೃಷಭ, ಅಜಿತ, ಶಂಭವ, ಅಭಿನಂದನ, ಸುಮತಿ, ಪದ್ಮಪ್ರಭ, ಸುಪಾರಿಶ್ವ, ಚಂದ್ರಪ್ರಭ ಮೊದಲಾದ ಇಪ್ಪತ್ತನಾಲ್ಕು ತೀರ್ಥಂಕರರಿಗೆ ಸಂಬಂಧಿಸಿದ ಇಪ್ಪತ್ತನಾಲ್ಕು ಮೂಲ ಬೀಜಾಕ್ಷರಮಂತ್ರಗಳು– ಅವುಗಳಿಗೆ ಸಂಬಂಧಿಸಿದ ಯಂತ್ರಗಳು ಮತ್ತು ಇವನ್ನು ಸಿದ್ಧಪಡಿಸಿಕೊಳ್ಳುವ ತಂತ್ರಗಳನ್ನೂ ಹೇಳಲಾಗಿದೆ. ಇವನ್ನು ಅನಾಹುತ ಯಂತ್ರಗಳೆಂದು ಕರೆಯುತ್ತಾರೆ.[151]

ವೃಷಭ ತೀರ್ಥಂಕರ ಅನಾಹುತ ಯಂತ್ರವನ್ನು ಬಂಗಾರ ಅಥವಾ ಬೆಳ್ಳಿಯ ತಗಡುಗಳಲ್ಲಿ ಬರೆದು ಪ್ರಾಣಪ್ರತಿಷ್ಠೆಯನ್ನು ಮಾಡಿ ವೃಷಭ ತೀರ್ಥಂಕರ ಬಿಂಬದ ಬುಡದಲ್ಲಿ ಸ್ಥಾಪಿಸಬೇಕು.

ಇದಕ್ಕೆ ಸಂಬಂಧಿಸಿದ ಅನಾಹುತ ಮಂತ್ರವನ್ನು 1008 ಬಾರಿ ಉಚ್ಚರಿಸಿ ಪುಷ್ಪವನ್ನು ಇಡಬೇಕು. ಮೂರು ದಿನಗಳವರೆಗೆ ಇದೇ ರೀತಿ ಶ್ರದ್ಧೆಯಿಂದ ಆರಾಧನೆ ಮಾಡಬೇಕು. ಇದರಿಂದ ಸರ್ವಜನರೂ ವಶ್ಯರಾಗುತ್ತಾರೆ ಎನ್ನಲಾಗಿದೆ. ಇದೇ ರೀತಿ ಅಜಿತ ತೀರ್ಥಂಕರ ಅನಾಹತ ಯಂತ್ರವನ್ನು ಆರಾಧಿಸಿದರೆ ಸರ್ವ ಕಾರ್ಯಸಿದ್ಧಿಯೂ, ಅನಂತ ತೀರ್ಥಂಕರ ಅನಾಹತಯಂತ್ರದಿಂದ ಅನಂತಸುಖ ಪ್ರಾಪ್ತಿಯೂ, ಶಾಂತಿ ತೀರ್ಥಂಕರ ಯಂತ್ರದಿಂದ ಸರ್ವಶಾಂತಿಯೂ, ಕುಂಥು ತೀರ್ಥಂಕರ ಯಂತ್ರದಿಂದ ವಿಷಜಂತುಗಳ ಬಾಧೆಯಿಂದ ಮುಕ್ತಿಯೂ ಸಾಧ್ಯವಾಗುತ್ತದೆಂದು ವಿವರಿಸಲಾಗಿದೆ.

ತೀರ್ಥಂಕರರ ಜೊತೆಗೆ, ಆಯಾ ತೀರ್ಥಂಕರರ ಯಕ್ಷ–ಯಕ್ಷಿಯರ ಜಾಪ್ಯ ಮಂತ್ರಗಳು, ಸಿದ್ಧಿಮಂತ್ರಗಳು–ಯಂತ್ರಗಳು ಕೂಡ ಹಸ್ತಪ್ರತಿಯ ರೂಪದಲ್ಲಿ ಕಂಡುಬರುತ್ತದೆ. ಇವುಗಳ ಹೊರಗಾಗಿ ಕೆಲವು ವಿಶಿಷ್ಟವಾದ ಯಂತ್ರಗಳನ್ನು ಆರಾಧಿಸಿ, ಲೌಕಿಕ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳುವ ಪದ್ಧತಿಯೂ ಬೆಳೆದುಬಂದಿದೆ. ತಾಮ್ರದ ತಗಡನ್ನು ವಿಶಿಷ್ಟ ಆಕಾರದಲ್ಲಿ ಬಗ್ಗಿಸಿ, ಅವುಗಳ ಮೇಲೆ ಯಂತ್ರವನ್ನು ರಚಿಸಿ, ಬೀಜಾಕ್ಷರಗಳನ್ನು ವಿನ್ಯಾಸಗೊಳಿಸಿದ ಇಂಥ ಯಂತ್ರಗಳು ಜೈನಮಠ, ಬಸದಿಗಳಲ್ಲಿ ಸಾರ್ವತ್ರಿಕವಾಗಿ ಕಂಡುಬರುತ್ತವೆ. ಗೃಹಸ್ಥರ ಮನೆಗಳಲ್ಲಿ ಇಂಥ ಯಂತ್ರಗಳಿದ್ದರೆ, ಅದನ್ನು ದೇವರ ಕೋಣೆಯಲ್ಲಿ ಇಟ್ಟು ಪೂಜಿಸುತ್ತಾರೆ. ವಿಧಿವತ್ತಾದ ಪೂಜೆಯು ಸಾಧ್ಯವಾಗದಿದ್ದರೆ ಯಂತ್ರವನ್ನು ಹತ್ತಿರದ ಬಸದಿಗಳಲ್ಲಿ ಇಟ್ಟು ಪೂಜೆ ನಡೆಯುವಂತೆ ನೋಡಿಕೊಳ್ಳುತ್ತಾರೆ. ಹೆಚ್ಚು ಬಳಕೆಯಲ್ಲಿದ್ದು, ಜನಪ್ರಿಯವಾಗಿರುವ ಕೆಲವು ಯಂತ್ರಗಳನ್ನು ಇಲ್ಲಿ ವಿವರಿಸಲಾಗಿದೆ.[152]

1. ಭಕ್ತಾಮರಯಂತ್ರವೃಷಭನಾಥ ರಾಜ್ಯ, ಕಳತ್ರ, ಪುತ್ರ, ಪ್ರಭುತ್ವ, ಪ್ರಾಪ್ತಿ, ಸರ್ವಜ್ಞತ್ವ ಪದವಿ, ಅಷ್ಟಗುಣ ಸಹಿತವಾದ ಸಿದ್ದತ್ವ ಪದವಿ.
2. ಕಲಿಕುಂಡಯಂತ್ರ ಪಾರ್ಶ್ವನಾಥ ಭೂತ, ಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ಸರ್ವಗ್ರಹಪೀಡೆ ನಿವಾರಣೆ, ರಾಜ್ಯವಶ್ಯ, ಜನವಶ್ಯ, ಶರೀರದ ರೋಗ ನಿವಾರಣೆ.
3. ಪಂಚಪರಮೇಷ್ಠಿಯಂತ್ರ ಪಾರ್ಶ್ವನಾಥ ಮತ್ತು ಪಂಚಪರಮೇಷ್ಠಿ ಸಂತಾನಭಾಗ್ಯ, ರಾಜ, ಜನ, ಸ್ತ್ರೀವಶ್ಯ, ಸರ್ವದುಃಖನಿವಾರಣೆ.
4. ಸಿದ್ಧಚಕ್ರಯಂತ್ರ ಪಂಚಪರಮೇಷ್ಠಿ ಮಹಾವೀರ, ನೇಮಿನಾಥ, ಬಾಹುಬಲಿ ಗ್ರಹಪೀಡೆ, ಭೂತ, ಪ್ರೇತ, ಪಿಶಾಚ, ಸರ್ವದುಃಖ, ರೋಗ ನಿವಾರಣೆ.

5. ನವದೇವತಾ ಯಂತ್ರ ನವದೇವತೆಗಳು ಸಂತಾನಭಾಗ್ಯ, ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ಸರ್ವರೋಗ ನಿವಾರಣೆ, ಶರೀರದಲ್ಲಿ ಶಕ್ತಿವೃದ್ಧಿ.

ಇಂಥ ಯಂತ್ರಗಳ ಆರಾಧನೆಯಿಂದ ಆರಾಧಕನಿಗೆ ಇಷ್ಟಫಲಪ್ರಾಪ್ತಿಯಾಗುವುದರ ಜೊತೆಗೆ ಲೋಕಶಾಂತಿ, ಅಕಾಲಮೃತ್ಯು, ರೋಗ, ಕ್ಷಾಮಡಾಮರಗಳ ಭಯವು ನಿವೃತ್ತಿಗೊಂಡು ಸಮಾಜ-ದೇಶದಲ್ಲಿ ಸುಭಿಕ್ಷವು ಉಂಟಾಗುತ್ತದೆಂದೂ ಭಾವಿಸುತ್ತಾರೆ. ರತ್ನಾಕರವರ್ಣಿಯು ದೇಶದಲ್ಲಿ ಭೂಕಂಪ, ಗ್ರಹಣ, ಕ್ಷಾಮ, ಗ್ರಹಗಳ ಪೀಡೆ, ವ್ಯಂತರ ದೇವತೆಗಳ ಭೀತಿ, ರೋಗದ ದುಃಖಗಳಿಂದ ಮುಕ್ತರಾಗಲು ಕಲಿಕುಂಡ ಮೊದಲಾದ ಯಂತ್ರಗಳ ಆರಾಧನೆಗಳನ್ನು ನಡೆಸಬೇಕೆಂದು ಹೇಳಿರುವ ಮಾತನ್ನು ಇಲ್ಲಿ ಉಲ್ಲೇಖಿಸಬಹುದು. ಭಕ್ತಾಮರಯಂತ್ರದ ಆರಾಧನೆಯು ಬಹುಜನರು ಅಪೇಕ್ಷಿಸುವ ಆರಾಧನೆಯಾಗಿದೆ. ಇದರ ಕರ್ತೃಗಳಾದ ಮಾನತುಂಗಾಚಾರ್ಯರು ಬಂಧನದಲ್ಲಿರುವಾಗ ವೃಷಭ ತೀರ್ಥಂಕರನನ್ನು ಸ್ತುತಿಸಿ, ಈ ಮಂತ್ರವನ್ನು ಸೃಷ್ಟಿಸಿದರೆಂದೂ ಕ್ರಮವಾಗಿ ನಲ್ವತ್ತೆಂಟು ಶ್ಲೋಕಗಳನ್ನು ರಚಿಸಿ, ಪಠಿಸುತ್ತಿದ್ದಂತೆ ಅವರನ್ನು ಬಂಧಿಸಿದ ಸಂಕೋಲೆಯು ತಾನಾಗಿ ಕಡಿದುಬಿದ್ದು, ಅವರ ಬಂಧನ ಮೋಕ್ಷವಾಯಿತೆಂದೂ ಹೇಳಲಾಗಿದೆ. ಅವುಗಳನ್ನು ಈ ನಲ್ವತ್ತೆಂಟು ಶ್ಲೋಕಗಳಿಗೆ 45 ಋದ್ಧಿ ಮಂತ್ರಗಳೂ 45 ರೀತಿಯ ಯಂತ್ರಗಳೂ ಅವನ್ನು ಆರಾಧಿಸುವ ವಿಧಾನಗಳನ್ನೂ ಇವುಗಳಿಂದ ದೊರೆಯುವ ಫಲಪ್ರಾಪ್ತಿಯನ್ನೂ ವಿವರಿಸಲಾಗಿದೆ. ಉದಾ: ಕೆಲವನ್ನು ಹೀಗೆ ವಿವರಿಸಬಹುದು.[153]

1. ಎರಡನೆಯ ಸ್ತೋತ್ರ, ಮಂತ್ರ, ಯಂತ್ರಗಳ ಆರಾಧನೆಯಲ್ಲಿ ಆರಾಧಕನು 21 ದಿವಸಗಳವರೆಗೆ ತ್ರಿಸಂಧ್ಯಾಕಾಲಗಳಲ್ಲಿ ಕರವಸ್ತ್ರವನ್ನುಟ್ಟುಕೊಂಡು ಪೂರ್ವಾಭಿಮುಖವಾಗಿ, ಏಕಾಂತ ಸ್ಥಾನದಲ್ಲಿ ದಂಡಾಸನದಲ್ಲಿ ಕುಳಿತುಕೊಂಡು ಶ್ಯಾಮವರ್ಣದ ಜಪಮಾಲೆಯಿಂದ ದಿನಂಪ್ರತಿ ಹತ್ತುಸಲ ಜಪವನ್ನು ಮಾಡಬೇಕು. ತಥಾದಿನಂ ಪ್ರತಿದಶಾಂಗ ಧೂಪದಿಂದ ಸಾವಿರ ಸಲ ಹೋಮ ಮಾಡಬೇಕು ಮತ್ತು ಸಾವಿರ ಮಂತ್ರಪುಷ್ಪವನ್ನು ಅರ್ಪಿಸಬೇಕು ಇದರಿಂದ ಶತ್ರುವಿನ ಉಚ್ಚಾಟನೆಯಾಗುತ್ತದೆ. ಸಕಲಸಂಪತ್ಸಮೃದ್ಧಿ ಲಕ್ಷ್ಮೀಲಾಭ ದೊರೆಯುವುದು ಎನ್ನಲಾಗಿದೆ. ಇದೇ ರೀತಿ ಇನ್ನೂ ಕೆಲವು ಮಂತ್ರಗಳ ಫಲವನ್ನು ಹೀಗೆ ವಿವರಿಸಲಾಗಿದೆ.
2. ಭಕ್ತಾಮರ ಮಂತ್ರ : ಏಳನೆಯ ಬಗೆಯ ಈ ಯಂತ್ರವನ್ನು ಕೊರಳೊಳಗೆ ಕಟ್ಟಿಕೊಂಡರೆ ಸರ್ಪವಿಷ ಪರಿಹಾರವಾಗುವುದು.

3. ಭಕ್ತಾಮರ ಮಂತ್ರ : ಎಂಟನೆಯ ಬಗೆಯ ಈ ಯಂತ್ರವನ್ನು ಹತ್ತಿರವಿಟ್ಟುಕೊಂಡರೆ ಶತ್ರುನಾಶ, ದುಃಖ ಪರಿಹಾರವಾಗುವುದು.

4. ಭಕ್ತಾಮರ ಮಂತ್ರ : ಹತ್ತನೆಯ ಬಗೆಯ ಈ ಯಂತ್ರವನ್ನು ಸಮೀಪವಿಟ್ಟುಕೊಂಡರೆ ಸಂಪೂರ್ಣ ಜ್ಞಾನವುಳ್ಳವನಾಗುತ್ತಾನೆ ವಾದದಲ್ಲಿ ಎಲ್ಲರನ್ನೂ ಗೆಲ್ಲುತ್ತಾನೆ. ದುಷ್ಟಮೃಗಗಳ ಬಾಧೆಯುಂಟಾಗುವುದಿಲ್ಲ.

5. ಭಕ್ತಾಮರ ಮಂತ್ರ : ಹದಿನಾಲ್ಕನೆಯ ಬಗೆಯ ಈ ಯಂತ್ರವನ್ನು ಸಮೀಪವಿಟ್ಟುಕೊಂಡರೆ ವ್ಯಾಧಿಭಯವುಂಟಾಗುವುದಿಲ್ಲ. ರಾಜ್ಯಲಕ್ಷ್ಮೀ ಸುಖವು ದೊರೆಯುತ್ತದೆ.

6. ಭಕ್ತಾಮರ ಮಂತ್ರ : ಹದಿನೆಂಟನೆಯ ಭಾಗದಲ್ಲಿನ ಈ ಯಂತ್ರವನ್ನು ಇಟ್ಟುಕೊಂಡರೆ ಶತ್ರುಸೈನ್ಯವು ಸ್ತಂಭವಾಗುತ್ತದೆ. ಯುದ್ಧಕ್ಕೆ ಬಂದವರು ಸೋತು ಹೋಗುತ್ತಾರೆ.

7. ಭಕ್ತಾಮರ ಮಂತ್ರ : ಇಪ್ಪತ್ತೆರಡನೆಯ ಈ ಯಂತ್ರವನ್ನು ಕೊರಳಲ್ಲಿ ಕಟ್ಟಿಕೊಂಡರೆ ಭೂತ, ಪಿಶಾಚಿ, ವ್ಯಂತರಗ್ರಹಗಳು ಬಿಟ್ಟುಹೋಗುತ್ತವೆ. ಸರ್ವ ದುಃಖವು ನಿವಾರಣೆಯಾಗುತ್ತದೆ.

8. ಭಕ್ತಾಮರ ಮಂತ್ರ : ಇಪ್ಪತ್ತೈದನೆಯ ಈ ಯಂತ್ರವನ್ನು ಸಮೀಪದಲ್ಲಿಟ್ಟುಕೊಂಡರೆ ಶತ್ರುಗಳ ಕೈಯಲ್ಲಿರುವ ಆಯುಧವು ಬಿದ್ದುಹೋಗುತ್ತದೆ. ಮರಣ ಭಯವಾಗುವುದಿಲ್ಲ.

9. ಭಕ್ತಾಮರ ಮಂತ್ರ : ಮೂವತ್ತಾರನೆಯ ಈ ಯಂತ್ರವನ್ನು ಸಮೀಪದಲ್ಲಿ ಇಟ್ಟುಕೊಂಡರೆ ಕಳ್ಳರು ನಾಶವಾಗುತ್ತಾರೆ. ಸರ್ವಕಾರ್ಯವೂ ಜಯವಾಗುತ್ತದೆ.

10. ಭಕ್ತಾಮರ ಮಂತ್ರ : ನಲವತ್ತೊಂದನೆಯ ಯಂತ್ರವನ್ನು ಸಮೀಪದಲ್ಲಿಟ್ಟುಕೊಂಡರೆ ರಾಜದ್ವಾರದಲ್ಲಿ ಜಯವಾಗುತ್ತದೆ. ಸರ್ಪದ ಭಯವು ನಾಶವಾಗುತ್ತದೆ.

ಎಂದು ಮುಂತಾಗಿ ವಿವರಗಳು ಕಂಡುಬರುತ್ತವೆ. ಹೀಗೆ 45 ಯಂತ್ರಗಳ ಮಹತ್ವವನ್ನು ವಿವರಿಸಲಾಗಿದೆ. ವಾಸ್ತವಿಕವಾಗಿ ಈ ಎಲ್ಲಾ ರೀತಿಯ ಯಂತ್ರೋಪಾಸನೆಗಳು ಜೈನರ ಶುದ್ಧ ಸಮ್ಯಗ್ ದೃಷ್ಟಿಗೆ ವಿರುದ್ಧವಾದುದು. ಸೂತ್ರಕೃತಾಂಗವೆಂಬ ಪ್ರಾಚೀನ ಗ್ರಂಥದಲ್ಲಿ ಶಕುನ, ತಂತ್ರ ಮಂತ್ರಗಳನ್ನು ಆಚರಿಸಕೂಡದು. ಅಲೌಕಿಕ ಶಕ್ತಿಯನ್ನು ಬಳಸಕೂಡದೆಂದು ಎಚ್ಚರಿಸಲಾಗಿದೆ. ಆದರೂ ಸಾಮಾಜಿಕವಾಗಿ ಜನರನ್ನು ತುಷ್ಟಿಗೊಳಿಸಲು ಹಾಗೂ ಅವರನ್ನು ನಿಯಂತ್ರಿಸಲು ಇಂಥ ಆರಾಧನೆಯ ಅಗತ್ಯವನ್ನು ಮನಗಂಡ ಜೈನಧರ್ಮವು ಇವನ್ನು ಸ್ವೀಕರಿಸಿತು. ಮಾತೃಪೂಜೆ, ಯಕ್ಷೀ ಆರಾಧನೆ, ಅದರ ಮುಂದುವರಿಕೆಯ ರೂಪವಾಗಿ ತಾಂತ್ರಿಕ ಆರಾಧನೆಗಳು ಜೈನಧರ್ಮದಲ್ಲಿ ಸ್ವೀಕೃತಗೊಂಡವು. ಅನೇಕ ಜೈನ ಭಟ್ಟಾರಕರು, ಮುನಿಗಳು, ಮಠಾಧಿಪತಿಗಳು ಇದಕ್ಕೆ ಕಾರಣರಾದರು ಎನ್ನುವ ಮಾತನ್ನು ಇಲ್ಲಿ ಸ್ಮರಿಸಬಹುದು. ಸಾರ್ವತ್ರಿಕವಾಗಿ ಇಂಥ ಆರಾಧನೆಗಳು ಕಾಣಿಸಿಕೊಂಡು ಮುಂದೆ ಕರ್ನಾಟಕದಲ್ಲಿ ತೀವ್ರವಾಗಿ ಪ್ರಚಾರಕ್ಕೆ ಬಂದಿತು.

ಅನಂತರ ಈ ಪ್ರದೇಶ ಅಥವಾ ಈ ಪ್ರದೇಶದಲ್ಲಿ ಆರಾಧನೆಯು ಇಲ್ಲಿಯ ಸಾಮಾಜಿಕ ಬದ್ಧತೆಗೆ ಹೊಂದಿಕೊಂಡು ಇನ್ನಷ್ಟು ವೇಗವಾಗಿ ಪ್ರಚಾರಗೊಂಡಿತು.

ಕೊನೆ ಟಿಪ್ಪಣಿಗಳು

1. ಶಿರೂರ ಬಿ.ವಿ., 1976, ಶ್ರವಣಬೆಳಗೊಳ; ರಾಜಕೀಯ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮಹತ್ವ, ಧಾರವಾಡ, ಪುಟ– ಪ್ರಸ್ತಾವನಾಭಾಗ.
2. ಶಾರದ ಕೆ., 2006, ಕರ್ನಾಟಕದಲ್ಲಿ ಜೈನಧರ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪೆ, ಶಾರದಾರವರು ಕರ್ನಾಟಕದಲ್ಲಿ ಭದ್ರಬಾಹುವಿಗೆ ಪೂರ್ವದಲ್ಲಿಯೇ ಜೈನಧರ್ಮ ಅಸ್ತಿತ್ವದಲ್ಲಿತ್ತೆಂದು ಆನುಷಂಗಿಕ ಆಕರಗಳನ್ನು ಭಾವಿಸಿ ಅಭಿಪ್ರಾಯಪಡುತ್ತಾರೆ. ಪುಟ 15
3. ಅಮಿತಗತಿ ಆಚಾರ್ಯರ ಕೃತಿಯ ಉಲ್ಲೇಖವಿರುವ ಅರುಣಕುಮಾರಿ ಅವರು –2017ರಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮೈಸೂರು ಜಿಲ್ಲೆಯಲ್ಲಿ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ ಪ್ರೌಢಪ್ರಬಂಧದ ಭಾಗವನ್ನು ಆಧರಿಸಿ ಉಲ್ಲೇಖಿಸಲಾಗಿದೆ.
4. ಮಿರ್ಜಿ ಅಣ್ಣಾರಾಯರು 1997, ಜೈನಧರ್ಮ, ಪುಟ 217–224.
5. ಪುಟ್ಟಸ್ವಾಮಿ ಡಿ., 1965, ಜೈನತತ್ವಸಾರ ಸಂಗ್ರಹ, ಪುಟ 100
6. ಚಂದ್ರಸಾಗರ ಶಾಸ್ತ್ರಿ (ಸಂ)., 1953, ಆಶಾಧರ ಸೂರ್ಯ, ಸಾಗರ ಧರ್ಮಾಮೃತಂ, ಪುಟ 27
7. ಸಮಂತಭದ್ರಾಚಾರ್ಯರ ರತ್ನಕರಂಡಕ ಶ್ರಾವಕಾಚಾರ ಕಾವ್ಯಭಾವ ಉಲ್ಲೇಖಿತವಾಗಿರುವ ಅರುಣಕುಮಾರಿ ಅವರು –2017ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಮೈಸೂರು ಜಿಲ್ಲೆಯಲ್ಲಿ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ ಪ್ರೌಢಪ್ರಬಂಧದ ಭಾಗವನ್ನು ಆಧರಿಸಿ ಉಲ್ಲೇಖಿಸಲಾಗಿದೆ.
8. ಅದೇ
9. ಪುಟ್ಟಸ್ವಾಮಿ, ಡಿ. 1965., ಪೂರ್ವೋಕ್ತ, ಪುಟ 100
10. ಅದೇ, ಪುಟ 100
11. ಅದೇ, ಪುಟ 100
12. ಅದೇ, ಪುಟ 100
13. ಚಂದ್ರಸಾಗರ ಶಾಸ್ತ್ರಿ, (ಸಂ)., 1953, ಪೂರ್ವೋಕ್ತ, ಪುಟ 100ರ ನಂತರ
14. ಅದೇ ಮತ್ತು ಎಸ್.ಡಿ. ಶೆಟ್ಟಿ, 2002, ತುಳುನಾಡಿನ ಜೈನಧರ್ಮ, ಪುಟ 119–121
15. ತುಕೋಳ್ ಟಿ.ಕೆ., 1985, ಜೈನಾಚಾರ, ಜೈನಪ್ರಾಕೃತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪುಟ–23, 51, 85, 99, 103, 106
16. ಮಿರ್ಜಿ ಅಣ್ಣಾರಾಯರು., 1997, ಪೂರ್ವೋಕ್ತ, ಪುಟ 451–455
17. ಅದೇ, ಪುಟ–451–55 ಮತ್ತು ಮಿರ್ಜಿ ಅಣ್ಣಾರಾಯರು (ಸಂ)., 1981, ಸಮಂತಭದ್ರರ ರತ್ನಕರಂಡಕ ಶ್ರಾವಕಾಚಾರ, ಪುಟ 131
18. ಶೆಟ್ಟಿ ಎಸ್.ಡಿ., 2002, ಪೂರ್ವೋಕ್ತ, ಪುಟ 121–122
19. ಮಿರ್ಜಿ ಅಣ್ಣಾರಾಯರು., 1981, ಪೂರ್ವೋಕ್ತ, ಪುಟ 131 ಮತ್ತು ನಂತರ
20. ತುಕೋಳ್ ಟಿ.ಕೆ., 1985 ಪೂರ್ವೋಕ್ತ, ಪುಟ 23,51, 85, 99, 103, 106
21. ಶೆಟ್ಟಿ ಎಸ್.ಡಿ., 2002, ಪೂರ್ವೋಕ್ತ, ಪುಟ 121–122
22. ತುಕೋಲ್ ಟಿ.ಕೆ., 1985, ಪೂರ್ವೋಕ್ತ ಪುಟ 51
23. ಮಿರ್ಜಿ ಅಣ್ಣಾರಾಯರು., 1981, ಪೂರ್ವೋಕ್ತ,

24. ಅದೇ ಮತ್ತು ಅಕ್ಷಯ್‌ಕುಮಾರ್., 1987, ಶ್ರಾವಕ ನಿತ್ಯಪೂಜಾ ಪಾಠ ಸಂಗ್ರಹ, ಪುಟ 38–42
25. ಅದೇ, ಪುಟ 38–42
26. ಅದೇ, ಪುಟ 38–42
27. ಅದೇ, ಪುಟ 38–42
28. ಜೈನಧರ್ಮೀಯ ಶ್ರಾವಕರು ದಿನನಿತ್ಯ ಮತ್ತು ಇತರ ಸಂದರ್ಭಗಳಲ್ಲಿ ಆಚರಿಸುವ ಪೂಜಾವಿಧಿವಿಧಾನಗಳನ್ನು ಅಕ್ಷಯ್‌ಕುಮಾರ್‌ರವರು ಸಂಪಾದಿಸಿರುವ ಶ್ರಾವಕರ ನಿತ್ಯ ಪೂಜಾಪಾಠ ಸಂಗ್ರಹ ಪುಸ್ತಕದ ಅಧ್ಯಯನ ಮತ್ತು ಸಾರಸಂಗ್ರಹ ರೂಪದ ಆಧಾರದ ಮೇಲೆ ದಾಖಲಿಸಲಾಗಿದೆ.
29. ಪುಟ್ಟಸ್ವಾಮಿ ಡಿ., 1965., ಪೂರ್ವೋಕ್ತ, ಪುಟ 3–32
30. ಚಂದ್ರಸಾಗರ ಶಾಸ್ತ್ರಿ,(ಸಂ)., 1953, ಪೂರ್ವೋಕ್ತ, ಪುಟ 50,51, 55 ಇತ್ಯಾದಿ
31. ಹಂಪಾ ನಾಗರಾಜಯ್ಯ, (ಸಂ)., 1975, ದಿವ್ಯಧ್ವನಿ, ಭಗವಾನ್ ಮಹಾವೀರರ, 2500ನೆಯ ನಿರ್ವಾಣ ಮಹೋತ್ಸವದ ಸ್ಮರಣ ಸಂಪುಟ, ಪುಟ 371
32. ಪಂಡಿತ ನಾಗರಾಜಯ್ಯ, (ಸಂ)., 1981, ಶಾಂತಿಹೋಮ, ಪುಟ 1–3
33. ಪದ್ಮನಾಭ ಶರ್ಮ ಡಿ., ಭುವನಹಳ್ಳಿ, 1969, ಜೈನಸಂಸ್ಕೃತಿಯ ಪರ್ವಗಳು, ಪುಟ 2
34. ಕರ್ನಾಟಕ ವಿಷಯ ವಿಶ್ವಕೋಶ., 1979, ಮೈಸೂರು ವಿಶ್ವವಿದ್ಯಾನಿಲಯ, ಪುಟ 1565–66
35. ಅದೇ, ಪುಟ 1565–66
36. ಅದೇ, ಪುಟ 1565–66
37. ಗುಂಡಪ್ಪ ಎಲ್., (ಸಂ), 1976, ಪಂಪನ ಆದಿಪುರಾಣ ಸಂಗ್ರಹ, ಪುಟ 4
38. ಸುಬ್ಬಯ್ಯಶಾಸ್ತ್ರಿ (ಸಂ)., (ವರ್ಷ ನಮೂದಾಗಿಲ್ಲ) ಷಟ್ಖಂಡಾಗಮ, ಪುಟ 15–42
39. ಪದ್ಮನಾಭ ಶರ್ಮ., ಭುವನಹಳ್ಳಿ 1969, ಪೂರ್ವೋಕ್ತ, ಪುಟ 11–12
40. ಅದೇ, ಪುಟ 13
41. ಅದೇ, ಪು 18
42. ಅದೇ, ಪುಟ 13–18
43. ಅದೇ, ಪುಟ 19
44. ಅನಂತರಾಜ ಇಂದ್ರ (ಸಂ)., (ವರ್ಷ ನಮೂದಾಗಿಲ್ಲ), ಜೈನರ ಪರ್ವ ಮತ್ತು ಹಬ್ಬಗಳು, ಪುಟ 18–20, ಎಸ್.ಡಿ. ಶೆಟ್ಟಿ, 1999, ಜೈನರ ಹಬ್ಬಗಳು, ಪುಟ 54–60
45. ಅದೇ, ಪುಟ 18–20
46. ಅದೇ, ಪುಟ 18–20
47. ಪದ್ಮನಾಭ ಶರ್ಮ., ಭುವನಹಳ್ಳಿ, 1969, ಪೂರ್ವೋಕ್ತ, ಪುಟ–29
48. ಅದೇ, ಪುಟ 29
49. ಅದೇ, ಪುಟ 29
50. ಅದೇ, ಪುಟ 29
51. ಅದೇ, ಪುಟ 29
52. ಅದೇ, ಪುಟ 29
53. ಅದೇ, ಪುಟ 29
54. ಅದೇ, ಪುಟ 29
55. ಅದೇ, ಪುಟ 29
56. ಶಾಂತಿರಾಜಶಾಸ್ತ್ರಿ., (ಸಂ)., 1988, ರತ್ನಾಕರ ವಿರಚಿತ ಶತಕತ್ರಯ, ಪುಟ 36
57. ಪ್ರಭಾಕರ್ ಎಸ್. (ಸಂ)., 1982, ತ್ಯಾಗಸಂದೇಶ, ಪುಟ 23 ಮತ್ತು ನಂತರದ್ದು

58. ಚನ್ನಪ್ಪಗೌಡ ಮತ್ತು ಎಸ್.ಡಿ. ಶೆಟ್ಟಿ (ಸಂ)., ರತ್ನಮಾನಸ, ಪುಟ 86–100, 1999, ಪಂಚಕಲ್ಯಾಣ ಕುರಿತಾದ ಮಾಹಿತಿಯನ್ನು ಈ ಪುಸ್ತಕದಿಂದ ಸಂಕಲಿಸಲಾಗಿದೆ.

59. ಜಯಚಂದ್ರ ಎಂ.ಎ., ಪ್ರಧಾನ ಸಂಪಾದಕ, 2018, ತ್ಯಾಗಶ್ರೀ, ಸ್ಮರಣ ಸಂಚಿಕೆ, ಶ್ರೀಕ್ಷೇತ್ರ ಶ್ರವಣಬೆಳಗೊಳ, ಪುಟ 68–72

60. ಚಿದಾನಂದಮೂರ್ತಿ ಎಂ., 1966, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ 100

61. ಕ್ಷೇತ್ರಕಾರ್ಯದಲ್ಲಿ ಮಂಡ್ಯ ಜಿಲ್ಲೆಯ ಪ್ರವಾಸ ಕೈಗೊಂಡಾಗ ವಿವಿಧ ಬಸದಿಗಳಲ್ಲಿ ಮತ್ತು ಪ್ರಮುಖ ಜೈನರ ಸಂದರ್ಶನದಲ್ಲಿ ಕಂಡುಕೊಂಡ ಮಾಹಿತಿಯನ್ನು ಇಲ್ಲಿ ಸಂಗ್ರಹಿಸಲಾಗಿದೆ.

62. ಹಂಪಾ ನಾಗರಾಜಯ್ಯ., 1976, ಯಕ್ಷ–ಯಕ್ಷಿಯರು, ಪುಟ 1–24, 27

63. ಅದೇ, ಪುಟ 24–54, 55–71

64. ಅದೇ, ಪುಟ 24–54, 55–71

65. ಹಂಪಾ ನಾಗರಾಜಯ್ಯ., 1976, ಕೆಲವು ನೋಂಪಿಯ ಕಥೆಗಳು, ಪ್ರಸ್ತಾವನೆ, I-XXIV

66. ಎಪಿಗ್ರಾಫಿಯ ಕರ್ನಾಟಿಕ., ಸಂಪುಟ– II ಶ್ರವಣಬೆಳಗೊಳ 76

67. ಹಂಪಾ ನಾಗರಾಜಯ್ಯ., 1976, ಪೂರ್ವೋಕ್ತ, ಪ್ರಸ್ತಾವನೆ

68. ಅದೇ ಪುಟ 8, 60, 79 ಇತ್ಯಾದಿ

69. ಕುಲಕರ್ಣಿ ಬಿ.ಎಸ್., (ಸಂ)., 1984, 20 ನೋಂಪಿಯ ಕಥೆಗಳು ಧಾರವಾಡ, ಪುಟ 51

70. ಹೆಚ್ಚಿನ ವಿವರಗಳನ್ನು ಕುಲಕರ್ಣಿ., 1984 ಮತ್ತು ಹಂ.ಪ. ನಾಗರಾಜಯ್ಯ 1976 ಗ್ರಂಥಗಳನ್ನು ಆಧರಿಸಿ ದಾಖಲಿಸಲಾಗಿದೆ.

71. ಈ ಅಧ್ಯಾಯದಲ್ಲಿ ಸಂಕಲಿಸಲಾಗಿರುವ ಜೈನ ಶ್ರಾವಕರ ಷೋಡಶ ಸಂಸ್ಕಾರಗಳನ್ನು ಈ ಕೆಳಗಿನ ಗ್ರಂಥಗಳನ್ನು ಅವಲೋಕಿಸಿ ಅಧ್ಯಯನ ಮಾಡಿ ಜೈನ ಸಮುದಾಯದ ವಿದ್ವಾಂಸರುಗಳೊಂದಿಗೆ ಮತ್ತು ಅರ್ಚಕರು, ಪುರೋಹಿತರು, ಬ್ರಾಹ್ಮಣರೊಂದಿಗೆ ಸಂದರ್ಶಿಸಿ, ಅವರ ಹೇಳಿಕೆಗಳನ್ನಾಧರಿಸಿ ಅಧ್ಯಯನದ ಸಾರಾಂಶವನ್ನು ದಾಖಲಿಸಲಾಗಿದೆ.

ಅ) ಪಂಡಿತ ನಾಗರಾಜಯ್ಯ., 1998, ಹೋಮವಿಧಿ ಮತ್ತು ಕ್ರಿಯಾದರ್ಪಣ, ಹೊಂಬುಜ ಜೈನಮಠ, ಹೊಂಬುಜ, ಪುಟ 17–19

ಆ) ಪಂಡಿತ ನಾಗರಾಜಯ್ಯ., 2000, ಹೋಮವಿಧಿ ಮತ್ತು ಕ್ರಿಯಾದರ್ಪಣ, 20–22

ಇ) ಭುವನಹಳ್ಳಿ ಡಿ. ಶ್ರೀಪತಿ ಜೋಯಿಸ್, (ಸಂ), 1997, ಷೋಡಶ ಕ್ರಿಯಾದರ್ಪಣಂ, ಶಿಶುಪಾಲ ಪಾರ್ಶ್ವನಾಥ ಶಾಸ್ತ್ರಿ 1934, ಉಪನಯನ ವಿಧಿ, ಪ್ರಕಾಶಕರು ಡಿ. ಕಮಲಾವತಿ ಅಮ್ಮ, ಯುಗಯಾತ್ರೀ ಭಾರತೀಯ ಸಂಸ್ಕೃತಿ, ಕೃತಿಗಳನ್ನು ಸಾರಾಂಶ ರಚನೆಗೆ ಆಧರಿಸಲಾಗಿದೆ. ಪುಟ 50–56

72. ಹಿಂದೂ ಸಂಸ್ಕಾರಗಳು, ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂಪುಟ–2, ಪುಟ 290–307

73. ಅಡಿಟಿಪ್ಪಣಿ 71ರಲ್ಲಿ ದಾಖಲಿಸಿರುವ ಗ್ರಂಥಗಳನ್ನು ಮತ್ತು ಅವುಗಳ ಪರಿವಿಡಿಗಳನ್ನು ಇದಕ್ಕೆ ಗಮನಿಸುವುದು.

74. ಶೆಟ್ಟಿ, ಎಸ್.ಡಿ., 2002, ಪೂರ್ವೋಕ್ತ, ಪುಟ 134–135

75. ಪಂಡಿತ ನಾಗರಾಜಯ್ಯ., (ಸಂ)., 1988, ಪೂರ್ವೋಕ್ತ, ಪುಟ XVI-XV& 54–55

76. ಅದೇ, ಪುಟ 56

77. ಅದೇ, ಪುಟ 56–57

78. ಅದೇ, ಪುಟ 57–60

79. ಅದೇ, ಪುಟ 60–62

80. ಅದೇ, ಪುಟ 62–63

81. ಅದೇ, ಪುಟ 64–65

82. ಭುವನಹಳ್ಳಿ ಡಿ. ಶ್ರೀಪತಿ ಜೋಯಿಸ್., 1997, ಪೂರ್ವೋಕ್ತ, ಪುಟ 72 ಮತ್ತು ಪಂಡಿತ್ ನಾಗರಾಜಯ್ಯ, 2002, ಪೂರ್ವೋಕ್ತ, ಪುಟ 80–81
83. ಶೆಟ್ಟಿ ಎಸ್.ಡಿ., 2002, ಪೂರ್ವೋಕ್ತ, ಪುಟ 139
84. ಅದೇ, ಪಂಡಿತ್ ನಾಗರಾಜಯ್ಯ., 2002, ಪೂರ್ವೋಕ್ತ, ಪುಟ 80–81
85. ಅದೇ, ಪುಟ 80–81
86. ಭುವನಹಳ್ಳಿ ಡಿ. ಶ್ರೀಪತಿ ಜೋಯಿಸ್., 1997, ಪೂರ್ವೋಕ್ತ, ಪುಟ 74–75
87. ಶೆಟ್ಟಿ ಎಸ್.ಡಿ. 2002, ಪೂರ್ವೋಕ್ತ, ಪುಟ–140 ಮತ್ತು ಪಂಡಿತ್ ನಾಗರಾಜಯ್ಯ, 2002, ಪೂರ್ವೋಕ್ತ, ಪುಟ 84
88. ಅದೇ, ಪುಟ 141
89. ಅದೇ ಪುಟ 141
90. ಪಂಡಿತ್ ನಾಗರಾಜಯ್ಯ., 2002, ಪೂರ್ವೋಕ್ತ, ಪುಟ 84–93
91. ಅದೇ ಪುಟ 84–93
92. ಅದೇ, ಪುಟ 94
93. ಪಂಡಿತ್ ನಾಗರಾಜಯ್ಯ., 1988, ಪೂರ್ವೋಕ್ತ, ಪುಟ 78–79
94. ಶೆಟ್ಟಿ ಎಸ್.ಡಿ., 2002, ಪೂರ್ವೋಕ್ತ, ಪುಟ 142–144
95. ಪಂಡಿತ್ ನಾಗರಾಜಯ್ಯ., 1988, ಪೂರ್ವೋಕ್ತ, ಪುಟ 79–90
96. ಪುಟ 79–90
97. ಪುಟ 79–90
98. ಪುಟ 79–90
99. ಶೆಟ್ಟಿ ಎಸ್.ಡಿ., 2002, ಪೂರ್ವೋಕ್ತ, ಪುಟ 143
100. ಪಂಡಿತ್ ನಾಗರಾಜಯ್ಯ., 1988, ಪೂರ್ವೋಕ್ತ, ಪುಟ 79–90
101. ಅದೇ, ಪುಟ 79–90
102. ಅದೇ, ಪುಟ 79–90
103. ಶಿರೂರ, ಬಿ.ವಿ., 1976, ಪೂರ್ವೋಕ್ತ, ಪುಟ 314
104. ಅದೇ, ಪುಟ 315
105. ತುಕೋಳ್,ಟಿ.ಕೆ., 2012 ಜೈನಧರ್ಮಕ್ಕೊಂದು ಕೈಪಿಡಿ, ಪದ್ಮಪ್ರಸಾದ್, ಎಸ್.ಪಿ. (ಅನು) ಜಸ್ಟೀಸ್ ಟಿ.ಕೆ.ತುಕೋಳ್, ಪುಟ 306–315
106. ಅದೇ, ಪುಟ 306–315
107. ಅದೇ, ಪುಟ 306–315
108. ಪಂಡಿತ್ ನಾಗರಾಜಯ್ಯ., 1988, ಪೂರ್ವೋಕ್ತ, ಪ್ರಸ್ತಾವನೆ, ಪುಟ 24–32
109. ಅದೇ ಪುಟ 24–32
110. ಅದೇ ಪುಟ 24–32
111. ಮಿರ್ಜಿ ಅಣ್ಣಾರಾಯರು., 1969, ಜೈನಧರ್ಮ, ಪುಟ 29
112. ಅದೇ, ಪುಟ 29
113. ಚಂದ್ರರಾಜೇಂದ್ರ ಶಾಸ್ತ್ರಿ ಎಸ್., (ಸಂ)., 1953, ಶ್ರೀಮದ್ದಾಶಾಸೂರಿ ವಿರಚಿತ ಸಗಾರ ಧರ್ಮಾಮೃತಂ, ಪುಟ 2–22
114. ಶೆಟ್ಟಿ ಎಸ್.ಡಿ. 2002, ಪೂರ್ವೋಕ್ತ, ಪುಟ 210

115. ಪಂಡಿತ್ ನಾಗರಾಜಯ್ಯ., 1988, ಪೂರ್ವೋಕ್ತ, ಪ್ರಸ್ತಾವನೆ, ಪುಟ 24–32 ಇಲ್ಲಿ ಚರ್ಚೆಯಾಗದ ಮುಂದಿನ ಭಾಗವನ್ನು ತಮ್ಮ ಮುಂದಿನ ಪರಿಷ್ಕರಣೆಯಲ್ಲಿ ಸೇರಿಸಿದ್ದಾರೆ. ಪಂಡಿತ್ ನಾಗರಾಜಯ್ಯ, 2000, ಪೂರ್ವೋಕ್ತ, ಪ್ರಸ್ತಾವನೆ, ಪುಟ 38–40

116. ಅದೇ, ಪುಟ 38–40

117. ಕ್ಷೇತ್ರಕಾರ್ಯದಲ್ಲಿ ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲು ತಾಲ್ಲೂಕಿನಲ್ಲಿರುವ ಶ್ರೀ ಪಾರ್ಶ್ವನಾಥ ಬಸದಿಯಲ್ಲಿರುವ ಸುಮಾರು 88 ವರ್ಷ ವಯಸ್ಸಾದ ಅರ್ಚಕರಾದ ಶ್ರೀ ಹೆಚ್.ಎಸ್. ಆದಿರಾಜಯ್ಯನವರು ನೀಡಿರುವ ಮಾಹಿತಿ ಆಧರಿಸಿದೆ.

118. ಕ್ಷೇತ್ರಕಾರ್ಯದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀರಂಗಪಟ್ಟಣದಲ್ಲಿರುವ ಶ್ರೀ ಆದಿನಾಥ ಬಸದಿಯಲ್ಲಿರುವ ಸುಮಾರು 45 ವರ್ಷ ವಯಸ್ಸಾದ ಅರ್ಚಕರಾದ ಪ್ರತಿಷ್ಠಾಚಾರ್ಯ ಸನ್ಮತಿಕುಮಾರ್‌ರವರು ನೀಡಿರುವ ಮಾಹಿತಿ ಆಧರಿಸಿದೆ.

119. ಅದೇ

120. ಅಕ್ಷಯ್‌ಕುಮಾರ್., 1987, ಪೂರ್ವೋಕ್ತ, ಪುಟ– 24–38 ಮತ್ತು ಅದೇ ಗ್ರಂಥದ ಕೊನೆಯಲ್ಲಿ ಅಡಕವಾಗಿರುವ ಪ್ರತಿಯೊಬ್ಬರೂ ಪಾಲಿಸಬೇಕಾದ 28 ವ್ರತಗಳ ಪಟ್ಟಿ, ಪುಟ 1–4

121. ಅದೇ, ಪುಟ 1–4

122. ಅದೇ, ಪುಟ 1–4

123. ಮಿರ್ಜಿ ಅಣ್ಣಾರಾಯರು., 1992, ಪೂರ್ವೋಕ್ತ, ಪುಟ 451–55

124. ಅಕ್ಷಯ್‌ಕುಮಾರ್., 1987, ಪೂರ್ವೋಕ್ತ, ಪುಟ 24–38

125. ಅದೇ, ಪುಟ 24–38

126. ಅದೇ, ಪುಟ 24–38

127. ಪಂಡಿತ್ ನಾಗರಾಜಯ್ಯ (ಸಂ)., ಸೂತಕವಿಧಿ, ಜಯಮತಿ ಅವ್ವೆ, ಕೀರಿಪಚ್ಚೆ, ವೈನಾಡು, 1988, ಪ್ರಸ್ತಾವನೆ, ಪುಟ 3–9

128. ಲೋಕನಾಥಶಾಸ್ತ್ರಿ, ವಿ., 1950, ಸೂತಕ ಗೋತ್ರ ವಿಚಾರ, ಮೂಡಬಿದರೆ, ಪುಟ 1–16

129. ಅದೇ, ಪುಟ 1–16

130. ಅದೇ, ಪುಟ 7 ಮತ್ತು ಪಂಡಿತ್ ನಾಗರಾಜಯ್ಯ, 1983, ಪೂರ್ವೋಕ್ತ, ಪುಟ 4

131. ಭುವನಹಳ್ಳಿ ಶ್ರೀ ಡಿ. ಶ್ರೀಪತಿ ಜೋಯಿಸ್., 1997, ಸೂತಕವಿಧಿ, ಪುಟ 1–32

132. ಅದೇ, ಪುಟ 1–32

133. ಪಂಡಿತ್ ನಾಗರಾಜಯ್ಯ., 1983, ಪೂರ್ವೋಕ್ತ, ಪುಟ 1–9

134. ಅದೇ, ಪುಟ 9–41

135. ಕ್ಷೇತ್ರಕಾರ್ಯದಲ್ಲಿ ಮಂಡ್ಯ ನಗರದ ಶ್ರೀ 1008 ಅನಂತನಾಥ ಜೈನ ಬಸದಿಯ ಅರ್ಚಕರಾದ ಆಚಾರ್ಯ ಶ್ರೀ ಅಶೋಕ್ ಶಾಸ್ತ್ರಿ ಅವರು ನೀಡಿದ ಮಾಹಿತಿಯನ್ನು ಆಧರಿಸಿದೆ.

136. ಅದೇ

137. ಭುವನಹಳ್ಳಿ ಶ್ರೀ ಡಿ. ಶ್ರೀಪತಿ ಜೋಯಿಸ್., 1997, ಪೂರ್ವೋಕ್ತ, ಪುಟ 1–32

138. ಅದೇ ಹಾಗೂ ಕ್ಷೇತ್ರಕಾರ್ಯದಲ್ಲಿ ಮೈಸೂರು ನಗರದ ಚಂದ್ರಗುಪ್ತ ರಸ್ತೆಯ ಎಂ.ಎಲ್. ಜೈನವಸತಿ ನಿಲಯದಲ್ಲಿನ ಬಸದಿಯ ಅರ್ಚಕರಾಗಿರುವ ಶ್ರೀ ವಜ್ರಕುಮಾರ್‌ರವರು ನೀಡಿದ ಮಾಹಿತಿಯಾಧರಿಸಿದೆ.

139. ಶ್ರೇಣಿಕ್ ಜೈನ್ ಅರ್ಚಕರು., ಶ್ರೀ ದಿಗಂಬರ, 1008, ಶಾಂತಿನಾಥ ಬಸದಿ ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು ಇವರು ನೀಡಿದ ಮಾಹಿತಿಯನ್ನಾಧರಿಸಿದೆ.

140. ಅದೇ

141. ಶೆಟ್ಟಿ ಎಸ್.ಡಿ., 2002, ಪೂರ್ವೋಕ್ತ, ಪುಟ 210

142. ಅದೇ, ಪುಟ 210

143. ಕ್ಷೇತ್ರಕಾರ್ಯದಲ್ಲಿ ಮಂಡ್ಯ ನಗರದ ಶ್ರೀ 1008 ಅನಂತನಾಥ ಜೈನ ಬಸದಿಯ ಅರ್ಚಕರಾದ ಆಚಾರ್ಯ ಶ್ರೀ ಅಶೋಕ್ ಶಾಸ್ತ್ರಿ ಅವರು ನೀಡಿದ ಮಾಹಿತಿಯನ್ನು ಆಧರಿಸಿದೆ.

144. ಅದೇ

145. ಸುಜಾತ ಎಸ್.ವಿ., (ಸಂ)., 2014, ಜೈನ ಆಚಾರ್ಯರು, ಮುನ್ನುಡಿ.

146. ಪಂಡಿತ ಭುಜಬಲಿ ಶಾಸ್ತ್ರಿ ಕೆ., ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ ಆದರ್ಶ ಜೈನ ಗ್ರಂಥಮಾಲೆ, ಪುಟ 26–35, 1937

147. ಅದೇ, ಪುಟ 26–35

148. ಶಿರೂರು ಬಿ.ವಿ., 1976, ಪೂರ್ವೋಕ್ತ,

149. ಶೆಟ್ಟಿ ಎಸ್.ಡಿ., 2002, ಪೂರ್ವೋಕ್ತ, ಪುಟ 227

150. ಚಿದಾನಂದಮೂರ್ತಿ., 1966, ಪೂರ್ವೋಕ್ತ, ಪುಟ 100

151. ಐಲಕ ಚಂದ್ರಸಾಗರಸ್ವಾಮಿ, (ಸಂ)., 1914, ಶ್ರೀ ಚತುರ್ವಿಂಶತಿ ತೀರ್ಥಂಕರರ ಅನಾಹತ ಯಂತ್ರವಿಧಿ ವರ್ಣನಂ, ಪುಟ 1–48

152. ಅದೇ, ಪುಟ 1–48

153. ಅದೇ, ಪುಟ 1–48

ಅಧ್ಯಾಯ – ಐದು

ಮಂಡ್ಯ ಜಿಲ್ಲೆಯ ಜೈನ ನೆಲೆಗಳು

ಮಂಡ್ಯ ಜಿಲ್ಲೆಯಲ್ಲಿ ಕಂಡುಬರುವ ಅತಿಪ್ರಾಚೀನ ಧರ್ಮಗಳಲ್ಲಿ ಜೈನಧರ್ಮವೂ ಒಂದಾಗಿದೆ. ತ್ರಿಕಾಲದಲ್ಲಿಯೂ ಅಬಾಧಿತವಾದ ಈ ಧರ್ಮದ ವಿಚಾರ ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳಲ್ಲಿ ಮುಂದುವರಿಯುತ್ತದೆಂಬ ಸತ್‌ಸಿದ್ಧಾಂತವನ್ನು ಹೊಂದಿದೆ. ಜೈನಪರಂಪರೆಯನ್ನು ಅನುಸರಿಸಿ ಹೇಳುವುದಾದರೆ 24 ತೀರ್ಥಂಕರರು ಈ ಧರ್ಮವನ್ನು ಹಲವು ಬಾರಿ ಜನ್ಮತಾಳಿ ಈ ಧರ್ಮವನ್ನು ಪುನರುಜ್ಜೀವನಗೊಳಿಸಿದ್ದಾರೆ. ಹೀಗಾಗಿ ಜೈನಧರ್ಮದಲ್ಲಿ ತೀರ್ಥಂಕರರ ಪರಿಕಲ್ಪನೆ ಪ್ರಾಚೀನವಾದುದು. ಇಂತಹ ಪ್ರಾಚೀನ ತೀರ್ಥಂಕರರ ಮತ್ತವರ ಯಕ್ಷ ಯಕ್ಷಿಯರ ಆರಾಧನೆಗಾಗಿ ಅನೇಕ ದೇವಾಲಯಗಳು ನಿರ್ಮಾಣವಾದವು. ಅವುಗಳನ್ನು ಬಸದಿಗಳು, ಚೈತ್ಯಾಲಯಗಳು ಎಂದೆಲ್ಲಾ ಕರೆಯಲಾಗುತ್ತದೆ. ಜೈನಧರ್ಮದಲ್ಲಿ ದಿಗಂಬರ, ಶ್ವೇತಾಂಬರ, ಚೈತ್ಯವಾಸಿ, ಯಾಪನೀಯ, ತಾರಣ, ತೇರಾಬೀಸ್ ಪಂಥಗಳು ಆನಂತರದ ಕಾಲಗಳಲ್ಲಿ ಪ್ರಚಲಿತಕ್ಕೆ ಬಂದವು. ಇವು ಸೈದ್ಧಾಂತಿಕವಾಗಿ ಒಂದೇ ಆದರೂ ಆಚರಣೆಯಲ್ಲಿ ಮತ್ತು ಸಂಪ್ರದಾಯಗಳಲ್ಲಿ ಭಿನ್ನವಾದವು. ಇವು ತತ್ವ, ಆಚಾರ, ವಿಚಾರ, ನಂಬುಗೆ, ಸಂಪ್ರದಾಯ, ಸಾಹಿತ್ಯ, ಆರಾಧನೆ ಕ್ರಮ ಮುಂತಾದವುಗಳಲ್ಲಿ ಭಿನ್ನವೆಂದು ತೋರಿದರೂ ಇವುಗಳೆಲ್ಲದರ ಅಂತಿಮ ಮಾರ್ಗ **'ಸರ್ವೇ ಜನೋ ಸುಖಿನೋ ಭವಂತು, ಸರ್ವೇ ಸಂತು ನಿರಾಭಯ'** ವೆಂಬಂತೆ ಸಕಲ ಜೀವರಾಶಿಗಳ ಮೋಕ್ಷವನ್ನು ಪ್ರತಿಪಾದಿಸುತ್ತವೆ. ಇವೆಲ್ಲವೂ ಧರ್ಮದ ವಾಸ್ತು ಕಲಾಪರಂಪರೆಯಲ್ಲಿ ತಮ್ಮನ್ನು ಉಳಿಸಿ, ಬೆಳೆಸಿಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.[1] ಭಾರತೀಯ ಜೈನ ಪರಂಪರೆಯಲ್ಲಿ ದೇವಾಲಯಗಳ ನಿರ್ಮಾಣವನ್ನು ಒಂದನೇ ತೀರ್ಥಂಕರ ಆದಿನಾಥನ ಪುತ್ರ ಭರತನ ಕಾಲದಲ್ಲಿಯೇ ಆರಂಭವಾಯಿತೆನ್ನುವ ತಾತ್ವಿಕ ಸಿದ್ಧಾಂತವೊಂದಿದೆ. ಆತನು ಕೈಲಾಸ ಪರ್ವತದಲ್ಲಿ ಚೈತ್ಯವನ್ನು ನಿರ್ಮಿಸಿದ ವಿಚಾರ ಜಿನಸೇನಾಚಾರ್ಯನ ಪೂರ್ವ ಪುರಾಣದಲ್ಲಿ ಉಲ್ಲೇಖವಾಗಿದೆ. ಅದೇ ರೀತಿ ಸುಮಾರು ಕ್ರಿ.ಪೂ. 6–7ನೇ ಶತಮಾನದಲ್ಲಿ ರಚಿತವಾಗಿರುವ ಪ್ರಾಕೃತ ಕೃತಿಗಳಲ್ಲಿ ಜೈನ ದೇವಾಲಯಗಳ ನಿರ್ಮಾಣ ಕುರಿತು ಕೆಲ ಉಲ್ಲೇಖಗಳಿವೆ. ಐತಿಹಾಸಿಕವಾಗಿ ಈ ಧರ್ಮಕ್ಕೆ ಸೇರಿದ ಅವಶೇಷಗಳು ಸಿಂಧೂ ನಾಗರಿಕತೆಯಲ್ಲಿ ದೊರಕಿವೆಯೆಂದು ಕೆಲ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಈ ಕುರಿತು ಸ್ಪಷ್ಟತೆ ಇಲ್ಲ. ಹೀಗಾಗಿ ಈ ಧಾರ್ಮಿಕ ಸ್ಮಾರಕಗಳ ನಿರ್ಮಾಣ ಪರಂಪರೆ ಪ್ರಾಚೀನ ಕಾಲಘಟ್ಟದಲ್ಲಿ ಯಾವಾಗ

ಪ್ರಾರಂಭವಾಯಿತೆಂದು ಸ್ಪಷ್ಟವಿಲ್ಲವಾದರೂ ಮೌರ್ಯ ಯುಗದಲ್ಲಿ ಜೈನ ಮಂದಿರಗಳ ರಚನೆ ಅಥವಾ ವಾಸ್ತು ರಚನೆ ಪ್ರಾರಂಭವಾಯಿತೆನ್ನುವುದಕ್ಕೆ ಸಾಕಷ್ಟು ಪುರಾವೆಗಳು ಕಂಡುಬರುತ್ತವೆ. ಅವರ ತರುವಾಯ ಆಡಳಿತದಲ್ಲಿ ತೊಡಗಿಸಿಕೊಂಡ ಅನೇಕ ರಾಜಮನೆತನಗಳು ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿವೆ.[2] ದಕ್ಷಿಣ ಕರ್ನಾಟಕಕ್ಕೆ ಜೈನಧರ್ಮ ಯಾವಾಗ ಪ್ರವೇಶ ಮಾಡಿತೆಂಬುದು ಇನ್ನೂ ಜಿಜ್ಞಾಸೆಯ ವಿಷಯವಾಗಿದೆ. ಜೈನ ಪರಂಪರೆಗಳ ಪ್ರಕಾರ ಚಂದ್ರಗುಪ್ತನು ತನ್ನ ಸಾಮ್ರಾಜ್ಯದಲ್ಲಿ ಉಂಟಾದ ಭೀಕರ ಕ್ಷಾಮವನ್ನು ಕಂಡು ಮನನೊಂದು ತನ್ನ ಮಗನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಜೈನ ಯತಿ ಭದ್ರಬಾಹುವಿನೊಂದಿಗೆ ದಕ್ಷಿಣಕ್ಕೆ ಹೊರಟು ಕರ್ನಾಟಕದ ಶ್ರವಣಬೆಳಗೊಳದಲ್ಲಿ ಬಂದು ನೆಲೆನಿಂತು ಆನಂತರ ಸಲ್ಲೇಖನ ವ್ರತವನ್ನಾಚರಿಸಿ ಜೀವನ್ಮುಕ್ತಿ ಪಡೆದನೆಂದು ಹೀಗೆ ಭದ್ರಬಾಹುವಿನೊಂದಿಗೆ ಬಂದ ಜೈನಮುನಿಗಳು ಶ್ರವಣಬೆಳಗೊಳದಲ್ಲಿ ಮತ್ತು ಕರ್ನಾಟಕದಲ್ಲಿ ಜೈನಪಂಥದ ಪ್ರಚಾರಕ್ಕೆ ಕಾರಣರಾದರೆಂದು ತಿಳಿದುಬರುತ್ತದೆ.[3] ಕನ್ನಡ ನಾಡಿನಲ್ಲಿ ಜೈನಧರ್ಮದ ಅಸ್ತಿತ್ವ ಕುರಿತು ಕ್ರಿಸ್ತಶಕಾರಂಭದಿಂದ ಈಚೆಗೆ ಜೈನ ಮಂದಿರಗಳು ನಿರ್ಮಾಣವಾಗಿರುವುದು ಕಂಡುಬರುತ್ತದೆ. ಕರ್ನಾಟಕದಲ್ಲಿ ಬನವಾಸಿ,[4] ಗುಡ್ನಾಪುರ,[5] ದೇವಗಿರಿ, ಹಲಸಿ, ತಲಕಾಡು[6] ಮುಂತಾದ ಕಡೆ ಇತಿಹಾಸ ಪ್ರಾರಂಭ ಕಾಲದ ಜೈನ ಮಂದಿರಗಳು ನಿರ್ಮಾಣವಾದರೂ ಅವು ಉಳಿದುಬಂದಿಲ್ಲ ಹಾಗಾಗಿ ಈ ಧರ್ಮದ ವಾಸ್ತು ಅಧ್ಯಯನ ಪ್ರಾರಂಭವಾಗುವುದು ಬಾದಾಮಿ ಚಾಲುಕ್ಯರ ಕಾಲಘಟ್ಟದಿಂದ. ಆದರೆ ಸಾಹಿತ್ಯ ಪರಂಪರೆಯಲ್ಲಿ ಅತೀ ಪ್ರಾಚೀನ ಮಂದಿರಗಳ ಉಲ್ಲೇಖ ಕಂಡುಬಂದರೂ ಅವು ಉಳಿದುಬಂದಿಲ್ಲದಿರುವುದರಿಂದ ಈ ಬಗ್ಗೆ ಹೆಚ್ಚಿನದೇನೂ ಹೇಳಲು ಸಾಧ್ಯವಿಲ್ಲ.

5.1. ಶಾಸನೋಕ್ತ ಜೈನ ಸ್ಮಾರಕಗಳ ಅವಲೋಕನ

ಮೈಸೂರು ಸಂಸ್ಥಾನದ ಪುರಾತತ್ವ ವರದಿಗಳನ್ನು ಅವಲೋಕಿಸಿದಾಗ ಅದರಲ್ಲಿ ನಾಗಮಂಗಲ ತಾಲ್ಲೂಕಿನ ಬೆಳ್ಳೂರಿನ ವಿಮಲನಾಥ ಬಸದಿ,[7] ಚೋಳಸಮುದ್ರದ ಬಸದಿಯ ಅವಶೇಷಗಳು,[8] ದಡಗದ[9] ಶಾಂತಿನಾಥ ಬಸದಿ, ಕಂಬದಹಳ್ಳಿಯ[10] ಪಂಚಕೂಟ ಬಸದಿ, ಶಾಂತಿನಾಥ ಬಸದಿ ಮತ್ತು ಬೋರೇಗುಡ್ಡದಲ್ಲಿನ ಬಸದಿಯನ್ನು, ಯಾಲದಹಳ್ಳಿಯ[11] ಬಸದಿಯ ಅವಶೇಷಗಳನ್ನು ಹಾಗೂ ಶ್ರೀರಂಗಪಟ್ಟಣದಲ್ಲಿನ ಆದಿನಾಥ ಬಸದಿ[12] ಮುಂತಾದವನ್ನು ದಾಖಲಿಸಿರುವುದು ಕಂಡುಬರುತ್ತದೆ. ಶಾಸನಗಳನ್ನು ಗಮನಿಸಿದಾಗ ಮಂಡ್ಯ ಜಿಲ್ಲೆಯ ಒಳ ಮತ್ತು ಹೊರಗಿನ ಬಸದಿಗಳು ಉಲ್ಲೇಖಿಸಲ್ಪಟ್ಟಿವೆ.

ಮಳವಳ್ಳಿ ತಾಲ್ಲೂಕಿನ ಎರಡು ಶಾಸನಗಳಲ್ಲಿ ತಲಕಾಡಿನ ಆನೆಬಸದಿಯನ್ನು ಮತ್ತೊಂದು ಶಾಸನದಲ್ಲಿ ದೋರಸಮುದ್ರದ ಬಸದಿಯೊಂದನ್ನು ಉಲ್ಲೇಖಿಸಿರುವುದನ್ನು ಕಾಣಬಹುದು.

ಮಂಡ್ಯ ಜಿಲ್ಲೆಯು ಗಂಗವಾಡಿ ತೊಂಬತ್ತಾರು ಸಾವಿರ ಮಂಡಲದ ಬಹುಮುಖ್ಯ ಅಂಗವಾಗಿದ್ದಿತು. ಹಾಗಾಗಿ ಮಣ್ಣೆ ಮತ್ತು ತಲಕಾಡನ್ನು ರಾಜಧಾನಿಯನ್ನಾಗಿ ಹೊಂದಿದ ಗಂಗರು ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಅತೀವವಾದ ಪ್ರಭಾವವನ್ನು ಬೀರಿದ್ದಾರೆ.[13] ಅಷ್ಟೇ ಅಲ್ಲದೆ ಇವರ ಕಾಲದಲ್ಲಿ ಅವರು ಅನುಸರಿಸಿದ ಜೈನಧರ್ಮದ ಅನೇಕ ಮಂದಿರಗಳು ಇಲ್ಲಿ ನಿರ್ಮಾಣವಾದವು. ಇವುಗಳಲ್ಲಿ ಬಹುತೇಕವಾದವುಗಳು ಬಸದಿಗಳು ಅಥವಾ ಜಿನಮಂದಿರಗಳು. ಕರ್ನಾಟಕದಲ್ಲೇ ಅತಿ ಹೆಚ್ಚು ಪ್ರಸಿದ್ಧವಾದ ಜೈನ ಕಾಶಿಯೆಂದು ಕರೆಸಿಕೊಂಡ ಶ್ರವಣಬೆಳಗೊಳದಷ್ಟೇ ಪ್ರಸಿದ್ಧವೂ, ಪ್ರಖ್ಯಾತವೂ ಆದ ಅರೆತಿಪ್ಪೂರು ಶ್ರವಣಬೆಳಗೊಳದ ಮಾದರಿಯನ್ನನುಸರಿಸಿರುವುದು ಇಲ್ಲಿನ ವಿಶೇಷ. ಇದಲ್ಲದೆ ಪಾಂಡವಪುರ ತಾಲ್ಲೂಕಿನಲ್ಲಿ ಕ್ಯಾತನಹಳ್ಳಿ ಗ್ರಾಮದಲ್ಲಿ ಅಥವಾ ಕಾವೇರಿ ನದಿಯ ಉತ್ತರ ಭಾಗದಲ್ಲಿ ಗೌತಮ ಕ್ಷೇತ್ರಕ್ಕೆ ಸಮೀಪದಲ್ಲಿ ದೊರೆತಿರುವ ಶಾಸನವನ್ನಾಧರಿಸಿ ಕ್ಯಾತನಹಳ್ಳಿಯಲ್ಲಿ ಜೈನಮಂದಿರವಿದ್ದುದಾಗಿ ತಿಳಿದುಬರುತ್ತದೆ. ಇದಲ್ಲದೆ ನಾಗಮಂಗಲದ ಕಂಬದಹಳ್ಳಿ, ದಡಗ, ಹಟ್ಟಣ, ಬೆಳ್ಳೂರು, ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲು, ಮುರುಕನಹಳ್ಳಿ ಕತ್ತರಿಗಟ್ಟ, ಬಸ್ತಿಹೊಸಕೋಟೆ, ಶ್ರೀರಂಗಪಟ್ಟಣ, ಮುಂತಾದ ಸ್ಥಳಗಳಲ್ಲಿ ಜೈನ ದೇವಾಲಯಗಳು ಇದ್ದುದಾಗಿ ತಿಳಿದುಬರುತ್ತದೆ.[14]

ಮಂಡ್ಯ ಜಿಲ್ಲೆಯ ತಾಲ್ಲೂಕುಗಳಲ್ಲಿ ನಾಗಮಂಗಲ ತಾಲ್ಲೂಕು ಅತಿಹೆಚ್ಚು ಜೈನ ಸ್ಮಾರಕಗಳನ್ನು ಹೊಂದಿದ್ದ ಸ್ಥಳವಾಗಿತ್ತೆಂಬುದು ತಿಳಿದುಬರುತ್ತದೆ. ಶ್ರವಣಬೆಳಗೊಳದಲ್ಲಿ ಜೈನಪರಂಪರೆ ಪ್ರಾರಂಭದೊಂದಿಗೆ ಗಂಗವಾಡಿಯಲ್ಲಿ ಮತ್ತು ಗಂಗವಾಡಿಯ ಬಹುತೇಕ ಎಲ್ಲ ಪ್ರದೇಶಗಳಲ್ಲಿ ಜೈನಪರಂಪರೆ ಪ್ರಾರಂಭವಾದುದನ್ನು ಗುರುತಿಸಬಹುದು. ಇದು ಆ ಕಾಲದ ಸಾಮಾಜಿಕ, ಆರ್ಥಿಕ ಬೆಳವಣಿಗೆಯ ಭಾಗವಾಗಿ ಕೂಡ ಇದ್ದುದು ಕಂಡುಬರುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಗಂಗರು ಮತ್ತು ಹೊಯ್ಸಳರ ಆಡಳಿತಾವಧಿಯ ಕಾಲಘಟ್ಟದಲ್ಲಿ ಅತಿಹೆಚ್ಚು ಜೈನಮಂದಿರಗಳು ನಿರ್ಮಾಣಗೊಂಡವು. ಅವುಗಳಲ್ಲಿ ಬಹುತೇಕವಾದವುಗಳು ಇಂದು ಉಳಿದುಬಂದಿಲ್ಲವಾದರೂ ಕೆಲವೊಂದು ಸ್ಥಳಗಳಲ್ಲಿ ಕೆಲವು ಜೈನಮಂದಿರಗಳು ಉಳಿದು ಬಂದಿದ್ದು, ಅವು ಇಂದಿಗೂ ಜೈನ ಧರ್ಮದ ಪ್ರಾಚೀನತೆಯನ್ನು ಮತ್ತು ಪರಂಪರೆಯನ್ನು ಸಾರುತ್ತಾ ನಮ್ಮೊಂದಿಗೆ ಪ್ರಾಚೀನ ಇತಿಹಾಸವನ್ನು ಅರ್ಥೈಸಲು ಸಹಕಾರಿಯಾಗಿವೆ.

ಇದಲ್ಲದೆ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಮತ್ತು ಜಿಲ್ಲೆಯಲ್ಲಿ ಕಂಡುಬರುವ ಬಸದಿಗಳನ್ನು ಈ ಕೆಳಗಿನಂತೆ ದಾಖಲಿಸಬಹುದು.

ದೇವರ ಹಳ್ಳಿಯ (ನಾಗಮಂಗಲ ತಾಲ್ಲೂಕು) ಶಾಸನವು, ನಿರ್ಗುಂದ ಯುವರಾಜನ ಮಗ ಪರಮಗೊಳ ಪೃಥ್ವಿ ನಿರ್ಗುಂದ ರಾಜನ ಮಡದಿ, ಸಗರವಂಶದ ಕುಂದಾಚ್ಚಿಯು ಶ್ರೀಪುರದಲ್ಲಿ **ಲೋಕತಿಲಕ ಜಿನಾಲಯ**ವನ್ನು ಕಟ್ಟಿಸಿದ್ದಾಗ ಈಕೆಯ ಪತಿಯಾದ ಪರಮಗೊಳ ನಿರ್ಗುಂದ ರಾಜನ ಬಿನ್ನಹದಂತೆ ಗಂಗರ ಪ್ರಭು ಶ್ರೀಪುರುಷನೂ (726–777) **ಲೋಕತಿಲಕ ಜಿನಗೃಹಕ್ಕೆ**[15] ಪೊನ್ನಳ್ಳಿಗ್ರಾಮವನ್ನು ತೆರಿಗೆ ರಹಿತವಾಗಿ ಬಿಟ್ಟುಕೊಟ್ಟನು ಎಂಬ ವಿವರವನ್ನು ಉಲ್ಲೇಖಿಸುತ್ತವೆ.

ಕಂಬದಹಳ್ಳಿಯ (ನಾಗಮಂಗಲ ತಾಲ್ಲೂಕು) 12ನೇ ಶತಮಾನಕ್ಕೆ ಸೇರಿದ ಶಾಂತೀಶ್ವರ ಬಸದಿಯ ಉತ್ತರ ಬಾಗಿಲಿನಲ್ಲಿ ಇರುವ ಶಾಸನವು ಗಂಗರಾಜನ ಮಗ ಬೊಪ್ಪದೇವನು ನಿರ್ಮಿಸಿದ **ಕನ್ನೆವಸದಿಯನ್ನು**[16] ದಾಖಲಿಸುತ್ತದೆ. ಕಂಬದಹಳ್ಳಿಯ ಶಾಂತೀಶ್ವರ (ನಾಗಮಂಗಲ ತಾಲ್ಲೂಕು) ಬಸದಿಯ ತೊಲೆಯೊಂದರಲ್ಲಿರುವ ಕ್ರಿ.ಶ. 1145ರ ಡಿಸೆಂಬರ್ 25ರ ಶಾಸನವು ಹೊಯ್ಸಳ ನರಸಿಂಹದೇವನು ಮೊದಲಿಹಳ್ಳಿಯನ್ನು **ಶಾಂತಿನಾಥ ದೇವರ**[17] ಪೂಜೆಗೆ, ಆಹಾರ ದಾನಕ್ಕಾಗಿ ಮರಿಯಾನೆ ದಂಡನಾಯಕ ಮತ್ತು ಭರತಮಯ್ಯ ದಂಡನಾಯಕರು ಬಸದಿಗೆ ದಾನಕೊಡುವ ಸಲುವಾಗಿ ದಾನ ನೀಡಿದುದನ್ನು ಉಲ್ಲೇಖಿಸುತ್ತದೆ. ಕಂಬದಹಳ್ಳಿಯ (ನಾಗಮಂಗಲ ತಾಲ್ಲೂಕು) ಶಾಂತೀಶ್ವರ ಪಾಳು ಬಸದಿ ರಂಗಮಂಟಪದ ತೊಲೆಯ ಮೇಲಿನ ಶಾಸನವು ಗಂಗವಂಶದ ನೇಮದಂಡೇಶ ಮತ್ತು ಮುದ್ದರಸಿಯ ಮಗನಾದ ಪಾರ್ಶ್ವದೇವನು **ಬಿಂಡಿಗನವಿಲೆಯ ಪಾರ್ಶ್ವಜಿನನ ಬಸದಿಯನ್ನು**[18] ಜೀರ್ಣೋದ್ಧಾರ ಮಾಡಿದ್ದನ್ನು ದಾಖಲಿಸುತ್ತದೆ.

ಕಂಬದಹಳ್ಳಿಯ (ನಾಗಮಂಗಲ ತಾಲ್ಲೂಕು) ಶಾಂತೀಶ್ವರ ಪಾಳುಬಸದಿಯ ರಂಗಮಂಟಪದ ಈಶಾನ್ಯಕಂಬ ಬೋದಿಗೆಯ ಪಟ್ಟಿಗೆಯ ಸುತ್ತಲೂ ಇರುವ ತೇದಿರಹಿತವಾದ ಶಾಸನವು ಲಕುಳೀಶ್ವರ ಸಿದ್ಧಾಂತ ಕುಟುಂಬದ ನಾಥ ಪಂಥೀಯರು ಆದ ಸಪ್ತಕೋಟಿ ಶ್ರೀ ರುದ್ರರು ಮೂಲ ಸಂಘ ದೇಶೀಯ ಗಣ ಪುಸ್ತಕಗಚ್ಛದ ಕಂಬದಹಳ್ಳಿ ತೀರ್ಥದ ಜಿನಾಲಯವೊಂದಕ್ಕೆ **ಏಕ್ಕೋಟಿ ಜಿನಾಲಯವೆಂದು**[19] ಹೆಸರಿಟ್ಟು ಪಂಚಭೇರಿ ಮಹಾಶಬ್ಧಗಳನ್ನು **ಏಕ್ಕೋಟಜಿನಾಲಯಕ್ಕೆ** ಕೊಟ್ಟರಲ್ಲದೆ ಅದನ್ನು ಅನಾದರಿಸಿದವರು ಶಿವದ್ರೋಹಿಗಳೆಂದು ದಾಖಲಿಸುತ್ತದೆ.

ಮತ್ಸಂದ್ರ (ನಾಗಮಂಗಲ ತಾಲ್ಲೂಕು) ಗ್ರಾಮದಿಂದ ವರದಿಯಾಗಿರುವ ಶಾಸನವು ಕಲುಕೆರೆಯ ನಾಡಾಳ್ವರು **ಚೊಕ್ಕಜಿನಾಲಯಕ್ಕೆ**[20] (ಬಸದಿ) ಮತ್ತಿಕೆರೆ ಗ್ರಾಮವನ್ನು ದಾನನೀಡಿ ಚತುಃಸೀಮೆಯ ನಿರ್ಧಾರಕ್ಕೆ ನೆಟ್ಟ ಕಲ್ಲು ಇದಾಗಿದೆ ಎಂದು ದಾಖಲಿಸುತ್ತದೆ.

ಎಲೆಕೊಪ್ಪ ಗ್ರಾಮದ (ನಾಗಮಂಗಲ ತಾಲ್ಲೂಕು) ಮಾಸ್ತಿಯಮ್ಮನ ಗುಡಿಯ ಬಾಗಿಲುವಾಡದಲ್ಲಿರುವ 11ನೇ ಶತಮಾನದ ಶಾಸನವು ಶಾಸನವೊಂದರ ಭಾಗವಾಗಿದೆ. ಇದು ಹೊಯ್ಸಳದೇವರು **ಮಣಿಯರಸನಕೆರೆಯ ಬಸದಿಗಾಗಿ**[21] ಬಿಟ್ಟ ದಾನವನ್ನು ಉಲ್ಲೇಖಿಸಲು ಹೊರಡಿಸಿದ ಕೀಲಕ ಸಂವತ್ಸರದ ಶಾಸನದ ಮೊದಲ ಸಾಲಾಗಿದೆ. ಇವುಗಳನ್ನು ಹೊರತುಪಡಿಸಿ ಶಾಸನವು ಮತ್ತಾವ ವಿವರಗಳನ್ನು ನೀಡುವುದಿಲ್ಲ.

ಸುಖದೆರೆಯಲ್ಲಿ (ನಾಗಮಂಗಲ ತಾಲ್ಲೂಕು) ದೊರೆತಿರುವ ತೇದಿರಹಿತ ಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲದಾಗಿದ್ದು, ಜಕ್ಕಶೆಟ್ಟಿ ಎಂಬುವವನು **ಸುಖದೆರೆಯಲ್ಲಿ ಬಸದಿ**[22] ಮತ್ತು ಕೆರೆಯನ್ನು ಕಟ್ಟಿಸಿ ಭೂದಾನಗಳನ್ನು ನೀಡಿ **'ತೆಪ್ಪಸುಂಕ'** ದೊಂದಿಗೆ ಕೆರೆಯನ್ನು ದಾನವಾಗಿ ನೀಡಿದ್ದನ್ನು ದಾಖಲಿಸುತ್ತದೆ.

ದಡಗ ಗ್ರಾಮದ (ನಾಗಮಂಗಲ ತಾಲ್ಲೂಕು) ಮನೆಯೊಂದರ ಮುಂದಿರುವ ಕಲ್ಲಿನ ಮೇಲಿರುವ ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನವು ಆತನ ದಂಡನಾಯಕರುಗಳಾಗಿದ್ದ ಮರಿಯಾನೆ ದಂಡನಾಯಕನು ಭರತಮಯ್ಯ ದಂಡನಾಯಕನು ತಮ್ಮ ಗುರುಗಳಾದ ಮೂಲಸಂಘದ ಮೇಘಚಂದ್ರಸಿದ್ಧಾಂತ ದೇವರಿಗೆ **ದಡಗನಕೆರೆಯ ಪಂಚಬಸದಿಯೊಳಗೆ**[23] ಬಾಹುಬಲಿಕೂಟವನ್ನು ಮಾಡಿಸಿ ಕೆಲವು ಭೂಮಿಗಳನ್ನು ಧಾರೆ ಎರೆದುಕೊಟ್ಟರೆಂದು ದಾಖಲಿಸುತ್ತದೆ.

ಕಸಲಗೆರೆ ಗ್ರಾಮದ (ನಾಗಮಂಗಲ ತಾಲ್ಲೂಕು) ಕಲ್ಲೇಶ್ವರ ದೇವಸ್ಥಾನದ ಬಲಗಡೆ ಇರುವ ಶಾಸನವು ಶಕವರ್ಷ 1064 ದುಂದುಬಿ ಸಂವತ್ಸರ ಶುದ್ಧ ಪಂಚಮಿ ಗುರುವಾರ ಉತ್ತರಾಯಣ ಸಂಕ್ರಮಣ ಕಾಲದಲ್ಲಿ ಅಂದರೆ ಕ್ರಿ.ಶ. 1142ರ ಡಿಸೆಂಬರ್ 24ರಂದು ದಾನಿಯಾದ ಕಲ್ಕುಣಿನಾಡಿನ ಒಡೆಯನಾಗಿದ್ದ ಸಾವಂತಸೋವೆಯ ನಾಯಕನು ಹೆಬ್ಬಿದಿರುವಾಡಿಯಲ್ಲಿ **ಉತ್ತುಂಗ ಚೈತ್ಯಾಲಯವನ್ನು**[24] ನಿರ್ಮಿಸಿ ಅದರಲ್ಲಿ ಶ್ರೀ ಪಾರ್ಶ್ವನಾಥಸ್ವಾಮಿಯ ವಿಗ್ರಹವನ್ನು ಸ್ಥಾಪಿಸಿ ದೇವರ ಅಂಗಭೋಗಕ್ಕೆ ಋಷಿಗಳ ಆಹಾರಕ್ಕೆ ಮತ್ತು ಬಸದಿಯ ಜೀರ್ಣೋದ್ಧಾರಕ್ಕಾಗಿ ತನ್ನ ಗುರುಗಳಾದ ಸೂರಸ್ತಗಣದ ಬ್ರಹ್ಮದೇವರ ಕಾಲುತೊಳೆದು ಧಾರಾಪೂರ್ವಕವಾಗಿ ಕೊಟ್ಟ ದತ್ತಿಯನ್ನು ಅದರ ಚತುಃಸೀಮಾ

ವಿವರವನ್ನು ದಾಖಲಿಸುತ್ತದೆ. ಇದೇ ಗ್ರಾಮದ ಮತ್ತೊಂದು ಜೈನಶಾಸನವು ಕಲ್ಕುಣಿನಾಡ ಬಸದಿಯನ್ನು **ಎಕ್ಕೋಟ ಜಿನಾಲಯವೆಂದು ಹೆಸರಿಸಲ್ಪಟ್ಟಿದ್ದನ್ನು** ದಾಖಲಿಸಿದ.[25]

ಬೋಗಾದಿಯ (ನಾಗಮಂಗಲ ತಾಲ್ಲೂಕು) ತ್ರುಟಿತ ಜಿನಾಲಯದ ಮುಂದೆ ಬಿದ್ದಿರುವ ಶಾಸನವು ಶಕ 1067 ರಕ್ತಾಕ್ಷಿ ಸಂವತ್ಸರದ ಪುಷ್ಯ ಅಮಾವಾಸ್ಯೆ ಉತ್ತರಾಯಣ ಸಂಕ್ರಮಣ ಸೂರ್ಯಗ್ರಹಣದಂದು ಅಂದರೆ ಕ್ರಿ.ಶ. 1144 ಡಿಸೆಂಬರ್ 26 ಮಂಗಳವಾರಕ್ಕೆ ಸರಿಹೊಂದುತ್ತದೆ. ಹೊಯ್ಸಳ ಒಂದನೇ ನರಸಿಂಹನು **ಪಾರ್ಶ್ವದೇವರ ಶ್ರೀಕರಣ ಜಿನಾಲಯಕ್ಕೆ**[26] ಭೊಗವತಿ ಎಂಬ ಗ್ರಾಮವನ್ನು ದಾನ ನೀಡಿದುದನ್ನು ಈ ಶಾಸನವು ತಿಳಿಸುತ್ತದೆ.

ಯಾಲದಹಳ್ಳಿಯಲ್ಲಿ (ನಾಗಮಂಗಲ ತಾಲ್ಲೂಕು) ಪಾಳುಬಿದ್ದ ಬಸದಿಯಲ್ಲಿರುವ ಕ್ರಿ.ಶ. 1145ರ ಶಾಸನವು ಹೊಯ್ಸಳ ಒಂದನೇ ನರಸಿಂಹನ ಕಾಲಕ್ಕೆ ಸೇರಿದುದಾಗಿದೆ. ಹೊಯ್ಸಳ ವಿಷ್ಣುವರ್ಧನನ ಮಹಾಪ್ರಧಾನ ದೇವರಾಜನು ಸೂರನಹಳ್ಳಿಯಲ್ಲಿ **ಪಾರ್ಶ್ವಜಿನನಿಗೆ ಬಸದಿಯನ್ನು**[27] ನಿರ್ಮಿಸಿ ಪಾರ್ಶ್ವನಾಥನ ಹೆಸರಿನಲ್ಲಿ ಆ ಹಳ್ಳಿಯನ್ನು 'ಪಾರ್ಶ್ವಪುರ' ವನ್ನಾಗಿ ಪರಿವರ್ತಿಸಿ ದಾನ ನೀಡಿದ ಸಂಗತಿಯನ್ನು ಈ ಶಾಸನ ತಿಳಿಸುತ್ತದೆ.

ಬೋಗಾದಿ (ನಾಗಮಂಗಲ ತಾಲ್ಲೂಕು) ಬಸದಿಯ ತಳಪಾದಿಯ ಕಲ್ಲೊಂದರ ಮೇಲಿರುವ ಶಾಸನ **ಶ್ರೀಕರಣ ಜಿನಾಲಯದ**[28] ಪಾರ್ಶ್ವದೇವರ ಪೂಜೆಗೆ ಭೊಗವತಿ ಗ್ರಾಮದ ಉಪಗ್ರಾಮವಾದ ಕಾಳಭೂವನಹಳ್ಳಿಯ ಎಲ್ಲಾ ಸುಂಕಗಳನ್ನು ಹೊಯ್ಸಳ ದೊರೆ 2ನೇ ಬಲ್ಲಾಳನ ಮಹಾಪ್ರಧಾನನ ಸರ್ವಾಧಿಕಾರಿ ಹೆಗ್ಗಡೆ ಬಲ್ಲಿಯನು ದಾನ ನೀಡಿದುದನ್ನು ದಾಖಲಿಸುತ್ತದೆ.

ಹಟ್ಟಣ (ನಾಗಮಂಗಲ ತಾಲ್ಲೂಕು) ಗ್ರಾಮದ ವೀರಭದ್ರಸ್ವಾಮಿ ದೇವಾಲಯದ ಒಳಗೆ ನಿಂತಿರುವ ಜೈನಶಾಸನವು ಶಕವರ್ಷ 1100 ಹೇವಿಳಂಬಿ ಸಂವತ್ಸರದ ಪುಷ್ಯಮಾಸ ಶುದ್ಧ ತೃತೀಯ ಭಾನುವಾರ ಉತ್ತರಾಯಣ ಸಂಕ್ರಾಂತಿಯ ದಿವಸ ದಾನಿಯಾದ ಹೊಯ್ಸಳ ಪಟ್ಟಣಸ್ವಾಮಿ ಸೋವಿಸೆಟ್ಟಿಯು ಬಾಳಚಂದ್ರ ದೇವರ ಶಿಷ್ಯನಾಗಿದ್ದು ಹಟ್ಟಣದಲ್ಲಿ ಸಾಗರಸಮಾನವಾದ ಮೂರು ಕೆರೆಗಳನ್ನು ಮತ್ತು **ಪಾರ್ಶ್ವಜಿನಾಲಯವನ್ನು**[29] ಕಟ್ಟಿಸಿ ಜಿನಪಾರ್ಶ್ವದೇವನ ಅಷ್ಟವಿಧಾರ್ಚನೆಗೆ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ಮುನಿಗಳ ಆಹಾರದಾನಕ್ಕೆ ಭೂಮಿಯನ್ನು ದಾನ ಮಾಡಿದ ವಿಚಾರವನ್ನು ಮತ್ತು ಸೋವಿಸೆಟ್ಟಿಯ ಪೂರ್ವಜರಲ್ಲಿ ಎಪಗಾಂಪ ಎಂಬುವನು ಮುದುಹೊಳಲಿನಲ್ಲಿ

ಬಸದಿ, ಕೆರೆ, ದೇವಸ್ಥಾನ ಮತ್ತು ಮಠವೊಂದನ್ನು ಕಟ್ಟಿಸಿದನು ಎಂಬ ವಿಚಾರವು ಸಹ ತಿಳಿದುಬರುತ್ತದೆ.

ಅಳೀಸಂದ್ರದ ಶಾಸನವು (ನಾಗಮಂಗಲ ತಾಲ್ಲೂಕು) ಶಾಸನವು ಹೊಯ್ಸಳ ಚಕ್ರವರ್ತಿ 3ನೇ ವೀರಬಲ್ಲಾಳನ ಕಾಲಕ್ಕೆ ಸಂದುದಾಗಿದೆ. ಇದು ಭರತಮಯ್ಯ ಮತ್ತು ಬಾಹುಬಲಿ ದಂಡನಾಯಕರು **ಅಣುವ ಸಮುದ್ರ ಗ್ರಾಮದಲ್ಲಿ ಕನ್ನೆ ವಸದಿಯನ್ನು**[30] ಕಟ್ಟಿಸಿ ಆ ಬಸದಿಗೆ ದಾನ ನೀಡಿದ ವಿಷಯವನ್ನು ದಾಖಲಿಸುತ್ತದೆ.

ಬೆಳ್ಳೂರಿನ (ನಾಗಮಂಗಲ ತಾಲ್ಲೂಕು) ವಿಮಲನಾಥ ಬಸದಿಯ ಪಡಸಾಲೆಯ ಗೋಡೆಯ ಮೇಲಿರುವ ಶಾಸನವು ಮೈಸೂರು ಅರಸ ದೇವರಾಜ ಒಡೆಯರ ಕಾಲದ್ದಾಗಿದ್ದು, ಶ್ರೀ ಲಕ್ಷ್ಮೀಸೇನಾ ಭಟ್ಟಾರಕರ ಅಣತಿಯ ಮೇರೆಗೆ ಮೈಸೂರಿನ ದೇವರಾಜ ಒಡೆಯರಿಂದ ದಾನವಾಗಿ ಪಡೆದ ಭೂಮಿಯಲ್ಲಿ ಹುಲಿಕಲ್ಲ ಪದುಮಣ್ಣಶೆಟ್ಟರ ಮಗ ದೊಡ್ಡಣ್ಣಶೆಟ್ಟರು ಅವರ ಪುತ್ರರಾದ ಸಕ್ಕರೆಯ ಶೆಟ್ಟರು ಈ **ವಿಮಲನಾಥ ದೇವಾಲಯವನ್ನು**[31] ಕಟ್ಟಿಸಿದರೆಂದು ದಾಖಲಿಸುತ್ತದೆ.

ಕ್ಯಾತನಹಳ್ಳಿಯ (ಪಾಂಡವಪುರ ತಾಲ್ಲೂಕು) 9 ಮತ್ತು 10ನೇ ಶತಮಾನಕ್ಕೆ ಸೇರಿದ ಶಾಸನವು ಶ್ರವಣಬೆಳಗೊಳ ಕ್ಷೇತ್ರದ ಎರಡು ಹೆಸರುಗಳನ್ನು ಅಂದರೆ ಶ್ರೀ ಕಳ್ಬಪ್ಪುತೀರ್ಥ ಸನಾತನ ಬೆಳ್ಗೊಳ ಎಂದು ಸ್ಥಳವನ್ನು ಉಲ್ಲೇಖಿಸುತ್ತದೆ. ಶಾಸನವು ಕೆಲ್ಲವಂಶದ ಚಾಗಿಪೆರ್ಮನಾಡಿಯ **ಕ್ಯಾತನಹಳ್ಳಿಯಲ್ಲಿ ಕಟ್ಟಿಸಿದ ಕೆಲ್ಲಬಸದಿಗೆ**[32] ಎರೆಯಣ್ಣ ಕೊಟ್ಟ ದತ್ತಿಯನ್ನು ಮೂಲಸಂಘ ದೇಶಿಯ ಗಣ ಪುಸ್ತಕಗಚ್ಛ ಕುಂದಕುಂದಾನ್ವಯದ ಶ್ರೀ ಕುಮಾರಸೇನ ಭಟಾರರು ಪಡೆದ ವಿಚಾರವನ್ನು ಉಲ್ಲೇಖಿಸುತ್ತದೆ. ಕ್ಯಾತನಹಳ್ಳಿ (ಪಾಂಡವಪುರ ತಾಲ್ಲೂಕು) ಕೋದಂಡರಾಮಸ್ವಾಮಿ ದೇವಸ್ಥಾನದ ಶಾಸನವು ಕ್ರಿ.ಶ. 1175 ನವೆಂಬರ್ 16ಕ್ಕೆ ಸಂದುದಾಗಿದೆ. ಈ ದಿನದಂದು ಶ್ರೀ ಯಾದವ ನಾರಾಯಣ ಚತುರ್ವೇದಿ ಮಂಗಲಕ್ಕೆ ಶ್ರೀಕರಣದ ಕಲಿಯಣ್ಣನು ನೀಡಿದ ಕೊಡುಗೆಯಲ್ಲಿ 50 ಕೊಳಗ ಗದ್ದೆಯನ್ನು ಎರೆಯಣ್ಣನು ಕೊಂಡುಕೊಂಡು ಅದನ್ನು **ಕೊಡೆಹಾಳ ಬಸದಿಗೆ**[33] ಸರ್ವಬಾಧಾ ಪರಿಹಾರವಾಗಿ ದಾನಮಾಡಿದುದನ್ನು ದಾಖಲಿಸುತ್ತದೆ.

ಬಸ್ತಿ ಹೊಸಕೋಟೆಯ (ಕೃಷ್ಣರಾಜಪೇಟೆ ತಾಲ್ಲೂಕು) ಶಾಸನವು ಹೊಯ್ಸಳ ವಿಷ್ಣುವರ್ಧನನ ದಂಡನಾಯಕ ಪುಣಿಸೋಮಯ್ಯನು **ಬಸದಿಯನ್ನು ನಿರ್ಮಿಸಿ**[34] ಅದರ ನಿರ್ವಹಣೆಗಾಗಿ ಮಾಣಿಕ್ಯದೊಡಲೂರು ಹಾಗೂ ಮಾವಿನಕೆರೆಗಳನ್ನು ಸರ್ವಬಾಧಾಪರಿಹಾರವಾಗಿ ದಾನ ನೀಡಿದುದನ್ನು

ದಾಖಲಿಸುತ್ತದೆ. ಬಸ್ತಿಹೊಸಕೋಟೆಯ ಇನ್ನೊಂದು ಶಾಸನವು ವೀರನರಸಿಂಹನ ಮಹಾಪ್ರಧಾನ ಹೆಗ್ಗಡೆ ಶಿವರಾಜನ ಸಮ್ಮತಿಯಿಂದ **ಮಾಣಿಕ್ಯದೊಡಲೂರಿನಲ್ಲಿ ಪುಣಿಸೊಮಯ್ಯನು ಕಟ್ಟಿಸಿದ ಜಿನಾಲಯಕ್ಕೆ**[35] ಅಲ್ಲಿನ ಆಶ್ರಮವಾಸಿಗಳ ಆಹಾರಕ್ಕೆ ಆ ಸೀಮೆಯ ನಾಲ್ಕು ಕಡೆಯ ಗ್ರಾಮಗಳ ಕೆಲವು ತೆರಿಗೆಗಳನ್ನು ದತ್ತಿಯಾಗಿ ಕೊಟ್ಟ ವಿಚಾರವು ತಿಳಿದುಬರುತ್ತದೆ.

ಶ್ರವಣನಹಳ್ಳಿ ಗ್ರಾಮದ (ಕೃಷ್ಣರಾಜಪೇಟೆ ತಾಲ್ಲೂಕು) ಪೂರ್ವದಿಕ್ಕಿನಲ್ಲಿ ಬಿದ್ದಿರುವ ಕಲ್ಲೊಂದರಲ್ಲಿರುವ ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನವು ಮಂದಗೆರೆಯ ವೃತ್ತಿಯೊಳಗೆ ಕಾವನಹಳ್ಳಿಯಲ್ಲಿ ಕೊಂಗಾಳ್ವವಂಶಕ್ಕೆ ಸೇರಿದ ಪೃಥ್ವಿಕೊಂಗಾಳ್ವನ ಮಗ ದುದ್ದಮಲ್ಲನು, ಆತನ ಅಕ್ಕ ವಿಷ್ಣುವರ್ಧನನ ಹಿರಿಯರಾಣಿಯಾದ ಚಂದಲದೇವಿಯು ತಮಗೆ ತಮ್ಮ ತಂದೆ ಬಳುವಳಿಯಾಗಿ ಕೊಟ್ಟಿದ್ದ **ಕಾವನಹಳ್ಳಿಯ ತ್ರಿಭುವನ ತಿಲಕ ತೀರ್ಥದಲ್ಲಿ ವೀರಕೊಂಗಾಳ್ವ ಜಿನಾಲಯವನ್ನು ನಿರ್ಮಿಸಿ**[36] ಬಸದಿಯ ಅಂಗಭೋಗಕ್ಕೆ ಋಷಿಗಳ ಆಹಾರ ದಾನಕ್ಕೆ, ಮೂಲಸಂಘ ದೇಶೀಯ ಗಣ ಪುಸ್ತಕಗಚ್ಛ ಕುಂದಕುಂದಾನ್ವಯದ ಶ್ರೀ ಮೇಘಚಂದ್ರ ತ್ರೈವಿದ್ಯಾದೇವರ ಶಿಷ್ಯರಾದ ಪ್ರಭಾಚಂದ್ರದೇವರ ಪಾದವನ್ನು ತೊಳೆದು ಧಾರಾಪೂರ್ವಕವಾಗಿ ದಾನ ಮಾಡಿದುದನ್ನು ತಿಳಿಸುತ್ತದೆ.

ಹೊಸಹೊಳಲು (ಕೃಷ್ಣರಾಜಪೇಟೆ ತಾಲ್ಲೂಕು) ಗ್ರಾಮದ ಪಾರ್ಶ್ವನಾಥ ಬಸದಿಯ ದಕ್ಷಿಣ ದಿಕ್ಕಿನಲ್ಲಿರುವ ಶಾಸನವು ಹೊಯ್ಸಳ ದೇವ ಭುಜಬಲ ವೀರಗಂಗ ಗಂಗವಾಡಿ 96000 ಭೂಪ್ರದೇಶವನ್ನು ಆಳುತ್ತಿದ್ದ ಕಾಲದಲ್ಲಿ ದೂರಸಮುದ್ರದ ಪಟ್ಟಣಸ್ವಾಮಿ ಪೊಯ್ಸಳಸೆಟ್ಟಿಯಾದ ನೊಳಂಬಿಸೆಟ್ಟಿಯ ಪತ್ನಿ ಚಾವುಂಡಾಡಿಯೆಂದು ಹೆಸರಾದ ದೇಮಿಕಬ್ಬೆ **ಕತ್ತರಿಗಟ್ಟದಲ್ಲಿ ತ್ರಿಕೂಟಜಿನಾಲಯವನ್ನು**[37] ನಿರ್ಮಿಸಿ ಅದಕ್ಕೆ ಅರುಹನಹಳ್ಳಿಯ ಭೂಮಿಯನ್ನು, ಎರಡು ಎಣ್ಣೆಯ ಗಾಣಗಳನ್ನು, ಎರಡು ಕೈದೋಟಗಳನ್ನು ಹಾಗೂ ಬೆಟ್ಟನಾಯಕನ ಮಗ ಕತ್ತರಿಗಟ್ಟದ ಗಂಡನಾರಾಯಣಸೆಟ್ಟಿಯೂ ತನಗೆ ನೀಡಿದ್ದ ಎರಡು ಕೆರೆಗಳನ್ನು ಅವುಗಳ ಕೆಳಗಿನ ಗದ್ದೆಯನ್ನು ತರಿಭೂಮಿಯನ್ನು ಮೂಲಸಂಘ ದೇಶೀಯ ಗಣ, ಪುಸ್ತಕಗಚ್ಛ, ಕುಂದಕುದಾನ್ವಯದ ಶುಭಚಂದ್ರಸಿದ್ಧಾಂತ ದೇವರಿಗೆ ಧಾರಾಪೂರ್ವಕವಾಗಿ ದಾನಕೊಟ್ಟ ವಿಚಾರವನ್ನು ದಾಖಲಿಸುತ್ತದೆ.

ಆಬಲವಾಡಿಯ (ಮದ್ದೂರು ತಾಲ್ಲೂಕು) ಶಾಸನವು ಹೊಯ್ಸಳ ಅರಸ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಹೆಗ್ಗಡೆ ಮಲ್ಲಿನಾಥನು ಒಂದು **ಬಸದಿಯನ್ನು (ಶ್ರೀಯಳ್ಳೀ ಬಸದಿ) ಕಟ್ಟಿಸಿ**[38] ಅದರ

ಪೂಜೆಗಾಗಿ ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ ಹನ್ನೆರಡು ಸಲಿಗೆಯ ಗದ್ದೆಯನ್ನು ಈ ವೆಚ್ಚಕ್ಕಾಗಿ ಯತಿಗಳಿಗೆ ಧಾರೆ ಎರೆದು ಕೊಟ್ಟರೆಂಬ ವಿವರವನ್ನು ದಾಖಲಿಸುತ್ತದೆ.

ಕನಕಗಿರಿ ಕ್ಷೇತ್ರವೆಂದು ಪ್ರಸಿದ್ಧವಾದ ಅರೆತಿಪ್ಪೂರಿನಲ್ಲಿ (ಮದ್ದೂರು ತಾಲ್ಲೂಕು) ದೊರೆತಿರುವ ಜೈನಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲಘಟ್ಟದ್ದಾಗಿದೆ. ಕ್ರಿ.ಶ. 1117ರ ಡಿಸೆಂಬರ್ 20ರಂದು ಹೊರಡಿಸಲಾದ ಈ ಶಾಸನವು ಮಹಾಸಾಮಂತಾಧಿಪತಿ ಗಂಗರಾಜನು ಗಂಗವಾಡಿಯನ್ನು ಚೋಳರ ಹಿಡಿತದಿಂದ ಮುಕ್ತಗೊಳಿಸುವಲ್ಲಿ ಮತ್ತು ಪಾಂಡ್ಯ ಇತರ ಚೋಳ ಸಾಮಂತರನೆಲ್ಲ ಗಂಗವಾಡಿಯಿಂದ ಹೊಡೆದೋಡಿಸಿ ಇಡೀ ಪ್ರದೇಶವನ್ನು ಹೊಯ್ಸಳನಾಡನ್ನಾಗಿ ಪರಿವರ್ತಿಸಿ ಅದನ್ನು ಚಕ್ರವರ್ತಿ ವಿಷ್ಣುವರ್ಧನನಿಗೆ ಸಮರ್ಪಿಸಿದಾಗ ಸಂಪ್ರೀತನಾದ ಚಕ್ರವರ್ತಿಯು ಗಂಗರಾಜನಿಗೆ ಮೆಚ್ಚಿದ್ದನ್ನು ಬೇಡಿಕೊಳ್ಳಲು ಆಜ್ಞಾಪಿಸುತ್ತಾನೆ. ಅದರಂತೆ ದಂಡನಾಯಕನು ಮಹಾಸಾಮಂತಾಧಿಪತಿಯು, ಶ್ರೀಮಾನ್ ಮಹಾಪ್ರಧಾನ ದಂಡನಾಯಕನು ಆದ ಗಂಗರಾಜನು ಅರೆತಿಪ್ಪೂರಿನ ಮಹತ್ವವನ್ನು ತಿಳಿಸಿ ತ್ರಿಪೂರ ವೃತ್ತಿಯನ್ನು ಬೇಡಿಕೊಂಡಿದ್ದನ್ನು ಮುಂದುವರೆದು ಗಂಗರಾಜನು ತಿಪ್ಪೂರ ವೃತ್ತಿಯನ್ನು ತನ್ನ ಗುರುಗಳಾದ ಮೂಲಸಂಘ, ಕಾನೂರು ಗಣ, ತಿಂತ್ರಿಣಿಗಚ್ಛದ ಶ್ರೀಮೇಘಚಂದ್ರ ಸಿದ್ಧಾಂತದೇವರಿಗೆ ಶಕವರ್ಷ 1039ರ ಹೇವಿಳಂಬಿ ಸಂವತ್ಸರದ ಉತ್ತರಾಯಣ ಸಂಕ್ರಮಣದಂದು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ.[39]

ಬಸ್ತಿಪುರ (ಶ್ರೀರಂಗಪಟ್ಟಣ ತಾಲ್ಲೂಕು) ಗ್ರಾಮದ ಸರಹದ್ದಿನ ಬಂಡೆಯ ಮೇಲಿರುವ ಶಾಸನವು ವಾಸುಪೂಜ್ಯದೇವರ ಶಿಷ್ಯರಾದ ಸಕಳಚಂದ್ರದೇವರ ಕಾಲಘಟ್ಟದಲ್ಲಿ ಕೂರಿಗೆ ಹಳ್ಳಿಯ ಪ್ರಭುಗಳು ಗವುಡಕುಲದ ಕೇತಗವುಡ, ರಾಮಗವುಡ, ಶಂಭುಗವುಡ ಮತ್ತು ಮಾದಿಗವುಡರುಗಳು **ಪಾರ್ಶ್ವನಾಥ ದೇವರ ಜಿನಾಲಯವನ್ನು ನಿರ್ಮಾಣ**[40] ಮಾಡಿ ಪಾರ್ಶ್ವನಾಥದೇವರ ಅಮೃತಪಡಿಗೆ ಹತ್ತುಕೊಳಗ ಬೆದ್ದಲು ಗದ್ದೆಯನ್ನು ದಾನಮಾಡಿದುದನ್ನು ದಾಖಲಿಸುತ್ತದೆ.

ಹೊಸ್ಕೂರಿನಲ್ಲಿ (ಮಳವಳ್ಳಿ ತಾಲ್ಲೂಕು) ದೊರೆತಿರುವ ಕ್ರಿ.ಶ. 1265ರ ಶಾಸನವು ಹೊಯ್ಸಳ ವೀರ ಬಲ್ಲಾಳನ ಕಾಲದಲ್ಲಿ **ತಲಕಾಡಿನ ಆನೆಬಸದಿಯ**[41] ಚೆಟ್ಟೊಡೆಯಯನಿಗೆ ಬಣ್ಣೆಹಳ್ಳಿಯ ಮಾರಗೌಡನ ಮಗ ಮಂಚೆಗೌಡ ಮಾದಿಗೌಡ ಮುಂತಾದವರು ನೀಡಿದ ವಿವರವನ್ನು ದಾಖಲಿಸುತ್ತದೆ. ಇದೇ ಊರಿನ ಕ್ರಿ.ಶ. 1313ರ ಶಾಸನವು ಹೊಯ್ಸಳ ವೀರ ಬಲ್ಲಾಳನು ಆಳ್ವಿಕೆ ಮಾಡುತ್ತಿದ್ದಾಗ **ತಲಕಾಡಿನ ಆನೆ ಬಸದಿಯ**[42] ಆದಿದೇವರ ಸೇವೆಗಾಗಿ ಏಳುಮುರ ಪಂಚಮಠಸ್ಥಾನಪತಿಗಳ ವಶದಲ್ಲಿದ್ದ

ಕೆಲವು ಭೂಮಿಗಳನ್ನು ಹೊಸಗೂರಿನ ಮಾರಿಗೌಡ, ಕಲಗೌಡ, ಉಳುವೆಗೌಡನ ಮಗ ರಯಗೌಡ ಹಾಗೂ ಮೊದಲಾದ ಗವುಡಗಳು ದತ್ತಿಯಾಗಿ ಕೊಟ್ಟು ಸೀಮಾಂತ ಹಾಕಿಸಿದ ಮಾಹಿತಿಯನ್ನು ದಾಖಲಿಸುತ್ತದೆ.

5.2. ಶ್ರೀರಂಗಪಟ್ಟಣ

ಮಂಡ್ಯ ಜಿಲ್ಲೆಯ ಹಾಗೂ ದಕ್ಷಿಣ ಕರ್ನಾಟಕದ ಪ್ರಾಚೀನ ನಗರಗಳಲ್ಲಿ ಶ್ರೀರಂಗಪಟ್ಟಣವೂ ಒಂದು. ಶ್ರೀರಂಗಪಟ್ಟಣದ ಪ್ರಾಚೀನತೆಯನ್ನು ಶಿಲಾಯುಗಗಳ ಕಾಲಕ್ಕೆ ಕೊಂಡ್ಯೂಯಲಾಗುತ್ತದೆ. ಆದರೂ ಶಿಲಾಯುಗದ ಮಾನವನ ಅವಶೇಷಗಳನ್ನು ಶ್ರೀರಂಗಪಟ್ಟಣ ದ್ವೀಪದಲ್ಲಿ ಗುರುತಿಸಲಾಗಿದೆಯೇ ಹೊರತು ಮತ್ತಾವ ಶೋಧನೆಗಳು ನಡೆದಿಲ್ಲ. ಹಾಗಾಗಿ ಶ್ರೀರಂಗಪಟ್ಟಣದ ಪ್ರಾಚೀನತೆಯನ್ನು ಗುರುತಿಸಲು ಮಾತ್ರ ಈ ಅಂಶವನ್ನು ಬಳಸಿಕೊಳ್ಳಬಹುದು.

ಪ್ರಾಚೀನ ಶಾಸನಗಳಲ್ಲಿ ಶ್ರೀರಾಂಪುರ, ತಿರುವರಂಗ ನಾರಾಯಣ ಚತುರ್ವೇದಿಮಂಗಲ, ಗೌತಮ ಕ್ಷೇತ್ರ, ಉಭಯಕಾವೇರಿ ಮಧ್ಯವರ್ತಿ ಎಂದೆಲ್ಲಾ ಉಲ್ಲೇಖಿತಗೊಂಡಿದೆ, ಸಂಸ್ಕೃತ ಕವಿ ಅವಿನಾಶೀಶ್ವರನು ಇದನ್ನು ಕರಿವರದರಾಜಪುರ ಎಂದು ಕರೆದಿದ್ದಾನೆ, ಚೋಳರು ಮತ್ತು ಹೊಯ್ಸಳರ ಕಾಲದಲ್ಲಿ ಪ್ರಮುಖ ಚತುರ್ವೇದಿ ಮಂಗಲವಾಗಿದ್ದು, ಕ್ರಿ. ಶ. 1495 ವಿಜಯನಗರ ಸಾಮ್ರಾಜ್ಯದ ಪ್ರಾಂತೀಯ ಕೇಂದ್ರವಾಗಿ, ಕ್ರಿ.ಶ. 1610 ರಿಂದ ಮೈಸೂರು ಸಂಸ್ಥಾನದ ರಾಜಧಾನಿಯಾಗಿ ಮುಂದೆ ಕ್ರಿ.ಶ 1799 ರಲ್ಲಿ ಟಿಪ್ಪುವಿನ ಅವನತಿಯೊಂದಿಗೆ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು.[43] ಕಾವೇರಿ ನದಿ ದಂಡೆಯಲ್ಲಿರುವ ಮೂರು ರಂಗನಾಥ ಕ್ಷೇತ್ರಗಳಲ್ಲಿ ಮೊದಲಿನದಲ್ಲದೇ ಪೂರ್ವದ ಶ್ರೀರಂಗನಿಂದ ಪಶ್ಚಿಮಕ್ಕಿರುವುದರಿಂದ ಕಾವೇರಿ ಪಶ್ಚಿಮ ಮುಖವಾಗಿ ಹರಿಯುವುದರಿಂದ ಪಶ್ಚಿಮ ರಂಗನಾಥಕ್ಷೇತ್ರ ಎಂದೂ ಹೆಸರುವಾಸಿಯಾಗಿದೆ.[44] ಶ್ರೀರಂಗಪಟ್ಟಣದ ದ್ವೀಪವು ಪೂರ್ವ ಪಶ್ಚಿಮವಾಗಿ ಸುಮಾರು 5 ಕಿ.ಮೀ. ಉದ್ದವಾಗಿದ್ದು, ಉತ್ತರ ದಕ್ಷಿಣವಾಗಿ ಸುಮಾರು 1.5 ಕಿ.ಮೀ ಅಗಲವಾಗಿದ್ದು, 5.5 ಚದುರ ಕಿ.ಮೀ ಗಳಿಗೂ ವಿಸ್ತಾರವಾದ ಪ್ರದೇಶದಲ್ಲಿ ಹರಡಿದೆ. ಈ ಸ್ಥಳದಲ್ಲಿ ಕಾವೇರಿಯನ್ನು ಉತ್ತರ ಕಾವೇರಿ, ದಕ್ಷಿಣ ಕಾವೇರಿ ಎಂದು ಗುರುತಿಸುತ್ತಾರೆ. ಶ್ರೀರಂಗಪಟ್ಟಣದಲ್ಲಿ ಉತ್ತರ ದಕ್ಷಿಣ ಕಾವೇರಿಗಳಾಗಿ ಬೇರ್ಪಡುವ ಮುನ್ನ ಕಾವೇರಿ ಪಶ್ಚಿಮವಾಹಿನಿಯಾಗಿ ಕೂಡ ಕವಲೊಡೆಯುತ್ತದೆ.[45] ಈ ಪಶ್ಚಿಮ ವಾಹಿನಿ ಕ್ಷೇತ್ರವು ಅತಿ ಪ್ರಾಚೀನ ಕಾಲದಿಂದಲೂ ಧಾರ್ಮಿಕ ಶ್ರದ್ಧಾಕೇಂದ್ರವಾಗಿದ್ದು ವಿಷ್ಣುವಿನ ಆರಾಧನೆಗೆ ಮತ್ತು ಪಿತೃಕಾರ್ಯಕ್ಕೆ ಹೆಸರುಗಳಿಸಿದೆ. ಅಲ್ಲದೇ ಪಶ್ಚಿಮರಂಗ ಕ್ಷೇತ್ರ ಮಹಾತ್ಮೆ ಕೃತಿಯ

ಕಥಾವಸ್ತುವೇ ಈ ಕ್ಷೇತ್ರದಲ್ಲಿ ವಿಷ್ಣು ನೆಲೆಸಿದ ಬಗೆಯನ್ನು ವಿವರಿಸುತ್ತದೆ.[46] ಅಂದ ಮೇಲೆ ಶ್ರೀರಂಗಪಟ್ಟಣವು ಅತಿ ಪ್ರಾಚೀನ ಕಾಲದಲ್ಲೇ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿತ್ತು.

ಐತಿಹಾಸಿಕವಾಗಿ ಈ ಸ್ಥಳದ ಪ್ರಾಚೀನತೆಯನ್ನು ಗುರುತಿಸುವುದು ಅವಶ್ಯಕ. ಪ್ರಕಟಿತ ಆಕರಗಳ ಆಧಾರದಲ್ಲಿ ಹೇಳುವುದಾದರೆ ತಿರುಮಲ್ಲಯ್ಯನೆಂಬ ಗಂಗ ದಂಡನಾಯಕನು ಈ ಸ್ಥಳದಲ್ಲಿ ತನ್ನ ಕುಲದೈವವಾದ ವೆಂಕಟರಮಣನಿಗೆ ಮತ್ತು ರಂಗನಾಥನಿಗೆ ಆಲಯಗಳನ್ನು ನಿರ್ಮಿಸಿ ಈ ಸ್ಥಳವನ್ನು ಶ್ರೀರಂಗಪುರ ಅಥವಾ ಪಟ್ಟಣ ಎಂದು ಕರೆದನೆಂದು ತಿಳಿದುಬರುತ್ತದೆ.[47] ಆದರೆ ಈ ಸ್ಥಳದ ಮಹಾತ್ಮೆಯನ್ನು ಗುರುತಿಸುವ ಕೆಲವು ಪ್ರಾಚೀನ ಕೃತಿಗಳಲ್ಲಿ ಹಂಬಿ ಎಂಬ ಸ್ತ್ರೀಯು ರಂಗನಾಥನ ಆಲಯವನ್ನು ನಿರ್ಮಿಸಿ ರಂಗನಾಥಪುರ ಎಂಬ ಹೆಸರಿಗೆ ಕಾರಣಳಾದಳೆಂದು ತಿಳಿಸುತ್ತದೆ.[48] ಕ್ರಿ. ಶ 894ರ ತಿರುಮಲ್ಲಯ್ಯನ ಶಾಸನವನ್ನು ಹುಡುಕಲು ಅಥವಾ ಪುನಃ ಗುರುತಿಸಲು ಸಾಧ್ಯವಾಗಿಲ್ಲವೆಂದು ಡಾ. ಲ. ನ. ಸ್ವಾಮಿಯವರು ಅಭಿಪ್ರಾಯ ಪಡುತ್ತಾರೆ.[49] ಆದರೆ ಈ ದೇವಾಲಯವು ಹೊಯ್ಸಳ ವಿಷ್ಣುವರ್ಧನ ಕಾಲಕ್ಕಾಗಲೇ ಇಲ್ಲಿ ಇದ್ದಿತ್ತೆಂದು ಹೇಳಬಹುದು. ಕ್ರಿ.ಶ. 1120ರಲ್ಲಿ ಹೊಯ್ಸಳರ ವಿಷ್ಣುವರ್ಧನನ ತಮ್ಮ ಉದಯಾದಿತ್ಯನು ಈ ದೇವಾಲಯವನ್ನು ಪುನರ್ ನಿರ್ಮಾಣ ಮಾಡಿ ತಿರುನಾರಾಯಣ ಚತುರ್ವೇದಿ ಮಂಗಲ ಎಂಬ ಗ್ರಾಮವನ್ನು ಪುನರ್ ನಾಮಕರಣ ಮಾಡಿ ದಾನ ನೀಡಿದುದು ತಿಳಿದುಬರುತ್ತದೆ. ಶಾಸನಗಳಲ್ಲಿ ಈ ಚತುರ್ವೇದಿ ಮಂಗಲಗಳನ್ನು ಅನಾದಿಯ ಚತುರ್ವೆದಿ ಮಂಗಲ ಎಂದು ಕರೆದಿರುವುದನ್ನು ಗಮನಿಸಿದಾಗ ಮತ್ತು ದೇವಾಲಯದ ನಿರ್ಮಾಣಕ್ಕೆ ಬಳಸಿರುವ ಶಿಲೆಯನ್ನು ಗಮನದಲ್ಲಿಟ್ಟುಕೊಂಡು ರಂಗನಾಥನ ಆಲಯವು ಹೊಯ್ಸಳರಿಗೆ ಪೂರ್ವದಲ್ಲೇ ನಿರ್ಮಾಣವಾಗಿರುವುದನ್ನು ತಳ್ಳಿಹಾಕಲು ಸಾಧ್ಯವಿಲ್ಲ.

ಹೊಯ್ಸಳರು ಸುಂದರವಾದ ಶಿಲ್ಪರಚನೆಗೆ ಹೆಸರುವಾಸಿಯಾಗಿದ್ದಾರೆ, ಆದರೆ ಶ್ರೀರಂಗಪಟ್ಟಣದ ಶ್ರೀರಂಗನು ಗಾತ್ರದಲ್ಲಿ ಹೊಯ್ಸಳರ ಪ್ರಮಾಣವನ್ನು ಮೀರಿರುವುದರಿಂದ ಮತ್ತು ಹೊಯ್ಸಳರ ರಚನೆಯು ಕುಸುರಿ ಕೆಲಸವನ್ನು ಹೊಂದಿರದ ಕಾರಣ ಈ ಆಲಯದ ರಚನೆಯನ್ನು ಅಥವಾ ಮೂರ್ತಿಯ ರಚನೆಯನ್ನು ಹೊಯ್ಸಳರ ಪೂರ್ವದ ಕಾಲಕ್ಕೆ ನಿಗದಿಪಡಿಸಬೇಕಾಗುತ್ತದೆ. ಹೊಯ್ಸಳರ ಪೂರ್ವದಲ್ಲಿ ಈ ಪ್ರದೇಶವು ಚೋಳರ ಅಧಿಪತ್ಯದಲ್ಲಿದ್ದಿತು. ಆದರೂ ಈ ಪ್ರದೇಶಗಳಲ್ಲಿ ಚೋಳರ ಕಾಲದ ವಿಷ್ಣುವಿನ ಆಲಯಗಳು ಅಲ್ಲಲ್ಲಿ ಕಂಡುಬರುತ್ತವೆ. ಜಿಲ್ಲೆಯ ಚತುರ್ವೇದಿ ಮಂಗಲಗಳ ರಚನೆಯ ಬಗ್ಗೆ ಪ್ರಸ್ತಾಪಿಸುವ ಡಾ. ಲ. ನ. ಸ್ವಾಮಿಯವರು[50] ಇಲ್ಲಿನ ಶಿಕ್ಷಣ ಪದ್ಧತಿ ಚೋಳರ

ಕಾಲದಲ್ಲಿ ಹೆಚ್ಚು ವ್ಯವಸ್ಥಿತವಾಗಿ ನಡೆದು ಸಾಂಸ್ಕೃತಿಕ ಮತ್ತು ಆರ್ಥಿಕ ಬೆಳವಣಿಗೆಗೆ ಕಾರಣವಾಗಿತ್ತೆಂದು ದಾಖಲಿಸುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ನಿಲುವಾಗಿಲಿನ ನರಸಿಂಹಸ್ವಾಮಿ, ತೊಂಡನೂರಿನ ಕೈಲಾಸೇಶ್ವರ, ಮದ್ದೂರಿನ ನರಸಿಂಹಸ್ವಾಮಿ ಮುಂತಾದ ಇತಿಹಾಸ ಪ್ರಸಿದ್ಧ ವೈಷ್ಣವ ಮತ್ತು ಶೈವ ಹಿನ್ನೆಲೆಯನ್ನು ಗಮನಿಸಿದಾಗ ಮತ್ತು ಶಿಲ್ಪಶಾಸ್ತ್ರದ ದೃಷ್ಟಿಯಿಂದಲೂ ಶ್ರೀರಂಗಪಟ್ಟಣದ ರಂಗನಾಥ ಹೊಯ್ಸಳರಿಗೆ ಪೂರ್ವದವನೆಂತಲೂ ಪ್ರಾಯಶಃ ಗಂಗರ ಕಾಲದ ರಚನೆ ಎಂದೇ ಸದ್ಯದ ಸಂಶೋಧನೆಗಳ ಆಧಾರದ ಮೇಲೆ ಖಚಿತಪಡಿಸಲಾಗುತ್ತದೆ.

ಶ್ರೀರಂಗಪಟ್ಟಣದ ಪ್ರಾಚೀನತೆಯನ್ನು ಪುರಾಣಗಳ ಕಾಲಕ್ಕೆ ಕೊಂಡ್ಯೊಯ್ಯಲು ಮತ್ತೊಂದು ಆಕಾರವನ್ನು ಇತಿಹಾಸಕಾರರು ನೀಡುತ್ತಾರೆ. ಕಾವೇರಿ ನದಿ ಪಾತ್ರದಲ್ಲಿ ಗೌತಮ ಕ್ಷೇತ್ರವೆಂಬ ಮತ್ತೊಂದು ಪುರಾಣ ಪ್ರಸಿದ್ಧ ಸ್ಥಳವಿದೆ. ಸ್ಥಾನಿಕ ಐತಿಹ್ಯದ ಪ್ರಕಾರ ಶ್ರೀಮನ್ ನಾರಾಯಣನನ್ನು ಇಲ್ಲಿ ಸಂಸ್ಥಾಪಿಸಿ ಪೂಜಿಸಿದವರು ಗೌತಮ ಮಹರ್ಷಿಗಳು ಹಾಗಾಗಿ ಗೌತಮ ಕ್ಷೇತ್ರ ಇಲ್ಲಿನ ಪ್ರಾಚೀನತೆಯನ್ನು ಮತ್ತು ಪರಂಪರೆಯನ್ನು ಸಾರುತ್ತದೆ.[51]

ಗೌತಮ ಮಹರ್ಷಿಗಳು ಭಕ್ತರು ತಮ್ಮ ಕಷ್ಟಕೋಟಲೆಗಳಿಂದ ನಿವೃತ್ತಿ ಪಡೆಯಲು ಸಹಾಯಕವಾಗುವಂತೆ ಪರಮಾತ್ಮನ ಸನ್ನಿಧಾನವನ್ನು ಭುವಿಯಲ್ಲಿ ಅಪೇಕ್ಷಿಸಿ ಈ ಕ್ಷೇತ್ರದಲ್ಲಿ ಬಹುದೀರ್ಘ ಕಾಲ ತಪಸ್ಸನ್ನು ಆಚರಿಸಿದರು. ಮಹರ್ಷಿಗಳ ಭಕ್ತಿಗೆ ಮೆಚ್ಚಿ ಶ್ರೀಮಾನ್ ನಾರಾಯಣನು ಶ್ರೀರಂಗಪಟ್ಟಣದಲ್ಲಿ ನೆಲೆಸಿದನು. ಅನಂತರ ಈ ಕ್ಷೇತ್ರ ಐತಿಹಾಸಿಕ ಕಾಲದಲ್ಲಿ ಹೆಚ್ಚು ಪ್ರಸಿದ್ಧಿಗೆ ಬಂದಿತ್ತೆಂದು ಪ್ರತೀತಿ ಇದೆ. ಇವೆಲ್ಲವನ್ನು ಗಮನಿಸಿದರೆ ಶ್ರೀರಂಗಪಟ್ಟಣ ಕೇವಲ ಟಿಪ್ಪುವಿನ ಹೋರಾಟದಿಂದ ಪ್ರಸಿದ್ಧಿಗೆ ಕಾರಣವಾಗಿರದೆ ಸುಮಾರು ಸಾವಿರ ವರ್ಷಗಳ ಸುದೀರ್ಘ ಇತಿಹಾಸವನ್ನು ತನ್ನದಾಗಿಸಿಕೊಂಡಿದೆ.

ಶ್ರೀರಂಗಪಟ್ಟಣದ ಪ್ರಾಚೀನ ಅವಶೇಷಗಳನ್ನು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಮತ್ತು ಕರ್ನಾಟಕ ಸರ್ಕಾರ ಪುರಾತತ್ವ ಇಲಾಖೆ ಸಂರಕ್ಷಿಸಿವೆ. ಸ್ಥಳದ ಇತಿಹಾಸ ಅರಿಯಲು ಹಲವಾರು ಆಕರ ಕೃತಿಗಳು ಲಭ್ಯವಿದೆ. ಅವುಗಳೆಂದರೆ ಬಿ.ಎಲ್. ರೈಸ್‌ರ[52] ಮತ್ತು ಹಯವದನರಾವ್‌ರವರ,[53] ಮೈಸೂರು *ಗೆಜೆಟಿಯರ್, Constance E Parsons* ರವರ ಶ್ರೀರಂಗಪಟ್ಟಣದ ಪ್ರವಾಸಿ ಕಥನ,[54] ಅಲ್ಲಿನ ಸ್ಮಾರಕಗಳ ವಿವರಣೆಯನ್ನು ನೀಡುತ್ತವೆ. 1935ರಲ್ಲಿ ಎಂ.ಎಚ್. ಕೃಷ್ಣರವರು ಶ್ರೀರಂಗಪಟ್ಟಣದಲ್ಲಿರುವ ಎಲ್ಲಾ ಸ್ಮಾರಕಗಳನ್ನು ಸರ್ವೇಕ್ಷಣ ಮಾಡಿ

ಅವುಗಳನ್ನು ಮೈಸೂರು ಪುರಾತತ್ವ ವರದಿಯಲ್ಲಿ ಪ್ರಕಟಿಸಿದ್ದಾರೆ. ಆನಂತರ ಇದೇ ಮಾಹಿತಿಯನ್ನು ಎ *ಗೈಡ್ ಟು ಶ್ರೀರಂಗಪಟ್ಟಣ* ಕೃತಿಯಾಗಿ ಪುನರ್ ಮುದ್ರಿಸಿದ್ದಾರೆ.[55] ಈ ಎಲ್ಲಾ ಕೃತಿಗಳ ಅವಲೋಕನದಿಂದ ಶ್ರೀರಂಗಪಟ್ಟಣದ ಇತಿಹಾಸ, ಟಿಪ್ಪು ಮತ್ತು ಹೈದರಾಲಿಯ ಸುತ್ತ ಕೇಂದ್ರಿಕೃತವಾಗಿರುವುದು ತಿಳಿದುಬರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಡಾ. ಲ. ನ. ಸ್ವಾಮಿಯವರ ಹಿಸ್ಟರಿ ಅಪ್ ಶ್ರೀರಂಗಪಟ್ಟಣ ಕೃತಿಯು ಶ್ರೀರಂಗಪಟ್ಟಣದ ಇತಿಹಾಸವನ್ನು ಮತ್ತು ಅದರ ಬೆಳವಣಿಗೆಯನ್ನು ಗಂಗರ ಕಾಲದಿಂದ ಆರಂಭಿಸಿ ಅದರ ಪತನದವರೆಗೆ ದಾಖಲಿಸಿದ್ದಾರೆ.[56] ಅಲ್ಲದೇ ಶ್ರೀರಂಗಪಟ್ಟಣದ ಎಲ್ಲಾ ಪ್ರಮುಖ ದೇವಾಲಯಗಳನ್ನು ಅಧ್ಯಯನ ಮಾಡಿ ಅವುಗಳ ಐತಿಹಾಸಿಕ ಮತ್ತು ವಾಸ್ತು ಪ್ರಬೇಧಗಳನ್ನು ದಾಖಲಿಸುತ್ತವೆ. ಡಾ. ಲ. ನ. ಸ್ವಾಮಿಯವರು ಆರ್. ಗೋಪಾಲ್‌ರವರೊಂದಿಗೆ ಸೇರಿ ಪ್ರಕಟಿಸಿರುವ ನಾಡಹಬ್ಬ ದಸರಾ ಕೃತಿಯಲ್ಲಿ ಶ್ರೀರಂಗಪಟ್ಟಣದ ವೈಭವದ ಕಾಲದಲ್ಲಿ ನಡೆಯುತ್ತಿದ್ದ ಮಹಾನವಮಿಯ ಅಥವಾ ದಸರ ಉತ್ಸವದ ವಿವರಣೆಯೂ ಕೂಡ ಲಭ್ಯವಿದೆ.[57] 1930ರ ನಂತರ ಶ್ರೀರಂಗಪಟ್ಟಣದ ಇತಿಹಾಸದ ಬಗೆಗೆ ಪ್ರಕಟವಾದ ಎರಡು ಕೈಪಿಡಿಗಳ ಅಧ್ಯಯನ ಇಲ್ಲಿ ಮಹತ್ವವಾಗುತ್ತದೆ.

ಶ್ರೀರಂಗಪಟ್ಟಣದ ಮಹತ್ವವನ್ನು ಮತ್ತು ಆ ಪ್ರದೇಶದ ಆಕರ್ಷಣೆಯನ್ನು ಇಲ್ಲಿನ ಸ್ಮಾರಕಗಳು ಇಮ್ಮಡಿಗೊಳಿಸುತ್ತವೆ. ಶ್ರೀರಂಗಪಟ್ಟಣದ ಅತಿಹೆಚ್ಚು ಜನಾಕರ್ಷಣೆಯ ಮತ್ತು ಪ್ರಮುಖ ಸ್ಥಳಗಳೆಂದರೆ ಶ್ರೀರಂಗನಾಥಸ್ವಾಮಿ ಆಲಯ, ಕರ್ನಲ್ ಬೇಲಿಯವರ ಕಾರಾಗೃಹ, ಟಿಪ್ಪುಸುಲ್ತಾನನ ಲಾಲ್‌ಮಹಾಲ್ ಅರಮನೆಯ ಅವಶೇಷಗಳು ಮತ್ತು ಟಿಪ್ಪುವಿನ ಮೃತಶರೀರ ದೊರೆತ ಸ್ಥಳ, ಜುಮ್ಮಮಸೀದಿ ಇವು ಶ್ರೀರಂಗಪಟ್ಟಣ ಕೋಟೆಯ ಒಳಭಾಗದಲ್ಲಿವೆ. ಶ್ರೀರಂಗಪಟ್ಟಣ ಕೋಟೆಯ ಹೊರಭಾಗದಲ್ಲಿರುವ ಧರಿಯದೌಲತ್ ಗುಂಬಸ್ಸ್, ಸಂಗಮ, ಗೋಸಾಯಿಘಾಟ್ ಪ್ರಮುಖವಾಗಿ ಪ್ರವಾಸಿಗರನ್ನು ಆಕರ್ಷಿಸುವ ತಾಣಗಳಾಗಿವೆ.[58] ಇವುಗಳಲ್ಲದೇ ಇನ್ನು ಹಲವಾರು ಐತಿಹಾಸಿಕ ಮತ್ತು ಪ್ರವಾಸಿ ಮಹತ್ವ ಸ್ಥಾನಗಳನ್ನು ಶ್ರೀರಂಗಪಟ್ಟಣದ ಸುತ್ತಮುತ್ತಲಿನಲ್ಲಿ ಗುರುತಿಸಬಹುದು. ಆದರೆ ಅವುಗಳನ್ನು ಪ್ರವಾಸಿಗರು ಸಂದರ್ಶಿಸುವುದು ವಿರಳ. ಅವುಗಳೆಂದರೆ ಯುದ್ಧಸ್ಮಾರಕ ಮತ್ತು 1799ರ ಯುದ್ಧದಲ್ಲಿ ಕೋಟೆಯನ್ನು ಮೊದಲು ಕೆಡವಿದ ಸ್ಥಳ, ಟಿಪ್ಪುಸುಲ್ತಾನರು ರಾಕೇಟುಗಳನ್ನು ಉಡಾಯಿಸುತ್ತಿದ್ದ ಸ್ಥಳ, ದೆಹಲಿ ಸೇತುವೆ, ಕೋಟೆಯ ಮಹಾದ್ವಾರಗಳು ಇನ್ಮನ್‌ರ ಕಾರಗೃಹ ಮದ್ದು ಗುಂಡುಗಳನ್ನು ಶೇಖರಿಸುತ್ತಿದ್ದ ಕೋಠಿಗಳು, ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯ, ಗಂಗಾಧರೇಶ್ವರ ದೇವಾಲಯ, ಕಾಳಮ್ಮ ದೇವಾಲಯ, ಅಂಕಾಳಮ್ಮನ ದೇವಾಲಯ, ಜ್ಯೋತಿರ್ ಮಹೇಶ್ವರ ದೇವಾಲಯ, ಮೂಡಲಬಾಗಿಲು ಆಂಜನೇಯ

ದೇವಾಲಯ, **ಆದೀಶ್ವರ ಬಸದಿ,** ಧ್ವಜಸ್ತಂಭ ಇವು ಕೋಟೆಯ ಒಳಗಿರುವ ಇತರ ಪ್ರಮುಖ ಸ್ಥಳಗಳು.[59] ಕೋಟೆಯ ಹೊರಗೆ ಕಂಡು ಬರುವ ಇತರ ಸ್ಮಾರಕಗಳೆಂದರೆ, ಬಂಗಾರದೊಡ್ಡಿ ನಾಲೆಗೆ ಮತ್ತು ಸಂಪರ್ಕಕ್ಕಾಗಿ ಕಟ್ಟಲಾಗಿರುವ ಮೇಲ್ ಸೇತುವೆ ಮತ್ತು ಕಾಲುವೆ, ಆಂಗ್ಲರ ಸಮಾಧಿ, ಪೂರ್ಣಯ್ಯನವರ ಮನೆ, ಸ್ಕಾಟ್ಸ್ ಬಂಗಲೆ ಕೋಟೆಯ ಅವಶೇಷಗಳು, ವೆಲ್ಲೆಸ್ಲಿ ಸೇತುವೆ, ಗಂಜಾಮ್‌ನಲ್ಲಿ ಕಂಡು ಬರುವ ರಣಗಂಭಗಳು ನಿಮಿಷಾಂಬ ದೇವಾಲಯ, ಹೈದರಾಲಿಯ ಅರಮನೆ ಪ್ರದೇಶ, ಚಿಕ್ಕ ಗೋಸಾಯಿಘಾಟ್ ಪ್ರಮುಖವಾಗುತ್ತವೆ. ಕಾವೇರಿ ನದಿಯನ್ನು ದಾಟಲು ಬಳಸಲಾಗುತ್ತಿದ್ದ ಅಂದರೆ ಉತ್ತರದ ನದಿಯನ್ನು ದಾಟಲು ಬಳಸುತ್ತಿದ್ದ ಕಡಹು ನಿಮಿಷಾಂಬ ಕಡಹು, ಚಂದಗಾಲು, ಗಡಪು, ಚಿಕ್ಕ ಗೋಸಾಯಿ ಘಾಟಿನ ಕಡಹು ಪ್ರಮುಖ ಸ್ಥಳಗಳು.

ಆದೀಶ್ವರ ಬಸದಿ: ಶ್ರೀರಂಗಪಟ್ಟಣದ ಜೈನಬಸದಿಯ ಊರ್ಧ್ವಮುಖ ವಾಸ್ತುಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಬಹುದು. ಅಧಿಷ್ಠಾನವು ಉಪಾನ, ಜಗತಿ, ಕುಮುದ ಮತ್ತು ವೇದಿಗಳನ್ನು ಹೊಂದಿದೆ. ವೇದಿಯ ಮೇಲೆ ನಿರ್ಮಾಣವಾಗಿರುವ ಭಿತ್ತಿ ಅತ್ಯಂತ ಸರಳವಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಶಿಖರವಿದೆ. ಇದು ಸಮಕಾಲೀನ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿದೆ. ಈ ಜಿನಾಲಯವು ಸಂಪೂರ್ಣವಾಗಿ ನವೀಕರಿಸಲ್ಪಟ್ಟಿದೆ. ಹೀಗಾಗಿ ಇದರ ಯಾವ ವಾಸ್ತು ಲಕ್ಷಣಗಳೂ ಪ್ರಾಚೀನ ವಾಸ್ತು ಲಕ್ಷಣಗಳನ್ನು ಹೋಲುವುದಿಲ್ಲ.

ಈ ದೇವಾಲಯದ ತಿರ್ಯಾಙ್ಮುಖ ವಾಸ್ತುಲಕ್ಷಣಗಳು ಹೀಗಿವೆ. ಇದು ಚೌಕಾಕಾರದ ಗರ್ಭಗೃಹವನ್ನು ಹೊಂದಿದ್ದು ಗರ್ಭಗೃಹದ ಮೂಲೆಗಳಲ್ಲಿ ಅರೆಗಂಬಗಳನ್ನು ಸರಳವಾದ ಭಿತ್ತಿ, ವಿತಾನವನ್ನು ದ್ವಾರಬಂಧವನ್ನು ಹೊಂದಿದೆ. ಲಲಾಟದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಜಿನಮೂರ್ತಿಯ ಉಬ್ಬುಶಿಲ್ಪವಿದೆ. ಗರ್ಭಗೃಹದಲ್ಲಿ ಆದಿನಾಥ ಮೂರ್ತಿಯಿದ್ದು ಆತನ ಎರಡು ಪಾರ್ಶ್ವಗಳಲ್ಲಿ ಯಕ್ಷ ಯಕ್ಷಿಯರು ಗೋಮುಖ ಯಕ್ಷ, ಚಕ್ರೇಶ್ವರಿ ಯಕ್ಷಿಯ ವಿಗ್ರಹಗಳಿವೆ.[60] ಈ ವಿಗ್ರಹಗಳನ್ನು ಶಿಲ್ಪಶೈಲಿಯ ಲಕ್ಷಣದ ಆಧಾರದ ಮೇಲೆ 9ನೇ ಶತಮಾನದ್ದವೆಂದು ಗುರುತಿಸಬಹುದು. ಅಂತರಾಳದಲ್ಲಿ 24ತೀರ್ಥಂಕರರ ಶಿಲ್ಪಗಳಿವೆ. ಅಂತರಾಳ ಮಂಟಪದ ಭಿತ್ತಿಗಳು ವಿತಾನದ ವಾಸ್ತು ಲಕ್ಷಣಗಳು, ಗರ್ಭಗೃಹವನ್ನನುಕರಿಸಿವೆ.

ನವರಂಗವು ಚೌಕಾಕಾರವಾಗಿದ್ದು ಮಧ್ಯದಲ್ಲಿ 4 ಬ್ರಹ್ಮಕಾಂತ ಶೈಲಿಯ ಸ್ತಂಭಗಳಿಂದ ರಚನೆಗೊಂಡಿವೆ. ಕಂಬಗಳಲ್ಲಿ ಹೆಚ್ಚಿನ ವಿಶೇಷತೆಯೇನೂ ಇಲ್ಲ. ಆದರೆ ಪೀಠ, ಪಾದ, ದಂಡ, ಫಲಕ

ಮತ್ತು ಬೋದಿಗೆಗಳನ್ನು ಹೊಂದಿವೆ. ನವರಂಗದ ಗೋಡೆಯಲ್ಲಿ ಹನ್ನೆರಡು ಅರೆಗಂಬಗಳಿದ್ದು ಭಿತ್ತಿ ಮತ್ತು ವಿತಾನ ಮತ್ತು ದ್ವಾರಬಂಧ ಅತ್ಯಂತ ಸರಳ ಶೈಲಿಯಲ್ಲಿವೆ. ನವರಂಗದಲ್ಲಿ ಅಂತರಾಳವನ್ನು ಪ್ರವೇಶಿಸುವ ಎಡ ಮತ್ತು ಬಲಪಾರ್ಶ್ವಗಳಲ್ಲಿ ಧರಣೇಂದ್ರ ಯಕ್ಷ ಮತ್ತು ಪದ್ಮಾವತಿ ಯಕ್ಷಿಯರ ಸುಂದರವಾದ ಮೂರ್ತಿಗಳಿವೆ. ಇವು ಸುಮಾರು ಒಂದೂವರೆ ಮೀಟರ್ ಎತ್ತರವಾಗಿದ್ದು ಪೀಠ ಮತ್ತು ಪ್ರಭಾವಳಿಯನ್ನು ಹೊಂದಿವೆ. ಧರಣೇಂದ್ರ ಯಕ್ಷನು 5 ನಾಗಗಳ ಹೆಡೆಯ ನೆರಳಿನಲ್ಲಿ ಕುಳಿತಿರುವಂತೆ ಕೆತ್ತಲಾಗಿದೆ. ಈತನು ನಾಲ್ಕು ಭುಜಗಳನ್ನು ಮತ್ತು ಕೈಗಳನ್ನು ಹೊಂದಿದ್ದಾನೆ. ಪದ್ಮಾವತಿ ಯಕ್ಷಿಯ ವಿಗ್ರಹವು ಸುಮಾರು 110 ಸೆ.ಮೀ. ಎತ್ತರವಾಗಿವೆ. ಈಕೆಯು ನಾಲ್ಕು ಕೈಗಳನ್ನು ಹೊಂದಿದ್ದು 3 ಹೆಡೆಯ ಸರ್ಪದ ನೆರಳಿನಲ್ಲಿ ಕುಳಿತಿರುವಂತೆ ಕೆತ್ತಲಾಗಿದೆ. ಧರಣೇಂದ್ರ ಯಕ್ಷ ಮತ್ತು ಪದ್ಮಾವತಿ ಯಕ್ಷಿಯರಿಬ್ಬರು ತಮ್ಮ ಕೆಳಗಿನ ಕೈಗಳಲ್ಲಿ ಪದ್ಮ, ಫಲವನ್ನು ಮತ್ತು ಮೇಲಿನ ಕೈಗಳಲ್ಲಿ ಪಾಶ ಮತ್ತು ಅಂಕುಶವನ್ನು ಹೊಂದಿದ್ದಾರೆ.[61]

5.3. ಹೊಸಹೊಳಲು

ಕೃಷ್ಣರಾಜಪೇಟೆಯಿಂದ ಕೇವಲ ಮೂರು ಕಿ.ಮೀ ದೂರದಲ್ಲಿವೆ. ಹೊಯ್ಸಳರ ಕಾಲದ ನಯನಮನೋಹರ ದೇವಾಲಯದಿಂದಾಗಿ ಈ ಸ್ಥಳವು ಪ್ರಸಿದ್ಧವಾಗಿದ್ದು ಇಲ್ಲಿನ ಹತ್ತಿ ಹಾಗೂ ರೇಷ್ಮೆ ನೇಕಾರಿಕೆಗೂ ಹೆಸರಾಗಿದೆ. ನರಸನಾಯಕನೆಂಬ ಪಾಳೇಗಾರನು ಹೊಸಹೊಳಲುವಿನಲ್ಲಿ ಆಂಜನೇಯನ ಗುಡಿ ನಿರ್ಮಿಸಿ, ಗರುಡಗಂಬದ ಪ್ರತಿಷ್ಠಾಪನೆಗಾಗಿ ಅಗೆದಾಗ ಹರಳುಗಳು ಸಿಕ್ಕಿದ್ದರಿಂದ ಊರಿಗೆ ಹೊಸಹರುಳು ಎಂಬ ಹೆಸರು ಬಂದಿತು. ಮುಂದೆ ಅದು ಹೊಸ ಹೊಳಲು ಎಂದಾಯಿತು ಎಂದು ಇಲ್ಲಿನ ಜನಪದ ಐತಿಹ್ಯ ತಿಳಿಸುತ್ತದೆ. ಆದರೆ ಕ್ರಿ.ಶ 1306ರ ಶಾಸನ ಈ ಗ್ರಾಮವನ್ನು ಅನಾದಿ ಅಗ್ರಹಾರ ರಾಯಪುರವಾದ ಹೊಸ ಹೊಳಲು ಎಂದು ಉಲ್ಲೇಖಿಸುತ್ತದೆ. ಈ ಶಾಸನದ ಆಧಾರದ ಮೇಲೆ ಜಾನಪದೀಯ ಐತಿಹ್ಯವನ್ನು ಗ್ರಾಮ ನಾಮ ವ್ಯುತ್ಪತ್ತಿಯ ಬಗ್ಗೆ ಕೈಬಿಡಬಹುದು.[62]

ಇಲ್ಲಿಯ ಲಕ್ಷ್ಮೀ ನಾರಾಯಣ ದೇವಾಲಯವು ಹೊಯ್ಸಳ ವಾಸ್ತುಶಿಲ್ಪದ ಸುಂದರ ಮಾದರಿಯಾಗಿದೆ. ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಉತ್ಕೃಷ್ಟ ಅಲಂಕಾರಿಕ ಶಿಲ್ಪಗಳ ಸಂಯೋಜನೆಯಲ್ಲಿ ಕಂಡು ಬರುವ ಪ್ರಮಾಣಬದ್ಧತೆ ಹಾಗೂ ಪ್ರಬುದ್ಧತೆಗಳಿಂದಾಗಿ ಅವಿಸ್ಮರಣೀಯ ಆನಂದ ನೀಡುತ್ತದೆ. ಆರು ಪಟ್ಟಿಕೆಯನ್ನುಳ್ಳ ಮೂರು ಅಡಿ ಎತ್ತರದ ಜಗತಿಯ ಮೇಲೆ ಪೂರ್ವಾಭಿಮುಖವಾಗಿ

ನಿರ್ಮಾಣಗೊಂಡಿದೆ. ತಳವಿನ್ಯಾಸವನ್ನು ಹೊಂದಿರುವ ಈ ಆಲಯವು ಮೂರು ಗರ್ಭಗೃಹಗಳನ್ನು ಹೊಂದಿದ್ದು ತ್ರಿಕೂಟಾಚಲ ದೇವಾಲಯವಾಗಿದೆ.

ಪ್ರಧಾನ ಗರ್ಭಗೃಹಕ್ಕಷ್ಟೇ ಅಂತರಾಳವಿದೆ, ಉಳಿದ ಎರಡು ಗರ್ಭಗೃಹಗಳನ್ನು ನವರಂಗಕ್ಕೆ ಅಂತರಾಳವಿಲ್ಲದೆ ಸೇರಿಸಲಾಗಿದೆ. ಮೂರು ಗರ್ಭಗೃಹಗಳನ್ನು ಒಂದೇ ನವರಂಗವು ಒಗ್ಗೂಡಿಸಿದೆ. ಪ್ರಧಾನ ಗರ್ಭಗೃಹವು ಬಾಗಿಲವಾಡಲು ಸಪ್ತಶಾಖಾಲಂಕೃತವಾಗಿದ್ದು, ಆಕರ್ಷಕವಾಗಿದೆ. ಪ್ರಮುಖ ಗರ್ಭಗೃಹದಲ್ಲಿ ಶ್ರೀ ದೇವಿ ಭೂದೇವಿಯರೊಂದಿಗೆ ಶಂಖ, ಚಕ್ರ, ಗದಾಪದ್ಮಧಾರಿಯಾದ ಸಮ ಭಂಗಿಯಲ್ಲಿರುವ ಆಳೆತ್ತರದ ನಾರಾಯಾಣ ಶಿಲ್ಪವಿದೆ. ನವರಂಗದ ಉತ್ತರಕ್ಕಿರುವ ಗರ್ಭಗೃಹದಲ್ಲಿ ಆಳೆತ್ತರದ ಲಕ್ಷ್ಮೀನಾರಾಯಣನ ಮೂರ್ತಿ ಇದೆ.[63]

ದಕ್ಷಿಣದ ಗರ್ಭಗೃಹದಲ್ಲಿ ಹೊಯ್ಸಳರು ಪ್ರತಿಷ್ಠಾಪಿಸಲ್ಪಟ್ಟಿದ್ದ ವೇಣುಗೋಪಾಲನ ಮೂರ್ತಿಯನ್ನು ನರಸರಾಜ ಒಡೆಯರ ಕಾಲದಲ್ಲಿ ಕೊಂಡೊಯ್ದು ಕನ್ನಂಬಾಡಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿರುವ ಸಾಧ್ಯತೆಗಳಿವೆ ಎಂದು ಹಯವದನರಾಯರು ದಾಖಲಿಸಿದ್ದಾರೆ. ಆದರೆ ಕನ್ನಂಬಾಡಿಯ ಗೋಪಾಲಕೃಷ್ಣ ಮೇಲಿರುವ ಕ್ರಿ.ಶ. 1532ರ ಶಾಸನದಲ್ಲಿ ಗೋಪಾಲಕೃಷ್ಣ ದೇವರ ಉಲ್ಲೇಖವಿರುವುದರಿಂದ ಈ ಅಂಶವನ್ನು ಪುನರ್ ಪರಿಶೀಲಿಸಬೇಕಾಗುತ್ತದೆ. ಇಲ್ಲಿರುವ ಗೋಪಾಲಕೃಷ್ಣನ ನವೀನ ಮೂರ್ತಿಯುನ್ನು 1953ರಲ್ಲಿ ಪ್ರತಿಷ್ಠಾಪಿಸಲಾಗಿದೆ.[64] ಎಂದು ತಿಳಿದು ಬರುತ್ತದೆ. ಪ್ರಧಾನ ಗರ್ಭಗೃಹಕ್ಕೆ ಆಷರ್ಕವಾದ ದ್ರಾವಿಡ ಶಿಖರವಿದೆ, ಕಲಾತ್ಮಕ ಕುಸುರಿ ಶಿಲ್ಪಗಳಿಂದ ಕೂಡಿದ ಶಿಖರವು ಆಕರ್ಷಕವಾಗಿದೆ. ನವರಂಗದ ದೇವಕೋಷ್ಟಕಗಳಲ್ಲಿ ಗಣಪತಿ ಹಾಗೂ ಮಹಿಷಮರ್ಧಿನಿಯರ ಸುಂದರ ಶಿಲ್ಪಗಳಿವೆ. ನವರಂಗವನ್ನು ಹೊತ್ತು ನಿಂತಿರುವ ಬೃಹದಾಕಾರದ ಚರಕಿ ಕಂಬಗಳು ಹೊಳಪಿನಿಂದ ಕೂಡಿದೆ. ಅಲ್ಲಲ್ಲಿ ಮದನಿಕೆಯರ ಸುಂದರ ಕಿರುಶಿಲ್ಪಗಳಿವೆ, ಕಮಲಾಲಂಕೃತ ಛತ್ತಿನ ನಡುವೆ ಕಾಳಿಯಮರ್ದನ ಕೃಷ್ಣನನ್ನು ಕೆತ್ತಲಾಗಿದ್ದು ಚಿತ್ತಾಕರ್ಷವಾಗಿದೆ.

ದೇವಾಲಯದ ಅಲಂಕಾರಿಕ ಕೆತ್ತನೆಗಳನ್ನು ಮೀರಿಸುವ ಶಿಲ್ಪಕಲಾ ನೈಪುಣ್ಯತೆಯಿಂದ ತುಂಬಿ ತುಳುಕುವ ಇದರ ಅಧಿಷ್ಠಾನ, ಭಿತ್ತಿ, ಶಿಖರ, ಶುಕನಾಸಿಗಳು ಮತ್ತೊಂದು ಲೋಕಕ್ಕೆ ಪ್ರವಾಸಿಗರನ್ನು ಕೊಂಡೊಯ್ಯುತ್ತದೆ. ದೇವಾಲಯದ ಅಧಿಷ್ಠಾನವನ್ನು ಆನೆ, ಕುದುರೆ, ಲತೆ, ಪೌರಾಣಿಕ ಕಥನ, ಮಕರ, ಹಂಸ ಹಾಗೂ ಬಳ್ಳಿಯ ಅಲಂಕಾರಿಕ ಕೆತ್ತನೆಯುಳ್ಳ ಪಟ್ಟಿಕೆಗಳಿಂದ ಅಲಂಕರಿಸಲಾಗಿದೆ. ದೇವಾಲಯದ ಎತ್ತರವನ್ನು ಹೆಚ್ಚಿಸಲು ಎರಡು ಹಂತದಲ್ಲಿ ಭಿತ್ತಿಯನ್ನು ನಿರ್ಮಿಸಲಾಗಿದೆ. ಭಿತ್ತಿಯ ಕೆಳಗಿನ ಹಂತದಲ್ಲಿ

ಚಲುವನಾರಾಯಣ, ಬ್ರಹ್ಮ, ವಿಷ್ಣು, ಲಕ್ಷ್ಮೀನಾರಾಯಣ, ಕೇಶವ, ಚತುರ್ ವಿಂಶತಿ ವಿಷ್ಣುಮೂರ್ತಿ, ಪರವಾಸುದೇವ, ಯೋಗಾನರಸಿಂಹ, ಲಕ್ಷ್ಮೀ ನರಸಿಂಹ, ಇಂದ್ರ, ರಾಮ ಲಕ್ಷ್ಮಣ, ಹರಿಹರ, ಭೈರವ, ಭೈರವಿ, ಕಾಳಿ, ಆದಿಶಕ್ತಿ, ಗೋವರ್ಧನಧಾರಿ ಕೃಷ್ಣ, ಕಾಳಿಂಗಮರ್ದನ, ಲಕ್ಷ್ಮೀ, ನಾಟ್ಯ ಸರಸ್ವತಿ ಮುಂತಾದ ದೇವಾನುದೇವತೆಗಳ ಕೆತ್ತನೆಯಿಂದ ಕೂಡಿದೆ. ಮೇಲಿನ ಹಂತವು ಕಿರಿದಾದ ಅಲಂಕಾರಿಕ ಏಕ, ದ್ವಿಸ್ತಂಭ, ಶಿಖರ ಹಾಗೂ ಕಿರುದೇವ ಕೋಷ್ಠಕಗಳಿಂದ ತುಂಬಿದ್ದು, ಕೆಲವೆಡೆ ಕಿರು ಮೂರ್ತಿಗಳೂ ಇವೆ. ಇಲ್ಲಿ ಮಹಾಭಾರತ, ರಾಮಾಯಣ ಹಾಗೂ ಭಾಗವತ ಕಥನ ಶಿಲ್ಪಗಳ ಪಟ್ಟಿಯನ್ನೇ ಕೆತ್ತಲಾಗಿದೆ.

ಇಲ್ಲಿನ ಶಿಲಾಶಾಸನಗಳಲ್ಲಿ ಹೊಸಹೊಳಲನ್ನು ಅನಾದಿ ಅಗ್ರಹಾರ, ರಾಯಪುರ ಎಂದು ಕರೆಯಲಾಗಿದೆ. ಇಲ್ಲಿ ದೊರೆತಿರುವ 8 ಶಾಸನಗಳಲ್ಲಿ ಹೊಯ್ಸಳ ವಿಷ್ಣುವರ್ಧನನ ಕಾಲದ ಜೈನ ಶಾಸನವು ಪ್ರಮುಖವಾದುದು. ಇದು ಇಲ್ಲಿಗೆ 2 ಕಿ.ಮೀ. ದೂರದಲ್ಲಿರುವ ಕತ್ತರಿಘಟ್ಟದಿಂದ ತಂದುದಾಗಿದೆ. ಈ ಶಾಸನವು ಹೇಳುವ ಅಂದರೆ ಅಲ್ಲಿನ ಕತ್ತರಿಘಟ್ಟದ ಪಟ್ಟಣಸ್ವಾಮಿಯು ಹೊಯ್ಸಳ ಶೆಟ್ಟಿ ಎಂದು ಬಿರುದಾಂಕಿತನಾಗಿದ್ದು ನೊಳಂಬಿಸೆಟ್ಟಿ ಮತ್ತು ಆತನ ಮಡದಿ ದೇಮಿಕಬ್ಬೆ ಸೆಟ್ಟಿಯು ಕತ್ತರಿಘಟ್ಟದಲ್ಲಿ ತ್ರಿಕೂಟ ಜಿನಾಲಯವನ್ನು ಕ್ರಿ.ಶ. 1119ರಲ್ಲಿ ನಿರ್ಮಿಸಿ ಅವರ ಜೈನಗುರು ಶುಭಚಂದ್ರ ಸಿದ್ಧಾಂತ ದೇವರಿಗೆ ಅರ್ಪಿಸಿ ಆ ದೇವಾಲಯದ ಕೈಂಕರ್ಯಗಳಿಗೆ ಭೂಮಿಯನ್ನು ದಾನಬಿಟ್ಟ ಅಂಶವನ್ನು ಉಲ್ಲೇಖಿಸುತ್ತದೆ.[65]

ಹೊಸಹೊಳಲುವಿನಲ್ಲಿರುವ ಪಾರ್ಶ್ವನಾಥನ ಜೈನಬಸದಿಯು ಹೊಯ್ಸಳ ಕಾಲಾನಂತರದ್ದಾಗಿದೆ. ಇಲ್ಲಿಯ ಪದ್ಮಾವತಿ ಶಿಲ್ಪದ ಪೀಠದ ಮೇಲಿರುವ ಹದಿಮೂರನೆಯ ಶತಮಾನದ ಶಾಸನವು ಈ ಮೂರ್ತಿಯನ್ನು ವಿಜಯಕೀರ್ತಿ ದೇವರ ಶಿಷ್ಯನು ಮಾಡಿಸಿದ್ದನ್ನು ದಾಖಲಿಸುತ್ತದೆ.[66] ಬಸದಿಯ ಕೈಪಿಡಿ ಗೋಡೆಯ ದೇವಕೊಷ್ಠದಲ್ಲಿರುವ ಮೂರ್ತಿಯ ಪೀಠದ ಮೇಲಿರುವ ಶಾಸನವು 15ನೆಯ ಶತಮಾನದ ಶಾಸನವಾಗಿದ್ದು ನೇಮಿಭದ್ರ ಎಂದು ಉಲ್ಲೇಖಿಸುತ್ತದೆ.[67]

ಹೊಸಹೊಳಲಿನ ಜೈನಬಸದಿಯ ಊರ್ಧ್ವಮುಖ ವಾಸ್ತುಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಬಹುದು. ಅಧಿಷ್ಠಾನವು ಉಪಾನ, ಜಗತಿ, ಕುಮುದ ಮತ್ತು ವೇದಿಗಳನ್ನು ಹೊಂದಿದೆ. ವೇದಿಯ ಮೇಲೆ ನಿರ್ಮಾಣವಾಗಿರುವ ಭಿತ್ತಿ ಅತ್ಯಂತ ಸರಳವಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಶಿಖರವಿದೆ. ಇದು ಸಮಕಾಲೀನ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿದೆ.[68] ಈ ಜಿನಾಲಯವು 1995ರಲ್ಲಿ ಸಂಪೂರ್ಣವಾಗಿ ನವೀಕರಿಸಲ್ಪಟ್ಟಿದೆ. ಹೀಗಾಗಿ ಇದರ ಯಾವ ವಾಸ್ತುಲಕ್ಷಣಗಳೂ ಪ್ರಾಚೀನ

ವಾಸ್ತುಲಕ್ಷಣಗಳನ್ನು ಹೋಲುವುದಿಲ್ಲ. ಈ ಜಿನಾಲಯದ ಬಲಬದಿಯಲ್ಲಿ ಒಂದು ಬಾಹುಬಲಿಯ ಶಿಲ್ಪವಿದೆ.

ಈ ದೇವಾಲಯದ ತಿರ್ಯಾಙ್ಮುಖ ವಾಸ್ತುಲಕ್ಷಣಗಳು ಹೀಗಿವೆ. ಇದು ಚೌಕಾಕಾರದ ಗರ್ಭಗೃಹವನ್ನು ಹೊಂದಿದ್ದು ಗರ್ಭಗೃಹದ ಮೂಲೆಗಳಲ್ಲಿ ಅರೆಗಂಬಗಳನ್ನು ಸರಳವಾದ ಭಿತ್ತಿ, ವಿತಾನವನ್ನು ದ್ವಾರಬಂಧವನ್ನು ಹೊಂದಿದೆ. ಲಲಾಟದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಜಿನಮೂರ್ತಿಯ ಉಬ್ಬುಶಿಲ್ಪವಿದೆ.[69] ಗರ್ಭಗೃಹದಲ್ಲಿ 24 ತೀರ್ಥಂಕರರ ಪಾರ್ಶ್ವನಾಥನ, ಅನಂತನಾಥನ, ಪದ್ಮಾವತಿಯ ಶಿಲ್ಪಗಳಿವೆ. ಅಂತರಾಳ ಮಂಟಪದ ಭಿತ್ತಿಗಳು ವಿತಾನದ ವಾಸ್ತುಲಕ್ಷಣಗಳು, ಗರ್ಭಗೃಹವನ್ನನುಕರಿಸಿವೆ.

ನವರಂಗವು ಚೌಕಾಕಾರವಾಗಿದ್ದು ಮಧ್ಯದಲ್ಲಿ 4 ಬ್ರಹ್ಮಕಾಂತ ಶೈಲಿಯ ಸ್ತಂಭಗಳಿಂದ ರಚನೆಗೊಂಡಿವೆ. ಕಂಬಗಳಲ್ಲಿ ಹೆಚ್ಚಿನ ವಿಶೇಷತೆಯೇನೂ ಇಲ್ಲ. ಆದರೆ ಪೀಠ, ಪಾದ, ದಂಡ, ಫಲಕ ಮತ್ತು ಬೋದಿಗೆಗಳನ್ನು ಹೊಂದಿವೆ. ನವರಂಗದ ಗೋಡೆಯಲ್ಲಿ ಹನ್ನೆರಡು ಅರೆಗಂಬಗಳಿದ್ದು ಭಿತ್ತಿ ಮತ್ತು ವಿತಾನ ಮತ್ತು ದ್ವಾರಬಂಧ ಅತ್ಯಂತ ಸರಳ ಶೈಲಿಯಲ್ಲಿವೆ.

5.4. ಮುರುಕನಹಳ್ಳಿ

ಇಲ್ಲಿಯ ಬಸದಿಯ ನಿರ್ಮಾಣದ ಕುರಿತು ಶಾಸನಗಳಿಲ್ಲ. ಆದರೆ ಇಲ್ಲಿಯ ಲಕ್ಷಣಗಳನ್ನು ಆಧರಿಸಿ ಹೇಳುವುದಾದರೆ ಇದರ ಗರ್ಭಗೃಹ, ಅಂತರಾಳ, ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡು, ನವರಂಗ ಮತ್ತು ಮುಖಮಂಟಪ ವಿಜಯನಗರ ಕಾಲದಲ್ಲಿ ಪುನರುಜ್ಜೀವನಗೊಂಡಂತೆ ಸ್ಪಷ್ಟವಾಗುತ್ತದೆ. ಈ ಬಸದಿಯ ಊರ್ಧ್ವಮುಖ ಮತ್ತು ತಿರ್ಯಾಙ್ಮುಖ ವಾಸ್ತು ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು. ಅಧಿಷ್ಠಾನವು ಉಪಾನ, ಜಗತಿ, ಕುಮುದ ಮತ್ತು ವೇದಿಗಳನ್ನು ಹೊಂದಿದೆ. ವೇದಿಯ ಮೇಲೆ ನಿರ್ಮಾಣವಾಗಿರುವ ಭಿತ್ತಿ ಅತ್ಯಂತ ಸರಳವಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಶಿಖರವಿದೆ. ಇದು ಸಮಕಾಲೀನ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿದೆ.[70]

ಇದು ತಳನಕ್ಷೆಯಲ್ಲಿ ಗರ್ಭಗೃಹವನ್ನು ಹೊಂದಿದೆ. ಅದು ಚೌಕಾಕಾರವಾಗಿದ್ದು ನಾಲ್ಕು ಮೂಲೆಗಳಲ್ಲಿ ಅರೆಗಂಬಗಳನ್ನು ಅಥವಾ ಗೋಡೆಯೊಳಗೆ ಅಂತರ್ಗತವಾಗಿರುವ ಕಂಬಗಳನ್ನು ಹೊಂದಿದೆ. ಭಿತ್ತಿಯು ಅತ್ಯಂತ ಸರಳವಾಗಿದೆ. ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ.

ದ್ವಾರಬಂಧವು ತ್ರಿಶಾಖೆಗಳಿಂದ ಕೂಡಿದ್ದು ಅದರಲ್ಲಿ ಸ್ತಂಭಶಾಖೆಯು ಎದ್ದುಕಾಣುತ್ತದೆ. ಲಲಾಟಬಿಂಬವು ಪಾರ್ಶ್ವನಾಥನ ಉಬ್ಬುಶಿಲ್ಪವಾಗಿದೆ. ಗರ್ಭಗೃಹದಲ್ಲಿ ಕಾಯೋತ್ಸರ್ಗ ಭಂಗಿಯಲ್ಲಿರುವ ಪಾರ್ಶ್ವನಾಥನ ಶಿಲ್ಪವಿದೆ. ಇದರ ಮುಂದಿನ ಭಾಗದಲ್ಲಿ ಅಂತರಾಳವಿದೆ. ಇದೂ ಕೂಡ ಗರ್ಭಗೃಹದಂತೆ ಚೌಕಾಕಾರವಾಗಿದೆ. ಇದರ ಮೂಲೆಗಳಲ್ಲಿಯೂ ಗರ್ಭಗೃಹದ ಮೂಲೆಗಳಂತೆಯೇ ಅರೆಗಂಬಗಳು ಅಥವಾ ಗೋಡೆಯಲ್ಲಡಕವಾದ ಕಂಬಗಳು ಕಂಡುಬರುತ್ತವೆ. ಇದರ ಭಿತ್ತಿಯು ಸರಳವಾಗಿದ್ದು ವಿತಾನದಲ್ಲಿ ಪದ್ಮಮಂಡಲ ಅಲಂಕಾರವಿದೆ. ಅಂತರಾಳದ ದ್ವಾರಬಂಧದಲ್ಲಿ ಪಂಚಶಾಖೆಯಿದ್ದು ಗರ್ಭಗೃಹದಂತೆ ಸ್ತಂಭಶಾಖೆ ಗಮನ ಸೆಳೆಯುತ್ತದೆ. ಇದರ ಲಲಾಟಪಟ್ಟಿಕೆಯಲ್ಲಿಯೂ ಪಾರ್ಶ್ವನಾಥನ ಉಬ್ಬುಶಿಲ್ಪವಿದೆ. ಪೇದ್ಯಪಿಂಡವು ನಿರಾಲಂಕೃತವಾಗಿದೆ. ನವರಂಗವು ನಾಲ್ಕು ಸ್ವತಂತ್ರ ಬ್ರಹ್ಮಕಾಂತಶೈಲಿಯ ಸ್ತಂಭಗಳಿಂದ ನಿರ್ಮಾಣವಾಗಿವೆ. ಇವು ಕ್ರಮವಾಗಿ ಪೀಠ, ಪಾದ, ದಂಡ, ಫಲಕ ಮತ್ತು ಬೋದಿಗೆಯನ್ನು ಹೊಂದಿವೆ. ಭಿತ್ತಿಯಲ್ಲಿ 12 ಅರೆಗಂಬಗಳಿವೆ. ವಿತಾನದಲ್ಲಿ ಪದ್ಮಮಂಡಲ ಅಲಂಕಾರವಿದೆ. ದ್ವಾರಬಂಧವು ಪಂಚಶಾಖೆಗಳಿಂದ ಕೂಡಿದೆ. ಮುಖಮಂಟಪವು ಆಯತಾಕಾರದಲ್ಲಿದ್ದು 4 ಸ್ವತಂತ್ರ ಕಂಬಗಳಿಂದ ನಿರ್ಮಾಣಗೊಂಡಿದ್ದು ಸರಳ ವಿತಾನವನ್ನು ಹೊಂದಿದೆ. ಹೊಸಹೊಳಲಿನಲ್ಲಿರುವ ಬಸದಿ ಕೂಡ ಇದೇ ಮಾದರಿಯಲ್ಲಿ ಇದೆ. ಮತ್ತು ಇಲ್ಲಿನ ದೇವಾಲಯಗಳ ರಚನೆಯನ್ನು ಕುರಿತು ಯಾವ ಶಾಸನಗಳೂ ಉಲ್ಲೇಖಿಸುವುದಿಲ್ಲ.

5.5 ಕತ್ತರಿಘಟ್ಟ

ಕತ್ತರಿಘಟ್ಟದಲ್ಲಿ ಈ ಜೈನ ಜಿನಾಲಯಕ್ಕಾಗಿ ಕ್ಷೇತ್ರಕಾರ್ಯ ಕೈಗೊಂಡಾಗ ಕೆಲವೊಂದು ಮಾಹಿತಿಗಳು ತಿಳಿದುಬಂದವು. ಅಂದರೆ ಕತ್ತರಿಘಟ್ಟದ ಶಾಸನವನ್ನು ತಂದು ಹೊಸಹೊಳಲಿನ ಜಿನಾಲಯದ ಮುಂಭಾಗದಲ್ಲಿ ಸಂರಕ್ಷಿಸಿ ಇಡಲಾಗಿದೆ. ಇತ್ತೀಚಿಗೆ ಕೆಲವು ದಿನಗಳ ಹಿಂದೆ ಕತ್ತರಿಘಟ್ಟದಲ್ಲಿ ಸಾರ್ವಜನಿಕ ನೀರಿನ ವ್ಯವಸ್ಥೆಗಾಗಿ ಭೂ ಅಗೆತವನ್ನು ಮಾಡುತ್ತಿದ್ದಾಗ ಹಲವು ಜೈನ ಶಿಲ್ಪಗಳು ಮತ್ತು ಕಟ್ಟಡಗಳ ಅವಶೇಷಗಳು ಕಂಡುಬಂದವು. ಇವುಗಳು ಪತ್ರಿಕೆಯಲ್ಲಿ ಕೂಡ ಪ್ರಕಟವಾದವು. ಇದನ್ನು ಡಾ. ಎನ್.ಎಸ್. ರಂಗರಾಜು ಅವರು ಪರಿಶೀಲಿಸಿ ಇದು ಹೊಯ್ಸಳರ ಕಾಲದ ಜೈನಬಸದಿಯೆಂದು ಖಚಿತಪಡಿಸಿದರು. ಆದರೆ ಸ್ಥಳೀಯ ಜನರು ಮೂಢನಂಬಿಕೆಯನ್ನಾಧರಿಸಿ ಸ್ಥಾನಿಕ ಜ್ಯೋತಿಷಿಯ ಸಲಹೆಯಂತೆ ಅಲ್ಲಿ ಕಂಡುಬಂದ ಎಲ್ಲ ಜೈನ ಶಿಲ್ಪಗಳನ್ನು ಮತ್ತು

ದೇವಾಲಯದ ಅವಶೇಷಗಳನ್ನು ಮಣ್ಣಿನ ಅಡಿ ಮುಚ್ಚಿಹಾಕಿ ಅದರ ಮೇಲೆ ಸಾರ್ವಜನಿಕ ಕಿರು ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಿದರೆಂದು ತಿಳಿದುಬರುತ್ತದೆ.

ಮುರುಕನಹಳ್ಳಿಯ ಬಸದಿ ಮತ್ತು ಹೊಸಹೊಳಲಿನ ಬಸದಿ ಕೂಡ ಅದೇ ಕಾಲಘಟ್ಟದಲ್ಲಿ ರಚಿತವಾಗಿದ್ದ ಆಲಯಗಳಿರಬಹುದೆಂದು ಕೆಲ ವಿದ್ವಾಂಸರ ಅಭಿಪ್ರಾಯ. ಮುರುಕನಹಳ್ಳಿಯದು ಹೊಯ್ಸಳರ ಕಾಲದ ರಚನೆಯೆಂಬುದು ಡಾ. ಆರ್. ರಂಗಸ್ವಾಮಿಯವರ ಅಭಿಪ್ರಾಯವಾಗಿದೆ. ಆದರೆ ಸ್ಥಳೀಯ ಜೈನಪರಂಪರೆಯನ್ನು ಕಥೆಯನ್ನಾಧರಿಸಿ ಹೇಳುವುದಾದರೆ ಅನಂತ ನೋಂಪಿಯ ಆಚರಣೆಗೆ ಹಲವು ವರ್ಷಗಳ ಹಿಂದೆ ತೊಂದರೆ ಉಂಟಾದ ಕಾರಣ ಹೊಸಹೊಳಲುವಿನ ಜೈನಮಂದಿರದಿಂದ ಅನಂತನಾಥ ಸ್ವಾಮಿಯ ವಿಗ್ರಹವನ್ನು ತಂದು ಇಲ್ಲಿ ಪ್ರತಿಷ್ಠಾಪಿಸಿ ಅನಂತ ನೋಂಪಿಯನ್ನಾಚರಿಸಲು ಆರಂಭಿಸಿದರೆಂದು ತಿಳಿದುಬರುತ್ತದೆಯಾದರೂ ಇದು ಆರಂಭಗೊಂಡ ಕಾಲವನ್ನು ಎಲ್ಲಿಯೂ ಉಲ್ಲೇಖಿಸುವುದಿಲ್ಲ. ಹೀಗಾಗಿ ಕತ್ತರಿಘಟ್ಟ ದೇವಾಲಯದ ರಚನಾಕಾಲಘಟ್ಟದಲ್ಲಿ ಈ ಮೂರೂ ಪ್ರದೇಶಗಳಲ್ಲಿ ಜಿನಮಂದಿರಗಳಿದ್ದು ಕತ್ತರಿಘಟ್ಟವು ರಾಜಾಶ್ರಯವನ್ನು ಕಳೆದುಕೊಂಡ ನಂತರ ಸ್ಥಾನಿಕ ಜೈನ ಆಸಕ್ತರುಗಳು ಈ ದೇವಾಲಯಗಳಲ್ಲಿನ ಆಚರಣೆಯನ್ನು ಮುಂದುವರೆಸಿಕೊಂಡು ಬಂದಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

5.6. ಕಂಬದಹಳ್ಳಿ

ನಾಗಮಂಗಲ–ಶ್ರವಣಬೆಳಗೊಳ ರಸ್ತೆಯಲ್ಲಿ ನಾಗಮಂಗಲದಿಂದ 16 ಕಿ.ಮೀ ದೂರದಲ್ಲಿದೆ. ಇದು ಅತಿಶಯ ದಿಗಂಬರ ಜೈನ ಕ್ಷೇತ್ರವೆಂದೇ ಹೆಸರು ಪಡೆದಿದೆ. ಗಂಗ–ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಪ್ರಧಾನ ಜೈನ ಕೇಂದ್ರವಾಗಿತ್ತು. ಕ್ರಿ.ಶ. 1118ರ ಶಾಸನದಲ್ಲಿ ಬಿಂಡಿಗನವಿಲೆಯ ತೀರ್ಥಬಸದಿ ಎಂದೂ ಕ್ರಿ.ಶ. 1145ರ ಮತ್ತೊಂದು ಶಾಸನದಲ್ಲಿ ಕಂಬದಹಳ್ಳಿ ಎಂದೂ ಉಲ್ಲೇಖಿತಗೊಂಡಿದೆ. ಈ ಶಾಸನಗಳಿಂದ ಇತಿಹಾಸ ಕಾಲದಲ್ಲಿ ಈ ಗ್ರಾಮವು ಬಿಂಡಿಗನವಿಲೆಗೆ ಸೇರಿದ ತೀರ್ಥಕ್ಷೇತ್ರವಾಗಿದ್ದ ಅಂಶ ಸ್ಪಷ್ಟವಾಗುತ್ತದೆ.[71] ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಏಳು ಬಸದಿಗಳಲ್ಲಿ ಒಂದು ತ್ರಿಕೂಟ (ಆದಿನಾಥ) ಹಾಗೂ ದ್ವಿಕೂಟಾಚಲಗಳನ್ನೊಳಗೊಂಡಂತೆ ರಚಿತವಾದ ಪಂಚಕೂಟ ಬಸದಿ ಪ್ರಮುಖವಾದದು.

ಕಂಬದಹಳ್ಳಿಯು ಕರ್ನಾಟಕದ ಜೈನಧರ್ಮದ ಇತಿಹಾಸದ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದ ಒಂದು ಐತಿಹಾಸಿಕ ಹಾಗೂ ಧಾರ್ಮಿಕ ಶ್ರದ್ಧಾಕೇಂದ್ರ ಕೂಡ. ಈ ನಗರವನ್ನು ಅಥವಾ ಈ

ಕ್ಷೇತ್ರವು ಕ್ರಿ.ಶ. 9–10ನೆಯ ಶತಮಾನಕ್ಕಿಂತ ಹಿಂದಿನಿಂದಲೂ ಪ್ರಸಿದ್ಧವಾದುದೆಂದು ಇಲ್ಲಿನ ಐತಿಹ್ಯಗಳು ತಿಳಿಸುತ್ತವೆ. ಐತಿಹಾಸಿಕ ದೃಷ್ಟಿಯಿಂದ ಹಾಸನ ಜಿಲ್ಲೆಯ ಸುಪ್ರಸಿದ್ಧ ಜೈನ ಕೇಂದ್ರ ಶ್ರವಣಬೆಳಗೊಳಕ್ಕೂ ಕಂಬದಹಳ್ಳಿಗೂ ಸಂಬಂಧವಿರುವಂತೆ ಕೆಲವರು ಭಾವಿಸಿದ್ದಾರೆ. ಕಂಬದಹಳ್ಳಿಯ ವೀರಗಲ್ಲಿನ ಶಾಸನವೊಂದರಂತೆ ಒಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿಯೇ ಇದು ಪ್ರಮುಖ ಸ್ಥಳವಾಗಿತ್ತೆಂದು ತಿಳಿದುಬರುತ್ತದೆ. ಕಂಬದಹಳ್ಳಿಯ ಶಾಸನಗಳು ಮತ್ತು ನಾಗಮಂಗಲ ತಾಲ್ಲೂಕಿನ ಇತರ ಶಾಸನಗಳು ಕಂಬದಹಳ್ಳಿಯು 9ನೆ ಶತಮಾನಕ್ಕೆ ಪೂರ್ವದಲ್ಲಿಯೇ ಪ್ರಮುಖ ಜನವಸತಿಯ ಕೇಂದ್ರವಾಗಿದ್ದು ಜೈನರು ಇಲ್ಲಿ ವಾಸಿಸಿದ್ದರ ಬಗ್ಗೆ ಮಾಹಿತಿ ನೀಡುತ್ತವೆ. ಇಲ್ಲಿ ನಿರ್ಮಿತಗೊಂಡಿದ್ದ ವಾಸ್ತುಕಲೆಗಳು, ಕೋಟೆ ಕೊತ್ತಲಗಳು ಮತ್ತು ದೇವಾಲಯಗಳಿಗಿಂತ ಪಂಚಕೂಟ ಬಸದಿಯ ಮುಂದಿರುವ ಮಾನಸ್ತಂಭ ಅಥವಾ ಕಂಬದರಾಯ ಇಲ್ಲಿನ ಪ್ರಸಿದ್ಧಿಗೆ ಕಾರಣನಾಗಿದ್ದಾನೆ.

ಸ್ಥಾನಿಕ ಐತಿಹಾಸಿಕ ಪ್ರತೀತಿಯಂತೆ ಕ್ರಿ.ಶ. 8ನೆಯ ಶತಮಾನದಲ್ಲಿ ಜೈನಧರ್ಮದ ಅವಲಂಬಿಯಾಗಿದ್ದ ಪಾಳೇಗಾರನು ಕಂಬದಹಳ್ಳಿಯನ್ನು ತನ್ನ ಪಾಳೇಪಟ್ಟಾಗಿ ಮಾಡಿಕೊಂಡು ಆಳುತ್ತಿದ್ದಂತೆ ತಿಳಿದುಬರುತ್ತದೆ. ಆ ಕಾಲಘಟ್ಟದಲ್ಲಿ ಈ ಊರನ್ನು ಕಂಬಪುರಿಯ ಪಟ್ಟಣವೆಂದು ಕರೆಯುತ್ತಿದ್ದಂತೆಯೂ ಐತಿಹ್ಯ ತಿಳಿಸುತ್ತದೆ. ಹಲವು ಕಸುಬುಗಳ ಜನರು ಪ್ರತ್ಯೇಕ ಕೇರಿಗಳಲ್ಲಿ ವಾಸಿಸುತ್ತಿದ್ದರೆಂದು ಆ ಕಾಲಘಟ್ಟದಲ್ಲಿ ಸುಮಾರು 16 ಸಾವಿರ ಒಕ್ಕಲುತನವುಳ್ಳ ಮನೆಗಳಿದ್ದವೆಂದು ಹೇಳುತ್ತಾರೆ. ಪ್ರತಿಯೊಂದು ಒಕ್ಕಲಿನವರು ಒಂದೆಡೆ ವಾಸಿಸುತ್ತಿದ್ದರೆಂದು ಅಧಿಕ ಸಂಖ್ಯೆಯ ಜನರು ಇಲ್ಲಿ ವಾಸವಿದ್ದರು. ಜೈನಬಸದಿಗಳು ಸೇರಿ 70 ಕ್ಕೂ ಹೆಚ್ಚು ದೇವಾಲಯಗಳಿದ್ದವೆಂದು ತಿಳಿಸುತ್ತಾರೆ. ಆದರೆ ಈಗ ಒಂದೇ ಒಂದು ಜೈನರ ಮನೆ ಉಳಿದು ಬಂದಿದೆ. ಕಂಬದಹಳ್ಳಿಯ ಇತರ ಯಾವ ದೇವಾಲಯಗಳು ಕಂಡುಬರುವುದಿಲ್ಲ.

ಇಲ್ಲಿನ ಒಂದು ದಂತಕತೆ ಬಹಳ ವಿಶೇಷವೆನಿಸುತ್ತದೆ.[72] ಕಂಬದಹಳ್ಳಿಯನ್ನು ಆಳುತ್ತಿದ್ದ ಪಾಳೇಗಾರನು ತನ್ನ ಪ್ರಜೆಗಳೆಲ್ಲರಿಗೂ ಒಂದು ದಿನ ಅನ್ನದಾನವನ್ನು ಏರ್ಪಡಿಸಿದನು. ಪಟ್ಟಣದ ಪ್ರಜಾಸಮಸ್ತರೆಲ್ಲರಿಗೂ ಡಂಗೂರದ ಮೂಲಕ ಔತಣದ ಸಮಯವನ್ನು ತಿಳಿಸಿ ಎಲ್ಲರೂ ಊಟಕ್ಕೆ ಬರುವಂತೆ ಆಜ್ಞೆಯನ್ನು ಮಾಡಿ ಪ್ರಜೆಗಳೆಲ್ಲರೂ ಭೋಜನ ಕೂಟದಲ್ಲಿ ಭಾಗವಹಿಸಿದ ನಂತರ ಅವರ ಯೋಗ್ಯತಾನುಸಾರ ದಾನಧರ್ಮಗಳನ್ನು ನೀಡಿ ಅವರನ್ನು ಬೀಳ್ಕೊಟ್ಟನು. ದಾನಧರ್ಮವನ್ನು ಸ್ವೀಕರಿಸಿದವರಲ್ಲಿ ವೇದಾಂತಿಗಳು, ಪಂಡಿತೋತ್ತಮರು, ವಿದ್ವಾಂಸರೂ ಇದ್ದರು. ನಗರದ

ಹೊರವಲಯದಲ್ಲಿ ಕಾಡಿನ ದಾರಿಯಲ್ಲಿ ಒಂದು ದೊಡ್ಡ ಅರಳೀಮರದ ಕೆಳಗೆ ವೃದ್ಧನೋರ್ವನು ತಪಸ್ವಿಯೂ ಆದವನು ಹಸಿವಿನಿಂದ ಬಳಲಿಮರದ ನೆರಳಿನಲ್ಲಿ ಮಲಗಿದ್ದನು. ದಾರಿಯಲ್ಲಿ ಹೋಗುತ್ತಿದ್ದ ಬ್ರಾಹ್ಮಣನನ್ನು ಕುರಿತು ಎಲೈ, ಬ್ರಾಹ್ಮಣೋತ್ತಮರೇ ತಾವು ಎತ್ತ ಕಡೆ ಸಾಗುತ್ತಿದ್ದೀರಿ, ಎಂದು ವಿಚಾರಿಸಿದನು. ಆಗ ಬ್ರಾಹ್ಮಣನು ಮನದಲ್ಲಿಯೇ ನಕ್ಕು ಕಾಡಿನಲ್ಲಿರುವ ಸನ್ಯಾಸಿಗಳಿಗೆ ಹೇಗೆ ಗೊತ್ತಾಗಬೇಕು ಎಂದುಕೊಂಡು ಅವರವರಲ್ಲಿ ಮಾತನಾಡಿಕೊಂಡು ಅವರಲ್ಲಿ ಒಬ್ಬ ಬ್ರಾಹ್ಮಣನು ಸನ್ಯಾಸಿಯನ್ನು ಕುರಿತು ಏನು ಮಹಾಸ್ವಾಮಿ, ಇಂದು ಧನ್ಯಕುಮಾರನ ಪಟ್ಟಣದಲ್ಲಿ ಪ್ರಜಾಸಮಸ್ತರೆಲ್ಲರಿಗೂ ಅನ್ನದಾನದ ಔತಣವನ್ನು ಏರ್ಪಡಿಸಿ ನಮ್ಮಂತಹ ಬ್ರಾಹ್ಮಣೋತ್ತಮರಿಗೆ ದಾನ ಧರ್ಮವನ್ನು ನೀಡಿದನು ತಾವೇಕೆ ಹೋಗಲಿಲ್ಲವೆಂದು ಪ್ರಶ್ನಿಸಿದನು. ಇಷ್ಟು ಹೇಳಿ ಬ್ರಾಹ್ಮಣರು ಬೇಗ ಹೋಗಿ ಸ್ವಾಮಿ, ತಾವು ಅನ್ನದಾನ ಔತಣಕೂಟದಲ್ಲಿ ಭಾಗವಹಿಸಿ ಎಂದು ಅವರಿಗೂ ತಿಳಿಸಿ ತಮ್ಮ ಮಾರ್ಗದಲ್ಲಿ ಮುಂದುವರಿದನು. ಹಸಿವಿನಿಂದ ಬಳಲಿದ್ದ ಸನ್ಯಾಸಿಗೆ ಆನಂದವುಂಟಾಗಿ ಕಂಬದಮರಿ ಪಟ್ಟಣದ ಮಾರ್ಗವನ್ನು ಹಿಡಿದು ಬಹುಬೇಗನೆ ಪಟ್ಟಣವನ್ನು ಸೇರಿದನು. ತಾನೂ ಒಂದು ಪಂಕ್ತಿಯಲ್ಲಿ ಕುಳಿತು ತನ್ನ ಕಮಂಡಲವನ್ನು ತನ್ನ ಬಲ ಭಾಗದಲ್ಲಿಟ್ಟುಕೊಂಡು ಭೂಮಿಗೆ ಸ್ಪರ್ಶವಾಗಿಯೇ ಇಟ್ಟು ಮೈಮರೆತು ಭೋಜನ ಸ್ವೀಕರಿಸಿದನು. ರಾಜನಿಂದ ದಾನ-ಧರ್ಮಗಳನ್ನು ಪಡೆಯದೆ ತನ್ನ ಆಶ್ರಮದತ್ತ ನಡೆದನು. ಇತ್ತ ಆ ಮುನಿಯು ತನ್ನ ಕಮಂಡಲವನ್ನು ಇಟ್ಟ ಸ್ಥಳವು ಬಂಗಾರದಂತೆ ಪ್ರಜ್ವಲಿಸತೊಡಗಿತು. ಊಟದ ಎಲೆಯನ್ನು ಎತ್ತಲು ಬಂದ ಸೇವಕರು ಇದನ್ನೆಲ್ಲ ಕಂಡು ವಿಸ್ಮಿತರಾಗಿ ರಾಜನಿಗೆ ವಿವರ ಮುಟ್ಟಿಸಿದರು. ಆಶ್ಚರ್ಯಚಕಿತನಾದ ರಾಜನು ಆ ಸನ್ಯಾಸಿಯನ್ನು ತನ್ನ ಮುಂದೆ ಕರೆತರುವಂತೆ ಆಜ್ಞಾಪಿಸಿದನು. ರಾಜನ ಆಜ್ಞೆಯನ್ನು ಹೊತ್ತ ಸೈನಿಕರು ಮೈಯೆಲ್ಲ ಕಣ್ಣಾಗಿ ಎಚ್ಚರದಿಂದ ಹುಡುಕಿ ಆ ಮುನಿಯನ್ನು ಕರೆದುಕೊಂಡು ಬಂದು ರಾಜನ ಮುಂದೆ ನಿಲ್ಲಿಸಿದರು. ರಾಜನು ಆ ಮುನಿಯನ್ನು ವಿನಯದಿಂದ ಮಾತನಾಡಿಸಿ ಹೀಗೆಂದನು. ಮಹಾಸ್ವಾಮಿಯವರೇ, ತಾವು ತಮ್ಮ ಬಳಿ ಇರುವ ಕಮಂಡಲವನ್ನು ನನಗೆ ನೀಡಬೇಕೆಂದು ಕೇಳಿಕೊಂಡನು. ಮುನಿಯು ನನ್ನ ಪ್ರಾಣ ಹೋದರೂ ಸರಿಯೇ ಕಮಂಡಲವನ್ನು ಕೊಡುವುದಿಲ್ಲವೆಂದು ಖಡಾಖಂಡಿತವಾಗಿ ತಿಳಿಸಿದನು. ಕೋಪಗೊಂಡ ರಾಜನು ಮುನಿಯನ್ನು ನೇಣುಗಂಬಕ್ಕೇರಿಸಲು ಆಜ್ಞೆ ಮಾಡಿದನು. ನೊಂದ ಮುನಿಯು ಎಲೈ ನೀಚ ರಾಜನೇ, ನೀನು ತಿನ್ನುವ ಆಹಾರವೆಲ್ಲವೂ ಕ್ರಿಮಿ-ಕೀಟಗಳಾಗಲಿ ಎಂದು ಕ್ರೂರ ಶಾಪವನ್ನು ನೀಡಿ ನೇಣುಗಂಬಕ್ಕೇರಿದನು. ಕಮಂಡಲವನ್ನು ಪಡೆದ ರಾಜನು ತನ್ನ ರಾಣಿಯರ ಜೊತೆ ಅತ್ಯಂತ ಸಂತೋಷದಿಂದ ಭೋಜನ ಸ್ವೀಕರಿಸಲು ಕುಳಿತಾಗ ಬಂಗಾರದ ತಟ್ಟೆಯಿಂದ ಒಂದು

ತುತ್ತು ಅನ್ನವನ್ನು ತೆಗೆದುಕೊಳ್ಳಲು ರಾಜನು ಕೈ ಸ್ಪರ್ಶ ಮಾಡಿದ ಕೂಡಲೇ ಆ ತಟ್ಟೆಯಲ್ಲಿದ್ದ ಎಲ್ಲ ಆಹಾರವೂ ಅಸಹ್ಯ ಹುಟ್ಟಿಸುವ ಕ್ರಿಮಿ ಕೀಟಗಳಾಗಿ ಪರಿವರ್ತಿತವಾದವು. ಎಷ್ಟು ಬಾರಿ ಪ್ರಯತ್ನಿಸಿದರೂ ಆಹಾರವೆಲ್ಲವೂ ಕ್ರಿಮಿ-ಕೀಟಗಳಾಗಿ ಪರಿವರ್ತಿತವಾದವು. ಗಾಬರಿಯಿಂದ ಭಯಾಶ್ಚರ್ಯಗಳಿಂದ ಚಿಂತಾಕ್ರಾಂತನಾದ ರಾಜನು ತನ್ನ ಸಮಸ್ಯೆಗೆ ಪರಿಹಾರವನ್ನು ಹುಡುಕಲು ಅರಮನೆಯ ಪಂಡಿತೋತ್ತಮರು, ಮಂತ್ರಿಗಳು, ವೈದ್ಯರು, ಜ್ಯೋತಿಷಿಗಳನ್ನು ಕರೆಸಿ ಸಮಾಲೋಚಿಸಿದನು. ಕೊನೆಗೆ ತನ್ನ ಪ್ರಯತ್ನದಲ್ಲಿ ವಿಫಲನಾದನು. ಹಸಿವಿನ ಬಳಲಿಕೆಯಿಂದ ನೊಂದು ಮಲಗಿರುವಾಗ ಅವನ ಕನಸಿನಲ್ಲಿ "ಎಲೈ ಆಸೆಬುರುಕ ರಾಜನೆ, ನಿನ್ನ ಪಾಪದ ಶಾಪವಿಮೋಚನೆಯಾಗಬೇಕಾದರೆ ನಿನ್ನ ಪಟ್ಟಣದಲ್ಲಿ ಬೃಹತ್ ದೇವಾಲಯವನ್ನು ಸ್ಥಾಪಿಸಿ ಅದಕ್ಕೆ ಸಕಲ ರೀತಿಯಲ್ಲಿ ಪೂಜೆ, ಪುನಸ್ಕಾರಗಳು ನೆರವೇರುವಂತೆ ಮಾಡು ಆಗ ನಿನ್ನ ಶಾಪವಿಮೋಚನೆಯಾಗುತ್ತದೆ" ಎಂದು ದಿವ್ಯವಾಣಿಯೊಂದು ನುಡಿದಂತಾಯಿತು. ಆಶ್ಚರ್ಯದಿಂದ ಎಚ್ಚರಗೊಂಡ ರಾಜನು ತನ್ನ ಕನಸಿನ ವಿಚಾರವನ್ನು ರಾಣಿವರ್ಗಕ್ಕೂ ಮತ್ತು ರಾಜರ ಪರಿವಾರದವರಿಗೂ ತಿಳಿಸಿ ಅಂದಿನಿಂದಲೇ ಕಂಬದಹಳ್ಳಿಯ ಜಿನ ದೇವಾಲಯಗಳ ನಿರ್ಮಾಣಕ್ಕೆ ಎಲ್ಲ ವ್ಯವಸ್ಥೆಯನ್ನು ಮಾಡಿಸಿದನು. ಇಲ್ಲಿನ ಪಂಚಕೂಟ ಬಸದಿಯಲ್ಲಿನ ತ್ರಿಕೂಟಾಚಲ ಬಸದಿಯನ್ನು ಪ್ರಥಮವಾಗಿ ಸ್ಥಾಪಿಸಿದಂತೆ ತಿಳಿದುಬರುತ್ತದೆ. ಆನಂತರ ಈ ದೇವಾಲಯವು ಹಲವು ಬಾರಿ ಪುನರುಜ್ಜೀವನಗೊಂಡಿದೆ. ಆದರೆ ಈ ಐತಿಹ್ಯಕ್ಕೂ ದೇವಾಲಯದ ನಿರ್ಮಾಣ ಕಾಲಕ್ಕೂ ನಿಖರವಾದ ಕಾಲವನ್ನು ಗುರುತಿಸುವುದು ಕಷ್ಟಸಾಧ್ಯ.

ಕಂಬದಹಳ್ಳಿಯ ಹೆಸರಿನ ಪ್ರಾಚೀನತೆಯನ್ನು ಕುರಿತು ಚಿಂತಿಸುವುದಾದರೆ ಈ ಊರಿನ ಹೆಸರು ಈ ಊರಿನಲ್ಲಿರುವ ಮಾನಸ್ತಂಭದಿಂದ ಬಂತೆಂದು ತಿಳಿದುಬರುತ್ತದೆ. ಸುಮಾರು 50 ಅಡಿ ಎತ್ತರವಿರುವ ಈ ಮಾನಸ್ತಂಭದ ಸ್ಥಾಪನೆಯ ಬಗೆಗೆ ಯಾವ ಶಾಸನಗಳೂ ತಿಳಿಸುವುದಿಲ್ಲ. ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯ ಮಾನಸ್ತಂಭದ ಅಧಿಷ್ಠಾನದ ಮೇಲಿರುವ ಶಾಸನದಲ್ಲಿಯೇ ಅಂದರೆ 11ನೆಯ ಶತಮಾನದಲ್ಲಿಯೇ ಈ ಊರನ್ನು ಕಂಬದಹಳ್ಳಿ ಎಂದು ಉಲ್ಲೇಖಿಸಲಾಗಿದೆ.[73] ಇದಕ್ಕೆ ಪೂರ್ವದಲ್ಲಿ ಈ ಊರಿಗೆ ಯಾವ ಹೆಸರಿತ್ತೆಂದು ತಿಳಿದುಬರುವುದಿಲ್ಲ. ದಂತಕತೆಯ ಪ್ರಕಾರ ಇದನ್ನು ದಂತದಮರಿ ಎಂದು ಕರೆಯುತ್ತಿದ್ದರೆಂದು ಹೇಳುತ್ತಾರಾದರೂ ಇದಕ್ಕೆ ಯಾವ ಐತಿಹಾಸಿಕ ಆಕರಗಳು ದೊರೆಯುವುದಿಲ್ಲ. ಶ್ರವಣಬೆಳಗೊಳಕ್ಕೂ ಮತ್ತು ಕಂಬದಹಳ್ಳಿಗೂ ನೇರ ಸಂಬಂಧವಿದೆ. ಈಗಲೂ ಈ ಕ್ಷೇತ್ರದ ಧಾರ್ಮಿಕ ಉತ್ಸವಗಳು, ಧಾರ್ಮಿಕ ಕಾರ್ಯಾಚರಣೆಗಳು ಶ್ರವಣಬೆಳಗೊಳದ ಮಠದ

ಅಧೀನದಲ್ಲಿಯೇ ಜರುಗುತ್ತವೆ. ಶ್ರವಣಬೆಳಗೊಳವನ್ನು ಸಂದರ್ಶಿಸುವ ಬಹುತೇಕ ಯತಿಪರಂಪರೆ ಮತ್ತು ಶ್ರಾವಕ ಶ್ರಾವಕಿಯರು ಈ ಐತಿಹಾಸಿಕ ಧಾರ್ಮಿಕ ಕೇಂದ್ರವನ್ನು ಸಂದರ್ಶಿಸುತ್ತಾರೆ.

ಇಲ್ಲಿ ಅನೇಕ ಜೈನ ಮುನಿಗಳು ಇತಿಹಾಸ ಕಾಲದಲ್ಲಿ ನೆಲೆನಿಂತು ಪ್ರವಚನಗಳನ್ನು ಧರ್ಮವೃತ್ತಿಯನ್ನು ಬಳಸಿದ್ದುದಕ್ಕೆ ಅನೇಕ ನಿದರ್ಶನಗಳು ದೊರೆಯುತ್ತವೆ. ಇಲ್ಲಿನ ಕ್ರಿ.ಶ. 1118ರ ಶಾಸನದಲ್ಲಿ ಅನಂತವೀರ್ಯ ಬಾಳಚಂದ್ರಮುನಿ, ಪ್ರಭಾಚಂದ್ರಮುನಿ, ಕಲ್ನೆಲೆ ದೇವ, ಅಷ್ಟೋಪವಾಸಿಮುನಿ ಹೇಮನಂದಿ ಮುನಿ, ವಿನಯನಂದಿ ಯತಿ, ಏಕವೀರರು, ಪಲ್ಲ ಕೀರ್ತಿಗಳು ಮುಂತಾದ ಯತಿಗಳು ಇಲ್ಲಿದ್ದರೆಂದು ದಾಖಲಿಸುತ್ತದೆ.[74] ಬಾಳಚಂದ್ರಮುನಿ 9ನೆ ಶತಮಾನದಲ್ಲಿ ಜೀವಿಸಿದ್ದು ಶ್ರವಣಬೆಳಗೊಳದಲ್ಲಿ ಸಲ್ಲೇಖನ ವ್ರತವನ್ನು ಕೈಗೊಂಡಿದ್ದು ಸಮಾನ ಮರಣವನ್ನೈದಿದರೆಂದು ಶ್ರವಣಬೆಳಗೊಳದ ಶಾಸನವೊಂದು ಸಾರುತ್ತದೆ. ಇವರಲ್ಲದೆ ಅನೇಕ ಮುನಿಗಳು ಈ ಕ್ಷೇತ್ರಕ್ಕೆ ಸಂಬಂಧ ಹೊಂದಿದ ಬಗ್ಗೆ ದಾಖಲಾಗಿದೆ. ಹೊಯ್ಸಳರ ಕಾಲದ ಶಾಸನವು ಶ್ರೀಶಾಂತಿನಾಥದೇವರ ಪೂಜೆಗೆ ಜಯಸಂವತ್ಸರದ ಉತ್ತರಾಯಣ ಸಂಕ್ರಾಂತಿಯಂದು ಖಂಡುಗ ಗದ್ದೆಯನ್ನು ಧಾರಾಪೂರ್ವಕವಾಗಿ ಬಾಳಚಂದ್ರಮುನಿಗೆ ಬಿಟ್ಟಿದುದನ್ನು ದಾಖಲಿಸುತ್ತದೆ.[75] ಇದಲ್ಲದೆ ಹೊಯ್ಸಳ ನಾರಸಿಂಹ ದೇವನ ಕಾಲದಲ್ಲಿ ಕಂಬದಹಳ್ಳಿಯ ಶಾಂತಿನಾಥ ದೇವರ ಪೂಜೆಗೆ ದಾನ ನೀಡಿದುದನ್ನು ಮತ್ತೊಂದು ಶಾಸನ ದಾಖಲಿಸುತ್ತದೆ.[76] ಇದನ್ನು ಸಿದ್ಧಾಂತದೇವರ ಗುಡ್ಡಪ್ಪಗಳಾದ ಸ್ವಸ್ತಿಶ್ರೀ ಮರಿಯಾನೆ ದಂಡನಾಯಕ ಭರತಮಯ್ಯ ದಂಡನಾಯಕನು ತನ್ನ ಗುರುಗಳಿಗೆ ದಾನ ಮಾಡಿದುದನ್ನು ದಾಖಲಿಸುತ್ತದೆ. ಸಿದ್ಧಾಂತ ದೇವರು ಪುಸ್ತಕಗಚ್ಛದ ದೇಶೀಯ ಗಣದ ಕುಂದ ಕುಂದಾನ್ವಯದ ಮೂಲಸಂಘಕ್ಕೆ ಸೇರಿದವರು. ಈತನ ಶಿಷ್ಯೆಯು ಹೊಯ್ಸಳ ದೊರೆ ನರಸಿಂಹನ ಪ್ರಧಾನಿ ಎರೆಯಮಂಗಯ್ಯನ ಅಥವಾ ಜಮಾಪತಿಯ ಮಡದಿಯಾಗಿದ್ದಳು. ಮತ್ತೊಂದು ಶಾಸನದಂತೆ ಶ್ರೀ ಪ್ರಭಾಚಂದ್ರ ಸಿದ್ದಾಂತರ ಶಿಷ್ಯರಾದ ಇಬ್ಬರು ಸ್ತ್ರೀಯರು ಸ್ವರ್ಗಸ್ಥರಾದ ವಿವರವನ್ನು ಇಲ್ಲಿನ ಶಾಸನ ನೀಡುತ್ತದೆ. ಇವೆಲ್ಲವೂ ಹೊಯ್ಸಳರ ಕಾಲದಲ್ಲಿ ಕಂಬದಹಳ್ಳಿಯು ಪ್ರಮುಖ ಜೈನ ಸ್ಥಳವಾಗಿತ್ತೆಂದು ತಿಳಿಸುತ್ತವೆ. ಇವಲ್ಲದೆ ಇತರ ಹಲವಾರು ಶಾಸನಗಳು ಕಂಬದಹಳ್ಳಿಯ ಐತಿಹ್ಯವನ್ನು ಮತ್ತು ಇತಿಹಾಸವನ್ನು ಸಾರುತ್ತವೆ.

ಮಾನಸ್ತಂಭ : ಪಂಚಕೂಟ ಬಸದಿಯ ಉತ್ತರ ಭಾಗದಲ್ಲಿ ಎತ್ತರದ ಜಗಲಿಯ ಮೇಲೆ ಅಷ್ಟ ದಿಕ್ಪಾಲಕರ ಕೆತ್ತನೆ ಇರುವ ಅಷ್ಟಕೋನಾಕಾರದ ಪೀಠದ ಮೇಲೆ ಸುಮಾರು 50 ಅಡಿ ಎತ್ತರದ ಬ್ರಹ್ಮ

ಸ್ತಂಭವಿದೆ. ಕಂಬದ ತುದಿಯಲ್ಲಿ ಚೌಕಾಕಾರದ ಬೋದಿಗೆಯ ಮೇಲೆ ಪೂರ್ವಾಭಿಮುಖವಾಗಿ ಅಸೀನನಾಗಿರುವ ಬ್ರಹ್ಮ ಯಕ್ಷನ ಮೂರ್ತಿ ಇದೆ. ಕರ್ನಾಟಕದ ನಾಡಿನ ಕೆಲವೇ ಕಲಾತ್ಮಕ ಬ್ರಹ್ಮಸ್ತಂಭಗಳಲ್ಲಿ ಇದು ಒಂದಾಗಿದೆ.

ಹಿಂದೆ ಉಲ್ಲೇಖಿಸಿದಂತೆ ಈ ಗ್ರಾಮದ ಹೆಸರು ಇಲ್ಲಿರುವ ಬೃಹದಾದ ಮಾನಸ್ತಂಭದಿಂದಲೇ ಬಂದಿರುವುದೆಂದು ತಿಳಿದುಬಂದಿದೆ. ಪ್ರಾರಂಭಿಕ ಶಾಸನ ಬಿಂಡಿಗನವಿಲೆ ತೀರ್ಥವನ್ನು ದಾಖಲಿಸುತ್ತದೆ. ಪ್ರಾಯಶಃ ಬಿಂಡಿಗನವಿಲೆಯಲ್ಲಿಯೂ ಕೂಡ ಅನೇಕ ಬಸದಿಗಳು ಆ ಕಾಲದಲ್ಲಿದ್ದಿರಬೇಕು. ಆದರೆ ಕ್ರಿ ಶ. 1145ರ ಹೊತ್ತಿಗೆ ಈ ಊರಿಗೆ ಕಂಬದಹಳ್ಳಿ ಎಂದು ಹೆಸರು ಬಂದಿತ್ತೆಂದು ತಿಳಿದುಬರುತ್ತದೆ. ಇದೇ ಹೆಸರು ಕ್ರಿ.ಶ. 13ನೆಯ ಶತಮಾನದ ಹೊತ್ತಿಗೆ ಕಂಬದಹಳ್ಳಿ ತೀರ್ಥವೆಂದು ಬದಲಾವಣೆಗೊಂಡಿದ್ದಿತು. ಇಲ್ಲಿನ ದೇವಾಲಯದ ಮುಂದಿರುವ ಕಂಬವನ್ನು ಮಾನಸ್ತಂಭವೆಂದು ಕರೆಯುತ್ತಾರೆ. ಕನ್ನಡ ನಿಘಂಟು ಮಾನಸ್ತಂಭದ ಅರ್ಥವನ್ನು ಹೀಗೆ ನೀಡುತ್ತದೆ.[77] ಜೈನ ಬಸದಿಯ ಮುಂದೆ ನಿಲ್ಲಿಸಿರುವ ಕಂಬ 'ಮಾನವನ್ನು ಸ್ತಂಭನ ಮಾಡುವಂತಹ ಕಂಬ ಸಮವಸರಣ ಮಾರ್ಗಗಳಲ್ಲಿ ನಟ್ಟನಡುವೆ ಗೋಳಾಕಾರದಲ್ಲಿರುವ ಕಂಬ ಇದು ಕ್ರಮವಾಗಿ ಚಿಕ್ಕಚಿಕ್ಕದಾಗುತ್ತಾ ಹೋಗುವ ಮೂರು ಗೋಳಾಕಾರದ ಪೀಠದ ಮೇಲೆ ಸ್ಥಾಪಿತವಾಗಿರುತ್ತವೆ. ಅದರ ಎತ್ತರ ತೀರ್ಥಂಕರ ಶರೀರಾಕೃತಿಯ ಹನ್ನೆರಡು ಪಟ್ಟು ಇರುತ್ತದೆ. ಇದು ಮೂರು ಖಂಡಗಳಲ್ಲಿ ವಿಭಾಗವಾಗಿರುತ್ತವೆ. ಇದು ಘಂಟೆ, ಚಾಮರ, ಧ್ವಜಗಳಿಂದ ಅಲಂಕೃತವಾಗಿ ಮೂರು ಲೋಕಕ್ಕೂ ಮಾನ್ಯವಾಗಿರುತ್ತದೆ. ಇದರ ದರ್ಶನದಿಂದ ನೋಡಿದವನ ಅಹಂಕಾರ ದೂರವಾಗಿ ಧಾರ್ಮಿಕ ಶ್ರದ್ಧೆ ಮೂಡುತ್ತದೆ. ಮಾನಸ್ತಂಭದ ತುದಿಯಲ್ಲಿ ಒಂದು ಸಣ್ಣ ಮಂಟಪವಿದ್ದು ಅದರಲ್ಲಿ ಸಾಮಾನ್ಯವಾಗಿ ಬ್ರಹ್ಮನ ಅಥವಾ ಬ್ರಹ್ಮಯಕ್ಷನ ವಿಗ್ರಹವಿರುತ್ತದೆ. ಆದರೆ ಕಂಬದಹಳ್ಳಿಯ ಮಾನಸ್ತಂಭ ಈ ಮೇಲಿನ ವಿವರಣೆಗೆ ಅನುರೂಪವಾಗಿಲ್ಲ.

ಆದಿಪುರಾಣ,[78] ಚಾವುಂಡರಾಯ ಪುರಾಣಗಳಲ್ಲಿಯೂ[79] ಮಾನಸ್ತಂಭಗಳ ಉಲ್ಲೇಖ ಕಂಡುಬರುತ್ತದೆ. ಮೊಟ್ಟಮೊದಲು ಮಾನಸ್ತಂಭದ ಮೂಲ ಉಲ್ಲೇಖವಾಗುವುದು ಆಚಾರ್ಯ ಜಿನಸೇನರು ಮತ್ತು ಗುಣಭದ್ರರು ಬರೆದಿರುವ ಮಹಾಪುರಾಣದ ಆದಿಭಾಗದ 22ನೆಯ ಪರ್ವದ ಆದಿತೀರ್ಥಂಕರನ ಸಮವಸರಣ ವಿವರಣೆಯ ಸಂದರ್ಭದಲ್ಲಿ.[80] ಸಮವಸರಣ ಅಥವಾ ತೀರ್ಥಂಕರನ ಆಸ್ಥಾನವು ದೇವೇಂದ್ರನ ಅಪ್ಪಣೆಯಂತೆ ದೇವಶಿಲ್ಪಿಗಳಿಂದ ರಚಿತವಾಯಿತು. ಆಸ್ಥಾನ ಮಂಡಲ ಇತರ ಎಲ್ಲ ಅಂಗಗಳು ನಿರ್ಮಾಣವಾದವು. ಇಡೀ ದೇವಾಲಯವು 12 ಯೋಜನ ವಿಸ್ತಾರಣವಾಗಿತ್ತು.

ಸಮವಸರಣ ಮಂಡಲಕ್ಕೆ ಧೂಲಿಸಾಲವು' ಅಂದರೆ ರತ್ನಧೂಳಿಯಿಂದ ಕೂಡಿದ ಮೊದಲನೆಯ ಕೋಟೆ ಆವರಿಸಿತ್ತು. ಇದನ್ನು ದಾಟಿಕೊಂಡು ಸಮವಸರಣ ಮಂಟಪಕ್ಕೆ ಸಾಗಬೇಕಾಗಿದ್ದಿತು. ಇದನ್ನು ಧೂಲಿಸಾಲವೇ ಕಟಿಸೂತ್ರದಂತೆ ವ್ಯಾಪಿಸಿತ್ತು. ಇದರ ನಾಲ್ಕು ದಿಕ್ಕಿನಲ್ಲಿ ಕಂಬಗಳು ಇದ್ದವು. ಅವು ಬಂಗಾರದವಾಗಿದ್ದವು. ಅವಕ್ಕೆ ಮಕರ ತೋರಣಗಳನ್ನು ಅಳವಡಿಸಲಾಗಿದ್ದಿತು. ಸಮವಸರಣ ಮಂಟಪವನ್ನು ಪ್ರವೇಶ ಮಾಡುವ ಮಾರ್ಗದಲ್ಲಿ ಬಂಗಾರದಿಂದ ನಿರ್ಮಿತವಾದ ಉನ್ನತವಾದ ಮಾನಸ್ತಂಭಗಳು ಇದ್ದವೆಂದು ಕೃತಿಯು ಮಾನಸ್ತಂಭವನ್ನು ಮತ್ತು ಅದರ ಸೌಂದರ್ಯವನ್ನು ದಾಖಲಿಸುತ್ತದೆ. ಈ ಕೃತಿಯಲ್ಲಿ ಬರುವ ಮಾನಸ್ತಂಭದ ವರ್ಣನೆ ಹೀಗಿದೆ "ಆ ಧೂಲೀಸಾಲದೊಳಗೆ ಸ್ವಲ್ಪ ದೂರ ಹೋದಮೇಲೆ ಸಮವಸರಣದ ಮಂಟಪಕ್ಕೆ ಪ್ರವೇಶ ಮಾಡುವ ದಾರಿಯಲ್ಲಿ ನಾಲ್ಕೂ ದ್ವಾರಗಳಲ್ಲಿ ನಾಲ್ಕು ಗೋಪುರಗಳುಳ್ಳ ಮೂರು ಕೋಟೆಗಳಿಂದ ಸುತ್ತಲ್ಪಟ್ಟಿರುವುದೂ ಮಾನಸ್ತಂಭದ ಬುಡದಲ್ಲಿರುವ ಜಿನ ಪ್ರತಿಮೆಗಳ ಅಭಿಷೇಕದ ನೀರಿನಿಂದ ಪವಿತ್ರವೂ ಬಂಗಾರದ ಹದಿನಾರು ಮೆಟ್ಟಿಲುಗಳುಳ್ಳದ್ದೂ ಮಧ್ಯದಲ್ಲಿರಿಸಲ್ಪಟ್ಟ ಪೀಠವುಳ್ಳದ್ದೂ ಸಣ್ಣ ಪುಷ್ಪಮಾಲೆಗಳಿಂದ ರಚಿಸಲ್ಪಟ್ಟ ಪೂಜೆಯುಳ್ಳದ್ದೂ ಮನುಷ್ಯರಿಂದಲೂ ದೇವತೆಗಳಿಂದಲೂ ದಾನವರಿಂದಲೂ ಪೂಜಿಸುವುದಕ್ಕೆ ಯೋಗ್ಯವೂ ಆದ ಜಗತಿ (=ಜಗಲಿ) ಯ ಮೇಲಿರುವ ಉನ್ನತವಾದ ಮಾನಸ್ತಂಭಗಳು ಅಧಿಕವಾಗಿ ಪ್ರಕಾಶಿಸುತ್ತಿದ್ದವು. ಆ ಮಾನಸ್ತಂಭಗಳನ್ನು ದೂರದಿಂದ ನೋಡಿದ ಮಾತ್ರಕ್ಕೆ ಮಿಥ್ಯಾದೃಷ್ಟಿಗಳ ಮಾನ(=ಗರ್ವ) ವು ಶೀಘ್ರವಾಗಿ ನಷ್ಟವಾಗುವುದು.

ಆಕಾಶವನ್ನು ಮುಟ್ಟುತ್ತಿರುವುವೂ ಅಧಿಕವಾದ ಪರಿಮಾಣವುಳ್ಳವೂ ಘಂಟೆಗಳಿಂದ ಸುತ್ತಲ್ಪಟ್ಟಿರುವುದೂ ಚಾಮರಗಳಿಂದಲೂ ಧ್ವಜಗಳಿಂದಲೂ ಯುಕ್ತವೂ ಆದ ಆ ಮಾನಸ್ತಂಭಗಳು ದಿಗ್ಗಜಗಳಂತೆ ಶೋಭಿಸುತ್ತಿದ್ದವು. ನಾಲ್ಕು ದಿಕ್ಕುಗಳಲ್ಲಿಯೂ ಇರುವ ನಾಲ್ಕು ಮಾನಸ್ತಂಭಗಳು ಜಿನೇಶ್ವರನ 'ಅನಂತಜ್ಞಾನ' 'ಅನಂತದರ್ಶನ' 'ಅನಂತವೀರ್ಯ' 'ಅನಂತಸುಖ'ಗಳೆಂದು ಅನಂತ ಚತುಷ್ಟಯಗಳು ಆ ಮಾನಸ್ತಂಭಗಳ ನೆಪದಿಂದ ಮೇಲಕ್ಕೆದ್ದಿರುವಂತೆ ಶೋಭಿಸುತ್ತಿದ್ದುವು. ಆ ಮಾನಸ್ತಂಭಗಳ ಬುಡದಲ್ಲಿ ಪ್ರತಿಷ್ಠಿತವೂ ಬಂಗಾರಮಯವೂ ಆದ ಜಿನಬಿಂಬಗಳನ್ನು ದೇವೇಂದ್ರರು ಕ್ಷೀರಸಮುದ್ರದ ಜಲಾಭಿಷೇಕಗಳಿಂದ ಪೂಜಿಸಿದರು. ಈ ಮಾನಸ್ತಂಭಗಳು ಪ್ರತಿನಿತ್ಯದಲ್ಲೂ ಉಂಟಾಗುವ ಮಹಾವಾದ್ಯ ಶಬ್ಧಗಳಿಂದಲೂ ಮಂಗಲಕರವಾದ ಸಂಗೀತಗಳಿಂದಲೂ ನರ್ತನಗಳಿಂದಲೂ ಪ್ರಕಾಶಿಸುತ್ತಿದ್ದವು. ಹಿಂದೆ ಹೇಳಿದ ಜಗತಿಯ ಮಧ್ಯದಲ್ಲೊಂದು ದೊಡ್ಡ ಪೀಠವೂ ಅದರ ಮಧ್ಯದಲ್ಲೊಂದು ತ್ರಿಮೇಖಲ (=ಮೂರು ಅಂತಸ್ತಿನ) ಪೀಠವೂ ಅದರ ಮೇಲೆ ಶ್ರೇಷ್ಠವಾದ

ಬುಡ(=ಮೂಲ) ಗಳುಳ್ಳ ಆ ಮಾನಸ್ತಂಭಗಳೂ ಪ್ರತಿಷ್ಠೆ ಮಾಡಲ್ಪಟ್ಟಿದ್ದವು. ಸುವರ್ಣಮಯವೂ ಉನ್ನತವೂ ಆದ ಶಿಖರದಲ್ಲಿ ಛತ್ರತ್ರಯಗಳುಳ್ಳವೂ ಆದ ಮಾನಸ್ತಂಭಗಳು ದೇವೇಂದ್ರನಿಂದ ನಿರ್ಮಿತವಾಗಿರುವುದರಿಂದ 'ಇಂದ್ರಧ್ವಜ' ವೆಂಬ ರೂಢಿಯನ್ನು ಹೊಂದಿವೆ. ಮಾನ (=ಗರ್ವ)ವನ್ನು ಸ್ತಂಭನ ಮಾಡುವುದರಿಂದಲೂ ಮಹಾಪರಿಮಾಣವುಳ್ಳೋಣದರಿಂದಲೂ ಮೂರು ಲೋಕಕ್ಕೂ ಮಾನ್ಯ (=ಪೂಜ್ಯ) ವಾಗಿರುವುದರಿಂದಲೂ ತತ್ತ್ವಜ್ಞಾನಿಗಳು ಸಾರ್ಥಕವಾದ ಹೆಸರಿನಿಂದ ಎಂದರೆ "ಮಾನಸ್ತಂಭಗಳು" ಎಂದು ಹೇಳುತ್ತಾರೆ. ನಿರ್ಮಲವಾದ ಜಲವೂ ನೈದಿಲೆಗಳೂ ಉಳ್ಳ ಮತ್ತು ಭವ್ಯ ಪ್ರಾಣಿಗಳ ವಿಶುದ್ಧ ಪರಿಣಾಮಗಳಂತಿರುವ ಬಾವಿಗಳು ಆ ಮಾನಸ್ತಂಭಗಳ ಸಮೀಪ ಭೂಪ್ರದೇಶವನ್ನಲಂಕರಿಸಿದ್ದವು.

ಜಿನಸೇನಾಚಾರ್ಯರ ನಂತರ ಬದುಕಿದ್ದ ಪಂಪನು ತನ್ನ ಆದಿಪುರಾಣವನ್ನು ಕ್ರಿ.ಶ. 941ರಲ್ಲಿ ಪೂರ್ಣಗೊಳಿಸಿದನು. ಪಂಪ ತನ್ನ ಕನ್ನಡ ಕೃತಿಗೆ ಪೂರ್ವಪುರಾಣ ಗ್ರಂಥವನ್ನೇ ಆಧರಿಸಿದ್ದಾನೆ. ಅವನೂ ಕೂಡ ತನ್ನ ಕೃತಿಯಲ್ಲಿ ಮಾನಸ್ತಂಭಗಳ ವಿವರಣೆಯನ್ನು ನೀಡುತ್ತಾನೆ.[81] ಧೂಳಿಪಾಲ ಅಥವಾ ರತ್ನಧೂಳಿಯಿಂದ ಕೂಡಿದ ಕೋಟೆ ಅದರ ನಾಲ್ಕು ದಿಕ್ಕಿನಲ್ಲಿ ನಾಲ್ಕು ಕಂಬಗಳು ಆ ಕಂಬಗಳನ್ನು ತಲುಪುವವರೆಗೆ ಮಕರ ತೋರಣಾಲಂಕೃತ ಬಹಿರಂತರ ಜಗತಿಗಳು ಆ ಜಗತಿಗಳಲ್ಲಿ ರಕ್ಷಣೆಗಾಗಿ ಜೋತಿಷ್ಯ ದೌವಾರಿಕ ದೇವತೆಗಳು ಅರ್ಥಾತ್ ದ್ವಾರಪಾಲಕರುಗಳು, ದ್ವಾದಶ ಗೋಪುರಗಳಿಂದ ಕೂಡಿದ ಮಹಾಮಾರ್ಗ ಸಾಲುವೃಕ್ಷಗಳಿಂದ ಆವೃತವಾದ ಮೂರು ಮಾರ್ಗಗಳು ಅಲ್ಲಿನ ಎರಡು ಜಲಾಶಯಗಳ ಸಂಪರ್ಕ ಹೊಂದಿದ ನಂದಾದಿ ಶೋಡಷ ಸರೋವರಗಳು ಮುಂತಾದವುಗಳನ್ನು ಹೊಂದಿದಂತೆ ಸೋಪಾನಗಳಿಂದ ಆವೃತವಾದ ನಾಲ್ಕು ಸರೋವರಗಳು ಅದರ ಮಧ್ಯೆ ಜಗತಿ ಆ ಜಗತಿಯ ಮೇಲೆ ಎಂಟು ಅಥವಾ ನಾಲ್ಕು ಬಿಲ್ಲಿನಷ್ಟು ಉದ್ದವಾದ ಕಂಬಗಳು ಚಿನ್ನ ಮತ್ತು ಪಂಚರತ್ನಗಳಿಂದ ಅಲಂಕೃತವಾದ ಮೂರು ಪೀಠಗಳು ಆ ಕಂಬದ ಅಧೋಭಾಗದಲ್ಲಿ ಚಚೌಕವಾಗಿ ಮೇಲುಭಾಗದಲ್ಲಿ ದುಂಡಾಗಿಯೂ ಇದ್ದ ಅಲಂಕರಣಿಕೆಗಳು ಕೆಳಭಾಗದಲ್ಲಿ ಜೈನಬಿಂಬಗಳನ್ನು ಮೇಲ್ಭಾಗದಲ್ಲಿ ಚಿನ್ನದ ಗಂಟೆಗಳನ್ನು ಚಾಮರ ಧ್ವಜಗಳನ್ನು ಹೊಂದಿದ್ದು ಅವು ಮಿಥ್ಯಾ ಜ್ಞಾನಿಗಳ ಎದೆಯಲ್ಲಿ ಮಾನ ಅಂದರೆ ಗರ್ವ, ಅಹಂಕಾರ ಯಾವ ವಿಧದಲ್ಲೂ ಪ್ರವೇಶ ಮಾಡದ ಹಾಗೆ ಇದ್ದವು. ಮಾನಸ್ತಂಭವನ್ನು ಕಂಡ ಕೂಡಲೇ ಅಹಂಕಾರ ನಾಶವಾಗುತ್ತಿತ್ತು ಎಂದು ಮಾನಸ್ತಂಭದ ಬಗೆಗೆ ವಿವರಿಸುತ್ತಾನೆ.

ಇದೇ ಸರಿಸುಮಾರಿನ ಕಾಲದಲ್ಲಿ ಕಂಬದಹಳ್ಳಿಯಲ್ಲಿ ನಿರ್ಮಾಣಗೊಂಡಿರುವ ಬಸದಿಯ ಉತ್ತರದಿಕ್ಕಿನಲ್ಲಿ ಅಸಮಸ್ವರೂಪದ ನಯಗೊಳಿಸದ ಕಲ್ಲುಗಳಿಂದ ನಿರ್ಮಿಸಿದ ಎತ್ತರವಾದ ವೇದಿಕೆಯ ಮೇಲೆ ಭವ್ಯವಾದ, ಎತ್ತರವಾದ ಗ್ರಾನೈಟ್ ಶಿಲೆಯನ್ನು ಬಳಸಿ ಅಷ್ಟಭುಜಾಕೃತಿಯಲ್ಲಿ ಪೀಠವನ್ನು ಹೊಂದಿದ ಮಾನಸ್ತಂಭವಿದೆ. ಈ ಎಂಟು ಮುಖಗಳಲ್ಲಿ ಶೋಡಷ ವೇಣು ಆಕೃತಿಯನ್ನು ಮೂರು ವೃತ್ತಾಕಾರದ ಪಟ್ಟಿಕೆಗಳನ್ನು ಹೊಂದಿದೆ. ಶಾಸ್ತ್ರ ರೀತಿಯಲ್ಲಿ ಹೇಳುವುದಾದರೆ ಮೂರು ವರ್ತುಲ ಸ್ತಂಭಗಳನ್ನು ಒಂದರ ಮೇಲೊಂದರಂತೆ ಹೊಂದಿದೆ. ಅವುಗಳೆಂದರೆ ಕಮಲ, ಮಣಿ ಹಾಗೂ ನೇಲ್ವ ಬಳ್ಳಿಯ ಕೆತ್ತನೆಗಳನ್ನು ಹೊಂದಿವೆ. ಮಾನಸ್ತಂಭದ ತುತ್ತತುದಿಯಲ್ಲಿ ಗಾಲಿಯೊಂದರ ಮೇಲೆ ಚೌಕಾಕಾರದ ಮಟ್ಟಸ ಹಲಗೆಯ ಮೇಲೆ ಯಕ್ಷ ರೂಪದ ಬ್ರಹ್ಮನ ಪ್ರತಿಮೆಯನ್ನು ಉತ್ತರಾಭಿಮುಖವಾಗಿ ಪ್ರತಿಷ್ಠಾಪಿಸಲಾಗಿದೆ.[82] ಕರ್ನಾಟಕದಲ್ಲಿರುವ ಕೆಲವೇ ಕೆಲವು ಮಾನಸ್ತಂಭಗಳಲ್ಲಿ ಈ ಮಾನಸ್ತಂಭ ಕೂಡ ಒಂದು. ಅಲ್ಲದೆ ಇದು ಭವ್ಯವಾದುದೂ ಕೂಡ. ಈ ಮಾನಸ್ತಂಭದ ಮೇಲೆ ಎರಡು ಶಾಸನಗಳಿವೆ. ಒಂದು ಇಮ್ಮಡಿ ಮಾರಸಿಂಹನ ಸ್ಮಾರಕ ಶಾಸನ. ಹಾಗೂ ಇದು ಚಾವುಂಡರಾಯನ ಶಾಸನದ ಅಕ್ಷರಗಳನ್ನೇ ಹೋಲುತ್ತದೆ.

ಇನ್ನೊಂದು ಶಕವರ್ಷ 1040ರಲ್ಲಿ ಅಂದರೆ ಕ್ರಿ.ಶ. 1118–19ರಲ್ಲಿ ಹೊರಡಿಸಿದ ಶಾಸನವಾಗಿದ್ದು ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನ ದಂಡನಾಯಕನೂ ಮಹಾಸಾಮಂತಾಧಿಪತಿಯೂ ಆದ ಗಂಗರಾಜನು ತಲಕಾಡನ್ನು ಜಯಿಸಿದ ನಂತರ ಗಂಗವಾಡಿ ತೊಂಬತ್ತಾರು ಸಾವಿರವನ್ನು ತನ್ನ ದೊರೆ ವಿಷ್ಣುವರ್ಧನನಿಗೆ ಸಮರ್ಪಿಸಿದಾಗ ಸಂಪ್ರೀತನಾದ ಚಕ್ರವರ್ತಿಯು ದಂಡನಾಯಕನಿಗೆ ಇಚ್ಛಿಸಿದ್ದನ್ನು ಬೇಡಲು ತಿಳಿಸಿದಾಗ ಗಂಗರಾಜನು ಬಿಂಡಿಗನವಿಲೆ ತೀರ್ಥಕ್ಕೆ ತಳವೃತ್ತಿಯನ್ನು ಬೇಡಿದುದನ್ನು ಅದನ್ನು ಚಕ್ರವರ್ತಿಯು ಮನ್ನಿಸಿದುದನ್ನು ದಾಖಲಿಸುತ್ತದೆ. ಈ ಎರಡು ಶಾಸನಗಳ ವಿವರಗಳ ಬಗ್ಗೆ ಈಗಾಗಲೇ ಶಾಸನಗಳ ಅಧ್ಯಾಯದಲ್ಲಿ ವಿವರವಾಗಿ ದಾಖಲಿಸಿರುವುದರಿಂದ ಇದನ್ನು ಹೆಚ್ಚಿದನದಾಗಿ ವಿವರಿಸಿಲ್ಲ. ಈ ಸ್ತಂಭವನ್ನು ನಿರ್ಮಿಸಿದ ಬಗೆಗೆ ಯಾವ ದಾಖಲೆಗಳು ಅಥವಾ ಶಾಸನಗಳೂ ಲಭ್ಯವಿಲ್ಲ. ಹಾಗಾಗಿ ಶಾಸನವನ್ನು ಆಧರಿಸಿ ದೇವಾಲಯದ ಮತ್ತು ಕಂಬದಹಳ್ಳಿಯ ಮಾನಸ್ತಂಭದ ರಚನೆಯ ಕಾಲವನ್ನು ಗುರುತಿಸಲು ಸಾಧ್ಯವಿಲ್ಲ.

ಶಾಸನವೊಂದರಲ್ಲಿ ಬಿಂಡಿಗನವಿಲೆಯನ್ನು ಜೈನತೀರ್ಥವೆಂದು ಮತ್ತು ಇಲ್ಲಿನ ಬಸದಿಗಳನ್ನೇ ಬಿಂಡಿಗನವಿಲೆಯ ಬಸದಿಗಳೆಂದು ಸೀತಾರಾಮ್ ಜಾಗೀರ್‌ದಾರ್‌ರವರು ಸಮೀಕರಿಸುತ್ತಾರೆ.[83]

ಬಿಂಡಿಗನವಿಲೆಯೂ ಆ ಕಾಲಕ್ಕಾಗಲೇ ಪ್ರಸಿದ್ಧ ಜೈನಕ್ಷೇತ್ರವಾಗಿದ್ದುದು ತಿಳಿದುಬರುತ್ತದೆ. ಮಂಡ್ಯ ಜಿಲ್ಲೆಯ ಬಹುತೇಕ ಜೈನಶಾಸನಗಳ ಇರುವಿಕೆಯನ್ನು ಗಮನಿಸಿದರೆ ಅವು ವೈಷ್ಣವ, ಶೈವ, ಶಾಕ್ತ ಸಂಪ್ರದಾಯದ ದೇವಾಲಯಗಳಲ್ಲಿ ಇಲ್ಲವೇ ದೇವಾಲಯಗಳ ಕಂಬಗಳಲ್ಲಿ ಕಂಡುಬರುವುದರಿಂದ ಪ್ರಾಯಶಃ ಗಂಗರ ಕಾಲದ ಜಿನಾಲಯಗಳು ಚೋಳರ ಆಕ್ರಮಣ ಕಾಲದಲ್ಲಿ ರಾಜಾಶ್ರಯವನ್ನು ಕಳೆದುಕೊಂಡು ಅವು ಶೈವ, ಶಾಕ್ತ, ವೈಷ್ಣವ ದೇವಾಲಯಗಳಾಗಿ ಪರಿವರ್ತಿತವಾಗಿರುವ ಅಥವಾ ಅವು ನಶಿಸಿದ ನಂತರ ಆ ದೇವಾಲಯದ ವಾಸ್ತುಭಾಗಗಳನ್ನು ಬಳಸಿ ಬೇರೆ ದೇವಾಲಯಗಳನ್ನು ನಿರ್ಮಾಣ ಮಾಡಿರಬಹುದಾದ ಸಾಧ್ಯತೆಗಳನ್ನು ತಳ್ಳಿ ಹಾಕಲಾಗುವುದಿಲ್ಲ.

ಶ್ರೀರಂಗಪಟ್ಟಣದಲ್ಲಿ ಪ್ರಚಲಿತದಲ್ಲಿರುವ ಒಂದು ಐತಿಹ್ಯದಂತೆ ರಂಗನಾಥನ ನವರಂಗದ ಪ್ರದೇಶವನ್ನು ಹೊಯ್ಸಳರ ನಂತರದ ಕಾಲದಲ್ಲಿ ಅಂದರೆ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಕಳಸ್ತವಾಡಿಯಲ್ಲಿದ್ದ ತೃಟಿತ ಜೈನ ಮಂದಿರಗಳ ಕಂಬಗಳನ್ನು ಮತ್ತು ಇತರ ಭಾಗಗಳನ್ನು ಸಾಗಿಸಿ ಪುನರ್ ನಿರ್ಮಾಣ ಮಾಡಿದಂತೆ ತಿಳಿದುಬರುತ್ತದೆ. ಕ್ಯಾತನಹಳ್ಳಿಯಲ್ಲಿ ಜೈನಶಾಸನವೊಂದು ಶ್ರೀರಾಮ ದೇವರ ಗುಡಿಯಲ್ಲಿದೆ. ಅದೇ ರೀತಿ ಮಂಡ್ಯಜಿಲ್ಲೆಯ ಮಂಡ್ಯ ತಾಲ್ಲೂಕಿನ ಗುತ್ತಲುವಿನ ಜೈನಶಾಸನವು ಈಶ್ವರನ ದೇವಾಲಯದಲ್ಲಿದೆ. ಹೀಗೆ ಹಲವಾರು ಜೈನಶಾಸನಗಳು ಇಲ್ಲಿ ಸ್ಥಳಾಂತರಗೊಂಡಿವೆ ಇಲ್ಲ ದೇವಾಲಯಗಳೇ ಹಿಂದೂ ಆಲಯಗಳಾಗಿ ಪರಿವರ್ತಿವಾಗಿವೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಬಿಂಡಿಗನವಿಲೆ ತೀರ್ಥ ಮತ್ತು ಕಂಬದಹಳ್ಳಿ ಎರಡೂ ಜೈನ ಕ್ಷೇತ್ರಗಳಾಗಿದ್ದು ಕೆಲಕಾಲದ ನಂತರ ಕಂಬದಹಳ್ಳಿ ಮಾತ್ರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಿಂಡಿಗನವಿಲೆ ತೀರ್ಥ ತನ್ನ ಅಸ್ತಿತ್ವವನ್ನು ಕಳೆದುಕೊಂಡಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

ಮೈಸೂರು ಪುರಾತತ್ವ ಇಲಾಖೆಯ ವರದಿಯು ಕಂಬದಹಳ್ಳಿಯಲ್ಲಿ ಪಂಚಕೂಟ ಬಸದಿ, ಶಾಂತಿನಾಥ ಬಸದಿ ಮತ್ತು ಗ್ರಾಮದ ಎಲ್ಲೆಯಲ್ಲಿರುವ ಗುಡ್ಡದ ಮೇಲಿನ ಬಸದಿಯೆಂಬ ಮೂರು ಬಸದಿಗಳನ್ನು ಉಲ್ಲೇಖಿಸುತ್ತದೆ.[84] ಇವುಗಳನ್ನು ಮೂರು ಕಾಲಘಟ್ಟಗಳಲ್ಲಿ ನಿರ್ಮಿಸಲಾಗಿದೆಯೆಂದು ಭಾವಿಸಲಾಗಿದೆ. ಇವು ಇತಿಹಾಸ ಕಾಲಘಟ್ಟದಲ್ಲಿ ಹಲವಾರು ಬಾರಿ ದುರಸ್ತಿಗೊಂಡಿರುವುದು ತಿಳಿದುಬರುತ್ತದೆ. ಕೇಂದ್ರ ಪುರಾತತ್ವ ಇಲಾಖೆಯಿಂದ ರಾಷ್ಟ್ರೀಯ ಸಂರಕ್ಷಿತ ಸ್ಮಾರಕವೆಂದು ಘೋಷಿಸಲ್ಪಟ್ಟಿದೆ.

ಈ ದೇವಾಲಯ ಸಂಕೀರ್ಣದಿಂದ ಸ್ವಲ್ಪ ದೂರದಲ್ಲಿ ಉತ್ತರಕ್ಕೆ ಇರುವ ಶಾಂತಿನಾಥ ಬಸದಿಯು ಸುಮಾರು 12ನೆಯ ಶತಮಾನದ ನಿರ್ಮಾಣ. ಅದೂ ಕೂಡ ದ್ವಿಕೂಟ ಎಂಬ ಅಭಿಪ್ರಾಯವಿದೆ. ಇದರ ಅಧಿಷ್ಠಾನದ ಪಟ್ಟಿಕೆಗಳಲ್ಲಿ ಆನೆ, ಸಿಂಹ, ಕುದುರೆ, ವ್ಯಾಳಿ, ಗೂಳಿ ಹಾಗೂ ಆನೆ-ಕುದುರೆ, ಆನೆ-ಸಿಂಹಗಳ ನಡುವಣ ಹೋರಾಟವನ್ನು ಆಕರ್ಷಕವಾಗಿ ಕೆತ್ತಲಾಗಿದೆ. ಪೂರ್ವ ಹಾಗೂ ಪಶ್ಚಮ ದಿಕ್ಕಿಗೆ ಮುಖಮಾಡಿರುವ ದೇವಾಲಯಗಳು ಕ್ರಮವಾಗಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ವಿಶಾಲವಾದ ಸಭಾಮಂಟಪವನ್ನು ಹೊಂದಿದ್ದು, ಪಶ್ಚಿಮದ ಗರ್ಭಗೃಹದಲ್ಲಿ 12 ಅಡಿ ಎತ್ತರದ ಶಾಂತಿನಾಥ ತೀರ್ಥಂಕರನ ಸುಂದರ ಶಿಲ್ಪವಿದೆ. ಪೂರ್ವದ ಗರ್ಭಗೃಹ ಭಾಗವನ್ನು ಈಗ ಪ್ರವೇಶ ದ್ವಾರವನ್ನಾಗಿ ಬಳಸಲಾಗುತ್ತಿದೆ. ಗಂಗರಾಜ ದಂಡನಾಯಕನ ಮಗ ಬೊಪ್ಪನು ಇದನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ನವರಂಗದಲ್ಲಿ ನೇಮಿನಾಥ, ಧರಣೇಂದ್ರ, ಗೋಮುಖ ಮತ್ತು ಪದ್ಮಾವತಿಯ ಯಕ್ಷಿಯರ ಶಿಲ್ಪಗಳಿವೆ. ನವರಂಗದ ಛಾವಣಿಯನ್ನು ಅಷ್ಟದಿಕ್ಪಾಲಕರಿಂದ ಆವೃತ್ತವಾದ ಪದ್ಮಾಸೀನ ತೀರ್ಥಂಕರನ ಕೆತ್ತನೆಯು ಆಕರ್ಷಣೀಯವಾಗಿದೆ.

ಪಂಚಕೂಟ ಬಸದಿ : ಮಾನಸ್ತಂಭವನ್ನು ದಾಟಿಕೊಂಡು ಮುಂದೆ ನಡೆದಂತೆ ಪಂಚಕೂಟ ಬಸದಿಯ ಪ್ರವೇಶದ್ವಾರವಿದೆ. ಇದರ ಅಧಿಷ್ಠಾನವು ಅಷ್ಟಮುಖ ಕಲ್ಲುಗಳಿಂದ ರಚಿತವಾಗಿದ್ದು ಕಪೋತವನ್ನು ಹೊಂದಿದೆ. ಅಲ್ಲದೆ ಅಲಂಕರಣದಿಂದ ಕೂಡಿದ ಗೂಡುಗಳಲ್ಲಿ ಅಥವಾ ದೇವಕೋಷ್ಠಗಳಲ್ಲಿ ಕಾಯೋತ್ಸರ್ಗ ಅಥವಾ ಖಡ್ಗಾಸನದಲ್ಲಿರುವ ಜೈನ ಮೂರ್ತಿಗಳಿವೆ. ಈ ಮೂರ್ತಿಗಳು ತಮ್ಮ ಪ್ರಾರಂಭದ ದಿನಗಳಲ್ಲಿ ಅತ್ಯಂತ ಸುಂದರವಾಗಿದ್ದವು. ಆದರೆ ಈಗ ಕಾಲನ ಒಡೆತಕ್ಕೆ ಸಿಕ್ಕು ತತ್ತರಿಸಿ ಅವುಗಳು ತಮ್ಮ ಸೌಂದರ್ಯವನ್ನು ಕಳೆದುಕೊಂಡಿವೆ. ತ್ರಿಕೂಟ ಬಸದಿಯ ಮುಖಮಂಟಪದ ಉತ್ತರಕ್ಕಿರುವ ದ್ವಿಕೂಟಚಲ ದೇವಾಲಯವು ಪ್ರತ್ಯೇಕವಾದ ಎರಡು ದೇವಾಲಯಗಳನ್ನು ತೆರೆದ ಮಂಟಪದಿಂದ ಬಂಧಿಸಿ ನಿರ್ಮಿಸಲಾಗಿದೆ. ಈ ಆಲಯವು ಪ್ರತ್ಯೇಕವಾದ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಅಲ್ಲದೆ ಎರಡು ದೇವಾಲಯಗಳನ್ನು ಮಧ್ಯದ ತೆರೆದ ಮಂಟಪ ಒಂದಾಗಿಸಿದೆ. ಗರ್ಭಗೃಹಗಳಲ್ಲಿ ಪದ್ಮಾಸೀನ ತೀರ್ಥಂಕರರ ಶಿಲ್ಪಗಳಿವೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ಬಾಗಿಲವಾಡಗಳು ನಿರಾಡಂಬರವಾಗಿವೆ. ಈ ಪಂಚಕೂಟ ಬಸದಿಯ ಆವರಣಕ್ಕಿರುವ ಪ್ರವೇಶ ದ್ವಾರವು ಗೋಪುರರಹಿತ ಮಂಟಪವಾಗಿದ್ದು, ಕಿರುಕೋಷ್ಠಗಳಲ್ಲಿ ತೀರ್ಥಂಕರ ಶಿಲ್ಪಗಳಿವೆ. ಇಲ್ಲಿಯ ಪಂಚಕೂಟ ಬಸದಿ ಆವರಣದ ತ್ರಿಕೂಟಾಚಲ ಬಸದಿಯನ್ನು ಶೈಲಿಯ ಆಧಾರದ ಮೇಲೆ ಸುಮಾರು ಕ್ರಿ.ಶ. 900ರಲ್ಲಿ ನಿರ್ಮಾಣವಾಗಿರಬಹುದೆಂದು ಭಾವಿಸಲಾಗಿದೆ.

ಪಂಚಕೂಟ ಬಸದಿಯು ಉತ್ತರಾಭಿಮುಖವಾಗಿರುವುದು. ಇದರ ಪ್ರಧಾನ ಗರ್ಭಗೃಹ ಹಾಗೂ ತೆರೆದ ಅಂತರಾಳಕ್ಕೆ ಪೂರ್ವ-ಪಶ್ಚಿಮಕ್ಕೆ ಮತ್ತೆರಡು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ನವರಂಗ ಒಗ್ಗೂಡಿಸಿದೆ. ಈ ನವರಂಗಕ್ಕೆ ಎರಡಂಕಣದ ತೆರೆದ ಮುಖಮಂಪಟವಿದೆ. ಪ್ರಧಾನ ಗರ್ಭಗೃಹದಲ್ಲಿ ಆದಿನಾಥನ ಶಿಲ್ಪವಿದೆ. ಪೂರ್ವ-ಪಶ್ಚಿಮದ ಗರ್ಭಗೃಹಗಳಲ್ಲಿ ಕ್ರಮವಾಗಿ ನೇಮಿನಾಥ ಹಾಗೂ ಶಾಂತಿನಾಥರ ವಿಗ್ರಹಗಳಿವೆ. ಪ್ರಧಾನ ಗರ್ಭಗೃಹದಲ್ಲಿರುವ ಆದಿನಾಥ ಶಿಲ್ಪವನ್ನು ಕ್ರಿ.ಶ. 1198 ಪಾರ್ಶ್ವದೇವನು ಬಸದಿಯ ಜೀರ್ಣೋದ್ಧಾರ ಮಾಡಿದಾಗ ಪ್ರತಿಷ್ಠಾಪಿಸಿದ್ದು, ನವರಂಗದ ನೈಋತ್ಯ ಮೂಲೆಯಲ್ಲಿರುವ ಶಿಲ್ಪ ಇಲ್ಲಿನ ಮೂಲ ಶಿಲ್ಪ. ನವರಂಗದಲ್ಲಿ ಧರಣೇಂದ್ರ, ಗೋಮುಖ, ಕೂಷ್ಮಾಂಡಿನಿ, ಪದ್ಮಾವತಿ, ಬ್ರಹ್ಮ, ಕುಬೇರ, ಜ್ವಾಲಾಮಾಲಿನಿ ಮುಂತಾದ ಯಕ್ಷ-ಯಕ್ಷಿಯರ ಶಿಲ್ಪಗಳೂ ಇಲ್ಲಿವೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ನಡುವಣ ಭಾವಣಿಯನ್ನು ಅಷ್ಟದಿಕ್ಪಾಲಕ ಶಿಲ್ಪಗಳು ಹಾಗೂ ಸುಪಾರ್ಶ್ವನಾಥನ ಕೆತ್ತನೆ ಆವರಿಸಿದೆ.[85]

ಪ್ರವೇಶದ್ವಾರದ ಎರಡು ಪಾರ್ಶ್ವಗಳಲ್ಲಿ ಎರಡು ಬಸದಿಗಳನ್ನು ನಿರ್ಮಿಸಿ ಅಲ್ಲಿಂದ ಸುಮಾರು 15 ಅಡಿ ಅಂತರದಲ್ಲಿ ತ್ರಿಕೂಟಾಚಲ ಬಸದಿಯನ್ನು ನಿರ್ಮಿಸಿ ಪ್ರವೇಶದ್ವಾರದ ಎಡ ಮತ್ತು ಬಲ ಪಾರ್ಶ್ವದಲ್ಲಿರುವ ಜಿನಮಂದಿರಗಳಿಗೆ ಅದನ್ನು ಹೊಂದಿಸಲಾಗಿದೆ.[86]ಎರಡರ ವಾಸ್ತುಯೋಜನೆಯು ಅಂದರೆ ಪ್ರವೇಶದ್ವಾರವನ್ನು ದಾಟಿದ ನಂತರ ಪ್ರವೇಶದ್ವಾರದಲ್ಲಿನ ಎರಡು ಬದಿಗಳ ತಳನಕ್ಷೆ ಒಂದೇ ಆಗಿದ್ದರೂ ಅವುಗಳ ಪ್ರವೇಶದ್ವಾರದಲ್ಲಿ ಮಾತ್ರ ವ್ಯತ್ಯಾಸವಿದೆ. ಒಂದನ್ನೊಂದು ಎದುರುನೋಡುತ್ತಿರುವಂತೆ ಅವುಗಳನ್ನು ನಿರ್ಮಿಸಲಾಗಿದೆ. ತಳಪಾದಿಯಲ್ಲಿ ಸಿಂಹ ಹಾಗೂ ಮತ್ಸ್ಯ ಯಾಳಿಗಳಿವೆ. ದ್ವಿಕೂಟಾಚಲ ಮತ್ತು ತ್ರಿಕೂಟಾಚಲದ ವಾಸ್ತುವಿನ್ಯಾಸವು ಹೆಚ್ಚಾಗಿ ಆದಿನಾಥನ ಬಸದಿಯನ್ನೇ ಹೋಲುತ್ತವೆ. ಪ್ರವೇಶದ್ವಾರದ ನಂತರ ಕಂಡುಬರುವ ದ್ವಿಕೂಟಾಚಲ ಬಸದಿಗಳಿಗೆ ಮುಖಮಂಟಪಗಳಿರದಿದ್ದರೆ ಅಥವಾ ಅದನ್ನು ಮುಖಮಂಟಪವೊಂದರಿಂದ ಬಂಧಿಸದಿದ್ದರೆ ಅವು ವಿಭಿನ್ನವಾಗಿ ಪ್ರತ್ಯೇಕ ಕಟ್ಟಡಗಳಾಗಿರುತ್ತಿದ್ದವು. ಆದರೆ ಈಗ ಅವು ಒಂದೇ ಕಟ್ಟಡದಂತೆ ಕಂಡುಬರುತ್ತವೆ. ಜೋಡಿಬಸದಿಗಳಲ್ಲಿಯೂ ಯಾಳಿಗಳು ಅಷ್ಟ ಪೈಲಿ ಅಥವಾ ಅಷ್ಟಭುಜಾಕೃತಿಯ ಅಧಿಷ್ಠಾನ ಮಾದರಿಗಳು ಕುಡ್ಯಗಳು ಅಥವಾ ಭಿತ್ತಿ, ದೇವಕೋಷ್ಠಗಳ ಮೇಲಿನ ತೋರಣಗಳು, ಲತಾಕುಂಜರಗಳು ಅವುಗಳನ್ನು ಅಲಂಕರಿಸಿವೆ. ನವರಂಗದ ಕಂಬಗಳಲ್ಲಿ ಹೆಚ್ಚು ಅಷ್ಟಕೋನದ ಕಂಬಗಳು ಕಂಡುಬರುತ್ತವೆ. ಇವುಗಳು ಮಣಿತೋರಣಗಳಿಂದ ಅಲಂಕರಿಸಲ್ಪಟ್ಟಿವೆ. ಭಾವಣಿ, ಮಧ್ಯದಲ್ಲಿ ಮಟ್ಟಸವಾಗಿದ್ದು ಎರಡು ಪಾರ್ಶ್ವಗಳಲ್ಲಿ ಇಳಿಜಾರನ್ನು ಹೊಂದಿದೆ. ಭಾವಣಿಯ ಮಧ್ಯಭಾಗದಲ್ಲಿ

ಅಷ್ಟದಿಕ್ಪಾಲಕರನ್ನು ಕೇಂದ್ರದಲ್ಲಿ ಧರಣೇಂದ್ರ ಯಕ್ಷನನ್ನು ಇತರ ಜಿನಮೂರ್ತಿಗಳನ್ನು ಬಿಡಿಸಲಾಗಿದೆ. ವಿಶೇಷವಾಗಿ ಸುಖನಾಸಿಗಳಲ್ಲಿ ಇದ್ದಂತಹ ಮೂರ್ತಿಗಳು ಕಣ್ಮರೆಯಾಗಿವೆ. ಗರ್ಭಗೃಹದಲ್ಲಿ ಪದ್ಮಾಸನದಲ್ಲಿ ಕುಳಿತ ಜಿನಬಿಂಬ ಅದಕ್ಕೆ ಹೊಂದಿದ ಚಾಮರಧಾರಿಗಳು ಕಂಡುಬರುತ್ತವೆ. ಪೂರ್ವದ ಬಸದಿಯು ಪಶ್ಚಿಮದ ಬಸದಿಯಂತೆ ತಿರುಗಣಿ ಯಂತ್ರದ ಮೇಲೆ ಮಾಡಿದ ಕಂಬಗಳನ್ನು ಹೊಂದಿದೆ. ಇವು ಇಲ್ಲಿಯ ತ್ರಿಕೂಟಾಚಲ ದೇವಾಲಯದ ಪ್ರವೇಶದ್ವಾರದ ಕಂಬಗಳನ್ನು ಹೋಲುತ್ತವೆ. ಒಟ್ಟಾರೆ ಈ ಕಂಬಗಳು ಮತ್ತು ವಾಸ್ತು ನಿರ್ಮಾಣ ನರಸಮಂಗಲದ ಗಂಗರ ಕಾಲದ ದೇವಾಲಯವನ್ನು ನೆನಪಿಗೆ ತರುತ್ತವೆ. ಇಲ್ಲಿ ಕಂಡುಬರುವ ಮುಖ್ಯ ಲಕ್ಷಣಗಳನ್ನು ಗಮನಿಸಿದರೆ ಗಂಗರ ಕಾಲದಲ್ಲಿಯೇ ಈ ದೇವಾಲಯಗಳು ನಿರ್ಮಾಣವಾಗಿರಬೇಕೆಂದು ಇವನ್ನು ದ್ರಾವಿಡ ಶೈಲಿಯ ಕಟ್ಟಡಗಳೆಂದರೆ ತಪ್ಪಾಗಲಾರದು. ಕಾರಣ ಈ ದೇವಾಲಯಗಳ ನಿರ್ಮಾಣ ಕಾಲ ಖಚಿತವಾಗಿ ತಿಳಿಯದಿರುವುದರಿಂದ ಈ ಕಟ್ಟಡಗಳ ಕಾಲವನ್ನು ಕೇವಲ ಶೈಲಿಯ ಆಧಾರದ ಮೇಲೆ ಮಾತ್ರ ನಿರ್ಧರಿಸಬೇಕಾಗುತ್ತದೆ.

ತ್ರಿಕೂಟಾಚಲ ಬಸದಿ : ತ್ರಿಕೂಟಾಚಲ ಬಸದಿಯು ಮೂರು ಗರ್ಭಗೃಹಗಳು, ತೆರೆದ ಶುಕನಾಸಿಗಳು ಅಥವಾ ಅಂತರಾಳ ಹಾಗೂ ಮೂರು ನವರಂಗಗಳನ್ನು ಹೊಂದಿದೆ.[87] ಇಲ್ಲಿನ ಮುಖ್ಯ ಗರ್ಭಗೃಹದಲ್ಲಿ ಆದಿನಾಥ ಮೂರ್ತಿಯನ್ನು ಸ್ಥಾಪಿಸಿ ಆರಾಧಿಸಲಾಗುತ್ತಿದೆ. ಇದು ಮುಖ್ಯವಾಗಿ ಆದಿನಾಥನಿಗೆ ಸಂಬಂಧಿಸಿದುದರಿಂದ ಈ ಸಂಕೀರ್ಣವನ್ನು ಆದಿನಾಥ ಜಿನಾಲಯವೆಂದು ಕರೆಯುತ್ತಾರೆ. ಮೂರು ಜಿನಾಲಯಗಳು ಒಟ್ಟಾರೆ ಒಂದು ದೇವಾಲಯವಾಗಿ ಅಥವಾ ಸಂಕೀರ್ಣವಾಗಿ ನಿರ್ಮಾಣಗೊಂಡಿರುವುದರಿಂದ ಇದನ್ನು ತ್ರಿಕೂಟಾಚಲ ಬಸದಿಯೆಂದು ಕರೆಯುತ್ತಾರೆ. ಇಡೀ ದೇವಾಲಯವನ್ನು ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದೆ. ತಳಪಾಯದಲ್ಲಿ ಅಷ್ಟಪೈಲಿ ಶಿಲೆ, ಯಾಳಿ ಮುಂತಾದ ಪಟ್ಟಿಕೆಗಳಿಂದ ಕೂಡಿದ ಅಧಿಷ್ಠಾನವನ್ನು ಹೊಂದಿದ್ದು ಅದರ ಮೇಲೆ ಭಿತ್ತಿಯನ್ನು ನಿರ್ಮಿಸಲಾಗಿದೆ. ಭಿತ್ತಿಯು ಸರಳವಾಗಿದ್ದು ಅರೆಗಂಬಗಳನ್ನು ಹೊಂದಿದೆ. ಅಲ್ಲಲ್ಲಿ ಮಣಿತೋರಣಗಳು, ಯಕ್ಷರು, ಜೈನಬಿಂಬಗಳು ಅಲಂಕಾರ ಸಾಧನಗಳಾಗಿವೆ. ವಿಶೇಷವಾಗಿ ಮೂರು ಗರ್ಭಗೃಹಗಳ ಹಿಂಬದಿಯಲ್ಲಿ ಪ್ರಧಾನ ದೇವತೆಯ ನೇರ ಹಿಂಭಾಗದಲ್ಲಿ ದೇವಕೋಷ್ಟಗಳಿವೆ. ಅಲ್ಲಿ ಜಿನಮೂರ್ತಿಗಳನ್ನು ಇರಿಸಲಾಗಿದೆ. ಪ್ರತಿಯೊಂದು ದೇವಕೋಷ್ಠವೂ ಸುಂದರವಾದ ಮಕರತೋರಣವನ್ನು ಕುಸುಮವಲ್ಲಿಗಳಿಂದ ಅಲಂಕರಿಸಲ್ಪಟ್ಟಿವೆ. ಅವುಗಳ ಮೇಲೆ ಯಕ್ಷರು, ಗಂಧರ್ವರು, ಮುಕ್ಕೊಡೆಗಳನ್ನು ಹಿಡಿದು ಜಿನನಿಗೆ ಮರ್ಯಾದೆಯನ್ನು ಸೂಚಿಸುತ್ತಿರುವಂತೆ ಕೆತ್ತಲಾಗಿದೆ. ದೇವಕೋಷ್ಠಗಳಲ್ಲಿ ಅಂದರೆ ಈ ತ್ರಿಕೂಟಾಚಲ ಬಸದಿಯಲ್ಲಿ ಕಂಡುಬರುವ ಎಲ್ಲ

ದೇವಕೋಷ್ಠಗಳಲ್ಲಿ 24 ತೀರ್ಥಂಕರರ ವಿಗ್ರಹಗಳನ್ನು ಸ್ಥಾಪಿಸಿದ್ದರೆಂದು ಭಾವಿಸಬಹುದು. ಭಿತ್ತಿಯ ಮೇಲ್ಭಾಗ ದ್ರಾವಿಡ ಶೈಲಿಯ ಕಪೋತವನ್ನು ಹೊಂದಿದೆ. ಇವುಗಳ ಬಾಗು ಲಾಳಾಕಾರದ ಅಲಂಕರಣ ಮತ್ತು ಇತರ ಅಲಂಕರಣಗಳು ಕಣ್ಮನ ಸೆಳೆಯುತ್ತವೆ. ಕೈಪಿಡಿಯಲ್ಲಿ ನೀರ್ಗುದುರೆ, ನೀರಾನೆ, ಸಿಂಹ ಮತ್ತು ಮತ್ಸ್ಯ ಚಿತ್ರಗಳನ್ನು ಯಾಳಿಯು ಹೊಂದಿರುವಂತೆ ಕಡೆಯಲಾಗಿದೆ. ಮೂರು ಶಿಖರಗಳು ಗ್ರಾನೈಟ್ ಶಿಲೆಯಿಂದಲೇ ರಚಿತವಾಗಿದೆ. ಆಮಲಕದ ನಂತರದ ಭಾಗ ಹಾಳಾಗಿದ್ದರೂ ಶಿಖರಗಳು ಆಕರ್ಷಣೀಯವಾಗಿವೆ. ಮೂರು ಶಿಖರಗಳಲ್ಲಿಯೂ ಸಾಮ್ಯತೆ ಇದ್ದರೂ ಭಿನ್ನತೆಯನ್ನು ಗುರುತಿಸಬಹುದಾಗಿದೆ. ಕೇಂದ್ರದ ಅಥವಾ ಪ್ರಧಾನ ದೇವತೆಯ ಗುಡಿಯ ಮೇಲಿರುವ ವಿಮಾನವು ಅಷ್ಟಮುಖದಲ್ಲಿದ್ದು ಮತ್ತೆರಡು ಶಿಖರಗಳು ಕ್ರಮವಾಗಿ ಚೌಕ ಮತ್ತು ವೃತ್ತಾಕಾರದಲ್ಲಿ ಮೇಲೇರುತ್ತಾ ಹೋಗುವಂತೆ ರಚಿಸಲಾಗಿವೆ. ಮೂರಕ್ಕೂ ತಿರುಗು ಬುರುಜುಗಳಿವೆ. ಪ್ರತಿಯೊಂದರಲ್ಲಿಯೂ ಪಲ್ಲವ ಮಾದರಿಯ ಸಿಂಹಗಳು ಕಂಡುಬರುತ್ತವೆ. ಪ್ರತಿಯೊಂದು ಶಿಖರಕ್ಕೂ ಕುಸುಮಾಕಾರದ ತಳಪಾಯವಿದೆ. ಅವು ಲಾಳಾಕಾರದಿಂದ ಕಮಾನುಗಳನ್ನು ಹೊಂದಿವೆ. ಪ್ರತಿಯೊಂದು ಶಿಖರವು ಗ್ರೀವದ ಮೇಲೆ ವಿಸ್ತಾರಗೊಂಡಿದೆ. ಗ್ರೀವ ಭಾಗದಲ್ಲಿ ಅಲ್ಲಲ್ಲಿ ಅರೆಗಂಬಗಳು ಕಂಡುಬರುತ್ತವೆ. ಪ್ರತಿಯೊಂದು ಶಿಖರವೂ ಅಧೋಮುಖ ಕಮಲಾಕಾರದ ಆಮಲಕಗಳನ್ನು ಹೊಂದಿವೆ. ಇವೆಲ್ಲಾ ಭಗ್ನವಾಗಿವೆ. ಈ ಶಿಖರಗಳನ್ನು ನಂದಿಯ ಬೋಗನಂದೀಶ್ವರ ಶಿಖರ, ನರಸಮಂಗಲದ ಶಿಖರ, ಶ್ರವಣಬೆಳಗೊಳದ ಚಾವುಂಡರಾಯ ಶಿಖರಕ್ಕೆ ಹೋಲಿಸಲಾಗಿದೆ.

ತ್ರಿಕೂಟಾಚಲ ಜೈನ ಬಸದಿಯ ಒಳಾವರಣವು ಅತ್ಯಂತ ಸರಳವಾಗಿದ್ದು ಅಲಂಕಾರ ರಹಿತವಾಗಿದೆ. ಅಲ್ಲಲ್ಲಿ ದೇವಕೋಷ್ಠಗಳಿದ್ದು ಕೆತ್ತಿದ ಶಿಲಾಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗವು ನಾಲ್ಕು ಪ್ರಮುಖ ಕಂಬಗಳನ್ನು ಹೊಂದಿದ ಭುವನೇಶ್ವರಿಯನ್ನು ಮತ್ತು ಇತರ ಅಂಕಣಗಳನ್ನು ಹೊಂದಿರುವಂತೆ ರಚಿಸಲಾಗಿದೆ. ನಾಲ್ಕು ಕಂಬಗಳು ಕೆಳಗೆ ಚತುರಸ್ರವಾದ ಪಾದಭಾಗ, ಅಷ್ಟಮುಖದ ದಿಂಡು, ಬೋದಿಗೆ ಇತ್ಯಾದಿಗಳನ್ನು ಹೊಂದಿವೆ. ವಿತಾನವು ಮೂರು ದೊಡ್ಡ ಹಾಸುಗಲ್ಲುಗಳಿಂದ ನಿರ್ಮಾಣಗೊಂಡಿದೆ. ಅವನ್ನು ಒಂಭತ್ತು ಅಂಕಣಗಳಾಗಿ ವಿಭಾಗಿಸಲಾಗಿದೆ. ಎಂಟು ಅಂಕಣಗಳಲ್ಲಿ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಎಲ್ಲ ಅಷ್ಟದಿಕ್ಪಾಲಕರುಗಳು ವಾಹನ ಸಮೇತರಾಗಿದ್ದಾರೆ. ಮಧ್ಯದಲ್ಲಿ ಧರಣೇಂದ್ರ ಯಕ್ಷನನ್ನು ಕೆತ್ತಲಾಗಿದೆ. ಆತನು ಬಲಗೈಯಲ್ಲಿ ಶಂಖವನ್ನು ಹೊಂದಿ ಅದರಿಂದ ನಾದಗೈಯ್ಯುತ್ತಿರುವಂತೆ ಖಂಡರಿಸಲಾಗಿದೆ. ಎಡಗೈಯಲ್ಲಿ ದಂಡವಿದೆ. ಆತನ ತಲೆಯ ಮೇಲೆ ಐದು ಹೆಡೆಯ ಸರ್ಪವಿರುವಂತೆ ಚಿತ್ರಿಸಲಾಗಿದೆ. ಅವನ ಇಬ್ಬದಿಗಳಲ್ಲಿ

ಚಾಮರಧಾರಿಗಳು ಚಾಮರದಿಂದ ಆತನಿಗೆ ಗಾಳಿ ಹಾಕುತ್ತಿರುವಂತೆ ಖಂಡರಿಸಲಾಗಿದೆ. ದೇವಾಲಯದ ದಕ್ಷಿಣ ಭಾಗದಲ್ಲಿರುವ ಅಥವಾ ಮುಖ್ಯ ಗರ್ಭಗೃಹದಲ್ಲಿರುವ ಬಳಪದ ಕಲ್ಲಿನ ಆದಿನಾಥಮೂರ್ತಿಯು ಅದರ ಎರಡು ಪಕ್ಕಗಳಲ್ಲಿ ಇರುವ ಗ್ರಾನೈಟ್ ಶಿಲೆಯ ಚಾಮರಧಾರಿಗಳು ಅದರ ಮಧ್ಯದಲ್ಲಿರುವ ದೇವಾಲಯದ ನಿರ್ಮಾಣೋತ್ತರ ಕಾಲದಲ್ಲಿ ಕೆತ್ತಲ್ಪಟ್ಟಿರಬಹುದಾದ ಬಳಪದ ಕಲ್ಲಿನ ಆದಿನಾಥಮೂರ್ತಿಯ ಶಿಲ್ಪಕ್ಕೆ ಹೋಲಿಕೆಯಾಗುವುದಿಲ್ಲ. ಹೀಗಾಗಿ ಇಲ್ಲಿನ ಮೂಲಮೂರ್ತಿಯು ಇಂದು ಕಾಣುತ್ತಿರುವ ಮೂರ್ತಿಯಲ್ಲವೆಂಬ ಅನುಮಾನ ಕಾಡುತ್ತದೆ. ನವರಂಗದ ನೈರುತ್ಯ ದಿಕ್ಕಿನಲ್ಲಿ ಇಂದು ಕಂಡುಬರುವ ಗ್ರಾನೈಟ್ ಶಿಲೆಯ ಮೂರ್ತಿಯೇ ಪ್ರಾಯಶಃ ಈ ಪ್ರಧಾನ ದೇವಾಲಯದ ಮೂರ್ತಿಯಾಗಿತ್ತೆಂದು ಭಾವಿಸಲು ಎಲ್ಲ ಕಾರಣಗಳಿವೆಯೆಂದು ಎಂ.ಎಚ್. ಕೃಷ್ಣರವರು ಅಭಿಪ್ರಾಯ ಪಡುತ್ತಾರೆ.[88] ಈ ಮೂಲಮೂರ್ತಿಯ ಸ್ಥಳಾಂತರಕ್ಕೆ ಕಾರಣಗಳನ್ನು ಹುಡುಕಲಾಗಿಲ್ಲ. ಈ ಮೂಲದೇವರನ್ನು ಹೊಯ್ಸಳರ ಕಾಲದ ದಂಡನಾಯಕ ಪಾರ್ಶ್ವದೇವ ಕ್ರಿ.ಶ. 1167ರಲ್ಲಿ ಪ್ರತಿಷ್ಠಾಪಿಸಿದಂತೆ ತಿಳಿದುಬರುತ್ತದೆ. ದಕ್ಷಿಣ ದಿಕ್ಕಿನಲ್ಲಿ ಕಂಡುಬರುವ ಪ್ರಧಾನ ಗರ್ಭಗೃಹದ ಮುಂದಿನ ಅಂತರಾಳದಲ್ಲಿ ಎರಡು ಪಾರ್ಶ್ವನಾಥನ ವಿಗ್ರಹಗಳನ್ನು ಇರಿಸಲಾಗಿದೆ. ಅವು ಸಪ್ತಹೆಡೆಗಳ ನಾಗನಿಂದ ಅಚ್ಛಾದಿತವಾಗಿರುವಂತೆ ಖಂಡರಿಸಲಾಗಿದ್ದು ಸುಮಾರು 6 ಅಡಿ ಎತ್ತರವಾಗಿದೆ. ಆನಂತರದ ದಿನಗಳಲ್ಲಿ ಯಕ್ಷ ಯಕ್ಷಿಯರನ್ನು ಅಲ್ಲಿ ಸ್ಥಾಪಿಸಲಾಗಿದೆ. ಯಕ್ಷಿಯು ಅತ್ಯಂತ ಸುಂದರವಾದ ವಿಗ್ರಹವಾಗಿದ್ದು ಸಾಕಷ್ಟು ಆಭರಣಗಳಿಂದ ಮತ್ತು ಸುಂದರ ಮಡಿಕೆಗಳುಳ್ಳ ವಸ್ತ್ರದಿಂದ ಅಲಂಕೃತಗೊಂಡಿದ್ದಾಳೆ. ಪೂರ್ವದ ಮತ್ತೊಂದು ಗರ್ಭಗೃಹದಲ್ಲಿ ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡ ನೇಮಿನಾಥನ ವಿಗ್ರಹವಿದ್ದು ಆತನ ಪಾರ್ಶ್ವಗಳಲ್ಲಿ ಇಬ್ಬರು ಚಾಮರಧಾರಿಗಳು ಸೇವೆಯಲ್ಲಿರುವಂತೆ ಕೆತ್ತಲಾಗಿದೆ. ಆತನ ಯಕ್ಷ ಯಕ್ಷಿಯರ ಕುಳಿತ ವಿಗ್ರಹಗಳನ್ನು ಗರ್ಭಗೃಹದ ಮುಂದಿನ ಅಂತರಾಳದಲ್ಲಿ ಸ್ಥಾಪಿಸಲಾಗಿದೆ. ಪಶ್ಚಿಮದ ಗರ್ಭಗೃಹದಲ್ಲಿ ಸಿಂಹ ಪೀಠದ ಮೇಲೆ ಕುಳಿತ ಶಾಂತಿನಾಥನ ಗ್ರಾನೈಟ್ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಈ ಗರ್ಭಗೃಹದ ಮುಂದಿರುವ ಅಂತರಾಳದಲ್ಲಿಯೂ ಪಶ್ಚಿಮದ ಗರ್ಭಗೃಹದ ಮುಂದಿರುವ ಅಂತರಾಳದಲ್ಲಿರುವಂತಹ ಯಕ್ಷ ಯಕ್ಷಿಯರ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ. ನವರಂಗದ ಆಗ್ನೇಯ ದಿಕ್ಕಿನಲ್ಲಿ ಯಕ್ಷ ಯಕ್ಷಿಯರ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಇವು ಈ ಬಸದಿಯ ನಿರ್ಮಾಣೋತ್ತರ ಕಾಲದಲ್ಲಿ ಸ್ಥಾಪಿಸಿದವುಗಳೆಂದು ಅವುಗಳ ರಚನಾಶೈಲಿಯ ಆಧಾರದ ಮೇಲೆ ನಿರ್ಧರಿಸಬಹುದು.

ಶಾಂತಿನಾಥ ಬಸದಿ : ಪಂಚಕೂಟ ಬಸದಿಯಿಂದ ಸುಮಾರು 20 ಅಡಿಗಳ ದೂರದಲ್ಲಿ ಪ್ರವೇಶದ್ವಾರಕ್ಕೆ ಈಶಾನ್ಯ ದಿಕ್ಕಿನಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ದಂಡನಾಯಕ ಹಾಗೂ ಅವನ ಮಹಾಸಾಮಂತಾಧಿಪತಿ ಗಂಗರಾಜನ ಪುತ್ರ ಬೊಪ್ಪದೇವನಿಗೆ ದ್ರೋಹರ ಘಟ್ಟಾಚಾರಿ ಬಿರುದನ್ನು ಹೊಂದಿದ ರೂವಾರಿಯು ಕನ್ನೇವಸದಿಯನ್ನು ಅಂದರೆ ಹೊಸ ಬಸದಿಯನ್ನು ಕಟ್ಟಿದನೆಂದು ಎಪಿಗ್ರಾಫಿಯ ಕರ್ನಾಟಿಕ ಮಾಲಿಕೆಯ ಏಳನೇ ಸಂಪುಟದಲ್ಲಿನ ನಾಗಮಂಗಲ ತಾಲ್ಲೂಕಿನ 32ನೇ ಶಾಸನವು ದಾಖಲಿಸುತ್ತದೆ.[89] ಪಂಚಕೂಟ ಬಸದಿ ಪ್ರಾಕಾರದಲ್ಲೇ ಸ್ಥಳಾವಕಾಶವಿದ್ದಿದ್ದರೆ ಪ್ರಾಯಶಃ ಈ ಮಂದಿರವೂ ಅಲ್ಲಿಯೇ ನಿರ್ಮಾಣವಾಗುತ್ತಿತ್ತೇನೋ. ಹಾಗಾಗಿ ಈ ಕನ್ನೆಬಸದಿಯನ್ನು ಪಂಚಕೂಟ ಬಸದಿಯ ಅತಿಸಮೀಪದಲ್ಲಿ ನಿರ್ಮಿಸಲಾಗಿದೆ. ಈ ಬಸದಿಯ ತಳಪಾಯ ಎತ್ತರವಾದ ವೇದಿಕೆಯ ಮೇಲೆ ರಚಿತವಾದಂತೆ ತೋರುತ್ತದೆ. ಬಳಪದ ಕಲ್ಲಿನಲ್ಲಿ ತೆಳ್ಳಗಿನ ವೃತ್ತಕಾರದ ಕಪೋತವನ್ನು ಸುಂದರವಾಗಿ ಬಿಡಿಸಲಾದ ಅಲಂಕಾರಿಕ ಪಟ್ಟಿಕೆಗಳನ್ನು ಹೊಂದಿದೆ. ಈ ಪಟ್ಟಿಕೆಯಲ್ಲಿ ಆನೆ, ಕುದುರೆಗಳು, ಸಿಂಹಗಳು ಮತ್ತು ಯಾಳಿಯನ್ನು ಕೆತ್ತಲಾಗಿದೆ. ಇಲ್ಲಿನ ಶಿಲ್ಪಗಳನ್ನು ಗಮನಿಸಿದಾಗ ಅವು ಹೊಯ್ಸಳ ದೇವಾಲಯಗಳ ಪ್ರತಿರೂಪವೆಂದು ಭಾಸವಾಗುತ್ತದೆ.

ಈ ದೇವಾಲಯವನ್ನು ಪ್ರದಕ್ಷಿಣಾಕಾರವಾಗಿ ಸುತ್ತುಹಾಕಿದಾಗ ಅಧಿಷ್ಠಾನದಲ್ಲಿ ಕಂಡುಬರುವ ಕೆತ್ತನೆಗಳನ್ನು ಈ ರೀತಿ ಗುರುತಿಸಬಹುದು.[90] ಉತ್ತರ ದಿಕ್ಕಿನ ಪಟ್ಟಿಕೆಗಳಲ್ಲಿ ಸಿಂಹ, ಯಾಳಿ ಅವುಗಳ ಬಾಯಲ್ಲಿ ಮೇಕೆಗಳ ಕೊಂಬು ಅಥವಾ ಕಠಿಬಂಧನವನ್ನು ಹೊಂದಿವೆ. ಕಠಿಬಂಧಿತ ಕಂಠೀರವ ಗಾಂಭೀರ್ಯ ಶಿಲ್ಪಿಯ ಚಾತುರ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಮೂಲೆಗಳಲ್ಲಿ ಸಿಂಹಗಳ ಜೊತೆ ಮಕರಗಳಿವೆ. ಮತ್ತು ಮದಿಸಿದ ಗಜಗಳು ಹೋರಾಟದಲ್ಲಿ ತೊಡಗಿರುವಂತೆ ಚಿತ್ರಿಸಲಾಗಿದೆ.

ಪೂರ್ವದಿಕ್ಕಿನಲ್ಲಿ ವೇಗವಾಗಿ ಓಡುತ್ತಿರುವ ಕುದುರೆಗಳ ಸೈನ್ಯ ಅಷ್ಟೇ ವೇಗವಾಗಿ ಸಾಗುತ್ತಿರುವ ಸಿಂಹಗಳ ಸಾಲು ಕಂಡುಬರುತ್ತದೆ. ದಕ್ಷಿಣ ದಿಕ್ಕಿನಲ್ಲಿ ವೈವಿಧ್ಯತೆ ಅಧಿಕ. ಆನೆಯನ್ನು ಅಟ್ಟಿಕೊಂಡು ಹೋಗುತ್ತಿರುವ ಸಿಂಹಗಳ ಸಾಲು ಎರಡು ಸಿಂಹಗಳ ನಡುವೆ ಸಿಕ್ಕಿಕೊಂಡ ಸಲಗ, ರಾಜಕುಮಾರರು ಮತ್ತು ಪ್ರಮುಖ ರಾಜಮನೆತನದ ವ್ಯಕ್ತಿಗಳು ಶ್ವೇತಚಕ್ರಧಾರಿಗಳಾಗಿ ಮೆರವಣಿಗೆಯಲ್ಲಿ ಹೋಗುತ್ತಿರುವುದು ಯುದ್ಧನಿರತ ಗಜಸೈನ್ಯ ಕುದುರೆ ಸವಾರರು ಅಲ್ಲಲ್ಲಿ ಮೂಲೆಗಳಲ್ಲಿ ಸಿಂಹಗಳು ಮತ್ತು ಮಕರಗಳು ರಾಜನ ಒಡ್ಡೋಲಗದ ದೃಶ್ಯ ಆನೆಗಳ ಮೆರವಣಿಗೆ ಕುದುರೆಗಳನ್ನು ಹಿಡಿಯಲು ಓಡುತ್ತಿರುವ ಆನೆಗಳು ಮುಂತಾದ ದೃಶ್ಯಗಳು ಪ್ರಮುಖವೆನಿಸುತ್ತವೆ.

ಪಶ್ಚಿಮದಿಕ್ಕಿನಲ್ಲಿ ಕದನದ ದೃಶ್ಯಗಳು, ಕುದುರೆ ಸವಾರರು, ಈಟಿ ಹಿಡಿದ ಯೋಧರು ಮುಂತಾದ ಯುದ್ಧದ ಕಥಾನಕ ಶಿಲ್ಪಗಳಿವೆ. ಕುದುರೆಗಳು ಮನ್ಮಥ ಕ್ರೀಡೆಯಲ್ಲಿ ತೊಡಗಿರುವ ಚಿತ್ರ ಯುದ್ಧದಲ್ಲಿ ನಿರತವಾದ ರಾವುತಪಡೆ ಆನೆಯೊಂದು ಕುದುರೆ ಸವಾರನನ್ನು ಕುದುರೆ ಮೇಲಿಂದ ತಳ್ಳುತ್ತಿರುವ ದೃಶ್ಯ ಬಹಳ ವಿಶೇಷವಾಗಿ ಗಮನಸೆಳೆಯುತ್ತದೆ.

ನವರಂಗ, ಗರ್ಭಗೃಹ ಮುಂತಾದ ಈ ಕಟ್ಟಡದ ಭಾಗಗಳು ಶಿಥಿಲವಾಗಿವೆ. ಗೋಡೆಗಳಲ್ಲಿನ ನಿಲುಗಂಬಗಳು ಬಿರುಕು ಬಿಟ್ಟಿವೆ. ತೊಲೆಗಳು ಹೂಬಳ್ಳಿ ಕೆತ್ತನೆಗಳಿಂದ ಅಲಂಕರಣಗೊಂಡಿವೆ. ಕಪೋತಗಳಲ್ಲಿ ಅಲಂಕರಣ ಅಷ್ಟಿರದಿದ್ದರೂ ಅದರ ಕೆಳಗೆ ಹಂಸಗಳನ್ನು ಕೆತ್ತಲಾಗಿದೆ. ಆದರೆ ಈ ಪಂಕ್ತಿ ಅಪೂರ್ಣವಾಗಿದೆ. ಅದು ಪ್ರಾಯಶಃ ಆನಂತರದ ದಿನಗಳಲ್ಲಿ ಕೆತ್ತಿರಬಹುದೆಂದು ಡಾ. ಎಂ.ಎಚ್. ಕೃಷ್ಣ ಅಭಿಪ್ರಾಯಪಡುತ್ತಾರೆ.[91] ನವರಂಗವು ಒಂಭತ್ತು ಅಂಕಣಗಳನ್ನು ಹೊಂದಿದೆ. ಮಧ್ಯದಲ್ಲಿ ನಾಲ್ಕು ತಿರುಗಣಿ ಯಂತ್ರದಿಂದ ನಿರ್ಮಿಸಿದ ಹೊಯ್ಸಳ ಮಾದರಿಯ ಕಂಬಗಳಿವೆ. ಇಲ್ಲಿನ ನವರಂಗದ ಭಾವಣಿಯಲ್ಲಿ ಸಹ ಸುಂದರವಾದ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಇದರ ಮಧ್ಯಭಾಗದಲ್ಲಿ ಧ್ಯಾನಾಸಕ್ತ ತಪೋನಿರತ ಮುಕ್ಕೊಡೆ ಚಾಮರಧಾರಿಗಳು, ಯಕ್ಷ, ಗಂಧರ್ವ ಮುಂತಾದ ಸೇವಾನಿರತ ಶ್ರಾವಕ ಶ್ರಾವಕಿಯರನ್ನೊಡಗೂಡಿದ ಸಿಂಹಪೀಠದ ಮೇಲೆ ಕುಳಿತ ಜಿನಮೂರ್ತಿಯಿದೆ. ಈ ಮೂರ್ತಿಗಳು ಅರಳಗುಪ್ಪೆಯ ಕಲ್ಲೇಶ್ವರ ದೇವಾಲಯವನ್ನು ನೆನಪಿಗೆ ತರುತ್ತದೆ. ಮಧ್ಯದಲ್ಲಿರುವ ಜಿನಮೂರ್ತಿ ಬುದ್ಧನಂತೆ ಕಾಣುವುದು ವಿಶೇಷ. ಕಾರಣ ತಲೆಗೂದಲನ್ನು ಸುಂದರವಾದ ಗುಂಗುರು ಕೂದಲುಗಳಿಂದ ಅಲಂಕರಿಸಲಾಗಿದೆ. ಗರ್ಭಗೃಹದಲ್ಲಿ ಪದ್ಮಾಕಾರದ ಭಾವಣಿಯನ್ನು ಹೊಂದಿದೆ. ಈ ಭಾವಣಿಯನ್ನು ಮಕರತೋರಣಗಳು ಅಲಂಕರಿಸಿವೆ. ಅಲ್ಲಲ್ಲಿ ಮಣಿಮಾಲೆಗಳು ಕಂಡುಬರುತ್ತವೆ. ಗರ್ಭಗೃಹದಲ್ಲಿ ಸುಮಾರು ಹತ್ತು ಅಡಿ ಎತ್ತರದ ಖಡ್ಗಾಸನದಲ್ಲಿ ನಿಂತಿರುವ ಶಾಂತಿನಾಥಯ್ಯನ ಜಿನಬಿಂಬವಿದೆ. ಈ ಮೂರ್ತಿಯು ಭಾವನೆಗಳು ಮುಖಮುದ್ರೆ, ಮಂದಸ್ಮಿತ ಮುಂತಾದ ಲಕ್ಷಣಗಳಲ್ಲಿ ಶ್ರವಣಬೆಳಗೊಳದ ಗೊಮ್ಮಟನನ್ನು ನೆನಪಿಗೆ ತರುತ್ತದೆ.

ಬಸದಿಯ ನವರಂಗದಲ್ಲಿ ಕೆಲವು ಬಿಡಿ ವಿಗ್ರಹಗಳನ್ನು ಸಂರಕ್ಷಿಸಿಡಲಾಗಿದೆ. ಇವುಗಳಲ್ಲಿ ವೃಷಭ ಪೀಠದ ಮೇಲೆ ಆಸೀನನಾಗಿರುವ ಯಕ್ಷ ನೇಮಿನಾಥ ತೀರ್ಥಂಕರ, ಧ್ಯಾನಾಸಕ್ತನಾದ ಜಿನ, ಚಕ್ರೇಶ್ವರಿ ಯಕ್ಷಿ ಮುಂತಾದ ಮೂರ್ತಿಗಳು ಇಲ್ಲಿ ಕಂಡುಬರುತ್ತವೆ.

5.7. ಬಿಂಡಿಗನವಿಲೆ

ಬಿಂಡಿಗನವಿಲೆ ತೀರ್ಥ ಅಥವಾ ಕಂಬದಹಳ್ಳಿ ತೀರ್ಥವನ್ನು ಒಂದೇ ಎಂದು ಸಾಧಿಸುವ ಸೀತಾರಾಮ ಜಾಗೀರ್‌ದಾರರು ಕಂಬದಹಳ್ಳಿಯ ಅಂದರೆ ಶಾಸನೋಕ್ತ ಬಿಂಡಿಗನವಿಲೆಯ ತೀರ್ಥದ ಪಂಚಕೂಟ ಬಸದಿ ಕ್ರಿ.ಶ. 975ಕ್ಕೂ ಮುಂಚೆಯೇ ಇದ್ದಿತೆಂದು ದಾಖಲಿಸುತ್ತಾರೆ.[92] ಬಿಂಡಿಗನವಿಲೆಯಲ್ಲಿ ದೊರೆತಿರುವ ನಿಷದಿ ಶಾಸನವನ್ನು ಆಧರಿಸಿ ಅಲ್ಲಿ ಬಸದಿಗಳು ಇದ್ದವೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಈ ಬಸದಿ ಇಂದಿನ ಕಂಬದಹಳ್ಳಿಯ ಬಸದಿಯೇ ಅಥವಾ ಬಿಂಡಿಗನವಿಲೆಯ ಬಸದಿಯೇ ಎಂಬುದನ್ನು ಸ್ಪಷ್ಟೋಕ್ತಿಯಲ್ಲಿ ದಾಖಲಿಸಿಲ್ಲ. ಕಂಬದಹಳ್ಳಿಯ ಪಕ್ಕದಲ್ಲಿಯೇ ಇರುವ ಆದಳ್ಳಿಯಲ್ಲಿಯೂ ಜೈನನೆಲೆ ಇತ್ತೆಂಬುದಕ್ಕೆ ನಾಗಮಂಗಲದ ಪ್ರವಾಸಿ ಮಂದಿರದ ಮುಂದೆ ನಿಂತಿರುವ ವೀರಗಲ್ಲು ಪ್ರಮುಖ ಸಾಕ್ಷಿಯಾಗಿದೆ.[93] ಕಂಬದಹಳ್ಳಿಯ ಪೂರ್ವದ ಹೊಲವೊಂದರಲ್ಲಿ ನಿಂತಿರುವ ಕ್ರಿ.ಶ. 979ರ ವೀರಗಲ್ಲು ಬಿಂಡಿಗನವಿಲೆ ಎಂದು ದಾಖಲಿಸುತ್ತದೆ.[94] ನನ್ನ ಕಾರ್ಯಕ್ಷೇತ್ರದಿಂದ ಅರಿತುಕೊಂಡ ವಿಷಯಗಳ ಹಿನ್ನೆಲೆಯಲ್ಲಿ ಬಿಂಡಿಗನವಿಲೆ ಮತ್ತು ಕಂಬದಹಳ್ಳಿ ಎರಡನ್ನೂ ಬಿಂಡಿಗನವಿಲೆ ತೀರ್ಥ ಒಳಗಾಗಿತ್ತೆಂದು ಹೇಳುವುದು ಕಷ್ಟಸಾಧ್ಯವಾಗುತ್ತದೆ. ಪ್ರಾಯಶಃ ಬಿಂಡಿಗನವಿಲೆಯಲ್ಲಿಯೂ ಜೈನ ಬಸದಿಗಳು ಇದ್ದಿರಲೇಬೇಕು. ಹಾಗಾಗಿ ಅದು ತನ್ನ ಮಹತ್ವವನ್ನು ಕಳೆದುಕೊಂಡ ನಂತರ ಅಲ್ಲಿನ ಜೈನರು ಅಥವಾ ಶ್ರಾವಕ ಶ್ರಾವಕಿಯರು ಕಂಬದಹಳ್ಳಿಯ ಜಿನಾಲಯಕ್ಕೆ ನಡೆದುಕೊಂಡಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಸದ್ಯದಲ್ಲಿ ಬಿಂಡಿಗನವಿಲೆ ಮತ್ತು ಕಂಬದಹಳ್ಳಿಯನ್ನು ಪ್ರತ್ಯೇಕವಾಗಿ ನೋಡುವುದು ಸೂಕ್ತವೆನಿಸುತ್ತದೆ.

ಕಂಬದಹಳ್ಳಿ ಹೆಸರು 1145ರಲ್ಲಿ ಮೊಟ್ಟಮೊದಲಿಗೆ ಇಲ್ಲಿನ ಶಾಂತೀಶ್ವರ ಬಸದಿಯ ಶಾಸನವೊಂದರಲ್ಲಿ ಉಲ್ಲೇಖವಾಗುತ್ತದೆ.[95] ಬಿಂಡಿಗನವಿಲೆ ತೀರ್ಥಕ್ಕೆ ಉಲ್ಲೇಖಿಸುವ ಶಾಸನಕ್ಕೂ ಕಂಬದಹಳ್ಳಿಯನ್ನು ಉಲ್ಲೇಖಿಸುವ ಪ್ರಥಮ ಶಾಸನಕ್ಕೂ ನಡುವೆ ಗಂಗವಾಡಿ ಭೂಪ್ರದೇಶವು ಚೋಳರಿಂದಾವೃತವಾಗಿದ್ದುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅಲ್ಲದೆ ಇದೇ ಕಾಲಘಟ್ಟದಲ್ಲಿ ಗಣಪತಿರಾವ್ ಐಗಳ್[96] ರಚಿಸಿರುವ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸಕೃತಿಯಲ್ಲಿ ದಕ್ಷಿಣ ಕನ್ನಡದ ಜೈನರುಗಳು ತಮ್ಮ ಕುಲದೇವರಾದ ಸೋಮೇಶ್ವರನ ಮೂರ್ತಿಯನ್ನು ಹೊತ್ತುಕೊಂಡು ಘಟ್ಟವನ್ನಿಳಿದರೆಂದು ದಾಖಲಿಸುತ್ತಾರೆ. ಪ್ರಾಯಶಃ ಗಂಗವಾಡಿಯ ಮೇಲೆ ನಡೆದ ಚೋಳ ಆಕ್ರಮಣವೇ ಈ ವಲಸೆಗೆ ಕಾರಣವೆಂದು ಭಾವಿಸಬೇಕಾಗುತ್ತದೆ. ಪ್ರಸ್ತುತದಲ್ಲಿ ಈ ವಿಷಯ ನನ್ನ

ಸಂಶೋಧನೆಯ ಹರವಿನಲ್ಲಿ ಬಾರದ ಕಾರಣ ಅದನ್ನು ಹೆಚ್ಚು ವಿಸ್ತರಿಸಲು ಹೋಗಿಲ್ಲ. ಕಂಬದಹಳ್ಳಿಯಲ್ಲಿನ ಜೈನ ಬಸದಿಗಳು ಸೂರಸ್ತ ಗಣದ ಪರಂಪರೆಗೆ ಸೇರಿದ್ದು ಆ ಗಣದ ಯತಿಗಳ ಮಾರ್ಗದರ್ಶನದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ್ದಿತು. ಈ ಪರಂಪರೆಯ ಅಪ್ರತಿಮ ಸಾಧನೆಯಿಂದಾಗಿ ಬಿಂಡಿಗನವಿಲೆ ತೀರ್ಥವಾಗಿ ಪರಿಣಮಿಸಿತು. ಜೈನ ಪರಂಪರೆಯಲ್ಲಿ ಕಂಡುಬರುವ ಇಪ್ಪತ್ನಾಲ್ಕು ಜನ ತೀರ್ಥಂಕರರಲ್ಲಿ ಯಾರೊಬ್ಬರೂ ದಕ್ಷಿಣ ಭಾರತದವರಲ್ಲ. ಅಲ್ಲದೆ ಅವರಾರೂ ದಕ್ಷಿಣ ಭಾರತವನ್ನು ಸಂದರ್ಶಿಸಿದುದರ ಬಗೆಗೆ ದಾಖಲೆಗಳಿಲ್ಲ. ಆದರೂ ದಕ್ಷಿಣದಲ್ಲಿನ ಜೈನಕ್ಷೇತ್ರಗಳೆಲ್ಲವೂ ಅತಿಶಯ ಕ್ಷೇತ್ರಗಳಾಗಿವೆ. ಬಿಂಡಿಗನವಿಲೆಯ ಶಾಸನದ ಲಿಪಿಯನ್ನು ಗಮನಿಸಿದರೆ ಕ್ರಿ.ಶ. 9–10ನೆಯ ಶತಮಾನದ ಪೂರ್ವದಲ್ಲಿಯೇ ಬಿಂಡಿಗನವಿಲೆಯು ಜೈನ ಕ್ಷೇತ್ರವಾಗಿತ್ತೆಂದು ಅರ್ಥವಾಗುತ್ತದೆ. ಅಮೃತಬ್ಬೆ ಕಂತಿಯರ ಕಾಲಕ್ಕೆ ಮುಂಚೆ 975ಕ್ಕು ಮುಂಚೆಯೇ ಇಲ್ಲಿ ಜೈನಾಲಯಗಳು ಇದ್ದವೆಂದು ಹೇಳಬಹುದು. ಆದರೆ ಅದು ಎಷ್ಟು ಮುಂಚಿನದೆಂದು ಹೇಳಲು ಸಾಧ್ಯವಿಲ್ಲ.[97]

5.8. ದಡಗ

ತಾಲ್ಲೂಕು ಕೇಂದ್ರ ನಾಗಮಂಗಲದಿಂದ 12 ಕಿ.ಮೀ ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ ದಡಿಗನಕೆರೆ, ದಿಂಡಿನಕೆರೆ, ದಡಿಗವಾಡಿ, ದಡಿಗ ಎಂದೆಲ್ಲಾ ಉಲ್ಲೇಖಿತಗೊಂಡಿದೆ. ಗಂಗ ಅರಸ ದಡಿಗನಿಂದ ಈ ಊರು ಸ್ಥಾಪಿಸಲ್ಪಟ್ಟಿದ್ದರಿಂದ ದಡಗ ಎಂಬ ಹೆಸರು ಇದಕ್ಕೆ ಬಂದಿರುವಂತೆ ವಿದ್ವಾಂಸರು ಭಾವಿಸುತ್ತಾರೆ. ಇದು ಅನಾದಿ ಅಗ್ರಹಾರವೂ ಆಗಿದ್ದ ಅಂಶ ಬೆಳ್ಳೂರು ಹಾಗೂ ದಡಗ ಶಾಸನಗಳಿಂದ ತಿಳಿದುಬರುತ್ತದೆ.[98]

ಹಿಂದೆ ಕಲ್ಕುಣಿ ನಾಡಿನ ಒಳಗೆ ಸೇರಿದ್ದ ಈ ಗ್ರಾಮದಲ್ಲಿ ಚೋಳರ ತಮಿಳು ಶಾಸನದಲ್ಲಿ ಬರುವ ದಡಿಗಪಾಡಿ ಆಡಳಿತ ವಿಭಾಗ ಇದೇ ಆಗಿದ್ದಂತೆ ಊಹಿಸಲಾಗಿದೆ. ಹೊಯ್ಸಳ ವಿಷ್ಣುವರ್ಧನನ ಕಾಲದ ಕಾಲನಿರ್ದೇಶಿತವಾಗದ ಶಾಸನವು ಮರಿಯಾನೆ ಭರತಮಯ್ಯ ದಂಡನಾಯಕನ ಸೋದರರು ಮತ್ತವನ ಮಡದಿಯರಾದ ಜಕ್ಕಲೆ ಹರಿಯಲಬ್ಬೆಯರು ಸಂಯುಕ್ತವಾಗಿ ದೇಶೀಯ ಗಣದ ನಾಲ್ಕು ಹಾಗೂ ಕಾನೂರು ಗಣದ ಒಂದು ಬಸದಿಯನ್ನೊಳಗೊಂಡ ಪಂಚಬಸದಿಯ ಬಾಹುಬಲಿ ಕೂಟವನ್ನು ನಿರ್ಮಿಸಿ ಅದನ್ನು ಜವಳಿಗೆಯ ಮುನಿಭದ್ರ ಸಿದ್ಧಾಂತದೇವರ ಶಿಷ್ಯರಾದ ಮೇಘಚಂದ್ರ ಸಿದ್ಧಾಂತ ದೇವರಿಗೆ ಸಮರ್ಪಿಸಿ ಈ ಪಂಚಕುಟ ಬಸದಿಯ ಅಂಗಭೋಗ ರಂಗಭೋಗ, ಖಂಡಸ್ಫುಟಿತ

ಜೀರ್ಣೋದ್ಧಾರ, ಮುನಿಗಳ ಆಹಾರ, ಛಾತ್ರರ ಆಹಾರ ಇತ್ಯಾದಿ ಸೇವೆಗಳಿಗೆ ದತ್ತಿ ಬಿಟ್ಟದ್ದನ್ನು ದಾಖಲಿಸುತ್ತದೆ.

ಈ ಗ್ರಾಮದ ಶಾಂತಿನಾಥ ಬಸದಿಯ ಕೇವಲ ಗರ್ಭಗೃಹ ಮತ್ತು ವಿಶಾಲವಾದ ನವರಂಗವನ್ನು ಹೊಂದಿದ್ದು, ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಲ್ಲಿ ಶಾಂತಿನಾಥನ ವಿಗ್ರಹವಿದೆ. ದಡಿಗದ ಶಾಂತಿನಾಥ ಬಸದಿಯು ಗರ್ಭಗೃಹದಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ಶಾಂತಿನಾಥ ಮೂರ್ತಿಯನ್ನು ಹೊಂದಿದ್ದು ಇದನ್ನು ಹೆಗ್ಗಡದೇವನಕೋಟೆ ತಾಲ್ಲೂಕಿನ ಪಾಳುಬಿದ್ದ ಜೈನಮಂದಿರವೊಂದರಿಂದ ತಂದು ಪ್ರತಿಷ್ಠಾಪಿಸಲಾಗಿದೆಯೆಂದು ತಿಳಿದುಬರುತ್ತದೆ.[99] ಜಿನಾಲಯದ ಎಲ್ಲ ಕಟ್ಟಡಗಳು ಇತ್ತೀಚಿನದವಾಗಿವೆ.

ಈ ಜೈನ ಮಂದಿರವಲ್ಲದೆ ಈ ಗ್ರಾಮದಲ್ಲಿ ಚನ್ನಕೇಶವ ದೇವರ ದೇವಾಲಯವು ಕಂಡುಬರುತ್ತದೆ. ಅಲ್ಲದೆ ಚೋಳರ ಕಾಲದ ಅಂದರೆ ರಾಜೇಂದ್ರನ ಕಾಲದ ಯೋಗಾನರಸಿಂಹಸ್ವಾಮಿ ದೇವಾಲಯವು ಈ ಗ್ರಾಮದಲ್ಲಿದೆ. ಇದೇ ಕಾಲಘಟ್ಟದ ಸೋಮೇಶ್ವರನ ದೇವಾಲಯ, ಆಂಜನೇಯನ ದೇವಾಲಯ, ಕೊಲ್ಲಾಪುರದಮ್ಮ ಮುಂತಾದ ಗುಡಿಗಳು ಕಂಡುಬರುತ್ತವೆ. ಇಲ್ಲಿನ ಶಾಸನವೊಂದು ಅನಾದಿ ಅಗ್ರಹಾರ ದಡಿಗನಕೆರೆಯ ಚನ್ನಕೇಶವ ದೇವರಿಗೆ ದಾನ ಬಿಟ್ಟು, ಐದು ಹಣ ವೆಚ್ಚದಲ್ಲಿ ಗುಡಿಗೆ ವಿಮಾನ (ಶಿಖರ) ನಿರ್ಮಿಸಿದ್ದನ್ನು ತಿಳಿಸುತ್ತದೆ. ಚಲುವನಾರಾಯಣ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ 24 ಕಂಬಗಳ ವಿಶಾಲವಾದ ನವರಂಗ ಹೊಂದಿದೆ. ನವರಂಗದ ಮುಂದೆ ಮುಖ ಮಂಟಪವಿದೆ. ಅಂತರಾಳದಲ್ಲಿ ರಾಮಾನುಜ ಶಿಲ್ಪವಿದೆ. ಊರಾಚೆ ಕೆರೆದಂಡೆ ಬಳಿಯ ಮಂಟಪದಲ್ಲಿರುವ ಕೇಶವನ ಆಳೆತ್ತರದ ಸುಂದರ ಶಿಲ್ಪವಿದೆ. ಯೋಗಾನರಸಿಂಹನ ಗುಡಿಯು ಒಂದನೆಯ ರಾಜೇಂದ್ರ ಚೋಳನ ಕಾಲಕ್ಕೆ ಸೇರಿದ್ದು. ಕ್ರಿ.ಶ. 1020ರಲ್ಲಿ ನಿರ್ಮಾಣಗೊಂಡಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನು ಹೊಂದಿದೆ. ಒಳಗೆ ಯೋಗಾನರಸಿಂಹನ ಶಿಲ್ಪವಿದೆ.[100]ಅನತಿ ದೂರದಲ್ಲಿರುವ ಸುಮಾರು 12ನೆಯ ಶತಮಾನಕ್ಕೆ ಸೇರಿದ ಸೋಮೇಶ್ವರ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗ ಹಾಗೂ ನಂದಿಗಳಿದ್ದು, ನವರಂಗವು ಸಂಪೂರ್ಣ ಹಾಳಾಗಿದೆ.

5.9. ಬೆಳ್ಳೂರು

ತಾಲ್ಲೂಕು ಕೇಂದ್ರ ನಾಗಮಂಗಲದಿಂದ 16 ಕಿ.ಮೀ ದೂರದಲ್ಲಿದೆ. ಶಾಸನಗಳಲ್ಲಿ ಬೆಳ್ಳೂರು ಎಂದೂ ಕ್ರಿ.ಶ 1690ರ ತಾಮ್ರ ಶಾಸನದಲ್ಲಿ ರತ್ನಗಿರಿ ಎಂದೂ ಜೈನಪುರಾಣಗಳಲ್ಲಿ 'ಶ್ವೇತಪುರ'ವೆಂದೂ ಹಾಗೂ ಸರ್ವನಮಸ್ಯದ ಅಗ್ರಹಾರ ಉದ್ಭವ ನರಸಿಂಹಪುರ ಎಂಬ ಅಭಿದಾನವನ್ನೂ ಹೊಂದಿತ್ತು.[101] ಈ ಅಗ್ರಹಾರ ವೇದಾಧ್ಯಯನದ ಕೇಂದ್ರವಾಗಿ ಹಲವಾರು ವೇದಾಧ್ಯಯನಿಗಳನ್ನು ಹೊಂದಿದ್ದ ಅಂಶವನ್ನು ಬೆಳ್ಳೂರಿನ ಶಾಸನಗಳು ದಾಖಲಿಸುತ್ತವೆ. ಹೊಯ್ಸಳರ ಕಾಲದಲ್ಲಿ ಪ್ರಮುಖ ಅಗ್ರಹಾರ ಹಾಗೂ ಪಟ್ಟಣವಾಗಿದ್ದ ಈ ಸ್ಥಳಕ್ಕೆ ಹಿಂದೆ ಕೋಟೆ ಇದ್ದುದನ್ನು ಸೂಚಿಸುವ ಕುರುಹುಗಳು ಕಂಡುಬರುತ್ತವೆ. ಇಲ್ಲಿಯ ಕ್ರಿ.ಶ. 1269ರ ಒಂದು ಶಾಸನವು ಪೆರೆಮಾಳೆ ದಂಡನಾಯಕನು ಬೆಳ್ಳೂರಿನಲ್ಲಿ ಹಿರಿಯಕೆರೆ ನಿರ್ಮಿಸಿದ್ದನ್ನು ದಾಖಲಿಸಿದೆ.[102]

ಊರಾಚೆ ಗೌರಿಕೊಳ್ಳ (ಶಾಸನೋಕ್ತ ಮಂಡಲಗೆರೆ)ದ ದಕ್ಷಿಣ ದಂಡೆಯ ಮೇಲರಿವ ಗೌರೇಶ್ವರ ದೇವಾಲಯವನ್ನು ಮಂಡಲಸ್ವಾಮಿಯು ಕ್ರಿ.ಶ 1199ರಲ್ಲಿ ನಿರ್ಮಿಸಿದ್ದು, ಈ ಆಲಯವು ಗರ್ಭಗೃಹ, ಅಂತರಾಳ, ದಕ್ಷಿಣ ಪಾರ್ಶ್ವದ್ವಾರವಿರುವ ನವರಂಗ ಹಾಗೂ ಅರ್ಧಮಂಟಪಗಳನ್ನು ಹೊಂದಿದೆ. ಆದರೆ ಇತ್ತೀಚೆಗೆ ದಕ್ಷಿಣದ್ವಾರವನ್ನು ಮುಚ್ಚಿ ಪೂರ್ವದ್ವಾರವನ್ನು ಕಲ್ಪಿಸಿ, ವಿಶಾಲ ಮುಖಮಂಪಟವನ್ನು ಸೇರಿಸಲಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಅಂತರಾಳದ ಅಲಂಕಾರಯುತ ಜಾಲಂದ್ರ ಹಾಗೂ ಪ್ರದೇಶದ್ವಾರ ಹೊಂದಿದೆ. ನವರಂಗದಲ್ಲಿ ವಿನಾಯಕ, ವೀರಭದ್ರ ಹಾಗೂ ನಂದಿಯ ಶಿಲ್ಪಗಳಿವೆ. ದೇವಾಲಯದ ಭಿತ್ತಿ ಹಾಗೂ ಶಿಖರಗಳನ್ನು ನವೀಕರಿಸಲಾಗಿದೆ. ಇದರ ಬಲಕ್ಕಿರುವ ಗಂಗಾಧರೇಶ್ವರ (ಶಾಸನೋಕ್ತ ವಿಶ್ವೇಶ್ವರ) ದೇವಾಲಯವು ಕ್ರಿ.ಶ 1669 ನಿರ್ಮಾಣಗೊಂಡಿದೆ. ಹೊಯ್ಸಳರ ಕಾಲದ ಗಣಪತಿ, ಭೈರವ ಹಾಗೂ ನಂದಿ ಶಿಲ್ಪಗಳು ದೇವಾಲಯದಲ್ಲಿ ಕಂಡುಬರುತ್ತವೆ.

ಗ್ರಾಮದ ಕೆರೆ ಹಾಗೂ ದೇವಾಲಯಗಳನ್ನು ಕ್ರಿ.ಶ 1269ರ ವೇಳೆಗಾಗಲೇ ಪೆರಮುಆಳೆ ದಂಡನಾಯಕ ನಿರ್ಮಾಣಮಾಡಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ. ಕ್ರಿ.ಶ 1269ರ ಶಾಸನದಲ್ಲಿ ತ್ರಿಕೂಟ ಲಕ್ಷ್ಮೀ ನಾರಾಯಣ, ಗೋಪಾಲ, ಕೋಡಿಮಾಧವನೆಂದೂ ಉಲ್ಲೇಖಿತವಾಗಿದೆ. ಕ್ರಿ.ಶ. 1248ರ ಇನ್ನೊಂದು ಶಾಸನದಲ್ಲಿ ಪ್ರಸನ್ನಮಾಧವ, ರಾಮಕೃಷ್ಣ ವರದ ಅಲ್ಲಾಳನಾಥ ದೇವಾಲಯವೆಂದೂ 17ನೆಯ ಶತಮಾನದಿಂದೀಚೆಗೆ ಈ ದೇವಾಲಯವನ್ನು ಆದಿಮಾಧವ ದೇವಾಲಯವೆಂದು ಕರೆದಿರುವುದನ್ನು ತಿಳಿಸುತ್ತದೆ. ಈ ದೇವಾಲಯವು ಐದು ಪಟ್ಟಿಕೆಗಳ ಜಗತಿಯ ಮೇಲೆ

ನಿರ್ಮಾಣಗೊಂಡಿದೆ. ಪ್ರಧಾನ ಗರ್ಭಗೃಹ, ಅಂತರಾಳ, ಉತ್ತರ-ದಕ್ಷಿಣದ ಗರ್ಭಗೃಹಗಳನ್ನು ಒಗ್ಗೂಡಿಸುವ ನವರಂಗ ಹಾಗೂ ಆರು ಅಂಕಣದ ತೆರೆದ ಅರ್ಧಮಂಪಟವನ್ನು ಹೊಂದಿದೆ. ಅದರ ಮುಂದಿರುವ ರಂಗಮಂಟಪ, ಸೌಮ್ಯನಾಯಕ ಮತ್ತು ರಂಗನಾಯಕಿ ದೇವಾಲಯ, ಪ್ರಕಾರ ಮಹಾದ್ವಾರ ಹಾಗೂ ದೀಪಸ್ತಂಭಗಳು ವಿಜಯನಗರ ಕಾಲದ ಸೇರ್ಪಡೆಗೊಂಡಿದೆ. ಪ್ರಧಾನ ಗರ್ಭಗೃಹದಲ್ಲಿ ಗರುಡ ಪೀಠದ ಮೇಲಿರುವ ಚತುರ್ಭುಜಧಾರಿ ಮಾಧವನ ಆಳೆತ್ತರದ ಶಿಲ್ಪವು ಸುಂದರವಾಗಿದೆ. ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆ ಇತರ ಗರ್ಭಗೃಹಗಳಲ್ಲಿ ವೇಣುಗೋಪಾಲ ಮತ್ತು ಜನಾರ್ಧನ ಶಿಲ್ಪಗಳೂ ಮುಖ್ಯಶಿಲ್ಪದಷ್ಟೇ ಸುಂದರವಾಗಿದೆ. ಅಂತರಾಳದಲ್ಲಿ ದ್ವಾರಪಾಲಕ ವಿಗ್ರಹಗಳು ನವರಂಗದ ಕಂಬ, ಛತ್ತುಗಳು, ಆಕರ್ಷಕವಾಗಿವೆ.

ಈ ದೇವಾಲಯದ ಬಾಗಿಲವಾಡಗಳ ಲಲಾಟದಲ್ಲಿ ಗಜಲಕ್ಷ್ಮೀಯರ ಉಬ್ಬುಶಿಲ್ಪ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕ ಶಿಲ್ಪಗಳಿವೆ. ಮುಖಮಂಪಟದ ಇಕ್ಕೆಲದ ಕೊಠಡಿಗಳಲ್ಲಿ ಗೋಪಾಲ ಹಾಗೂ ಲಕ್ಷ್ಮೀನಾರಾಯಣ ಶಿಲ್ಪಗಳನ್ನು ಇರಿಸಲಾಗಿದೆ. ಪ್ರಕಾರದೊಳಗೆ ಪ್ರಧಾನ ಗುಡಿಯ ಉತ್ತರ ಭಾಗದಲ್ಲಿ ಸೌಮ್ಯನಾಯಕಿ ಹಾಗೂ ರಂಗಮಂಟಪದಬಲಕ್ಕೆ ರಂಗನಾಯಕಿಯರ ಪ್ರತ್ಯೇಕ ಆಲಯಗಳಿವೆ. ಈ ಆಲಯಗಳ ಗರ್ಭಗೃಹದಲ್ಲಿ ವಿಜಯನಗರ ಕಾಲದ ದೇವಿಶಿಲ್ಪಗಳಿವೆ. ಗರ್ಭಗೃಹ ಅಂತರಾಳದ ಭಾಗವನ್ನು ಹೊಯ್ಸಳ ಶೈಲಿಯ ನಕ್ಷತ್ರಾಕಾರದ ತಳ ವಿನ್ಯಾಸದಲ್ಲಿ ನಿರ್ಮಾಣಗೊಂಡಿದೆ. ಪ್ರಧಾನ ಗರ್ಭಗೃಹವು ಬಹು (32) ಕೋನಾಕಾರದ ತಳವಿನ್ಯಾಸವನ್ನು ಹೊಂದಿದೆ. ಭಿತ್ತಿಯಲ್ಲಿ ಅಲಂಕಾರಿಕ ಅರೆಕಂಬ ಕಿರುಶಿಖರ ಮಾದರಿಗಳಿದ್ದರೂ ಸರಳ ರಚನೆಯಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಶಿಖರವಿದೆ. [103]

ಬೆಳ್ಳೂರು ಕ್ರಾಸ್ ಮಾರ್ಗದಲ್ಲಿ ಬಲಕ್ಕಿರುವ ಕಲ್ಲೇಶ್ವರ (ಕಲಿದೇವರು) ಗುಡಿಯ ಹೊಯ್ಸಳ ಮುಮ್ಮಡಿ ನರಸಿಂಹನಿಂದ ಕ್ರಿ.ಶ. 1269ರಲ್ಲಿ ನಿರ್ಮಾಣವಾಗಿದೆ. ಪೂರ್ವಾಭಿಮುಖವಾಗಿರುವ ಈ ಆಲಯ ಗರ್ಭಗೃಹ, ಅಂತರಾಳ, 24 ಅಂಕಣದ ವಿಶಾಲವಾದ ನವರಂಗ ಹಾಗೂ ಅರ್ಧಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮುಂಭಾಗದಲ್ಲಿ ನಂದಿಕಂಬವಿದೆ. ಪೂರ್ಣ ಶಿಥಿಲಾವಸ್ಥೆಯಲ್ಲಿರುವ ಈ ದೇವಾಲಯದ ಇಟ್ಟಿಗೆಯ ಶಿಖರ ಜೀರ್ಣಗೊಂಡಿದೆ.

ವಿಮಲನಾಥ ಬಸದಿ : ಬೆಳ್ಳೂರಿನ ಜೈನಕೇರಿಯಲ್ಲಿರುವ ವಿಮಲನಾಥ ಬಸದಿಯನ್ನು ಈ ಹಿಂದೆ ಲಕ್ಷ್ಮೀಸೇನಾಚಾರ್ಯನ ಶಿಷ್ಯನಾದ ಸಕ್ಕರೆ ಶೆಟ್ಟಿಯು ನಿರ್ಮಿಸಿದ್ದನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಆನಂತರದ ದಿನಗಳಲ್ಲಿ ಶಿಥಿಲಾವಸ್ಥೆಯಲ್ಲಿದ್ದ ಈ ವಿಮಲನಾಥ ಬಸದಿಯನ್ನು ಹರತಿಯ ಸಾಮಂತರಾಯಪ್ಪ ರಾಜನು ಜೀರ್ಣೋದ್ಧಾರ ಮಾಡಿಸಿದ್ದನ್ನು ಕ್ರಿ.ಶ. 1688ರ ತಾಮ್ರಶಾಸನ ದಾಖಲಿಸುತ್ತದೆ. ಮತ್ತೆ ಈ ಬಸದಿ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ.[104] ದೇವಾಲಯದಲ್ಲಿರುವ ವಿಮಲನಾಥನ ಶಿಲ್ಪ ಮತ್ತು ಇತರ ಶಿಲ್ಪಗಳನ್ನು ಹೊರತುಪಡಿಸಿದರೆ ಬಸದಿಯ ಮತ್ತ್ಯಾವ ಭಾಗಗಳೂ ಪ್ರಾಚೀನತೆಯ ಅವಶೇಷಗಳನ್ನು ಉಳಿಸಿಕೊಂಡಿಲ್ಲ. ವಿಮಲನಾಥನ ಶಿಲ್ಪವಲ್ಲದೆ ಇತರ ತೀರ್ಥಂಕರರ ಶಿಲ್ಪಗಳು ಸೂರನಹಳ್ಳಿಯ ಹೊಯ್ಸಳ ಶಾಸನವನ್ನು ಇಲ್ಲಿಯೇ ಸಂರಕ್ಷಿಸಿಡಲಾಗಿದೆ.

5.10. ಅರೆತಿಪ್ಪೂರು

'ಅರೆ ತಿಪ್ಪೂರು ಬಸ್ತಿ ತಿಪ್ಪೂರು' ಎಂದೆಲ್ಲಾ ಪರಿಚಿತವಿರುವ ಇದು ಕೂಲಿಗೆರೆ ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮವಾಗಿದೆ. ಕೂಲಿಗೆರೆಯಿಂದ ಮೂರು ಕಿ.ಮೀ ಉತ್ತರಕ್ಕೆ ಹಾಗೂ ತಾಲ್ಲೂಕು ಕೇಂದ್ರ ಮದ್ದೂರಿನಿಂದ 15 ಕಿ.ಮೀ ದೂರದಲ್ಲಿದೆ. ಗಂಗ-ಹೊಯ್ಸಳ ಶಾಸನಗಳಲ್ಲಿ ತಿಪ್ಪೂರು, ತಿಪ್ಪೆಯೂರು, ಎಂದು ಉಲ್ಲೇಖಗೊಂಡಿದೆ. ತಿಪ್ಪೂರು ಗ್ರಾಮನಾಮದ ಮೂಲ ತಿರುಪೆರೂರು ಗ್ರಾಮದ ಮೂಲನಾಮದ ಪೂರ್ವಪದ ತಿರು (ಶ್ರೀ) ಗೌರವ ಸೂಚಕವಾಗಿದ್ದು, ಉತ್ತರ ಪದ ಪೆರೂರು ಪಿರಿಯೂರಿನ, ಪ್ರಭಂಶವಾಗಿದೆ.[105] ಸಮೀಪದ ಕೊಳಗೆರೆಯ ಕ್ರಿ.ಶ 917ರ ಶಾಸನದಲ್ಲಿ ಸಗರ ಕುಲದ ಮಣಲಾರನು ಕನಕಗಿರಿ ತೀರ್ಥದ ಮೇಲೆ ಬಸದಿಯನ್ನು ನಿರ್ಮಿಸಿ, ಕನಕಸೇನ ಭಟಾರರಿಗೆ ತಿಪ್ಪೂರ ವಿವಿಧ ತೆರಿಗೆಗಳನ್ನು ದತ್ತಿ ಬಿಟ್ಟ ವಿವರವಿದೆ.[106]

ಹಾಸನ ಜಿಲ್ಲೆಯ ಪ್ರಸಿದ್ಧ ಜೈನ ಕೇಂದ್ರವಾದ ಶ್ರವಣಬೆಳಗೊಳದಷ್ಟೇ ಮಹತ್ವವನ್ನು ಪಡೆದಿದ್ದ ಈ ಊರು ಶ್ರವಣಬೆಳಗೊಳದಂತೆಯೇ ಎರಡು ಬೆಟ್ಟಗಳನ್ನು ಹೊಂದಿದೆ. ಊರ ಸಮೀಪದ ಚಿಕ್ಕಬೆಟ್ಟವನ್ನು ಕೂಲಿಗೆರೆ ಶಾಸನ (ಕ್ರಿ.ಶ. 917) ಕನಕಗಿರಿ ತೀರ್ಥ ಎಂದೇ ಕರೆದಿದೆ. ಆ ತೀರ್ಥವಿರುವ ಪರಿಸರದಲ್ಲಿ ಗಂಗರ ಕಾಲದ ನಾಲ್ಕು ಬಸದಿಗಳಿದ್ದಿರಬಹುದೆಂಬ ವಿದ್ವಾಂಸರ ಅಭಿಪ್ರಾಯಕ್ಕೆ ಅಲ್ಲಿರುವ ಇಟ್ಟಿಗೆಯ ರಾಶಿ ಸಾಕ್ಷಿಯಾಗಿದೆ. ಅ ಪ್ರದೇಶದಲ್ಲಿ ಹಳೆಯ ಬಸದಿಗಳ ತಳಪಾಯವನ್ನು ಗಮನಿಸಬಹುದಾಗಿದೆ. ಆಂಜನೇಯ ಗುಡಿಯ ಆವರಣದಲ್ಲಿ, ವಿವಿಧ ಹಿತ್ತಿಲುಗಳಲ್ಲಿ ವೀರಗಲ್ಲು, ಮಾಸ್ತಿಕಲ್ಲುಗಳಿದ್ದು, ಅವುಗಳಲ್ಲೊಂದು ಹುಲಿಬೇಟೆ ವೀರಗಲ್ಲಾಗಿದೆ. ಉಳಿದಂತೆ ಊರಲ್ಲಿ ಮಾರಮ್ಮ

ಅಂಜನೇಯ ಕಾಳಮ್ಮನ ಗುಡಿಗಳಿದ್ದು, ಆಂಜನೇಯ ಗುಡಿ ಆವರಣದಲ್ಲಿ ಕ್ರಿ.ಶ. 1569 ನಿರ್ಮಾಣಗೊಂಡಿರುವ ತುಳಿಸಿಕಟ್ಟೆಯು ಇದೆ.[107]

ಅರೆತಿಪ್ಪೂರನ್ನು ಬಸ್ತಿತಿಪ್ಪೂರು ಎಂದೂ ಕರೆಯಲಾಗುತ್ತದೆ. ಇಲ್ಲಿನ ಶಾಸನಗಳು ಈ ಗ್ರಾಮದ ಹೆಸರನ್ನು ತಿಪ್ಪೂರು, ತಿಪ್ಪೆಯೂರು ಎಂದು ದಾಖಲಿಸುತ್ತವೆ. ತಿಪ್ಪೂರು ಗ್ರಾಮದ ಮೂಲ ತಿರುಪೇರೂರು ಎಂದು ತಿಳಿದುಬರುತ್ತದೆ. ಅಂದರೆ ತಿರು ಎಂದರೆ ಶ್ರೀ ಅಥವಾ ಗೌರವ ಸೂಚಕವಾದ ಪಿರಿಯವೂರು ಪೇರೂರು ಆಗಿ ತಿರುಪ್ಪೇರೂರಾಗಿದೆ. ಆನಂತರ ಅದೇ ತಿಪ್ಪೂರಾಗಿ ಪರಿವರ್ತಿತವಾಗಿದೆ.[108]

ಅರೆತಿಪ್ಪೂರಿನ ಕಂದಾಯ ಗ್ರಾಮದಲ್ಲಿ ದೊರೆತಿರುವ ಕ್ರಿ.ಶ. 917ರ ಶಾಸನವೊಂದು ಸಗರ ಕುಲದ ಮಣಲಾರನು ಕನಕಗಿರಿ ತೀರ್ಥದ ಮೇಲೆ ಬಸದಿಯನ್ನು ನಿರ್ಮಿಸಿ ಕನಕಸೇನಾ ಭಟ್ಟಾರರಿಗೆ ತಿಪ್ಪೂರಿನ ವಿವಿಧ ತೆರಿಗೆಗಳನ್ನು ದತ್ತಿಬಿಟ್ಟದ್ದನ್ನು ಉಲ್ಲೇಖಿಸುತ್ತದೆ.[109] ಇಲ್ಲಿಂದ 5 ಶಾಸನಗಳು ವರದಿಯಾಗಿವೆ. ಒಂದು ಜಿನಗುಡ್ಡದ ಮೇಲೆ ಇರುವ ಹೊಯ್ಸಳ ವಿಷ್ಣುವರ್ಧನನ ಕ್ರಿ.ಶ. 1117ರ ಶಾಸನವು ದಂಡನಾಯಕ ಗಂಗರಾಜನು ಹೊಯ್ಸಳ ಸಾಮ್ರಾಟ ವಿಷ್ಣುವರ್ಧನನಿಂದ ಉಂಬಳಿಯಾಗಿ ಪಡೆದ ತಿಪ್ಪೂರನ್ನು ಜೈನಧರ್ಮ ಗುರುಗಳಾದ ತಿಂತ್ರಿಣಿಗಚ್ಛದ ಮೇಘಚಂದ್ರ ಸಿದ್ಧಾಂತ ದೇವರಿಗೆ ದಾನ ನೀಡಿದ ವಿವರವನ್ನು ಉಲ್ಲೇಖಿಸುತ್ತದೆ.[110] ಜಿನಬಿಂಬದ ಪೀಠದ ಮೇಲಿರುವ ಶಾಸನವೊಂದು ಉಭಯ ಭಾಷಾ ಕವಿಚಕ್ರವರ್ತಿ ಕಂದರ್ಪದೇವ ಮತ್ತು ಸೊನ್ನಾದೇವಿಯರ ಮಗನಾದ ಬಾಳಚಂದ್ರ ದೇವನು ತನ್ನ ಗುರುಗಳ ಪರೋಕ್ಷ ವಿನಯಕ್ಕಾಗಿ ತೀರ್ಥಂಕರ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಮಾಹಿತಿಯನ್ನು ದಾಖಲಿಸುತ್ತದೆ ಜೊತೆಗೆ ಬಾಳಚಂದ್ರ ಕವಿ ಜಿಲ್ಲೆಯ ಅತಿಪ್ರಾಚೀನ ಜೈನ ನೆಲೆ ಹಾಗೂ ತೀರ್ಥಕ್ಷೇತ್ರ ತಿಪ್ಪೂರಿನವನು ಎಂಬ ಮಹತ್ವದ ಅಂಶವನ್ನು ಅರುಹುತ್ತದೆ.[111]

ಕರ್ನಾಟಕದ ಅತಿಪ್ರಸಿದ್ಧ ಜೈನಕೇಂದ್ರ ಶ್ರವಣಬೆಳಗೊಳದಷ್ಟೇ ಅರೆತಿಪ್ಪೂರು ಅಥವಾ ತಿಪ್ಪೂರು ಇತಿಹಾಸ ಕಾಲಘಟ್ಟದಲ್ಲಿ ಪ್ರಸಿದ್ಧವಾದ ಜೈನಕೇಂದ್ರವಾಗಿತ್ತು. ಶ್ರವಣಬೆಳಗೊಳಕ್ಕೂ ಅರೆತಿಪ್ಪೂರಿಗೂ ಸಾಮ್ಯತೆಗಳಿವೆ. ಶ್ರವಣಬೆಳಗೊಳದಲ್ಲಿ ಬಾಹುಬಲಿಯಿರುವ ದೊಡ್ಡಬೆಟ್ಟವನ್ನು ಇಂದ್ರಗಿರಿಯೆಂದು ಮತ್ತೊಂದನ್ನು ಚಂದ್ರಗಿರಿಯೆಂದು ಕರೆಯುತ್ತಾರೆ. ಹಾಗೆಯೇ ಅರೆತಿಪ್ಪೂರಿನಲ್ಲಿ ಕೂಡ ಬಾಹುಬಲಿಯ ಮೂರ್ತಿಯಿರುವ ಜಿನಬೆಟ್ಟ ಮತ್ತು ತಗ್ಗಾದ ಮತ್ತೊಂದು ಅರೆಯ ಮೇಲೆ ಬಸದಿಗಳು ನಿರ್ಮಿತವಾದ ಮತ್ತೊಂದು ಪ್ರದೇಶವಿದೆ. ಅರೆತಿಪ್ಪೂರಿನ ಕಂದಾಯ ನಗರ ಕೂಲಿಗೆರೆಯ ಕ್ರಿ.ಶ. 917ರ ಶಾಸನವು ಈ

ಕ್ಷೇತ್ರವನ್ನು ಕನಕಗಿರಿ ಕ್ಷೇತ್ರವೆಂದೂ ತೀರ್ಥವೆಂದೂ ಕರೆಯುತ್ತದೆ.[112] ಈ ತೀರ್ಥದ ಪರಿಸರದಲ್ಲಿ ಗಂಗರ ಕಾಲದ ನಾಲ್ಕು ಬಸದಿಗಳಿದ್ದವೆಂಬುದು ವಿದ್ವಾಂಸರ ಅಭಿಮತವಾಗಿತ್ತು. ಇತ್ತೀಚಿಗೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಇಲ್ಲಿ ಕೈಗೊಂಡ ಸಂರಕ್ಷಣ ಕಾರ್ಯಗಳಿಂದಾಗಿ ಇಲ್ಲಿನ ಜೈನ ಬಸದಿಗಳ ಅಧಿಷ್ಠಾನಗಳು ಕಂಡುಬಂದಿವೆ. ಈ ಬಸದಿಗಳಿರುವ ಗುಡ್ಡಗಳನ್ನು ಜಿನಗುಡ್ಡ, ಅಥವಾ ಕನಕಗಿರಿ ಗುಡ್ಡವೆಂದು ಬಾಹುಬಲಿ ಮೂರ್ತಿಯಿರುವ ಗುಡ್ಡವನ್ನು ಸ್ರವಣಪ್ಪನ ಗುಡ್ಡವೆಂದು ಸ್ಥಳಿಕರು ಕರೆಯುತ್ತಾರೆ. ಕನಕಗಿರಿ ಗುಡ್ಡದ ಮೇಲಿರುವ ದೊಣೆಯ ಅಂಚಿನಲ್ಲಿ ಪಾರ್ಶ್ವನಾಥನ ಎರಡು ವಿಗ್ರಹಗಳು ಸುಪಾರ್ಶ್ವನಾಥ ಹಾಗೂ ಮಹಾವೀರನ ಒಂದೊಂದು ಶಿಲ್ಪಗಳು ಕಂಡುಬರುತ್ತವೆ. ಇವುಗಳನ್ನಾಧರಿಸಿ ಹೇಳುವುದಾದರೆ ಇಲ್ಲಿ ಪಾರ್ಶ್ವನಾಥನ ಎರಡು ಸುಪಾರ್ಶ್ವನಾಥ, ನೇಮಿನಾಥ, ಶಾಂತಿನಾಥ ಹಾಗೂ ಪಾರ್ಶ್ವನಾಥನ ಒಂದೊಂದು ಬಸದಿಗಳು ಇದ್ದುವೆಂದು ಭಾವಿಸಬಹುದು. ಬೆಟ್ಟದ ಮೇಲೆ ಚಾಮರಧಾರಿ ದ್ವಾರಪಾಲಕರ ನಾಲ್ಕು ವಿಗ್ರಹಗಳು ತೀರ್ಥಂಕರರ ಎರಡು ಶಿಲ್ಪಗಳು ಕಂಡುಬರುತ್ತವೆ. ದೊಣೆಯ ನೀರಿನ ಮೇಲ್ಮಟ್ಟದ ಮೇಲೆ 24 ತೀರ್ಥಂಕರರ ಮೂರ್ತಿಗಳನ್ನು ಕೆತ್ತಲಾಗಿದೆ. ಆದರೆ ಅವುಗಳನ್ನು ಸಂಪೂರ್ಣವಾಗಿ ಕೆತ್ತಲಾಗಿಲ್ಲ. ಸ್ರವಣಪ್ಪನ ಗುಡ್ಡದ ಮೇಲಿರುವ ಸುಮಾರು 12 ಅಡಿ ಎತ್ತರವಾದ ಬಾಹುಬಲಿಯ ಮೂರ್ತಿಯು ಕ್ರಿ.ಶ. 918ರಲ್ಲಿ ನಿರ್ಮಾಣಗೊಂಡಿದುದೆಂದು ಅಥವಾ ಅದಕ್ಕಿಂತಲೂ ಹಳೆಯದೆಂದು ಭಾವಿಸಲಾಗಿದೆ.[113] ಇದು ಗಂಗರ ಕಾಲದ ಶಿಲ್ಪಗಳಿಗೆ ಅತ್ಯುತ್ತಮ ಉದಾಹರಣೆಯಾಗಿದೆ. ಇಲ್ಲಿನ ಗ್ರಾಮದಲ್ಲಿರುವ ಜಿನೇಶ್ವರಿ ದೇವಾಲಯವು ಹೆಸರೇ ಹೇಳುವಂತೆ ಹಳೆಯ ಜೈನ ಮಂದಿರದ ಅಧಿಷ್ಠಾನದ ಮೇಲೆ ನಿರ್ಮಿತವಾದ ಗುಡಿಯೆಂಬುದು ಕೆಲವರ ಅಭಿಪ್ರಾಯ. ಈ ದೇವಾಲಯವನ್ನು ಸರಿಸುಮಾರು 150 ವರ್ಷಗಳ ಹಿಂದೆ ನಿರ್ಮಿಸಿರುವ ಕಟ್ಟಡವೆಂದು ಭಾವಿಸಬಹುದು. ಹೊನ್ನೇಮರದ ಲಿಂಗಾಕೃತಿಯನ್ನು ಜಿನೇಶ್ವರಿಯೆಂದು ಆರಾಧಿಸಲಾಗುತ್ತದೆ.

ಸ್ಥಳೀಯರು ಹೇಳುವ ಅಭಿಪ್ರಾಯಗಳನ್ನು ಗಮನಿಸಿದರೆ 23ನೆಯ ತೀರ್ಥಂಕರ ನೇಮಿನಾಥನ ಯಕ್ಷಿ ಅಂಬಿಕಾಳನ್ನು ಹಿಂದೆ ಇಲ್ಲಿ ಆರಾಧಿಸುತ್ತಿದ್ದರೆಂದು ತಿಳಿದುಬರುತ್ತದೆ. ಆ ಶಿಲ್ಪವನ್ನು ಮಂಡ್ಯಗೆ ಸ್ಥಳಾಂತರಿಸಲಾಗಿದೆ. ಆದರೆ ಆ ವಿಗ್ರಹ ಮಂಡ್ಯದ ಯಾವ ಮಂದಿರದಲ್ಲಿದೆ ಎಂದು ತಿಳಿದುಬಂದಿಲ್ಲ. ಮಂದಿರದ ಒಳಗಿರುವ ಗಂಗರ ಕಾಲದ ಕಂಬಗಳು ಮತ್ತು ಸ್ಥಳೀಯರ ವಿವರಣೆಯನ್ನು ಆಧರಿಸಿ ಇದು ನೇಮಿನಾಥ ಮತ್ತು ಅಂಬಿಕಾ ಯಕ್ಷಿಯರ ಬಸದಿಯಾಗಿತ್ತೆಂದು ಊಹಿಸುವ ಎಲ್ಲ ಸಾಂದರ್ಭಿಕ ಆಕರಗಳು ಕಂಡುಬರುತ್ತವೆ. ಇಷ್ಟೇ ಅಲ್ಲದೆ ಇಲ್ಲಿನ ಮಾರಮ್ಮನ ಗುಡಿಯಲ್ಲಿ ಸಹ ಗಂಗರ ಕಾಲದ

ಕಂಬಗಳಿವೆ. ವಾಮನ ಮುದ್ರೆಯ ಕಲ್ಲು ಕಂಡುಬರುತ್ತದೆ. ಊರಿನಲ್ಲಿ ವಿಜಯನಗರ ಕಾಲದ ಕೆಲವು ವೀರಗಲ್ಲುಗಳು ಇವೆ.

5.11. ಬಸ್ತಿ ಹೊಸಕೋಟೆ

ಕೃಷ್ಣರಾಜಪೇಟೆ ತಾಲ್ಲೂಕಿನ ಕೇಂದ್ರ ಸ್ಥಾನವಾದ ಕೃಷ್ಣರಾಜಪೇಟೆಯಿಂದ ದಕ್ಷಿಣಕ್ಕೆ 28 ಕಿ.ಮೀ. ದೂರದಲ್ಲಿ ಕನ್ನಂಬಾಡಿ ಅಣೆಕಟ್ಟೆಯ ಹಿನ್ನೀರಿನಲ್ಲಿ ಮುಳುಗಿ ಅಳಿದು ಉಳಿದಿರುವ ಜೈನಸ್ಮಾರಕಗಳ ಸಮುಚ್ಚಯವನ್ನು ಅಥವಾ ಹಾಳೂರನ್ನು ಬಸ್ತಿಹೊಸಕೋಟೆ ಎಂದು ಕರೆಯಲಾಗುತ್ತದೆ.[114] ಬಸ್ತಿಹೊಸಕೋಟೆ ಹಳೇಗ್ರಾಮವು ಕೃಷ್ಣರಾಜ ಸಾಗರ ಹಿನ್ನೀರಿನಲ್ಲಿ ಪೂರ್ಣ ಮುಳುಗಡೆಯಾಗಿದ್ದು ಅಣೆಕಟ್ಟೆಯಲ್ಲಿ ನೀರಿನ ಪ್ರಮಾಣ ಕುಗ್ಗಿದಾಗ ಇಲ್ಲಿನ ಸ್ಮಾರಕಗಳನ್ನು ಸಂದರ್ಶಿಸಬಹುದು. ಇಲ್ಲಿರುವ ಗೊಮ್ಮಟನ ಮೂರ್ತಿ ಬಹು ವಿಶೇಷವಾದುದು. ಬಸ್ತಿಹೊಸಕೋಟೆಯಲ್ಲಿ ಗಂಗರ ಕಾಲದ 5 ಸಣ್ಣ ಗಾತ್ರದ ಜಿನಾಲಯಗಳು ಇದ್ದುದರ ಕುರುಹು ಇಂದಿಗೂ ಕಂಡುಬರುತ್ತದೆ. ಇಲ್ಲಿರುವ ಎಲ್ಲ ಜೈನ, ಯಕ್ಷ, ಯಕ್ಷಿಯರ ವಿಗ್ರಹಗಳು ಮತ್ತು ಅಷ್ಟದಿಕ್ಪಾಲಕರ ವಿಗ್ರಹಗಳು ಜಿನಾಲಯಗಳ ಛತ್ತು ಭಗ್ನವಾಗಿದ್ದು ಕೇವಲ ಒಂದೆರಡು ಜಿನಾಲಯಗಳು ಪೂರ್ಣಪ್ರಮಾಣದಲ್ಲಿ ಕಂಡುಬರುತ್ತವೆ. ಇಲ್ಲಿನ ಗೊಮ್ಮಟಮೂರ್ತಿಯು ಭಗ್ನವಾಗಿದ್ದು ಆತನಿಗೆ ಒಂದು ಕಮಾನಿನಾಕಾರದ ಛಾವಣಿಯನ್ನು ಅಥವಾ ರಕ್ಷಣಾ ವ್ಯವಸ್ಥೆಯನ್ನು ನಿರ್ಮಿಸಲಾಗಿದ್ದು ಆಸ್ತಿಕ ಜೈನರು ಈ ಕೇಂದ್ರವನ್ನು ಸಂದರ್ಶಿಸುತ್ತಾರೆ.[115] ಈ ವಿಗ್ರಹವು ಸುಮಾರು 15 ಅಡಿ ಎತ್ತರವಾಗಿದ್ದು ಪಾದದಿಂದ ಮುಡಿಯವರೆಗೆ ಬಳ್ಳಿಗಳು ಆವೃತವಾಗಿರುವಂತೆ ಅಲಂಕರಿಸಲಾಗಿದೆ. ತಲೆಯಲ್ಲಿ ಗುಂಗುರು ಕೂದಲುಗಳಿದ್ದು ಅವನ್ನು ವೃತ್ತಾಕಾರವಾಗಿ ಕೇಶವಿನ್ಯಾಸ ಮಾಡಿದಂತೆ ಕೆತ್ತಲಾಗಿದೆ. ಈ ಮೂರ್ತಿಯನ್ನು ಹೊಯ್ಸಳ ವಿಷ್ಣುವರ್ಧನನ ಮಂತ್ರಿ ಪುಣಿಸಮಯ್ಯನು ನಿರ್ಮಿಸಿದಂತೆ ತಿಳಿದುಬರುತ್ತದೆ. ಇಲ್ಲಿಂದ ಎರಡು ಶಾಸನಗಳು ಪ್ರಕಟವಾಗಿವೆ. ಹೊಯ್ಸಳ ವಿಷ್ಣುವರ್ಧನನ ಕಾಲದ ಮಹಾಪ್ರಧಾನನೂ, ದಂಡನಾಯಕನೂ ಆದ ಪುಣಿಸಮಯ್ಯ ಬಸದಿಯನ್ನು ನಿರ್ಮಿಸಿ ಮಾಣಿಕ್ಯದೊಡಲೂರು ಮತ್ತು ಮಾವಿನಕೆರೆಗಳನ್ನು ಇಲ್ಲಿನ ಜಿನಾಲಯಕ್ಕೆ ದಾನಬಿಟ್ಟ ವಿಷಯವನ್ನು ಪ್ರಸ್ತಾಪಿಸುತ್ತದೆ.[116] ಇಲ್ಲಿನ ಮಾನಸ್ತಂಭದ ಮೇಲಿರುವ ಹೊಯ್ಸಳ ಒಂದನೇ ನರಸಿಂಹನ ಕಾಲದ ಕ್ರಿ.ಶ. 1165ರ ಶಾಸನ ಮಹಾಪ್ರಧಾನ ಹೆಗ್ಗಡೆ ಶಿವರಾಜನ ಅಧಿಕಾರಿ ಸೋಮಯ್ಯನು ಮಾಣಿಕ್ಯವೊಳಲಿನ ಹೊಯ್ಸಳ ಜಿನಾಲಯಕ್ಕೆ ಮಾಣಿಕ್ಯವೊಳಲಿನಲ್ಲಿ ಗದ್ದೆ, ಮುಗ್ಗದೆರೆಗಳನ್ನು ದಾನಬಿಟ್ಟಿದುದನ್ನು ಪ್ರಸ್ತಾಪಿಸುತ್ತದೆ.[117]

ಕೆಲವೊಂದು ಇತಿಹಾಸಕಾರರ ಪ್ರಕಾರ ಶಾಸನೋಕ್ತ ಮಾಣಿಕ್ಯ ಜಿನಾಲಯವೇ ಇಲ್ಲಿನ ಪಾಳು ನಿವೇಶನದ ದಿಬ್ಬವೊಂದರ ಮೇಲಿರುವ ಬಸದಿಯ ಅವಶೇಷವಾಗಿದೆ.

ಬಸ್ತಿಕೋಟೆ ಅಥವಾ ಬಸ್ತಿಹಳ್ಳಿಯಲ್ಲಿ ಶಿಥಿಲವಾಗಿರುವ 5 ಶಿಲಾಮಂಟಪಗಳಿವೆ. ಇವುಗಳಲ್ಲಿ 3 ಪೂರ್ವಾಭಿಮುಖವಾಗಿದ್ದು 2 ಉತ್ತರಾಭಿಮುಖವಾಗಿವೆ. ಇವೆಲ್ಲವೂ ದ್ರಾವಿಡಶೈಲಿಯಲ್ಲಿವೆ. ಇವುಗಳ ನಿರ್ಮಾಣಕ್ಕೆ ಕ್ಲೋರೆಟಿಕ್ ಸಿಸ್ಟ್‌ನ್ನು ಬಳಸಲಾಗಿದೆ. ಇಲ್ಲಿನ ಜೈನ ಅವಶೇಷಗಳನ್ನು ಗಮನಿಸಿದಾಗ ಇವು ಹೊಯ್ಸಳ ಪೂರ್ವದ ಗಂಗರ ಕಾಲದಲ್ಲಿ ರಚನೆಗೊಂಡು ಆನಂತರದಲ್ಲಿ ಹೊಯ್ಸಳರ ಕಾಲದಲ್ಲಿ ಮತ್ತೆ ಜೀರ್ಣೋದ್ಧಾರವಾಗಿರುವ ಸಾಧ್ಯತೆಗಳಿವೆ. ಇದಕ್ಕೆ ರಾಜಕೀಯ ಕಾರಣಗಳನ್ನು ಹುಡುಕುವುದು ಕಷ್ಟವೇನಲ್ಲ. ರಕ್ಕಸಗಂಗನ ಕಾಲದಲ್ಲಿ ಗಂಗರು ಚೋಳರ ಅಧೀನರಾದದ್ದರಿಂದ ಚೋಳರು ಜಿನಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡದ ಕಾರಣ ಈ ಮಂದಿರಗಳು ತಮ್ಮ ಪೂರ್ವದ ವೈಭವವನ್ನು ಕಳೆದುಕೊಂಡವು. ಆದರೆ ಪೂರ್ಣವಾಗಿ ನಶಿಸಲಿಲ್ಲ. ಹೊಯ್ಸಳ ಯುಗದ ಆರಂಭ ಕಾಲದಲ್ಲಿಯೇ ಇವು ತಮ್ಮ ಉಚ್ಛ್ರಾಯತೆಯನ್ನು ಕಂಡುಕೊಂಡವು ಕಾರಣ ಇದು ಗಂಗವಾಡಿಯನ್ನು ಸಂಪರ್ಕಿಸುವ ಪ್ರಮುಖ ಹೆದ್ದಾರಿಯಲ್ಲಿತ್ತು. ಇಲ್ಲಿನ ಶಾಸನವೊಂದು ಹೇಳುವಂತೆ ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಆತನ ಮಂತ್ರಿ ಬಸದಿ ಹಳ್ಳಿಯನ್ನು ಕಟ್ಟಿಸಿದ ವಿಚಾರ ಮನದಟ್ಟಾಗುತ್ತದೆ. ಪ್ರಾಯಶಃ ಇದು ಪುನರುಜ್ಜೀವನವಿರಬೇಕು. ಕ್ರಿ.ಶ. 1165ರಲ್ಲಿ ಇಲ್ಲಿದ್ದು ಜಿನಾಲಯಕ್ಕೆ ದಾನದತ್ತಿಗಳನ್ನು ನೀಡಿದ ಸಂಗತಿಯು ಶಾಸನದಲ್ಲಿ ಉಲ್ಲೇಖವಾಗಿದೆ. ಹೀಗಾಗಿ ಕ್ರಿ.ಶ. ಸುಮಾರು 12ನೆಯ ಶತಮಾನದಲ್ಲಿ ಇಲ್ಲಿ ಎರಡು ಜಿನಾಲಯಗಳು ಕಾರ್ಯನಿರ್ವಹಿಸುತ್ತಿದ್ದವೆಂದು ದೃಢಪಡುತ್ತದೆ. ಆನಂತರ ಅವು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಈಗ ಕೇವಲ ಆ ಸ್ಮಾರಕದ ಅವಶೇಷಗಳು ಮಾತ್ರ ಉಳಿದುಬಂದಿವೆ.

5.12. ಕಸಲಗೆರೆ

ನಾಗಮಂಗಲ ತಾಲ್ಲೂಕಿನ ದೇವಲಾಪುರ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಕಸಲಗೆರೆ ಒಂದು ಪ್ರಾಚೀನ ಜೈನಕೇಂದ್ರ. ಈ ಊರಿನಲ್ಲಿ ಒಟ್ಟು 5 ಶಾಸನಗಳು ಕಂಡುಬಂದಿದ್ದು ಅವುಗಳು ಪ್ರಕಟಗೊಂಡಿವೆ.[118] ಇಮ್ಮಡಿ ಬಲ್ಲಾಳನ ಕ್ರಿ.ಶ. 1190ರ ಮತ್ತೊಂದು ಶಾಸನವು ಹೆಬ್ಬಿದಿರ ವಾಡಿಯ ಕಲಿದೇವರ ನಿತ್ಯಸೇವೆಗೆ ದಾನಬಿಟ್ಟ ವಿವರಗಳನ್ನು ದಾಖಲಿಸುತ್ತದೆ.[119] ಇದೇ ಶಾಸನದ ಕಲ್ಲಿನ ಹಿಂಭಾಗದಲ್ಲಿ ಕ್ರಿ.ಶ. 12ನೆಯ ಶತಮಾನದ ಮತ್ತೊಂದು ಶಾಸನವಿದ್ದು ಇಲ್ಲಿಯ ಜೈನಬಸದಿಯನ್ನು ಕಲ್ಕುಣಿನಾಡ ಯಕ್ಕೋಟಿಜಿನಾಲಯವೆಂದು ಉಲ್ಲೇಖಿಸುತ್ತದೆ.[120] ಇದರ ಈ ಜೈನದೇವಾಲಯದ

ರೂವಾರಿಯನ್ನು ಮಾಚೋಜನೆಂದು ಆತನನ್ನು ಕಲ್ಕುಣಿನಾಡ ಆಚಾರ್ಯನೆಂದು ಕಲಿಯುಗ ವಿಶ್ವಕರ್ಮನೆಂದು ಶಾಸನವು ದಾಖಲಿಸುತ್ತದೆ. ಕಸಲಗೆರೆಯ ಊರಾಚೆಯಲ್ಲಿರುವ ಪಾಳು ಕಲ್ಲೇಶ್ವರ ಗುಡಿಯ ಬಳಿ ಇರುವ ಕ್ರಿ.ಶ. 1142 ರ ಹೊಯ್ಸಳರ ಕಾಲದ ಶಾಸನವು ಬಾನುಕೀರ್ತಿ ಸಿದ್ಧಾಂತದೇವರ ಶಿಷ್ಯ ಸಾವಂತಸೋಮೇನಾಯಕನು ಹೆಬ್ಬಿದಿರ ವಾಡಿಯಲ್ಲಿ ಉತ್ತುಂಗ ಚೈತ್ಯಾಲಯವನ್ನು ನಿರ್ಮಿಸಿ ಪಾರ್ಶ್ವನಾಥ ದೇವರನ್ನು ಪ್ರತಿಷ್ಠಾಪಿಸಿ ಆ ದೇವರ ಅಂಗಪೂಜೆ, ರಂಗಪೂಜೆ, ಇತ್ಯಾದಿಗಳಿಗೆ ದಾನಬಿಟ್ಟ ವಿವರಗಳನ್ನು ದಾಖಲಿಸುತ್ತದೆ.[121] ಈ ಶಾಸನಗಳನ್ನು ಆಧರಿಸಿ ಕಸಲಗೆರೆಯ ಪ್ರಾಚೀನ ಹೆಸರನ್ನು ಹೆಬ್ಬಿದಿರ ವಾಡಿಯೆಂದು ಗುರುತಿಸಬಹುದು. ಇಲ್ಲಿನ ಕಲ್ಲೇಶ್ವರ ಗುಡಿಯು ಶಿಥಿಲವಾಗಿದ್ದು ಜೈನಬಸದಿಗಳು ನಾಶವಾಗಿವೆ. ಊರಾಚೆ ಇರುವ ಶಾಸನೋಕ್ತ ಕಲಿದೇವರ ಗುಡಿಯೇ ಕಲ್ಲೇಶ್ವರ ಗುಡಿಯಿರಬೇಕೆಂದು ಭಾವಿಸಲಾಗಿದೆ. ಈ ದೇವಾಲಯದ ಒಳಭಾಗದಲ್ಲಿರುವ ಜೈನಶಾಸನ ಸೂರ್ಯಶಿಲ್ಪಗಳು ಮತ್ತು ಇಲ್ಲಿನ ಕ್ರಿ.ಶ. 1142ರ ಜೈನಶಾಸನ ಪಾರ್ಶ್ವನಾಥ ದೇವಾಲಯವಿದ್ದ ಉತ್ತುಂಗ ಚೈತ್ಯಾಲಯ ಇದೇ ದೇವಾಲಯವಾಗಿದ್ದಿರಬಹುದು ಎಂದು ಭಾವಿಸಬಹುದು. ಧಾರ್ಮಿಕ ಸಂಘರ್ಷಗಳು ಪರಿಣಾಮವಾಗಿ ಇದನ್ನು ಎಕ್ಕೋಟಿ ಜಿನಾಲಯವೆಂದು ಕರೆದಿರುವ ಸಾಧ್ಯತೆಗಳಿವೆ.[122] ಆನಂತರ ಕ್ರಿ.ಶ. 1190ರಲ್ಲಿ ಕಲಿದೇವರ ಗುಡಿಯಾಗಿ ಪರಿವರ್ತಿತವಾಗಿರಬೇಕು. ಇದಕ್ಕೆ ಪೂರಕವಾಗಿ ಎರಡು ವೀರಗಲ್ಲುಗಳು ಇಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಒಂದು ಮಾರದೇವ ಮತ್ತವನ ಮಡದಿ ಮಹದೇವಿಯದ್ದು. ಈ ಪಟ್ಟಿಕೆಯಲ್ಲಿ ಚೌರಿಧಾರಿಗಳ ನಡುವೆ ನಿಂತಿರುವ ದಂಪತಿಗಳೇ ಮಾರದೇವ ಮತ್ತವನ ಮಡದಿ. ಇವರನ್ನು ರಿಕ್ತವೇದಿಕೆಯತ್ತ ಕರೆದೊಯ್ಯಲಾಗುತ್ತಿದೆ. ಬಳಿಯಲ್ಲಿಯೇ ಖಡ್ಗ ಹಿಡಿದಿರುವ ಯೋಧನನ್ನೂ ಕೆತ್ತಲಾಗಿದೆ. ವೇದಿಕೆಯ ತುತ್ತುದಿಯಲ್ಲಿ ಮುಕ್ಕೊಡೆಯಿದೆ. ಇದು ಮಾರದೇವನ ಆತ್ಮಹುತಿಯನ್ನು ಸೂಚಿಸುತ್ತದೆ. ಇಲ್ಲಿನ ಇನ್ನೊಂದು ವೀರಗಲ್ಲು ಶಿಲ್ಪ ವೀರಗುಜ್ಜನಾಯಕನ ಆತ್ಮಾಹುತಿಯನ್ನು ಪ್ರತಿನಿಧಿಸುತ್ತದೆ.

5.13. ಬೋಗಾದಿ

ತಾಲ್ಲೂಕು ಕೇಂದ್ರ ನಾಗಮಂಗಲದಿಂದ ನೈರುತ್ಯ ದಿಕ್ಕಿನಲ್ಲಿ ಹದಿನಾರು ಕಿ.ಮೀ. ದೂರದಲ್ಲಿರುವ ಸಣ್ಣ ಗ್ರಾಮವೇ ಬೋಗಾದಿ. ಶಾಸನಗಳಲ್ಲಿ ಈ ಗ್ರಾಮವನ್ನು ಭೋಗವಸದಿ ಎಂದು ಕರೆಯಲಾಗಿದೆ. ಈವರೆಗೆ ಈ ಗ್ರಾಮದಿಂದ ಮೂರಕ್ಕೂ ಹೆಚ್ಚು ಶಾಸನಗಳು ಪ್ರಕಟವಾಗಿವೆ. ಕ್ರಿ.ಶ. 1144ರ ಇಲ್ಲಿನ ಜೈನಶಾಸನ ಶ್ರೀಕರಣದ ಹೆಗ್ಗಡೆ ಮಾದಿರಾಜನು ಇಲ್ಲಿ ಅಂದರೆ ಭೋಗವತಿಯಲ್ಲಿ ಶ್ರೀಕರಣದ

ಜಿನಾಲಯವನ್ನು ನಿರ್ಮಿಸಿ ಅದರಲ್ಲಿ ಪಾರ್ಶ್ವನಾಥ ತೀರ್ಥಂಕರನ ಮೂರ್ತಿಯನ್ನು ಪ್ರತಿಷ್ಠಾಪಿಸಿದುದನ್ನು ದಾಖಲಿಸುತ್ತದೆ.[123] ಕ್ರಿ.ಶ. 1173ರ ಮತ್ತೊಂದು ಶಾಸನ ಮಂತ್ರಿ ಬಲ್ಲಮಯ್ಯನು ನೀಡಿದ ದಾನವನ್ನು ದಾಖಲಿಸುತ್ತದೆ. ಈ ಊರಿನಲ್ಲಿ ಶಾಸನೋಕ್ತ ಪಾರ್ಶ್ವನಾಥ ಬಸದಿ ವೆಂಕಟರಮಣನ ದೇವಾಲಯ ಊರಿನ ಆಚೆ ಈಶ್ವರ ಗುಡಿ ಬೋರೇದೇವರ ಗುಡಿ ಮತ್ತು ವೀರಗಲ್ಲುಗಳು ಉಳಿದಿವೆ. ಊರೊಳಗೆ ಆಂಜನೇಯ, ಪಟ್ಟಲದಮ್ಮ, ಸಿಂಗಾರಮ್ಮ ಕನ್ನಂಬಾಡಿಯಮ್ಮನ ಗುಡಿಗಳಿವೆ. ನೆರೆಯ ಕೆಂದನಹಳ್ಳಿಯ ಗುಡ್ಡದ ಮೇಲೆ ಪತ್ತೆಯಾದ ಹತ್ತು ಅಡಿ ಎತ್ತರದ ತೀರ್ಥಂಕರನ ಶಿಲ್ಪವನ್ನು ಇಲ್ಲಿನ ಸಮೀಪದ ಗುಡ್ಡದ ಗುಡಿಯೊಂದರಲ್ಲಿ ಸಂರಕ್ಷಿಸಿರುವುದಾಗಿ 1940ರ ಮೈಸೂರು ಪ್ರಾಚ್ಯವಸ್ತು ಇಲಾಖೆಯ ವಾರ್ಷಿಕ ವರದಿಯು ದಾಖಲಿಸುತ್ತದೆ.[124]

ಬೋಗಾದಿಯ ಪಾರ್ಶ್ವನಾಥ ಬಸದಿಯಲ್ಲಿ ಹೊಯ್ಸಳರ ಕಾಲದ ಮೂರು ಶಾಸನಗಳು ಕಂಡುಬರುತ್ತವೆ. ಮೊದಲನೆಯ ಅಥವಾ ಇಲ್ಲಿನ ಅತಿ ಪ್ರಾಚೀನ ಶಾಸನವು ಶಕ 1057ರ ರಕ್ತಾಕ್ಷಿ ಸಂವತ್ಸರ, ಪುಷ್ಯ ಅಮವಾಸ್ಯೆ ಎಂದು ಹೊರಡಿಸಿದ್ದು ಇದು ಕ್ರಿ.ಶ. 1144ರ ಡಿಸೆಂಬರ್ 26ಕ್ಕೆ ಸರಿಹೊಂದುತ್ತದೆ.[125] ಈ ಶಾಸನವು ಹೊಯ್ಸಳ 1ನೇ ನರಸಿಂಹನನ್ನು ಅವನ ಮಂತ್ರಿಯಾದ ಶ್ರೀಕರಣದ ಮಾದಿರಾಜನನ್ನು ಉಲ್ಲೇಖಿಸುತ್ತ ಶ್ರೀಕರಣನ ಮಾದಿರಾಜನು ಬಸದಿಯನ್ನು ನಿರ್ಮಾಣಮಾಡಿದ್ದನ್ನು ಮತ್ತು ಅದಕ್ಕೆ ನೀಡಿದ ದಾನಗಳನ್ನು ದಾಖಲಿಸುತ್ತದೆ. ಇಲ್ಲಿನ ಎರಡನೆಯ ಶಾಸನವು ಹೊಯ್ಸಳ ಬಲ್ಲಾಳನ ಕಾಲದ್ದಾಗಿದ್ದು ಶಕ 1075 ವಿಜಯ ಸಂವತ್ಸರ ಕಾರ್ತೀಕ ಶುದ್ಧ ಪಂಚಮಿಯಂದು ಅಂದರೆ ಕ್ರಿ.ಶ. 1173 ಅಕ್ಟೋಬರ್ 13ರಂದು ಹಾಕಿಸಿದ ಶಾಸನವಾಗಿದೆ.[126] ಈ ಶಾಸನವು ಬೋಗಾದಿ ಗ್ರಾಮದ ಸುಂಕವನ್ನು ದೇವರ ಪೂಜೆಗೆ ಅಂದರೆ ಪಾರ್ಶ್ವನಾಥ ಸ್ವಾಮಿಯ ಅಂಗಭೋಗಕ್ಕೆ, ರಂಗಭೋಗಕ್ಕೆ ಚಕ್ರವರ್ತಿಯ ಮಹಾಪ್ರಧಾನ ಸರ್ವಾಧಿಕಾರಿ ಬಲ್ಲಯ್ಯನು ನೀಡಿದುದನ್ನು ದಾಖಲಿಸುತ್ತದೆ. ಈ ಶಾಸನಗಳ ಆಧಾರದ ಮೇಲೆ ಇಲ್ಲಿನ ಶ್ರೀಕರಣದ ಬಸದಿ ಅಥವಾ ಪಾರ್ಶ್ವನಾಥ ಬಸದಿಯನ್ನು ಕ್ರಿ.ಶ. 1144ರಲ್ಲಿ ನಿರ್ಮಿಸಲಾಯಿತೆಂದು ಭಾವಿಸಬಹುದು.

ಪಾರ್ಶ್ವನಾಥ ಬಸದಿಯು ಸಂಪೂರ್ಣವಾಗಿ ಬಿದ್ದುಹೋಗಿರುವ ಜೈನ ಬಸದಿಯಾಗಿದೆ. ಇಲ್ಲಿನ ಶಾಸನವು ಇದನ್ನು ಶ್ರೀಕರಣ ಜಿನಾಲಯವೆಂದು ದಾಖಲಿಸುತ್ತದೆ. ಇಲ್ಲಿನ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಪಾರ್ಶ್ವನಾಥನ ದೇವಾಲಯ ಇಂದು ಕಂಡುಬರುವುದಿಲ್ಲ. ಈ ದೇವಾಲಯವನ್ನು ಇಲ್ಲಿ ಕಂಡುಬರುವ ಶಾಸನದ ಆಧಾರದಮೇಲೆ ಮಾತ್ರ ಗುರುತಿಸಬಹುದು. ಈ ಬಸದಿಯು

ಗರ್ಭಗೃಹ, ಸುಖನಾಸ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹ ಮತ್ತು ಸುಖನಾಸಿಯು ಸಂಪೂರ್ಣವಾಗಿ ಬಿದ್ದುಹೋಗಿದೆ. ನವರಂಗ ಮತ್ತು ಮುಖಮಂಟಪ ಇಂದಿಗೂ ಉಳಿದುಕೊಂಡು ಬಂದಿದೆ. ನವರಂಗದ ಪ್ರವೇಶದ್ವಾರವು ಸರಳವಾಗಿದೆ. ನವರಂಗ ಸರಳವಾಗಿದ್ದು ಕುಳ್ಳಾಗಿದೆ. ಅದರ ಮಧ್ಯದಲ್ಲಿರುವ ಭುವನೇಶ್ವರಿಯಲ್ಲಿ ಪದ್ಮ ಮತ್ತು ಅದನ್ನಾವರಿಸಿದ ವೃತ್ತಗಳು ಕಂಡುಬರುತ್ತವೆ. ನವರಂಗದ ಭಿತ್ತಿಗಳಲ್ಲಿ ಪೂರ್ಣಗಂಭಗಳು ಅರೆಗಂಬಗಳು, ತೊಲೆಗಳು ಸುಸ್ಥಿತಿಯಲ್ಲಿರುವಂತೆ ಕಂಡುಬರುತ್ತದೆ. ಪೂರ್ವಾಭಿಮುಖವಾಗಿರುವ ನವರಂಗವನ್ನು ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಂದ ಪ್ರವೇಶಿಸಲು ಪ್ರವೇಶ ದ್ವಾರಗಳಿವೆ. ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಾಣವಾಗಿರುವ ದೇವಾಲಯವನ್ನು ಪ್ರವೇಶಿಸಲು ಕಟಾಂಜನಗಳನ್ನು ಹೊಂದಿದ ಮೆಟ್ಟಿಲುಗಳನ್ನೇರಿ ಹೋಗಬೇಕು. ಅಧಿಷ್ಠಾನವು ನಾಲ್ಕು ಪಟ್ಟಿಕೆಗಳನ್ನು ಹೊಂದಿದ್ದು ಹೊಯ್ಸಳರ ಕಾಲದ ರಚನೆಯನ್ನು ಅನುಕರಿಸಿವೆ. ಅಧಿಷ್ಠಾನದಲ್ಲಿ ಹೊಯ್ಸಳ ಎರಡನೇ ಬಲ್ಲಾಳನ ಶಾಸನವನ್ನು ಕಾಣಬಹುದು. ದೇವಾಲಯದ ಪರಿಮಿತಿಯಲ್ಲಾಗಲಿ ಅಥವಾ ಪ್ರದೇಶದಲ್ಲಾಗಲಿ ಯಾವುದೇ ಮೂರ್ತಿಗಳು ಕಂಡುಬರುವುದಿಲ್ಲ. ದೇವಾಲಯದ ಗರ್ಭಗೃಹದಲ್ಲಿನ ಮೂರ್ತಿ ಕೂಡ ಕಂಡುಬರುವುದಿಲ್ಲ.[127]

5.14. ಕೆಳಗೆರೆ

ನಾಗಮಂಗಲದ ತಾಲ್ಲೂಕು ಕೇಂದ್ರದಿಂದ 12 ಕಿ.ಮೀ. ದೂರದಲ್ಲಿರುವ ಕೆಳಗೆರೆ ಪ್ರಾಚೀನ ಶಾಸನಗಳಲ್ಲಿ ಕೆಲ್ಲಂಗೆರೆ ಎಂದು ದಾಖಲಾಗಿದೆ. ಇದುವರೆಗೆ ಈ ಗ್ರಾಮದಿಂದ ವರದಿಯಾಗಿರುವ ಮೂರು ಶಾಸನಗಳಲ್ಲಿ ಮುಮ್ಮಡಿ ನರಸಿಂಹನ ಕಾಲದ ಶಾಸನವು ಜೈನಶಾಸನವಾಗಿದೆ.[128] ದೋರಸಮುದ್ರದ ತ್ರಿಕುಟ ರತ್ನತ್ರಯ ಶಾಂತಿನಾಥ ದೇವರಿಗೆ ಚಿಕ್ಕಕನ್ನೇಯ ಹಳ್ಳಿಯನ್ನು ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ದಾನವನ್ನು ದೋರಸಮುದ್ರದ ದೇವಾಲಯಕ್ಕೆ ವರ್ಗಾಯಿಸಲು ಇಲ್ಲಿ ಜೈನರು ಮತ್ತು ಈ ದೇವಾಲಯಕ್ಕೆ ಸಂಬಂಧಿಸಿದ ಸಣ್ಣ ಸಂಘವೊಂದು ಅಥವಾ ಆಡಳಿತಾತ್ಮಕ ವ್ಯವಸ್ಥೆ ಇದ್ದಿರಲೇಬೇಕು. ಇದಕ್ಕೆ ಪೂರಕವಾಗಿ ಮಲ್ಲಿಕಾರ್ಜುನನ ಗುಡಿಯಲ್ಲಿರುವ ವಿಜಯನಗರದ ಅರಸನ ದೇವರಾಯನ ಕಾಲದ ಶಾಸನವು ಕೆಲ್ಲಂಗೆರೆಯು ಹಿಂದೆ ಭಟ್ಟಾರಕ ದೇವ ಅಂದರೆ ತೀರ್ಥಂಕರನಿಂದಾಗಿ ಪ್ರಸಿದ್ಧವಾಗಿದ್ದ ಅಂಶವನ್ನು ದಾಖಲಿಸುತ್ತದೆ. ಅಂದಮೇಲೆ ಇದು ಹೊಯ್ಸಳರ ಕಾಲಘಟ್ಟದಲ್ಲಿ ಅಂದರೆ ಈ ಮೊದಲು ಉಲ್ಲೇಖಿಸಿದ ಶಾಸನದ ಕಾಲಘಟ್ಟದಲ್ಲಿ ಜೈನ ಧರ್ಮೀಯರ

ಕೇಂದ್ರವಾಗಿತ್ತೆಂದು ದಾಖಲಿಸಬಹುದು. ಈ ಊರ ಅಗಸಿಯ ಬಾಗಿಲ ಮುಂದೆ ಇರುವ ಇಪ್ಪತ್ತು ಅಡಿ ಎತ್ತರದ ಬೃಹತ್ ಸ್ತಂಭವು ಜೈನ ಮಾನಸ್ತಂಭವಾಗಿತ್ತೆಂದು ಭಾವಿಸಲಾಗುತ್ತಿದೆ. ಮಾನಸ್ತಂಭದ ತುತ್ತತುದಿಯಲ್ಲಿ ಆನೆಯ ಶಿಲ್ಪವಿತ್ತೆಂದು ಅದು ಕೆಳಗೆ ಬಿದ್ದಿರಬಹುದೆಂದು ಮಾನಸ್ತಂಭದ ಸಮೀಪದಲ್ಲಿಯೇ ಕಂಡುಬಂದ ಆನೆಯ ಶಿಲ್ಪವನ್ನಾಧರಿಸಿ ದಾಖಲಿಸಲಾಗಿದೆ.

ಕೆಳಗೆರೆಯಲ್ಲಿ ಒಂದು ಎತ್ತರವಾದ ಗರುಡಗಂಭದ ಮಾದರಿಯ ಗ್ರಾನೈಟ್ ಶಿಲೆಯ ಕಂಬವೊಂದಿದೆ. ಇದನ್ನು ಸ್ಥಾನೀಯರು ಗರುಡಗಂಭವೆಂದು ಕರೆಯುತ್ತಾರೆ. ಇದು ಜೈನರ ಅತ್ಯಂತ ಪ್ರಮುಖ ನೆಲೆಯಾಗಿದ್ದುದನ್ನು ಮತ್ತು ಈ ಕಂಬವು ಮಾನಸ್ತಂಭವಾಗಿರಬೇಕೆಂದು ತಿಳಿದುಬರುತ್ತದೆ. ಇದು ಸುಮಾರು 20 ಅಡಿ ಎತ್ತರವಾಗಿದೆ. ಒರಟುಕಲ್ಲುಗಳ ವೇದಿಕೆಯ ಮೇಲೆ ಈ ಕಂಬವನ್ನು ನಿರ್ಮಿಸಲಾಗಿದೆ. ಇದು ಚೌಕಾಕಾರದ ಪೀಠವನ್ನು ಹೊಂದಿದ್ದು ಕಂಬವೊಂದು ಜೈನ ಮಾನಸ್ತಂಭವು ಹೊಂದುವ ಅಷ್ಟಮುಖ ಕಂಬ, ಅದರ ಮೇಲೆ ಉರುಳೆಯಾಕಾರದ ಕಂಬವನ್ನು ತುತ್ತತುದಿಯಲ್ಲಿ ಗಂಟೆಯಾಕಾರದ ಬೋದಿಗೆ ಮತ್ತು ಚಕ್ರಾಕಾರದ ಮತ್ತೊಂದು ಹಂತವನ್ನು ಹೊಂದಿದೆ. ಪ್ರಾಯಶಃ ಇದು ಜೈನ ಮಾನಸ್ತಂಭದ ತುತ್ತತುದಿಯಾಗಿತ್ತೆಂದು ಇದರ ಮೇಲೆ ಆನೆ ಇದ್ದಿತೆಂದು ತಿಳಿದುಬರುತ್ತದೆ. ಇದು ಅಗ್ರಹಾರ ಬಾಚಳ್ಳಿಯಲ್ಲಿರುವ ಜೈನ ಕಂಬವನ್ನು ನೆನಪಿಗೆ ತರುತ್ತದೆ. ಈ ಕಂಬದ ನಾಲ್ಕೂ ಪಾರ್ಶ್ವಗಳಲ್ಲಿ ಜಿನ ಶಾಸನವನ್ನು ಕೆತ್ತಲಾಗಿದೆ. ಹಾಗಾಗಿ ಇದು ಗರುಡಗಂಭವಾಗಿರುವ ಸಾಧ್ಯತೆಗಳಿಲ್ಲ. ಇದೇನೇ ಇದ್ದರೂ ಜೈನರ ಮಾನಸ್ತಂಭವಾಗಿರಬೇಕು.[129]

5.15. ಯಾಲದಹಳ್ಳಿ

ನಾಗಮಂಗಲ ತಾಲ್ಲೂಕಿನ ನೆಲ್ಲೀಗೆರೆ ಗ್ರಾಮದಿಂದ ನೈರುತ್ಯ ದಿಕ್ಕಿನಲ್ಲಿ ಸುಮಾರು 2 ಕಿ.ಮೀ. ದೂರದಲ್ಲಿ ಚೋಳಸಮುದ್ರವೆಂಬ ಗ್ರಾಮವಿದೆ. ಚೋಳಸಮುದ್ರದ ಹೊರವಲಯದಿಂದ ಉತ್ತರ ದಿಕ್ಕಿನಲ್ಲಿ ಗುಡ್ಡದ ಮೇಲೆ ಬಸದಿಯೊಂದಿದೆ. ಇದನ್ನು ಯಾಲದಹಳ್ಳಿ ಬೇಚಿರಾಕ್ ಗ್ರಾಮವೆಂದು ಕರೆಯುತ್ತಾರೆ. ಇದು ಚೋಳಸಮುದ್ರ ಕಂದಾಯ ಗ್ರಾಮಕ್ಕೆ ಸೇರಿದುದಾಗಿದೆ. ಈ ಬಸದಿಯು ತ್ರಿಕೂಟಾಚಲ ಬಸದಿಯಾಗಿದೆ. ಈ ಬಸದಿಯ ಮುಂದೆ ಶಾಸನದ ಕಲ್ಲು ಕಂಡುಬರುತ್ತದೆ. ಈ ಶಾಸನವನ್ನು ಹೊಯ್ಸಳ ಸಾಮ್ರಾಟ ಒಂದನೇ ನರಸಿಂಹನ ಕಾಲದಲ್ಲಿ ಅಂದರೆ ಕ್ರಿ.ಶ. 1145ರಲ್ಲಿ ಹಾಕಿಸಲಾಗಿದ್ದು ರೈಸ್‌ರವರು ಸಂಪಾದಿಸಿದ ಎಪಿಗ್ರಾಫಿಯ ಕರ್ನಾಟಿಕ ಸಂಪುಟದ ನಾಗಮಂಗಲ ತಾಲ್ಲೂಕಿನ 76ನೇ ಶಾಸನದಲ್ಲಿ ಈ ಶಾಸನದ ವಿವರಗಳನ್ನು ಕಾಣಬಹುದು.[130] ಈ ದೇವಾಲಯದ

ಅಧಿಷ್ಠಾನ, ಗರ್ಭಗೃಹ ಮತ್ತು ಶಾಸನದ ಕಲ್ಲು ಉಳಿದುಬಂದಿದೆ. ಗೋಡೆಗಳಲ್ಲಿ ಅರೆಗಂಬಗಳು, ಕಂಬಗಳು ಅವುಗಳ ಮೇಲೆ ಗಂಟೆಯಾಕಾರದ ಮತ್ತು ವೃತ್ತಾಕಾರದ ದಿಂಬಿನಂತಹ ಬೋದಿಗೆಗಳಿವೆ. ದೇವಾಲಯದ ಎಡ ಮತ್ತು ಬಲ ಪಾರ್ಶ್ವದ ಆಲಯಗಳನ್ನು ಆನಂತರದ ಸ್ವಲ್ಪ ಕಾಲದಲ್ಲಿ ನಿರ್ಮಿಸಿರುವಂತೆ ತಿಳಿದುಬರುತ್ತದೆ. ಈ ದೇವಾಲಯಗಳ ಅಧಿಷ್ಠಾನಗಳು ಮತ್ತು ಬಿತ್ತಿಯಲ್ಲಿ ಕಂಡುಬರುವ ವ್ಯತ್ಯಾಸಗಳ ಆಧಾರದ ಮೇಲೆ ಇದನ್ನು ನಿರ್ಧರಿಸಲಾಗಿದೆ.[131] ಒಟ್ಟಿನಲ್ಲಿ ಈ ದೇವಾಲಯವು ಹೊಯ್ಸಳರ ಕಾಲದ ತ್ರಿಕೂಟಾಚಲ ಬಸದಿಯನ್ನು ಅನುಸರಿಸುತ್ತದೆ. ಆದರೆ ಈ ದೇವಾಲಯದ ಭಾಗಗಳು ಬಿದ್ದುಹೋಗಿವೆ. ಪೂರ್ವದ ಮತ್ತು ಪಶ್ಚಿಮದ ಗರ್ಭಗೃಹಗಳು ಸೋಮಸೂತ್ರಗಳನ್ನು ಹೊಂದಿದ್ದು ಅದು ಸಿಂಹದಾಕೃತಿಯಲ್ಲಿದೆ. ಆದರೆ ಉತ್ತರದ ಗರ್ಭಗುಡಿಗೆ ಸೋಮಸೂತ್ರವಿಲ್ಲ. ದೇವಾಲಯದ ಸಜ್ಜಗಳು ಸರಳವಾಗಿದ್ದು ನೇರವಾಗಿವೆ. ಇವು ಅಷ್ಟೇನೂ ಬಾಗಿದವುಗಳಾಗಿಲ್ಲ. ಇದಲ್ಲದೆ ಎಲ್ಲ ಭಿತ್ತಿಗಳಲ್ಲೂ ಅರೆಗಂಬಗಳು ಮತ್ತು ಕೋಷ್ಠಕಗಳು ಕಂಡುಬರುತ್ತವೆ. ಕೋಷ್ಠಕಗಳ ಮೇಲೆ ಲತಾ ಕುಂಜಗಳಿದ್ದು ಅವು ಕೋಷ್ಠಕಗಳನ್ನು ಬಂಧಿಸಿರುವಂತೆ ಮತ್ತು ಅಲಂಕರಿಸಿರುವಂತೆ ಕಂಡುಬರುತ್ತದೆ.

ಈ ಬಸದಿಯು ಮೂರು ಗರ್ಭಗೃಹಗಳನ್ನು ಹೊಂದಿದ್ದು ಅವುಗಳ ಮುಂದೆ ಅಂತರಾಳವನ್ನು ಮತ್ತು ಮೂರೂ ದೇವಾಲಯಗಳನ್ನು ಸಂಪರ್ಕಿಸುವ ಅಥವಾ ಒಂದುಗೂಡಿಸುವ ನಾಲ್ಕು ಕಂಬಗಳಿಂದ ಆಧಾರವಾದ ನವರಂಗವನ್ನು ಹಾಗೂ ಅದರ ಮುಂದೆ ಒಂದು ಸರಳ ಮುಖಮಂಟಪವನ್ನು ಹೊಂದಿದ್ದಂತೆ ತಿಳಿದುಬರುತ್ತದೆ. ಮೂರೂ ಗರ್ಭಗೃಹಗಳನ್ನೂ ಸಂಪರ್ಕಿಸುವ ಅಂತರಾಳಗಳು ಅತ್ಯಂತ ಸರಳವಾಗಿದ್ದು ಯಾವುದೇ ಅಲಂಕರಣವನ್ನು ಹೊಂದಿರುವುದಿಲ್ಲ. ಮೂರು ಗರ್ಭಗೃಹಗಳನ್ನೂ ಸಂಪರ್ಕಿಸುವ ನವರಂಗದ ಮುಂದೆ ಸಾಮಾನ್ಯವಾದ ಮುಖಮಂಟಪವಿತ್ತೆಂದು ತಿಳಿದುಬರುತ್ತದೆ. ನವರಂಗವು ನಾಲ್ಕು ಕಂಬಗಳಿಂದ ಕೂಡಿದ್ದು ಭುವನೇಶ್ವರಿಯು ಅಧೋಮುಖವಾದ ಪದ್ಮದಾಕಾರದಲ್ಲಿ ಅತ್ಯಂತ ಸುಂದರವಾಗಿ ಕೆತ್ತಲ್ಪಟ್ಟಿದೆ. ಇಲ್ಲಿನ ದೇವಾಲಯದ ಮುಂಭಾಗದ ಕಂಬಗಳನ್ನು, ಮೂರ್ತಿಗಳನ್ನು ಮತ್ತಾವುದೋ ದೇವಾಲಯಕ್ಕೆ ವರ್ಗಾಯಿಸಿರುವಂತೆ ತಿಳಿದುಬರುತ್ತದೆ.[132]

5.16. ಹಟ್ಟಣ

ಮಂಡ್ಯ ಜಿಲ್ಲೆಯ ಜೈನ ಶಾಸನಗಳಲ್ಲಿ ಉಲ್ಲೇಖವಾಗಿರುವ ನೆಲೆಗಳನ್ನು ಕುರಿತು ಅಧ್ಯಯನ ಮಾಡುವಾಗ ಇದೇ ಅಧ್ಯಾಯದ ಆರಂಭಿಕ ಪುಟಗಳಲ್ಲಿ ಈ ನೆಲೆಯ ಕುರಿತು ವಿಸ್ತಾರವಾಗಿ ಚರ್ಚಿಸಿರುವುದರಿಂದ ಪುನರಾವರ್ತಿಯನ್ನು ತಪ್ಪಿಸಲು ಪುನಃ ಈ ಸಂಬಂಧಿತ ವಿವರವನ್ನು ಇಲ್ಲಿ ದಾಖಲಿಸಿಲ್ಲ. ದಯವಿಟ್ಟು ಇದೇ ಅಧ್ಯಾಯದ ಪುಟ 212 ನ್ನು ಗಮನಿಸುವುದು.

ಜಿನಧರ್ಮದ ಹಿನ್ನೆಲೆಯ ಸ್ಥಳನಾಮಗಳು :

ಮಂಡ್ಯ ಜಿಲ್ಲೆ ಶಾಸನಗಳಲ್ಲಿ ಮತ್ತು ಮೌಖಿಕ ದಾಖಲೆಗಳಲ್ಲಿ ಹಲವಾರು ಜೈನ ನೆಲೆಗಳ ಬಗ್ಗೆ ಉಲ್ಲೇಖಗಳು ಕಂಡುಬರುತ್ತವೆ. ಇದನ್ನು ನಾಡಿನ ಹೆಸರಾಂತ ವಿದ್ವಾಂಸರಾದ ಹಂಪ ನಾಗರಾಜಯ್ಯ ಅವರೂ ಕೂಡ ದಾಖಲಿಸಿರುತ್ತಾರೆ. ಮದ್ದೂರು ತಾಲ್ಲೂಕಿನ ಅರುವನ ಹಳ್ಳಿಯನ್ನು ಅವರು ಅರುವ(ಹ)ನ ಹಳ್ಳಿ ಎಂದು ದಾಖಲಿಸುತ್ತಾರೆ. ಈ ಗ್ರಾಮದ ಹೆಸರು ಎಪಿಗ್ರಾಫಿಯ ಕರ್ನಾಟಿಕ ಸಂಪುಟ–7ರಲ್ಲಿ ಮದ್ದೂರು ತಾಲ್ಲೂಕಿನ 92ನೆಯ ಶಾಸನದಲ್ಲಿ ಉಲ್ಲೇಖವಾಗಿದೆ. ಈ ಮದ್ದೂರು ತಾಲ್ಲೂಕಿನ ಅರುವನಹಳ್ಳಿಯಲ್ಲಿ 13 ಶಾಸನಗಳು ದೊರೆತಿದ್ದು ಈ ಊರಿನ ಸರಿಯಾದ ರೂಪವನ್ನು ಅರುಹನಹಳ್ಳಿ ಎಂದು ಗುರುತಿಸಲಾಗಿದೆ. ಅರುಹನಹಳ್ಳಿ ಜನಸಾಮಾನ್ಯರ ಭಾಷೆಯಲ್ಲಿ ಅರುವನಹಳ್ಳಿಯಾಗಿದೆಯೆಂದು ಹೇಳುತ್ತಾರೆ. ಇಲ್ಲಿನ ಶಾಸನವೊಂದರಲ್ಲಿ ವೀತರಾಗ ಎಂದು ಉಲ್ಲೇಖವಾಗಿರುವುದರಿಂದ ಈ ಊರಿನಲ್ಲಿ ಜೈನ ಪರಂಪರೆ ಇದ್ದಿತೆಂದು ದಾಖಲಿಸುತ್ತಾರೆ.[133] ಮುಂದುವರಿದು ನಾಗಮಂಗಲ ತಾಲ್ಲೂಕಿನ ಶಾಸನದಲ್ಲಿಯೂ ಅರುವನಹಳ್ಳಿಯ ಉಲ್ಲೇಖವಿದೆಯೆಂದು ಆ ಅರುವನಹಳ್ಳಿಯಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆಯನ್ನು ಉಲ್ಲೇಖಿಸುವ ಶಾಸನಗಳು ದೊರೆತಿವೆಯೆಂಬುದು ಗಮನಾರ್ಹ. ಅರುವನಹಳ್ಳಿ ಗ್ರಾಮವನ್ನು ಬೆಳಗೊಳದ ಜಿನಧರ್ಮಕ್ಕೆ ಬಿಟ್ಟಿರುವುದರಿಂದ ಇದು ಜೈನಧರ್ಮದ ಪ್ರಭಾವಕ್ಕೆ ಒಳಗಾಗಿತ್ತೆಂದು ದಾಖಲಿಸುತ್ತಾರೆ. ನಾಗಮಂಗಲ ತಾಲ್ಲೂಕಿನಲ್ಲಿಯೇ ಮತ್ತೊಂದು ಗ್ರಾಮದ ಹೆಸರಿನಲ್ಲಿ ಜೈನತೀರ್ಥಂಕರರ ಉಲ್ಲೇಖವಿದ್ದು ಆ ಗ್ರಾಮವನ್ನು ಪಾರ್ಶ್ವನಾಥಪುರ ಅಥವಾ ಪಾರ್ಶ್ವಪುರವೆಂದು ಗುರುತಿಸುತ್ತಾರೆ. ಯಾಲದಹಳ್ಳಿಯ ಹೆಸರೇ ಪಾರ್ಶ್ವನಾಥಪುರ. ಇದು ಸಾಮಾನ್ಯರ ಭಾಷೆಯಲ್ಲಿ ಪಾರ್ಶ್ವಪುರವಾಗಿ ಮಾರ್ಪಟ್ಟಿದೆ. ಪಕ್ಕದ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಶ್ರವಣನಹಳ್ಳೀ ಎಂಬ ಗ್ರಾಮವಿದ್ದು ಈ ಗ್ರಾಮದಲ್ಲಿ ಜೈನಶಾಸನವೊಂದು ಪ್ರಕಟವಾಗಿದೆ. ಅದನ್ನು ಹೊರತುಪಡಿಸಿದರೆ ಮತ್ತ್ಯಾವ ಆಕರಗಳು ಲಭ್ಯವಿಲ್ಲ. ಶ್ರವಣನಹಳ್ಳಿಯಲ್ಲಿ

ವೀರಕೊಂಗಾಳ್ವ ಬಸದಿಯಿದ್ದು ಈ ರಾಜಬಸದಿಯಲ್ಲಿ ಜೈನ ಮುನಿಗಳು, ಶ್ರಮಣರು ವಾಸಿಸುತ್ತಿದ್ದುದರಿಂದ ಈ ಊರಿಗೆ ಶ್ರವಣ ಎಂದು ಹೆಸರಾಯಿತೆಂದು ಎಪಿಗ್ರಾಫಿಯ ಕರ್ನಾಟಿಕ ಸಂಪುಟ ಮಾಲಿಕೆಯ ಆರನೆ ಸಂಪುಟದ ಕೃಷ್ಣರಾಜಪೇಟೆ ತಾಲ್ಲೂಕಿನ ಇಪ್ಪತ್ತನೆಯ ಶಾಸನ ದಾಖಲಿಸುತ್ತದೆ. ಮದ್ದೂರು ತಾಲ್ಲೂಕಿನ ಅರೆತಿಪ್ಪೂರು ಪ್ರಸಿದ್ಧ ಪ್ರಾಚೀನ ಜೈನಕೇಂದ್ರ, ಇದು ಶಾಸನಗಳಲ್ಲಿ ತಿಪ್ಪೂರು ತೀರ್ಥಹಳ್ಳಿ ಎಂದು ಕರೆಯಲಾಗಿದೆ. ಜೈನ ದೇವಾಲಯಗಳ ಸಮುಚ್ಚಯ ಈ ಗ್ರಾಮದಲ್ಲಿದ್ದುದರಿಂದ ಇದನ್ನು ತೀರ್ಥವೆಂದು ಕರೆಯಲಾಗಿದೆ. ಇದೂ ಕೂಡ ಶಾಸನೋಕ್ತ ಉಲ್ಲೇಖವಾಗಿದೆ. (ಎಪಿಗ್ರಾಫಿಯ-7, ಮಳವಳ್ಳಿ 48, 106, 111). ಮಂಡ್ಯ ಜಿಲ್ಲೆಯ ಕಸಬಾ ತಾಲ್ಲೂಕಿನ ಗುತ್ತಲು ಗ್ರಾಮದ ಶಾಸನದಲ್ಲಿ ಎರಡು ಬಾರಿ ಬಸದಿಹಳ್ಳಿಯನ್ನು ಉಲ್ಲೇಖಿಸಲಾಗಿದೆ. ಎಲ್ಲರೂ ತಿಳಿದಿರುವಂತೆ ಬಸದಿಯೆಂದರೆ ಜಿನಾಲಯ, ಆ ಜಿನಾಲಯದಿಂದಾಗಿಯೇ ಆ ಹಳ್ಳಿಗೆ ಬಸದಿಹಳ್ಳಿ ಎಂದು ಹೆಸರು ಬಂದಿದೆ (ಎಪಿಗ್ರಾಫಿಯ ಕರ್ನಾಟಿಕ-7, ಮಂಡ್ಯ 106) ಇಂದು ಸ್ಥಾನಿಕರ ಭಾಷೆಯಲ್ಲಿ ಬಸ್ತಿಹಳ್ಳಿ ಎಂದು ಪರಿವರ್ತಿತವಾಗಿದೆ. ಇದಲ್ಲದೆ ಜಿಲ್ಲೆಯಲ್ಲಿ ಬಸ್ತಿಹೊಸಕೋಟೆ, ಬಸ್ತಿಪುರ, ಬಸ್ತಿತಿಪ್ಪೂರು, ಎ.ಕೆ. ಬಸದಿ, ಕುರುಬರ ಬಸದಿ ಮುಂತಾದ ಗ್ರಾಮಗಳ ಹೆಸರು ಚಾಲ್ತಿಯಲ್ಲಿದೆ.

ಮಂಡ್ಯ ಜಿಲ್ಲೆಯ ಜೈನತೀರ್ಥಗಳು

ತೀರ್ಥ ಶಬ್ದಕ್ಕೆ ವಿಸ್ತಾರವಾದ ವಿವಿಧಾರ್ಥದ ಸಮಾನಾರ್ಥ ಪದಗಳಿವೆ. ಇದು ಸಂಸ್ಕೃತ ಮೂಲದಿಂದ ಉತ್ಪತ್ತಿಯಾದುದು. ಪ್ರಸ್ತುತ ಹಿನ್ನೆಲೆಯಲ್ಲಿ ಇದನ್ನು ತೀರ್ಥಕ್ಷೇತ್ರ ಅಥವಾ ಪುಣ್ಯಕ್ಷೇತ್ರವೆಂದು ಮಾತ್ರ ಭಾವಿಸಿ ಇದನ್ನು ಬಳಸಬಹುದಾಗಿದೆ. ತೀರ್ಥಯಾತ್ರೆ, ತೀರ್ಥದರ್ಶನ, ತೀರ್ಥಕ್ಷೇತ್ರ ಮುಂತಾದ ಅರ್ಥದಲ್ಲಿ ಮಾತ್ರ ಪ್ರಸ್ತುತದಲ್ಲಿ ಬಳಸಬೇಕಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಈ ಮುಂದೆ ಉಲ್ಲೇಖಿಸಲಾಗುವ ತೀರ್ಥಗಳಲ್ಲಿ ಅತಿ ಪ್ರಾಚೀನವಾದುದು ಅರೆತಿಪ್ಪೂರು ತೀರ್ಥ. ಆನಂತರದ್ದು ಬಿಂಡಿಗನವಿಲೆ ತೀರ್ಥ. ಅರೆತಿಪ್ಪೂರು ತೀರ್ಥ ತನ್ನ ಹಿರಿಮೆ ಗರಿಮೆಯುದ್ದಕ್ಕೂ ತನ್ನ ಸ್ಥಾನವನ್ನು ಯಾರಿಗೂ ಬಿಟ್ಟುಕೊಡಲಿಲ್ಲ. ಆದರೆ ಬಿಂಡಿಗನವಿಲೆ ತೀರ್ಥ ಕೆಲದಿನಗಳ ನಂತರ ಪ್ರಾಯಶಃ ವೈಷ್ಣವ ನೆಲೆಯಾಗಿ ಅದು ಪ್ರಸಿದ್ಧಿಗೆ ಬಂದ ನಂತರ ಕಂಬದಹಳ್ಳಿಗೆ ತನ್ನ ಸ್ಥಾನವನ್ನು ಬಿಟ್ಟುಕೊಟ್ಟಿದೆ. ಇದಲ್ಲದೆ ವಸಂತಲಕ್ಷ್ಮಿಯವರು[134] ಉಲ್ಲೇಖಿಸಿರುವ ಕಲ್ಲಂಗೆರೆ ತೀರ್ಥ ಕೂಡ ಜೈನಾಚಾರ್ಯ ಮಾಘನಂದಿಯವರು ಜೀವಿಸಿದ್ದರಿಂದ ಅವರ ಜೀವಿತಾವಧಿಯಲ್ಲಿ ಇಲ್ಲಿ ನಡೆದ ಅಭೂತಪೂರ್ವವಾದ ಘಟನೆಗಳು ಈ ಕ್ಷೇತ್ರವನ್ನು ಅಂದು ತೀರ್ಥವಾಗಿ ಪರಿಭಾವಿಸಿದ್ದರಿಂದ ಅದೂ

ಕೂಡ ತೀರ್ಥವಾಗಿದೆ. ಮಂಡ್ಯ ಜಿಲ್ಲೆಯ ಎಲ್ಲ ತೀರ್ಥಗಳೂ ಇಲ್ಲಿನ ವಾಸ್ತು ಪರಂಪರೆ ಜೈನಾಚಾರ್ಯ ಪರಂಪರೆ, ಜಿನ ಧರ್ಮದ ಪ್ರಾಚೀನತೆ ಮುಂತಾದವುಗಳ ಹಿನ್ನೆಲೆಯಲ್ಲಿ ಉಂಟಾಗಿರುವುದರಿಂದ ಮಂಡ್ಯ ಜಿಲ್ಲೆಯ ಜೈನ ತೀರ್ಥಗಳಿಗೆ ಅಂದು ವಿಶೇಷವಾದ ಸ್ಥಾನವಿದ್ದಿತೆಂಬುದು ಶಾಸನಾಧ್ಯಯನದಿಂದ ಖಚಿತವಾಗುತ್ತದೆ.

ಜಿಲ್ಲೆಯ ಶಾಸನಗಳು ಕಂಬದಹಳ್ಳಿಯನ್ನು ಕಂಬದಹಳ್ಳಿ ಪಕ್ಕದ ಬಿಂಡಿಗನವಿಲೆ, ಕಲ್ಲಂಗೆರೆಯನ್ನು (ಕೋಡಿಹಳ್ಳಿ) ಹಾಗೂ ಮದ್ದೂರು ತಾಲ್ಲೂಕಿನ ಅರೆತಿಪ್ಪೂರನ್ನು ತೀರ್ಥವೆಂದು ಈವರೆಗೆ ಪ್ರಕಟವಾಗಿರುವ ಶಾಸನಗಳಲ್ಲಿ ಗುರುತಿಸಬಹುದು. ಕಂಬದಹಳ್ಳಿ, ಬಿಂಡಿಗನವಿಲೆ, ಅರೆತಿಪ್ಪೂರನ್ನು ಶಾಸನಗಳು ಖಚಿತವಾಗಿ ಗುರುತಿಸುತ್ತವೆ. ಆದರೆ ಕಲ್ಲಂಗೆರೆಯನ್ನು ಯಾವ ಶಾಸನಗಳು ಗುರುತಿಸದಿದ್ದರೂ ಕೆ. ವಸಂತಲಕ್ಷ್ಮಿಯವರು[135] ಮಾಘನಂದಿ ಭಟ್ಟಾರಕನು ವಾಸವಾಗಿದ್ದ ಮಂಡ್ಯ ಜಿಲ್ಲೆಯ ಕಲ್ಲಂಗೆರೆ ಅಥವಾ ಕೋಡಿಹಳ್ಳಿಯನ್ನೇ ತೀರ್ಥವೆಂದು ಖಚಿತಪಡಿಸಿದ್ದಾರೆ.

'ಕಲ್ಲಂಗೆರೆ' ಸ್ಥಳನಾಮದ ಬಗ್ಗೆ ಹಂಪನಾರವರು ಹಳೇಬೀಡಿನ ಪರಿಸರದಲ್ಲಿ 'ಕೆಲ್ಲ' ಎಂಬ ಜೈನಮನೆತನ ನೆಲೆಸಿದ್ದರು. ಈ 'ಕೆಲ್ಲ' ವಂಶದವರು ಕಟ್ಟಿಸಿದ ಕೆರೆಯೂ ಇಲ್ಲಿತ್ತು. ಜೈನ ಮನೆತನವಾದ ಕೆಲ್ಲಕುಲದವರು ಕಟ್ಟಿಸಿದ ಕೆರೆಯಿಂದಾಗಿ 'ಕೆಲ್ಲಂಗೆರೆ' ಎಂದು ಹೆಸರಾಯಿತು ಎಂದು ಒಂದೆಡೆ ಅಭಿಪ್ರಾಯ ಪಟ್ಟಿದ್ದಾರೆ.[136] ಆದರೆ ಡಾ. ಕೆ. ವಸಂತಲಕ್ಷ್ಮಿರವರು ಈ ವಾದವನ್ನು ಅಲ್ಲಗಳೆಯುತ್ತಾ, ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಕಳಗೆರೆಯೇ ಕಲ್ಲಂಗೆರೆ ತೀರ್ಥ ಎಂದು ಸಮರ್ಥಿಸಿದ್ದಾರೆ. ಡಾ. ಕೆ. ವಸಂತಲಕ್ಷ್ಮಿರವರು ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕೆಳಗೆರೆ ಶಾಸನವು (ಎಕ7; ನಾಗಮಂ.6 0) ಹೊಯ್ಸಳ ದೊರೆ 3ನೇ ನಾರಸಿಂಹ ದೇವನ ಕಾಲದ್ದಾಗಿದ್ದು, ಶಾಸನವು ಹೊಯ್ಸಳರ 'ವೀರನಾರಸಿಂಹ ದೇವರಸರು ದೋರಸಮುದ್ರದ ತ್ರಿಕೂಟ ರತ್ನಾತ್ರಯದ ಶ್ರೀ ಶಾಂತಿನಾಥ ದೇವರ ಅಂಗಭೋಗ ರಂಗಭೋಗ, ಆಹಾರದಾನ ಮುಂತಾದ ಸಮಸ್ತ ಧರ್ಮಕಾರ್ಯಕ್ಕೆ ಚಿಕ್ಕಕಂನೆಯನ ಹಳ್ಳಿ...... ಬಯೇನುಳ್ಳಂಥಾ ಅಷ್ಟಭೋಗ ತೇಜಸ್ವಾಮ್ಯ ಸಹಿತವಾಗಿ ಮಾಘಣಂದಿ ಸಿದ್ಧಾಂತಿ ಚಕ್ರವರ್ತಿಗಳ ಶ್ರೀಪಾದಪದ್ಮಗಳಿಗೆ ಧಾರಪೂರ್ವಕವಾಗಿ ಬಿಟ್ಟ ದಾನವನ್ನು ದಾಖಲಿಸಿದೆ ಎಂದು ತಿಳಿಸುತ್ತಾ ಬಸ್ತಿಹಳ್ಳಿಯ ಶಾಸನೋಕ್ತ ವಿವರಗಳನ್ನು ಈ ಶಾಸನದೊಂದಿಗೆ ಹೋಲಿಸಿ, ನೋಡಿದರೆ, ಕಲ್ಲಂಗೆರೆಯು ನಾಗಮಂಗಲ ತಾಲ್ಲೂಕಿನಲ್ಲಿದೆ ಎನ್ನಿಸುತ್ತದೆ. ಇದಕ್ಕಾಗಿ ನಾಗಮಂಗಲ ತಾಲ್ಲೂಕಿನ ಕಂದಾಯದ ಸರ್ವೆ ನಕ್ಷೆಯನ್ನು ಪರಿಶೀಲಿಸಿದಾಗ ನಕ್ಷೆಯಲ್ಲಿ ಶಾಸನೋಕ್ತನಾದ ಕರಡಿಹಳ್ಳಿ, ಅರೆಹಳ್ಳಿ,

ಹೂಲಿಕೆರೆ, ಚಟ್ಟನಹಳ್ಳಿ, ಚೋಳನಹಳ್ಳಿ, ಕುಂಚೇನಹಳ್ಳಿ, ಕೆಲ್ಲಂಗೆರೆ (ಕೆಳಗೆರೆ) ಗಳನ್ನು ಗುರುತಿಸಬಹುದಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[137]

ಈ ಎಲ್ಲಾ ವಿವರಗಳನ್ನು ಸಮೀಕ್ಷಿಸಿದರೆ, ಸಮುದಾಯದ ಮಾಘಣಂದಿ ವ್ರತಿಗಳು ನೆಲೆಸಿದ ಕೆಲ್ಲಂಗೆರೆ ತೀರ್ಥವು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕಳಗೆರೆಯೆ ಎಂದು ಖಚಿತವಾಗಿ ತಿಳಿಯುತ್ತದೆ. ಮಂಡ್ಯ ಜಿಲ್ಲೆಯಲ್ಲಿಯೇ ನಾಲ್ಕು ಪ್ರಾಚೀನ ಜೈನ ತೀರ್ಥಗಳು ಕಂಡುಬಂದಿದ್ದು, ಜೈನಧರ್ಮದ ಪ್ರಭಾವ ಅಗಾಧವಾಗಿತ್ತೆಂದು ಅರಿವಾಗುತ್ತದೆ.

ಕೊನೆ ಟಿಪ್ಪಣಿಗಳು

1. ಅಪ್ಪಣ್ಣ ಹಂಜೆ ಎನ್. 2006, ಜೈನಶಿಲ್ಪಕಲೆ ಪರಿಕಲ್ಪನೆಗಳು ಪ್ರಾಚ್ಯ ಮೌಲ್ಯ, ಶ್ರೀ ಜಿ.ಎಂ. ಮುಲ್ಲಾವರ ಅಭಿನಂದನಾ ಗ್ರಂಥ ಪುಟ 26, 45
2. ಅಪ್ಪಣ್ಣ ಹಂಜೆ ಎನ್., 2007, ಶಿಗ್ಗಾಂ ಪ್ರದೇಶದ ಪುರಾತತ್ವ ಪುಟ 125, 286–290,
3. ದೇಸಾಯಿ ಪಿ.ಬಿ., 1957, ಜೈನಿಜಂ ಇನ್ ಸೌತ್ ಇಂಡಿಯಾ, ಪುಟ 1–3.
4. ಕೃಷ್ಣಮೂರ್ತಿ ಎಂ.ಎಸ್., 2012, ಕರ್ನಾಟಕದಲ್ಲಿ ಪುರಾತತ್ವ ಉತ್ಖನನಗಳು, ಇತಿಹಾಸ ದರ್ಪಣ, ಸಂಪುಟ–12, ಪುಟ 19–48.
5. ಅದೇ, ಪುಟ 19–48
6. ದೇವರಾಜು ಡಿ. ವಿ. ಮತ್ತು ನರಸಿಂಹಮೂರ್ತಿ ಎ.ವಿ., 1996, ಎಕ್ಸ್‌ಕವೇಶನ್ಸ್ ಅಟ್ ತಲಕಾಡು, ಮೈಸೂರು, ಪುಟ 1–27; ಎಂ.ಎಸ್. ಕೃಷ್ಣಮೂರ್ತಿ ಮತ್ತು ಇತರರು, ತಲಕಾಡಿನಲ್ಲಿ ಕೈಗೊಂಡ ಉತ್ಖನನದ ಸಂಕ್ಷಿಪ್ತ ವರದಿ, 2010, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಆರ್. ಗೋಪಾಲ್ (ಸಂ), ಮೈಸೂರು, ಪುಟ 567–607 ಮತ್ತು ಎಂ.ಎಸ್. ಕೃಷ್ಣಮೂರ್ತಿ ಮತ್ತು ಇತರರು, 2011, ಪಾರ್ಶ್ವನಾಥ ಬಸದಿ ಅಟ್ ತಲಕಾಡ್ ರವೀಲ್ಡ್ ಥ್ರೂ ಎಕ್ಸ್‌ಕವೇಶನ್ಸ್ ಇನ್ ಜೈನಿಸಂ ಥ್ರೂ ದಿ ಏಜಸ್, ಪುಟ 461–481.
7. ಎಂ ಎ ಅರ್ 1915, ಪುಟ– 27, 1929 ಪುಟ 30,
8. ಎಂ ಎ ಅರ್ 1915, ಪುಟ– 20, 1940 ಪುಟ 50,
9. ಎಂ ಎ ಅರ್ 1940, ಪುಟ 56,
10. ಎಂ ಎ ಅರ್ 1915, ಪುಟ 20; 1939 ಪುಟ 44 ಮತ್ತು 1940 ಪುಟ 56;
11. ಎಂ ಎ ಅರ್ 1940, ಪುಟ 50,
12. ಎಂ ಎ ಅರ್ 1912, ಪುಟ 3,
13. ಹಯಾವದನರಾವ್ ಸಿ., 1930, **ಮೈಸೂರು ಗೆಜೆಟಿಯರ್**, ಸಂ–5, ಪು, 806–828,
14. ಪಾರ್ಥಸಾರಥಿ ಟಿ.ಎ., (ಸಂ.) 2003, *ಮಂಡ್ಯ ಜಿಲ್ಲಾ ಗೆಜೆಟಿಯರ್*, ಪರಿಷ್ಕೃತ ಆವೃತಿ, ಪುಟ–893, 922,
15. ಎ.ಕ. 7, ನಾ.ಮಂ. 149 ಕ್ರಿ.ಶ. 770
16. ಎ.ಕ. 7, ನಾ.ಮಂ. 32 ಕ್ರಿ.ಶ. 10–11ನೆಯ ಶತಮಾನ

17. ಎ.ಕ. 7, ನಾ.ಮಂ. 30 ಕ್ರಿ. ಶ. 1145 ಮತ್ತು ಸರಸ್ವತಿ ಎನ್ ಮತ್ತು ಕೆಂಪರಾಜ ಎಸ್.ಎಲ್., 2011, ಹೊಯ್ಸಳರ ಕಾಲದ ದಂಡನಾಯಕರುಗಳು ಮತ್ತು ಅವರ ಕೊಡುಗೆಗಳು, ಪುಟ 88–138
18. ಎ.ಕ. 7, ನಾ.ಮಂ. 26 ಕ್ರಿ. ಶ. 1168
19. ಎ.ಕ. 7, ನಾ.ಮಂ. 31 ಕ್ರಿ. ಶ.
20. ಎ.ಕ. 7, ನಾ.ಮಂ. 107 ಕ್ರಿ. ಶ. 10ನೇ ಶತಮಾನ
21. ಎ.ಕ. 7, ನಾ.ಮಂ. 121 ಕ್ರಿ. ಶ. 10ನೇ ಶತಮಾನ
22. ಎ.ಕ. 7, ನಾ.ಮಂ. 14 ಕ್ರಿ. ಶ. 1120
23. ಎ.ಕ. 7, ನಾ.ಮಂ. 68 ಕ್ರಿ. ಶ. 12ನೆಯ ಶತಮಾನ
24. ಎ.ಕ. 7, ನಾ.ಮಂ. 169 ಕ್ರಿ. ಶ. 1142
25. ಎ.ಕ. 7, ನಾ.ಮಂ. 170 ಕ್ರಿ. ಶ. 12ನೆಯ ಶತಮಾನ
26. ಎ.ಕ. 7, ನಾ.ಮಂ. 183 ಕ್ರಿ. ಶ.
27. ಎ.ಕ. 7, ನಾ.ಮಂ. 64 ಕ್ರಿ. ಶ. 1145
28. ಎ.ಕ. 7, ನಾ.ಮಂ. 184 ಕ್ರಿ. ಶ. 1173
29. ಎ.ಕ. 7, ನಾ.ಮಂ. 118 ಕ್ರಿ. ಶ. 1178
30. ಎ.ಕ. 7, ನಾ.ಮಂ. 72 ಕ್ರಿ. ಶ. 1142
31. ಎ.ಕ. 7, ನಾ.ಮಂ. 94 ಕ್ರಿ. ಶ. 17ನೆಯ ಶತಮಾನ
32. ಎ.ಕ. 6, ಪಾಂ.ಪು. 16 ಕ್ರಿ. ಶ. 9–10ನೆಯ ಶತಮಾನ
33. ಎ.ಕ. 6, ಪಾಂ.ಪು. 15 ಕ್ರಿ. ಶ. 1175
34. ಎ.ಕ. 6, ಕೃ.ಪೇ. 107 ಕ್ರಿ. ಶ. 1147
35. ಎ.ಕ. 6, ಕೃ.ಪೇ. 106 ಕ್ರಿ. ಶ. 1165
36. ಎ.ಕ. 6, ಕೃ.ಪೇ. 5 ಕ್ರಿ. ಶ. 12ನೇ ಶತಮಾನ
37. ಎ.ಕ. 6, ಕೃ.ಪೇ. 3 ಕ್ರಿ. ಶ. 1118
38. ಎ.ಕ. 7, ಮದ್ದೂರು 29, ಕ್ರಿ. ಶ. 1131
39. ಎ.ಕ. 7, ಮದ್ದೂರು 54, ಕ್ರಿ. ಶ. 1117
40. ಎ.ಕ. 6, ಶ್ರೀ.ಪ. 74, ಕ್ರಿ. ಶ. 1422
41. ಎ.ಕ. 7, ಮಳವಳ್ಳಿ, 30, ಕ್ರಿ. ಶ. 1265, 31, ಕ್ರಿ. ಶ. 1313
42. ಎ.ಕ. 7, ಮಳವಳ್ಳಿ, 31, ಕ್ರಿ. ಶ. 1313
43. ಪಾರ್ಥಸಾರಥಿ ಟಿ.ಎ., 2003, ಪೂರ್ವೋಕ್ತ, ಪುಟ 968–976.
44. ಸ್ವಾಮಿ ಲ. ನ. 1996, ಹಿಸ್ಟರಿ ಆಫ್ ಶ್ರೀರಂಗಪಟ್ಟಣ, ಪುಟ 56,
45. ಹಯವದನ ರಾವ್ ಸಿ., 1930, ಪೂರ್ವೋಕ್ತ, ಸಂ. 5 ಪುಟ 712–717,
46. ತಿಮ್ಮಕವಿ, 1980, ಪಶ್ಚಿಮರಂಗಮಹಾತ್ಮೆ ಮತ್ತು ಚಿಕ್ಕದೇವರಾಜ ವಂಶಾವಳಿ, ಎಂ.ಪಿ. ಮಂಜಪ್ಪಶೆಟ್ಟಿ., (ಸಂ) ಪ್ರಸ್ತಾವನೆ–ಪುಟ xxxviii
47. ಹಯವದನ ರಾವ್ ಸಿ., 1930, ಪೂರ್ವೋಕ್ತ, ಸಂ. 5 ಪುಟ 712–717,
48. ತಿಮ್ಮಕವಿ., 1980, ಪೂರ್ವೋಕ್ತ, ಪ್ರಸ್ತಾವನೆ–ಪುಟ xxxviii

49. ಸ್ವಾಮಿ ಲ. ನ. 2010, ಶ್ರೀರಂಗಪಟ್ಟಣ ಪೋರ್ಟ್ ಥ್ರೂ ದಿ ಏಜಸ್, ಆರಿಜನ್ ಡೆವಲಪ್‌ಮೆಂಟ್ ಆಪ್ ದಿ ಫೋರ್ಟ್ ಇನ್ ಟಿಪ್ಪುಸುಲ್ತಾನ್, ದಿ ಟೈಗರ್ ಆಫ್ ಮೈಸೂರು, ಡಾ. ಆರ್ ಗೋಪಾಲ್ (ಸಂ) ಮೈಸೂರು, ಪುಟ, 318–352,

50. ಸ್ವಾಮಿ ಲ. ನ. 2007, – ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಕಂಡಂತೆ ಪ್ರಾಚೀನ ಶಿಕ್ಷಣ, ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ. ಆರ್. ಗೋಪಾಲ್ (ಸಂ) ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪುಟ 54–64,

51. ತಿಮ್ಮಕವಿ., 1980, ಪೂರ್ವೋಕ್ತ, ಪ್ರಸ್ತಾವನೆ–ಪುಟ xxxviii

52. ರೈಸ್ ಬಿ. ಎಲ್., 1897, ಮೈಸೂರು ಗೆಜೆಟಿಯರ್, ಸಂ–2, ಪು 250–259

53. ಹಯಾವದನರಾವ್ ಸಿ., 1930, ಮೈಸೂರು ಗೆಜೆಟಿಯರ್, ಸಂ–5, ಪು 806–828,

54. CONSTANCE E, PARSONS 1931 – SERINGAPATAM, LONDON, 1931.

55. ಎಂ ಎ ಅರ್ 1935, ಮತ್ತು ಕೃಷ್ಣ ಎಂ ಹೆಚ್, 1935, ಏ ಗೈಡ್ ಟು ಶ್ರೀರಂಗಪಟ್ಟಣ, ಪುಟ– 53–65,

56. ಸ್ವಾಮಿ ಲ. ನ. 1996, ಹಿಸ್ಟರಿ ಆಫ್ ಶ್ರೀರಂಗಪಟ್ಟಣ, ಪುಟ 56,

57. ಗೋಪಾಲ್ ಆರ್. ಮತ್ತು ಡಾ. ಸ್ವಾಮಿ ಲ. ನ. 2010, ನಾಡ ಹಬ್ಬ ಮೈಸೂರು ದಸರಾ, ಪುಟ 60–69

58. ಹಯಾವದನರಾವ್ ಸಿ., 1930, ಪೂರ್ವೋಕ್ತ, ಸಂ–5, ಪು, 806–828,

59. ಸ್ವಾಮಿ ಲ. ನ. 1996, ಪೂರ್ವೋಕ್ತ, ಪುಟ 56,

60. ಎಂ ಎ ಅರ್ 1912, ಪುಟ 37,

61. ಸ್ವಾಮಿ ಲ. ನ. 1996, ಪೂರ್ವೋಕ್ತ, ಪುಟ 56,

62. ಪಾರ್ಥಸಾರಥಿ ಟಿ. ಎ., 2003, ಪೂರ್ವೋಕ್ತ, ಪುಟ 990–991,

63. ರಂಗಸ್ವಾಮಿ, ಆರ್., 2011, ಕೃಷ್ಣರಾಜಪೇಟೆ ತಾಲ್ಲೂಕಿನ ದೇವಾಲಯಗಳು– ಒಂದು ಸಾಂಸ್ಕೃತಿಕ ಅಧ್ಯಯನ, ಪುಟ 172–176

64. ಎಂ ಎ ಆರ್, 1915, ಪುಟ 18; 1923, ಪುಟ 4 ಮತ್ತು 1933, ಪುಟ 3.

65. ಎ.ಕ. 6, ಕೃ.ಪೆ. 03, ಕ್ರಿ.ಶ. 1118

66. ಎ.ಕ. 6 ಕೃ.ಪೆ. 4, ಕ್ರಿ.ಶ. 13ನೆಯ ಶತಮಾನ

67. ಎ.ಕ. 6, ಕೃ.ಪೆ. 5, 15–16ನೆಯ ಶತಮಾನ

68. ರಂಗಸ್ವಾಮಿ ಆರ್., 2011, ಪೂರ್ವೋಕ್ತ, ಪುಟ 172–176.

69. ಅದೇ, ಪುಟ 172–176.

70. ಅದೇ. ಪುಟ 172–176.

71. ಸೀತಾರಾಮ ಜಾಗೀರ್‌ದಾರ್., 1999, ಕಂಬದಹಳ್ಳಿ ಒಂದು ಜೈನಕೇಂದ್ರ, ಪುಟ 23–46

72. ದೊರೆಸ್ವಾಮಿ ಮ. ಕೆ., 2000, ಶ್ರೀ ಕಂಬದಹಳ್ಳಿ ಕ್ಷೇತ್ರ ದರ್ಶನ, ಪುಟ 5–10

73. ಎ.ಕ. 7, ನಾ.ಮಂ. 33, ಕ್ರಿ.ಶ. 1118

74. ಅದೇ

75. ಅದೇ

76. ಎ.ಕ. 7, ನಾ.ಮಂ. 30, ಕ್ರಿ.ಶ. 1145

77. ಕನ್ನಡ ನಿಘಂಟು, 1993, ಸಂಪುಟ–7, ಪುಟ 7070

78. ಸೀತಾರಾಮ ಜಾಗೀರ್‌ದಾರ್., 1999, ಪೂರ್ವೋಕ್ತ, ಪುಟ 5 ರಿಂದ 11

79. ಅದೇ, ಪುಟ 5 ರಿಂದ 11
80. ಅದೇ, ಪುಟ 5 ರಿಂದ 11
81. ಅದೇ, ಪುಟ 5 ರಿಂದ 11
82. ಪಾರ್ಥಸಾರಥಿ ಟಿ. ಎ., 2003, ಪೂರ್ವೋಕ್ತ, ಪುಟ, 992
83. ಸೀತಾರಾಮ ಜಾಗೀರ್‌ದಾರ್., 1999, ಪೂರ್ವೋಕ್ತ, ಪುಟ-5 ರಿಂದ 11
84. ಎಂ ಎ ಆರ್, 1939, ಪುಟ, 44-49
85. ಅದೇ, ಪುಟ 44-49
86. ಅದೇ, ಪುಟ 44-49
87. ಅದೇ, ಪುಟ 44-49
88. ಅದೇ, ಪುಟ 44-49
89. ಎ.ಕ. 7, ನಾ.ಮಂ. 32 ಕ್ರಿ.ಶ. 10-11ನೆಯ ಶತಮಾನ
90. ಸೀತಾರಾಮ ಜಾಗೀರ್‌ದಾರ್., 1999, ಪೂರ್ವೋಕ್ತ, ಪುಟ 12 ರಿಂದ 22
91. ಎಂ ಎ ಆರ್, 1939, ಪುಟ 44-49
92. ಎ.ಕ. 7, ನಾ.ಮಂ. 33 ಮತ್ತು ಎ.ಕ. 7, ನಾ.ಮಂ. 26
93. ಎ.ಕ. 7, ನಾ.ಮಂ. 32 ಕ್ರಿ.ಶ. 10-11ನೆಯ ಶತಮಾನ
94. ಎ.ಕ. 7, ನಾ.ಮಂ. 33
95. ಎ.ಕ. 7, ನಾ.ಮಂ. 30 ಕ್ರಿ.ಶ. 1145
96. ಗಣಪತಿರಾವ್ ಐಗಳ್., 1928, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಮಂಗಳೂರು,
97. ಸೀತಾರಾಮ ಜಾಗೀರ್‌ದಾರ್ 1999, ಪೂರ್ವೋಕ್ತ, ಪುಟ 12 – 22
98. ಎ.ಕ. 7, ನಾ.ಮಂ. 65-70 ಪುಟ 49-53
99. ಎಂ.ಎ.ಆರ್. 1940, ಪುಟ 56
100. ಪಾರ್ಥಸಾರಥಿ ಟಿ.ಎ., 2003, ಪೂರ್ವೋಕ್ತ, ಪುಟ 924
101. ಅದೇ
102. ಸರಸ್ವತಿ ಎನ್. ಮತ್ತು ಶಿಲ್ಪಶ್ರೀ ಎಸ್, 2011, ಹೊಯ್ಸಳರ ಕಾಲದಲ್ಲಿ ದಾನಿಗಳ ಪಾತ್ರ ಪುಟ 94-113
103. ಪಾರ್ಥಸಾರಥಿ ಟಿ. ಎ., 2003, ಪೂರ್ವೋಕ್ತ, ಪುಟ 940
104. ಎಂ.ಎ.ಆರ್. 1940, ಪುಟ 56
105. ಪಾರ್ಥಸಾರಥಿ ಟಿ, ಎ., 2003, ಪೂರ್ವೋಕ್ತ, ಪುಟ, 922 ಮತ್ತು ಪುಟ್ಟಸ್ವಾಮಿ, ಬಿ. ಎಸ್, 2011. ಅರೆತಿಪ್ಪೂರು, ಏ ಜೈನಾ ಸೆಂಟರ್, ಇನ್ ಜೈನಿಜಂ ಥ್ರೂ ದಿ ಏಜಸ್, ಡಾ, ಗೋಪಾಲ್, ಆರ್, (ಸಂ) ಪುಟ 922.
106. ಎ.ಕ. 7, ಮದ್ದೂರು-100, ಕ್ರಿ.ಶ. 909-10
107. ಪಾರ್ಥಸಾರಥಿ ಟಿ. ಎ., 2003, ಪೂರ್ವೋಕ್ತ, ಪುಟ 922
108. ಅದೇ, ಪುಟ 922
109. ಎ.ಕ. 7, ಮದ್ದೂರು-100, ಕ್ರಿ. ಶ. 917
110. ಎ.ಕ. 7, ಮದ್ದೂರು-54, ಕ್ರಿ. ಶ. 1117

111. ಎ.ಕ. 7, ಮದ್ದೂರು, 53, ಕ್ರಿ.ಶ. 13ನೇ ಶತಮಾನ, ತಮಿಳುಸೆಲ್ವಿ, 2011, ಕವಿ ಕಂದರ್ಪ ಮತ್ತು ಬಾಳಚಂದ್ರಮುನಿ– ಒಂದು ವಿವೇಚನೆ, ಮುಕ್ಕೋಡೆ, ಡಾ. ಸಿ.ಎಸ್. ವಾಸುದೇವನ್ (ಸಂ), ಪುಟ 325–330

112. ಎ.ಕ. 7, ಮದ್ದೂರು–100, ಕ್ರಿ. ಶ. 917

113. ಪಾರ್ಥಸಾರಥಿ ಟಿ. ಎ., 2003, ಪೂರ್ವೋಕ್ತ, ಪುಟ, 922 ಮತ್ತು ಪುಟ್ಟಸ್ವಾಮಿ ಬಿ.ಎಸ್, 2011. ಅರೆತಿಪ್ಪೂರು, ಎ ಜೈನಾ ಸೆಂಟರ್, ಇನ್ ಜೈನಿಜಂ ಥ್ರೂ ದಿ ಏಜಸ್, ಡಾ. ಗೋಪಾಲ್ ಆರ್. (ಸಂ) ಪುಟ 922

114. ಪಾರ್ಥಸಾರಥಿ ಟಿ. ಎ., 2003, ಪೂರ್ವೋಕ್ತ, ಪುಟ 938

115. ಅದೇ, ಪುಟ 938

116. ಎ.ಕ. 6 ಕೃ.ಪೆ. 106, ಕ್ರಿ.ಶ. 1163

117. ಎ.ಕ. 6 ಕೃ.ಪೆ. 107, ಕ್ರಿ.ಶ. 12ನೆಯ ಶತಮಾನ

118. ಎ.ಕ. 7, ನಾ.ಮಂ. 168–72 ಪುಟ 165–171

119. ಎ.ಕ. 7, ನಾ.ಮಂ. 168– ಕ್ರಿ.ಶ. 1190

120. ಎ.ಕ. 7, ನಾ.ಮಂ. 170– ಕ್ರಿ.ಶ. 12ನೆಯ ಶತಮಾನ

121. ಎ.ಕ. 7, ನಾ.ಮಂ. 169– ಕ್ರಿ.ಶ. 1142

122. ಪಾರ್ಥಸಾರಥಿ ಟಿ. ಎ., 2003, ಪೂರ್ವೋಕ್ತ, ಪುಟ 927

123. ಎ.ಕ. 7, ನಾ.ಮಂ. 183– ಕ್ರಿ.ಶ. 1144

124. ಎಂ.ಎ.ಆರ್. 1940, ಪುಟ 50

125. ಎ.ಕ. 7, ನಾ.ಮಂ. 183– ಕ್ರಿ.ಶ. 1144

126. ಎ.ಕ. 7, ನಾ.ಮಂ. 184– ಕ್ರಿ.ಶ. 1173

127. ಎಂ.ಎ.ಆರ್. 1940, ಪುಟ 50

128. ಎ.ಕ. 7, ನಾ.ಮಂ. 60– ಕ್ರಿ.ಶ. 12–13ನೆಯ ಶತಮಾನ

129. ಎಂ.ಎ.ಆರ್. 1940 ಪುಟ 57

130. ಎ.ಕ. 4, ನಾ.ಮಂ. 76 – ಕ್ರಿ.ಶ. 1145 ಮತ್ತು ಎ.ಕ. 7, ನಾ.ಮಂ. 164– ಕ್ರಿ.ಶ. 1145

131. ಎಂ.ಎ.ಆರ್. 1940, ಪುಟ 50

132. ಅದೇ, ಪುಟ 50

133. ಹಂ.ಪ. ನಾಗರಾಜಯ್ಯ, 1997, ಶಾಸನಗಳಲ್ಲಿ ಊರ ಹೆಸರುಗಳು– ಜೈನ ಪಳಯುಳಿಕೆ, ಚಂದ್ರಕೊಡೆ, ಪುಟ 3–10

134. ವಸಂತಲಕ್ಷ್ಮಿ ಕೆ., 2005, ಮಾಘನಂದಿ ಭಟ್ಟಾರಕರ ನೆಲೆ, ಕಲ್ಲಂಗೆರೆ, ಇತಿಹಾಸ ದರ್ಶನ, ಸಂಪುಟ 20, ಪುಟ 415–418

135. ಅದೇ, ಪುಟ 415–418

136. ಹಂ.ಪ. ನಾಗರಾಯ್ಯ, 1997, ಪೂರ್ವೋಕ್ತ, ಪುಟ 106

137. ವಸಂತಲಕ್ಷ್ಮಿ ಕೆ., 2005, ಪೂರ್ವೋಕ್ತ, ಪುಟ 415–418

ಅಧ್ಯಾಯ – ಆರು

ಮಂಡ್ಯ ಜಿಲ್ಲೆಯ ಜೈನ ವಾಸ್ತು ಮತ್ತು ಶಿಲ್ಪ

ಮಂಡ್ಯ ಜಿಲ್ಲೆಯ ಜೈನ ವಾಸ್ತುಶಿಲ್ಪದ ಅಧ್ಯಯನ ಒಂದು ಹಂತದಲ್ಲಿ ನಮ್ಮನ್ನು ಹಲವು ನಿರ್ಬಂಧಗಳಿಂದ ಕಟ್ಟಿಹಾಕುತ್ತದೆ ಎಂದರೆ ತಪ್ಪಾಗಲಾರದು. ಕಾರಣ ಮಂಡ್ಯ ಜಿಲ್ಲೆಯಲ್ಲಿ ಕಂಡುಬರುವ ಬಹುತೇಕ ಜೈನ ಸ್ಮಾರಕಗಳು ಇಂದು ಸಂಪೂರ್ಣವಾಗಿ ತಮ್ಮ ಪುರಾತನ ಮಾದರಿಯಲ್ಲಿ ಉಳಿದು ಬರದೆ ಇರುವುದು ಒಂದು ಕಾರಣವಾದರೆ ಬಹುತೇಕ ದೇವಾಲಯಗಳು ತಮ್ಮ ಅಸ್ತಿತ್ವವನ್ನು ಮತ್ತು ಅವುಗಳಲ್ಲಿ ಕಂಡುಬರುವ ವಾಸ್ತುವಿನ ಅಂಶಗಳನ್ನೂ ಕಳೆದುಕೊಂಡಿವೆಯೆಂದರೆ ತಪ್ಪಾಗಲಾರದು. ಹೀಗಾಗಿ ಮಂಡ್ಯ ಜಿಲ್ಲೆಯಲ್ಲಿ ನಿರ್ಮಿತವಾಗಿರುವ ಜೈನ ಬಸದಿಗಳು ಅನೇಕ ಅರಸರ ಕಾಲಘಟ್ಟದಲ್ಲಿ ನಿರ್ಮಾಣಗೊಂಡಿವೆ.

ಕ್ಯಾತನಹಳ್ಳಿಯ ಜಿನಾಲಯ, ಅರೆತಿಪ್ಪೂರಿನ ಜಿನಾಲಯಗಳು ಕಂಬದಹಳ್ಳಿಯ ಜಿನಾಲಯ ಇತ್ಯಾದಿ ಜಿನಾಲಯಗಳು ನಮಗೆ ಗಂಗರ ಕಾಲದಲ್ಲಿ ನಿರ್ಮಾಣವಾದವೆಂದು ತಿಳಿದುಬಂದರೂ ಅವು ಮುಂದಿನ ದಿನಮಾನಗಳಲ್ಲಿ ಅದೇ ಪುರೋಭಿವೃದ್ಧಿಯನ್ನು ಉಳಿಸಿಕೊಳ್ಳದೆ ಮುಂದುವರಿದಿವೆ.[1] ಕ್ಯಾತನಹಳ್ಳಿಯಲ್ಲಿ ಕೆಲ್ಲಬಸದಿ,[2] ಕಂಬದಹಳ್ಳಿಯ ಕನ್ನೆವಸದಿ,[3] ಶಾಂತಿನಾಥ ಬಸದಿ,[4] ಪಾರ್ಶ್ವನಾಥ ಬಸದಿ,[5] ಎಕ್ಕೋಟಿ ಜಿನಾಲಯ,[6] ಕಾಲುಕೆರೆಯ ಚೊಕ್ಕ ಜಿನಾಲಯ, ಮಣಿಯರಸನ ಕೆರೆಯ ಬಸದಿ, ದಡಿಗದ ಪಂಚಬಸದಿ,[7] ಬೋಗವತಿಯ ಪಾರ್ಶ್ವದೇವರ ಶ್ರೀಕರಣ ಜಿನಾಲಯ,[8] ಸೂರನಹಳ್ಳಿಯ ಪಾರ್ಶ್ವಜಿನನಿಗೆ ನಿರ್ಮಿಸಿದ ಜಿನಬಸದಿ,[9] ಹಟ್ಟಣದ ಪಾರ್ಶ್ವ ಜಿನಾಲಯ ಅಥವಾ ಇಂದಿನ ವೀರಭದ್ರ ದೇವಾಲಯ,[10] ಅಳಿಸಂದ್ರದ ಅಥವಾ ಅಣುವಸಮುದ್ರ ಗ್ರಾಮದಲ್ಲಿನ ಕನ್ನೆವಸದಿ,[11] ಕೊಡೆಹಾಳದಬಸದಿ,[12] ಮಾಣಿಕ್ಯದೊಡಲೂರಿನ ಜಿನಾಲಯ ಮುಂತಾದವುಗಳು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಇವುಗಳನ್ನು ನಾವು ಹುಡುಕಲು ಹೊರಟಾಗ ನಮಗೆ ಕಂಡುಬಂದುದು ಕೇವಲ ಬೆರಳೆಣಿಕೆಯ ಬಸದಿಗಳು. ಇವುಗಳಲ್ಲಿ ಪ್ರಮುಖವಾಗಿ ಬಸದಿಕೋಟೆಯ ಜಿನಾಲಯ, ಬಹುತೇಕವಾಗಿ ನಶಿಸಿಹೋಗಿದೆ. ಕಂಬದಹಳ್ಳಿಯ ಜಿನಾಲಯ ಗಂಗ ಮತ್ತು ಹೊಯ್ಸಳ ಕಾಲಘಟ್ಟಗಳಲ್ಲಿ ನಿರ್ಮಾಣ ಮತ್ತು ಪುನರ್‌ನಿರ್ಮಾಣಗೊಂಡು ಇಂದಿಗೂ ಉಳಿದುಬಂದಿದೆ.

6.1. ಅರೆತಿಪ್ಪೂರಿನ ಗುಹಾಲಯ

ಮಂಡ್ಯ ಜಿಲ್ಲೆಯಲ್ಲಿ ಪ್ರಾರಂಭದ ವಾಸ್ತುಶೈಲಿಗಳಲ್ಲಿ ಗುಹಾಂತರ ದೇವಾಲಯಗಳು ನಿರ್ಮಾಣವಾಗಿದ್ದುದನ್ನು ಅನೇಕ ವಿದ್ವಾಂಸರು ಉಲ್ಲೇಖಿಸುತ್ತಾರೆ. ಈ ದಿಸೆಯಲ್ಲಿ ಐ.ಕೆ. ಶರ್ಮ ಅವರು ರಚಿಸಿರುವ ಟೆಂಪಲ್ಸ್ ಆಫ್ ದಿ ಗಂಗಾಸ್ ಆಫ್ ಕರ್ನಾಟಕ ಹೊತ್ತಿಗೆಯಲ್ಲಿ ಅರೆತಿಪ್ಪೂರಿನಲ್ಲಿ ಗುಹಾಂತರ ದೇವಾಲಯವಿದ್ದು ಅದು ಇತ್ತೀಚೆಗೆ ನಡೆದ ಕಲ್ಲುಗಣಿ ಕಾರ್ಯಗಳಿಂದಾಗಿ ನಶಿಸಿದ್ದು ಅದರ ಕುರುಹು ಮಾತ್ರ ಕಂಡುಬರುತ್ತದೆಯೆಂದು ದಾಖಲಿಸಿರುತ್ತಾರೆ.[13] ಇದಲ್ಲದೆ ತಾಯಲೂರು ಶಾಸನದಲ್ಲಿ ಸತ್ಯವಾಕ್ಯನ ಕಾಲದಲ್ಲಿ ಕನಕಗಿರಿ ತೀರ್ಥದಲ್ಲಿ ಕಲ್ಲು ದೇಗುಲವನ್ನು ನಿರ್ಮಿಸಿದನೆಂದು ಉಲ್ಲೇಖಿಸುತ್ತದೆ. ಅರೆತಿಪ್ಪೂರಿನಲ್ಲಿ ಸಣ್ಣ ಬೆಟ್ಟವೊಂದಿದ್ದು ಇದೇ ಕನಕಗಿರಿ ಶಾಸನದಲ್ಲಿ ಹೇಳಿರುವ ಸ್ಥಳವೆಂದು ದೇವರಕೊಂಡ ರೆಡ್ಡಿಯವರು ದಾಖಲಿಸುತ್ತಾರೆ. ಆದರೆ ಅದರ ಬಗೆಗಿನ ವಿವರಗಳು ತಿಳಿದುಬರುವುದಿಲ್ಲ.[14]

6.2. ಮೇಲುಕೋಟೆಯ ಗುಹಾಲಯ

ಇಂತಹದೇ ಮತ್ತೊಂದು ಗುಹಾಲಯವನ್ನು ಶ್ರೀವೈಷ್ಣವ ಕ್ಷೇತ್ರವಾದ ರಾಮಾನುಜಾಚಾರ್ಯರ ಕಾರ್ಯಕ್ಷೇತ್ರವಾದ ಮೇಲುಕೋಟೆಯಲ್ಲಿ ಕಾಣಬಹುದು. ಇದನ್ನು ಗಂಗರ ಕಾಲದ್ದೆಂದು ಹೇಳಲು ಯಾವ ಶಾಸನಾಧಾರಗಳಿಲ್ಲದಿದ್ದರೂ ವಿದ್ವಾಂಸರು ಇದು ಗಂಗರ ಕಾಲದ್ದೆಂದು ಗುರುತಿಸುತ್ತಾರೆ. ಮೇಲುಕೋಟೆಯ ಉತ್ತರ ಪ್ರವೇಶದ್ವಾರದಿಂದ ಬಲಕ್ಕಾದಂತೆ ಕಂಡುಬರುವ ಕಣಿವೆಯಲ್ಲಿ ಬೆಟ್ಟದ ಇಳಿಜಾರಿನ ಕಲ್ಲನ್ನು ಕೊರೆದು ಎರಡು ಹಂತದ ಗುಹಾಲಯಗಳನ್ನು ನಿರ್ಮಿಸಲಾಗಿದೆ.[15] ಈ ಎರಡು ಗುಹಾಲಯಗಳು ಅಪೂರ್ಣವಾಗಿ ಕೆತ್ತಲ್ಪಟ್ಟಿವೆ. ಪ್ರಾರಂಭದ ಗುಹಾಲಯ ಅಗಲವಾಗಿದ್ದು ಗೋಡೆಯ ಬದಿಯ ಕಂಬಗಳು ಸೇರಿ ಆರು ಕಂಬಗಳನ್ನು ಉಳ್ಳ 50 ಅಡಿ ಉದ್ದವಾದ ಮೊದಲ ಮಂಟಪವನ್ನು ಹೊಂದಿವೆ. ಮುಂದಿನ ಕಂಬಗಳನ್ನು ಮಾತ್ರ ಕೆತ್ತಿದ್ದು ಒಳಗೆ ಸಂಪೂರ್ಣವಾಗಿ ಕೆತ್ತದೆ ಅರ್ಧಕ್ಕೆ ಬಿಟ್ಟಿರುವುದು ಕಂಡುಬರುತ್ತದೆ.

ದಪ್ಪವಾದ ಈ ಕಂಬಗಳು ಯಾವ ರಾಜವಂಶದ ಲಕ್ಷಣಗಳನ್ನು ಅನುಸರಿಸಿಲ್ಲ. ಎರಡನೆಯ ಗುಹೆ ಮೊದಲನೆಯ ಗುಹೆಯ ಮೇಲಿದ್ದು ಮೊದಲನೆಯದಕ್ಕಿಂತ ಚಿಕ್ಕದಾಗಿದ್ದು ಗೋಡೆ ಅಂಚಿನ ಕಂಬಗಳೂ ಸೇರಿದಂತೆ ನಾಲ್ಕು ಕಂಬಗಳನ್ನು ಹೊಂದಿದೆ. ಇದೂ ಕೂಡ ಅಪೂರ್ಣವಾಗಿದೆ. ಗುಹಾಂತರ ದೇವಾಲಯದ ಎಡಭಾಗದಲ್ಲಿ ಮೆಟ್ಟಿಲುಗಳನ್ನಿಟ್ಟು ಮುಂದಿನ

ಸ್ಥಳವನ್ನು ಸಮತಟ್ಟಾಗಿ ಮಾಡಿರುತ್ತಾರೆ. ಇಲ್ಲಿಯೂ ಕೂಡ ಕಂಬಗಳು ತುಂಬಾ ದಪ್ಪವಾಗಿದ್ದು ಕೆಳಗಿನ ದೇವಾಲಯಕ್ಕಿಂತ ಕೆಲವು ಭಾಗಗಳು ಪೂರ್ಣಗೊಂಡಿವೆ. ಒಂದು ಸಣ್ಣ ಗರ್ಭಗೃಹವಿದ್ದು ಅದರಲ್ಲಿ ಆನಂತರದ ವಿಷ್ಣುವಿನ ಮೂರ್ತಿಯೊಂದನ್ನು ಸ್ಥಾಪಿಸಿದ್ದಾರೆ. ಭಿತ್ತಿಯಲ್ಲಾಗಲಿ, ಕಂಬಗಳಲ್ಲಾಗಲಿ ಯಾವುದೇ ಶೃಂಗಾರ ಅಥವಾ ಅಲಂಕರಣ ಶಿಲ್ಪಗಳು ಇಲ್ಲದಿರುವುದರಿಂದ ಇದನ್ನು ಜೈನ ಗುಹೆಯೆಂದೇ ವಿದ್ವಾಂಸರು ಗುರುತಿಸುತ್ತಾರೆ. ಕೆಳಗಿನ ಗವಿಯ ತಳಪಾಯದಲ್ಲಿ ಒಂದೇ ಒಂದು ಅಕ್ಷರದ ಶಾಸನವಿದ್ದು ಅದು ಚ ಅಥವಾ ಎ ಎಂದು ಗುರುತಿಸಬಹುದಾಗಿದ್ದು ಬರವಣಿಗೆ ಶೈಲಿಯನ್ನಾಧರಿಸಿ 7–8ನೇ ಶತಮಾನದ ರಚನೆಯೆಂದು ಗುರುತಿಸಬಹುದು.[16]

6.3. ಕಂಬದಹಳ್ಳಿ ಪಂಚಕೂಟ ಬಸದಿ

ಐವತ್ತೆಂಟು ಅಡಿ ಎತ್ತರದ ವಿಶ್ವವಿಖ್ಯಾತ ಗೊಮಟೇಶ್ವರ ವಿಗ್ರಹವಿರುವ ಶ್ರವಣಬೆಳಗೊಳಕ್ಕೆ ಸಮೀಪದಲ್ಲಿದೆ ಕಂಬದಹಳ್ಳಿ ಇಲ್ಲಿನ ಪಂಚಕೂಟ ಬಸದಿ ಜಿನಾಲಯಗಳಲ್ಲೆ ಅತ್ಯಪೂರ್ವ ಶ್ರೇಣಿಯದು. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಹೋಬಳಿ ಕೇಂದ್ರವಾದ ಬಿಂಡಿಗನವಿಲೆಗೆ ಹೊಂದಿಕೊಂಡಂತೆ ಇರುವ ಕಂಬದಹಳ್ಳಿಯ ಕ್ರಿ.ಶ 9ನೇ ಶತಮಾನದ ವೇಳೆಗಾಗಲೇ ಪ್ರಸಿದ್ಧ ಜೈನ ಕ್ಷೇತ್ರವಾಗಿತ್ತು ಎಂಬುದನ್ನು ಶಾಸನಗಳು ತಿಳಿಸುತ್ತವೆ. ವಿಶಾಲ ಕೆರೆಯ ಏರಿಯ ಮೇಲೆ ನಡೆಯುತ್ತ ತೆಂಗಿನ, ಕಂಗಿನ ಗರಿಗಳನ್ನು ನೋಡುತ್ತಾ ಮೈಮರೆತು ಬರುವವರಿಗೆ ದೂರದಿಂದಲೇ ಕಂಬದಹಳ್ಳಿ ಈ ಹೆಸರು ಬರಲು ಕಾರಣವಾದ ಎತ್ತರವಾದ ಬ್ರಹ್ಮದೇವರ ಸ್ತಂಭವು ಕಾಣಸಿಗುತ್ತದೆ.[17]

ಪುಟ್ಟ ಗ್ರಾಮವಾಗಿರುವ ಕಂಬದಹಳ್ಳಿಯಲ್ಲಿ ಕ್ರಿ.ಶ 8–9 ನೇ ಶತಮಾನದ ವೇಳೆಯಲ್ಲಿ ನಿರ್ಮಾಣಗೊಂಡ ಪಂಚಕೂಟ ಬಸದಿ ಕ್ರಿ.ಶ 12 ನೇ ಶತಮಾನದಲ್ಲಿ ನಿರ್ಮಾಣವಾಗಿರುವ ಶಾಂತಿನಾಥ ಬಸದಿ, ಕ್ರಿ.ಶ. 8 ನೇ ಶತಮಾನದ ಲಿಪಿಯ ಶಾಸನವಿರುವ ಬ್ರಹ್ಮದೇವರ ಸ್ತಂಭಗಳೇ ಅಲ್ಲದೆ ಭಗ್ನವಾದ ದೇವಾಲಯಗಳಿಂದ ಸ್ಥಳಾಂತರಿಸಲ್ಪಟ್ಟ ಹತ್ತಾರು ತೀರ್ಥಂಕರರ, ಯಕ್ಷ–ಯಕ್ಷಿಯರ ಮೂರ್ತಿಗಳು ಕಾಣಸಿಗುತ್ತವೆ.

ಕೀರ್ತಿ ಸ್ತಂಭ, ಜಯಸ್ತಂಭಗಳಿಗೆ ಭಿನ್ನವಾದ ಮಾನಸ್ತಂಭಗಳನ್ನು ಜೈನ ದೇವಾಲಯಗಳ ಎದುರಿನಲ್ಲಿ ಸ್ಥಾಪಿಸುವ ಪರಂಪರೆಯಿದೆ. ದೇವರ ದರ್ಶನಕ್ಕೆ ಬರುವವರ ಅಹಂಕಾರ ದೂರವಾಗಿ ಧಾರ್ಮಿಕ ಶ್ರದ್ಧೆ ಮೂಡಬೇಕು ಎಂಬ ಸಂದೇಶದ ಪ್ರತೀಕ ಮಾನಸ್ತಂಭ. ಸ್ತಂಭಗಳ ಮೇಲೆ ತೀರ್ಥಂಕರರ ವಿಗ್ರಹಗಳಿದ್ದಾಗ ಅವುಗಳ ಮಾನಸ್ಥಂಭಗಳೆಂದೂ, ಕ್ಷೇತ್ರಪಾಲ ಬ್ರಹ್ಮಯಕ್ಷನ

ವಿಗ್ರಹವಿದ್ದಾಗ ಬ್ರಹ್ಮಸ್ಥಂಭವೆಂದೂ ಗುರುತಿಸಲಾಗುತ್ತದೆ. ಕಂಬದಹಳ್ಳಿಯ ಬ್ರಹ್ಮಯಕ್ಷ ಸ್ತಂಭದ ಮೇಲೆ ಪೂರ್ವಾಭಿಮುಖವಾಗಿ ಕುಳಿತ ಬ್ರಹ್ಮಯಕ್ಷನ ವಿಗ್ರಹವಿದೆ.[18]

ಸುಮಾರು ಐವತ್ತು ಅಡಿ ಎತ್ತರದ ಕಪ್ಪು ಬೂದು ಬಣ್ಣದ ಬಳಪದ ಕಲ್ಲಿನಲ್ಲಿ ನಿರ್ಮಾಣವಾಗಿರುವ ಬ್ರಹ್ಮಸ್ತಂಭವು ಅಷ್ಟಭುಜ ಪೀಠದ ಮೇಲೆ ನಿಂತಿದೆ. ಎತ್ತರವಾದ ಜಗಲಿಯ ಮೇಲೆ ನಿಲ್ಲಿಸಲಾಗಿರುವ ಬ್ರಹ್ಮಸ್ತಂಭದ ದಿಂಡಿನ ಭಾಗವು ಚಚ್ಚೌಕಾಕಾರವಾಗಿದ್ದು ಅಷ್ಟಭುಜ ಹೊಂದಿದೆ. ಶಾಕಟಾಯನ ವ್ಯಾಕರಣಕ್ಕೆ ಅಮೋಘ ವೃತ್ತಿಯನ್ನು ಬರೆದು ಕ್ರಿ.ಶ. 8–9ನೇ ಶತಮಾನದಲ್ಲಿ ಪ್ರಕಾಂಡ ವ್ಯಾಕರಣ ಪಂಡಿತನಾಗಿದ್ದ ಪಾಲ್ಯಕೀರ್ತಿಯ ಬಗ್ಗೆ ಈ ಬ್ರಹ್ಮಸ್ತಂಭದಲ್ಲಿ ಒಂದು ಶಾಸನವಿದ್ದರೆ, ಮತ್ತೊಂದು ಶಾಸನದಲ್ಲಿ ಹೊಯ್ಸಳ ವಿಷ್ಣುವರ್ಧನನ ಹಿರಿಯ ದಂಡನಾಯಕ ಗಂಗರಾಜನು ತಲಕಾಡಿನ ಮೇಲೆ ಸಾಧಿಸಿದ ವಿಜಯದ ಮಾಹಿತಿಯಿದೆ. ಗಂಗಮಂಡಲ ಕಾನನವೆಂದು ಬಿಂಡಿಗನವಿಲೆಯ ಪ್ರದೇಶವನ್ನು ಗುರುತಿಸಲಾಗುತ್ತಿತ್ತೆಂದೂ, ಇಲ್ಲಿನ ಶಾಸನಗಳಿಂದ ತಿಳಿದು ಬರುತ್ತದೆ. ಪ್ರತಿ ವರ್ಷವೂ ಸ್ತಂಭದ ಮೇಲಿನ ಬ್ರಹ್ಮನಿಗೆ ವಾರ್ಷಿಕ ಪೂಜೆಯನ್ನು ಈ ಹಿಂದೆ ನಡೆಸಲಾಗುತ್ತಿತ್ತೆಂದೂ, ಕೇವಲ ಒಂದೇ ಒಂದು ಅಡಿಕೆ ಮರವನ್ನು ಒರಗಿಸಿ, ಅದರ ಮೇಲಿಂದ ಹತ್ತಿ ಹೋಗಿ ಅರ್ಚಕರು ಪೂಜೆ ನೆರವೇರಿಸುತ್ತಿದ್ದರೆಂದು ಹಳ್ಳಿಯ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಬ್ರಹ್ಮದೇವರ ಸ್ತಂಭವಿರುವ ವಿಶಾಲ ಪ್ರಾಕಾರದಲ್ಲಿ ಪಂಚಕೂಟ ಬಸದಿಯಿದೆ. ಮೂಲತಃ ಬಸದಿಯು ತ್ರಿಕೂಟಾಚಲ ನಿರ್ಮಾಣವಾಗಿದ್ದು ನಂತರ ಮುಖಮಂಟಪಕ್ಕೆ ಹೊಂದಿಕೊಂಡಂತೆ ಬಸದಿಗಳ ಸೇರ್ಪಡೆಯಾಗಿ ಐದು ಗರ್ಭಗುಡಿಗಳಿಂದ ಮತ್ತೊಂದು ಅಷ್ಟಕೋನ ಶಿಖರ. ಇದನ್ನು ವೇಸರ, ನಾಗರ, ದ್ರಾವಿಡ ಶೈಲಿಯ ಶಿಖರಗಳೆಂದು ಹೇಳಲಾಗಿದ್ದು, ಈ ರೀತಿಯ ನಿರ್ಮಾಣ ಕಂಬದಹಳ್ಳಿಯಲ್ಲಿ ಮಾತ್ರ ಕಾಣಬಹುದೆಂದು ಸಂಶೋಧಕರು ಹೇಳುತ್ತಾರೆ.

ದ್ರಾವಿಡ, ವೇಸರ, ನಾಗರ ವಿಮಾನ ನಿರ್ಮಾಣ ಶೈಲಿಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಶಿಲ್ಪಿಗಳು ಇಲ್ಲಿ ಯಶಸ್ಸನ್ನು ಸಾಧಿಸಿದ್ದಾರೆ. ಶಿಖರದಲ್ಲಿ ಮುಂದಿನ ಕಾಲನ್ನು ಎತ್ತಿಕೊಂಡ ಸಿಂಹಗಳಿದ್ದು ಇವು ಪಲ್ಲವರ ಕಾಲವನ್ನು ಸೂಚಿಸುತ್ತದೆ. ಅದ್ಭುತ ಆಕಾರದ ಬಸದಿಯ ಶಿಖರಗಳು ಕರ್ನಾಟಕದಲ್ಲಿ ಹಲವು ಶತಮಾನಗಳಿಗೆ ಮೊದಲೇ ನಿರ್ಮಾಣಗೊಂಡಿರುವುದು ಗಮನಾರ್ಹ.[19]

ಪಂಚಕೂಟ ಬಸದಿಯ ಗರ್ಭಗುಡಿಗಳ ಆದಿನಾಥ, ನೇಮಿನಾಥ, ಶಾಂತಿನಾಥ, ಪಾರ್ಶ್ವನಾಥ ತೀರ್ಥಂಕರರ ಮೂರ್ತಿಗಳಿದ್ದು, ಬಸದಿಯ ಒಳಭಾಗದಲ್ಲಿ ಕೆತ್ತನೆ ಕೆಲಸದ ಸ್ತಂಭಗಳಾಗಲಿ, ಬಾಗಿಲುವಾಡಗಳಾಗಲಿ ಇರುವುದಿಲ್ಲ. ಆದರೆ ನವರಂಗದ ಭುವನೇಶ್ವರಿಯಲ್ಲಿ ಅಷ್ಟ

ದಿಕ್ಪಾಲಕರ ಸುಂದರ ಉಬ್ಬು ಶಿಲ್ಪಗಳಿವೆ. ಪಾರ್ಶ್ವನಾಥ ತೀರ್ಥಂಕರರ ಯಕ್ಷನಾದ ಧರಣೇಂದ್ರನ ಮೂರ್ತಿಯ ಮಧ್ಯಭಾಗದಲ್ಲಿದ್ದು ಆತನ ಅಕ್ಕಪಕ್ಕದಲ್ಲಿ ಚಾಮರವನ್ನು ಹಿಡಿದಿರುವ ಚಾಮರಧಾರಿಗಳಿದ್ದಾರೆ. ಬಸದಿಯ ಒಳಗಡೆ ಭಗ್ನವಾದ ಹಲವು ತೀರ್ಥಂಕರರ, ಯಕ್ಷಯಕ್ಷಿಯರ ಮೂರ್ತಿಗಳನ್ನು ತಂದಿರಸಲಾಗಿದೆ. ಇವುಗಳ ಮೂಲಸ್ಥಾನವನ್ನು ತಿಳಿಯಲಾಗದಿದ್ದರೂ, ಕಂಬದಹಳ್ಳಿಯಲ್ಲಿದ್ದ ಬಸದಿಗಳನ್ನು ಹಾಳು ಮಾಡಿದ ಕಾಲಾಂತರದಲ್ಲಿ ಇವುಗಳನ್ನು ಅಲ್ಲಿಂದ ತಂದು ಇಲ್ಲಿ ಇರಿಸಿರಬಹುದೆಂದು ಊಹಿಸಬಹುದಾಗಿದೆ. ಪಂಚಕೂಟ ಬಸದಿಗೆ ಸಮೀಪದಲ್ಲಿರುವ ಶಾಂತಿನಾಥ ಬಸದಿಯು ಗರ್ಭಗುಡಿ, ಅಂತರಾಳ, ಮುಂದೆ ಕಂಬಗಳ ಸಾಲುಳ್ಳ ಉದ್ದನೆಯ ಸಭಾ ಮಂಟಪದಿಂದ ವಿಶಾಲವಾಗಿದೆ.[20]

ಒಂದು ಸಮುಚ್ಚಯ ನಿರ್ಮಾಣವಾಗಿದೆ. ಪಂಚಕೂಟ ಬಸದಿಯ ಮುಖ್ಯ ಗರ್ಭಗುಡಿಯಲ್ಲಿ ಪ್ರಥಮ ತೀರ್ಥಂಕರ ಆದಿನಾಥನ ಪದ್ಮಾಸೀನ ಮೂರ್ತಿಯಿದ್ದು ಪಂಚಕೂಟ ಬಸದಿಯನ್ನು ಆದಿನಾಥ ಜಿನಾಲಯವೆಂದು ಕರೆಯುವರು. ತ್ರಿಕೂಟಾಚಲ ಬಸದಿಯ ಮೇಲೆ ನಿರ್ಮಾಣವಾಗಿರುವ ಶಿಖರಗಳು ವಾಸ್ತುಶಿಲ್ಪ ಶೈಲಿಯಿಂದ ಮಹತ್ವದ ನಿರ್ಮಾಣ ಎಂದು ಪರಿಣಿತರು ಅಭಿಪ್ರಾಯಪಟ್ಟಿದ್ದಾರೆ. ಒಂದು ಶಿಖರ ವರ್ತುಲಾಕಾರವಾಗಿದ್ದರೆ ಇನ್ನೊಂದು ಚತುಷ್ಕೋನ ಶಿಖರ ಎತ್ತರವಾಗಿದ್ದು ಕಟ್ಟಡಕ್ಕೆ ಬಳಪದ ಕಲ್ಲನ್ನು ಬಳಸಿಕೊಳ್ಳಲಾಗಿದೆ.

ಹೊಯ್ಸಳ ದೊರೆ ವಿಷ್ಣುವರ್ಧನನ ಮಹಾದಂಡನಾಯಕ ಗಂಗರಾಜನ ಮಗನಾದ ಬೊಪ್ಪನು ಈ ಬಸದಿಯನ್ನು ದ್ರೋಹಘರಟ್ಟಾಚಾರಿ ಬಿರುದಿನ ಶಿಲ್ಪಿಯಿಂದ ಕಟ್ಟಿಸಿದನೆಂದು ಶಾಸನವಿದೆ. ಗಂಗರಾಜನಿಗೆ ದ್ರೋಹಘರಟ್ಟ ಎಂಬ ಬಿರುದು ಇದ್ದು ಶಾಂತಿನಾಥ ಬಸದಿಯನ್ನು ನಿರ್ಮಿಸಿದ ಶಿಲ್ಪಿಯು ಗಂಗರಾಜನ ಕಾಲದಲ್ಲಿಯೇ ಖ್ಯಾತನಾಗಿದ್ದ ರೂವಾರಿಯಾಗಿದ್ದಿರಬಹುದು. ಬೊಪ್ಪನು ಹಳೇಬೀಡಿನ ವಿಜಯ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದ್ದು (ಕಾಲ ಕ್ರಿ.ಶ. 1133) ಇದಕ್ಕಿಂತಲೂ ಪೂರ್ವದಲ್ಲಿ ಕಂಬದಹಳ್ಳಿಯ ಶಾಂತಿನಾಥ ಬಸದಿಯನ್ನು ಕಟ್ಟಿಸಿದ್ದಿರಬೇಕೆಂದು ಊಹಿಸಲಾಗಿದೆ.[21]

ಹೊಯ್ಸಳರ ಕಾಲದ ನಿರ್ಮಾಣವಾದ್ದರಿಂದ ಈ ಬಸದಿಯಲ್ಲಿ ಶಿಲ್ಪಿಗಳು ತಮ್ಮ ನೈಪುಣ್ಯವನ್ನು ಪ್ರದರ್ಶಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು. ಇಲ್ಲಿನ ಶಿಲ್ಪಿಗಳ ಕರಕೌಶಲ್ಯವು ಯಾವುದೇ ಹೊಯ್ಸಳ ದೇವಾಲಯಕ್ಕೂ ಕಡಿಮೆ ಇಲ್ಲ, ಸಿಂಹಗಳು, ಮಕರಗಳು, ಗಜಗಳು, ಕುದುರೆಗಳು, ಕುದುರೆ ಸವಾರರು, ಗಜಸೈನ್ಯ, ಆನೆಗಳ ಮೆರೆವಣಿಗೆ, ಸೈನಿಕರು ಇದೇ ಮೊದಲಾದ

ಶಿಲ್ಪಗಳು ಶಾಂತಿನಾಥ ಬಸದಿಯ ಅಧಿಷ್ಠಾನದ ಮೇಲೆ ಕಂಡುಬರುತ್ತವೆ. ಎಂಟು ನೂರು ವರ್ಷಗಳು ಕಳೆದರೂ ಅಧಿಷ್ಠಾನದ ಮೇಲಿರುವ ಶಿಲ್ಪಗಳು ಜೀವಂತವಾಗಿರುವಂತೆ ತೋರುತ್ತವೆ.

6.3.1. ಕಂಬದಹಳ್ಳಿ ಶಾಂತಿನಾಥ ಬಸದಿ

ಶಾಂತಿನಾಥ ಬಸದಿಯ ತಳಪಾಯವು ಸ್ವಲ್ಪ ಎತ್ತರವಾಗಿದ್ದು, ಕಟ್ಟಡಕ್ಕೆ ಬಳಪದ ಕಲ್ಲನ್ನು ಬಳಸಿಕೊಳ್ಳಲಾಗಿದೆ. ಹೊಯ್ಸಳ ದೊರೆ ವಿಷ್ಣುವರ್ಧನನ ಮಹಾದಂಡನಾಯಕ ಗಂಗರಾಜನ ಮಗನಾದ ಬೊಪ್ಪನು ಈ ಬಸದಿಯನ್ನು ದ್ರೋಹಘರಟ್ಟಾಚಾರಿ ಬಿರುದಿನ ಶಿಲ್ಪಿಯಿಂದ ಕಟ್ಟಿಸಿದನೆಂದು ಶಾಸನವಿದೆ. ಗಂಗರಾಜನಿಗೆ ದ್ರೋಹಘರಟ್ಟ ಎಂಬ ಬಿರುದು ಇದ್ದು ಶಾಂತಿನಾಥ ಬಸದಿಯನ್ನು ನಿರ್ಮಿಸಿದ ಶಿಲ್ಪಿಯು ಗಂಗರಾಜನ ಕಾಲದಲ್ಲಿಯೇ ಖ್ಯಾತನಾಗಿದ್ದ ರೂವಾರಿಯಾಗಿದ್ದಿರಬಹುದು.

ಶಾಂತಿನಾಥ ಬಸದಿಯ ನವರಂಗದ ಛಾವಣಿಯಲ್ಲಿಯೂ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಕೆತ್ತಲಾಗಿದೆ. ತಪೋನಿರತ ತೀರ್ಥಂಕರನ ಮೂರ್ತಿಯು ಮಧ್ಯದಲ್ಲಿದ್ದು ಯಕ್ಷರು, ಗಂಧರ್ವರು, ಚಾಮರಧಾರಿಗಳು ಜಿನನ ಸೇವೆ ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ಕ್ರಿ.ಶ. ಹದಿಮೂರನೇ ಶತಮಾನದ ವೇಳೆಗೆ ಎಕ್ಕೋಟಿ ಜಿನಾಲಯವೆಂದು ಕರೆಸಿಕೊಂಡು ಆಳುವ ಅರಸರಿಂದ ಭೇರಿ ಪಂಚಮಹಾವಾದ್ಯಗಳ ಮರ್ಯಾದೆಯನ್ನು ಪಡೆದಿದ್ದ ಕಂಬದಹಳ್ಳಿ ತೀರ್ಥವು ಯಾವ ಕಾಲದಲ್ಲಿ ದಾಳಿಗೆ ತುತ್ತಾಯಿತೋ ತಿಳಿಯದು. ವಿಜಯನಗರವು ಹಾಳು ಹಂಪೆಯಾದಂತೆ ಕಂಬದಹಳ್ಳಿ ಪಾಳುಬಿದ್ದ ಬಸದಿಗಳ ಹಳ್ಳಿಯಂತಾಗಿದೆ. ಕೇಂದ್ರ ಪುರಾತತ್ವ ಇಲಾಖೆಯ ರಕ್ಷಣೆಯಲ್ಲಿರುವ ರಕ್ಷಿಸಲ್ಪಟ್ಟ ರಾಷ್ಟ್ರೀಯ ಸ್ಮಾರಕವಾಗಿರುವ ಕಂಬದಹಳ್ಳಿಯ ಪಂಚಕೂಟ ಬಸದಿಯ ಕಟ್ಟಡ ಜೀರ್ಣೋದ್ಧಾರವಾಗಿದೆ.

ಶಾಂತಿನಾಥ ಬಸದಿಯ ಗರ್ಭಗೃಹದಲ್ಲಿ ಕಮಲಪೀಠದ ಮೇಲೆ ಖಡ್ಗಾಸನದಲ್ಲಿರುವ ಸುಮಾರು ಹತ್ತು ಅಡಿ ಎತ್ತರದ ಶಾಂತಿನಾಥ ಮೂರ್ತಿಯಿದೆ. ಈ ಬಳಪದ ಕಲ್ಲಿನ ಮೂರ್ತಿಯ ಎರಡೂ ಕೈಗಳನ್ನು ಕತ್ತರಿಸಿ ಹಾಕಲಾಗಿದೆ. ಪಂಚಕೂಟ ಬಸದಿಯಲ್ಲಿ ಅಲ್ಲಲ್ಲಿ ಇರಿಸಲಾಗಿರುವ ಮೂರ್ತಿಗಳಂತೆಯೇ ಶಾಂತಿನಾಥ ಬಸದಿಯ ಸಭಾ ಮಂಟಪದಲ್ಲಿಯೂ ಎಲ್ಲಿಂದಲೋ ತಂದಿರಿಸಿದ ತೀರ್ಥಂಕರರ ಮೂರ್ತಿಗಳು, ಯಕ್ಷ – ಯಕ್ಷಿಯರ ವಿಗ್ರಹಗಳು ಕಾಣಸಿಗುತ್ತವೆ.[22]

6.3.2. ಕಂಬದಹಳ್ಳಿಯ ಯಕ್ಷ ಯಕ್ಷಿಯರ ಶಿಲ್ಪಗಳು

ಕಂಬದಹಳ್ಳಿಯ ಯಕ್ಷಯಕ್ಷಿಯರನ್ನು ಪ್ರಮುಖವಾಗಿ ಮೂರು ಹಂತಗಳಲ್ಲಿ ನೋಡಬಹುದು. ಅವುಗಳೆಂದರೆ ಕಂಬದ ಮೇಲಿರುವ ಬ್ರಹ್ಮಯಕ್ಷ. ಪಂಚಕೂಟ ಬಸದಿಯ ಯಕ್ಷಯಕ್ಷಿಯರು ಮತ್ತು ಶಾಂತಿನಾಥ ಬಸದಿಯ ಯಕ್ಷ ಯಕ್ಷಿಯರು.

ಕಂಬದಹಳ್ಳಿ ಎಂದು ಹೆಸರು ಬರಲು ಕಾರಣವಾದ ಕಂಬದ ಮೇಲಿನ ಬ್ರಹ್ಮಯಕ್ಷ ಮೂರ್ತಿಯೇ ಈ ಕ್ಷೇತ್ರದ ಅತ್ಯಂತ ಪ್ರಭಾವೀ ಹಾಗೂ ಪ್ರಾಚೀನ ಮೂರ್ತಿ. ಪಂಚಕೂಟ ಬಸದಿಯ ಉತ್ತರ ದಿಕ್ಕಿನ ತೆರೆದ ಆವರಣದಲ್ಲಿ 50 ಅಡಿ ಎತ್ತರದ ಈ ಬ್ರಹ್ಮಸ್ತಂಭವಿದೆ. ಈ ಸ್ತಂಭದ ಮೇಲ್ಭಾಗದಲ್ಲಿ 4 ಅಡಿ ವಿಸ್ತಾರವಾದ ಚೌಕಾಕಾರದ ಮಣಿಕಟ್ಟಿನ ಮೇಲೆ ಬ್ರಹ್ಮಯಕ್ಷ ಮೂರ್ತಿಯನ್ನು ಪೂರ್ವಾಭಿಮುಖವಾಗಿ ಸ್ಥಾಪಿಸಲಾಗಿದೆ. ಆಕರ್ಷಕವಾದ ಮತ್ತು ಸುಂದರವಾದ ಬ್ರಹ್ಮಯಕ್ಷಮೂರ್ತಿಯನ್ನು ಸುತ್ತಮುತ್ತಲಿನ ಜನ ಕಂಬದರಾಯನೆಂದು ಕರೆಯುತ್ತಾರೆ.[23]

ಜೈನ ಪರಂಪರೆಯ ಶ್ವೇತಾಂಬರ ಮತ್ತು ದಿಗಂಬರ ಪರಂಪರೆಗನುಸಾರ ಬ್ರಹ್ಮಯಕ್ಷನಿಗೆ ಎಂಟು ಕೈಗಳಿವೆಯೆಂದು ಉಲ್ಲೇಖಿಸಲಾಗಿದೆ. ಒಂದು ಪರಂಪರೆ ಪ್ರಕಾರ ಬ್ರಹ್ಮನ ಕೈಗಳಲ್ಲಿರುವ ಆಯುಧಗಳನ್ನು ಬಾಣ ಧನುಷ್ ಪರಶು ದಂಡ ಕತ್ತಿ ಗುರಾಣಿ ವರದ ವಜ್ರ ಎಂದಿದೆ. ಮತ್ತೊಂದು ಪರಂಪರೆ ಬೀಜಪೂರ ಮುದ್ಗರ ಪಾಶ ಅಭಯ ನಕುಲ ಅಂಕುಶ ಗದೆ ಅಕ್ಷಸೂತ್ರ ಎಂದಿದೆ. ಆದರೆ ಕರ್ನಾಟಕದಾದ್ಯಂತ ಎರಡು ಕೈಗಳ ಬ್ರಹ್ಮಯಕ್ಷನೇ ಹೆಚ್ಚಾಗಿ ಕಂಡುಬರುತ್ತಾನೆ.

ಕಂಬದಹಳ್ಳಿಯ 3 ಅಡಿ ಎತ್ತರವಾಗಿರುವ ಬ್ರಹ್ಮಯಕ್ಷನಿಗೆ ಇರುವುದು ಎರಡು ಕೈಗಳು ಮಾತ್ರ. ಈ ಮೂರ್ತಿ ಸುಖಾಸನದಲ್ಲಿ ಕುಳಿತಿದ್ದು ಕಾಲ್ಗಳಲ್ಲಿ ದಪ್ಪವಾದ ಕಡಗ, ಕಾಲ್ಗೆಜ್ಜೆಗಳು, ಮುಂಗೈಯಿಂದ ಆರಂಭಿಸಿ ತೋಳವರೆಗೂ ವ್ಯಾಪಿಸಿರುವ ತೋಳ್ಬಂದಿ ಅಗಲವಾದ ಸೊಂಟದ ಡಾಬು, ಕುತ್ತಿಗೆಗೆ ಅಂಟಿದಂತಿದ್ದು, ಕೆಳಗೆ ಜೋತುಬಿದ್ದಿರುವ ಕಂಠೀಹಾರ, ಕರ್ಣಾಭರಣ, ಪ್ರಭಾವಳಿಯನ್ನು ಒಳಗೊಂಡಂತಿರುವ ಎತ್ತರವಾದ ಕಿರೀಟ ಮುಂತಾದ ಆಭರಣಗಳನ್ನು ಬ್ರಹ್ಮಯಕ್ಷನು ಧರಿಸಿರುವಂತೆ ಕೆತ್ತಲಾಗಿದೆ. ಈ ಮೂರ್ತಿಯ ವಿಶೇಷವೆಂದರೆ ಕಿರೀಟದಲ್ಲಿ ಸುಮಾರು 9 ಇಂಚು ಎತ್ತರದ ಶೀತಲ ತೀರ್ಥಂಕರರ ಮೂರ್ತಿಯಿದೆ.[24]

ಪಂಚಕೂಟ ಬಸದಿಯ ಪ್ರವೇಶದ್ವಾರದ ಅಕ್ಕಪಕ್ಕದಲ್ಲಿ ಒಂದಕ್ಕೊಂದು ಅಭಿಮುಖವಾಗಿರುವಂತೆ ಎರಡು ಬಸದಿಗಳು ಕಟ್ಟಲ್ಪಟ್ಟಿವೆ. ಅಲ್ಲಿಂದ ಸುಮಾರು 15 ಅಡಿ ಪಶ್ಚಿಮಕ್ಕೆ ತ್ರಿಕೂಟಾಚಲ ಬಸದಿಯಿದೆ. ಒಟ್ಟಾಗಿ ಈ ಸಮುಚ್ಚಯದಲ್ಲಿ ಐದು ಬಸದಿಗಳಿದ್ದು ಪಂಚಕೂಟ

ಬಸದಿಯೆಂದು ಕರೆಯಲ್ಪಡುತ್ತದೆ. ತ್ರಿಕೂಟಾಚಲ ಬಸದಿಯ ಮಧ್ಯದ ಆದಿನಾಥ ಬಸದಿಯ ಗರ್ಭಗೃಹದಲ್ಲಿ ಪಂಚಲೋಹದ ಚಕ್ರೇಶ್ವರಿ ಮೂರ್ತಿಯಿದೆ. ಆದರೆ ಗರ್ಭಗೃಹಕ್ಕೆ ಪ್ರವೇಶವಿಲ್ಲದ ಕಾರಣ ಮೂರ್ತಿಯ ಸ್ವರೂಪ ಸ್ಪಷ್ಟವಾಗಿ ನೋಡಲು ಸಾಧ್ಯವಿಲ್ಲ.

ತ್ರಿಕೂಟಾಚಲ ಬಲಬದಿಯ ಜಿನಾಲಯದಲ್ಲಿ ನೇಮಿನಾಥರ ಮೂರ್ತಿಯಿದ್ದು ಅದರ ಸುಕನಾಸಿಯಲ್ಲಿ ನೇಮಿನಾಥರ ಯಕ್ಷ ಯಕ್ಷಿಣಿಯರಾದ ಸರ್ವಾಣ್ಹ ಯಕ್ಷ ಮತ್ತು ಕೂಷ್ಮಾಂಡಿನಿ ಯಕ್ಷಿಯರ ಸುಂದರ ಮೂರ್ತಿಗಳಿವೆ. ಮಾವಿನ ಮರದ ಕೆಳಗೆ ಆಸೀನಳಾಗಿರುವ ಕೂಷ್ಮಾಂಡಿನಿ ಯಕ್ಷಿಯ ಎಡಬಲಗಳಲ್ಲಿ ಮಕ್ಕಳ ಕೆತ್ತನೆಯಿದೆ. ಏಳು ಹಂತಗಳ ಸುಂದರ ಕಲಾತ್ಮಕ ಕುಸುರಿಯನ್ನೊಳಗೊಂಡ ಕಿರೀಟದ ಮಧ್ಯಭಾಗದಲ್ಲಿ ಜಿನಬಿಂಬವಿದೆ. ಬಲಭಾಗದಲ್ಲಿರುವ ಸರ್ವಾಣ್ಹಯಕ್ಷನ ಪ್ರಭಾವಳಿ ವಿಶೇಷತೆಯಿಂದ ಕೂಡಿದ್ದು ಫಲಪುಷ್ಪಗಳ ಗೊಂಚಲುಗಳು, ಲತಾಬಳ್ಳಿ ಮನೋಹರವಾಗಿದೆ.[25]

ತ್ರಿಕೂಟಾಚಲದ ಮೂರು ಬಸದಿಗಳಿಗೂ ಹೊಂದಿಕೊಂಡಂತೆ ಒಂದೇ ನವರಂಗವಿದೆ. ಇದರ ಆಗ್ನೇಯ ದಿಕ್ಕಿನಲ್ಲಿ ಮೂರು ಯಕ್ಷರ ಬಿಂಬಗಳನ್ನೂ ಒಂದು ಯಕ್ಷಿಯ ಬಿಂಬವನ್ನೂ, ಪಶ್ಚಿಮಕ್ಕೆ ಮುಖಮಾಡಿರುವ ಮತ್ತೊಂದು ಯಕ್ಷಬಿಂಬವನ್ನು ಕಾಣಬಹುದು. ಇವೆಲ್ಲವೂ ಇಲ್ಲಿಯ ಮೂಲ ಮೂರ್ತಿಗಳಾಗಿರದೆ ಎಲ್ಲಿಂದಲೋ ತಂದು ಇಲ್ಲಿ ಸಂರಕ್ಷಿಸಿದ್ದಾರೆ. ಇವುಗಳ ಕಿರೀಟದಲ್ಲಿ ಯಾವುದೇ ಜಿನಬಿಂಬದ ಕೆತ್ತನೆಯಿಲ್ಲ. ಎಲ್ಲಾ ಮೂರ್ತಿಗಳ ಸ್ವರೂಪವೂ ಒಂದೇ ತೆರನಾಗಿದ್ದು ಒಂದು ಕೈಯಲ್ಲಿ ಬೀಜಪೂರವನ್ನು, ಮತ್ತೊಂದು ಕೈನಲ್ಲಿ ಕಮಲಪುಷ್ಪವನ್ನು ಹಿಡಿದಿವೆ. ಇಲ್ಲಿನ ಮಠಾಧೀಶರಾದ ಶ್ರೀ ಭಾನುಕೀರ್ತಿಗಳು ಇವುಗಳನ್ನು ಬ್ರಹ್ಮಕ್ಷಿಯರೆಂದೇ ಹೇಳುತ್ತಾರೆ.[26]

ಇಲ್ಲಿನ ಒಂದು ಶಿಲ್ಪವನ್ನು ಚಕ್ರೇಶ್ವರಿ ಯಕ್ಷಿಯೆಂದು ಗುರುತಿಸಬಹುದು. ಈ ಯಕ್ಷಿಯ ಶಿಲ್ಪವು ಸುಮಾರು 5 ಅಡಿ ಎತ್ತರವಿದ್ದು, ಉನ್ನತವಾದ ವಸ್ತ್ರವಿನ್ಯಾಸದೊಂದಿಗೆ ಆಭರಣ ಸಹಿತವಾಗಿ ಕೆತ್ತಲ್ಪಟ್ಟಿದೆ. ಭುಜದಲ್ಲಿ ಇಳಿಬಿದ್ದ ಗುಂಗುರು ಕೂದಲು, ಬಳೆಯಾಕಾರದ ಕಿವಿಯೋಲೆ, ದೊಡ್ಡ ದೊಡ್ಡ ರತ್ನಗಳನ್ನು ಅಳವಡಿಸಿದಂತಿರುವ ಕಂಠೀಹಾರ, ಕುಸುರೀ ಕೆಲಸದ ಸೊಂಟಪಟ್ಟಿ, ಕಾಲ್ಗೆಜ್ಜೆ ಹೀಗೆ ಅಪೂರ್ವ ಆಭರಣಗಳನ್ನು ಹೊಂದಿದ ಯಕ್ಷಿಮೂರ್ತಿ ಅಪೂರ್ವವೇ ಆಗಿದೆ. ಮೂರ್ತಿಯು ನಾಲ್ಕು ಕೈಗಳನ್ನು ಹೊಂದಿದ್ದು ಎರಡು ಕೈಗಳಲ್ಲಿ ಚಕ್ರಗಳು, ಒಂದು ಕೈನಲ್ಲಿ ಅಭಯಹಸ್ತ ಮತ್ತೊಂದು ಕೈನಲ್ಲಿ ಫಲವಿದೆ. ವಾಹನ ಮನುಷ್ಯರೂಪಿಯಾಗಿದ್ದು ಗರುಡ ರೆಕ್ಕೆಯಿದೆ.[27]

ಕಂಬದಹಳ್ಳಿಯಲ್ಲಿರುವ ಮತ್ತೊಂದು ಜಿನಮಂದಿರವೆಂದರೆ ಶಾಂತಿನಾಥ ಬಸದಿ. ಈ ಬಸದಿಯಲ್ಲಿಯೂ ಕುಳಿತಿರುವ ಯಕ್ಷನ ವಿಗ್ರಹವಿದ್ದು, ಅದು ವಿಘ್ನವಾಗಿದೆ. ಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖವಾಗಿರುವಂತೆ ಶಾಂತಿನಾಥ ತೀರ್ಥಂಕರರ ಯಕ್ಷ ಗರುಡ. ಇಲ್ಲಿರುವ ಯಕ್ಷನು ವರಾಹವಾಹನನಾಗಿರುವಂತೆ ಮತ್ತು ಆತನು ವರಹ ಮುಖವನ್ನು ಹೊಂದಿರುವಂತೆ ಕೆತ್ತಲ್ಪಟ್ಟಿದೆ. ಈತನು ಚತುರ್ಭುಜಗಳನ್ನು ಹೊಂದಿದ್ದು ಕೈಗಳಲ್ಲಿ ವಜ್ರ, ಚಕ್ರ, ಫಲಗಳನ್ನು ಹೊಂದಿದ್ದಾನೆ. ಇಲ್ಲಿರುವ ಯಕ್ಷನ ವಿಗ್ರಹವು ವೃಷಭವಾಹನನಾಗಿ ನಾಲ್ಕು ಕೈಗಳನ್ನು ಹೊಂದಿದ್ದಾನೆ. ಈತನ ಕೈಯಲ್ಲಿ ಅಕ್ಷಸೂತ್ರ ಫಲಗಳು, ಪರಶು ಮತ್ತೊಂದು ಕೈ ಮುರಿದಿರುವುದರಿಂದ ಆ ಹಸ್ತದಲ್ಲಿನ ಆಯುಧ ಅಥವಾ ಮುದ್ರೆ ಬಗ್ಗೆ ಹೇಳಲು ಸಾಧ್ಯವಿಲ್ಲ.[28] ಮೂರ್ತಿಯು ಸುಖಾಸೀನದಲ್ಲಿ ಕುಳಿತಿದ್ದು ಗುಂಗುರು ಕೂದಲನ್ನು ಹೊಂದಿದ್ದು ಅದು ಭುಜದವರೆಗೆ ಇಳಿಬಿದ್ದಿರುವಂತೆ ಕೆತ್ತಲಾಗಿದೆ. ಪಂಚಕೂಟ ಬಸದಿಯಲ್ಲಿರುವ ಯಕ್ಷಶಿಲ್ಪಗಳು ಹೊಂದಿರುವ ಎಲ್ಲ ಆಭರಣಗಳನ್ನು ಇವು ಹೊಂದಿವೆ. ಕಿರೀಟದಲ್ಲಿ ಯಾವುದೇ ಜಿನಮೂರ್ತಿಯಿಲ್ಲ.[29] ಸೀತಾರಾಮ ಜಾಗಿರ್‌ದಾರ್ ಅವರು ಈ ಶಿಲ್ಪವನ್ನು ಗೋಮುಖ ಯಕ್ಷನೆಂದು ಕರೆದಿದ್ದಾರೆ.[30]

6.4. ಚೋಳಸಂದ್ರದ ತ್ರಿಕೂಟ ಜಿನಾಲಯ

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿರುವ ಚೋಳಸಂದ್ರ ಎಂಬ ಐತಿಹಾಸಿಕ ಗ್ರಾಮದ ಉತ್ತರ ದಿಕ್ಕಿನಲ್ಲಿರುವ ತ್ರಿಕೂಟ ಜಿನಾಲಯ ಕ್ರಿ.ಶ. 1145ರಲ್ಲಿ ಸಂಸ್ಥಾಪಿತವಾಗಿದ್ದಿರಬಹುದು ಎಂದು ಇಲ್ಲಿನ ಶಾಸನದ ಆಧಾರದಿಂದ ಹೇಳಬಹುದು. ಈ ಕ್ಷೇತ್ರವು ಬೆಳ್ಳೂರಿನಿಂದ 6 ಕಿ.ಮಿ. ದೂರದಲ್ಲಿದ್ದು ಶಿಲ್ಪಾಭಿಮಾನಿಗಳ ವಿಶಿಷ್ಟ ಸೌಂದರ್ಯಾನುಭೂತಿಗಳಿಗೆ ಆಕಾರವಾಗಿದ್ದು ಇಕ್ಷು ಬೀಡಿನ ಜೈನದೇವಾಲಯಗಳ ಪರಂಪರೆಗೆ ಪರಮ ಸಾಕ್ಷಿಯಾಗಿದೆ. ಪ್ರಸ್ತುತ ಬಸದಿಯು ಪಾಳುಬಿದ್ದಿದ್ದು, ಮೂರು ಗರ್ಭಗೃಹಗಳನ್ನು ಒಳಗೊಂಡಿದ್ದು ಚಾವಣಿರಹಿತವಾಗಿದ್ದು, ಅನೇಕ ಕಲಾತ್ಮಕ ಕಂಬಗಳು ಹಾಗೂ ಸಿಂಹ ಪೀಠವನ್ನು ಹೊಂದಿದೆ.[31]

6.5. ಹಟ್ಟಣದ ಪಾರ್ಶ್ವನಾಥ ಬಸದಿ

ಹಟ್ಟಣ ಗ್ರಾಮದ ವೀರಭದ್ರ ದೇಗುಲ ಪ್ರಾಚೀನ ಕಾಲದಲ್ಲಿ 23ನೇ ಜೈನ ತೀರ್ಥಂಕರರಾದ ಪಾರ್ಶ್ವನಾಥರ ಬಸದಿಯಾಗಿತ್ತು. ಹೊಯ್ಸಳ ಶೈಲಿಯಲ್ಲಿ ರಚಿತವಾಗಿರುವ ಇದು ಗರ್ಭಗೃಹ, ಸುಕನಾಸಿ, ನವರಂಗಗಳೆಂಬ ಮೂರು ವಿಭಾಗಗಳನ್ನು ಒಳಗೊಂಡಿದೆ.[32] ಬಸದಿಯ ಪ್ರವೇಶದ್ವಾರದಲ್ಲಿರುವ ಶಿಲಾಶಾಸನದ ಆಧಾರವಾಗಿ ಹೇಳುವುದಾದರೆ ಇದು ಹೊಯ್ಸಳ ದೊರೆ

ದ್ವಿತೀಯ ಬಲ್ಲಾಳನ ಕಾಲದಲ್ಲಿ (ಕ್ರಿ.ಶ. 1781) ಸೋಮಶೆಟ್ಟಿ ಎಂಬ ವ್ಯಾಪಾರಿಯಿಂದ ಸಂಸ್ಥಾಪನೆಗೊಂಡಿತ್ತು ಎಂದು ಇತಿಹಾಸದ ಆಧಾರದಿಂದ ಹೇಳಬಹುದಾಗಿದೆ.[33]

6.6. ಬಸ್ತಿ ಹೊಸಕೋಟೆಯ ಜೈನ ಅವಶೇಷಗಳು

ಬಸ್ತಿ ಹೊಸಕೋಟೆ ಮಂಡ್ಯ ಜಿಲ್ಲೆಯ ತಾಲ್ಲೋಕು ಕೇಂದ್ರ ಕೃಷ್ಣರಾಜಪೇಟೆಯಿಂದ ಸು. 28 ಕಿ.ಮೀ. ದಕ್ಷಿಣದಲ್ಲಿ ಕೃಷ್ಣರಾಜ ಸಾಗರದ ಹಿನ್ನೀರಿಗೆ ಹೊಂದಿಕೊಂಡಂತಿದೆ. ಮಾವಿನಕೆರೆಗೆ ಎರಡು ಕಿ.ಮೀ. ದೂರದಲ್ಲಿ ಕಣಿವೆ ಪ್ರದೇಶದಿಂದ ಕೂಡಿದೆ. ಬಸ್ತಿಯಲ್ಲಿ ಹಿಂದೆ ಅಧಿಕ ಸಂಖ್ಯೆಯಲ್ಲಿ ಜೈನರಿದ್ದರು ಈ ಗ್ರಾಮಕ್ಕೆ ಹೊಂದಿಕೊಂಡಂತೆ ಹಿಂದೆ ಬಸ್ತಿ ಅಥವಾ ಬಸ್ತಿಹೊಸಕೋಟೆ ಇದ್ದಿತ್ತೆಂದು ಹೇಳಬಹುದು. ಬಸ್ತಿಹೊಸಕೋಟೆ ಬಳಿಯ ಕೃಷ್ಣರಾಜ ಸಾಗರದ ಹಿನ್ನೀರಿನ ಗುಡ್ಡದಲ್ಲಿ ಗಂಗರಸರ ಹಾಗೂ ಹೊಯ್ಸಳರ ಕಾಲಗಳ ಗೊಮ್ಮಟನ ವಿಗ್ರಹ, ತೀರ್ಥಂಕರರ ಮೂರ್ತಿ ಶಿಲ್ಪಗಳು, ಜೈನ ಬಸದಿಯ ಅವಶೇಷಗಳು ಹಾಗೂ ಸುಂದರ ಕೆತ್ತನೆಯಿಂದ ಕೂಡಿರುವ ಜೈನ ಅವಶೇಷಗಳ ಕುರುಹುಗಳನ್ನು ಕಾಣಬಹುದು. ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ತಾಲ್ಲೂಕಿನ ಬಸ್ತಿಹೊಸ ಕೋಟೆಯು ಹಿಂದೆ ಜೈನ ಧರ್ಮೀಯರ ಪ್ರಮುಖ ಕೇಂದ್ರವಾಗಿತ್ತೆಂದು ಸೂಚಿಸುತ್ತದೆ. ಕಣ್ಣಾಂಬಾಡಿ (ಕನ್ನಾಂಬಾಂಡಿ) ಅಣ್ಣೆಕಟ್ಟೆಯ ನಿರ್ಮಾಣದಿಂದ ಹಿನ್ನೀರಿನಲ್ಲಿ ಮುಳುಗಡೆಯಾಗುತ್ತಿದ್ದ ಗೊಮ್ಮಟನ ಪ್ರತಿಮೆಯನ್ನು ಇತರೆ ತೀರ್ಥಂಕರರ ಶಿಲ್ಪಾಕೃತಿಗಳನ್ನು ಬಸದಿಯ ಸುಂದರ ಕೆತ್ತನೆಯ ಅವಶೇಷಗಳನ್ನು ಕೃಷ್ಣರಾಜ ಸಾಗರದ ಹಿನ್ನೀರಿನಿಂದ ರಕ್ಷಿಸಲು, ಹಿನ್ನೀರಿನ ಗುಡ್ಡಕ್ಕೆ ತಂದು ಸಂರಕ್ಷಿಸಲಾಗಿದೆ ಎಂಬುದು ಕೆಲವರ ಅಭಿಪ್ರಾಯವಾಗಿದೆ.

ಬಸ್ತಿಹೊಸಕೋಟೆಗೆ ಕ್ಷೇತ್ರ ಕಾರ್ಯ ಕೈಗೊಂಡಾಗ ಇಂದು ಅಲ್ಲಿ ಕಂಡು ಬಂದ ಜೈನ ಬಸದಿಗಳು, ಗೊಮ್ಮಟನ ವಿಗ್ರಹ ಹಾಗೂ ಇತರೆ ಅವಶೇಷಗಳು ನಿರ್ಮಾಣಗೊಂಡಿರುವ ಶೈಲಿಯ ಹಿನ್ನೆಲೆಯಲ್ಲಿ, ಹೊಯ್ಸಳರ ಕಾಲದ ಎರಡು ಶಾಸನಗಳು, ಹಾಗು ಸ್ಥಳೀಯ ಜನತೆಯ ಮೌಖಿಕ ಆಧಾರಗಳನ್ನು ಬಳಸಿಕೊಂಡು, ಬಸ್ತಿ ಹೊಸಕೋಟೆಯ ಜೈನ ಬಸದಿಗಳು, ಗೊಮ್ಮಟನ ವಿಗ್ರಹ ಹಾಗೂ ಇತರೆ ಅವಶೇಷಗಳು ಗಂಗರ ಮತ್ತು ಹೊಯ್ಸಳರ ಕಾಲಕ್ಕೆ ಸೇರಿದ್ದವೆಂದು ಹೇಳಬಹುದು.

6.6.1. ಬಸ್ತಿ ಹೊಸಕೋಟೆಯ ಬಸದಿಗಳು:

ಬಸ್ತಿಕೊಟೆಯಲ್ಲಿ ಇರುವ ಜೈನ ಬಸದಿಗಳ ಸ್ಥಿತಿಗಳನ್ನು ಕೆಳಗಿನಂತೆ ಅವಲೋಕಿಸಬಹುದು. ಗೊಮ್ಮಟನ ಮೂರ್ತಿಯ ಹಿಂಭಾಗ ನಾಲ್ಕು ಸ್ತಂಭಗಳಿಂದ ಕೂಡಿರುವ ಬಸದಿ

ಶಿಥಿಲಾವಸ್ಥೆಯಲ್ಲಿರುವುದು ಕಂಡುಬರುತ್ತದೆ. ಈ ಬಸದಿಯ ಗೋಪುರದ ಸ್ತೂಪಿ ಭಾಗ ಕೆಳಗಡೆ ಬಿದ್ದಿದೆ. ದಕ್ಷಿಣ ಭಾಗದ ಸ್ತಂಭಗಳು ಸಾಮಾನ್ಯ ಶೈಲಿಯಲ್ಲಿವೆ. ಮೇಲ್ಭಾಗದ ತೊಲೆಯ ಛಾವಣಿಯಲ್ಲಿ ವಿವಿಧ ಮಾದರಿಯ ಮೃದಂಗ, ತಾಳ, ಕೊಳಲು, ಶಂಖಗಳನ್ನು ನುಡಿಸುತ್ತಿರುವ ವಿವಿಧ ನೃತ್ಯ-ಭಂಗಿಯಲ್ಲಿರುವ ಶಿಲ್ಪಕೃತಿಗಳ ಸಾಲು ನೋಡುಗರನ್ನು ಆಕರ್ಷಿಸುತ್ತವೆ.

ಗೊಮ್ಮಟನ ಮೂರ್ತಿಯ ಉತ್ತರ ಭಾಗದಲ್ಲಿ ಪೂರ್ವಕ್ಕೆ ಪ್ರವೇಶದ್ವಾರವಿರುವ ಆರು ಸ್ತಂಭಗಳಿಂದ ಕೂಡಿರುವ ಬಸದಿಯು ಸಹ ಶಿಥಿಲಾವಸ್ಥೆಯಲ್ಲಿರುವುದು ಕಂಡುಬರುತ್ತದೆ. ಈ ಬಸದಿಯ ತೊಲೆಯಲ್ಲಿರುವ ವೈವಿಧ್ಯಮಯವಾದ ಶಿಲ್ಪಕಲಾ ಕೃತಿಗಳು ನೋಡುಗರನ್ನು ಆಕರ್ಷಿಸುತ್ತವೆ. ಗೊಮ್ಮಟ ಮೂರ್ತಿಯ ಉತ್ತರ ಭಾಗದ ಕೃಷ್ಣರಾಜ ಸಾಗರದ ಹಿನ್ನೀರಿನಲ್ಲಿ ಆರು ಸ್ತಂಭಗಳಿಂದ ಕೂಡಿರುವ ಉತ್ತರಕ್ಕೆ ಪ್ರವೇಶ ದ್ವಾರವಿರುವ ಬಸದಿಯು ಸಹ ಶಿಥಿಲಾವಸ್ಥೆಯಲ್ಲಿದೆ.

ಈ ಬಸದಿಯು ಕೃಷ್ಣರಾಜ ಸಾಗರದ ಹಿನ್ನೀರಿನಿಂದ ಆವೃತವಾಗಿದ್ದರಿಂದ ಬಸದಿಯ ಬಳಿ ಹೋಗಲು ಸಾಧ್ಯವಾಗಲಿಲ್ಲ. ಇದು ಸಹ ಸಾಮಾನ್ಯ ಶೈಲಿಯಲ್ಲಿ ನಿರ್ಮಾಣವಾಗಿದೆ. ಬಹುಶಃ ಈ ಬಸದಿ ಹೊಯ್ಸಳರ ದಂಡನಾಯಕ ಪುಣಿಸಮಯ್ಯನ ಕಾಲದಲ್ಲಿ ನಿರ್ಮಾಣ ವಾಗಿರಬಹುದು. ಮತ್ತೆ ಕೆಲವು ಬಸದಿಗಳಿರುವುದಕ್ಕೆ ಸಂಬಂಧಿಸಿದ ಕುರುಹುಗಳು ಕೃಷ್ಣರಾಜ ಸಾಗರದ ಹಿನ್ನೀರಿನ ದಡದಲ್ಲಿ ಬಿದ್ದಿರುವ ಮೇಲ್ಛಾವಣಿಯ ಚಪ್ಪಡಿಗಳ ಕುರುಹುಗಳಿಂದ, ಅಲ್ಲಲ್ಲಿ ಬಿದ್ದಿರುವ ಸ್ತಂಭಗಳು ಹಾಗೂ ತರಂಗ (ಸ್ತಂಭ) ಭೋದಿಗೆಗಳಿಂದ ತಿಳಿದು ಬರುತ್ತದೆ. ಒಟ್ಟಾರೆ ಈ ಬಸದಿಗಳ ನಿರ್ಮಾಣ ಶೈಲಿ, ಸ್ತಂಭಗಳು ತರಂಗ (ಸ್ತಂಭ) ಭೋದಿಗೆಗಳು, ಸ್ತೂಪಿಗಳ ನಿರ್ಮಾಣ ಶೈಲಿಯನ್ನು ನೋಡಿದರೆ ಇವು ಗಂಗರ ಕಾಲದಲ್ಲಿ ನಿರ್ಮಾರ್ಣವಾಗಿವೆಯೆಂದು ಡಾ. ಪಿ.ಎನ್. ನರಸಿಂಹಮೂರ್ತಿರವರು ಅಭಿಪ್ರಾಯ ಪಡುತ್ತಾರೆ.[34] ಆದರೆ ಕೃಷ್ಣರಾಜಪೇಟೆ ತಾಲ್ಲೂಕಿನ ಬಸ್ತಿ ಎಂಬ ಗ್ರಾಮದ ಹೊಯ್ಸಳರ ಕಾಲದ ಎರಡು ಶಾಸನಗಳು ಬಸ್ತಿಹೊಸಕೋಟೆಯ ಬಸದಿಯ ಬಗ್ಗೆ ಮಾಹಿತಿ ನೀಡುತ್ತವೆ. ಈ ಶಾಸನಗಳ ಹಿನ್ನೆಲೆಯಲ್ಲಿ ನೋಡಿದಾಗ ಕೆಲವು ಬಸದಿಗಳು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿರುವುದಕ್ಕೆ ನಿದರ್ಶನಗಳಾಗಿವೆ. ಕೃಷ್ಣರಾಜಪೇಟೆ ತಾಲ್ಲೂಕಿನ ಬಸ್ತಿಯ 107ನೇ ಶಾಸನ ಬಸದಿಯ ಉತ್ತರ ದಿಕ್ಕಿನಲ್ಲಿರುವ ಪಾಳು ಮಂಟಪದ ಪೂರ್ವ ಬಾಗಿಲ ತೊಲೆಯಲ್ಲಿರುವ ಸ್ವಸ್ತಿ ಶ್ರೀ ಮನ್ಮಹಾಮಂಡಲೇಶ್ವರ ವಿಷ್ಣುವರ್ಧನ ಹೊಯ್ಸಳ ದೇವರು .ತತ್ಪಾದ ಪದ್ಮೋಪಗೀವ ಶ್ರೀ ಮನ್ಮಹಾ ಪ್ರಧಾನಂ ದಣ್ಣನಾಯಕ ಪುಣಿಸಮಯ್ಯ ಬಸದಿಯೊಂದನ್ನು ನಿರ್ಮಿಸಿ ಮೊದೂರು ನಾಡಿನ ಮಾಣಿಕ್ಯದಿಡಲೂರು ಮತ್ತು ಮಾವಿನ ಕೆರೆಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ.[35] ಬಹುಶಃ ಕೃಷ್ಣರಾಜ ಸಾಗರದ ಹಿನ್ನೀರಿನಿಂದ ಆವೃತವಾಗಿರುವ

ಬಸದಿಯು ಈತನಿಂದ ನಿರ್ಮಿಸಲ್ಪಟ್ಟ ಬಸದಿಯಾಗಿರಬಹುದು. ಗುರುವಿನ ಆಣತಿಯಂತೆ ಪುಣಿಸಮಯ್ಯ ಬಸ್ತಿ ಹೊಸಕೋಟೆಯಲ್ಲಿ ವಿಷ್ಣುವರ್ಧನ ಹೊಯ್ಸಳ ಜಿನಾಲಯದ ಮೂಲ ಸ್ಥಾನ ಬಸದಿಯನ್ನು ಮತ್ತೊಂದು ಚಾಮರಾಜನಗರದಲ್ಲಿನ ಪಾರ್ಶ್ವನಾಥ ಬಸದಿ) ಅಲ್ಲಿ ಅವನ ಪತ್ನಿ ದಂಡನಾಯಕಿತ್ತಿ ಜಕ್ಕಿಯಬ್ಬೆ ಒಂದು ಶಿಲಾ ಬಸದಿಯನ್ನು ನಿರ್ಮಿಸಿದಳು ಎಂದು ತಿಳಿಯಲಾಗಿದೆ.[36]

ಕೃಷ್ಣರಾಜಪೇಟೆ ತಾಲ್ಲೂಕಿನ 106ನೇ ಶಾಸನ ಜಿನದೇವರ ಬಸದಿಯ ಮುಂದಿರುವ ಮಾನಸ್ತಂಭದ ಮೇಲಿರುವ ಶಾಸನದ ವಿವರ 1ನೇ ನರಸಿಂಹನ ಕಾಲಕ್ಕೆ ಸಂಬಂಧಿಸಿದಂತೆ ಕ್ರಿ.ಶ. 1165ರ ಶಾಸನ ಶ್ರೀಮನ್ಮಹಾಪ್ರಧಾನಂ ಹೆರ್ಗಡೆ ಶಿವರಾಜನ ನಂಬಿಕಸ್ತ ಅಧಿಕಾರಿ ಸೋಮಯ್ಯನು ಮಾಣಿಕ್ಯವೊಳಲಿನ ಹೊಯ್ಸಳ ಜಿನಾಲಯಕ್ಕೆ ಪಾರ್ಥಿವ ಸಂವತ್ಸರದ ಆಷಾಡ ಶುದ್ಧ ಪಾಡ್ಯ ಆದಿವಾರದಂದು ಮಾಣಿಕ್ಯವೊಳಲಿನಲ್ಲಿ ಗದ್ದೆ ಹಾಗೂ ಮಗ್ಗದೆರೆಗಳನ್ನ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ.[37] ಈ ಶಾಸನಗಳಿಂದ ದಿನನಿತ್ಯದ ಪೂಜೆಗಾಗಿ ಪುಣಿಸಮಯ್ಯ ಹಾಗೂ ಸೋಮಯ್ಯ ಬಸದಿಹಳ್ಳಿ, ಮಾಣಿಕ್ಯದೊಡಲೂರು, ಮಾವಿನಕೆರೆ ಗ್ರಾಮಗಳನ್ನ ದತ್ತಿ ಬಿಟ್ಟಿರುವುದನ್ನೂ ಮತ್ತು ಸೋಮಯ್ಯನು ಈ ಬಸದಿಗಳ ನಿರ್ವಹಣೆಗೆ ಧನಸಹಾಯ ಮಾಡಿರುವುದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಉಲ್ಲೇಖಿಸಿರುವ ಮಾನಸ್ತಂಭ ಕೃಷ್ಣರಾಜ ಸಾಗರದ ಹಿನ್ನೀರಿನಲ್ಲಿ ಮುಳುಗಡೆಯಾಗಿರಬಹುದು. ಮೇಲಿನ ಶಾಸನಗಳನ್ನು ಅವಲೋಕಿಸಿದಾಗ ಕ್ರಿ.ಶ 11 ನೇ ಶತಮಾನದಲ್ಲಿ ಬಸ್ತಿಹೊಸಕೋಟೆಗೆ ಹಿಂದೆ 'ಮಾಣಿಕ್ಯದೊಡಲೂರು', 'ಮಾಣಿಕ್ಯವೊಳಲು' ಎಂಬ ಹೆಸರುಗಳಿಂದ ಕರೆಯುತ್ತಿದ್ದರೆಂದು ತಿಳಿದುಬರುತ್ತದೆ.

6.6.2. ಬಸ್ತಿ ಹೊಸಕೋಟೆಯ ಗೊಮ್ಮಟನ ವಿಗ್ರಹ :

ಗೊಮ್ಮಟ ಮೂರ್ತಿಯಿರುವುದು ಮುಳುಗಡೆಯಾಗಿರುವ ಬಸ್ತಿಯ ಕೃಷ್ಣರಾಜ ಸಾಗರದ ಹಿನ್ನೀರಿನ ಗುಡ್ಡದಲ್ಲಿದೆ. ಬಸ್ತಿಯ ಅವಶೇಷಗಳು ಹಾಗೂ ಗೊಮ್ಮಟಮೂರ್ತಿ ಮಾತ್ರ ಹಳೆಯ ಕುರುಹಾಗಿ ಇಂದಿಗೂ ಇವೆ. ಜೈನ ಸಂಪ್ರದಾಯದಂತೆ ಗೊಮ್ಮಟನ ವಿಗ್ರಹವನ್ನು ಕಾಯೋತ್ಸರ್ಗ ಶೈಲಿಯಲ್ಲಿ (ಸ್ಥಾನಿಕ\ಖಡ್ಗಾಸನ) ನಿರ್ಮಿಸಲಾಗಿದೆ. ಗೋಮ್ಮಟ ಮೂರ್ತಿಯ ಎತ್ತರಕ್ಕೂ ಕಮಾನಿನಾಕಾರದ ಗೂಡಿನಂತಹ ಗುಡಿಯನ್ನು ರಕ್ಷಣೆಗೆ ಕಟ್ಟಲಾಗಿದೆ. ಈ ಗೂಡಿನೊಳಗೆ ಸುಮಾರು ಹದಿನೆಂಟು ಅಡಿ ಎತ್ತರದ ಸುಂದರವಾದ ಗೊಮ್ಮಟನ ವಿಗ್ರಹ ಪ್ರಮುಖವಾದದ್ದು. ಇಂದಿಗೂ ಗೊಮ್ಮಟಮೂರ್ತಿ ಸುಸ್ಥಿತಿಯಲ್ಲಿದೆ. ಗೊಮ್ಮಟ ಮೂರ್ತಿಯ ಮುಖ ಮುದ್ರೆಯಲ್ಲಿ ಯೋಗಿಯ ಲಕ್ಷಣಗಳಿವೆ. ತಲೆಗೂದಲು ಗುಂಗುರು ಕೂದಲಿನಿಂದ ಕೂಡಿದೆ. ಪಾದದಿಂದ

ಮಂಡಿಯವರೆಗೆ ಲತೆ ಬಳ್ಳಿಗಳು ಹಬ್ಬಿರುವಂತೆ ಸುಂದರವಾಗಿ ಕೆತ್ತಿ ಅಲಂಕರಿಸಲಾಗಿದೆ. ಆದರೆ ಸೂಕ್ಷ್ಮತೆಯಲ್ಲಿ ಶ್ರವಣಬೆಳಗೊಳದ ಬಾಹುಬಲಿ ಶಿಲ್ಪದಲ್ಲಿರುವ ಪ್ರಶಾಂತ ಭಾವವನ್ನಾಗಲೀ, ಪಕ್ಕದ ಹುತ್ತಗಳ ಮೇಲಿನಿಂದ ಬಳ್ಳಿಗಳು ಹಬ್ಬಿ ತೋಳಿನವರೆಗೆ ಹಬ್ಬಿರುವುದನ್ನಾಗಲಿ, ಹುತ್ತದಿಂದ ಕುಕ್ಕಟ ಸರ್ಪಗಳು ಹೊರ ಬಂದಿರುವಂತಾಗಲಿ, ವಿಶಾಲವಾದ ಎದೆ, ಬಾಲಮುಗ್ಧ ನಗೆ, ಸಣ್ಣ ನಡುವನ್ನು ಹೊಂದಿರುವ ಪೂರ್ಣ ಶಿಲ್ಪವಾಗಿ ಈ ಗೊಮ್ಮಟ ಮೂರ್ತಿಯನ್ನು ಶಿಲ್ಪಿಗಳು ಕೆತ್ತಿಲ್ಲ ಆದ್ದರಿಂದ ಶ್ರವಣಬೆಳಗೊಳದ ಬಾಹುಬಲಿ ಶಿಲ್ಪಕ್ಕಿಂತ ಮೊದಲೇ ಈ ಮೂರ್ತಿ ಗಂಗರಸರ ಕಾಲದಲ್ಲಿ ನಿರ್ಮಾಣವಾಗಿದೆಯೆಂದು ಡಾ. ಪಿ.ಎನ್. ನರಸಿಂಹಮೂರ್ತಿ ಅಭಿಪ್ರಾಯಪಡುತ್ತಾರೆ.[38] ಆದರೆ ಅನಂತರಾಮು ರವರು ತಮ್ಮ ಸಕ್ಕರೆ ಸೀಮೆ ಕೃತಿಯಲ್ಲಿ ವಿಷ್ಣುವರ್ಧನನ ಮಂತ್ರಿ ಪುಣಿಸಮಯ್ಯ ಬಸದಿಯೊಂದನ್ನು ನಿರ್ಮಿಸಿರಬಹುದೆಂದು ತಿಳಿದುಬರುತ್ತದೆ ಎಂದು ಉಲ್ಲೇಖಿಸಿದ್ದಾರೆ. ಗೊಮ್ಮಟನ ಎತ್ತರಕ್ಕೂ ಕಮಾನಿನಾಕಾರದ ಗೂಡಿನಂತಹ ಗುಡಿಯನ್ನು ಇತ್ತೀಚೆಗೆ ಜೈನ ಭಕ್ತರು ನಿರ್ಮಿಸಿರಬಹುದು.

6.6.3. ಬಸ್ತಿ ಹೊಸಕೋಟೆಯ ತೀರ್ಥಂಕರರ ಶಿಲ್ಪಕೃತಿಗಳು :

ಜೈನ ಭಕ್ತಾದಿಗಳು ಮೂಲ ಗೊಮ್ಮಟನ ಮೂರ್ತಿಯ ಎರಡು ಬದಿಯಲ್ಲಿ ಇಟ್ಟಿರುವ ತೀರ್ಥಂಕರರ ಸುಂದರವಾದ ಶಿಲ್ಪಕೃತಿಗಳು ಗಮನ ಸೆಳೆದವು. ಇವುಗಳಲ್ಲಿ ಕೆಲವು ಗಂಗರ ಕಾಲಕ್ಕೆ ಸಂಬಂಧಿಸಿದ್ದಿರಬಹುದು. ಒಂದು ಸುಂದರವಾದ ತೀರ್ಥಂಕರನ ಶಿಲ್ಪಕೃತಿಯೆಂದು ತಿಳಿದುಬರುತ್ತದೆ.

ಜೈನ ಧರ್ಮದಲ್ಲಿ ಯಕ್ಷ-ಯಕ್ಷಿಣಿಯರ ಆರಾಧನೆ ರೂಢಿಯಲ್ಲಿತ್ತೆಂಬುದನ್ನು ಮಹಾವೀರನ ಮೂರ್ತಿ ಶಿಲ್ಪದಲ್ಲಿರುವ ಸುಂದರವಾದ ಕೆತ್ತನೆಯಿಂದ ಕೂಡಿರುವ ಯಕ್ಷರ ಶಿಲ್ಪಕೃತಿಗಳಿಂದ ತಿಳಿದುಕೊಳ್ಳಬಹುದು. ತೀರ್ಥಂಕರರಿಗೆ ಸಲ್ಲಬೇಕಾದ ಪೂಜೆಯ ಜೊತೆ ಅವನ ಪಕ್ಕದಲ್ಲಿರುತ್ತಿದ್ದ ಯಕ್ಷ-ಯಕ್ಷಿಣಿಯರಿಗೂ ಪೂಜೆ ಸಲ್ಲಿಸಲಾಗುತ್ತಿತ್ತು. ಇದನ್ನೆ ಡಾ. ದೇಸಾಯಿರವರು 'ಯಕ್ಷ-ಆರಾಧನಾ' ಎಂದು ಕರೆದಿದ್ದಾರೆ. ಇದಲ್ಲದೆ ನಾಲ್ಕು ಜೈನ ತೀರ್ಥಂಕರರ ಶಿಲ್ಪಕೃತಿಗಳು ಕಂಡುಬರುತ್ತವೆ. ಇವುಗಳಲ್ಲಿ ಒಂದು ತೀರ್ಥಂಕರರ ಶಿಲ್ಪಕೃತಿಯ ಶಿರದ ಭಾಗ ನಾಶವಾಗಿದ್ದರೆ ಕಾಯೋತ್ಸರ್ಗ ಹಾಗೂ ಪದಾಸನಶೈಲಿಯ ತೀರ್ಥಂಕರರ ಶಿಲ್ಪಗಳು ಮುಕ್ಕಾಗಿರುವುದನ್ನು ಕಾಣಬಹುದಾಗಿದೆ. ಆದರೆ ಈ ತೀರ್ಥಂಕರರ ಶಿಲ್ಪಕೃತಿಗಳು ಯಾವ ತೀರ್ಥಂಕರರಿಗೆ ಸಂಬಂಧಿಸಿದ್ದವು ಎಂಬುದನ್ನು ತಿಳಿಯಲು ಈ ತೀರ್ಥಂಕರರ ತಳಭಾಗದಲ್ಲಿ ಯಾವುದೇ ಚಿಹ್ನೆ ಕಂಡು ಬರುವುದಿಲ್ಲ. ಆದರೂ ಈ ಶಿಲ್ಪಕೃತಿಗಳನ್ನು ಆದಿನಾಥ, ಶಾಂತಿನಾಥ, ನೇಮಿನಾಥ

ತೀರ್ಥಂಕರರಿಗೆ ಸಂಬಂಧಿಧ್ದಿರಬಹುದು. ಏಕೆಂದರೆ 24 ಮಂದಿ ತೀರ್ಥಂಕರರ ಶಿಲ್ಪ ವಿಶೇಷತೆಯ ಲಕ್ಷಣಗಳಲ್ಲಿ ವ್ಯತ್ಯಾಸ ಕಂಡುಬರದೆ ಒಂದೇ ತೆರಾನಾಗಿ ಕಂಡು ಬರುವುದರಿಂದ ತೀರ್ಥಂಕರರನ್ನು ಗುರ್ತಿಸುವಾಗ ಪೀಠಭಾಗದಲ್ಲಿರುವ ಲಾಂಛನದಿಂದ ಗುರ್ತಿಸಬೇಕಾಗುತ್ತದೆ. ಅಲ್ಲದೆ ಜೈನ ಪರಂಪರೆಯ 24 ಮಂದಿ ತೀರ್ಥಂಕರರಲ್ಲಿ 21 ಮಂದಿ ತೀರ್ಥಂಕರರು ಕಾಯೋತ್ಸರ್ಗ ಭಂಗಿಯಲ್ಲಿ (ಸ್ಥಾನಿಕ\ಖಡ್ಗಾಸನ) ನಿರ್ಮಾಣವಾಗಿದ್ದರೆ ಉಳಿದ ಮೂವರು ತೀರ್ಥಂಕರರಾದ ಆದಿನಾಥ, ನೇಮಿನಾಥ, ಮಹಾವೀರ ತೀರ್ಥಂಕರರು ಪದ್ಮಾಸನ ಮಾದರಿಯಲ್ಲಿ ಧ್ಯಾನಾಸಕ್ತರಾಗಿರುವಂತೆ ನಿರ್ಮಿಸಿರುವುದರಿಂದ ಮೇಲಿನಂತೆ ವಿಶ್ಲೇಷಿಸಬಹುದು. ಕ್ರಿ.ಶ. 1147 ರಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ಮಹಾಪ್ರಧಾನ ದಂಡನಾಯಕ ಪುಣಿಸಮಯ್ಯನು ಜೈನ ತೀರ್ಥಂಕರರಾದ ಆದಿನಾಥ, ಶಾಂತಿನಾಥ, ನೇಮಿನಾಥ ಹಾಗೂ ಮಹಾವೀರರ ಸುಂದರವಾದ ಶಿಲ್ಪಾಕೃತಿಗಳನ್ನು ಬಳಪದ ಕಲ್ಲಿನಿಂದ ನಿರ್ಮಿಸಿರುವನೆಂದು ಮೂಲ ಗೊಮ್ಮಟನ ಮೂರ್ತಿಯ ಒಳಭಾಗದಲ್ಲಿನ ಫಲಕದಿಂದ ತಿಳಿದು ಬರುತ್ತದೆ.[39] ಭಾರಿ ಗಾತ್ರದ ಯಕ್ಷ-ಯಕ್ಷಿಣಿಯರ ಸುಂದರವಾದ ಶಿಲ್ಪಕೃತಿಗಳು ಬಹು ಆಕರ್ಷಣೀಯವಾಗಿದೆ. ಸುಂದರ ಕೆತ್ತನೆಯಿಂದ ಕೂಡಿರುವ ಹಂಸಗಳ ಹಾಗೂ ಇತರೆ ಶಿಲ್ಪಕೃತಿಗಳಿಂದ ಕೂಡಿರುವ ಪ್ರವೇಶದ್ವಾರದ ತೊಲೆ, ಸುಂದರವಾಗಿ ಕೆತ್ತಲ್ಪಟ್ಟಿರುವ ಅಷ್ಟದಿಕ್ಪಾಲಕರ ಶಿಲ್ಪಕೃತಿಗಳನ್ನೊಳಗೊಂಡ ಮೇಲ್ಛಾವಣಿಯ ಭಾಗದ ಚಪ್ಪಡಿಯ ಭಾಗಗಳನ್ನು ಮೂಲಗೊಮ್ಮಟ ಮೂರ್ತಿಯ ಬದಿಯಲ್ಲಿ ಸಂರಕ್ಷಿಸಿಟ್ಟಿರುವುದನ್ನು ಕಾಣಬಹುದು.

ಇವುಗಳಲ್ಲದೆ, ಸ್ತಂಭಗಳು, ವಿವಿಧ ಶಿಲ್ಪಾಕೃತಿಗಳು, ತರಂಗ ಬೋಧಿಗೆಗಳು, ಸ್ತಂಭ ಬೋಧಿಗೆಗಳು, ಇಟ್ಟಿಗೆಗಳು' ಎಲ್ಲೆಂದರಲ್ಲಿ ಬಿದ್ದಿರುವುದರಿಂದ ಒಂದು ರೀತಿ "ಬಯಲು ವಸ್ತು ಸಂಗ್ರಹಾಲಯದಂತೆ" ಗೋಚರಿಸುತ್ತದೆ. ಜೈನ ಭಕ್ತಾದಿಗಳೂ ಇಲ್ಲಿನ ಸ್ತಂಭಗಳಿಗೆ ಬಣ್ಣ ಬಳಿದು ವಿರೂಪಗೊಳಿಸುವುದರ ಮೂಲಕ ಸ್ತಂಭಗಳ ಮೂಲ ಸ್ವರೂಪಕ್ಕೆ ಧಕ್ಕೆಯನ್ನುಂಟು ಮಾಡಲಾಗಿದೆ.

6.7. ಶ್ರೀರಂಗಪಟ್ಟಣದ ಆದಿನಾಥ ಬಸದಿ.

ಹಿಂದೂ ಧರ್ಮೀಯರಿಗೆ ಶ್ರೀರಂಗಪಟ್ಟಣದಲ್ಲಿ ಆದಿರಂಗ ದೇಗುಲವಿರುವಂತೆ, ಜೈನ ಧರ್ಮೀಯರಿಗೆ ಶ್ರೀ ಆದೀಶ್ವರ ಬಸದಿ ಇದೆ. ಜೈನ ಧರ್ಮದ 24 ತೀರ್ಥಂಕರರಲ್ಲಿ ಬರುವ ಪ್ರಥಮ ತಿರ್ಥಂಕರರೇ ಶ್ರೀ ಆದಿನಾಥ ತೀರ್ಥಂಕರು. ವೃಷಭದೇವನೆಂತಲೂ ಕರೆಯಲಾಗುತ್ತದೆ. ನಾಕಂಡ ಈ ಅಪೂರ್ವ ಬಸದಿಯು ಸುವ್ಯವಸ್ಥೆಯಿಂದ ಕೂಡಿದ್ದು, ಸರ್ವಧರ್ಮೀಯರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ. ಈ ಬಸದಿಯ ಇತಿಹಾಸವೇ ಅತ್ಯಂತ ರೋಚಕಕಾರಿಯಾದದ್ದು ಕಾರಣ ಇಲ್ಲಿರುವ ಜೈನ ಬಸದಿಯ ವಿಗ್ರಹಗಳು ಸಂಸ್ಥಾಪಿತ ಮೂಲ ವಿಗ್ರಹಗಳಲ್ಲ. ಗರ್ಭಗೃಹ

ಬಿಟ್ಟು ಬಸದಿಯು ದೀರ್ಘ ಚತುರಸ್ರಾಕಾರದಲ್ಲಿದೆ. ಇಲ್ಲಿಯ ಕಂಬಗಳೆಲ್ಲವನ್ನು ಚೌಕಾಕಾರದಲ್ಲಿ ಕಡೆಯಲಾಗಿದ್ದು, ಒರಟುತನ ಪ್ರದರ್ಶಿಸಿದೆ. ಕಂಬಗಳ ಮೇಲೆ ಶಿಲ್ಪ ಚಿತ್ರಗಳಿಲ್ಲ, ಇನ್ನು ಈ ಬಸದಿಯ ನಿರ್ಮಾಣ ಕಾಲಕ್ಕೆ ಶಾಸನಾಧಾರವಿಲ್ಲ. 12-13 ನೇ ಶತಮಾನದಲ್ಲಿ ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿರ್ಮಾಣದ ಬಸದಿಗಳ ಬಗ್ಗೆ ಉಲ್ಲೇಖವಿದೆ. ಅಲ್ಲೆಲ್ಲ ಹೊಯ್ಸಳ ಶಿಲ್ಪಶೈಲಿ ಕಾಣಬಹುದು. ಆದರೆ ನಾನು ದರ್ಶಿಸಿದ ಈ ಬಸದಿಯಲ್ಲಿ ಹೊಯ್ಸಳ ಶಿಲ್ಪದ ಲಕ್ಷಣಗಳು ಕಾಣಬರಲಿಲ್ಲ. ವಿಗ್ರಹಗಳ ತಳ ಭಾಗದಲ್ಲಿ ಶಿಲ್ಪದ ಹೆಸರಾಗಲಿ, ಬಸದಿಯ ನಿರ್ಮಾತೃಗಳ ಹೆಸರಾಗಲಿ ಕಾಣಬರಲಿಲ್ಲ. ಜೈನ ಐತಿಹ್ಯದಂತೆ ಶ್ರೀರಂಗಪಟ್ಟಣದ ಸುತ್ತ ಇದ್ದ 18 ಗ್ರಾಮಗಳಲ್ಲಿ ಒಟ್ಟು 108 ಜೈನ ಬಸದಿಗಳಿದ್ದು, ಈಗ ಇರುವ ಅಪೂರ್ವ ಸಂಗ್ರಹಿತ ಜಿನಬಿಂಬ ಬಸದಿ ಇಂದೊಂದೇ ಆಗಿದೆ.[40]

ಶ್ರೀ ಆದೀಶ್ವರ ಜಿನಾಲಯಕ್ಕೆ ಗರ್ಭಗೃಹ, ಅಂತರಾಳ, ನವರಂಗ, ಮುಖ ಮಂಟಪ, ತೆರೆದ ಮಂಟಪ, ಉಯ್ಯಾಲೆ ಮಂಟಪಗಳಿದ್ದು, ಗರ್ಭಗುಡಿಯು ಸುಮಾರು 12 ಅಡಿ ಉದ್ದ, 13.1 ಅಡಿ ಅಗಲ ಮತ್ತು 12 ಅಡಿ ಎತ್ತರವಿದೆ. ಈ ಸೊಗಸಿನ ಬಸದಿಯ ನವರಂಗದ ಬಗ್ಗೆ ಹೇಳುವುದಾದರೆ 22 ಅಡಿ ಉದ್ದ, 26 ಅಡಿ ಅಗಲವಿದೆ. 4 ಪ್ರವೇಶ ದ್ವಾರ ಹೊಂದಿ ಪೂರ್ವಕ್ಕೆ 3 ಮತ್ತು ಉತ್ತರಕ್ಕೆ ಏಕ ಪ್ರವೇಶ ದ್ವಾರವಿದೆ. ಪೂರ್ವಕ್ಕೆ ಇರುವ 3 ಪ್ರವೇಶ ದ್ವಾರಗಳಲ್ಲಿ ಮಧ್ಯದ ದ್ವಾರ ಮೊದಲಿನಿಂದಲೂ ಇದ್ದು, ಅಕ್ಕಪಕ್ಕದ ಪ್ರವೇಶ ದ್ವಾರಗಳನ್ನು ಕ್ರಿ.ಶ. 19 ನೇ ಶತಮಾನದ ಆದಿ ಭಾಗದಲ್ಲಿ ಇಲ್ಲಿ ತಂದು ಪ್ರತಿಷ್ಠಾಪಿಸಿದ ಧರಣೇಂದ್ರ ಮತ್ತು ಪದ್ಮಾವತಿ ಯಕ್ಷ-ಯಕ್ಷಿಗಳ ತೆರೆದ ಗರ್ಭ ಗೃಹಗಳಿಗೆ ಹೊಂದಿಸಲಾಗಿದೆ. ಅರ್ಥಾತ್ ನವರಂಗದ ಮುಂಭಾಗಕ್ಕೆ ಎರಡು ಪಾರ್ಶ್ವಗಳಲ್ಲೂ ಗರ್ಭಗೃಹಗಳಿವೆ.

ಗರ್ಭಗೃಹದಲ್ಲಿ 2 ಅಡಿ ಎತ್ತರದ ಪೀಠದ ಮೇಲೆ ಆದಿನಾಥ ತೀರ್ಥಂಕರರ ಸುಂದರ ವಿಗ್ರಹವಿದೆ. ವೃಷಭ ಲಾಂಛನದಿಂದಲೂ ಕೂಡಿದ ಈ ನಯನ ಮನೋಹರ ಮೂರ್ತಿ ಕೃಷ್ಣಶಿಲೆ (ಕರಿಕಲ್ಲು)ಯಿಂದ ಮಾಡಲ್ಪಟ್ಟಿದ್ದು ಸೂಕ್ತ ಕೆತ್ತನೆಯ ಪ್ರಭಾವಳಿಯನ್ನು ಹೊಂದಿದೆ. ಪೀಠದಲ್ಲಿ ಲಾಂಛನ ಸಹಿತ ಪಂಚ ಸಿಂಹಗಳು, ಪೀಠವನ್ನು ಹೊತ್ತಿರುವಂತೆ ಕೆತ್ತಲಾಗಿದ್ದು, ಪ್ರಭಾವಳಿಗೆ ಹೊಂದಿಕೊಂಡಂತೆ ಎಡ, ಬಲದಲ್ಲಿ ಅನುಕ್ರಮವಾಗಿ ಗೋಮುಖ ಯಕ್ಷ, ಚಕ್ರೇಶ್ವರಿ ಯಕ್ಷಿ ವಿಗ್ರಹಗಳಿವೆ. ಇವುಗಳ ಎತ್ತರವು 50 ಸೆ.ಮೀ ನಷ್ಟಿದೆ. ಇವುಗಳ ಮೇಲ್ಭಾಗದಲ್ಲಿ ಚಾಮರಧಾರಿಗಳನ್ನು ಕಾಣಬಹುದು. ಅದರ ಮೇಲ್ಭಾಗದಲ್ಲಿ ಶಾರ್ದೂಲಗಳು ಮತ್ತು ಅದರ ಮೇಲೆ ಕುಳಿತ ಸವಾರರು, ಡಮರುಗದಾರಿಗಳ ಕೆತ್ತನೆ ಇದೆ. ಮೂಲ ಸ್ವಾಮಿಯ ತಲೆಯ

ಮೇಲ್ಭಾಗದಲ್ಲಿ ಮುಕ್ಕೊಡೆ (ಮೂರು ಛತ್ರಿ) ಅದರ ತುದಿಯಲ್ಲಿ ಕಳಶವಿದೆ. ಪ್ರಭಾವಳಿಗಳ ಜೋಡಣೆ ಕಾರ್ಯ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಡೆದಿದೆ. ಅವರೇ ಮಾಡಿಸಿದರೆಂಬ ಐತಿಹ್ಯವೂ ಇದೆ.[41] ಈ ಆದೀಶ್ವರ ಬಿಂಬವು ಬನ್ನೂರಿನ ಬಳಿ ಸಿಕ್ಕಿದ್ದು ಅದನ್ನು ಈ ಬಸದಿಯಲ್ಲಿ ತಂದು ಪುನರ್ ಪ್ರತಿಷ್ಠಾಪನೆ ಮಾಡಲಾಗಿದೆ ಎಂದು ಭಾವಿಸಲಾಗಿದೆ.

ಬಸದಿಯ ಅಂತರಾಳವು ಅಪೂರ್ವತೆಯಿಂದ ಕೂಡಿದ್ದು, ಇದು 10 ಅಡಿ ಉದ್ದ, 26 ಅಡಿ ಅಗಲವಿದೆ. ಇದರ ಎರಡು ಪಾರ್ಶ್ವಗಳಲ್ಲೂ 3 ಅಡಿ ಎತ್ತರದ ವೇದಿಕೆ ಮೇಲೆ 1 1/2 ಅಡಿ ಎತ್ತರವಿರುವ 2 ತೀರ್ಥಂಕರರು (ಯಕ್ಷ-ಯಕ್ಷಿ ಸಹಿತ) ಲಾಂಛನ ಸಹಿತ ಬಿಂಬಗಳಿವೆ. 24 ತೀರ್ಥಂಕರರ ವಿಗ್ರಹಗಳು ಶ್ರೀರಂಗಪಟ್ಟಣದಿಂದ 8 ಕಿ.ಮೀ ದೂರ ಹಾಗೂ ಮೈಸೂರಿನಿಂದ 6 ಕಿ.ಮೀ ದೂರವಿರುವ ಕಳಸವಾಡಿಯಲ್ಲಿ ಸಿಕ್ಕಿದ್ದವು. 900 ವರ್ಷಗಳ ಹಿಂದೆ ಅಲ್ಲಿ ಜಿನಮಂದಿರವಿತ್ತಂತೆ ಅದು ಹಾಳಾದ ಮೇಲೆ ವಿಗ್ರಹವನ್ನು ಇಲ್ಲಿಗೆ ತಂದು ಪ್ರತಿಷ್ಠಾಪಿಸಲಾಯಿತು ಎಂದು ಆಧಾರಗಳು ತಿಳಿಸುತ್ತವೆ. ಅಷ್ಟೇ ಏಕೆ ಮೂಲ ವಿಗ್ರಹ ಆದೀಶ್ವರಸ್ವಾಮಿಯ ಪ್ರಭಾವಳಿಗಳು ಹಿಂದೆ ಮುಂದೆ ಸರಿದಿರುವುದರಿಂದ ಈ ಲಕ್ಷಣ ಹೆಚ್ಚಾಗಿ ವಿಜಯನಗರ ಕಾಲದ ಶಿಲ್ಪಗಳಲ್ಲಿ ಕಾಣುತ್ತೇವೆ. ಆದ್ದರಿಂದ ಈ ಬಸದಿಯು ವಿಜಯನಗರ ಕಾಲದ ನಿರ್ಮಾಣವೆಂಬ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಬಸದಿಯ ಮುಖ ಮಂಟಪದ ಎಡಗಡೆ ಗೋಡೆಗೆ ಸೇರಿದ ಕಂಬದಲ್ಲಿ ಒಂದು ಶಾಸನವಿದೆ. ಕ್ರಿ.ಶ. 1666 ರಲ್ಲಿ ರಚಿತವಾಗಿದೆ. ಅಂದರೆ ಶಾಸನದ ಕಾಲಕ್ಕೂ ಮೊದಲೇ ಈ ಜೈನ ಬಸದಿಯ ನಿರ್ಮಾಣವಾಗಿದೆ ಎಂಬ ಅಭಿಪ್ರಾಯಕ್ಕೆ ಬರಬಹುದು.

ಧರಣೇಂದ್ರ ಯಕ್ಷನ ಶಿಲ್ಪ : ಇದೊಂದು ಕೃಷ್ಣ ಶಿಲೆಯ ಸುಂದರವಾದ ವಿಗ್ರಹವಾಗಿದ್ದು, ಸುಮಾರು 7 ಅಡಿ ಎತ್ತರವಿದ್ದು ನೋಡಲು ನಯನ ಮನೋಹರವಾಗಿದೆ. ತೀರ್ಥಂಕರ ಮೂರ್ತಿ ಪೀಠದಲ್ಲಿ ಈ ಬಿಂಬ ಕೆತ್ತಲಾಗಿರುವುದು ವಿಶೇಷ.[42] ಅಷ್ಟೇ ಏಕೆ, ಇಡೀ ಭಾರತದಲ್ಲಿ ಜೈನ ತೀರ್ಥಂಕರರಿಗೆ ಸೇರಿದ ಇಷ್ಟು ದೊಡ್ಡ ಯಕ್ಷ ಶಿಲ್ಪ ಪ್ರತಿಷ್ಠಾಪಿತವಾಗಿರುವುದು ಒಂದು ದಾಖಲೆ. 23 ನೇ ತೀರ್ಥಂಕರನಾದ ಪಾರ್ಶ್ವನಾಥ ತೀರ್ಥಂಕರರ ಯಕ್ಷನ ವಿಗ್ರಹಕ್ಕೆ 1,200 ವರ್ಷಗಳಾಗಿವೆ ಎಂದು ಶಿಲ್ಪ ತಜ್ಞರ ಅಭಿಪ್ರಾಯ. ಈ ವಿಗ್ರಹವು ಶ್ರೀರಂಗಪಟ್ಟಣದ ಪಶ್ಚಿಮ ದಿಕ್ಕಿನಲ್ಲಿರುವ ಕಾವೇರಿ ನದಿ ದಡದಲ್ಲಿ ಹಳೇ ಪಾಲಹಳ್ಳಿ ಗ್ರಾಮದ ಪಚ್ಚೆ ಪಾರ್ಶ್ವನಾಥ ಸ್ವಾಮಿ ಬಸದಿ ಹಾಳಾದ ಮೇಲೆ ತಂದು ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ಹಳೇ ಹಾಲಹಳ್ಳಿ ಗ್ರಾಮ ತಗ್ಗಿನಲ್ಲಿದ್ದು ಭೂಮಿ ನೀರಾವರಿಗೊಳಪಟ್ಟು (ಈಗಿನ ಹೊಸ ಪಾಲಹಳ್ಳಿ) ವರ್ಗಾಯಿಸಿರಬಹುದು.

ಪದ್ಮಾವತಿ ಯಕ್ಷಿಯ ಶಿಲ್ಪ : ಇದೇ ಬಸದಿಯ ಇನ್ನೊಂದು ಪಾರ್ಶ್ವದಲ್ಲಿರುವ ಪದ್ಮಾವತಿ ಅಮ್ಮನವರ (ಶ್ರೀ ಪಾರ್ಶ್ವನಾಥ ತೀರ್ಥಂಕರ ಯಕ್ಷಿ) ವಿಗ್ರಹ ಗಂಜಾಂನಲ್ಲಿದ್ದು, ಪಾರ್ಶ್ವನಾಥಸ್ವಾಮಿ ಮಂದಿರದಿಂದ ತಂದು ಪ್ರತಿಷ್ಠಾಪಿಸಲಾಗಿದೆ ಎಂದು ತಿಳಿದು ಬಂದಿದೆ. 4 ಅಡಿ ಎತ್ತರವಿರುವ ಈ ದೇವಿಯ ವಿಗ್ರಹವನ್ನು ಕೃಷ್ಣಶಿಲೆಯಿಂದ ಮಾಡಲಾಗಿದ್ದು, ತಲೆಯ ಮೇಲ್ಭಾಗದಲ್ಲಿ 3 ಹೆಡೆಗಳ ಸರ್ಪ ಸಹಿತ ಕೆತ್ತಿದ್ದು, ಕಿರೀಟದ ಮುಂಭಾಗದಲ್ಲಿ ಪಾರ್ಶ್ವನಾಥ ಸ್ವಾಮಿಯವರ ಸೂಕ್ಷ್ಮ ವಿಗ್ರಹ ಕಾಣಬಹುದು.[43]

6.8. ಅರೆತಿಪ್ಪೂರಿನ ಜೈನ ಅವಶೇಷಗಳು

ಈ ಹಿನ್ನೆಲೆಯಲ್ಲಿ ಗಮನಿಸಬೇಕಾದ ಮತ್ತೊಂದು ಜೈನ ನೆಲೆ ಎಂದರೆ ಅರೆತಿಪ್ಪೂರಿನ ಜೈನನೆಲೆ. ಅರೆತಿಪ್ಪೂರಿನಲ್ಲಿರುವ ಎಲ್ಲ ಕಟ್ಟಡಗಳನ್ನು ಪ್ರಸ್ತುತ ಪುರಾತತ್ವ ಇಲಾಖೆಯವರು ಉತ್ಖನನ ಮಾಡಿ ದೇವಾಲಯಗಳೆಲ್ಲದರ ಅಧಿಷ್ಠಾನವನ್ನು ಹೊರತೆಗೆದು ಅವುಗಳನ್ನು ಅಧ್ಯಯನ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿದ್ದಾರೆ. ಆದರೆ ಬಹುತೇಕ ಎಲ್ಲ ಅಧಿಷ್ಠಾನಗಳು ತಲಕಾಡಿನ ಭೂಉತ್ಖನನದಲ್ಲಿ ದೊರೆತ ಜಿನಾಲಯಗಳ ಅಧಿಷ್ಠಾನವನ್ನು ಅನುಸರಿಸುತ್ತವೆ. ಅಲ್ಲದೆ ಕೆಲವೊಂದು ಜಿನಾಲಯಗಳ ಗರ್ಭಗೃಹಗಳಲ್ಲಿ ಎರಡೆರಡು ಶಿಲ್ಪ ಪೀಠಗಳು ಅಥವಾ ಜಿನವಿಗ್ರಹಗಳ ಪೀಠಗಳು ಪತ್ತೆಯಾಗಿದ್ದು ಕೆಲವು ಪ್ರಾಚೀನ ಶೈಲಿಯನ್ನು ಮತ್ತೆ ಕೆಲವು ಹೊಯ್ಸಳ ಶೈಲಿಯನ್ನು ಅನುಕರಿಸಿವೆ. ಹಾಗೆ ನೋಡಿದರೆ ಈ ದೇವಾಲಯಗಳು ಹೊಯ್ಸಳರ ಕಾಲದವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಆನಂತರದ ದಿನಗಳಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡವೆಂದು ಭಾವಿಸಬೇಕಾಗುತ್ತದೆ. ಇಲ್ಲಿಯೂ ಕೂಡ ದೇವಾಲಯದ ಭಿತ್ತಿಯಾಗಲಿ, ದ್ವಾರಬಂಧಗಳಾಗಲಿ ದೊರೆಯದೆ ಕೆಲವೊಂದು ತೀರ್ಥಂಕರರ ಶಿಲ್ಪಗಳು, ಯಕ್ಷಿಯರ ಶಿಲ್ಪಗಳು ಬೆರಳೆಣಿಕೆಯ ನವರಂಗದ ಕಂಬಗಳು ದೊರೆತಿವೆ. ಇವುಗಳನ್ನಾಧರಿಸಿ ದೇವಾಲಯಗಳು ಇಂತಿಷ್ಟೇ ಇದ್ದವೆಂದು ದಾಖಲಿಸಲು ಸಾಧ್ಯವಿಲ್ಲ. ಆದರೆ ಇವೆಲ್ಲವೂ ಜೈನಬಸದಿಗಳಲ್ಲವೆಂದು ತಳ್ಳಿಹಾಕಲು ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಅರೆತಿಪ್ಪೂರು ತನ್ನ ಉಚ್ಛ್ರಾಯ ಕಾಲದಲ್ಲಿ 12ಕ್ಕೂ ಹೆಚ್ಚು ಜಿನಾಲಯಗಳನ್ನು ಮತ್ತು ಋಷಿಗಳ ವಾಸಕ್ಕೆ ವಿಹಾರಗಳನ್ನು ಹೊಂದಿತ್ತೆಂದು ಭಾವಿಸಬೇಕಾಗುತ್ತದೆ.

ಬಸದಿಯ ಹೆಸರನ್ನು ವಿಶ್ಲೇಷಿಸುವಾಗ ವಸತಿಯೇ ಬಸದಿಯಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹಾಗೆ ನೋಡಿದರೆ ಜೈನಮುನಿಗಳು ಗ್ರಾಮ ಪ್ರವೇಶವನ್ನು ಮಾಡದೆ ಗ್ರಾಮದ ಹೊರಗೆ ಜನಸಂಪರ್ಕದಿಂದ ದೂರವಿದ್ದು ಜೀವನ ನಡೆಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಅರೆತಿಪ್ಪೂರಿನ ಬಸದಿ ಸಮುಚ್ಚಯವನ್ನು ಗಮನಿಸಿದರೆ ಅವೆಲ್ಲವೂ ವಸತಿ ಸಹಿತ ಜಿನ

ಮಂದಿರಗಳಾಗಿದ್ದವೆಂಬುದು ನಿಸ್ಸಂಶಯ. ಹಾಗಾಗಿ ವಾಸ್ತುಶಿಲ್ಪದ ಶ್ರೇಷ್ಠತೆಗಿಂತ ಅಧ್ಯಯನ, ವಸತಿ ಮತ್ತು ಶ್ರಮಣರ ವಾಸಸ್ಥಾನವಾಗಿ ಅರೆತಿಪ್ಪೂರು ಪ್ರಸಿದ್ಧಿಯಾಗಿದ್ದಿತೆಂದು ಭಾವಿಸಬೇಕಾಗುತ್ತದೆ. ಇದನ್ನು ಹೊರತುಪಡಿಸಿದರೆ ಇಲ್ಲಿ ಹೆಚ್ಚಿಗೆ ವಾಸ್ತುಶಿಲ್ಪದ ಬಗೆಗೆ ಕೂಡ ಹೇಳಲು ಸಾಧ್ಯವಿಲ್ಲ. ಅರೆತಿಪ್ಪೂರಿನ ದೇವಾಲಯಗಳನ್ನು ಇಟ್ಟಿಗೆಗಳಿಂದ ನಿರ್ಮಿಸಿ ಅವುಗಳ ಅಧಿಷ್ಠಾನದ ಮೇಲ್ಭಾಗವನ್ನು ಅನೇಕ ಬಗೆಯ ಇಟ್ಟಿಗೆಗಳಿಂದ ಅಲಂಕಾರಿಕ ಗೋಡೆಗಳನ್ನು ನಿರ್ಮಿಸಿ ಛಾವಣಿಗೆ ಈ ಗೋಡೆಗಳ ಮಧ್ಯೆ ಮರದ ಕಂಬಗಳನ್ನಿರಿಸಿ ಅವುಗಳ ಮೇಲೆ ಛತ್ತನ್ನು ಹೊಂದಿರುತ್ತಿದ್ದವೆಂದು ಭಾವಿಸಬಹುದು. ಇದೇ ಬಗೆಯ ವಿವರಣೆಯನ್ನು ತಲಕಾಡಿನ ಉತ್ಖನನದಲ್ಲಿ ಕಂಡುಬಂದ ಜಿನಾಲಯದಲ್ಲಿ ಕಂಡುಕೊಳ್ಳಬಹುದಾಗಿದೆ. ಅದನ್ನು ಇಲ್ಲಿ ಹೀಗೆ ಸ್ಮರಿಸಬಹುದು.

1992–93ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆಯು ತಲಕಾಡಿನಲ್ಲಿ ಪ್ರಾಚೀನ ತಲಕಾಡಿನ ಪ್ರಾಚೀನತೆ ಮತ್ತು ಅದರ ವಿಸ್ತಾರವನ್ನು ಹಾಗೂ ಆ ಪ್ರದೇಶದ ಸಮಗ್ರ ಬೆಳವಣಿಗೆಯನ್ನು ಅಧ್ಯಯನ ಮಾಡುವ ಉದ್ದೇಶದಿಂದ ಉತ್ಖನನವನ್ನು ಪ್ರಾರಂಭಿಸಿತು. ಉತ್ಖನನ ಕಾಲದಲ್ಲಿ ತಲಕಾಡು–5 ಉತ್ಖನನ ಕುಳಿಯಲ್ಲಿ ಜೈನ ಬಸದಿಯೊಂದರ ಅವಶೇಷವನ್ನು ಕಂಡುಹಿಡಿಯಲಾಯಿತು. ಈ ಜೈನ ಬಸದಿಯು ಮರಳೇಶ್ವರ ದೇವಾಲಯದಿಂದ ಈಶಾನ್ಯ ದಿಕ್ಕಿನಲ್ಲಿ ಅರ್ಧ ಕಿ.ಮೀ. ದೂರದಲ್ಲಿ ಸ್ಥಿತವಾಗಿದ್ದಿತು. ಮರಳು ದಿಣ್ಣೆಯ ಮಧ್ಯದಲ್ಲಿ ದೊರೆಯ ಪಾರ್ಶ್ವನಾಥನ ವಿಗ್ರಹ ಇಲ್ಲಿ ಇದ್ದಿರಬಹುದಾದ ಜೈನ ದೇವಾಲಯದ ಬಗೆಗೆ ಮುನ್ಸೂಚನೆಯಾಗಿದ್ದಿತು. ಈ ಪ್ರದೇಶದ ಪ್ರಾಮುಖ್ಯತೆಯನ್ನು ಅರಿಯುವ ಸಲುವಾಗಿ ಈ ಪ್ರದೇಶದಲ್ಲಿ ಉತ್ಖನನವನ್ನು ಕೈಗೊಳ್ಳಲಾಯಿತು. ಈ ಉತ್ಖನನದಲ್ಲಿ ಇಟ್ಟಿಗೆಯಿಂದ ನಿರ್ಮಿತವಾದ ಪೂರ್ವ–ಪಶ್ಚಿಮವಾಗಿ 21.7 ಮೀ ಮತ್ತು ಉತ್ತರ ದಕ್ಷಿಣವಾಗಿ 16.7 ಮೀಟರ್ ಅಳತೆಯ ಬೃಹತ್ ಕಟ್ಟಡ ಒಂದನ್ನು ಕಂಡುಹಿಡಿಯಲಾಯಿತು. ಆನಂತರದ ಅಧ್ಯಯನಗಳು ಈ ಕಟ್ಟಡವನ್ನು ಜೈನ ಬಸದಿ ಎಂದು ಪುಷ್ಟೀಕರಿಸಿವೆ. ಈ ದೇವಾಲಯವು ವಿಸ್ತಾರವಾದ ಪ್ರಾಕಾರದ ಮಧ್ಯದಲ್ಲಿ ಸ್ಥಿತವಾಗಿದ್ದು, ಗರ್ಭಗೃಹ ಮುಖಮಂಟಪ ಪ್ರವೇಶ ದ್ವಾರವನ್ನು ಒಳಗೊಂಡಿದ್ದು ಈಶಾನ್ಯದ ಮೂಲೆಯಲ್ಲಿ ನೀರಿಗಾಗಿ ಬಾವಿಯನ್ನು ಹೊಂದಿದ್ದಿತು. ಈ ಜೈನ ಬಸದಿಯು ಹಲವಾರು ಸಮಸ್ಯೆಗಳನ್ನು ಹುಟ್ಟುಹಾಕಿದುದರಿಂದ ಪುನಃ 2009–10ನೇ ಸಾಲಿನಲ್ಲಿ ಈ ಪ್ರದೇಶವನ್ನು ವಿಸ್ತೃತ ಅಧ್ಯಯನಕ್ಕೆ ಒಳಪಡಿಸಲು ಆ ಪ್ರದೇಶದಲ್ಲಿ ಹೆಚ್ಚಿನ ಉತ್ಖನನವನ್ನು ಕೈಗೊಳ್ಳಲಾಯಿತು. ಈ ಎರಡು ಉತ್ಖನನಗಳಿಂದಾಗಿ ತಲಕಾಡಿನಲ್ಲಿ ದೊರೆತ ಜಿನಾಲಯದ ಈ ಕೆಳಗಿನ ನಿಖರ ಮಾಹಿತಿಯನ್ನು ಕಂಡುಕೊಳ್ಳಲು ಸಾಧ್ಯವಾಯಿತು.

ಆಯತಾಕಾರದ ಗರ್ಭಗೃಹ ಮತ್ತು ತೆರೆದ ಮುಖಮಂಟಪವನ್ನು ಹೊಂದಿದ್ದಿತು. ಈ ಜಿನಾಲಯವನ್ನು ಎರಡು ಹಂತಗಳಲ್ಲಿ ನಿರ್ಮಿಸಲಾಗಿದ್ದು, ದೇವಾಲಯದ ಮುಂಭಾಗದಲ್ಲಿ ಚೌಕಾಕಾರದ ಮಂಟಪ ಒಂದನ್ನು ಸಹ ನಿರ್ಮಿಸಲಾಗಿದ್ದಿತು. ಜಿನಾಲಯದ ತಳಪಾಯ ಅಧಿಷ್ಠಾನ ಮತ್ತು ಗೋಡೆಗಳನ್ನು ಇಟ್ಟಿಗೆಯಿಂದ ನಿರ್ಮಿಸಲಾಗಿತ್ತು. ಮೇಲ್ಛಾವಣಿಯನ್ನೂ ಮರದಿಂದ ನಿರ್ಮಿಸಲಾಗಿತ್ತು. ಉತ್ಖನನದಲ್ಲಿ ಗುರುತಿಸಿದ ಈ ಜಿನಾಲಯವನ್ನು ಪಾರ್ಶ್ವನಾಥ ಬಸದಿ ಎಂದು ಗುರುತಿಸಬಹುದು. ಜಿನಾಲಯದಲ್ಲಿ ದೊರೆತ ವಸ್ತುಗಳು ಮತ್ತು ಅದರ ವಾಸ್ತು ರಚನೆಯ ಆಧಾರದ ಮೇಲೆ ಇದರ ಕಾಲಘಟ್ಟವನ್ನು 7ನೇ ಶತಮಾನವೆಂದು ನಿರ್ಧರಿಸಲಾಗಿದೆ. ಈಗಾಗಲೇ ತಿಳಿಸಿರುವಂತೆ ಈ ಜಿನಾಲಯವನ್ನು ಎರಡು ಹಂತಗಳಲ್ಲಿ ನಿರ್ಮಿಸಿದ್ದು, ಮೊದಲನೆ ಹಂತವು 7ನೇ ಶತಮಾನದಲ್ಲಿ ನಿರ್ಮಾಣಗೊಂಡು 10ನೇ ಶತಮಾನದವರೆಗೆ ಪ್ರವರ್ಧಮಾನ ಸ್ಥಿತಿಯಲ್ಲಿತ್ತು. ಆ ಕಾಲದಲ್ಲಿ ಅಗ್ನಿ ಆಕಸ್ಮಿಕ ಹೊಂದಿ ಅದೇ ಕಾಲಘಟ್ಟದಲ್ಲಿ ಪುನಃ ನಿರ್ಮಾಣಗೊಂಡಿತು. ಅಂದರೆ ಎರಡನೇ ಹಂತದ ಪುನಃ ನಿರ್ಮಾಣವು 10ನೇ ಶತಮಾನದಲ್ಲಿ ನೆರವೇರಿತೆಂದು ಹೇಳಬಹುದು.[44]

6.9 ಜಿಲ್ಲೆಯ ಜೈನ ಸ್ಮಾರಕಗಳ ವಿಶ್ಲೇಷಣೆ

ಬೋಗಾದಿಯ ಪಾರ್ಶ್ವದೇವರ ಶ್ರೀಕರ್ಣ ಜಿನಾಲಯವನ್ನು ರಂಗರಾಜುರವರು ಹೊಯ್ಸಳ ಕಾಲಘಟ್ಟದ್ದೆಂದು ಗುರುತಿಸುತ್ತಾರೆ.[45] ಆದರೆ ಅಲ್ಲಿರುವ ಕೆಲವು ಕಂಬಗಳು ರಾಷ್ಟ್ರಕೂಟರ ಪ್ರಭಾವವನ್ನು ದಾಖಲಿಸುತ್ತವೆ. ಅಲ್ಲದೆ ಕೆಲವು ಕಂಬಗಳು ಗಂಗರ ಕಾಲದಲ್ಲಿ ಬಳಸುತ್ತಿದ್ದ ಕಂಬಗಳನ್ನೇ ಹೋಲುತ್ತವೆ. ಹೀಗಾಗಿ ಇಲ್ಲಿನ ಶಾಸನ ಹೊಯ್ಸಳರ ಕಾಲದಲ್ಲಿ ಜಿನಾಲಯವನ್ನು ಕಟ್ಟಿದರೆಂದು ಹೇಳಿದರೂ ದೇವಾಲಯದ ವಾಸ್ತುಭಾಗಗಳು ಆ ಕಾಲಘಟ್ಟದ್ದಲ್ಲದ್ದರಿಂದ ಶಾಸನಗಳ ಹೇಳಿಕೆಯನ್ನು ಜೀರ್ಣೋದ್ಧಾರವೆಂದು ಗಮನಿಸಬೇಕಾಗುತ್ತದೆ.

ಹಟ್ಟಣದ ಪ್ರಸ್ತುತ ವೀರಭದ್ರ ದೇವಾಲಯವು ಜೈನ ದೇವಾಲಯವಾಗಿತ್ತೆಂಬುದಕ್ಕೆ ಗರ್ಭಗೃಹದೊಳಗಿರುವ ಸಿಂಹಪೀಠ ಮತ್ತು ಆ ಪೀಠದ ಮೇಲೆ ಆನಂತರದ ಕಾಲದಲ್ಲಿ ಪ್ರತಿಷ್ಠಾಪಿಸಿರುವ ವೀರಭದ್ರಸ್ವಾಮಿ ಹಾಗೂ ದೇವಾಲಯದ ಹೊರಗೆ ಕಂಡುಬರುವ ಹೊಯ್ಸಳ ಕಾಲದ ಶಾಸನ. ಇವಿಷ್ಟನ್ನು ಮಾತ್ರ ಅನುಸರಿಸಿ ಅದು ಹೊಯ್ಸಳರ ಕಾಲಘಟ್ಟದ ದೇವಾಲಯವೆಂದು ದಾಖಲಿಸಬೇಕೆ ಹೊರತು ದೇವಾಲಯದ ಹೊರಭಿತ್ತಿಯಲ್ಲಿ ಅಥವಾ ಒಳಭಾಗದಲ್ಲಿ ಇದು ಹೊಯ್ಸಳರ ಕಾಲದ ನಿರ್ಮಿತಿ ಎಂದು ದಾಖಲಿಸಲು ಯಾವ ಆಕರಗಳೂ ಅಥವಾ ವಾಸ್ತು ವಿವರಗಳೂ ಲಭ್ಯವಿಲ್ಲ.[46]

ಬೆಳ್ಳೂರಿಗೆ ಹೊರಗ್ರಾಮದಂತಿರುವ ಸೂರನಹಳ್ಳಿ ಗ್ರಾಮಕ್ಕೆ ಸೇರಿದ ಊರಾಚೆಗಿನ ಪಾಳು ಗ್ರಾಮದಲ್ಲಿ ತ್ರಿಕೂಟಾಚಲ ಬಸದಿಯೊಂದರ ಅವಶೇಷ ಕಂಡುಬರುತ್ತದೆ.[47] ಇಲ್ಲಿದ್ದ ಜೈನ ಶಾಸನವನ್ನು ಬೆಳ್ಳೂರಿನ ಬಸದಿಗೆ ವರ್ಗಾಯಿಸಲಾಗಿದೆ. ಅದರಂತೆ ಒಂದನೆಯ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಮಹಾಪ್ರಧಾನ ದೇವರಾಜ ಹಾಗೂ ಅವನ ಸತಿ ಕಾಮಲದೇವಿಯರು ಸೂರನಹಳ್ಳಿಯಲ್ಲಿ ರಾಜರಾಷ್ಟ್ರ ಯಶೋಧರನ ವೃದ್ಧಿಗಾಗಿ ತ್ರಿಕೂಟ ಪಾರ್ಶ್ವ ಜಿನಾಲಯವನ್ನು ನಿರ್ಮಿಸಿ ಪೂಜಾವಿಧಿಗೆಂದು ಸೂರನಹಳ್ಳಿಯ ಸ್ಥಾನಾಚಾರ್ಯ ಮುನಿಚಂದ್ರ ದೇವರಿಗೆ ದಾನಬಿಟ್ಟದ್ದನ್ನು ತಿಳಿಸುತ್ತದೆ. ಆದರೆ ಮಂಡ್ಯ ಜಿಲ್ಲೆಯನ್ನು ದಾಖಲಿಸುವ ಬಹುತೇಕ ಕೃತಿಗಳು ಈ ಬಸದಿಯು ಯಾಲದಹಳ್ಳಿ ಅಥವಾ ಚೋಳಸಂದ್ರಕ್ಕೆ ಸೇರಿದ ಬಸದಿಯೆಂದು ದಾಖಲಾಗಿದೆ. ಅಂದರೆ ಇದು ಚೋಳಸಂದ್ರ ಮತ್ತು ಯಾಲದಹಳ್ಳಿಯ ಹೊರವಲಯದ ಗ್ರಾಮದ ಪಾಳುನೆಲೆಯಲ್ಲಿ ಇಂದು ಆದಿಚುಂಚನಗಿರಿ ಕಾಲಭೈರವೇಶ್ವರ ಸಂಸ್ಥಾನವು ಬೆಳ್ಳೂರು ಹೊರವಲಯದಲ್ಲಿ ಹೊಂದಿರುವ ಸಾಮಾಜಿಕ ಅರಣ್ಯ ಪ್ರದೇಶದ ಎತ್ತರವಾದ ಬಂಡೆಗಳ ಮೇಲೆ ಶಿಥಿಲಾವಸ್ಥೆಯಲ್ಲಿರುವ ತ್ರಿಕೂಟಾಚಲ ಬಸದಿಯನ್ನೇ ಮೇಲಿನ ಶಾಸನೋಕ್ತ ಬಸದಿಯೆಂದು ಗುರುತಿಸಬಹುದು. ಇದು ಕಂಬದಹಳ್ಳಿಯಲ್ಲಿರುವ ತ್ರಿಕೂಟಾಚಲ ಬಸದಿಯಂತೆಯೇ ಇದ್ದು ನಿರ್ಮಾಣ ಪ್ರಕ್ರಿಯೆಯಲ್ಲಿ ಹೊಯ್ಸಳರ ತ್ರಿಕೂಟಾಚಲ ಬಸದಿಯ ಅಂಶಗಳನ್ನು ಒಳಗೊಂಡಿದೆ. ಆದರೂ ಈ ದೇವಾಲಯದಿಂದ ಒಳಾವರಣಗಳು ಸಂಪೂರ್ಣವಾಗಿ ಹಾಳಾಗಿರುವುದರಿಂದ ಹೆಚ್ಚಿನ ಯಾವ ವಾಸ್ತುಲಕ್ಷಣಗಳೂ ಉಳಿದುಬಂದಿಲ್ಲ. ಒಂದೇ ನವರಂಗಕ್ಕೆ ಹೊಂದಿಕೊಂಡಂತೆ ಮೂರು ದಿಕ್ಕಿನಲ್ಲಿ ಅಂತರಾಳ ಸಹಿತ ಗರ್ಭಗೃಹವನ್ನು ಹೊಂದಿದ್ದು ನವರಂಗ ಮತ್ತು ಮುಖಮಂಟಪಗಳು ಹಾಳಾಗಿವೆ. ಗರ್ಭಗೃಹ ಅಂತರಾಳದ ಭಾಗಗಳಷ್ಟೇ ಉಳಿದುಬಂದಿದೆ. ಹೊಯ್ಸಳ ಶೈಲಿಯಂತೆ ಕ್ಲೋರೆಟಿಕ್ ಸಿಸ್ಟ್‌ನ್ನು ಬಳಸಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ನಿರಾಡಂಬರವಾದ ಅಧಿಷ್ಠಾನ ಹೊಂದಿದ್ದು ಭಿತ್ತಿಯಲ್ಲಿ ಅರೆಗಂಬಗಳು, ಕಿರುದೇವಕೋಷ್ಠಗಳು ಕಂಡುಬರುತ್ತವೆ. ಗರ್ಭಗೃಹಗಳ ಬಾಗಿಲುವಾಡಗಳು ರೇಖಾಲಂಕಾರದಿಂದ ಕೂಡಿದ್ದು ಲಲಾಟದಲ್ಲಿ ತೀರ್ಥಂಕರರನ್ನು ಹೊಂದಿವೆ. ಗರ್ಭಗೃಹಗಳ ಮೇಲೆ ನಾಗರ ಶೈಲಿಯ ಶಿಖರಗಳಿದ್ದು ಅವು ಹಾಳಾಗಿರಬಹುದೆಂದು ಅವುಗಳ ಕೆಲವೊಂದು ಭಾಗಗಳು ಕೆರೆಯಲ್ಲಿ ಕಂಡುಬರುತ್ತವೆ. ಇಲ್ಲಿದ್ದ ತೀರ್ಥಂಕರರ ಶಿಲ್ಪಗಳನ್ನು ಬೆಳ್ಳೂರಿಗೆ ಸಾಗಿಸಲಾಯಿತೆಂದು ತಿಳಿದುಬರುತ್ತದೆ. ಹಾಗಾದರೆ ಬೆಳ್ಳೂರಿನಲ್ಲಿರುವ ವಿಮಲನಾಥ ತೀರ್ಥಂಕರರ ಶಿಲ್ಪ ಈ ಬಸದಿಯದ್ದಾಗಿರಬಹುದು.

ಬೆಳ್ಳೂರಿನ ಬಸದಿಯ ವಿಮಲನಾಥ ಶಿಲ್ಪ[48] 13ನೆಯ ಶತಮಾನದ್ದಾದರೂ ದೇವಾಲಯದ ನಿರ್ಮಾಣವನ್ನು ಮೈಸೂರು ಸಂಸ್ಥಾನದ ದೇವರಾಜ ಒಡೆಯರು ನಿರ್ಮಿಸಿದರೆಂದು ಮತ್ತೊಂದು

ಶಾಸನ ದಾಖಲಿಸುತ್ತದೆ.[49] ಒಂದು ಐತಿಹ್ಯದ ಪ್ರಕಾರ ವಿಮಲನಾಥ ಬಸದಿಯ ಮೂಲ ಬಿಂಬವನ್ನು ಬೇರೆಡೆಯಿಂದ ತಂದು ದೇವರಾಜ ಒಡೆಯರ ಕಾಲದಲ್ಲಿ ಅಲ್ಲಿ ನಿರ್ಮಿಸಲಾಯಿತೆಂದು ಭಾವಿಸಬೇಕು. ಹಾಗಾಗಿ ಕಟ್ಟಡ ಒಂದು ಕಾಲದ್ದು ಮತ್ತು ಶಿಲ್ಪ ಮತ್ತೊಂದು ಕಾಲದ್ದು. ಇವುಗಳ ಹಿನ್ನೆಲೆಯಲ್ಲಿ ಒಂದು ಜಿನಾಲಯವನ್ನು ಗುರುತಿಸುವುದು ಅಥವಾ ಕಾಲನಿರ್ದೇಶಿಸುವುದು ಕಷ್ಟವಾಗುತ್ತದೆ.

ಮಂಡ್ಯ ಜಿಲ್ಲೆಯಲ್ಲಿ ಕೇವಲ ಕಂಬದಹಳ್ಳಿಯಲ್ಲಿ ಮಾತ್ರ ಜೈನ ಧರ್ಮಕ್ಕೆ ಸೇರಿದ ಮಾನಸ್ತಂಭ ಕಂಡುಬಂದಿದೆ.[50] ಆದರೆ ಈ ಕಂಬದಲ್ಲಿ ಶಾಸನವನ್ನು ಹೊರತುಪಡಿಸಿದರೆ ವಿಶೇಷವಾದ ವಾಸ್ತುಲಕ್ಷಣಗಳು ಕಂಡುಬರುವುದಿಲ್ಲ. ಕೆಳಭಾಗದಲ್ಲಿ ಅಂದರೆ ಮಾನಸ್ತಂಭವು ಭೂಮಿಗೆ ಹೊಂದಿರುವಂತೆ ಚೌಕಾಕಾರವಾಗಿದ್ದು ಅದರ ಮೇಲುಭಾಗದಲ್ಲಿ ಅಂದರೆ ಜೈನಧರ್ಮದ ತೀರ್ಥಂಕರರನ್ನು ಮತ್ತು ಇತರ ಜಿನಬಿಂಬಗಳನ್ನು ಚಿತ್ರಿಸುವ ಹಂತದಲ್ಲಿ ಹದಿನಾರು ಭುಜಗಳನ್ನು ಹೊಂದಿದ ಕೊಳಲಿನಾಕೃತಿಯ ರಚನೆಯಿಂದ ಕೆತ್ತಲ್ಪಟ್ಟಿದ್ದು ಮೇಲ್ಭಾಗದಲ್ಲಿ ಉರುಳೆಯಾಕಾರದ ಭಾಗವನ್ನು ಹೊಂದಿದೆ. ತುತ್ತುತುದಿಯಲ್ಲಿ ಕಂಬಗಳ ಮೇಲೆ ಕಂಡುಬರುವ ಬೋದಿಗೆಯಾಕಾರದ ಪೀಠವನ್ನು ಹೊಂದಿದೆ. ಹದಿನಾರು ಮುಖಗಳ ಭಾಗ ಪ್ರಾರಂಭವಾಗುವ ಮುನ್ನ ಗಂಗರ ಕಂಬಗಳಲ್ಲಿ ಕಂಡುಬರುವ ಮಾಲಾಅಲಂಕಾರಿಕಗಳು ಪದ್ಮದಳಗಳು ಕಂಡುಬರುತ್ತವೆ. ಉದ್ದವಾದ ಲಾಶುನ, ತಾಡಿ, ಘಟ, ಕಂಠಪಾಳಿ, ಹಿರಕ, ವೃತ್ತವೇತರ ಮುಂತಾದ ಅಲಂಕರಣಿಕ ಭಾಗಗಳು ಕಂಡುಬರುತ್ತವೆ. ತುತ್ತ ತುದಿಯಲ್ಲಿ ಇರುವ ಬೋದಿಗೆಯ ಫಲಕದ ಮೇಲೆ ದ್ವಿಬಾಹು ಸಿದ್ದಾಯಿಕ ಯಕ್ಷನ ಮೂರ್ತಿಯಿದೆ. ಈ ಮೂರ್ತಿಯು ಉತ್ತರಾಭಿಮುಖವಾಗಿರುವಂತೆ ಕುಳ್ಳಿರಿಸಲಾಗಿದೆ.[51]

ಜಿಲ್ಲೆಯ ಎಲ್ಲ ಜೈನ ನೆಲೆಗಳನ್ನು ಸರ್ವೇಕ್ಷಣೆ ಮಾಡಿದ ನಂತರವೂ ನಮಗೆ ಕೇವಲ ಎರಡು ಬಾಹುಬಲಿ ಶಿಲ್ಪಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. ಒಂದು ಜಿಲ್ಲೆಯ ಅತಿಪ್ರಾಚೀನ ನೆಲೆಯಾದ ಮದ್ದೂರು ತಾಲ್ಲೂಕಿನ ಅರೆತಿಪ್ಪೂರಿನಲ್ಲಿ ಮತ್ತು ಎರಡನೆಯದು ಗಂಗ ಮತ್ತು ಹೊಯ್ಸಳರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಬಸ್ತಿಹೊಸಕೋಟೆಯಲ್ಲಿ. ಅರೆತಿಪ್ಪೂರಿನ ಬಾಹುಬಲಿ ಮೂರ್ತಿಯು ಉಬ್ಬು ಶಿಲ್ಪವಾಗಿದ್ದು ಸುಮಾರು ಹತ್ತು ಇಂಚು ದಪ್ಪದ ಎರಡು ಅಡಿ ಅಗಲದ ಏಳು ಅಡಿ ಎತ್ತರದ ಗ್ರಾನೈಟ್ ಶಿಲೆಯ ಚಪ್ಪಡಿಯ ಮೇಲೆ ಕೆತ್ತಲಾಗಿದ್ದು ಅದನ್ನು ಅರೆತಿಪ್ಪೂರಿನ ಎತ್ತರವಾದ ಬೆಟ್ಟದ ತುತ್ತತುದಿಯಲ್ಲಿ ಸ್ಥಾಪಿಸಲಾಗಿದೆ. ವಿದ್ವಾಂಸರ ಪ್ರಕಾರ ಈ ಬಾಹುಬಲಿ ಮೂರ್ತಿಯನ್ನು ಶ್ರವಣಬೆಳಗೊಳದ ಮೂರ್ತಿಯನ್ನು ಸ್ಥಾಪಿಸುವುದಕ್ಕೆ ಪೂರ್ವದಲ್ಲಿಯೇ ಸ್ಥಾಪಿಸಿರಬಹುದೆಂಬ ಅಭಿಪ್ರಾಯಗಳಿವೆ. ಅದಕ್ಕೆ ಕಾರಣಗಳು ಇಲ್ಲದಿಲ್ಲ. ಇದು

ಉಬ್ಬುಶಿಲ್ಪವಾಗಿರುವುದರಿಂದ ಮತ್ತು ಈ ತೀರ್ಥದಲ್ಲಿ ಗಂಗರ ಪ್ರಾರಂಭ ಕಾಲದ ಜಿನಾಲಯಗಳು ಬೇರೊಂದು ಬೆಟ್ಟದಲ್ಲಿ ಕಂಡುಬಂದಿರುವುದರಿಂದ ಶ್ರವಣಬೆಳಗೊಳದ ಮಾದರಿಯಲ್ಲಿಯೇ ಈ ತೀರ್ಥವಿರುವುದರಿಂದ ಗಂಗರ ರಾಜಧಾನಿ ತಲಕಾಡಿಗೆ ಇದು ಅತೀ ಸಮೀಪದಲ್ಲಿರುವುದರಿಂದ ಪ್ರಾಯಶಃ ಪ್ರಾರಂಭದ ದಿನಗಳಲ್ಲಿ ಇಲ್ಲಿ ಗೊಮ್ಮಟನನ್ನು ಸ್ಥಾಪಿಸಿ ಆನಂತರ ಶ್ರವಣಬೆಳಗೊಳದಲ್ಲಿ ಬೃಹತ್ ಗೊಮ್ಮಟನನ್ನು ಸ್ಥಾಪಿಸಿರಬಹುದಾದ ಸಾಧ್ಯಾಸಾಧ್ಯತೆಯನ್ನು ತಳ್ಳಿ ಹಾಕಲಾಗುವುದಿಲ್ಲ. ಶಿಲ್ಪದ ದೃಷ್ಟಿಯಿಂದ ಬಾಹುಬಲಿ ಮೂರ್ತಿಯು ಹೆಚ್ಚಿನ ಯಾವ ಅಲಂಕರಣಿಕೆಯನ್ನಾಗಲಿ ಕಂಡರಣಿಕೆಯಲ್ಲಾಗಲಿ ಮಹತ್ವವಾದುದು ಕಂಡುಬರದೆ ಒಂದು ಸಾಮಾನ್ಯ ಬಾಹುಬಲಿ ಮೂರ್ತಿಯಂತೆ ಕಂಡುಬರುತ್ತದೆ.[52]

ಬಸದಿ ಹೊಸಕೋಟೆಯಲ್ಲಿರುವ ಬಾಹುಬಲಿ ಮೂರ್ತಿಯು ಆಕಾರದಲ್ಲಿ ಮತ್ತು ಕೆತ್ತನೆಯಲ್ಲಿ ಹಳೇಬೀಡಿನಲ್ಲಿರುವ ಬಾಹುಬಲಿ ಮೂರ್ತಿಯನ್ನು ಹೋಲುತ್ತದೆ. ಆದರೆ ಈ ಮೂರ್ತಿಯು ಭಿನ್ನವಾಗಿದ್ದು ಇದಕ್ಕೆ ನಿತ್ಯ ಅರ್ಚನೆ, ಪೂಜೆ ಇತ್ಯಾದಿ ಕೈಂಕರ್ಯಗಳು ನಡೆಯದೆ ನಿರ್ಲಕ್ಷಿಸಲ್ಪಟ್ಟಿವೆ. ಬಸದಿ ಹೊಸಕೋಟೆಯಲ್ಲಿರುವ ಕೆಲ ಶಾಸನಗಳು ಹೊಯ್ಸಳರ ಕಾಲದಲ್ಲಿ ಇಲ್ಲಿ ದೇವಾಲಯ ನಿರ್ಮಾಣ ಚಟುವಟಿಕೆ ಮುಂದುವರಿದದ್ದನ್ನು ಉಲ್ಲೇಖಿಸುತ್ತವೆ. ಹಾಗಾಗಿ ಹೊಯ್ಸಳರ ಕಾಲಘಟ್ಟದಲ್ಲಿಯೂ ಇದೊಂದು ಪ್ರಮುಖ ವ್ಯಾಪಾರ ಮಾರ್ಗವಾಗಿದ್ದರಿಂದ ವ್ಯಾಪಾರ ಕೇಂದ್ರ ಕನ್ನಂಬಾಡಿಯನ್ನು ಇದು ಸಂಪರ್ಕಿಸುತ್ತಿದ್ದುದರಿಂದ ಕೇರಳದ ವೈನಾಡು, ಕೊಡಗು ಜಿಲ್ಲೆ, ಹಾಸನದ ಹಳೇಬೀಡು, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಹಾಗೆ ಮುಂದುವರಿದು ರಾಜಧಾನಿ ತಲಕಾಡನ್ನು ಸಂಪರ್ಕಿಸುವ ಮಾರ್ಗಗಳು ಕನ್ನಂಬಾಡಿಯಲ್ಲಿ ಸೇರುತ್ತಿದ್ದುದರಿಂದ ಇದೊಂದು ಆ ಕಾಲಕ್ಕೆ ಪ್ರಮುಖ ವ್ಯಾಪಾರಿ ಕೇಂದ್ರ ಕೂಡ ಆಗಿದ್ದಿತು. ಹೀಗಾಗಿ ಅದರ ಸಮೀಪದಲ್ಲೇ ಇರುವ ಈ ಗ್ರಾಮದಲ್ಲಿ ಜೈನರು ತಮ್ಮ ಧಾರ್ಮಿಕ ನೆಲೆಯನ್ನು ನಿರ್ಮಿಸಿಕೊಂಡಿದ್ದರಲ್ಲಿ ಆಶ್ಚರ್ಯವಿಲ್ಲ. ಹಾಗಾಗಿ ಪ್ರಮಾಣ ಮತ್ತು ನಿರ್ಮಾಣ ಶೈಲಿಯ ಆಧಾರದ ಮೇಲೆ ಬಾಹುಬಲಿ ಮೂರ್ತಿಯು ಹೊಯ್ಸಳರ ಕಾಲದ್ದೆಂದು ದಾಖಲಿಸಬಹುದು. ಈ ಗೊಮ್ಮಟ ಮೂರ್ತಿಯು ಸುಮಾರು 15 ಅಡಿ ಎತ್ತರವಿದ್ದು ಪಾದದಿಂದ ಶಿರದವರೆಗೆ ಬಳ್ಳಿಗಳನ್ನು ಕೊರೆದು ಅಲಂಕರಿಸಲಾಗಿದೆ. ತಲೆಯಲ್ಲಿ ಗುಂಗುರು ಕೂದಲಿನಂತೆ ಕೆತ್ತಲಾಗಿದ್ದು, ಇದನ್ನು ವಿಷ್ಣುವರ್ಧನನ ಮಂತ್ರಿಯಾಗಿದ್ದ ಪುಣಿಸಿಮಯ್ಯನು ಕೆತ್ತಿಸಿದಂತೆ ತಿಳಿದುಬರುತ್ತದೆ. ಪ್ರಸ್ತುತ ಈ ಗೊಮ್ಮಟ ಮೂರ್ತಿಗೆ ಯಾವುದೇ ಪೂಜೆ ಇತ್ಯಾದಿ ನಿತ್ಯನೈಮಿತ್ತಿಕ ಅರ್ಚನೆಗಳು ನಡೆಯುತ್ತಿಲ್ಲ. ಇದೇ ಗ್ರಾಮಕ್ಕೆ ಸಮೀಪದಲ್ಲಿರುವ ಬೆಳಗೊಳದಲ್ಲಿ ಜೈನ ಬಸದಿ ಇದ್ದಿತೆಂದು ಶಾಸನವೊಂದು

ದಾಖಲಿಸುತ್ತಾದರೂ ಅಲ್ಲಿನ ಶಿಲ್ಪಗಳನ್ನು ಸದ್ಯ ಸ್ಥಳಾಂತರಿಸುವುದರಿಂದ ಆ ಕಟ್ಟಡದ ಬಗೆಗೆ ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ.[53]

ಮಂಡ್ಯ ಜಿಲ್ಲೆಯ ಅತ್ಯಂತ ಪ್ರಾಚೀನ ಜೈನಕೇಂದ್ರ ಅರೆತಿಪ್ಪೂರಿನ ದೊಡ್ಡಬೆಟ್ಟದಲ್ಲಿ ದಕ್ಷಿಣ ಭಾರತದ ಅತಿಪ್ರಾಚೀನ ಬಾಹುಬಲಿ ಮೂರ್ತಿಯನ್ನು ಕಾಣಬಹುದು. ಹಾಗೆಯೇ ಚಿಕ್ಕಬೆಟ್ಟದ ಬಸದಿಗಳ ಸಮುಚ್ಛಯದ ನಡುವೆ ಇತ್ತೀಚಿನ ಉತ್ಖನನಗಳ ಸಮಯದಲ್ಲಿ ಎರಡು ಪೂಜಾಮೂರ್ತಿಗಳನ್ನು ಗುರುತಿಸಲಾಗಿದೆ. ಇದಲ್ಲದೆ ಕೃಷ್ಣರಾಜಪೇಟೆ ತಾಲ್ಲೂಕು ಹೊಸಹೊಳಲಿನ ಜೈನ ಬಸದಿಯ ಪ್ರಾಂಗಣದಲ್ಲಿ ಕತ್ತರಿಘಟ್ಟದಿಂದ ಸ್ಥಳಾಂತರಿಸಿದ ಒಂದು ಬಾಹುಬಲಿ ಮೂರ್ತಿಯನ್ನು ಕಾಣುತ್ತೇವೆ. ಕಂಬದಹಳ್ಳಿಯ ಪಂಚಕೂಟ ಬಸದಿಯ ಪ್ರವೇಶದ್ವಾರದ ಬಲಪಾರ್ಶ್ವದಲ್ಲಿ ಶಿರವಿಲ್ಲದ ಸುಮಾರು 10–11ನೆಯ ಶತಮಾನಕ್ಕೆ ಸೇರಬಹುದಾದ ಬಾಹುಬಲಿಯ ಮೂರ್ತಿ ಕಂಡುಬರುತ್ತದೆ. ಇದಲ್ಲದೆ ಕೃಷ್ಣರಾಜಪೇಟೆ ತಾಲ್ಲೂಕಿನ ಬಸ್ತಿಹೊಸಕೋಟೆ ಗ್ರಾಮದಲ್ಲಿ ಸುಮಾರು 12 ಅಡಿಗೂ ಎತ್ತರವಾದ ಮತ್ತೊಂದು ಬಾಹುಬಲಿ ಮೂರ್ತಿಯಿದ್ದು ಅದು ಭಗ್ನವಾಗಿದೆ. ಶಾಸನವೊಂದು ನಾಗಮಂಗಲ ತಾಲ್ಲೂಕಿನ ದಡಗದಲ್ಲಿ ಬಾಹುಬಲಿ ಕೂಟವಿದ್ದುದನ್ನು ದಾಖಲಿಸುತ್ತದೆ. ಹೀಗಾಗಿ ಮಂಡ್ಯ ಜಿಲ್ಲೆಯಲ್ಲಿಯೂ ತೀರ್ಥಂಕರರುಗಳ ಆರಾಧನೆಯೊಂದಿಗೆ ಬಾಹುಬಲಿಯ ಆರಾಧನೆ ಮತ್ತು ಇತರ ಕೈಂಕರ್ಯ ವಿಧಿವಿಧಾನಗಳು ಪ್ರಚಲಿತದಲ್ಲಿದ್ದವೆಂಬುದನ್ನು ಖಚಿತವಾಗಿ ದಾಖಲಿಸಬಹುದು.

ಮಂಡ್ಯ ಜಿಲ್ಲೆಯ ಜೈನ ಶಿಲ್ಪಗಳನ್ನು ಅಧ್ಯಯನ ಮಾಡುವಾಗ ಇಲ್ಲಿಯ ಶಿಲ್ಪಗಳಲ್ಲಿ ಸಾಕಷ್ಟು ಸ್ಥಳಾಂತರಗೊಂಡಿರುವುದು ಕಂಡುಬರುತ್ತದೆ. ವಿಶೇಷವಾಗಿ ಪುರಾತನ ಜೈನ ಬಸದಿಗಳಲ್ಲಿದ್ದ ಶಿಲ್ಪಗಳನ್ನು ಇತಿಹಾಸದ ಕಾಲಘಟ್ಟದ ಕಾಲದಲ್ಲಿಯೇ ಬಹುಸಂಖ್ಯಾತ ಜೈನರಿದ್ದ ಪ್ರದೇಶಗಳಿಗೆ ಅವುಗಳನ್ನು ವರ್ಗಾಯಿಸಿ ಅಲ್ಲಿ ನೂತನ ಬಸದಿಗಳನ್ನು ನಿರ್ಮಿಸಿ ಆ ಬಸದಿಗಳಲ್ಲಿ ಹೊರಗಿನಿಂದ ತಂದ ಶಿಲ್ಪಗಳನ್ನು ಪ್ರತಿಷ್ಠಾಪಿಸಿರುವುದನ್ನು ಗುರುತಿಸಬಹುದು. ಉದಾಹರಣೆಗೆ ಬೆಳ್ಳೂರಿನ ವಿಮಲನಾಥ ಬಸದಿ, ಶ್ರೀರಂಗಪಟ್ಟಣದ ಆದೀಶ್ವರ ಬಸದಿ, ಹೊಸಹೊಳಲಿನ ಪಾರ್ಶ್ವನಾಥ ಬಸದಿ, ಮುರುಕನಹಳ್ಳಿಯ ಪಾರ್ಶ್ವನಾಥ ಬಸದಿ ಇತ್ಯಾದಿ ಬಸದಿಗಳನ್ನು ಗುರುತಿಸಬಹುದು. ಇದೊಂದೆಡೆಯಾದರೆ ಜೈನ ಪರಂಪರೆ ರಾಜರ ಮತ್ತು ಸಮಾಜದ ರಕ್ಷಣೆಯಿಂದ ಹೊರಬಂದ ನಂತರ ಕೆಲವೊಂದು ದೇವಾಲಯಗಳು ಇತರ ಪರಂಪರೆಯ ದೇವಾಲಯಗಳಾಗಿ ಪರಿವರ್ತಿತವಾಗಿರುವುದಕ್ಕೆ ಸಹ ಉದಾಹರಣೆಗಳು ಲಭ್ಯವಿವೆ. ನಾಗಮಂಗಲ ತಾಲ್ಲೂಕಿನ ಹಟ್ಟಣ ಗ್ರಾಮದ ಜಿನಾಲಯವು ಇಂದು ವೀರಭದ್ರ ದೇವಾಲಯ – ಶೈವ

ದೇವಾಲಯವಾಗಿ ಪರಿವರ್ತಿತವಾಗಿರುವುದು ಕಂಡುಬರುತ್ತದೆ. ಹಂಪ ನಾಗರಾಜಯ್ಯನವರು ಮಂಡ್ಯದ ಗುತ್ತಲುವಿನ ಶ್ರೀ ಅರ್ಕೇಶ್ವರ ದೇವಾಲಯವು ಹಿಂದೆ ಜಿನಾಲಯವಾಗಿದ್ದು ಆನಂತರ ಶಿವಾಲಯವಾಗಿ ಮಾರ್ಪಟ್ಟಿರಬೇಕೆಂದು ದಾಖಲಿಸಿರುತ್ತಾರೆ. ಈ ಎಲ್ಲ ಮಾಹಿತಿಗಳನ್ನನುಸರಿಸಿ ಜೈನ ಕ್ಷೇತ್ರಗಳನ್ನು ದಾಖಲಿಸುವ ಹಂತದಲ್ಲಿಯೇ ಆಯಾ ಕ್ಷೇತ್ರಗಳಲ್ಲಿ ಕಂಡುಬಂದ ಶಿಲ್ಪಗಳ ಬಗೆಗೆ ಸಾಕಷ್ಟು ಮಾಹಿತಿಯನ್ನು ನೀಡಲಾಗಿದೆ. ಆದರೂ ಈ ಹಂತದಲ್ಲಿ ಕೆಲವೊಂದು ವಿಶೇಷ ಕ್ಷೇತ್ರಗಳಲ್ಲಿ ಮಾತ್ರ ಕಂಡುಬಂದಿರುವ ಶಿಲ್ಪಗಳನ್ನು ಮತ್ತವುಗಳ ಕಾಲವನ್ನು ದಾಖಲಿಸುವ ಪ್ರಯತ್ನ ಮಾಡಲಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಪರಿಪೂರ್ಣವಾಗಿ ಉಳಿದುಕೊಂಡು ಬಂದಿರುವ ಜೈನ ಕ್ಷೇತ್ರಗಳಲ್ಲಿ ಅತಿ ಪ್ರಮುಖವಾದುದು ಮತ್ತು ಸುಸ್ಥಿತಿಯಲ್ಲಿರುವುದು ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿ. ಇಲ್ಲಿಯೂ ಕೂಡ ತ್ರಿಕೂಟಾಚಲ ಬಸದಿ ಮಾತ್ರ ಪರಿಪೂರ್ಣವಾಗಿದೆ. ಈ ಬಸದಿಯೊಳಗೆ ಕೂಡ ಕಂಬದಹಳ್ಳಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜೈನ ನೆಲೆಗಳಲ್ಲಿ ಕಂಡುಬಂದ ವಿಗ್ರಹಗಳನ್ನು ಸಂಗ್ರಹಿಸಿ ಇಡಲಾಗಿದೆ. ಕಾರಣ ದೇವಾಲಯದ ಹೊರಭಾಗದಲ್ಲಿ ಅನೇಕ ಮುರಿದ ಶಿಲ್ಪಗಳು ಇಂದಿಗೂ ಹಾಗೆಯೇ ಸಂರಕ್ಷಿಸಲ್ಪಟ್ಟಿವೆ. ಅಲ್ಲದೆ ಕೆಲವೊಂದು ಜೈನ ಶಿಲ್ಪಗಳನ್ನು ದೇವಾಲಯಗಳ ಒಳಭಾಗದಲ್ಲಿ ಸಂರಕ್ಷಿಸಲಾಗಿದೆ. ಈ ಕಾರಣಕ್ಕಾಗಿ ತ್ರಿಕೂಟಾಚಲ ಬಸದಿಯಲ್ಲಾಗಲಿ, ಶಾಂತಿನಾಥ ಬಸದಿಯಲ್ಲಾಗಲಿ ಇರುವ ಶಿಲ್ಪಗಳು ಮೂಲತಃ ಇದೇ ಬಸದಿಯ ಶಿಲ್ಪಗಳೆಂದು ದಾಖಲಿಸಲಾಗುವುದಿಲ್ಲ.[54] ಆದರೆ ಗರ್ಭಗೃಹದಲ್ಲಿರುವ ಕೆಲವು ಶಿಲ್ಪಗಳು ಮಾತ್ರ ಅಲ್ಲಿಯವೇ ಎಂದು ಗುರುತಿಸಬಹುದು. ತ್ರಿಕೂಟಾಚಲ ಬಸದಿಯಲ್ಲಿ ಆದಿನಾಥ ಸ್ವಾಮಿ, ನೇಮಿನಾಥ ಸ್ವಾಮಿ ಮತ್ತು ಶಾಂತಿನಾಥನ ಮೂರ್ತಿಗಳು ಕಂಡುಬರುತ್ತವೆ. ಇವು ಸ್ಪಿಯಟೈಟ್ ಶಿಲೆಯಲ್ಲಿ ನಿರ್ಮಿಸಲಾಗಿದ್ದು ಪ್ರಾಯಶಃ ಇವು ಹೊಯ್ಸಳರ ಕಾಲದ ರಚನೆಗಳೆಂದೇ ಹೇಳಬೇಕಾಗುತ್ತದೆ. ಇದೇ ಅಭಿಪ್ರಾಯವನ್ನು ಐ.ಕೆ. ಶರ್ಮರವರು ಕೂಡ ವ್ಯಕ್ತಪಡಿಸುತ್ತಾರೆ.[55]

ಈ ದೇವಾಲಯದಲ್ಲಿ ಕಂಡುಬರುವ ಪ್ರಮುಖ ಶಿಲ್ಪಗಳು ಅಂದರೆ ನವರಂಗದಲ್ಲಿ ಸಂರಕ್ಷಿಸಿರುವ ಕೆಲವು ಯಕ್ಷ ಯಕ್ಷಿಯರ ಶಿಲ್ಪಗಳು. ಇಲ್ಲಿ ಕೆಲವು ಗಂಗರ ಕಾಲದ ತೃಟಿತ ಶಿಲ್ಪಗಳನ್ನು ಗಮನಿಸಬಹುದು. ನವರಂಗದಲ್ಲಿ ಕಂಡುಬರುವ ಛತ್ತಿನಲ್ಲಿರುವ ದಿಕ್ಪಾಲಕ ಶಿಲ್ಪಗಳು ಪ್ರಮುಖವಾಗಿ ಗಮನಸೆಳೆಯುತ್ತವೆ. ಈ ಬಸದಿಯಲ್ಲಲ್ಲದೆ ಪಂಚಕೂಟ ಬಸದಿಯಲ್ಲಿ ಮತ್ತು ಬಸದಿಕೋಟೆಯ ದೇವಾಲಯಗಳ ಸಮುಚ್ಚಯದ ಆವರಣದಲ್ಲಿ ಕೂಡ ಅಷ್ಟದಿಕ್ಪಾಲಕರ ಶಿಲ್ಪಗಳು ಕಂಡುಬರುತ್ತವೆ. ಇವು ಬಸದಿಯೊಂದರ ಛತ್ತಿನ ಅಂಗವಾಗಿದ್ದವೆಂದೇ ಹೇಳಬೇಕು. ಆದರೆ ಅವು ಪೂರ್ಣಪ್ರಮಾಣವಾಗಿ ದೊರೆತಿಲ್ಲ. ತ್ರಿಕೂಟಾಚಲ ಬಸದಿಯ ನವರಂಗದ ಛತ್ತಿನಲ್ಲಿರುವ ಅಷ್ಟದಿಕ್ಪಾಲಕರ ವಿಗ್ರಹಗಳು ತಮ್ಮ ವಾಹನಗಳಲ್ಲಿ ಪತ್ನಿಸಮೇತರಾಗಿರುವುದು ವಿಶೇಷವೆನಿಸುತ್ತದೆ.[56]

ಅವುಗಳ ಅಲಂಕರಣ ಹಾವಭಾವಗಳು ಅವರು ಚಲನೆಯಲ್ಲಿರುವಂತೆ ಭಾಸವಾಗುತ್ತವೆ ಮತ್ತು ಪ್ರಾರಂಭದ ಪಲ್ಲವರ ಕಾಲದ ಆಭರಣ ವಸ್ತ್ರವಿನ್ಯಾಸವನ್ನು ತಮ್ಮದಾಗಿಸಿಕೊಂಡಿವೆ. ಆದಿನಾಥ ಬಸದಿಯಲ್ಲಿರುವ ಚಾಮರಧಾರಿಗಳು ಅತ್ಯಂತ ಸುಂದರವಾಗಿದ್ದು ಇವು ಶ್ರವಣಬೆಳಗೊಳದ ಚಾಮರಧಾರಿಗಳನ್ನು ನೆನಪಿಗೆ ತರಿಸುತ್ತದೆ. ಇಲ್ಲಿನ ಆದಿನಾಥ ವಿಗ್ರಹವು ಬಸಾಲ್ಟ್ ಶಿಲೆಯಲ್ಲಿ ನಿರ್ಮಾಣವಾಗಿದ್ದು ಪ್ರಾಯಶಃ ಮೂಲ ವಿಗ್ರಹವನ್ನು ಬದಲಾಯಿಸಿರುವಂತೆ ಕಂಡುಬರುತ್ತದೆ.

ಹೊಯ್ಸಳರ ಕಾಲದಲ್ಲಿ ಗರ್ಭಗುಡಿಯ ಆದಿನಾಥ ಮೂರ್ತಿಯನ್ನು ಸ್ಥಾಪಿಸಿ ಒಳಗಿದ್ದ ಮೂರ್ತಿಯನ್ನು ಹೊರಗೆ ಸ್ಥಾಪಿಸಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಇಲ್ಲಿರುವ ಧರಣೇಂದ್ರ ಯಕ್ಷ ಕೂಷ್ಮಂಡಿನಿ ಯಕ್ಷಿಯ ವಿಗ್ರಹಗಳು ರಾಷ್ಟ್ರಕೂಟರ ಕಾಲದ ಶಿಲ್ಪಗಳನ್ನು ಹೋಲುತ್ತವೆ. ಈ ಹಂತದಲ್ಲಿ ನಾಗಮಂಗಲ ತಾಲ್ಲೂಕಿನಲ್ಲಿ ರಾಷ್ಟ್ರಕೂಟರ ಶಿಲ್ಪದ ಹೋಲಿಕೆಯನ್ನು ಭೋಗವತಿ ಅಥವಾ ಬೋಗಾದಿಯ ಪಾರ್ಶ್ವನಾಥ ಜಿನಾಲಯದಲ್ಲಿ ಕಂಡುಬಂದ ಕಂಬಗಳ ಮಾದರಿಯನ್ನು ಆಧರಿಸಿ ರಾಷ್ಟ್ರಕೂಟರ ಕಾಲಕ್ಕಾಗಲೇ ಜಿಲ್ಲೆಯಲ್ಲಿ ಜೈನ ಸ್ಮಾರಕಗಳು ನಿರ್ಮಾಣವಾಗಿದ್ದವೆಂದು ಭಾವಿಸಬಹುದು.[57]

ಅದೇ ಪರಂಪರೆ ಪ್ರಾಯಶಃ ಇಲ್ಲಿನ ಶಿಲ್ಪಗಳ ನಿರ್ಮಾಣದಲ್ಲಿ ಪ್ರಭಾವ ಬೀರಿರಬೇಕು. ಆದಿನಾಥನ ಬಸದಿಯ ಗರ್ಭಗುಡಿಯಲ್ಲಿ ಕಾಯೋತ್ಸರ್ಗ ಭಂಗಿಯಲ್ಲಿರುವ ಸುಮಾರು ಏಳು ಅಡಿ ಎತ್ತರದ ಆದಿನಾಥ ಮೂರ್ತಿಯು ಕಂಡುಬರುತ್ತದೆ. ಈತನು ಪದ್ಮಪೀಠದ ಮೇಲೆ ಪ್ರಭಾವಳಿ ಸಹಿತವಾಗಿ ನಿಂತಿರುವಂತೆ ಕೆತ್ತಲಾಗಿದೆ. ಪ್ರಭಾವಳಿಯಲ್ಲಿ ವಿದ್ಯಾಧರ ತೋರಣವಿದೆ. ಇದು ಕುಡ್ಯಸ್ತಂಭಿಕ ಮಾದರಿಯನ್ನು ಅನುಸರಿಸಿದೆ. ಗಂಗರ ಅತ್ಯಂತ ಸುಂದರ ಜೈನ ಶಿಲ್ಪಗಳಲ್ಲಿ ಇದೂ ಒಂದಾಗಿದೆ. ಇದಲ್ಲದೆ ಈ ದೇವಾಲಯದಲ್ಲಿ ದ್ವಿಬಾಹು ಅಂಬಿಕೆಯ ಮೂರ್ತಿಯಿದ್ದು ಆಕೆಯು ಸಿಂಹವಾಹಿನಿಯಾಗಿರುವಂತೆಯೂ ಆಕೆಯ ಇಬ್ಬರು ಮಕ್ಕಳು ಜೊತೆಗಿರುವಂತೆ ಕೆತ್ತಲಾಗಿದೆ.[58] ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿಯಲ್ಲಿರುವ ಮೂರ್ತಿಯನ್ನು ಇದು ಅನುಕರಿಸುತ್ತದೆಂದು ಭಾವಿಸಲಾಗಿದೆ.

ಇಲ್ಲಿನ ಚಾಮರಧಾರಿಗಳು ಹಲವಾರು ಆಭರಣಗಳನ್ನು ಧರಿಸಿದ್ದು ಉಪವೀತ, ಯಜ್ಞೋಪವೀತ, ಕಿರೀಟ ಮುಕುಟ ಮುಂತಾದವುಗಳನ್ನು ಹೊಂದಿವೆ. ಕತ್ತಿನಲ್ಲಿ ಕಂಠಾಭರಣ ಮೇಖಲೆ, ಒಡ್ಯಾಣ ಮತ್ತು ಅದರಲ್ಲಿರುವ ಅಲಂಕೃತವಾದ ಬಂಧ ತುಂಬ ಸುಂದರವಾಗಿ ಮೂಡಿಬಂದಿದೆ. ಕೇಯೂರ ಪದಕದಲ್ಲಿರುವ ಸುಂದರ ರಚನೆಗಳು ಗಂಗರ ಕಾಲದ ಅತ್ಯುತ್ತಮ

ಉದಾಹರಣೆಗಳಾಗಿವೆ. ಸಾಧಾರಣ ಕರ್ಣಕುಂಡಲಗಳನ್ನು ಇವು ಹೊಂದಿವೆ. ಈ ಕಾಲದ ಎಲ್ಲ ಜಿನ ಮೂರ್ತಿಗಳು ಸಾಮಾನ್ಯವಾಗಿ ಅಗಲವಾದ ವಕ್ಷಸ್ಥಲವನ್ನು ಅದಕ್ಕೆ ಅನುಗುಣವಾದ ಬಾಹುಗಳನ್ನು ಹೊಂದಿರುವಂತೆ ಕೆತ್ತಲಾಗಿದೆ. ಎಲ್ಲ ಮೂರ್ತಿಗಳೂ ತಲೆಯ ಹಿಂಭಾಗದಲ್ಲಿ ಪ್ರಭಾವಳಿಯನ್ನು ಹೊಂದಿರುವಂತೆ ಕೆತ್ತಲ್ಪಟ್ಟಿವೆ. ಅರ್ಧನಿಮೀಲಿತ ನೇತ್ರಗಳು ಸಣ್ಣ ಹಣೆ, ಮುಂತಾದವು ಆ ವಿಗ್ರಹಗಳ ಸಹಜ ಸೌಂದರ್ಯವನ್ನು ಹೆಚ್ಚಿಸುತ್ತವೆ. ಈ ದೇವಾಲಯದ ಒಳಗಿರುವ ಅನೇಕ ಯಕ್ಷ ಯಕ್ಷಿಯರಲ್ಲಿ ಸರ್ವಾನುಭೂತಿ ಯಕ್ಷಿಯ ವಿಗ್ರಹ ಹೆಚ್ಚು ಅಲಂಕೃತವಾಗಿದೆ ಮತ್ತು ಅದರಲ್ಲಿರುವ ಸೌಂದರ್ಯ ನಮ್ಮ ಗಮನವನ್ನು ಸೆಳೆಯುತ್ತದೆ. ಆಕೆಯು ಅತ್ಯಂತ ಯೌವ್ವನಾವಸ್ಥೆಯಲ್ಲಿರುವಂತೆ ಹಲವು ಆಭರಣಗಳನ್ನು ಹೊಂದಿರುವಂತೆಯೂ ಕೆತ್ತಿರುವುದು ಶಿಲ್ಪದ ಸೌಂದರ್ಯವನ್ನು ಹೆಚ್ಚಿಸುತ್ತದೆಯಲ್ಲದೆ ಶಿಲ್ಪಿಯ ಸೌಂದರ್ಯೋಪಾಸನೆಯನ್ನು ದಾಖಲಿಸುತ್ತದೆ.[59]

ಇವನ್ನು ಹೊರತುಪಡಿಸಿದರೆ ಮಂಡ್ಯ ಜಿಲ್ಲೆಯಲ್ಲಿ ಬಹುತೇಕ ಜಿನಾಲಯಗಳು ಗಂಗರ ಕಾಲದಲ್ಲಿಯೇ ನಿರ್ಮಾಣಗೊಂಡು ಆನಂತರ ಹೊಯ್ಸಳರ ಕಾಲದಲ್ಲಿ ಅವು ಪ್ರವರ್ಧಮಾನಕ್ಕೆ ಬಂದವು ಅಥವಾ ಪುನರುಜ್ಜೀವನಗೊಂಡವು. ಈ ಕಾಲದಲ್ಲಿ ನಡೆದ ಈ ಪುನರುಜ್ಜೀವನ ವಿಜಯನಗರ ಕಾಲದ ಹೊತ್ತಿಗೆ ಮುಂದುವರಿಯಲಿಲ್ಲ. ಹೀಗಾಗಿ ವಾಸ್ತುಶೈಲಿಯನ್ನು ಆಧಾರವಾಗಿಟ್ಟುಕೊಂಡು ಮಂಡ್ಯ ಜಿಲ್ಲೆಯಲ್ಲಿ ಜೈನ ವಾಸ್ತುವಿನ ಎಲ್ಲ ಹಂತಗಳನ್ನು ಅಥವಾ ಲಕ್ಷಣಗಳನ್ನು ದಾಖಲಿಸಲು ಸಾಧ್ಯವಾಗುವುದಿಲ್ಲ. ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲುವಿನ ಜೈನಬಸದಿ ಮತ್ತು ಮುರುಕನಹಳ್ಳಿಯ ಜೈನಬಸದಿ, ಶ್ರೀರಂಗಪಟ್ಟಣದ ಆದೀಶ್ವರ ಬಸದಿ ಇವೆಲ್ಲವೂ ಹೊಯ್ಸಳರ ಕಾಲದ ಶಿಲ್ಪಗಳನ್ನು ಹೊಂದಿದ್ದರೂ ಇವು ಆ ಕಾಲದ ರಚನೆಗಳೆಂದು ದಾಖಲಿಸಲು ನಮಗೆ ಯಾವುದೇ ಶಾಸನ ಆಕರಗಳಾಗಲಿ ಅಥವಾ ವಾಸ್ತುಶೈಲಿಯ ನಿರ್ಮಿತಿಯ ಕುರುಹುಗಳಾಗಲಿ ಕಂಡುಬಂದಿಲ್ಲ. ಈ ವಿವರಗಳನ್ನು ಗಮನಿಸಿದಾಗ ಮಂಡ್ಯ ಜಿಲ್ಲೆಯ ಜೈನ ಮಂದಿರಗಳು ಹೊಯ್ಸಳ ಸಾಮ್ರಾಜ್ಯದ ನಂತರ ಸಾಕಷ್ಟು ಹಾನಿಗೊಳಗಾದವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ಕಾರಣಗಳನ್ನು ಗುರುತಿಸಬಹುದು. ಹೊಯ್ಸಳರ ಕಾಲಘಟ್ಟದಲ್ಲಿಯೇ ಮಂಡ್ಯ ಜಿಲ್ಲೆಯಲ್ಲಿ ಜೈನಧರ್ಮ ಒಂದು ಮಟ್ಟದ ಹಿನ್ನೆಡೆಯನ್ನು ಅನುಭವಿಸಿತೆಂದರೂ ತಪ್ಪಾಗಲಿಕ್ಕಿಲ್ಲ. ಕಾರಣ ರಾಮಾನುಜರ ಐತಿಹ್ಯವನ್ನು ಕುರಿತು ಮಾತನಾಡುತ್ತ ತೊಂಡನೂರಿನಲ್ಲಿ ರಾಮಾನುಜಾಚಾರ್ಯರು ಮತಪ್ರಚಾರಕ್ಕೆ ಆಗಮಿಸಿದಾಗ ಅಲ್ಲಿ ಜೈನಪಂಡಿತರೊಂದಿಗೆ ವಾಗ್ವಾದ ನಡೆಸಿ ಅವರನ್ನು ವಾದದಲ್ಲಿ ಸೋಲಿಸಿ ಅವರೆಲ್ಲರನ್ನು ಶ್ರೀವೈಷ್ಣವರಾಗಿ ಮತಾಂತರಿಸಿದರೆಂದು ಅನೇಕ ಗ್ರಂಥಗಳು ದಾಖಲಿಸುತ್ತವೆ. ಹೊಯ್ಸಳರ

ಇತಿಹಾಸದ ಎಲ್ಲ ಗ್ರಂಥಗಳು ಬಿಟ್ಟಿದೇವನು ಅಥವಾ ಹೊಯ್ಸಳ ವಿಷ್ಣುವರ್ಧನನು ಜೈನಮತೀಯನಾಗಿದ್ದು ರಾಮಾನುಜಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಶ್ರೀವೈಷ್ಣವ ಪಂಥವನ್ನು ಸ್ವೀಕರಿಸಿದನೆಂದು ಅದನ್ನು ಪ್ರಚಾರಪಡಿಸಲೆಂದೇ ವೈಷ್ಣವ ದೇವಾಲಯಗಳನ್ನು ಆತನು ನಿರ್ಮಿಸಿದನೆಂದು ಕೆಲವಿದ್ವಾಂಸರು ಭಾವಿಸುತ್ತಾರೆ. ಇತ್ತೀಚೆಗೆ ಸೆಲ್ವಪಿಳ್ಳೆ ಅಯ್ಯಂಗಾರ್‌ರವರು ರಾಮಾನುಜರು ತೊಂಡನೂರಿನಲ್ಲಿ ಮತ್ತು ಮೇಲುಕೋಟೆಯಲ್ಲಿ ವಾಸವಿದ್ದು ಆ ಕಾಲಘಟ್ಟದಲ್ಲಿ ತೊಂಡನೂರು, ಮೇಲುಕೋಟೆ, ತಲಕಾಡು, ಬೇಲೂರು ಗದುಗದಲ್ಲಿ ವಿಷ್ಣುವಿನ ದೇವಾಲಯಗಳ ಸ್ಥಾಪನೆಗೆ ಕಾರಣರಾದರೆಂದು ದಾಖಲಿಸುತ್ತಾರೆ.[60] ಈ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಜೈನಧರ್ಮ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿರಬಹುದೆಂದು ಗುರುತಿಸಬಹುದು. ಕಾರಣ ಜೈನಧರ್ಮದಲ್ಲಿನ ಆಚಾರ–ವಿಚಾರಗಳು ಅದರ ನಿಯಮ ಆಚರಣೆಗಳು ಸಾಮಾನ್ಯನಿಗೆ ಕಠಿಣವಾಗಿದ್ದರಿಂದ ಮತ್ತು ಅವು ಬಹುತೇಕ ಅಸಾಧ್ಯವಾದ ಆಚರಣೆಗಳಾಗಿದ್ದರಿಂದ ಅತ್ಯಂತ ಸರಳ ಆಚರಣೆಯಾಗಿದ್ದ ಶ್ರೀವೈಷ್ಣವ ಪಂಥದ ಭಗವದ್‌ಭಕ್ತಿ ಅವರನ್ನು ಆಕರ್ಷಿಸಿ ಜೈನರು ಶ್ರೀವೈಷ್ಣವ ಪರಂಪರೆಯನ್ನು ಅನುಕರಿಸಿದರೆಂದು ಭಾವಿಸಿದರೆ ಅಥವಾ ಐತಿಹ್ಯದಲ್ಲಿರುವಂತೆಯೇ ರಾಮಾನುಜರಿಂದ ಜೈನರು ವೈಷ್ಣವ ದೀಕ್ಷೆ ಪಡೆದರೆಂದು ಭಾವಿಸಿದರೆ ಜೈನ ಧರ್ಮೀಯರ ಸಂಖ್ಯೆ ಆ ಕಾಲಘಟ್ಟದಲ್ಲೇ ಇಳಿಮುಖವಾಗಿರಬಹುದು. ಇದಲ್ಲದೆ ಹೊಯ್ಸಳ ಮನೆತನದ ಕೊನೆಯ ದಿನಗಳಲ್ಲಿ ದಕ್ಷಿಣ ಭಾರತದ ಮೇಲೆ ನಡೆದ ಮುಸಲ್ಮಾನರ ಧಾಳಿ ದಕ್ಷಿಣ ಕರ್ನಾಟಕದ ವ್ಯಾಪಾರಿ ಮಾರ್ಗಗಳನ್ನು ಅನುಸರಿಸಿತ್ತೆಂದು ಭಾವಿಸಲಾಗಿದೆ.

ಆ ಕಾಲಘಟ್ಟದಲ್ಲಿ ಬಹುತೇಕ ಮುಸಲ್ಮಾನ ಧಾಳಿಗಳು ತೊಂಡನೂರಿನಲ್ಲಿ ಮತ್ತು ಸಿರ, ನಾಗಮಂಗಲ, ಬೆಳ್ಳೂರು ಇದರ ಸುತ್ತಮುತ್ತಲಿನ ಪ್ರದೇಶಗಳ ಮೇಲೂ ನಡೆದಿರುವ ಸಾಧ್ಯತೆಗಳನ್ನು ತಳ್ಳಿಹಾಕಲಾಗುವುದಿಲ್ಲ. ಈ ಕಾಲಘಟ್ಟದಲ್ಲಿ ಸಹ ಜೈನ ವರ್ತಕರು ತಮ್ಮ ನೆಲೆಗಳನ್ನು ಬಿಟ್ಟು ಬೇರೆಡೆ ವಲಸೆ ಹೋಗಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಈ ಕಾರಣಗಳಿಂದಾಗಿಯೇ ಹಲವು ಪುರಾತನ ಜೈನಕೇಂದ್ರಗಳಲ್ಲಿದ್ದ ಜೈನ ಶಿಲ್ಪಗಳನ್ನು ಬೇರೆ ಬೇರೆ ಸ್ಥಳಗಳಿಗೆ ಆನಂತರದ ದಿನಗಳಲ್ಲಿ ವರ್ಗಾಯಿಸಿ ಅಲ್ಲಿ ಹೊಸ ದೇವಾಲಯಗಳನ್ನು ನಿರ್ಮಿಸಿರುವಂತೆ ಕಂಡುಬರುತ್ತದೆ. ಇದಕ್ಕೆ ಬೆಳ್ಳೂರಿನ ವಿಮಲನಾಥ ಬಸದಿ ಒಂದು ಶ್ರೇಷ್ಠ ಉದಾಹರಣೆ. ದೊಡ್ಡ ದೇವರಾಜ ಒಡೆಯರು ಬೆಳ್ಳೂರಿನ ಪ್ರದೇಶವನ್ನು ಗೆದ್ದುಕೊಂಡ ನಂತರ ಅಲ್ಲಿ ಮುಸಲ್ಮಾನರ ಧಾಳಿ ಕಡಿಮೆಯಾದ ನಂತರ ಜೈನ ವರ್ತಕರು ಅಲ್ಲಿ ಬಂದು ನೆಲೆಸಿದ್ದರಿಂದ ಅವರ ಕೋರಿಕೆಯ ಮೇರೆಗೆ ದೇವಾಲಯ ನಿರ್ಮಾಣಕ್ಕೆ ಅರಸ ಸಹಕರಿಸಿ ನಿರ್ಮಿಸಿಕೊಟ್ಟಿರುವನು. ಇದೇ ರೀತಿ ಹಲವಾರು ಜಿನಮಂದಿರಗಳು ದಕ್ಷಿಣ ಕರ್ನಾಟಕದ ಮೇಲೆ ನಡೆದ ಮುಸಲ್ಮಾನ ಧಾಳಿಗಳಿಂದಲೂ

ವಿಜಯನಗರದ ನಂತರದ ಬಿಜಾಪುರ ಸಂಸ್ಥಾನದ ಧಾಳಿಗಳಿಂದಲೂ ನಾಶಗೊಂಡಿರುವುದನ್ನು ಕಂಡುಕೊಳ್ಳಬಹುದು.

ಹೀಗಾಗಿ ಮಂಡ್ಯಜಿಲ್ಲೆಯಲ್ಲಿ 15ಕ್ಕೂ ಹೆಚ್ಚು ಜೈನನೆಲೆಗಳು ಕಂಡುಬಂದರೂ ಬೆರಳೆಣಿಕೆಯ ಜೈನನೆಲೆಗಳಲ್ಲಿ ಮಾತ್ರ ಜೈನ ಅವಶೇಷಗಳಿದ್ದು ಅವು ಅನೇಕ ಕಾಲಘಟ್ಟಗಳಲ್ಲಿ ತಮ್ಮ ಮೂಲ ರೂಪವನ್ನು ಕಳೆದುಕೊಂಡು ನೂತನ ರೂಪಗಳನ್ನು ಮೈಗೂಡಿಸಿಕೊಂಡು ಉಳಿದುಬಂದಿರುವುದರಿಂದ ಈ ಜೈನವಾಸ್ತುಪರಂಪರೆಯನ್ನು ಖಚಿತವಾಗಿ ಇಂತಹದೇ ಶೈಲಿಯಲ್ಲಿ ನಿರ್ಮಿಸಿದವುಗಳೆಂದು ಹೇಳಲು ಬರುವುದಿಲ್ಲ. ಆದರೆ ಜೈನ ಬಸದಿಗಳ ಅವಶೇಷಗಳನ್ನು ಗಮನಿಸಿದಾಗ ಮಂಡ್ಯ ಜಿಲ್ಲೆಯಲ್ಲಿ ಗಂಗ ರಾಷ್ಟ್ರಕೂಟ ಅವಧಿಯಲ್ಲಿ ಬೋಗಾದಿಯ ಜಿನಾಲಯವೂ, ಅರೆತಿಪ್ಪೂರು, ಕಂಬದಹಳ್ಳಿ, ಮೇಲುಕೋಟೆ, ಬಸ್ತಿಕೋಟೆ ಮುಂತಾದ ಸ್ಥಳಗಳಲ್ಲಿ ಗಂಗರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳು ಆನಂತರದ ಹೊಯ್ಸಳ ಮನೆತನದ ಕಾಲದಲ್ಲಿ ಪುನರುಜ್ಜೀವನಗೊಂಡು ಹೊಯ್ಸಳ ಮನೆತನದ ಅಂತ್ಯದವರೆಗೆ ಮುಂದುವರಿದವೆಂದು ಹೇಳಬಹುದು. ಆದರೆ ಜಿಲ್ಲೆಯ ವಾಸ್ತುಶಿಲ್ಪವನ್ನು ಖಚಿತವಾಗಿ ಹೇಳುವಾಗ ಕೇವಲ ಕಂಬದಹಳ್ಳಿ ದೇವಾಲಯವನ್ನು ಯಾಲದಹಳ್ಳಿ / ಸೂರನಹಳ್ಳಿಯ ಪಾರ್ಶ್ವಜಿನಾಲಯವನ್ನು ಮಾತ್ರ ಮೂಲ ರೂಪದಲ್ಲಿ ಗುರುತಿಸಲು ಸಾಧ್ಯವಿದೆ.

ಮಂಡ್ಯ ನಗರದ ಹೊರವಲಯದಲ್ಲಿರುವ ಗುತ್ತಲು ಗ್ರಾಮದ ಈಶ್ವರ ದೇವಾಲಯವು ಪ್ರಾರಂಭದಲ್ಲಿ ಜಿನ ದೇವಾಲಯವಾಗಿತ್ತೆಂದು ಹಂಪಾ ನಾಗರಾಜಯ್ಯ ಅವರು ಆ ದೇವಾಲಯದ ಜೀರ್ಣೋದ್ಧಾರ ಸಮಯದಲ್ಲಿ ಹೊರಡಿಸಿದ ಶಾಸನವೊಂದರಲ್ಲಿ ದಾಖಲಿಸಿದ್ದಾರೆ.[61] ಇದೇ ಅಭಿಪ್ರಾಯವನ್ನು ಅವರು ಚಂದ್ರಕೊಡೆಯಲ್ಲಿಯೂ ದಾಖಲಿಸಿದ್ದಾರೆ.[62] ಇತ್ತೀಚೆಗೆ ಮಂಡ್ಯ ಜಿಲ್ಲೆಯ ಜೈನ ಬಸದಿಗಳ ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಗುತ್ತಲುವಿನ ಶೈವ ದೇವಾಲಯದ ಗರ್ಭಗುಡಿಯಲ್ಲಿರುವ ಶಿವಲಿಂಗವು ಉದ್ಭವಮೂರ್ತಿಯಾಗಿರುವುದನ್ನು ಕಂಡುಕೊಳ್ಳಲಾಗಿದೆ. ಉದ್ಭವ ಲಿಂಗವೆಂದರೆ ಭೂಮಿಯ ಮೇಲ್ಮಟ್ಟಕ್ಕೆ ಬಂದಿರುವ ಲಿಂಗರೂಪಿ ಹುಟ್ಟುಕಲ್ಲಿಗೆ ಪಾಣಿಪೀಠವನ್ನು ಮಾಡಿ ಅದನ್ನೇ ಲಿಂಗವೆಂದು ಆರಾಧಿಸುವ ಪದ್ಧತಿ ದಕ್ಷಿಣ ಭಾರತದಲ್ಲಿ ಅತಿ ಪ್ರಾಚೀನವಾದುದು. ಈ ಬಗೆಯಲ್ಲಿ ಅತಿ ಹೆಚ್ಚಿನ ಸಂಶೋಧನೆ ಮಾಡಿರುವ ಪಿ. ಗುರುರಾಜ ಭಟ್ಟರು ಇದೇ ಅಭಿಪ್ರಾಯವನ್ನು ಮುಂದಿಡುತ್ತಾರೆ. ಪ್ರಾಯಶಃ ಗುತ್ತಲುವಿನ ಶಿವಾಲಯದಲ್ಲಿ ಕಂಡುಬಂದ ಜೈನಶಾಸನವು ದೇವಾಲಯದ ಪುನರ್‌ರಚನೆಯ ಕಾಲದಲ್ಲಿ ಸೇರ್ಪಡೆಯಾಗಿದ್ದಿರಬಹುದು. ಅಥವಾ ಆ ಜಿನಶಾಸನವನ್ನು ಸಂರಕ್ಷಿಸಲೋಸುಗ ಅದನ್ನು

ಶಿವಾಲಯದ ಮುಂದೆ ನಿಲ್ಲಿಸಿರಲೂಬಹುದು. ಹಾಗೆಂದ ಮಾತ್ರಕ್ಕೆ ಶಿವಾಲಯವೇ ಜಿನಾಲಯವಾಗಿತ್ತೆಂದು ದಾಖಲಿಸಲಾಗುವುದಿಲ್ಲ. ಗುತ್ತಲುವಿನ ಶಾಸನವನ್ನು ದಾಖಲಿಸುತ್ತ ಈ ಕೆಳಗಿನಂತೆ ಅದು ದೊರೆತ ವಿವರವನ್ನು ದಾಖಲಿಸುತ್ತಾರೆ.

"ಅರ್ಕೇಶ್ವರ ದೇವಾಲಯವು ಆಮೂಲಾಗ್ರವಾಗಿ ಜೀರ್ಣೋದ್ಧಾರವಾಗುತ್ತಿದೆ. ಹಳೆಯ ದೇವಾಲಯವನ್ನು ಕೆಡವಿದಾಗ ಎರಡು ಕಲ್ಲು ಚಪ್ಪಡಿಗಳಲ್ಲಿ ಶಾಸನವಿರುವುದನ್ನು ಗುರುತಿಸಲಾಯಿತು. ಹಾಗೆಯೇ ಮೇಲ್ಛಾವಣಿಯ ಸೂರಿನಲ್ಲಿದ್ದ ಒಂದು ಕಲ್ಲು ಚಪ್ಪಡಿಯಲ್ಲಿಯೂ ಶಾಸನವಿರುವುದು ಕಂಡುಬಂದಿತು. ಗೋಡೆಯಲ್ಲಿ ಸೇರಿಹೋಗಿದ್ದ ಎರಡು ಶಾಸನಗಳು ಅಪ್ರಕಟಿತವಾಗಿದ್ದು ಒಂದು ಶಾಸನ ಜಿನಶಾಸನವಾಗಿದೆ. ಅದು ನಿಷಧಿಕಲ್ಲು ಶಾಸನವಾಗಿದೆ" ಎಂದು ದಾಖಲಿಸಿರುತ್ತಾರೆ. ಇದನ್ನು ಗಮನಿಸಿದರೆ ಮೇಲಿನ ಶಾಸನವನ್ನು ಸಂರಕ್ಷಿಸಲೋಸುಗವೇ ಶಿವಾಲಯದಲ್ಲಿ ಇಟ್ಟಿರಬಹುದೆಂದು ಭಾವಿಸಬೇಕಾಗುತ್ತದೆ. ಕಾರಣ ನಾಗಮಂಗಲ ತಾಲ್ಲೂಕಿನ ದೇವರಹಳ್ಳಿಯ ಶೈವದೇವಾಲಯದ ಮುಂದೆ ಜಿನಶಾಸನವನ್ನು ನಿಲ್ಲಿಸಿರುವುದು ಇಂದಿಗೂ ಹಾಗೆಯೇ ಇದೆ. ಅಲ್ಲದೆ ಮಂಡ್ಯ ಜಿಲ್ಲೆಯಲ್ಲಿನ ಶೈವ ಮುನಿಗಳು ಒಂದು ಶಾಸನದಲ್ಲಿ ಜಿನಾಲಯವನ್ನು ಯಕ್ಕೋಟಿ ಜಿನಾಲಯವೆಂದು ಕರೆದು ಅದಕ್ಕೆ ಮಾನ್ಯತೆ ನೀಡಿರುವುದನ್ನು ಗಮನಿಸಿದರೆ ಶೈವ ಮತ್ತು ಜೈನರ ನಡುವೆ ಕೊಡು ಕೊಳ್ಳುವ ಸಂಸ್ಕೃತಿ ಇತ್ತೆಂದು ಭಾವಿಸಿ ಜೈನರನ್ನು ಶೈವರು, ಶೈವರನ್ನು ಜೈನರು ಪರಸ್ಪರ ಪುರಸ್ಕರಿಸುತ್ತಿದ್ದರೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಗುತ್ತಲುವಿನ ದೇವಾಲಯದ ಪರಿವರ್ತನೆಯ ಬಗ್ಗೆ ಹಂಪ ನಾಗರಾಜಯ್ಯನವರು ಹೇಳುವ ಮಾಹಿತಿಯನ್ನು ಒಪ್ಪಲು ಸಾಧ್ಯವಿಲ್ಲ.

ಕೊನೆ ಟಿಪ್ಪಣಿಗಳು

1. ಕಂಬದಹಳ್ಳಿಯಲ್ಲಿ, ಎ.ಕ. 7, ನಾ.ಮಂ. 26, 27, 28, 29, 30, 31, 32, 33, 37, 38
   ಬಿಂಡಿಗನವಿಲೆ– ಎ.ಕ. 7, ನಾ.ಮಂ. 55
   ದೇವರಹಳ್ಳಿ–ಎ.ಕ. 7, ನಾ.ಮಂ. 149
   ಸುಖದೊರೆ, ಎ.ಕ. 7, ನಾ.ಮಂ. 14
   ಮತ್ತಂದ್ರ– ಎ.ಕ. 7, ನಾ.ಮಂ. 167
   ಕಸಲಗೆರೆ– ಎ.ಕ. 7, ನಾ.ಮಂ. 169, 170
   ಬೋಗಾದಿ – ಎ.ಕ. 7, ನಾ.ಮಂ. 183, 184
   ಹಟ್ಟಣ – ಎ.ಕ. 7, ನಾ.ಮಂ. 118
   ಅಳೀಸಂದ್ರ – ಎ.ಕ. 7, ನಾ.ಮಂ. 72
   ಯಾಲದಹಳ್ಳಿ – ಎ.ಕ. 7, ನಾ.ಮಂ. 64
   ಕೋಡಿಹಳ್ಳಿ – ಎ.ಕ. 7, ನಾ.ಮಂ. 74
   ದಡಗ – ಎ.ಕ. 7, ನಾ.ಮಂ. 68, 69

ಕೆಳಗೆರೆ – ಎ.ಕ. 7, ನಾ.ಮಂ. 60

ಬೆಳ್ಳೂರು – ಎ.ಕ. 7, ನಾ.ಮಂ. 92, 93, 94, 96

ಲಾಳನಕೆರೆ – ಎ.ಕ. 7, ನಾ.ಮಂ. 62 ಮತ್ತು ರಂಗಸ್ವಾಮಿ– ಕೃಷ್ಣರಾಜ ಪೇಟೆ, ತಾಲ್ಲೋಕಿನ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನ, ಪುಟ 136

2. ಎ.ಕ. 6, ಪಾಂಪು. 16, ಕ್ರಿ.ಶ. 900
3. ಎ.ಕ. 7, ನಾ.ಮಂ. 33, ಕ್ರಿ.ಶ. 1118; ಎ.ಕ. 7, ನಾ.ಮಂ. 33, ಕ್ರಿ.ಶ. 1128;
4. ಎ.ಕ. 7, ನಾ.ಮಂ. 29, ಕ್ರಿ.ಶ. 1174;
5. ಎ.ಕ. 7, ನಾ.ಮಂ. 169, ಕ್ರಿ.ಶ. 1142;
6. ಎ.ಕ. 7, ನಾ.ಮಂ. 170, ಕ್ರಿ.ಶ. 1142;
7. ಎ.ಕ. 7, ನಾ.ಮಂ. 68,
8. ಎ.ಕ. 7, ನಾ.ಮಂ. 183, ಕ್ರಿ.ಶ. 1144
9. ಎ.ಕ. 7, ನಾ.ಮಂ. 64, ಕ್ರಿ.ಶ. 1145
10. ಎ.ಕ. 7, ನಾ.ಮಂ. 118, ಕ್ರಿ.ಶ. 1178
11. ಎ.ಕ. 7, ನಾ.ಮಂ. 72, ಕ್ರಿ.ಶ. 1184
12. ಎ.ಕ. 6, ಪಾಂಪು. 15, ಕ್ರಿ.ಶ. 1175
13. ಶರ್ಮಾ ಐ.ಕೆ., 1992, ದಿ ಟೆಂಪಲ್ಸ್ ಆಫ್ ದಿ ಗಂಗಾಸ್ ಆಫ್ ತಲಕಾಡ್, ಪುಟ 180–182 ರಲ್ಲಿ ಉಲ್ಲೇಖವಾಗಿದೆ
14. ದೇವರಕೊಂಡಾರೆಡ್ಡಿ., 1994, ತಲಕಾಡು ಗಂಗರ ದೇವಾಲಯಗಳು ಒಂದು ಅಧ್ಯಯನ, ಪುಟ–75–76 ರಲ್ಲಿ ಉಲ್ಲೇಖವಾಗಿದೆ
15. ಅದೇ, ಪುಟ–75–76
16. ಅದೇ, ಪುಟ–75–76
17. ದೊರೆಸ್ವಾಮಿ ಮ.ಕೆ., 2000, ಶ್ರೀ ಕಂಬದಹಳ್ಳಿ ಕ್ಷೇತ್ರ ದರ್ಶನ, ಪುಟ 21–30
18. ಸೀತಾರಾಮ ಜಾಗೀರ್‌ದಾರ್., 1999, ಕಂಬದಹಳ್ಳಿ ಒಂದು ಜೈನಕೇಂದ್ರ, ಪುಟ 2–3; 41–22
19. ಅದೇ, ಪುಟ 2–3; 41–22
20. ಶರ್ಮಾ ಐ.ಕೆ., 1992, ದಿ ಟೆಂಪಲ್ಸ್ ಆಫ್ ದಿ ಗಂಗಾಸ್ ಆಫ್ ತಲಕಾಡ್, ಪುಟ 153–167.
21. ಅದೇ & ಸೀತಾರಾಮ ಜಾಗೀರದಾರ್., 1999, ಪೂರ್ವೋಕ್ತ, ಪುಟ 2–3; 41–22
22. ಅದೇ, ಪುಟ 2–3; 41–22
23. ಅದೇ, ಪುಟ 2–3; 41–22
24. ಚನ್ನಸ್ವಾಮಿ ಸೋಸಲೆ., (ಸಂ.) 2015, ಜೈನಧರ್ಮದಲ್ಲಿ, ಯಕ್ಷ ಯಕ್ಷಿಯರು ಪ್ರೇರಣೆ ಮತ್ತು ಪರಿಕಲ್ಪನೆ, ಪುಟ. 127–155
25. ಅದೇ, ಪುಟ. 127–155
26. ಮಠಾಧೀಶರಾದ ಶ್ರೀಭಾನುಕೀರ್ತಿ ಸ್ವಾಮಿಯವರು ನೀಡಿದ ಮಾಹಿತಿ ಆಧರಿಸಿದೆ. ಐ.ಕೆ. ಶರ್ಮಾ, 1992, ಪೂರ್ವೋಕ್ತ, ಪುಟ–153–167.
27. ಕುಸುಮ, 2015, ಶ್ರವಣಬೆಳಗೊಳ–ಕಂಬದಹಳ್ಳಿಯ ಯಕ್ಷ ಯಕ್ಷಿಯರು, ಜೈನಧರ್ಮದಲ್ಲಿ, ಯಕ್ಷ ಯಕ್ಷಿಯರು ಪ್ರೇರಣೆ ಮತ್ತು ಪರಿಕಲ್ಪನೆ, ಚನ್ನಸ್ವಾಮಿ ಸೋಸಲೆ (ಸಂ.) ಪು. 127–138.
28. ಪದ್ಮಿನಿ ನಾಗರಾಜು 2015, ಮೈಸೂರು ಪ್ರಾಂತದಲ್ಲಿ ಯಕ್ಷ ಯಕ್ಷಿಯರು, ಸ್ಥಳ ಹಾಗೂ ಪರಿಕಲ್ಪನೆ, ಜೈನಧರ್ಮದಲ್ಲಿ, ಯಕ್ಷ ಯಕ್ಷಿಯರು ಪ್ರೇರಣೆ ಮತ್ತು ಪರಿಕಲ್ಪನೆ, ಚನ್ನಸ್ವಾಮಿ ಸೋಸಲೆ (ಸಂ.) ಪುಟ. 129–155
29. ಕುಸುಮ., 2015, ಪೂರ್ವೋಕ್ತ, ಪು. 127–138.
30. ಸೀತಾರಾಮ ಜಾಗೀರ್‌ದಾರ್ 1999, ಪೂರ್ವೋಕ್ತ, ಪುಟ 2–3; 41–22
31. ಎಂ.ಎ.ಆರ್. 1915, ಪುಟ–26

32. ಎಂ.ಎ.ಆರ್. 1919, ಪುಟ–16 ಮತ್ತು ಎ.ಕ. 7, ನಾ.ಮಂ. 118, ಕ್ರಿ.ಶ. 1178;
33. ಅದೇ
34. ಪಿ.ಎನ್. ನರಸಿಂಹಮೂರ್ತಿಯವರೊಂದಿಗೆ ಬಸ್ತಿಹೊಸಕೋಟೆಗೆ ಕ್ಷೇತ್ರ ಕಾರ್ಯ ಕೈಗೊಂಡಾಗ ಅಲ್ಲಿ ಕಂಡು ಬಂದ ಜೈನ ಬಸದಿಗಳು, ಗೊಮ್ಮಟನ ವಿಗ್ರಹ ಹಾಗೂ ಇತರೆ ಅವಶೇಷಗಳು ನಿಮಾಣಗೊಂಡಿರುವ ಶೈಲಿಯ ಹಿನ್ನೆಲೆಯಲ್ಲಿ ರವರು ಅಭಿಪ್ರಾಯಪಡುತ್ತಾರೆ.
35. ಎ.ಕ. 6, ಕೃ.ಪೆ.107 ಕ್ರಿ.ಶ. 1147 ಮತ್ತು ಎ.ಕ. 6, ಕೃ.ಪೆ.106 ಕ್ರಿ.ಶ. 1165
36. ಎ.ಕ. 6, ಕೃ.ಪೆ.107 ಕ್ರಿ.ಶ. 1147 ಮತ್ತು ಎ.ಕ. 6, ಕೃ.ಪೆ.106 ಕ್ರಿ.ಶ. 1165
37. ಎ.ಕ. 6, ಕೃ.ಪೆ.107 ಕ್ರಿ.ಶ. 1147 ಮತ್ತು ಎ.ಕ. 6, ಕೃ.ಪೆ.106 ಕ್ರಿ.ಶ. 1165
38. ಪಿ.ಎನ್. ನರಸಿಂಹಮೂರ್ತಿಯವರೊಂದಿಗೆ ಬಸ್ತಿಹೊಸಕೋಟೆಗೆ ಕ್ಷೇತ್ರ ಕಾರ್ಯ ಕೈಗೊಂಡಾಗ ಅಲ್ಲಿ ಕಂಡು ಬಂದ ಜೈನ ಬಸದಿಗಳು, ಗೊಮ್ಮಟನ ವಿಗ್ರಹ ಹಾಗೂ ಇತರೆ ಅವಶೇಷಗಳು ನಿರ್ಮಾಣಗೊಂಡಿರುವ ಶೈಲಿಯ ಹಿನ್ನೆಲೆಯಲ್ಲಿ ರವರು ಅಭಿಪ್ರಾಯ ಪಡುತ್ತಾರೆ.
39. ಎ.ಕ. 6, ಕೃ.ಪೆ.107 ಕ್ರಿ.ಶ. 1147
40. ಎಂ.ಎ.ಆರ್. 1912, ಪುಟ–03; ಎಂ.ಎ.ಆರ್. 1935, ಪುಟ–53ಮುಂದೆ
41. ಎಂ.ಎ.ಆರ್. 1912, ಪುಟ–03; ಎಂ.ಎ.ಆರ್. 1935, ಪುಟ–53ಮುಂದೆ
42. ಎಂ.ಎ.ಆರ್. 1912, ಪುಟ–03; ಎಂ.ಎ.ಆರ್. 1935, ಪುಟ–53ಮುಂದೆ
43. ಎಂ.ಎ.ಆರ್. 1912, ಪುಟ–03; ಎಂ.ಎ.ಆರ್. 1935, ಪುಟ–53ಮುಂದೆ
44. ಎಂ.ಎಸ್. ಕೃಷ್ಣಮೂರ್ತಿ ಮತ್ತು ಇತರರು, 2010, ತಲಕಾಡಿನಲ್ಲಿ ಕೈಗೊಂಡ ಉತ್ಖನನದ ವರದಿ, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ. ಆರ್. ಗೋಪಾಲ್., (ಸಂ), ಪುಟ 590–634.
45. ರಂಗರಾಜು, ಎನ್.ಎಸ್., 1998, ಹೊಯ್ಸಳ ಟೆಂಪಲ್ಸ್ ಇನ್ ಮಂಡ್ಯ ಆಂಡ್ ತುಮಕೂರು ಡಿಸ್ಟ್ರಿಕ್ಟ್, ಪುಟ 187–195,
46. ಎಂ.ಎ.ಆರ್. 1919, ಪುಟ–16 ಮತ್ತು ಎ.ಕ. 7, ನಾ.ಮಂ. 118, ಕ್ರಿ.ಶ. 1178
47. ಪಾರ್ಥಸಾರಥಿ, ಟಿ,ಎ., 2003, ಕರ್ನಾಟಕ ರಾಜ್ಯ ಗೆಜೆಟಿಯರ್, ಮಂಡ್ಯ ಜಿಲ್ಲೆ, ಬೆಂಗಳೂರು, ಮಂಡ್ಯ, ಪುಟ 943
48. ಎಂ.ಎ.ಆರ್., 1915, ಪುಟ–27 ಮತ್ತು ಎಂ.ಎ.ಆರ್. 1939, ಪುಟ–35;
49. ಬೆಳ್ಳೂರು – ಎ.ಕ. 7, ನಾ.ಮಂ. ಪುಟ 92, 93, 94, 96
50. ಸೀತಾರಾಮ ಜಾಗೀರ್‌ದಾರ್., 1999, ಪೂರ್ವೋಕ್ತ, ಪುಟ 2–3; 41–22
51. ಕುಸುಮ., 2015, ಪೂರ್ವೋಕ್ತ, ಪುಟ 127–138.
52. ಕ್ಷೇತ್ರ ಕಾರ್ಯ ಕೈಗೊಂಡಾಗ ಅಲ್ಲಿ ಕಂಡು ಬಂದ ಜೈನ ಬಸದಿಗಳು, ವಿಗ್ರಹ ಹಾಗೂ ಇತರೆ ಅವಶೇಷಗಳು ನಿಮಾಣಗೊಂಡಿರುವ ಶೈಲಿಯ ಹಿನ್ನೆಲೆಯಲ್ಲಿ ವಿಚಾರಪಟ್ಟ ಕ್ಷುಲ್ಲಕ ಸಿದ್ಧಾಂತಿ ಕೀರ್ತಿರವರು ಅಭಿಪ್ರಾಯ ಪಡೆಯಲಾಗಿದೆ.
53. ಅದೇ
54. ಶರ್ಮಾ ಐ.ಕೆ., 1992, ಪೂರ್ವೋಕ್ತ, ಪುಟ–153–167.
55. ಅದೇ, ಪುಟ–153–167
56. ಅದೇ, ಪುಟ–153–167
57. ಕ್ಷೇತ್ರ ಕಾರ್ಯ ಕೈಗೊಂಡಾಗ ಅಲ್ಲಿ ಕಂಡು ಬಂದ ಜೈನ ಬಸದಿಗಳು, ವಿಗ್ರಹ ಹಾಗೂ ಇತರೆ ಅವಶೇಷಗಳು ನಿಮಾಣಗೊಂಡಿರುವ ಶೈಲಿಯ ಹಿನ್ನೆಲೆಯಲ್ಲಿ ರವರು ಅಭಿಪ್ರಾಯಪಡಲಾಗಿದೆ.
58. ಕುಸುಮ., 2015, ಪೂರ್ವೋಕ್ತ, ಪುಟ 127–138.
59. ಶರ್ಮಾ ಐ.ಕೆ., 1992, ಪೂರ್ವೋಕ್ತ, ಪುಟ 153–167.

60. ಶೆಲ್ವ ಪಿಳ್ಳೈ ಐಯ್ಯಂಗಾರ್., 2009, ಮತಪಂಥ, ಡಾ. ಮಹದೇವ, ಸಿ, (ಸಂ.) ಡಾ. ಮಹದೇವ, ಸಿ., ತೊಣ್ಣೂರು, ಪುಟ 150-162, ಮತ್ತು ಡಾ. ಸ್ವಾಮಿ, ಲ, ನ., ಕೆರೆಕಟ್ಟೆಗಳು, ತೊಣ್ಣೂರು ಹೊತ್ತಿಗೆಯಲ್ಲಿ, ಡಾ. ಮಹದೇವ, ಸಿ., (ಸಂ) ಪುಟ, 129-150.

61. ದೇವಾಲಯದಲ್ಲಿ ಹಾಕಿಸಿರುವ ಹೊಸ ಶಾಸನದ ಛಾಯಾಚಿತ್ರ ನೋಡಿ

62. ಹಂಪಾ ನಾಗರಾಜಯ್ಯ., 1997, ಚಂದ್ರಕೊಡೆ, ಪುಟ 170-180.

ಅಧ್ಯಾಯ – ಏಳು

ಸಮಾರೋಪ ಮತ್ತು ಫಲಿತಗಳು

ಮಂಡ್ಯ ಜಿಲ್ಲೆಯಲ್ಲಿನ ಜೈನ ಪರಂಪರೆ ಶ್ರವಣಬೆಳಗೊಳದ ಜೈನ ಪರಂಪರೆಯಷ್ಟೇ ಪ್ರಾಚೀನವಾದುದು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲವಾದರೂ ಜಿಲ್ಲೆಯಲ್ಲಿ ಕಂಡುಬಂದಿರುವ ಜೈನ ಸ್ಮಾರಕಗಳಾಗಲಿ, ಶಾಸನಗಳಾಗಲಿ, ಯಾವುವೂ ಮಂಡ್ಯ ಜಿಲ್ಲೆಯಲ್ಲಿನ ಜೈನ ಧರ್ಮವನ್ನು ಎಂಟನೆಯ ಶತಮಾನಕ್ಕಿಂತ ಹಿಂದಕ್ಕೆ ಕೊಂಡೊಯ್ಯುವುದಿಲ್ಲ. ಆದರೆ ಅರೆತಿಪ್ಪೂರಿನಲ್ಲಿರುವ ಇಟ್ಟಿಗೆಯ ಕಟ್ಟಡಗಳನ್ನು ಗುರುತಿಸಿದಾಗ ಮತ್ತು ತಲಕಾಡಿನಲ್ಲಿ ಕಂಡುಬಂದಿರುವ ಜೈನ ದೇವಾಲಯದ ಅವಶೇಷಗಳೊಂದಿಗೆ, ಸಮೀಕರಿಸುವುದಾದರೆ ಕ್ರಿ.ಶ. ಆರು ಮತ್ತು ಏಳನೆಯ ಶತಮಾನದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಜೈನಧರ್ಮ ಪ್ರಚಲಿತದಲ್ಲಿತ್ತೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ತುಮಕೂರು ಜಿಲ್ಲೆಯಲ್ಲಿ ದೊರೆತಿರುವ ಕ್ರಿ.ಶ. 450ರ ದಾನಶಾಸನವೊಂದು ಗಂಗದೊರೆ ಇಮ್ಮಡಿ ಮಾಧವನು ಬೌದ್ಧ ವಿಹಾರಕ್ಕೆ ದಾನಕೊಟ್ಟಿದುದನ್ನು ದಾಖಲಿಸುತ್ತದೆ. ಹೀಗೆ ಗಂಗರು ಬೌದ್ಧಧರ್ಮಕ್ಕೆ ದಾನ ನೀಡಿದ್ದು ಕ್ರಿ.ಶ. 450ರಲ್ಲೇ ಎಂದು ಒಪ್ಪಿಕೊಂಡರೂ ಅವರು ದಾನಕೊಟ್ಟ ದೇವಾಲಯ ತುಮಕೂರು ಅಥವಾ ಕೋಲಾರದಲ್ಲಿದೆ ಎಂದು ಒಪ್ಪಿಕೊಂಡರೂ ಗಂಗವಾಡಿ ಪ್ರದೇಶದಲ್ಲಿ ಬೌದ್ಧಧರ್ಮ ಆಚರಣೆಯಲ್ಲಿತ್ತೆಂದು ಒಪ್ಪಿಕೊಂಡಂತಾಗುತ್ತದೆ. ಇದನ್ನು ಒಪ್ಪಿಕೊಂಡ ಪಕ್ಷದಲ್ಲಿ ಗಂಗ ಅರಸರ ಮೂಲದ ಬಗೆಗೆ ಇರುವ ಜೈನ ಸಂಪ್ರದಾಯವನ್ನೂ ಒಪ್ಪಿಕೊಂಡು ಗಂಗರು ಪ್ರಾರಂಭದಲ್ಲೇ ಜೈನ ಮತೀಯರಾಗಿದ್ದು ಅವರ ಪ್ರಾರಂಭದ ದಿನಗಳಿಂದಲೇ ಜೈನಧರ್ಮವನ್ನು ಪ್ರೋತ್ಸಾಹಿಸಿದರೆಂದು ನಂಬಿದಲ್ಲಿ ಮಂಡ್ಯ ಜಿಲ್ಲೆಯಲ್ಲಿಯೂ ಜೈನಧರ್ಮ ಆ ಕಾಲಘಟ್ಟದಿಂದಲೇ ಅಂದರೆ ಗಂಗರ ಸ್ಥಾಪನೆಯ ಕಾಲಘಟ್ಟದಿಂದಲೇ ಪ್ರಾರಂಭವಾಯಿತೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಮಂಡ್ಯ ಜಿಲ್ಲೆಗೆ ಅತಿ ಸಮೀಪದಲ್ಲಿರುವ ಮನ್ನೆ, ಗಂಗರ ಸಾಂಸ್ಕೃತಿಕ ನೆಲೆವೀಡಾಗಿಯೂ ಕಾವೇರಿ ನದಿ ಪಾತ್ರದಲ್ಲಿರುವ ತಲಕಾಡು ಅವರ ರಾಜಕೀಯ ನೆಲೆಯಾಗಿಯೂ ಉಳಿದುಬಂದು ಗಂಗರು ಈ ಎರಡೂ ನೆಲೆಗಳಿಂದ ತಮ್ಮ ಆಡಳಿತವನ್ನು ನಡೆಸಿರುವುದು ಖಚಿತವಾಗಿರುವ ಹಿನ್ನೆಲೆಯಲ್ಲಿ ಕ್ರಿ.ಶ. 4–5ನೇ ಶತಮಾನದ ವೇಳೆಗಾಗಲೇ ಮಂಡ್ಯ ಜಿಲ್ಲೆಯಲ್ಲಿ ಜೈನಧರ್ಮ ಪ್ರಚಲಿತದಲ್ಲಿತ್ತು.

ಮಂಡ್ಯ ಜಿಲ್ಲೆಯು 1939ರಲ್ಲಿ ಮೈಸೂರು ಜಿಲ್ಲೆಯಿಂದ ಪ್ರತ್ಯೇಕಿಸಲ್ಪಟ್ಟು ಆಡಳಿತಾತ್ಮಕ ದೃಷ್ಟಿಯಿಂದ ಹೊಸ ಜಿಲ್ಲೆಯಾಗಿ ರೂಪುಗೊಂಡಿತು. ಇದಕ್ಕೆ ಪೂರ್ವದಲ್ಲಿ ಮಂಡ್ಯ ಜಿಲ್ಲೆಯು

ಮೈಸೂರು ಜಿಲ್ಲೆಯ ಅವಿಭಾಜ್ಯ ಅಂಗವಾಗಿದ್ದಿತು. ಅಲ್ಲದೆ ಮೈಸೂರು ಸಂಸ್ಥಾನದ ಪ್ರಮುಖ ಅಂಗ ಕೂಡ ಇದಾಗಿದ್ದಿತು. ಈ ಪ್ರದೇಶದಲ್ಲಿ ಗಂಗರ, ರಾಷ್ಟ್ರಕೂಟರ, ಚೋಳರ, ಹೊಯ್ಸಳರ, ವಿಜಯನಗರದ ಅರಸರ ಮತ್ತು ಆನಂತರ ಇಲ್ಲಿ ಪ್ರಬಲರಾದ ಮೈಸೂರು ಒಡೆಯರು, ನಾಗಮಂಗಲದ ಪ್ರಭು ಜಗದೇವರಾಯ, ಉಮ್ಮತ್ತೂರಿನ ನಾಯಕರು ಮೊದಲಾದ ಅರಸು ಮನೆತನಗಳ ಶಾಸನಗಳು ಲಭ್ಯವಿದೆಯಾದರೂ ಇವುಗಳಲ್ಲಿ ಬಹುತೇಕವಾದ ಜೈನ ಶಾಸನಗಳು ಗಂಗರು ಮತ್ತು ಹೊಯ್ಸಳರ ಕಾಲಘಟ್ಟದಲ್ಲಿ ಹೊರಡಿಸಿದ ಶಾಸನಗಳಾಗಿವೆ. ಹೊಯ್ಸಳರ ಪತನದ ನಂತರ ವಿಜಯನಗರ ಸಾಮ್ರಾಜ್ಯ ಪ್ರವರ್ಧಮಾನಕ್ಕೆ ಬಂದಿತಾದರೂ ಅದು ಜೈನ ಪರಂಪರೆಗೆ ಪ್ರೋತ್ಸಾಹ ನೀಡಿತಾದರೂ ಅದು ವೈಷ್ಣವ ಅಂದರೆ ರಾಮಾನುಜ ಪರಂಪರೆಗೆ ಮಾಧ್ವ ಪರಂಪರೆಗೆ ಮತ್ತು ಶೈವ ಪರಂಪರೆಗೆ ನೀಡಿದ ಪ್ರಮಾಣದಲ್ಲಿ ಜೈನ ಪರಂಪರೆಗೆ ಪ್ರೋತ್ಸಾಹವನ್ನು, ರಾಜಾಶ್ರಯವನ್ನು ನೀಡದಿರುವುದನ್ನು ಶಾಸನಗಳು ಖಚಿತಪಡಿಸುತ್ತವೆ. ಜಿಲ್ಲೆಯಲ್ಲಿ ದೊರೆತಿರುವ ಒಡೆಯರ ಏಕೈಕ ಜೈನ ಶಾಸನ ಬೆಳ್ಳೂರಿನ ವಿಮಲನಾಥ ಸ್ವಾಮಿ ಬಸದಿಯಲ್ಲಿನದು, ಈ ಶಾಸನದ ಉಲ್ಲೇಖದಂತೆ ದೇವರಾಜ ಒಡೆಯರು ಈ ಬಸದಿಯನ್ನು ನಿರ್ಮಿಸಿಕೊಟ್ಟರೆಂದು ತಿಳಿದು ಬರುತ್ತದೆ. ಇಷ್ಟೇ ಅಲ್ಲದೆ ಚಿಕ್ಕದೇವರಾಜ ಒಡೆಯರು, ಆನಂತರದ ಎಲ್ಲ ಒಡೆಯರುಗಳು, ಜೈನ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟರು. ಅವೆಲ್ಲವೂ ಶ್ರವಣಬೆಳಗೊಳದ ಮಠಕ್ಕೆ ಸಂದಾಯವಾಗಿರುವುದು ಕಂಡುಬರುತ್ತದೆ. ಅಂದರೆ ವಿಜಯನಗರದ ಕಾಲದ ಹೊತ್ತಿಗಾಗಲೇ ಜಿಲ್ಲೆಯಲ್ಲಿನ ಜೈನಪರಂಪರೆ ಅಥವಾ ಪುಣ್ಯಕ್ಷೇತ್ರಗಳು ತಮ್ಮ ಧಾರ್ಮಿಕ ಮಹತ್ವವನ್ನು ವಿಶ್ವಪ್ರಸಿದ್ಧ ಶ್ರವಣಬೆಳಗೊಳಕ್ಕೆ ವರ್ಗಾಯಿಸಿದ್ದರಿಂದ ಅವುಗಳ ಪ್ರಖರತೆ ಇಳಿಮುಖವಾಯಿತು.

ಮಂಡ್ಯ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಜೈನ ಶಾಸನಗಳು ಸ್ಮಾರಕಗಳು, ದೊರೆತಿವೆಯಾದರೂ ಅವುಗಳಲ್ಲಿ ಹೆಚ್ಚಿನ ಪಾಲು ನಾಗಮಂಗಲ ತಾಲ್ಲೂಕಿನದ್ದಾಗಿದೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ನೀರಾವರಿ ಬಯಲಿನಿಂದ ದೂರವಿದ್ದಾಗ್ಯೂ ಜೈನ ಪರಂಪರೆಯ ಪ್ರಮುಖ ಕೇಂದ್ರವಾಗಿ ಇತಿಹಾಸದುದ್ದಕ್ಕೂ ಮುಂದುವರೆದು ಇಂದಿಗೂ ಆ ಪರಂಪರೆಯನ್ನು ಉಳಿಸಿಕೊಂಡು ಬರುತ್ತಿರುವ ಮಹತ್ವದ ತಾಲ್ಲೂಕುಗಳಲ್ಲೊಂದಾಗಿದೆ. ಇದೇ ರೀತಿ ಮದ್ದೂರು ತಾಲ್ಲೂಕಿನ ಅರೆತಿಪ್ಪೂರು ಗ್ರಾಮ ಗಂಗ ಮತ್ತು ಹೊಯ್ಸಳರ ಕಾಲಘಟ್ಟಗಳಲ್ಲಿ ಪ್ರಮುಖ ತೀರ್ಥಕ್ಷೇತ್ರವಾಗಿ ಮೆರೆದು ನೂರಾರು ಪಂಡಿತರಿಗೆ ಋಷಿಗಳಿಗೆ, ಯತಿಗಳಿಗೆ ಆಶ್ರಯ ತಾಣವಾಗಿತ್ತೆಂದು ಅಲ್ಲಿನ ಮತ್ತು ಜಿಲ್ಲೆಯ ಇತರ ಶಾಸನಗಳು ದಾಖಲಿಸುತ್ತವೆ. ಇವಲ್ಲದೆ ರಾಮಾನುಜಾಚಾರ್ಯರ ಆಗಮನಕ್ಕೆ ಪೂರ್ವದಲ್ಲಿ ತೊಂಡನೂರು, ಮೇಲುಕೋಟೆ ಸಹ ಜೈನ

ಕೇಂದ್ರವಾಗಿದ್ದುದನ್ನು ರಾಮಾನುಜಾಚಾರ್ಯರ ಬಗೆಗಿನ ಐತಿಹ್ಯಗಳು ದಾಖಲಿಸುತ್ತವೆ. ಮತ್ತೊಂದು ಐತಿಹ್ಯದ ಪ್ರಕಾರ ಮಂಡ್ಯ ಜಿಲ್ಲೆಯ ಎಲ್ಲೆಯ ಗ್ರಾಮ ಕಳಸ್ತವಾಡಿಯಲ್ಲಿ ಒಂದು ಕಾಲದಲ್ಲಿ ನೂರು ಜೈನ ಬಸದಿಗಳಿದ್ದವೆಂದು ಆ ಬಸದಿಗಳು ವಿನಾಶದ ಅಂಚನ್ನು ತಲುಪಿದ ನಂತರ ಆ ಬಸದಿಗಳಲ್ಲಿನ ವಾಸ್ತು ಅವಶೇಷಗಳನ್ನು ತಂದು ಶ್ರೀರಂಗನಾಥನ ದೇವಾಲಯವನ್ನು ಅಭಿವೃದ್ಧಿ ಪಡಿಸಲಾಯಿತೆಂದೂ ತಿಳಿದುಬರುತ್ತದೆ. ಇದು ಜಿಲ್ಲೆಯನ್ನು ಕುರಿತಾದ ರೈಸ್ ಮತ್ತು ಹಯವದನರಾಯರ ಗೆಜೆಟಿಯರ್‌ಗಳಲ್ಲಿ ದಾಖಲಾಗಿದೆ. ಈ ನವೀಕರಣ ಮತ್ತು ಪುನರುತ್ಥಾನ ನಡೆದುದು ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಎಂಬುದು ಒಂದು ಊಹೆ. ಹೀಗಾಗಿದ್ದಲ್ಲಿ ಜಿಲ್ಲೆಯಲ್ಲಿ ದೊರೆತಿರುವ ಅತಿ ಕಡಿಮೆ ಸಂಖ್ಯೆಯ ಜೈನ ಶಾಸನಗಳು ವಿಜಯನಗರ ಕಾಲದ್ದೇ ಆಗಿರುವುದರಿಂದ ಪ್ರಾಯಶಃ ಆ ಕಾಲದ ಹೊತ್ತಿಗೆ ಜಿಲ್ಲೆಯಲ್ಲಿ ಜೈನಧರ್ಮ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದಿತು. ಕನ್ನಂಬಾಡಿಯ ಸಮೀಪ ಇರುವ ಬಸ್ತಿಹೊಸಕೋಟೆಯಲ್ಲಿ ಹೊಯ್ಸಳರ ಶಾಸನಗಳಿದ್ದು ಅವುಗಳು ಅಲ್ಲಿ ಪುಣಿಸಮಯ್ಯನು ಜಿನಾಲಯವನ್ನು ನಿರ್ಮಿಸಿದಂತೆ ದಾಖಲಿಸುತ್ತವೆ. ಆದರೆ ಅಲ್ಲಿ ಕಂಡುಬರುವ ದೇವಾಲಯದ ಕಂಬಗಳು ಗಂಗರ ಕಾಲದ ಕಂಬಗಳಾಗಿದ್ದು ತಲಕಾಡಿನಲ್ಲಿ ದೊರೆತಿರುವ ಗಂಗರ ದೇವಾಲಯಗಳಲ್ಲಿ ಕಂಡುಬರುವ ಮಾಲಕಾಂತ ಕಂಬಗಳನ್ನು ಅನುಕರಿಸುತ್ತವೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗಲೂ ಜೈನರು ಮಂಡ್ಯ ಜಿಲ್ಲೆಯಲ್ಲಿ ಗಂಗರ ಕಾಲದಲ್ಲಿ ಅತ್ಯಂತ ಪ್ರವರ್ಧಮಾನದಲ್ಲಿದ್ದು ಆನಂತರ ಮತ್ತೆ ಹೊಯ್ಸಳರ ಕಾಲದಲ್ಲಿ ಹೆಚ್ಚು ರಾಜಾಶ್ರಯವನ್ನು ಪಡೆದರು. ಗಂಗರ ಕಾಲದ ನಂತರ ಹೊಯ್ಸಳರು ಈ ಭೂಪ್ರದೇಶವನ್ನು ಆಕ್ರಮಿಸುವವರೆಗೆ ಚೋಳರು ಗಂಗವಾಡಿ ಭೂಪ್ರದೇಶವನ್ನು ಆಕ್ರಮಿಸಿದ್ದರಿಂದ ಆ ಕಾಲಘಟ್ಟದಲ್ಲಿ ಪ್ರಾಯಶಃ ಜೈನ ಸಮುದಾಯ ರಾಜಾಶ್ರಯವನ್ನು ಕಳೆದುಕೊಂಡು ಸುರಕ್ಷಿತ ಮತ್ತು ಆಶ್ರಯವನ್ನರಸಿ ಬೇರೆಡೆಗೆ ಸಾಗಿರಬಹುದಾದ ಸಾಧ್ಯತೆಗಳನ್ನು ತಳ್ಳಿ ಹಾಕಲಾಗುವುದಿಲ್ಲ. ಗಣಪತಿ ರಾವ್ ಐ ರವರು ಪ್ರಾಚೀನ ದಕ್ಷಿಣ ಕನ್ನಡ ಜಿಲ್ಲೆಯನ್ನು ದಾಖಲಿಸುವಾಗ ಅಲ್ಲಿನ ಜೈನ ಅರಸರು ಗಂಗವಾಡಿ ಪ್ರದೇಶದಿಂದ ವಲಸೆ ಬಂದುದನ್ನು ದಾಖಲಿಸುತ್ತಾರೆ. ಇದು ಆಧಾರ ಸಹಿತವಾಗಿದ್ದಲ್ಲಿ ಇಲ್ಲಿನ ಜೈನರ ಮೊದಲ ವಲಸೆ ಚೋಳರು ಗಂಗವಾಡಿ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದರಿಂದಲೇ ಆಯಿತೆಂದು ಭಾವಿಸಬೇಕಾಗುತ್ತದೆ. ಗಂಗವಾಡಿ ಪ್ರದೇಶದ ಮೇಲೆ ಹೊಯ್ಸಳರ ಕೊನೆಯ ಕಾಲಘಟ್ಟದಲ್ಲಿ ಆದ ಮುಸಲ್ಮಾನ ಧಾಳಿಗಳು ಮತ್ತು ಮೈಸೂರು ಅರಸರ ಕಾಲದಲ್ಲಿ ಆದ ರಣದುಲ್ಲಾ ಖಾನನ ಧಾಳಿಗಳು ಇಲ್ಲಿನ ಜೈನ ಪರಂಪರೆಯ ವಿನಾಶಕ್ಕೆ ಸಾಕಷ್ಟು ಮಾರ್ಗವನ್ನು ಹೆಣೆದವೆಂದೇ ಹೇಳಬೇಕು. ಇದಲ್ಲದೆ ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಕರ್ನಾಟಕವನ್ನು ಪ್ರವೇಶಿಸಿದ

ರಾಮಾನುಜರ ಭಕ್ತರು ಮತ್ತು ಆನಂತರ ವಿಜಯನಗರ ಕಾಲದಲ್ಲಿ ಈ ಪ್ರದೇಶದಲ್ಲಿ ಬಂದು ನೆಲೆಸಿದ ತಾತಾಚಾರ್ಯ ಪರಂಪರೆ ಇಲ್ಲಿನ ಸಮುದಾಯವನ್ನು ಶ್ರೀವೈಷ್ಣವ ಪರಂಪರೆಗೆ ಮತಾಂತರಿಸಿದುದು ಮೌಖಿಕ ಆಕರಗಳಲ್ಲಿ ಮತ್ತು ಸ್ಥಾನಿಕ ಪುರಾಣಗಳಲ್ಲಿ ದಾಖಲಾಗಿದೆ. ಈ ಎರಡೂ ಕಾಲಾವಧಿಯ ಮತಾಂತರಗಳಲ್ಲಿ ಅತಿ ಹೆಚ್ಚಿನ ಮತಾಂತರವು ರಾಮಾನುಜಾಚಾರ್ಯರ ಕಾಲದಲ್ಲಿ ಆಯಿತೆಂದು ಅದು ತೊಂಡನೂರು, ಮೇಲುಕೋಟೆ, ನಾಗಮಂಗಲ ಈ ಪ್ರದೇಶಗಳಲ್ಲಿ ಸಾಕಷ್ಟು ಪ್ರಭಾವ ಬೀರಿತೆಂದು ವೈಷ್ಣವ ಪರಂಪರೆಯ ಆಕರಗಳು ದಾಖಲಿಸುತ್ತವೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಈ ಕಾಲಘಟ್ಟಗಳಲ್ಲಿ ಜೈನ ಪರಂಪರೆ ಮಂಡ್ಯ ಜಿಲ್ಲೆಯಲ್ಲಿ ಸಾಕಷ್ಟು ಪ್ರಖರವಾಗಿಯೇ ಮುಂದುವರಿದದ್ದನ್ನು ಕಾಣಬಹುದಾದರೂ ಬೆರಳೆಣಿಕೆಯ ಪ್ರದೇಶಕ್ಕೆ ಅವು ಸೀಮಿತವಾಗಿರುವುದು ಕಂಡುಬರುತ್ತದೆ. ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳು ಜೈನ ನೆಲೆಗಳ ಅತಿ ಕಡಿಮೆ ಸಾಂದ್ರತೆಯನ್ನು ಹೊಂದಿರುವ ಪ್ರದೇಶಗಳಾದರೆ, ನಾಗಮಂಗಲ, ಕೃಷ್ಣರಾಜಪೇಟೆ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳು ಪ್ರಾರಂಭದ ನಾಲ್ಕು ಸ್ಥಾನಗಳನ್ನು ಕ್ರಮವಾಗಿ ಪಡೆದುಕೊಳ್ಳುತ್ತವೆ. ಇದಲ್ಲದೆ ರಾಮಾನುಜಾಚಾರ್ಯರ ಆಗಮನದ ತರುವಾಯ ಮತ್ತು ವಿಜಯನಗರದ ಕೊನೆಯ ದಿನಗಳಲ್ಲಿ ಇಲ್ಲಿ ಬಂದ ನಾಯಕರುಗಳು ಮತ್ತು ಸ್ಥಾನಿಕ ಪ್ರಭುಗಳು ವೈಷ್ಣವ ಪರಂಪರೆಯನ್ನೇ ಅತಿಯಾಗಿ ಪ್ರೋತ್ಸಾಹಿಸಿದ್ದರಿಂದ ಜೈನಧರ್ಮ ನಿಧಾನವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು.

ಮಂಡ್ಯ ಜಿಲ್ಲೆಯಲ್ಲಿ ಶಾಸನಗಳು ಮತ್ತು ಮೈಸೂರು ಪುರಾತತ್ವ ಇಲಾಖೆಯ ವರದಿಗಳು ದಾಖಲಿಸುವಂತೆ 15ಕ್ಕೂ ಹೆಚ್ಚು ಪ್ರಾಚೀನ ಜೈನ ನೆಲೆಗಳು ಕಂಡುಬರುತ್ತವೆ. ಆದರೆ ಈ ಎಲ್ಲ ಜೈನ ನೆಲೆಗಳು ಇಂದಿಗೂ ಪೂರ್ಣವಾಗಿ ಅಂದಿನ ಪರಂಪರೆಯನ್ನು ಇಂದಿನವರೆಗೆ ಉಳಿಸಿಕೊಂಡು ಬರುವಲ್ಲಿ ಬಹುತೇಕ ವಿಫಲವಾಗಿವೆ. ಈ ಪ್ರೌಢನಿಬಂಧದ ವಾಸ್ತು ಮತ್ತು ಶಿಲ್ಪ ಅಧ್ಯಯನದಲ್ಲಿ ಜೈನ ನೆಲೆಗಳ ಬೆಳವಣಿಗೆ ಅವುಗಳ ಉಚ್ಛ್ರಾಯ ಸ್ಥಿತಿ ಮತ್ತು ಅವು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವುದಕ್ಕೆ ಕಾರಣಗಳನ್ನು ಗುರುತಿಸಲಾಗಿದೆ. ಬಹುತೇಕವಾಗಿ ಮಂಡ್ಯ ಜಿಲ್ಲೆಯಲ್ಲಿ ಜೈನಧರ್ಮದ ನೆಲೆಗಳು ಉಲ್ಲೇಖವಾಗಿರುವುದು ಆ ಕಾಲದ ಶಾಸನಗಳಲ್ಲಿ ಮತ್ತು ಪ್ರಾಚೀನ ಕಾಲದ ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ದಾಖಲಿಸುವ ಆನಂತರದ ಅಧ್ಯಯನಗಳಲ್ಲಿ. ಇದೇನೇ ಆದರೂ ಈ ಕಾಲಘಟ್ಟದ ಎಲ್ಲ ಜೈನ ನೆಲೆಗಳು ಇಂದಿನವರೆಗೆ ಸಂಪೂರ್ಣವಾಗಿ ತಮ್ಮ ಅಂತಃಸತ್ವವನ್ನು ಮತ್ತು ಜೈನಧರ್ಮದ ಪರಂಪರೆಯ ಎಲ್ಲ ಅಂಶಗಳನ್ನು ಉಳಿಸಿಕೊಂಡು ಬರದಿರುವುದು ವಿಷಾದನೀಯ ಸಂಗತಿ. ಮಂಡ್ಯ ಜಿಲ್ಲೆಯ ಅತೀ ಪ್ರಾಚೀನ ಜೈನ ನೆಲೆ ಎಂದರೆ

ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿ ಗ್ರಾಮ. ಇದಲ್ಲದೆ ಅರೆತಿಪ್ಪೂರು ಕೂಡ ಇದೇ ಕಾಲಕ್ಕೆ ಜೈನನೆಲೆಯಾಗಿತ್ತೆಂಬುದನ್ನು ಇದೇ ಅಧ್ಯಯನದ ಮೂಲ ಪಠ್ಯದಲ್ಲಿ ಉಲ್ಲೇಖಿಸಲಾಗಿದೆ. ಒಟ್ಟಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ದೊರೆಯುವ ಶಾಸನಗಳು, ಸ್ಮಾರಕಗಳು ಇತ್ಯಾದಿ ಎಲ್ಲ ಅಂಶಗಳನ್ನು ಕ್ರೋಢೀಕರಿಸಿ ಶಾಸನೋಲ್ಲೇಖಿತ ಎಲ್ಲ ಸ್ಥಳಗಳನ್ನು ದಾಖಲಿಸಿ ಅವುಗಳು ಇಂದು ಜೈನಧರ್ಮಕ್ಕೆ ಹೇಗೆ ಕಾಣಿಕೆ ನೀಡಿವೆ ಎಂಬುದನ್ನು ಈ ಅಧ್ಯಾಯದಲ್ಲಿ ವಿವರಣಾತ್ಮಕವಾಗಿ ದಾಖಲಿಸಲಾಗಿದೆ. ಒಟ್ಟಿನಲ್ಲಿ ಇಪ್ಪತ್ತಕ್ಕೂ ಹೆಚ್ಚು ಜೈನ ನೆಲೆಗಳಲ್ಲಿ ಇಂದು ಉಳಿದುಬಂದಿರುವ ಪ್ರಮುಖ ಜೈನ ನೆಲೆಗಳೆಂದರೆ ಅರೆತಿಪ್ಪೂರು, ಕಂಬದಹಳ್ಳಿ, ಬೆಳ್ಳೂರು, ಶ್ರೀರಂಗಪಟ್ಟಣ, ಹೊಸಹೊಳಲು ಮತ್ತು ಮುರುಕನಹಳ್ಳಿ. ಇಲ್ಲಿರುವ ಪ್ರಾಚೀನ ಜೈನ ಮಂದಿರಗಳು ಜೈನ ಪರಂಪರೆಯನ್ನು ಮತ್ತು ಆಚರಣೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿವೆ. ಉಳಿದ ಎಲ್ಲ ಜೈನ ಕ್ಷೇತ್ರಗಳು ಇಲ್ಲವೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ ಅಥವಾ ಭಗ್ನವಾಗಿವೆ. ಹೀಗಾಗಿ ಜಿಲ್ಲೆಯಲ್ಲಿ ಕೆಲವೇ ಕೆಲವು ಜೈನ ಕೇಂದ್ರಗಳು ಉಳಿದುಕೊಂಡು ಬಂದಿದ್ದು ಅವು ಜೈನ ಪರಂಪರೆಯ ದ್ಯೋತಕಗಳಾಗಿ ನಮ್ಮ ಮುಂದೆ ಇಂದಿಗೂ ಕಂಡುಬರುತ್ತವೆ. ಈ ಅಧ್ಯಯನದಲ್ಲಿ ಕೇವಲ ಜೈನ ಪರಂಪರೆ ಆಚರಣೆಯಲ್ಲಿರುವ ಕೇಂದ್ರಗಳಲ್ಲದೆ ಉಲ್ಲೇಖಿತವಾಗಿರುವ ಎಲ್ಲ ಕೇಂದ್ರಗಳನ್ನೂ ಅಭ್ಯಸಿಸಿ ಅವುಗಳ ಮಾಹಿತಿಯನ್ನು ಒಟ್ಟಾರೆಯಾಗಿ ವಿವರಣಾತ್ಮಕವಾಗಿ ದಾಖಲಿಸಲಾಗಿದೆ.

ಮಂಡ್ಯ ಜಿಲ್ಲೆಯ ಜೈನ ನೆಲೆಗಳನ್ನು ಗಮನಿಸಿದಾಗ ಕೆಲವೇ ಕೆಲವು ಜೈನ ನೆಲೆಗಳಲ್ಲಿ ಪ್ರಾಚೀನ ವಾಸ್ತುಶೈಲಿ ಉಳಿದುಬಂದಿರುವುದು ಕಂಡುಬರುತ್ತದೆ. ಅವುಗಳು ಈ ಮುಂದಿನಂತಿವೆ. ನಾಗಮಂಗಲ ತಾಲ್ಲೂಕಿನ ಹಟ್ನ, ಕೃಷ್ಣರಾಜಪೇಟೆ ತಾಲ್ಲೂಕಿನ ಬಸ್ತಿ ಹೊಸಕೋಟೆ, ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿ, ಮದ್ದೂರು ತಾಲ್ಲೂಕಿನ ಅರೆತಿಪ್ಪೂರು. ಇವಲ್ಲದೆ ಶ್ರೀರಂಗಪಟ್ಟಣದ ಆದಿನಾಥ ಬಸದಿ, ಬೆಳ್ಳೂರಿನ ವಿಮಲನಾಥ ಬಸದಿ, ದಡಗದ ಶಾಂತಿನಾಥ ಬಸದಿ, ಮುರುಕನಹಳ್ಳಿಯ ಅನಂತನಾಥ ಬಸದಿ, ಹೊಸಹೊಳಲಿನ ಬಸದಿ, ಇವುಗಳು ಪ್ರಾಚೀನ ಶಿಲ್ಪಗಳನ್ನು ಹೊಂದಿವೆಯಾದರೂ ಅವು ಮೂಲ ವಾಸ್ತುಶೈಲಿಯನ್ನು ಉಳಿಸಿಕೊಂಡು ಬಂದಿಲ್ಲ. ಹಾಗಾಗಿ ಮೂಲ ವಾಸ್ತುಶೈಲಿಯನ್ನು ಈ ದೇವಾಲಯಗಳಲ್ಲಿ ಗುರುತಿಸುವುದೇ ಕಷ್ಟಸಾಧ್ಯ. ಈ ಎಲ್ಲ ವಾಸ್ತುಶೈಲಿಗಳನ್ನು ಗಮನದಲ್ಲಿಟ್ಟುಕೊಳ್ಳುವುದರ ಜೊತೆಗೆ ಮೇಲುಕೋಟೆ ಮತ್ತು ಅರೆತಿಪ್ಪೂರಿನಲ್ಲಿ ಕಂಡುಬಂದಿರುವ ಗುಹಾಂತರ ದೇವಾಲಯಗಳ ರಚನೆಯು ಜೈನರ ಕಾಲದ್ದಾಗಿತ್ತೆಂದೇ ಅಥವಾ ಜೈನರ ಪರಂಪರೆಯಲ್ಲಿ ಸೇರಿದವುಗಳೆಂದೇ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇವನ್ನು ಯಾವ ವಿದ್ವಾಂಸರು ಖಚಿತವಾಗಿ ಜೈನ ಪರಂಪರೆಯ ಸ್ಮಾರಕಗಳೆಂದು

ದಾಖಲಿಸುವುದಿಲ್ಲವಾದರೂ ಅವುಗಳಲ್ಲಿ ವೈದಿಕ ಪರಂಪರೆಗೆ ಅಥವಾ ಇತರ ಶಿಲ್ಪಪರಂಪರೆಗೆ ಸೇರಿದ ಯಾವ ಕುರುಹುಗಳು ಕಂಡುಬಾರದ ಕಾರಣ ಜಿಲ್ಲೆಯಲ್ಲಿ ಜೈನಪರಂಪರೆ ಅತಿ ಪ್ರಾಚೀನ ಕಾಲಘಟ್ಟದಿಂದಲೂ ಬದುಕಿ ಬಾಳಿದ್ದರಿಂದ ಪ್ರಾರಂಭದ ಈ ವಾಸ್ತುರಚನೆಗಳು ಜೈನ ಮತೀಯರ ದೇವಾಲಯಗಳಾಗಿರಬೇಕೆಂದು ಊಹಿಸಲಾಗಿದೆ. ಆದರೂ ಹೆಚ್ಚಿನ ಆಕರಗಳ ಅಲಭ್ಯತೆ ನಮ್ಮನ್ನು ಕಾಡುತ್ತದೆ.

ನಾಗಮಂಗಲ ತಾಲ್ಲೂಕಿನ ಭೋಗವತಿ ಅಥವಾ ಬೋಗಾದಿಯ ಜಿನಾಲಯವನ್ನು ಹೊಯ್ಸಳರ ಕಾಲದಲ್ಲಿ ನಿರ್ಮಿಸಲಾಯಿತೆಂದು ಶಾಸನವು ಹೇಳಿದರು ಅದರಲ್ಲಿನ ವಾಸ್ತು ಸಂಬಂಧಿತ ಕುರುಹುಗಳು ಗಂಗ ಮತ್ತು ರಾಷ್ಟ್ರಕೂಟರ ಕಾಲದ ಕೆಲವು ಲಕ್ಷಣಗಳನ್ನು ಹೊಂದಿರುವುದರಿಂದ ಈ ಪಾರ್ಶ್ವ ಜಿನಾಲಯವನ್ನು ಪ್ರಾರಂಭದಲ್ಲಿ ಗಂಗರು, ನಂತರ ಗಂಗರು ಮತ್ತು ರಾಷ್ಟ್ರಕೂಟರಿಗಿದ್ದ ಸಂಬಂಧದ ಫಲವಾಗಿ ರಾಷ್ಟ್ರಕೂಟರು ಪುನರ್‌ನಿರ್ಮಿಸಿ ಅದು ಮತ್ತೆ ಶಿಥಿಲವಾಗಿದ್ದರಿಂದ ಹೊಯ್ಸಳರು ನಿರ್ಮಿಸಿ ಶಾಸನ ಹಾಕಿಸಿದ್ದರಿಂದ ಅವರ ನಿರ್ಮಿತಿಯೆಂದೇ ಶಾಸನ ಉಲ್ಲೇಖಿಸುತ್ತದೆ. ಆದರೂ ಇದನ್ನು ದೇವಾಲಯದ ವಾಸ್ತುಶೈಲಿಯನ್ನು ಗಮನಿಸಿದಾಗ ಒಪ್ಪಿಕೊಳ್ಳಲಾಗುವುದಿಲ್ಲ. ಇದರ ಪೂರ್ವ ನಿರ್ಮಿತಿಯನ್ನು ಗಂಗ ರಾಷ್ಟ್ರಕೂಟರ ಕಾಲಕ್ಕೆ ಅನಿವಾರ್ಯವಾಗಿ ಕೊಂಡೊಯ್ಯಬೇಕಾಗುತ್ತದೆ. ಕಂಬದಹಳ್ಳಿಯ ಪಂಚಕೂಟ ಬಸದಿ ಗಂಗರ ಕೊನೆಯ ಕಾಲದಲ್ಲಿ ರಚಿಸಲ್ಪಟ್ಟಿತೆಂದು ಧಾಖಿಯವರು ಅಭಿಪ್ರಾಯ ಪಡುತ್ತಾರೆ. ಆದರೆ ಗಂಗರ ಕಾಲದಲ್ಲಿ ಅಥವಾ ಹೊಯ್ಸಳರ ವಿಷ್ಣುವರ್ಧನನ ಆಳ್ವಿಕೆಯ ಪೂರ್ವ ಹಂತದಲ್ಲಿ ಹೊಯ್ಸಳರು ಇನ್ನು ಈ ಪದ್ಧತಿಯನ್ನು ತಮ್ಮದಾಗಿಸಿಕೊಂಡಿರಲಿಲ್ಲ. ಕಾರಣ ಈವರೆಗೆ ಪ್ರಕಟವಾಗಿರುವ ಹೊಯ್ಸಳ ದೇವಾಲಯಗಳ ವಾಸ್ತು ಅಧ್ಯಯನಗಳಾವುವೂ ಹೊಯ್ಸಳರು ಪ್ರಾರಂಭದ ದಿನಗಳಲ್ಲೇ ಕೂಟ ವ್ಯವಸ್ಥೆಯನ್ನು ಅನುಸರಿಸುತ್ತಿದ್ದರೆಂದು ದಾಖಲಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಕಂಬದಹಳ್ಳಿಯ ಪಂಚಕೂಟ ಬಸದಿಯನ್ನು ಗಮನಿಸಬೇಕಾಗುತ್ತದೆ. ಇದನ್ನು ನಿರೂಪಿಸಲು ಈ ದೇವಾಲಯವನ್ನು ಬೇರೆ ಕಾಲಘಟ್ಟಕ್ಕೆ ಹೊಂದಿಸಬೇಕಾಗುತ್ತದೆ. ಇದನ್ನು ಗಂಗರ ರಚನೆಯೆಂದು ಐ.ಕೆ. ಶರ್ಮ ರವರೂ ಸಹ ತಮ್ಮ ಪುಸ್ತಕದಲ್ಲಿ ದಾಖಲಿಸಿರುತ್ತಾರೆ. ಆದರೆ ಕೂಟ ವ್ಯವಸ್ಥೆ ಆ ಹೊತ್ತಿಗೆ ಬಳಕೆಯಾಗಿತ್ತೇ ಇಲ್ಲವೇ ಎಂಬುದು ಖಚಿತವಾಗುವುದಿಲ್ಲ. ಏನೇ ಆದರೂ ಇದು ಗಂಗ ಹೊಯ್ಸಳ ಪರಿವರ್ತನಾ ಕಾಲಘಟ್ಟದಲ್ಲಿ ನಿರ್ಮಾಣವಾಗಿದೆಯೆಂದು ವಿದ್ವಾಂಸರು ದಾಖಲಿಸಿರುವುದನ್ನು ಒಪ್ಪಿಕೊಂಡು ಈ ಕಟ್ಟಡವು ಗಂಗ ಹೊಯ್ಸಳ ಪರಿವರ್ತನಾ ಯುಗದ ದೇವಾಲಯವಾಗಿತ್ತು. ಈ ಎಲ್ಲ ವಿಶ್ಲೇಷಣೆಗಳ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಜೈನ ವಾಸ್ತು

ಪರಂಪರೆಯನ್ನು ಗಮನಿಸಿದಾಗ ಇದರಲ್ಲಿ ಬಾದಾಮಿ ಚಾಲುಕ್ಯರ ಅಂತಿಮ ಕಾಲಘಟ್ಟದ ಗುಹಾಂತರ ದೇವಾಲಯಗಳಂತೆ ಮೇಲುಕೋಟೆಯ ಗುಹೆಗಳು, ಅರೆತಿಪ್ಪೂರಿನಲ್ಲಿ ಐ.ಕೆ. ಶರ್ಮರವರು ಗುರುತಿಸಿರುವ ಬಸದಿ ಪ್ರದೇಶದಲ್ಲಿನ ಗುಹೆಯ ನಿರ್ಮಾಣದ ಅವಶೇಷ. ನಂತರ ರಾಷ್ಟ್ರಕೂಟರು ಗಂಗರ ಕಾಲದ ಭೋಗವತಿಯ ಪಾರ್ಶ್ವ ಜಿನಾಲಯ ಹಾಗೂ ಹೊಯ್ಸಳರ ಕಾಲಘಟ್ಟದ ಚೋಳಸಂದ್ರದ ಜಿನಾಲಯ ಇವು ಪ್ರಮುಖ ದೇವಾಲಯಗಳಾಗಿ ಅಥವಾ ಶೈಲಿಗಳಾಗಿ ಕಂಡುಬರುತ್ತವೆ. ಇದಲ್ಲದೆ ಅರೆತಿಪ್ಪೂರಿನಲ್ಲಿನ ಗಂಗರ ಕಾಲದ ಇಟ್ಟಿಗೆ ಮತ್ತು ಮರದಿಂದ ನಿರ್ಮಿಸಿದ ಜಿನಾಲಯಗಳ ಸಮೂಹ ಸಹ ಕಂಡುಬರುತ್ತವೆ. ಹಾಗಾಗಿ ಚಾಲುಕ್ಯ ಗಂಗ, ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರೋತ್ತರ ಶೈಲಿಯ ಜಿನಾಲಯಗಳು ಇಲ್ಲಿ ಕಂಡುಬರುತ್ತವಾದರೂ ವಾಸ್ತುಶೈಲಿಯಲ್ಲಿ ವಿಶೇಷವೆನಿಸುವ ಈ ಶೈಲಿಯ ಯಾವ ಲಕ್ಷಣಗಳನ್ನು ಇವುಗಳು ಹೊಂದಿಲ್ಲದಿರುವುದು ಕಾರ್ಯಕ್ಷೇತ್ರದಲ್ಲಿ ಕಂಡುಬಂದಿರುತ್ತದೆ. ಆದರೆ ಅರೆತಿಪ್ಪೂರಿನ ಬಸದಿಗಳ ಬಗೆಗಿನ ಅಧ್ಯಯನ ಇನ್ನೂ ಮುಂದುವರಿಯುತ್ತಿದ್ದು ಅದು ಪೂರ್ಣವಾದ ನಂತರ ಅದರ ಬಗೆಗಿನ ಪೂರ್ಣ ಮಾಹಿತಿ ಲಭ್ಯವಾಗುತ್ತದೆ. ಅಲ್ಲಿಯವರೆಗೆ ಈ ಮೇಲೆ ದಾಖಲಿಸಿರುವಂತೆ ಕೇವಲ ಕೆಲವೇ ಕೆಲವು ಬೆರಳೆಣಿಕೆಯ ದೇವಾಲಯಗಳು ಮಾತ್ರ ಜಿಲ್ಲೆಯಲ್ಲಿ ಇಂದಿಗೂ ಉಳಿದುಕೊಂಡು ಬಂದಿವೆ. ಈ ಅಧ್ಯಯನದಲ್ಲಿ ಹಟ್ಟಣದ ದೇವಾಲಯವನ್ನು ವಿಶೇಷವಾಗಿ ಹೊಯ್ಸಳರ ಕಾಲಘಟ್ಟದ್ದೆಂದು ದಾಖಲಿಸಿರುವೆವಾದರೂ ಅದನ್ನು ಕ್ಷೇತ್ರಕಾರ್ಯದಲ್ಲಿ ಅಧ್ಯಯನ ಮಾಡಿದಾಗ ದೇವಾಲಯದಲ್ಲಿ ಹೊಯ್ಸಳರ ಕಾಲದ್ದೆಂದು ಗುರುತಿಸಬಹುದಾದ ಯಾವ ಲಕ್ಷಣಗಳನ್ನು ಆ ದೇವಾಲಯ ಅಭಿವ್ಯಕ್ತಿಪಡಿಸುವುದಿಲ್ಲ. ದೇವಾಲಯದ ಹೊರಭಿತ್ತಿಯ ಎಲ್ಲ ಕಲ್ಲುಗಳು ಬಿದ್ದುಹೋಗಿವೆ. ಅಧಿಷ್ಠಾನದ ಭಾಗ ಮಣ್ಣಿನಲ್ಲಿ ಹೂತುಹೋಗಿದೆ. ಕೇವಲ ದೇವಾಲಯದ ಮುಂದಿರುವ ಜೈನ ಶಾಸನವನ್ನಾಧರಿಸಿ ಮತ್ತು ಗರ್ಭಗೃಹದಲ್ಲಿರುವ ಸಿಂಹಪೀಠವನ್ನು ಗಮನಿಸಿ ಇದು ಜೈನಮಂದಿರವೆಂದು ದಾಖಲಿಸಲಾಗಿದೆ. ಹಂಪ ನಾಗರಾಜಯ್ಯ ಅವರು ಗುತ್ತಲುವಿನ ದೇವಾಲಯವನ್ನು ಜಿನಾಲಯವಾಗಿತ್ತೆಂದು ತಪ್ಪಾಗಿ ಗ್ರಹಿಸಿರುವುದನ್ನು ಆಧಾರ ಸಹಿತವಾಗಿ ಅಲ್ಲಗಳೆಯಲಾಗಿರುವುದರಿಂದ ಕೇವಲ ಅರೆತಿಪ್ಪೂರು, ಕಂಬದಹಳ್ಳಿ, ಬಸ್ತಿ ಹೊಸಕೋಟೆ, ಬೆಳ್ಳೂರಿನ ದೇವಾಲಯಗಳನ್ನು ಪ್ರಾಚೀನ ವಾಸ್ತುಶೈಲಿಯ ದೇವಾಲಯಗಳೆಂದು ಪ್ರಸ್ತುತ ಮಹಾಪ್ರಬಂಧದಲ್ಲಿ ಆಧಾರಸಹಿತ ಗುರುತಿಸಲಾಗಿದೆ.

ಕನ್ನಡ ನಾಡಿನಲ್ಲಿ ಜೈನಧರ್ಮೀಯರ ಮೇಲೆ ಪರಧರ್ಮೀಯರ ಪ್ರಭಾವ, ಆಕ್ರಮಣ ಹಾಗೂ ಜಿನಾಲಯಗಳ ನಾಶ, ಪರಿವರ್ತನೆ, ಸ್ವಾಧೀನಕ್ಕೆ ಜೈನಧರ್ಮೀಯರಲ್ಲಿನ ವಿವಿಧ

ಒಳಪಂಗಡಗಳು, ಆಂತರಿಕ ಅಸ್ಥಿರತೆ, ಸ್ವಪ್ರತಿಷ್ಠೆ, ಅಹಂಕಾರ, ಸಮನ್ವಯದ ವಿರುದ್ಧವಾದ ನಡವಳಿಕೆಗಳು, ಜೈನಧರ್ಮಕ್ಕೆ ಹಿಂದೂಧರ್ಮದಿಂದ ಮತಾಂತರಗೊಂಡಿದ್ದ ಬಹುತೇಕ ಜೈನರು ರಾಮಾನುಜಾಚಾರ್ಯರ ಆಗಮನದ ತರುವಾಯ ಅವರು ವೈಷ್ಣವ ಪಂಥ ಪರಿಪಾಲನೆಗೆ ಅವಕಾಶ ಮಾಡಿಕೊಟ್ಟ ಹಿನ್ನೆಲೆಯಲ್ಲಿಯೂ ಜಿಲ್ಲೆಯಲ್ಲಿ ಜೈನಧರ್ಮ ಕುಸಿಯಿತೆನ್ನಬಹುದು. ಇದಕ್ಕೆ ಕಾರಣವೂ ಇಲ್ಲದಿಲ್ಲ. ಕರ್ನಾಟಕದಲ್ಲಿದ್ದ ದಿಗಂಬರ ಪಂಥ ಜೈನಧರ್ಮದ ಮೂಲ ಆಶಯಗಳಿಗೆ ವಿರುದ್ಧವಾದ ಸ್ಥಾವರಗಳ ನಿರ್ಮಾಣ, ಮುನಿಗಳಿಗೆ ಶ್ರಾವಕರಿಗೆ ಮತ್ತು ಇತರ ಆರಾಧನೆಯ ಕೇಂದ್ರಗಳನ್ನು ತೆರೆದು ಪುರೋಹಿತ ಶಾಹಿಯನ್ನು ಬೆಳೆಸಿದುದು ಮತ್ತು ಹಿಂದೂ ಧರ್ಮದ ಬಹುತೇಕ ಎಲ್ಲ ಆಚರಣೆಗಳನ್ನೂ ಜೈನಧರ್ಮೀಯರು ವಿಶೇಷವಾಗಿ ದಿಗಂಬರರು ಅನುಸರಿಸಿ ಮಹಾವೀರನ ಸರಳತತ್ವದಿಂದ ಮತ್ತೆ ಸಂಕೀರ್ಣತೆಗೆ ಸಾಗಿದುದರಿಂದ ಜಿನಧರ್ಮಕ್ಕೆ ಮತಾಂತರಗೊಂಡಿದ್ದವರು ತಮ್ಮ ಮೂಲಧರ್ಮವೇ ಲೇಸೆಂದು ಭಾವಿಸುವ ಪರಿಸ್ಥಿತಿ ಬಂದೊದಗಿತು. ಧರ್ಮಾಚರಣೆಯಲ್ಲಿದ್ದ ಕಾಠಿಣ್ಯತೆ, ಸಣ್ಣ ಪುಟ್ಟ ತಪ್ಪುಗಳಿಗೂ ಅಪಾರವಾದ ಕರ್ಮದ, ಪಾಪದ ಭಯ, ಸಹಿಸಲಾಸಾಧ್ಯವಾದ ನಿಷ್ಠುರ ಧರ್ಮಪರಿಪಾಲನೆ ಮುಂತಾದುವು ಕಾಲ, ದೇಶ, ವರ್ತಮಾನಗಳಿಗೆ ಒಗ್ಗಿ ನಡೆಯಬಹುದಾದ ಹಿಂದೂ ಧರ್ಮಕ್ಕಿಂತ ಕಾಠಿಣ್ಯವಾದ ಧಾರ್ಮಿಕ ಪರಿಸ್ಥಿತಿ ಇದು ಜಿನಧರ್ಮಕ್ಕೆ ಮತಾಂತರಗೊಂಡವರನ್ನು ಮತ್ತೆ ಹಿಂದೂ ಧರ್ಮಕ್ಕೆ ಮತಾಂತರಗೊಳಿಸುವುಂತೆ ಪ್ರೇರೇಪಿಸಿರುವುದನ್ನು ತಳ್ಳಿಹಾಕಲಾಗುವುದಿಲ್ಲ. ಪ್ರಾಯಶಃ ಇದು ದಕ್ಷಿಣ ಭಾರತದಾದ್ಯಂತ ನಡೆದಿರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದೇ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿನ ಜೈನಧರ್ಮದ ಕುಸಿತಕ್ಕೂ ಇದೇ ಕಾರಣವನ್ನು ಒಪ್ಪಿಕೊಳ್ಳಬಹುದು.

ಚಾತುರ್ವರ್ಣ ಪದ್ಧತಿ ಜೈನಧರ್ಮೀಯರಲ್ಲಿ ತ್ರೈವರ್ಣ ಪದ್ಧತಿಯಾಗಿ ಪರಿವರ್ತಿತವಾದುದು, ಸಂಘಗಳು, ಗಣಗಳು ಪ್ರತಿಷ್ಠೆಯ ಕೇಂದ್ರಗಳಾದುದು, ವಿವಿಧ ಸಂಘಗಳು, ಗಣಗಳು, ಗಚ್ಛಗಳು ಮುಂತಾದವುಗಳ ಆಚಾರ್ಯರುಗಳ ನಡುವಿನ ಸುಮಧುರ ಬಾಂಧವ್ಯದ ಕೊರತೆ, ಸ್ವಪ್ರತಿಷ್ಠೆಗಳೂ ಕೂಡಜೈನಧರ್ಮದ ಪ್ರಖ್ಯಾತಿಯನ್ನು ಕುಂಠಿತಗೊಳಿಸಿದವು.

ಜೈನಧರ್ಮದಲ್ಲಿ ಗುರುತಿಸಲ್ಪಡುವ ಪ್ರಥಮ, ಚತುರ್ಥ, ಪಂಚಮ, ಖಾಸರ, ಭೋಗಾರ, ಸಾದರ, ಸೇತುವಾಳ, ನಾಯಕ, ಶೆಟ್ಟಿ, ನಗರ್ತ, ವೈಶ್ಯ, ಗೌಡ, ಜೈನ ಬ್ರಾಹ್ಮಣ ಮುಂತಾದ 84 ಒಳಪಂಗಡಗಳು ಇವು ಜೈನಧರ್ಮದ ಮೂಲ ತತ್ವಗಳಿಗೆ ವಿರುದ್ಧವಾಗಿದ್ದು ಸಮನ್ವಯವನ್ನು ತರುವಲ್ಲಿ ಅಡೆತಡೆಗಳಾಗಿ ಕಂಡುಬಂದವು. ಸಾಮಾಜಿಕ ಸಂಪ್ರದಾಯಗಳಿಗೆ ಮತ್ತು ವಿವಾಹಾದಿ

ಇತರ ಸಂಬಂಧಗಳಿಗೆ ಈ ಒಳಪಂಗಡಗಳೇ ಮುಖ್ಯ ಕಾರಣವಾಗಿ ಕೇವಲ ಧಾರ್ಮಿಕ ಪರಿಭಾಷೆಯಲ್ಲಿ ಮಾತ್ರ ಜೈನಧರ್ಮ ಒಂದಾಗಿದ್ದಿತು.

ರಾಮಾನುಜಾಚಾರ್ಯರ ಆಗಮನದ ತರುವಾಯ ಬಹುತೇಕ ಜೈನರು ಈ ಪ್ರದೇಶಗಳಲ್ಲಿ ವೈಷ್ಣವರಾಗಿ ಪರಿವರ್ತಿತರಾಗಿರುವ ಸಾಧ್ಯತೆಯನ್ನು ತಳ್ಳಿಹಾಕಲು ಬರುವುದಿಲ್ಲ. ಕಾರಣ ಶ್ರೀವೈಷ್ಣವ ದೀಕ್ಷೆ ಮತ್ತದರ ಅನುಸರಣೆ ಜಿನಧರ್ಮಾಚರಣೆ ಅನುಸಾರಕ್ಕಿಂತ ಸುಲಭ ಸಾಧ್ಯವಾದುದರಿಂದ ಮತ್ತು ಎಲ್ಲೊ ಒಂದು ಕಡೆ ವೈದಿಕ ಪಂಥದಿಂದ ತಮ್ಮ ಅಸ್ಮಿತೆಯನ್ನು ಕಳೆದುಕೊಂಡು ಜಿನ ಪಂಥಕ್ಕೆ ಮಾರುಹೋಗಿ ಇಲ್ಲಿಯೂ ಇಲ್ಲದ ಅಲ್ಲಿಯೂ ಇಲ್ಲದ ಸಂದಿಗ್ಧತೆಯಲ್ಲಿದ್ದ ಸಮುದಾಯಗಳು ಮತ್ತೆ ಮಾತೃಧರ್ಮಕ್ಕೆ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಸೇರಿಕೊಳ್ಳಬಹುದಾದ ಸಾಧ್ಯತೆಗಳೊದಗಿದಾಗ ಇದು ನೆರವೇರಿದೆ. ಈ ಬಗೆಯಲ್ಲಿ ಜಿನ ಧರ್ಮದಿಂದ ಶ್ರೀವೈಷ್ಣವ ಧರ್ಮಕ್ಕೆ ರಾಮಾನುಜಾಚಾರ್ಯರೇ ಅನೇಕ ಜನರನ್ನು ಪರಿವರ್ತಿಸಿದರೆಂದು ತೊಂಡನೂರಿನ ಐತಿಹ್ಯ ಮೇಲುಕೋಟೆಯ ಐತಿಹ್ಯ ಮತ್ತು ರಾಮಾನುಜರ ಐತಿಹ್ಯಗಳು ಬಹಳ ನೇರನುಡಿಯಲ್ಲಿ ಈ ಮತಾಂತರವನ್ನು ಹೇಳುವುದರಿಂದ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅಲ್ಲದೆ ರಾಮಾನುಜಾಚಾರ್ಯರಿಗಾಗಿ ಕೊಟ್ಟ 5 ಗ್ರಾಮಗಳಲ್ಲಿ 3 ಗ್ರಾಮಗಳು ತುಮಕೂರು ಜಿಲ್ಲೆಯ ಇಂದಿನ ಪ್ರದೇಶದಲ್ಲಿ ಕಂಡುಬರುತ್ತವೆ. ಕಡಬ, ಮಾಯಸಂದ್ರ, ತುರುವೇಕೆರೆ ಮುಂತಾದವು ಶ್ರೀವೈಷ್ಣವ ಪಂಥದ ಪ್ರಮುಖ ಗ್ರಾಮಗಳಾಗಿದ್ದವೆಂಬುದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗಲೂ ನಮ್ಮ ಅಧ್ಯಯನ ಕಾಲಘಟ್ಟದಲ್ಲಿ ಜೈನಧರ್ಮ ಪ್ರಚಲಿತದಲ್ಲಿತ್ತೆಂದು 15ನೆಯ ಶತಮಾನದ ನಂತರ ಅದು ಬಹುಬೇಗನೆ ಕ್ಷೀಣಿಸಿದುದನ್ನು ಶಾಸನಗಳ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

ಈ ಕ್ಷೀಣತೆಗೆ ಮತ್ತೊಂದು ಕಾರಣವನ್ನು ನೀಡುವುದಾದರೆ ಅಲ್ಲಾವುದ್ದೀನ್ ಖಿಲ್ಜಿ ದಕ್ಷಿಣ ಭಾರತದ ಮೇಲೆ ಧಾಳಿ ಮಾಡಿದಾಗ ವಿಶೇಷವಾಗಿ ಆತನು ಮಧುರೆಗೆ ದಂಡಯಾತ್ರೆ ಕೈಗೊಂಡ ಸಂದರ್ಭದಲ್ಲಿ ದಕ್ಷಿಣದ ವ್ಯಾಪಾರಿ ಮಾರ್ಗವನ್ನು ಅನುಸರಿಸಿದುದರಿಂದ ಆ ಮಾರ್ಗದಲ್ಲಿದ್ದ ಪ್ರಮುಖ ಶ್ರೇಷ್ಠಿಗಳಾಗಿದ್ದ ಜೈನರು ಮುಸ್ಲಿಂ ಧಾಳಿಗೆ ಆಹುತಿಯಾದರು ಅವರಲ್ಲಿ ಬಹುತೇಕರು ಧರ್ಮ ಪರಿಪಾಲನೆಯ ನೆಪದಲ್ಲಿ ಧಾಳಿಕೋರ ಮುಸ್ಲಿಂ ಸೈನ್ಯಕ್ಕೆ ಆಹುತಿಯಾದರೆ ಕೆಲವರು ಜೀವದ ಆಸೆಯಿಂದ ಮತಾಂತರಗೊಂಡರೆಂದು ಮತ್ತೆ ಕೆಲವರು ಈ ದುರಾಕ್ರಮಣದ ಹಿನ್ನೆಲೆಯಲ್ಲಿ ತಮ್ಮೆಲ್ಲಾ ಚಿರಾಸ್ಥಿಗಳನ್ನು ಬಿಟ್ಟು ಚರಾಸ್ಥಿಗಳನ್ನು ಎಷ್ಟು ಸಾಧ್ಯವೋ ಅಷ್ಟನ್ನು ಸಂಗ್ರಹಿಸಿ ಈ ಪ್ರದೇಶಗಳಿಂದ ಬೇರೆ ಪ್ರದೇಶಗಳಿಗೆ ವಲಸೆ ಹೋಗಿರುವುದನ್ನು ಗುರುತಿಸಬೇಕಾಗುತ್ತದೆ.

ಇವುಗಳನ್ನು ಗಮನಿಸಿದಾಗ ಜೈನಧರ್ಮ ಅವನತಿಗೆ ವೈಷ್ಣವ ಧರ್ಮದ ಪ್ರಚಾರ; ಕಲ್ಯಾಣದ ಕ್ರಾಂತಿಯ ನಂತರ ದಕ್ಷಿಣಕ್ಕೆ ವಲಸೆ ಬಂದ ವೀರಶೈವ ಪರಂಪರೆ ಜೈನಪರಂಪರೆಯ ಬಹುತೇಕ ಶ್ರಾವಕರನ್ನು ತನ್ನೆಡೆಗೆ ಸೆಳೆದುಕೊಂಡುದುದು. ಆನಂತರ 14ನೆಯ ಶತಮಾನದ ಪ್ರಾರಂಭದ ಭಾಗದಲ್ಲಿ ವ್ಯಾಪಾರಿ ಮಾರ್ಗಗಳ ಮೇಲೆ ಆದ ಮುಸ್ಲಿಂ ಧಾಳಿ. ಇವೆಲ್ಲವನ್ನು ಗಮನಿಸಿದಾಗ ಜೈನಧರ್ಮ ತನ್ನ ಕಠೋರ ಆಚರಣೆಗಳು ಮತ್ತು ಸಂಸ್ಕೃತೀಕರಣ ಬಹಳವಾದ ಆರಾಧನೆಯ ಕ್ರಮಗಳು ಉದಾಹರಣೆಗೆ ಯಂತ್ರಾರಾಧನೆ, ನೋಂಪಿಗಳು ಇತ್ಯಾದಿ ಧಾರ್ಮಿಕಾಚರಣೆಗಳು ವೈದಿಕ ಮತಾಚರಣೆಗಿಂತಲೂ ಅತಿ ಕ್ಲಿಷ್ಟವೆನಿಸಿದುದು ಜೈನರು ಮತ್ತೆ ತಮ್ಮ ಮಾತೃ ಧರ್ಮದ ಕಡೆಗೆ ವಾಲುವಂತೆ ಪ್ರೇರೇಪಿಸಿತು. ಅದೇನೇ ಆದರೂ ಜೈನಧರ್ಮ ಜಿಲ್ಲೆಯಲ್ಲಿ ಸಾಕಷ್ಟು ಪ್ರಚಲಿತದಲ್ಲಿತ್ತು ಮತ್ತು ಆನಂತರ ಕ್ರಮೇಣವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದ್ದನ್ನು ಗುರುತಿಸಲಾಗಿದೆ.

ಒಟ್ಟಾರೆಯಾಗಿ ಮಂಡ್ಯ ಜಿಲ್ಲೆಯಲ್ಲಿನ ಜೈನ ಪರಂಪರೆಯನ್ನು ಗಮನಿಸಿದಾಗ ಜೈನ ಪರಂಪರೆಯು ಅತಿ ಪ್ರಾಚೀನ ಕಾಲದಿಂದ ನೆಲೆಸಿದ್ದು ಗಂಗರ ಕಾಲದಲ್ಲಿ ತನ್ನ ಉಚ್ಛ್ರಾಯ ಸ್ಥಿತಿಯನ್ನು ಅನುಭವಿಸಿ ಚೋಳರ ಆಡಳಿತಾವಧಿಯಲ್ಲಿ ಮೊದಲ ಹಿನ್ನಡೆಯನ್ನನುಭವಿಸಿ ಮತ್ತೆ ಗಂಗವಾಡಿ ಹೊಯ್ಸಳರ ಅಧೀನವಾದ ನಂತರ ಸಾಕಷ್ಟು ಔನ್ನತ್ಯವನ್ನು ಗಳಿಸಿಕೊಂಡು ಆನಂತರದ ಕಾಲಘಟ್ಟದಲ್ಲಿ ಹೊಯ್ಸಳರ ಕಾಲದಲ್ಲಿ ಸಂಭವಿಸಿತೆನ್ನಲಾದ ಶ್ರೀವೈಷ್ಣವ ಹಾಗೂ ವೀರಶೈವ ಪಂಥಕ್ಕೆ ಜೈನರು ಮತಾಂತರ ಹೊಂದಿದುದರಿಂದ ಜೈನಧರ್ಮದ ಅಸ್ತಿತ್ವಕ್ಕೆ ಧಕ್ಕೆ ಬಂದಿತು. ಆದರೂ ಕೆಲವೇ ಕೆಲವು ಬೆರಳೆಣಿಕೆಯ ಕ್ಷೇತ್ರಗಳಲ್ಲಿ ಇಂದಿಗೂ ಮಂಡ್ಯ ಜಿಲ್ಲೆಯಲ್ಲಿ ಜೈನಧರ್ಮೀಯರು, ಜೈನ ಧರ್ಮದ ಆರಾಧನ ಕೇಂದ್ರಗಳು ಮುಂದುವರೆಯುತ್ತಿರುವುದಕ್ಕೆ ಆ ಧರ್ಮೀಯರ ಅಚಲ ನಿಷ್ಠೆ ಮತ್ತು ಧರ್ಮ ಸಾಧನೆಯೇ ಕಾರಣವಾಗಿದೆಯೆಂದರೆ ಉತ್ಪ್ರೇಕ್ಷೆಯಾಗಲಾರದು. ಇಂದು ಜಿಲ್ಲೆಯಲ್ಲಿರುವ ಜೈನ ಮತೀಯರ ಅಂಕಿ ಅಂಶಗಳನ್ನು ಗಮನಿಸಿದಾಗಲೂ ಸಹ ಈ ಅಭಿಪ್ರಾಯ ಉತ್ಪ್ರೇಕ್ಷೆ ಎನಿಸುವುದಿಲ್ಲ. 2011 ಜನಗಣತಿ ವರದಿಯಂತೆ ಇಂದು ಮಂಡ್ಯ ಜಿಲ್ಲೆಯಲ್ಲಿ ಒಟ್ಟಾರೆ 3,087 ಜಿನಧರ್ಮೀಯರಿದ್ದಾರೆ. ಜಿಲ್ಲೆಯ ಶೇಕಡಾವಾರು ಜನಸಂಖ್ಯೆಯಲ್ಲಿ 0.19 ರಷ್ಟು ಜೈನರಿದ್ದಾರೆ. ತಾಲ್ಲೂಕುಗಳ ವಿತರಣೆಯಲ್ಲಿ ಅಥವಾ ತಾಲ್ಲೂಕುವಾರು ಹಂಚಿಕೆಯಲ್ಲಿ ನಾಗಮಂಗಲ ಮತ್ತು ಮಂಡ್ಯ ತಾಲ್ಲೂಕುಗಳು ಮೊದಲೆರಡು ಸ್ಥಾನಗಳನ್ನು ಹಂಚಿಕೊಳ್ಳುತ್ತವೆ. ಉಳಿದವು ಅತ್ಯಂತ ಕಡಿಮೆ ಸಂಖ್ಯೆಯ ಜೈನ ಕುಟುಂಬಗಳನ್ನು ಹೊಂದಿವೆ.

ಫಲಿತಗಳು

ಮಂಡ್ಯ ಜಿಲ್ಲೆಯ ಶಾಸನಗಳನ್ನು ಮತ್ತು ಜೈನ ನೆಲೆಗಳನ್ನು ಸಮೀಕ್ಷಿಸಿ ಈ ಸಂಶೋಧನೆಯನ್ನು ಪೂರ್ಣಗೊಳಿಸಿದ ಹಂತದಲ್ಲಿ ಕೆಲವು ಪ್ರಮುಖ ಫಲಿತಗಳು ನಮಗೆ ಕಂಡುಬರುತ್ತವೆ.

1. ಮಂಡ್ಯ ಜಿಲ್ಲೆಗೆ ಜೈನಧರ್ಮದ ಆಗಮನ, ಜೈನಧರ್ಮಕ್ಕೆ ವಿವಿಧ ಅರಸು ಮನೆತನಗಳ ರಾಜಾಶ್ರಯ, ಜೈನಧರ್ಮದ ಉಚ್ಛ್ರಾಯ ಸ್ಥಿತಿ ಹಾಗೂ ಜೈನಧರ್ಮದ ಇಳಿಮುಖದ ಕಾರಣಗಳನ್ನು ಉಪಲಬ್ಧ ಶಾಸನಾಧಾರಗಳ ಹಿನ್ನೆಲೆಯಲ್ಲಿ ಸಮಗ್ರವಾಗಿ ವಿಶ್ಲೇಷಿಸಿ ನಿರೂಪಿಸಲಾಗಿದೆ.
2. ಮಂಡ್ಯಜಿಲ್ಲೆಯಾದ್ಯಂತ ಒಟ್ಟು ಐದು ಬಾಹುಬಲಿ ಶಿಲ್ಪಗಳನ್ನು ಗುರುತಿಸಲಾಗಿದೆ. ಅರೆತಿಪ್ಪೂರು ಮತ್ತು ಬಸ್ತಿಹೊಸಕೋಟೆಯ ಎರಡು ಬಾಹುಬಲಿ ಶಿಲ್ಪಗಳನ್ನು ಮಾತ್ರ ಈ ಹಿಂದೆ ಗುರುತಿಸಲಾಗಿತ್ತು. ಅವುಗಳೊಡನೆ ಇನ್ನು ಮೂರು ಗೊಮ್ಮಟ ಶಿಲ್ಪಗಳನ್ನು (ಹೊಸಹೊಳಲು, ಕಂಬದಹಳ್ಳಿ ಹಾಗೂ ಅರೆತಿಪ್ಪೂರಿನ ಇನ್ನೊಂದು) ಮೊದಲ ಬಾರಿಗೆ ಈ ಮಹಾಪ್ರಬಂಧದಲ್ಲಿ ಗುರುತಿಸಿ ಮಂಡ್ಯ ಜಿಲ್ಲೆಯಲ್ಲಿ ತೀರ್ಥಂಕರರ ಆರಾಧನೆಯ ಜೊತೆಗೆ ಬಾಹುಬಲಿಯ ಆರಾಧನೆಯು ಪ್ರಬಲವಾಗಿತ್ತೆಂದು ಆಧಾರ ಸಹಿತ ನಿರೂಪಿಸಲಾಗಿದೆ.
3. ಅರೆತಿಪ್ಪೂರಿನಲ್ಲಿ ಇದುವರೆಗೂ ಯಾರೂ ಗುರುತಿಸಿರದ ಶಾಸನ ಅಂದರೆ ಬರವಣಿಗೆ ರಹಿತ ನಿಶಧಿ ಶಿಲ್ಪಗಳನ್ನು ಪತ್ತೆಹಚ್ಚಿ ಪ್ರಸ್ತುತ ಮಹಾಪ್ರಬಂಧದಲ್ಲಿ ಮೊಟ್ಟಮೊದಲ ಬಾರಿಗೆ ನಿರೂಪಿಸಲಾಗಿದೆ.
4. ನಾಗಮಂಗಲ ತಾಲ್ಲೂಕಿನ ಎಲೆಕೊಪ್ಪ ಗ್ರಾಮದಲ್ಲಿ ಶಾಸನ ರಹಿತ ಜೈನ ವೀರಗಲ್ಲು (ಜೈನ ವೀರ ನಿಷಿಧಿ) ನ್ನು ಪತ್ತೆಹಚ್ಚಿ ನಿರೂಪಿಸಲಾಗಿದೆ.
5. ಮಂಡ್ಯ ಜಿಲ್ಲೆಯು ದಕ್ಷಿಣದ ತಮಿಳು ಸಾಮ್ರಾಜ್ಯಗಳೊಂದಿಗೆ ಸಂಪರ್ಕ ಸಾಧಿಸುವ ಮಾರ್ಗದಲ್ಲಿದ್ದುದಲ್ಲದೆ ಚಾಲುಕ್ಯರ ಕಾಲದಿಂದ ರಾಷ್ಟ್ರಕೂಟರ ಕಾಲದವರೆಗೆ ಇದು ಎರಡು ಭಾಷಾ ಸಾಮ್ರಾಜ್ಯಗಳ ನಡುವಿನ ಬಫರ್ ಪ್ರದೇಶಗಳಾಗಿ ಈ ಪ್ರದೇಶಗಳ ಮೇಲೆ ಪ್ರಭುತ್ವ ಸಾಧಿಸುವುದಕ್ಕಾಗಿಯೇ ಹೋರಾಟ ನಡೆಸಿರುವುದು ಗಮನಿಸಬೇಕಾದ ಅಂಶ. ಚೋಳರು ಗಂಗವಾಡಿಯನ್ನಾಕ್ರಮಿಸುವುದರೊಂದಿಗೆ ಮತ್ತೆ ಹೊಯ್ಸಳರು ಗಂಗವಾಡಿಯಿಂದ ಚೋಳರನ್ನು ಹೊರನೂಕುವವರೆಗೆ ಈ ಬಗೆಯ ಚಟುವಟಿಕೆಗಳನ್ನು ಗುರುತಿಸಲಾಗಿದೆ.

ಇದೂ ಕೂಡ ಒಂದು ಪ್ರಮುಖ ಅಂಶವಾಗಿ ಧಾರ್ಮಿಕ ಇತಿಹಾಸದ ಮೇಲೆ ಪ್ರಭಾವ ಬೀರಿದೆ.

6. ಶೈವ ಧರ್ಮೀಯರಾದ ಚೋಳರು ಗಂಗವಾಡಿಯನ್ನು ಆಕ್ರಮಿಸಿದ ಮೇಲೆ ಈ ಪ್ರದೇಶಗಳಲ್ಲಿ ಜೈನಧರ್ಮ ಸಾಕಷ್ಟು ಅಸ್ಥಿರವಾಯಿತು. ಹೊಯ್ಸಳರು ಈ ಪ್ರದೇಶದ ಮೇಲೆ ಪ್ರಭುತ್ವ ಸಾಧಿಸಿದ ಮೇಲೆ ಗಂಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಬಹುತೇಕ ಜೈನನೆಲೆಗಳು ಮತ್ತೆ ಮುನ್ನೆಲೆಗೆ ಬಂದುದಲ್ಲದೆ ಆಯಾ ಪ್ರದೇಶಗಳಲ್ಲಿ ಮಹೋನ್ನತವಾದ ಜೈನಬಸದಿಗಳು ನಿರ್ಮಾಣಗೊಂಡಿರುವುದು ಅಧ್ಯಯನದಿಂದ ಖಚಿತವಾಗಿದೆ. ಕಂಬದಹಳ್ಳಿಯ ತ್ರಿಕೂಟಾಚಲ ಬಸದಿಯನ್ನು ಗಂಗ ಹೊಯ್ಸಳರ ಕಾಲಕ್ಕೆ ಗುರುತಿಸುತ್ತೇವೆ. ಇದಲ್ಲದೆ ಅರೆತಿಪ್ಪೂರಿನ ಜೈನಕ್ಷೇತ್ರ ಗಂಗವಾಡಿಯ ಪ್ರದೇಶದಲ್ಲಿದ್ದ ಜೈನಕಾಶಿಯೆಂದೇ ಪ್ರಸಿದ್ಧವಾಗಿತ್ತು. ಇದೂ ಕೂಡ ಗಂಗರ ಕಾಲದಿಂದ ಹೊಯ್ಸಳರ ಕಾಲಾಂತ್ಯದವರೆಗೆ ಅಸ್ತಿತ್ವದಲ್ಲಿತ್ತು. ಬಸ್ತಿಹೊಸಕೋಟೆ ಗ್ರಾಮದಲ್ಲಿರುವ ಜೈನ ಅವಶೇಷಗಳನ್ನು ಗಮನಿಸಿದಾಗ ಅದು ಗಂಗರ ಕಾಲದಲ್ಲಿ ಸಮೃದ್ಧ ಜೈನನೆಲೆಯಾಗಿದ್ದು ಮತ್ತೆ ಹೊಯ್ಸಳರ ಕಾಲದಲ್ಲಿ ಅದೇ ಪ್ರಖ್ಯಾತಿಯನ್ನು ಪಡೆದುಕೊಂಡಿತು. ಹೀಗೆ ಜಿಲ್ಲೆಯ ವ್ಯಾಪ್ತಿಯಲ್ಲಿ ಕಂಡುಬರುವ ಜೈನಧರ್ಮ ಎರಡು ರಾಜಮನೆತನಗಳ ಕಾಲಾವಧಿಯಲ್ಲಿ ತನ್ನ ವೈಭವದ ದಿನಗಳನ್ನು ಅನುಭವಿಸಿತು.

7. ಹೊಯ್ಸಳರ ಕಾಲಘಟ್ಟದಲ್ಲಿ ಕನ್ನಡನಾಡಿಗೆ ವಲಸೆ ಬಂದ ರಾಮಾನುಜಾಚಾರ್ಯರು ಈ ಪ್ರದೇಶದಲ್ಲಿ ಶ್ರೀವೈಷ್ಣವ ಧರ್ಮವನ್ನು ಪ್ರಚಾರ ಮಾಡಿದರು. ತೊಂಡನೂರು ಪ್ರದೇಶದಲ್ಲಿ ಕೂಡ ರಾಮಾನುಜಾಚಾರ್ಯರು ಸಹಸ್ರಾರು ಜೈನ ಧರ್ಮೀಯರನ್ನು ಶ್ರೀವೈಷ್ಣವ ಪಂಥಕ್ಕೆ ಪರಿವರ್ತಿಸಿದರೆಂದು ಮೌಖಿಕ ದಾಖಲೆಗಳು ಕಂಡುಬರುತ್ತವೆ. ಅಲ್ಲದೆ ಈ ಪ್ರದೇಶದಲ್ಲಿ ಶ್ರೀವೈಷ್ಣವ ಪಂಥದ ಬೆಳವಣಿಗೆಯು ಸರಳ ರೂಪದಲ್ಲಿ ಭಕ್ತಿಪಂಥವನ್ನು ಪ್ರತಿಪಾದಿಸಿದ್ದರಿಂದ ಕಠಿಣ ವ್ರತನಿಯಮಗಳ ಜೈನಧರ್ಮ ಜನಸಾಮಾನ್ಯರನ್ನು ಆಕರ್ಷಿಸುವಲ್ಲಿ ವಿಫಲವಾಗಿ ಬಹುತೇಕ ಜೈನರು ಶ್ರೀವೈಷ್ಣವ ಪಂಥವನ್ನು ಆ ಕಾಲದಲ್ಲಿ ಅನುಸರಿಸಿದರು.

8. ಹೊಯ್ಸಳರ ಯುಗಾಂತ್ಯಕ್ಕೆ ಅಲ್ಲಾವುದ್ದೀನ್ ಖಿಲ್ಜಿಯ ಧಾಳಿಗಳು ಕಾರಣವೆಂದು ಇತಿಹಾಸಕಾರರು ಭಾವಿಸುತ್ತಾರೆ. ಅಲ್ಲಾವುದ್ದೀನ್ ಖಿಲ್ಜಿಯ ಮೊದಲನೆ ದಂಡಯಾತ್ರೆಯ ಮಾರ್ಗದುದ್ದಕ್ಕೂ ವ್ಯಾಪಾರಿ ಮಾರ್ಗದಲ್ಲಿ ಸಂಚರಿಸುವಾಗ ಅಲ್ಲಿನ ಹಿಂದುಗಳನ್ನು ಇಸ್ಲಾಂ ಮತಕ್ಕೆ ಮತಾಂತರಿಸುವ ಬೆದರಿಕೆ ಒಡ್ಡಿದುದಲ್ಲದೆ ಒಪ್ಪದವರನ್ನು ಸಂಹಾರ ಮಾಡಿರುವ ಸಾಧ್ಯತೆಗಳನ್ನು ತಳ್ಳಿಹಾಕಲಾಗುವುದಿಲ್ಲ. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಜಿಲ್ಲೆಯಲ್ಲಿನ ಜೈನ ಸ್ಮಾರಕಗಳಲ್ಲಿದ್ದ ಮೂಲ ಬಿಂಬಗಳನ್ನು ಸ್ಥಳಾಂತರಿಸಿ ಅತೀ

ಹೆಚ್ಚು ಸಂರಕ್ಷಿತ ಪ್ರದೇಶಗಳಲ್ಲಿ ಜಿನಮಂದಿರಗಳನ್ನು ಸ್ಥಾಪಿಸಿರುವುದನ್ನು ಗಮನಿಸಿದರೆ ಪ್ರಾಯಶಃ ಈ ಮುಸಲ್ಮಾನ ಧಾಳಿಗಳಿಂದ ವ್ಯಾಪಾರಿ ಮಾರ್ಗದಲ್ಲಿದ್ದ ಜೈನ ವರ್ತಕರುಗಳು ಮತ್ತು ಇತರ ವರ್ತಕ ಸಮುದಾಯ ತನ್ನ ಅಸ್ತಿತ್ವಕ್ಕಾಗಿ ಬೇರೆ ಸಂರಕ್ಷಿತ ಪ್ರದೇಶಗಳಿಗೆ ವಲಸೆ ಹೋದ ಕಾರಣದಿಂದಾಗಿ ಇಲ್ಲಿದ್ದ ಜೈನ ಸ್ಮಾರಕಗಳು ಅವಜ್ಞೆಗೆ ಒಳಗಾದವು. ಧಾರ್ಮಿಕ ಪುನರುತ್ಥಾನದ ನಂತರವೂ ಮತ್ತು ರಾಜಕೀಯ ಸ್ಥಿತಿ ಸಂರಕ್ಷಿತ ಕಾಲಕ್ಕೆ ಪರಿವರ್ತಿತವಾದ ದಿನಗಳಲ್ಲಿ ಕೂಡ ಈ ಸಮುದಾಯ ಮತ್ತೆ ಈ ಪ್ರದೇಶಗಳಲ್ಲಿ ನೆಲೆ ನಿಲ್ಲದೆ ಹೋದುದು ಈ ಸ್ಮಾರಕಗಳು ತಮ್ಮ ಅಸ್ತಿತ್ವವನ್ನು ಶಾಶ್ವತವಾಗಿ ಕಳೆದುಕೊಳ್ಳಲು ಕಾರಣವಾಯಿತು.

9. ಮಂಡ್ಯ ಜಿಲ್ಲೆಯಲ್ಲಿ ಕಂಡುಬರುವ ಜೈನ ವಾಸ್ತುಶೈಲಿಗಳನ್ನು ಗಮನಿಸಿದಾಗ ಪ್ರಾಚೀನ ವಾಸ್ತುಪರಂಪರೆಯಾದ ಗುಹಾಲಯಗಳೂ ಕೂಡ ಕಂಡುಬರುತ್ತವೆ. ಮೇಲುಕೋಟೆ ಮತ್ತು ಅರೆತಿಪ್ಪೂರಿನಲ್ಲಿ ಜೈನ ಗುಹಾಲಯಗಳು ನಿರ್ಮಾಣವಾಗಿರುವುದನ್ನು ಐ.ಕೆ. ಶರ್ಮ ಮತ್ತು ದೇವರಕೊಂಡರೆಡ್ಡಿಯವರು ದಾಖಲಿಸುತ್ತಾರೆ. ಇಷ್ಟೇ ಅಲ್ಲದೆ ಪಾಂಡವಪುರ ಪ್ರದೇಶದ ಕುಂತಿಬೆಟ್ಟದಲ್ಲಿ ಕೂಡ ಜೈನಮುನಿಗಳು ಇದ್ದರೆಂದು ಸ್ಥಳೀಯ ಮೌಖಿಕ ಆಕರಗಳು ಖಚಿತಪಡಿಸುತ್ತವೆ. ಆದರೆ ಈ ಪ್ರದೇಶದಲ್ಲಿ ಯಾವ ಸ್ಮಾರಕಗಳು ಈವರೆಗೆ ಪ್ರಕಟವಾಗಿಲ್ಲ. ಹಾಗಾಗಿ ಅರೆತಿಪ್ಪೂರು ಮತ್ತು ಮೇಲುಕೋಟೆಯನ್ನು ಮಾತ್ರ ಈ ದಿಸೆಯಲ್ಲಿ ಗುರುತಿಸಬಹುದಾಗಿದ್ದು ವಾಸ ಯೋಗ್ಯವಾದ ನಿರಂತರ ನೀರಿನ ಒರತೆಯಿರುವ ಗುಡ್ಡಪ್ರದೇಶಗಳು ಕಡಿಮೆ ಇದ್ದುದರಿಂದ ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಈ ಪ್ರದೇಶ ಸಂಘರ್ಷ ಪ್ರದೇಶವಾಗಿದ್ದುದರಿಂದ ಆರಂಭಿಕ ಕಾಲದ ಗುಹಾಂತರ ದೇವಾಲಯಗಳು ಹೆಚ್ಚು ಪ್ರವರ್ಧಮಾನಕ್ಕೆ ಬರಲಿಲ್ಲ. ಅಷ್ಟೇ ಅಲ್ಲದೆ ರಾಜಕೀಯ ಇಚ್ಛಾಶಕ್ತಿಯ ಕೇಂದ್ರಗಳು ಪ್ರಾರಂಭದ ಕಾಲಘಟ್ಟದಲ್ಲಿ ಈ ಪ್ರದೇಶದಲ್ಲಿ ಕಂಡುಬಾರದ ಕಾರಣ ಜೈನ ಸಾಂಸ್ಕೃತಿಕ ನೆಲೆಗಳು ಹೆಚ್ಚಾಗಿ ಕಂಡುಬರಲಿಲ್ಲ. ಆದರೂ ವ್ಯಾಪಾರಿ ಮಾರ್ಗಗಳಲ್ಲಿ ಈ ಧರ್ಮದ ಕುರುಹುಗಳು ಅಲ್ಲಲ್ಲಿ ಕಂಡುಬಂದಿವೆ.

10. ಗಂಗವಾಡಿ ಪ್ರದೇಶ ರಾಷ್ಟ್ರಕೂಟರ ಆಳ್ವಿಕೆಗೆ ಒಳಗಾಗಿದ್ದುದನ್ನು ಇತಿಹಾಸದ ಪುಟಗಳು ಖಚಿತವಾಗಿ ದಾಖಲಿಸುತ್ತವೆ. ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ರಾಷ್ಟ್ರಕೂಟರ ವಾಸ್ತು ಚಟುವಟಿಕೆಗಳನ್ನು ದಾಖಲಿಸಬಹುದಾದ ಯಾವುದೇ ಕುರುಹುಗಳು ಈವರೆಗೆ ಪ್ರಕಟವಾಗಿಲ್ಲ. ಆದರೆ ನಾಗಮಂಗಲ ತಾಲ್ಲೂಕಿನ ಬೋಗಾದಿಯ ಜಿನಮಂದಿರದಲ್ಲಿರುವ ಕೆಲವು ಕಂಬಗಳು ರಾಷ್ಟ್ರಕೂಟರ ಕಾಲದ್ದವೆಂದು ಖಚಿತವಾಗಿ ತಿಳಿದುಬರುತ್ತದೆ. ಪ್ರಾಯಶಃ ಈ ಜೈನ ಬಸದಿ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣಗೊಂಡು ಆನಂತರದ ದಿನದಲ್ಲಿ ಮತ್ತೆ

ಮರು ನಿರ್ಮಾಣಗೊಂಡಿರುವ ಸಾಧ್ಯತೆಯನ್ನು ಇಲ್ಲಿನ ಶಾಸನಗಳು ಒತ್ತಿ ಹೇಳುತ್ತವೆ. ಹಾಗಾಗಿ ವಾಸ್ತುಶೈಲಿ ಮತ್ತು ಅಧ್ಯಯನದ ಶಾಸನಗಳ ಹಿನ್ನೆಲೆಯಲ್ಲಿ ಬೋಗಾದಿ ಅಥವಾ ಭೋಗವತಿ ರಾಷ್ಟ್ರಕೂಟರ ಕಾಲದಿಂದಲೇ ಜೈನ ನೆಲೆಯಾಗಿದ್ದು ಹೊಯ್ಸಳ ಯುಗಾಂತ್ಯದವರೆಗೂ ತನ್ನ ಪ್ರಭಾವವನ್ನು ಉಳಿಸಿಕೊಂಡಿತು.

11. ಶ್ರವಣಬೆಳಗೊಳದ ಜಿನಮೂರ್ತಿಯ ಸ್ಥಾಪನೆಗೆ ಪೂರ್ವದಲ್ಲಿಯೇ ಅರೆತಿಪ್ಪೂರಿನಲ್ಲಿ ಜಿನಮೂರ್ತಿಯನ್ನು ಸ್ಥಾಪಿಸಲಾಗಿತ್ತೆಂದು ಕೆಲ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಪ್ರಾಯಶಃ ಗಂಗರು ಪ್ರಾಯೋಗಿಕ ನೆಲೆಯಾಗಿ ಅರೆತಿಪ್ಪೂರಿನ ಜೈನ ನೆಲೆಯನ್ನು ಅಭಿವೃದ್ಧಿಪಡಿಸಿ ಆನಂತರ ಅತ್ಯಂತ ಸಮೃದ್ಧ ಕ್ಷೇತ್ರವಾದ ಶ್ರವಣಬೆಳಗೊಳದಲ್ಲಿ ಶ್ರೇಷ್ಠ ಮಟ್ಟದ ಜೈನ ನೆಲೆಯನ್ನು ಪ್ರಾರಂಭಿಸಿದರೆಂದು ಮತ್ತು ಅದನ್ನು ಅಭಿವೃದ್ಧಿ ಪಡಿಸಿದರೆಂದು ಹೇಳಬೇಕಾಗುತ್ತದೆ. ಈ ಎರಡೂ ಕ್ಷೇತ್ರಗಳಲ್ಲಿ ಒಂದೇ ತೆರನಾದ ಸ್ಮಾರಕಗಳ ನಿರ್ಮಾಣ ಕಂಡುಬರುತ್ತದೆ. ಎತ್ತರದ ಏರಲು ಕಷ್ಟಕರವಾದ ಬೆಟ್ಟದ ಮೇಲೆ ಗೊಮ್ಮಟ ಮೂರ್ತಿಯನ್ನು ಮತ್ತು ಕುಳ್ಳಗಿನ ಸುಲಭವಾಗಿ ಏರಲು ಸಾಧ್ಯವಾದ ಗುಡ್ಡದ ಮೇಲೆ ಬಸದಿಗಳನ್ನು ಮತ್ತು ವಿಹಾರಗಳನ್ನು ನಿರ್ಮಿಸಿ ಧಾರ್ಮಿಕ ಕೈಂಕರ್ಯಗಳಿಗೆ ಮುನಿಗಳು ನೆಲೆನಿಲ್ಲಲು ಸಣ್ಣ ಗುಡ್ಡವನ್ನು ಬಳಸಿಕೊಂಡು ವೈಭವದ ಯಾತ್ರೆಗಳಿಗೆ ದೊಡ್ಡ ಗುಡ್ಡವನ್ನು ಬಳಸಿಕೊಂಡಿರುವ ಕ್ರಮ ಇಲ್ಲಿಯೇ ಆರಂಭವಾಗಿ ನಂತರ ಈ ಮಾದರಿ ಯಶಸ್ವಿಯಾಗಿ ಶ್ರವಣಬೆಳಗೊಳದಲ್ಲಿ ದೊಡ್ಡ ಪ್ರಮಾಣದಲ್ಲಿ ನೆರವೇರಿತು.

12. ಹೊಯ್ಸಳೋತ್ತರ ಕಾಲಘಟ್ಟದಲ್ಲಿ ಜಿಲ್ಲೆಯು ವಿಜಯನಗರದ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟ ಹಿನ್ನೆಲೆಯಲ್ಲಿ ಈ ಪ್ರದೇಶವು ಒಂದು ರೀತಿಯ ಅವಜ್ಞೆಗೊಳಗಾದ ಪ್ರದೇಶವೆಂದೇ ಹೇಳಬೇಕು. ಪ್ರಾರಂಭದ ವಿಜಯನಗರ ಕಾಲಘಟ್ಟದಲ್ಲಿ ಉಮ್ಮತ್ತೂರು ಅರಸರು ಈ ಪ್ರದೇಶದ ಮೇಲೆ ಪ್ರಭುತ್ವ ಸಾಧಿಸಿದ್ದರು. ಸಂಗಮ ವಂಶದ ತರುವಾಯ ಸಾಳ್ವ ಮತ್ತು ತುಳುವ ವಂಶದ ಕಾಲಘಟ್ಟದಲ್ಲಿ ಈ ಪ್ರದೇಶದಲ್ಲಿ ರಾಜಕೀಯ ಬಂಡಾಯಗಳು ಬೆಳೆದುದರಿಂದ ಶ್ರೀರಂಗಪಟ್ಟಣದ ಮೇಲಿನ ವಿಜಯನಗರದ ಧಾಳಿ ಅನಿವಾರ್ಯವಾಯಿತು. ಕೃಷ್ಣದೇವರಾಯನ ಕಾಲದಲ್ಲಂತೂ ಉಮ್ಮತ್ತೂರಿನ ಅರಸರನ್ನು ಸಂಪೂರ್ಣವಾಗಿ ಕಿತ್ತುಹಾಕಲಾಯಿತು. ಈ ಧಾಳಿಯ ನಂತರ ಜಿಲ್ಲೆಯ ಬಹುಪ್ರದೇಶ ಹಲವು ನಾಯಕರುಗಳ ಆಡಳಿತಕ್ಕೆ ಒಳಪಟ್ಟು ಕೇವಲ ಅಂದಿನ ದೈನಂದಿನ ಕಾರ್ಯಗಳನ್ನು ನೆರವೇರಿಸುವಷ್ಟು ಆರ್ಥಿಕ ಸಮೃದ್ಧಿಯನ್ನು ಹೊಂದಿದ್ದ ಈ ನಾಯಕರುಗಳು ಯಾವ ಧಾರ್ಮಿಕ ಕ್ಷೇತ್ರಗಳಿಗೂ ವಿಶೇಷವಾದ ದೊಡ್ಡ ಪ್ರಮಾಣದ ದಾನಗಳನ್ನು ಮತ್ತು ಪುರೋಭಿವೃದ್ಧಿಯನ್ನು

ಉಂಟುಮಾಡಲಾಗಲಿಲ್ಲ. ಇದು ಈ ಪ್ರದೇಶದಲ್ಲಿನ ಜೈನಧರ್ಮದ ಹಿಂಜರಿಕೆಗೆ ಕಾರಣವಾಯಿತು ಎಂಬುದನ್ನು ಆಧಾರಸಹಿತವಾಗಿ ನಿರೂಪಿಸಲಾಗಿದೆ.

13. ವಿಜಯನಗರೋತ್ತರ ಕಾಲಘಟ್ಟದಲ್ಲಿ ಈ ಪ್ರದೇಶ ಮತ್ತೆ ಬಿಜಾಪುರದ ಸುಲ್ತಾನರು, ಮೈಸೂರು ಅರಸರು, ನಾಗಮಂಗಲದ ಹೆಬ್ಬಾರರು, ಜಗದೇವರಾಯ ಇವರುಗಳ ನಡುವಿನ ವಿಸ್ತರಣಾ ಚಟುವಟಿಕೆಯ ಭಾಗವಾಯಿತು. ಮೈಸೂರಿನ ದೊಡ್ಡದೇವರಾಜ ಒಡೆಯರ ಕಾಲಘಟ್ಟದಲ್ಲಿ ಸಾಕಷ್ಟು ಶಾಂತಿ ಮತ್ತು ಸಮೃದ್ಧಿಗಳು ನೆಲೆಸಿದವು. ಈ ಕಾಲದಲ್ಲಿಯೇ ನಾಗಮಂಗಲ ತಾಲ್ಲೂಕಿನ ವಿಮಲನಾಥ ಬಸದಿ ಪುನರ್‌ನಿರ್ಮಾಣ ಗೊಂಡಿತು. ಹೀಗಾಗಿ ಈ ಮೇಲೆ ಹೇಳಿದ ಎರಡೂ ಕಾಲಘಟ್ಟದಲ್ಲಿ ಜೈನಧರ್ಮ ಹೆಚ್ಚು ಪ್ರಖ್ಯಾತಿಯನ್ನು ಪಡೆಯದಿದ್ದರೂ ಚಿಕ್ಕದೇವರಾಜ ಒಡೆಯರ ಅಂತ್ಯದವರೆಗೂ ತನ್ನ ಅಸ್ತಿತ್ವವನ್ನು ಈ ಪ್ರದೇಶದಲ್ಲಿ ಉಳಿಸಿಕೊಂಡಿತು. ಜಿಲ್ಲೆಯಲ್ಲಿನ ಜೈನಧರ್ಮದ ಇತಿಹಾಸವನ್ನು ದಾಖಲಿಸುತ್ತ ಜಿಲ್ಲೆಯಲ್ಲಿ ಕಂಡುಬಂದ ವಿಶೇಷತೆಗಳನ್ನು ದಾಖಲಿಸುವುದರೊಂದಿಗೆ ಜಿಲ್ಲೆಯು ಇತಿಹಾಸದ ಪ್ರಾರಂಭದ ಕಾಲದಿಂದ ವಿಜಯನಗರ ಕಾಲದ ಅಂತ್ಯದವರೆಗೆ ಜೈನಧರ್ಮ ತನ್ನ ಅಸ್ತಿತ್ವವನ್ನು ಜಿಲ್ಲೆಯಲ್ಲಿ ಹೊಂದಿದ್ದು ಆನಂತರದ ದಿನಗಳಲ್ಲಿ ಅದು ಮತ್ತಷ್ಟು ಮಂಕಾಗಿರುವುದನ್ನು ಗುರುತಿಸಲಾಗಿದೆ.

ಗ್ರಂಥಸೂಚಿ

I. ಪ್ರಾಥಮಿಕ ಆಕರಗಳು

Inscriptions and Archaeology Reports

1. *Epigraphia Carnatica*, (1974), Editor-Gopal B.R, Mysore University, Vol-5.
2. *Epigraphia Carnatica,* Editor-Narashimachar R, Old Edition, Vol-2.
3. Ramesh K. V, (1984), *Inscriptions of the Western Gangas of Talkad*, Delhi, Vol 1-2.
4. Rice B.L, (1909), *Mysore and Coorg from the Inscriptions,* London,
5. *Mysore Archaeological Reports*, 1911, 1912, 1916, 1918, 1920, 1932, 1934, 1937.

Gazetteers

6. Hayavadana Rao C. (1927-1930), *Mysore Gazetteer,* Bangalore, Vol.1-5.
7. Rice B.L, (1897), *Mysore Gazetteer,* London, Vol-2
8. Suryanath U kamath, *Karnataka Gazetteer*, Bangalore, Vol.1-2
9. Suryanath U kamath, (1988), *Mysore District Gazetteer*, Bangalore.
10. ಪಾರ್ಥಸಾರಥಿ ಟಿ, ಎ, (2003), ಕರ್ನಾಟಕ ರಾಜ್ಯ ಗೆಜೆಟಿಯರ್, ಮಂಡ್ಯ ಜಿಲ್ಲೆ, ಬೆಂಗಳೂರು.

II. ಆನುಷಂಗಿಕ ಆಕರಗಳು – ಕನ್ನಡ ಪುಸ್ತಕಗಳು

1. ಅಕ್ಷಯ್‌ಕುಮಾರ್ (1987), ಶ್ರಾವಕ ನಿತ್ಯಪೂಜಾ ಪಾಠ ಸಂಗ್ರಹ, ಗುಬ್ಬಿ.
2. ಅನಂತರಾಜ ಇಂದ್ರ (ಸಂ.), (2000), ಜೈನರ ಪರ್ವ ಮತ್ತು ಹಬ್ಬಗಳು, ಪ್ರಕಾಶಕರು, ಪಾಣೆ ಮಂಗಳೂರು.

3. ಅಪ್ಪಣ್ಣ ಹಂಜೆ ಎನ್. (2007), **ಶಿಗ್ಗಾಂ ಪ್ರದೇಶದ ಪುರಾತತ್ವ,** ಪಿಎಚ್.ಡಿ. ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪ್ರೌಢಪ್ರಬಂಧ (ಅಪ್ರಕಟಿತ), ಧಾರವಾಡ

4. ಅರುಣಕುಮಾರಿ, (2017), **ಮೈಸೂರು ಜಿಲ್ಲೆಯಲ್ಲಿ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ,** ಮೈಸೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರೌಢಪ್ರಬಂಧ.

5. ಏಲಕ ಚಂದ್ರಸಾಗರಸ್ವಾಮಿ, (ಸಂ)., (1914), **ಶ್ರೀ ಚತುರ್ವಿಂಶತಿ ತೀರ್ಥಂಕರರ ಅನಾಹತ ಯಂತ್ರವಿಧಿ ವರ್ಣನಂ,** ಮೈಸೂರು.

6. **ಕರ್ನಾಟಕ ವಿಷಯ ವಿಶ್ವಕೋಶ,** (1979), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

7. ಕುಲಕರ್ಣಿ ಬಿ.ಎಸ್., (ಸಂ)., (1984), 20 **ನೋಂಪಿಯ ಕಥೆಗಳು** ಧಾರವಾಡ.

8. ಕೃಷ್ಣ ಎಂ.ಹೆಚ್, (1935), **ಎ ಗೈಡ್ ಟು ಶ್ರೀರಂಗಪಟ್ಟಣ,** ಮೈಸೂರು.

9. ಗಣಪತಿರಾವ್ ಐಗಳ್, (1928), **ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ,** ಮಂಗಳೂರು.

10. ಗೋಪಾಲ್ ಬಿ.ಆರ್. (ಸಂ), (1977–79), **ಎಪಿಗ್ರಾಫಿಯಾ ಕರ್ನಾಟಿಕ** Vol., 6–7, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

11. ಗೋಪಾಲ್, ಆರ್, ಮತ್ತು ಸ್ವಾಮಿ ಲ. ನ. (2010), **ನಾಡ ಹಬ್ಬ ಮೈಸೂರು ದಸರಾ,** ಮೈಸೂರು.

12. ಗುಂಡಪ್ಪ ಎಲ್., (ಸಂ), (1976), **ಪಂಪನ ಆದಿಪುರಾಣ ಸಂಗ್ರಹ,** ಮೈಸೂರು.

13. ಚನ್ನಪ್ಪಗೌಡ ಮತ್ತು ಎಸ್.ಡಿ. ಶೆಟ್ಟಿ (ಸಂ)., (1999), **ರತ್ನಮಾನಸ,** ಉಜಿರೆ.

14. ಚಂದ್ರಸಾಗರ ಶಾಸ್ತ್ರಿ (ಸಂ)., (1953), **ಆಶಾಧರ ಸೂರ್ಯ, ಸಾಗರ ಧರ್ಮಾಮೃತಂ,** ಸರಸ್ವತಿ ಪ್ರಿಂಟಿಂಗ್‌ಪ್ರೆಸ್, ಮಂಗಳೂರು.

15. ಚಂದ್ರರಾಜೇಂದ್ರ ಶಾಸ್ತ್ರಿ ಎಸ್., (ಸಂ)., (1953), **ಶ್ರೀಮದ್ವಾಶಾಸೂರಿ ವಿರಚಿತ ಸಗಾರ ಧರ್ಮಾಮೃತಂ,** ಮೂಡಬಿದ್ರೆ.

16. ಚಿದಾನಂದಮೂರ್ತಿ ಎಂ., (1966), **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಮೈಸೂರು.

17. ಚಿನ್ನಸ್ವಾಮಿ ಸೋಸಲೆ (ಸಂ.), (2015), **ಜೈನಧರ್ಮದಲ್ಲಿ, ಯಕ್ಷ ಯಕ್ಷಿಯರು ಪ್ರೇರಣೆ ಮತ್ತು ಪರಿಕಲ್ಪನೆ,** ಕನ್ನಡ ವಿಶ್ವವಿದ್ಯಾಲಯ, ಹಂಪೆ.

18. ತಿಮ್ಮಕವಿ, (1980), **ಪಶ್ಚಿಮರಂಗಮಹಾತ್ಮೆ ಮತ್ತು ಚಿಕ್ಕದೇವರಾಜ ವಂಶಾವಳಿ.** ಎಂ.ಪಿ. ಮಂಜಪ್ಪಶೆಟ್ಟಿ (ಸಂ)ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

19. ತುಕೋಳ್ ಟಿ. ಕೆ. (1985), **ಜೈನಾಚಾರ,** ಜೈನಪ್ರಾಕೃತ ವಿಭಾಗ, ಮೈಸೂರು. ವಿಶ್ವವಿದ್ಯಾನಿಲಯ, ಮೈಸೂರು.

20. ತುಕೋಳ್ ಟಿ. ಕೆ. (2012), **ಜೈನಧರ್ಮಕ್ಕೊಂದು ಕೈಪಿಡಿ,** ಪದ್ಮಪ್ರಸಾದ್, ಎಸ್.ಪಿ. (ಅನು) ಜಸ್ಟೀಸ್ ಟಿ. ಕೆ. ತುಕೋಳ್, ಎಜ್ಯೂಕೇಶನಲ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್, ಬೆಂಗಳೂರು.

21. ದೇವರಕೊಂಡಾರೆಡ್ಡಿ, (1994), **ತಲಕಾಡು ಗಂಗರ ದೇವಾಲಯಗಳು ಒಂದು ಅಧ್ಯಯನ,** ಬೆಂಗಳೂರು,

22. ದೇವರಾಜು ಡಿ. ವಿ. ಮತ್ತು ಎ. ವಿ. ನರಸಿಂಹಮೂರ್ತಿ, (1996), **ಎಕ್ಸ್‌ಕವೇಶನ್ಸ್ ಅಟ್ ತಲಕಾಡು,** ಮೈಸೂರು.

23. ದೇಸಾಯಿ ಪಿ, ಬಿ, (1957), **ಜೈನಿಸಂ ಇನ್ ಸೌತ್ ಇಂಡಿಯಾ ಅಂಡ್ ಸಂ ಜೈನ ಎಪಿಗ್ರಾಫ್ಸ್,** ಸೊಲ್ಲಾಪುರ.

24. ದೊರೆಸ್ವಾಮಿ ಮ. ಕೆ. (2000), **ಶ್ರೀ ಕಂಬದಹಳ್ಳಿ ಕ್ಷೇತ್ರ ದರ್ಶನ,** ರತ್ನತ್ರಯ ಪ್ರಕಾಶನ, ಮೈಸೂರು.

25. ನಾಗರಾಜಯ್ಯ ಪಂಡಿತ, (2000), (ಪುನರ್‌ಮುದ್ರಣ) **ಹೋಮವಿಧಿ ಮತ್ತು ಕ್ರಿಯಾತರ್ಪಣ,** ರತ್ನತ್ರಯ ಪ್ರಕಾಶನ, ಕುವೆಂಪುನಗರ, ಮೈಸೂರು.

26. ನಾಗರಾಜಯ್ಯ, ಪಂಡಿತ, (1998), **ಹೋಮವಿಧಿ ಮತ್ತು ಕ್ರಿಯಾತರ್ಪಣ,** ಹೊಂಬುಜ ಜೈನಮಠ, ಹೊಂಬುಜ.

27. ನಾಗರಾಜಯ್ಯ ಹಂ.ಪ., (ಸಂ)., (1975), **ದಿವ್ಯಧ್ವನಿ, ಭಗವಾನ್ ಮಹಾವೀರರ, 2500ನೆಯ ನಿರ್ವಾಣ ಮಹೋತ್ಸವದ ಸ್ಮರಣ ಸಂಪುಟ,** ಕರ್ನಾಟಕ ಸರ್ಕಾರ, ಬೆಂಗಳೂರು (1975).

28. ನಾಗರಾಜಯ್ಯ ಹಂ.ಪ., (1976), **ಯಕ್ಷ-ಯಕ್ಷಿಯರು,** ಬೆಂಗಳೂರು.

29. ನಾಗರಾಜಯ್ಯ ಹಂ.ಪ., (1976), **ಕೆಲವು ನೋಂಪಿಯ ಕಥೆಗಳು,** ಗುಡಿಬಂಡೆ.

30. ಪುಟ್ಟಸ್ವಾಮಿ ಡಿ. (1965), **ಜೈನತತ್ವಸಾರ ಸಂಗ್ರಹ,** ಮಂಗಳೂರು.

31. ಪ್ರಭಾಕರ್ ಎಸ್. (ಸಂ)., (1982), **ತ್ಯಾಗಸಂದೇಶ,** ಧರ್ಮಸ್ಥಳ.

32. ಪದ್ಮನಾಭ ಶರ್ಮ ಡಿ. ಭುವನಹಳ್ಳಿ, (1969), **ಜೈನಸಂಸ್ಕೃತಿಯ ಪರ್ವಗಳು,** ಪದ್ಮನಿಲಯ, ಮೈಸೂರು.

33. ಪರಮಶಿವಮೂರ್ತಿ ಡಿ.ವಿ. (ಸಂ),(2010),–**ಕೃಷ್ಣದೇವರಾಯನಶಾಸನಗಳು,** ಕನ್ನಡವಿಶ್ವವಿದ್ಯಾನಿಲಯ, ವಿದ್ಯಾರಣ್ಯ, ಹಂಪಿ

34. ಪಂಡಿತ ನಾಗರಾಜಯ್ಯ (ಸಂ)., (1988), **ಸೂತಕವಿಧಿ,** ಜಯಮತಿ ಅವ್ವೆ, ಕೀರಿಪಟ್ಟೆ, ವೈನಾಡು.

35. ಪಂಡಿತ ನಾಗರಾಜಯ್ಯ (ಸಂ), (1981), **ಶಾಂತಿಹೋಮ,** ನಾ. ಜಿನೇಂದ್ರ ಪ್ರಕಾಶ, ಮೈಸೂರು.

36. ಭುಜಬಲಿ ಶಾಸ್ತ್ರಿ ಕೆ. (1937), **ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ,**ಆದರ್ಶ ಜೈನ ಗ್ರಂಥಮಾಲೆ, ಮೂಡಬಿದ್ರೆ.

37. ಭುವನಹಳ್ಳಿ ಶ್ರೀ ಡಿ. ಶ್ರೀಪತಿ ಜೋಯಿಸ್ (1997), **ಸೂತಕವಿಧಿ,** ಶ್ರೀ ಸಿದ್ಧಾಂತಕೀರ್ತಿ ಗ್ರಂಥಮಾಲೆ, ಹೊಂಬುಜ.

38. ಭುವನಹಳ್ಳಿ ಡಿ. ಶ್ರೀಪತಿ ಜೋಯಿಸ್ (ಸಂ), (1997), **ಷೋಡಶ ಕ್ರಿಯಾದರ್ಪಣಂ,** ಶ್ರೀ ಹೊಂಬುಜ ಜೈನಮಠ, ಹೊಂಬುಜ.

39. ಮಿರ್ಜಿ ಅಣ್ಣಾರಾಯ (1999), **ಜೈನಧರ್ಮ,** ಶಾಂತಿ ಸೇವಾ ಸದನ, ಸೇಡಬಾಳ.

40. ಮಿರ್ಜಿ ಅಣ್ಣಾರಾಯರು (ಸಂ)., (1981), **ಸಮಂತಭದ್ರರ ರತ್ನಕರಂಡಕ ಶ್ರಾವಕಾಚಾರ,** ಸೊಲ್ಲಾಪುರ.

41. ಮಿರ್ಜಿ ಅಣ್ಣಾರಾಯರು, (1969), **ಜೈನಧರ್ಮ,** ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು.

42. ರತ್ನಮ್ಮ ಎಸ್. (2003), **ಕಂತಿಯರು ಮತ್ತು ಮುಡುಪಿದವರು,** ರತ್ನತ್ರಯ ಪ್ರಕಾಶನ, ಮೈಸೂರು.

43. ರಂಗಸ್ವಾಮಿ ಆರ್, (2011), **ಕೃಷ್ಣರಾಜಪೇಟೆ ತಾಲ್ಲೂಕಿನ ದೇವಾಲಯಗಳು– ಒಂದು ಸಾಂಸ್ಕೃತಿಕ ಅಧ್ಯಯನ,** ಸಂಜನ ಪ್ರಕಾಶನ, ಮೈಸೂರು.

44. ಲಕ್ಷ್ಮಣ ತೆಲಗಾವಿ, (2004), **ಮೌರ್ಯ ಶಾತವಾಹನ ಯುಗ,** ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

45. ಲೋಕನಾಥಶಾಸ್ತ್ರಿ ವಿ. (1950), **ಸೂತಕ ಗೋತ್ರ ವಿಚಾರ,** ಮೂಡಬಿದರೆ.

46. ಶಾರದ ಕೆ., (2006), **ಕರ್ನಾಟಕದಲ್ಲಿ ಜೈನಧರ್ಮ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

47. ಶಿವತಾರಕ್ ಕೆ. ಬಿ. **ಕರ್ನಾಟಕದ ಪುರಾತತ್ವ ನೆಲಗಳು**, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

48. ಶಿಶುಪಾಲ ಪಾರ್ಶ್ವನಾಥ ಶಾಸ್ತ್ರಿ, (1934), **ಉಪನಯನ ವಿಧಿ**, ಪ್ರಕಾಶಕರು, ಕಮಲಮ್ಮ, ಧರ್ಮಸ್ಥಳ.

49. ಶಿರೂರ ಬಿ. ವಿ., (1976), **ಶ್ರವಣಬೆಳಗೊಳ; ರಾಜಕೀಯ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮಹತ್ವ**, ಧಾರವಾಡ.

50. ಶುಭಚಂದ್ರ (1976), **ಜೈನ ಸಾಹಿತ್ಯ ಮತ್ತು ಸಂಸ್ಕೃತಿ, ಕೆಲವು ಅಧ್ಯಯನಗಳು**, ಗೀತಾ ಬುಕ್‌ಹೌಸ್, ಮೈಸೂರು.

51. ಶೆಟ್ಟಿ ಎಸ್.ಡಿ., (2002), **ತುಳುನಾಡಿನ ಜೈನಧರ್ಮ**, ಉಡುಪಿ.

52. ಶಾಂತಿರಾಜಶಾಸ್ತ್ರಿ, (ಸಂ)., (1988), **ರತ್ನಾಕರ ವಿರಚಿತ ಶತಕತ್ರಯ**, ಉಜಿರೆ.

53. ಷೇಕ್ ಆಲಿ ಬಿ., (1976), **ಹಿಸ್ಟರಿ ಆಫ್ ದಿ ವೆಸ್ಟ್ರನ್ ಗಂಗಾಸ್**, ಮೈಸೂರು.

54. ಸರಸ್ವತಿ ಎನ್ ಮತ್ತು ಕೆಂಪರಾಜ ಎಸ್.ಎಲ್. (2011), **ಹೊಯ್ಸಳರ ಕಾಲದ ದಂಡನಾಯಕರುಗಳು ಮತ್ತು ಅವರ ಕೊಡುಗೆಗಳು**, ಉಷಾ ಪ್ರಕಾಶನ, ಮೈಸೂರು.

55. ಸರಸ್ವತಿ ಎನ್. ಮತ್ತು ಶಿಲ್ಪಶ್ರೀ ಎಸ್, (2011), **ಹೊಯ್ಸಳರ ಕಾಲದಲ್ಲಿ ದಾನಿಗಳ ಪಾತ್ರ**, ಉಷಾ ಪ್ರಕಾಶನ, ಮೈಸೂರು.

56. ಸ್ವಾಮಿ ಲ. ನ. (1996), **ಹಿಸ್ಟರಿ ಆಫ್ ಶ್ರೀರಂಗಪಟ್ಟಣ**, ದೆಹಲಿ.

57. ಸೀತಾರಾಮ ಜಾಗೀರ್‌ದಾರ್ (1999), **ಕಂಬದಹಳ್ಳಿ ಒಂದು ಜೈನಕೇಂದ್ರ**, ಅತ್ತಿಮಬ್ಬೆ ಪ್ರಕಾಶನ, ಮೈಸೂರು.

58. ಸುಜಾತ ಎಸ್. ವಿ. (ಸಂ)., 2013, **ಜೈನ ಆಚಾರ್ಯರು**, ಸುಮೇರು ಜೈನ ಫೌಂಡೇಶನ್, ಬೆಂಗಳೂರು.

59. ಸುಬ್ಬಯ್ಯಶಾಸ್ತ್ರಿ (ಸಂ)., **ಷಟ್ಖಂಡಾಗಮ**, ಕಾರ್ಕಳ.

60. ಹೀರಾಲಾಲ್ ಜೈನ್, (1971), **ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ, ಸೊಲ್ಲಾಪುರ**

III. ಕನ್ನಡ ಲೇಖನಗಳು

1. ಅನಂತರಾಮು ಕೆ. (1994), **ಮಂಡ್ಯ ಜಿಲ್ಲೆಯ ಶಾಸನ ಸಂಪದ,** ದೇ. ಜವರೇಗೌಡ, (ಸಂ.) **ಸುವರ್ಣ ಮಂಡ್ಯ,** ಮಂಡ್ಯ ಜಿಲ್ಲೆಯ ಸುವರ್ಣ ಮಹೋತ್ಸವದ ಅಂಗವಾಗಿ ಹೊರತಂದ ಸ್ಮರಣ ಸಂಚಿಕೆ, ಮಂಡ್ಯ
2. ಅಪ್ಪಣ್ಣ ಹಂಜೆ ಎನ್. (2006), **ಜೈನಶಿಲ್ಪಕಲೆ ಪರಿಕಲ್ಪನೆಗಳು,** ಪ್ರಾಚ್ಯ ಮೌಲ್ಯ, ಶ್ರೀ ಜಿ.ಎಂ. ಮುಲ್ಲಾವರ ಅಭಿನಂದನಾ ಗ್ರಂಥ
3. ಕುಸುಮ, (2015), **ಶ್ರವಣಬೆಳಗೊಳ–ಕಂಬದಹಳ್ಳಿಯ ಯಕ್ಷ ಯಕ್ಷಿಯರು,** ಚನ್ನಸ್ವಾಮಿ ಸೋಸಲೆ (ಸಂ.) ಜೈನಧರ್ಮದ, ಯಕ್ಷ ಯಕ್ಷಿಯರು ಪ್ರೇರಣೆ ಮತ್ತು ಪರಿಕಲ್ಪನೆ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪೆ.
4. ಕೃಷ್ಣಮೂರ್ತಿ ಎಂ. ಎಸ್., ಮತ್ತು ಇತರರು, (2010), ತಲಕಾಡಿನಲ್ಲಿ ಕೈಗೊಂಡ ಉತ್ಖನನದ ಸಂಕ್ಷಿಪ್ತ ವರದಿ, ಆರ್. ಗೋಪಾಲ್ (ಸಂ), **ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಮೈಸೂರು,
5. ಕೃಷ್ಣಮೂರ್ತಿ ಎಂ. ಎಸ್., (2012), **ಕರ್ನಾಟಕದಲ್ಲಿ ಪುರಾತತ್ವ ಉತ್ಖನನಗಳು,** ಹಂಗು ರಾಜೇಶ್ (ಸಂ), **ಇತಿಹಾಸ ದರ್ಪಣ,** ತ್ರೈಮಾಸಿಕ ಪತ್ರಿಕೆ, ಸಂಪುಟ 13, ಬೆಂಗಳೂರು.
6. ಜಯಚಂದ್ರ ಎಂ.ಎ., (2018), ಪ್ರಧಾನ ಸಂಪಾದಕ, **ತ್ಯಾಗಶ್ರೀ,** ಸ್ಮರಣ ಸಂಚಿಕೆ, ಶ್ರೀಕ್ಷೇತ್ರ ಶ್ರವಣಬೆಳಗೊಳ,
7. ತಮಿಳುಸೆಲ್ವಿ, (2011), **ಕವಿ ಕಂದರ್ಪ ಮತ್ತು ಬಾಳಚಂದ್ರ ಮುನಿ, ಒಂದು ವಿವೇಚನೆ,** ಸಿ.ಎಸ್. ವಾಸುದೇವನ್ (ಸಂ), **ಮುಕ್ಕೊಡೆ,** ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ,
8. ದೇವರಾಜಸ್ವಾಮಿ, ಜಿ.ಕೆ., (2005) ಮೈಸೂರು ರಾಜಒಡೆಯರ ಕಾಲದ ಮೊದಲನೆ ಶಾಸನ ಇತಿಹಾಸ ದರ್ಶನ ಸಂಪುಟ 20, ಕರ್ನಾಟಕ ಇತಿಹಾಸ ಅಕಾಡೆಮಿ, (ರಿ)., ಬೆಂಗಳೂರು
9. ನಾಗರಾಜಯ್ಯ ಹಂ.ಪ., (ಸಂ)., (1975), **ದಿವ್ಯಧ್ವನಿ, ಭಗವಾನ್ ಮಹಾವೀರರ, 2500ನೆಯ ನಿರ್ವಾಣ ಮಹೋತ್ಸವದ ಸ್ಮರಣ ಸಂಪುಟ,** ಕರ್ನಾಟಕ ಸರ್ಕಾರ, ಬೆಂಗಳೂರು
10. ನಾಗರಾಜ್‌ರಾವ್ ಎಚ್. ಎಂ. (2008), **ಮಂಡ್ಯ ಜಿಲ್ಲೆಯ ಶಾಸನಗಳ ಸಮೀಕ್ಷೆ** ಆರ್. ಗೋಪಾಲ್ (ಸಂ), **ಮಂಡ್ಯಜಿಲ್ಲೆ ಇತಿಹಾಸ ಮತ್ತು ಪುರಾತತ್ವ** ಮೈಸೂರು,

11. ಪ್ರದೀಪ್ ಕುಮಾರ್ ಹೆಬ್ರಿ, (2006), ದೇ. ಜವರೇಗೌಡ (ಸಂ.) **"ಮಂಡ್ಯಜಿಲ್ಲೆಯ ಭೌಗೋಳಿಕ ಹಿನ್ನಲೆ" ಸುವರ್ಣ ಮಂಡ್ಯ,** ಮಂಡ್ಯ ಜಿಲ್ಲಾ ಸಾಹಿತ್ಯ ಪರಿಷತ್ತು, ಮಂಡ್ಯ,

12. ಪದ್ಮಿನಿ ನಾಗರಾಜು, (2015), **ಮೈಸೂರು ಪ್ರಾಂತದಲ್ಲಿ ಯಕ್ಷ ಯಕ್ಷಿಯರು, ಸ್ಥಳ ಹಾಗೂ ಪರಿಕಲ್ಪನೆ,** ಚಿನ್ನಸ್ವಾಮಿ ಸೋಸಲೆ (ಸಂ.) **ಜೈನಧರ್ಮದಲ್ಲಿ, ಯಕ್ಷ ಯಕ್ಷಿಯರು ಪ್ರೇರಣೆ ಮತ್ತು ಪರಿಕಲ್ಪನೆ,** ಕನ್ನಡ ವಿಶ್ವವಿದ್ಯಾಲಯ, ಹಂಪೆ,

13. ಎಂ.ಜಿ. ಮಂಜುನಾಥ್, (2009), **ಮಂಡ್ಯ ಜಿಲ್ಲೆಯಲ್ಲಿ ಜೈನಧರ್ಮ,** ಡಾ. ಆರ್. ಗೋಪಾಲ್ (ಸಂ.), **ಮಂಡ್ಯ ಜಿಲ್ಲೆಯ ಪುರಾತತ್ವ ಮತ್ತು ಇತಿಹಾಸ,** ಮೈಸೂರು,

14. ಮಹದೇವ ಸಿ. (1998), **"ಇತಿಹಾಸ ದರ್ಶನ"** 13, ಸೂರ್ಯನಾಥ್ ಕಾಮತ್ (ಸಂ), ಬೆಂಗಳೂರು

15. ರಾಜೇಗೌಡ ಹ. ಕ.(1994), **ಮಂಡ್ಯ ಜಿಲ್ಲೆಯ ಶಾಸನೋಕ್ತ ಮಹಿಳೆಯರು,** ದೇ.ಜವರೇಗೌಡ (ಸಂ), **ಸುವರ್ಣಮಂಡ್ಯ,** ಮಂಡ್ಯ,

16. ರೂಪೇಶ್ ಕುಮಾರ್ ಎಚ್. ಎಲ್. (2017), **ಮಂಡ್ಯ ಜಿಲ್ಲೆಯ ಶಾಸನೋಕ್ತ ಜೈನ ಆಚಾರ್ಯರು,** ದೇವರಕೊಂಡರೆಡ್ಡಿ ಮತ್ತು ಜಿ. ದೇವರಾಜಸ್ವಾಮಿ, (ಸಂ) **ಇತಿಹಾಸ ದರ್ಶನ,** (ಸಂಪುಟ–30), ಬೆಂಗಳೂರು,

17. ವಸಂತಲಕ್ಷ್ಮಿ ಕೆ., (2005), **ಮಾಘನಂದಿ ಭಟ್ಟಾರಕರ ನೆಲೆ, ಕಲ್ಲಂಗೆರೆ,** ಇತಿಹಾಸ ದರ್ಶನ, ಸಂಪುಟ 20, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

18. ಶೆಲ್ವ ಪಿಳ್ಳೈ ಐಯ್ಯಂಗಾರ್, (2009), **ಮತಪಂಥ,** ಡಾ. ಮಹದೇವ, ಸಿ, (ಸಂ.) **ತೊಣ್ಣೂರು,** ಕನ್ನಡ ವಿಶ್ವವಿದ್ಯಾಲಯ, ಹಂಪಿ,

19. ಸ್ವಾಮಿ ಲ. ನ. (2009), **ಕೆರೆಕಟ್ಟೆಗಳು, ತೊಣ್ಣೂರು** ಹೊತ್ತಿಗೆಯಲ್ಲಿ, ಡಾ. ಮಹದೇವ, ಸಿ.(ಸಂ) ಹಂಪಿ,

20. ಸ್ವಾಮಿ ಲ. ನ. (2007), **ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಕಂಡಂತೆ ಪ್ರಾಚೀನ ಶಿಕ್ಷಣ,** ಡಾ. ಆರ್. ಗೋಪಾಲ್ (ಸಂ), **ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು,

21. ಸ್ವಾಮಿ ಲ. ನ. (2010), ಶ್ರೀರಂಗಪಟ್ಟಣ ಪೋರ್ಟ್ ಥ್ರೂ ದಿ ಏಜಸ್, **ಆರಿಜನ್ ಡೆವಲಪ್‌ಮೆಂಟ್ ಆಫ್ ದಿ ಫೋರ್ಟ್ ಇನ್ ಟಿಪ್ಪು ಸುಲ್ತಾನ್**, ಡಾ. ಆರ್. ಗೋಪಾಲ್ (ಸಂ), **ದಿ ಟೈಗರ್ ಆಫ್ ಮೈಸೂರು**, ಮೈಸೂರು,

22. ಸುಂದರ ಅ., (2006), "ಮಂಡ್ಯ ಜಿಲ್ಲೆಯ ಪ್ರದೇಶದ ಪ್ರಾಗೈತಿಹಾಸದ ಪುರಾತತ್ವಗಳು ಒಂದು ಪಕ್ಷಿನೋಟ" ಡಾ. ದೆ. ಜವರೇಗೌಡ (ಸಂ.) **ಸುವರ್ಣ ಮಂಡ್ಯ**, ಮಂಡ್ಯ,

23. ಹಿಂದೂ ಸಂಸ್ಕಾರಗಳು, **ಯುಗಯಾತ್ರಿ ಭಾರತೀಯ ಸಂಸ್ಕೃತಿ**, ಸಂಪುಟ–2, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

IV. English Books and Papers

1. Constance E, Parsons (1931), – *Seringapatam*, Landan,
2. Desai P.B, 1970. *Jainism in south India*, Sollapura,
3. Devaraju D.V. & Narasimha Murthy A.V, (1996). *Excavation at Talakadu-1992-93,* Vol-1, Mysore,
4. Diwakar R.R (1966), *Karnataka through the Ages,* Bangalore,
5. Ghosh A. (1974), *Jaina Art and Art and Architecture*, Bharatiya Jnanapith, New Delhi, Vols., 2
6. Hayavadana Rao C. (1943). *History of Mysore*, Vols., 3, Mysore,
7. Joseph P. M. (1997), *Jainism in South India,* The international School of Dravidian Linguistics, Thiruvananthapuram
8. Krishna Murthy M.S, (1980). *The Nolambas, A political and cultural study,* Mysore University,
9. Krishna Murthy M.S, (2011), Parshwanatha Basadi at Talakadu Revealed Through Excavations in *Jainism Through the Ages*, R. Gopal, Ed, Mysore,.
10. Krishna Rao M.V, (1936), *The Western Gangas of Talakadu*, Bangalore,

11. Michael W. Meister and M. A. Dhaky, (1986), *Encyclopedia of Indian Temple Architecture, South India, Upper Dravidadesha*, American Institute of Indian Studies, Oxford University Press, Delhi,Vol.1, Part -2 Text.
12. Rangaraju N. S. (1988), *The Hoysala temples in Mandya And Tumkur*, Prasaranga, University of Mysore, Mysore.
13. Sheik Ali B, (1976), *The History of the Western Gangas*, Mysore,
14. Sharma S.R. (1940), *Jainism and Karnataka Culture*, Dharwar,
15. Sharma I. K. (1992), *The temples of the Gangas of Talakad,* Archaeological Survey of India, New Delhi,
16. Sheshadri M., (1956), Stone using culture of Pre and Proto Historic Mysore" in *Shesha Chandrika*, Mysore
17. Srikantasastri S. The Early Gangas of Talkad,www.srikanta_sastri.org

V.ವಕ್ತೃವಿವರ

1. ಸ್ವಸ್ತಿಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ, 32 ವರ್ಷ, ದಿಗಂಬರ ಜೈನಮಠ, ಶ್ರೀ ಕ್ಷೇತ್ರ ಅರೆತಿಪ್ಪೂರು.
2. ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ, 62 ವರ್ಷ, ದಿಗಂಬರ ಜೈನಮಠ, ಶ್ರೀಕ್ಷೇತ್ರ, ಕಂಬದಹಳ್ಳಿ.
3. ಶ್ರೀ ಶಾಂತಿರಾಜ ಶಾಸ್ತ್ರಿಗಳು, ಅರ್ಚಕರು ಮತ್ತು ಜೈನ ವಿದ್ವಾಂಸರು, 90 ವರ್ಷ, ಶ್ರವಣಬೆಳಗೊಳ
4. ಶ್ರೀ ಆದಿರಾಜಯ್ಯ, ಅರ್ಚಕರು, 88 ವರ್ಷ, ಶ್ರೀ 1008 ಪಾರ್ಶ್ವನಾಥ ಬಸದಿ, ಹೊಸಹೊಳಲು.
5. ಸನ್ಮತಿಕುಮಾರ್ ಪ್ರತಿಷ್ಠಾಚಾರ್ಯ, 45 ವರ್ಷ, ಶ್ರೀ 1008 ಆದಿನಾಥ ಬಸದಿ, ಶ್ರೀರಂಗಪಟ್ಟಣ
6. ಶ್ರೀ ಅಶೋಕಶಾಸ್ತ್ರಿ, ಅರ್ಚಕರು, 65 ವರ್ಷ, ಶ್ರೀ 1008 ಅನಂತನಾಥ ಜೈನ ಬಸದಿ, ಮಂಡ್ಯ.

7. ಶ್ರೀ ವಜ್ರಕುಮಾರ್, ಅರ್ಚಕರು, 68 ವರ್ಷ, ಶ್ರೀ 1008 ಪಾರ್ಶ್ವನಾಥ ಜೈನಮಂದಿರ, ಚಂದ್ರಗುಪ್ತ ರಸ್ತೆ, ಮೈಸೂರು
8. ಶ್ರೇಣಿಕ್ ಜೈನ್, ಅರ್ಚಕರು, 40 ವರ್ಷ, ಶ್ರೀ 1008 ಶಾಂತಿನಾಥ ಬಸದಿ, ಸಯ್ಯಾಜಿರಾವ್ ರಸ್ತೆ, ಮೈಸೂರು

ಅನುಬಂಧ

ಅನುಬಂಧ –1

ಮಂಡ್ಯ ಜಿಲ್ಲೆಯ ಜೈನ ಶಾಸನಗಳ ಯಾದಿ ಮತ್ತು ಅವುಗಳಲ್ಲಿ ಉಕ್ತರಾಗಿರುವ ವಿಷಯಸೂಚಿ ಕೋಷ್ಟಕ

ಕ್ರ.ಸಂ.	ಶಾಸನ	ಕಾಲ	ಉದ್ದೇಶ
1.	ದೇವರಹಳ್ಳಿ (ನಾಮಂ 149)	ಕ್ರಿ.ಶ. 776	ಶ್ರೀಪುರದಲ್ಲಿ ಕುಂದಾಚ್ಚಿಯು ಕಟ್ಟಿಸಿದ 'ಲೋಕತಿಲಕ' ಜಿನಾಲಯಕ್ಕೆ ಆಕೆಯ ಪತಿ ಪರಮಗೂಳ ನಿರ್ಗುಂದರಾಜನ ವಿಜ್ಞಪ್ತಿಯಿಂದ ಪೊನ್ನಳ್ಳಿ ಗ್ರಾಮವನ್ನು ಗಂಗಪ್ರಭು ಶ್ರೀಪುರುಷ ಜಿನಗೃಹಕ್ಕೆ ತೆರಿಗೆರಹಿತವಾಗಿ **ಬಿಟ್ಟ ದಾನಶಾಸನ– ಬಸದಿ ನಿರ್ಮಾಣ**
2.	ಕ್ಯಾತನಹಳ್ಳಿ (ಪಾಂಮ 16)	ಕ್ರಿ.ಶ. 900	ಕೆಲ್ಲವಂಶದ ಚಾಗಿ ಪೆರ್ಮಾನಡಿ **ಕಟ್ಟಿಸಿದ ಕೆಲ್ಲಬಸದಿಗೆ** ಎರೆಯಣ್ಣ ದತ್ತಿಕೊಟ್ಟ ವಿಚಾರ ತಿಳಿಸುವ **ದಾನ ಶಾಸನ**
3.	ರಾಂಪುರ (ಶ್ರೀ.ಪ 85)	ಕ್ರಿ.ಶ. 904	ವರಮತಿಸಾಗರ ಎಂಬ ಮುನಿಗಳ ಅಪ್ಪಣೆಯ ಮೇರೆಗೆ ಅಣ್ಣಯ್ಯ ದೇವಕುಮಾರ ಮತ್ತು ದೊರೆ ಎಂಬುವರು ನದಿಗೆ ಅಡ್ಡಲಾಗಿ ಕಟ್ಟೆಯನ್ನು (ನೀರಾವರಿ–ಕೃಷಿ) ಕಟ್ಟಿಸಿದರು ಎಂಬ ವಿವರ. **ನದಿಗೆ ಅಡ್ಡಲಾಗಿ ಕಟ್ಟೆಯನ್ನು ಕಟ್ಟಿಸಿದ ಉಲ್ಲೇಖ**
4.	ಕೂಲಿಗೆರೆ (ಮದ್ದೂರು 100)	ಕ್ರಿ.ಶ. 909	ಗಂಗರ ಸಾಮಂತನಾದ ಮಣಲೆಯರನು ಕನಕಗಿರಿ ತೀರ್ಥದ ಮೇಲೆ **ಬಸದಿಯನ್ನು ಮಾಡಿಸಿ,** ಬಸದಿಯೊಡೆಯರಾದ ಕನಕಸೇನ ಭಟ್ಟಾರಕರಿಗೆ ತನ್ನ ಸಾಮಂತ ತೆರಿಗೆಯ ಆದಾಯವನ್ನು ಬಿಟ್ಟುಕೊಟ್ಟ **ದಾನಶಾಸನ**
5.	ಬಿಂಡಿಗನವಿಲೆ (ನಾಮಂ 55)	ಕ್ರಿ.ಶ. 975	ನಿಶಿಧಿ ಶಾಸನ – ಅಮೃತಕಟ್ಟೆ ಎಂಬ ಜೈನ ಸನ್ಯಾಸಿನಿ ಸಮಾಧಿ ಮರಣ ಹೊಂದಿದಾಗ ಆಕೆಯ ಶಿಷ್ಯನಾದ ಪದ್ಮನಂದಿ ಭಟ್ಟಾರರು ತಮ್ಮ ತಾಯಿಯ ಹೆಸರಿನಲ್ಲಿ ನಿಲ್ಲಿಸಿದ **ನಿಶಿದಿ ಶಾಸನ.**
6.	ಎಲೆಕೊಪ್ಪ (ನಾಮಂ 121)	ಕ್ರಿ.ಶ. 1068	ಮಣಿಯಮರಸನಕೆರೆಯ ಬಸದಿಗಾಗಿ ಪೊಯ್ಸಳ ದೇವರು ನೀಡಿದ **ದಾನ ಉಲ್ಲೇಖಿಸುವ ಶಾಸನ**
7.	ಎಲೆಕೊಪ್ಪ (ನಾಮಂ 122) –	ಕ್ರಿ.ಶ. 1068	ಗುಹೆಯೊಂದರಲ್ಲಿ ವಾಸಮಾಡುತ್ತಾ ಕಠಿಣ ಉಪಸರ್ಗಗಳನ್ನು ಅನುಭವಿಸುತ್ತಾ ನಿಷ್ಕಳಂಕ ಚರಿತನಾದ ಗುಹೆಯ ಭಟ್ಟಾರಕ ಏಲಾಚಾರ್ಯರಿಂದ ನೊಳಂಬವಾಡಿ ಹಾಗೂ ದಡಿಗವಾಡಿಯು ಪ್ರಸಿದ್ಧವಾದವು ಎಂದು ಕವಿ ಹಾಗೂ ಏಲಾಚಾರ್ಯರ ಶಿಷ್ಯ ಬಿಣ್ಣಯ್ಯ (ಬಿಂಡಯ್ಯನು) ನು ಬರೆದಿರುವ ಶಾಸನ. **ಜೈನ ಯತಿಯ ಕುರಿತಾದ ಶಾಸನ**
8.	ಸುಂಕಾ ತೊಂಡನೂರು (ಪಾಂಮ 243)	10–11ನೇ ಶತಮಾನ	ಯಾವುದೊ ಕಾರಣಕ್ಕೆ ಹೋರಾಡಿ ಸತ್ತ ಫಣ್ಣ ಎಂಬಾತನ ನೆನಪಿಗೆ **ಪರೋಕ್ಷ ವಿನಯಾರ್ಥವಾಗಿ** ನಿಲ್ಲಿಸಿದ ಕಲ್ಲು
9.	ಮತ್ತಂದ್ರ (ನಾಮಂ 167)	10ನೇ ಶತಮಾನ	ಚೊಕ್ಕಜಿನಾಲಯಕ್ಕೆ (ಬಸದಿಗೆ) ಕಲುಕೇಪ ನಾಡಾಳ್ವರು **ಮತ್ತಿಕೆರೆ ಗ್ರಾಮವನ್ನು** ದಾನ ನೀಡಿದ್ದನ್ನು ತಿಳಿಸುವ ಶಾಸನ
10.	ತಿಪ್ಪೂರು (ಮದ್ದೂ 54) ದಾನ ಶಾಸನ	ಕ್ರಿ.ಶ. 1117	ಹೊಯ್ಸಳ ವಿಷ್ಣುವರ್ಧನ ದಂಡನಾಯಕ ಗಂಗರಾಜನಿಗೆ ತಿಪ್ಪೂರು ವೃತ್ತಿಯನ್ನು ಕೊಟ್ಟಾಗ ಗಂಗರಾಜನು ಅದನ್ನು ತನ್ನ ಗುರುವಾದ ಮೇಘಚಂದ್ರ ಸಿದ್ಧಾಂತದೇವನಿಗೆ ಧಾರೆ (ದಾನ) ಎರೆದುಕೊಟ್ಟ **ಶಾಸನ ದಾನಶಾಸನ**
11.	ಕಂಬದಹಳ್ಳಿ (ನಾಮಂ 33)	ಕ್ರಿ.ಶ. 1118	ದಂಡನಾಯಕ ಗಂಗರಾಜನು ಬಿಂಡಿಗನವಿಲೆ ಬಸದಿಗೆ ಭೂಮಿ ದಾನ ನೀಡಿದ್ದನ್ನು ಉಲ್ಲೇಖಿಸುವ **ದಾನಶಾಸನ**

12.	ಹೊಸಹೊಳಲು (ಕೃಪೆ 03)	ಕ್ರಿ.ಶ. 1118	ಪಟ್ಟಣಸ್ವಾಮಿಯಾದ ನೊಳಂಬಿ ಶೆಟ್ಟಿಯ ಹೆಂಡತಿ ದೇಮಿಕಬ್ಬೆ ಸೆಟ್ಟಿತಿಯು ತಾನು ನಿರ್ಮಿಸಿದ ತ್ರಿಕೂಟಾಚಲ ಜಿನಾಲಯದ ನಿರ್ವಹಣೆಗಾಗಿ ಅರುಹನಹಳ್ಳಿ, ಬಸದಿಯ ಬಡಗಲು ತೆಂಕಲಗಳ ಭೂಮಿ, ದಾನಶಾಲೆ, ಎರಡು ಗಾಣ, ಎರಡು ತೋಟ ಹಾಗೂ ಕತ್ತರಿಘಟ್ಟದ ನಾಡಾಳ್ವ ಗಂಡನಾರಾಯಣಶೆಟ್ಟಿಯು ತನಗೆ ಕೊಟ್ಟಿದ್ದ ಭೂಮಿಯನ್ನು ಶ್ರೀ ಶುಭಚಂದ್ರ ಸಿದ್ದಾಂತದೇವರಿಗೆ ದತ್ತಿಯಾಗಿ ಕೊಟ್ಟ ವಿವರಗಳಿರುವ **ದಾನಶಾಸನ**
13.	ಸುಖದೆರೆ (ನಾಮಂ 14)	ಕ್ರಿ.ಶ. 1120	ಜಕ್ಕಿಶೆಟ್ಟಿ ಎಂಬುವವನು ಸುಖದೆರೆಯಲ್ಲಿ ಬಸದಿ ಮತ್ತು ಕೆರೆಯನ್ನು ಕಟ್ಟಿಸಿ ಭೂದಾನಗಳನ್ನು ನೀಡಿ 'ತೆಪ್ಪಸುಂಖ' ದೊಂದಿಗೆ ಸಣ್ಣ ಕೆರೆಯನ್ನು ದಾನವಾಗಿ ನೀಡಿದ್ದನೆಂದು ಉಲ್ಲೇಖಿಸಲಾಗಿದೆ. **ಕೆರೆಕಟ್ಟಿಸಿ ದಾನ ನೀಡಿದ ವಿಚಾರ**
14.	ಕಂಬದಹಳ್ಳಿ (ನಾಮಂ 32) – ಬಸದಿ ನಿರ್ಮಾಣ	ಕ್ರಿ.ಶ. 1128	ದ್ರೋಹಘರಟ್ಟ ಎಂದು ಬಿರುದಾಂಕಿತ ದಂಡನಾಯಕ ಗಂಗರಾಜರ ಮಗ ಬೊಪ್ಪದೇವ ದ್ರೋಹಘರಟ್ಟಾಚಾರಿ **ಕಟ್ಟಿಸಿದ ಕನ್ನೆವಸದಿ**
15.	ಆಬಲವಾಡಿ (ಮದ್ದೂರು 29) ಬಸದಿ ನಿರ್ಮಾಣ ದಾನ ಶಾಸನ	ಕ್ರಿ.ಶ. 1131	ಹೊಯ್ಸಳ ಅರಸ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಹೆಗ್ಗಡೆ ಮಲ್ಲಿನಾಥನು **ಶ್ರೀಯಳ್ಳಿ ಬಸದಿ ಕಟ್ಟಿಸಿ** ಅದರ ಪೂಜೆಗಾಗಿ ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕಂ ಹನ್ನೆರಡು ಸಲಗೆಯ ಗದ್ದೆಯನ್ನು ಯತಿಗಳಾದ ನಯಕೀರ್ತಿ (ಭಾನುಕೀರ್ತಿಗಳಿಗೆ ಧಾರೆ ಎರೆದುಕೊಟ್ಟದ್ದನ್ನು ಉಲ್ಲೇಖಿಸುತ್ತದೆ.
16.	ಕಸಲಗೆರೆ (ನಾಮಂ 169) – ಬಸದಿ ನಿರ್ಮಾಣ – ದಾನ ಶಾಸನ	ಕ್ರಿ.ಶ. 1142	ಕಲ್ಕುಣಿನಾಡಿನ ಒಡೆಯನಾಗಿದ್ದ ಸಾವಂತ ಸೋವೆಯ ನಾಯಕನು ಹೆಬ್ಬಿದಿರುವಾಡಿಯಲ್ಲಿ ಉತುಂಗ ಚೈತ್ಯಾಲಯ ಕಟ್ಟಿಸಿ, ಶ್ರೀ ಪಾರ್ಶ್ವದೇವರ ಪ್ರತಿಷ್ಠೆಯನ್ನು ಮಾಡಿಸಿ **ದೇವರ ಸೇವೆಗಾಗಿ, ಮುನಿಗಳ ಆಹಾರಕ್ಕಾಗಿ ಹಾಗೂ ಬಸದಿಯ ಜೀರ್ಣೋದ್ಧಾರಕ್ಕಾಗಿ** ತನ್ನ ಗುರುಗಳಾದ ಸೂರಸ್ತ ಗಣದ ಬ್ರಹ್ಮದೇವರ ಕಾಲನ್ನು ಮುಟ್ಟಿ ಧಾರಾಪೂರ್ವಕವಾಗಿ ಕೊಟ್ಟ ದತ್ತಿ ಮತ್ತು ಅದರ ಸೀಮಾಂತರದ ಉಲ್ಲೇಖವಿದೆ.
17.	ಕಸಲಗೆರೆ (ನಾಮಂ 170)	ಕ್ರಿ.ಶ. 1142	ಕಲ್ಕುಣಿನಾಡ ಬಸದಿಯನ್ನು 'ಎಕ್ಕೋಟಜಿನಾಲಯ' ವೆಂದು ಹೆಸರಿಲಸ್ಪಟ್ಟಿದ್ದನ್ನು ಈ ಶಾಸನವು ಹೇಳುತ್ತದೆ.
18.	ಬೋಗಾದಿ (ನಾಮಂ 183) – ದಾನಶಾಸನ	ಕ್ರಿ.ಶ. 1144	ಬೋಗಾದಿಯ ಪಾಳುಬಸದಿಯ ಬಳಿ ಬಿದ್ದಿರುವ ಈ ಶಾಸನವು ಹೊಯ್ಸಳ ಒಂದನೇ ನರಸಿಂಹನು **ಪಾರ್ಶ್ವದೇವರ ಶ್ರೀಕರಣ ಜಿನಾಲಯಕ್ಕೆ ಭೋಗವತಿ** ಎಂಬ ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.
19.	ಕಂಬದಹಳ್ಳಿ (ನಾಮಂ 30) – ದಾನ ಶಾಸನ	ಕ್ರಿ.ಶ. 1145	ಇಲ್ಲಿನ **ಶಾಂತೀಶ್ವರ ಬಸದಿಯೊಳಗಿನ** ಈ ಶಾಸನವು ಶಾಂತಿನಾಥದೇವರ ಪೂಜೆಗೆಂದು ಹೊಯ್ಸಳ ನರಸಿಂಹನು ಭರತಮಯ್ಯ ಮತ್ತು ಮರಿಯಾನೆ ದಂಡನಾಯಕರಿಗೆ ಮೊದಲಿಹಳ್ಳಿಯನ್ನು ದಾನ ನೀಡಿದ್ದನ್ನು ಹೇಳುತ್ತದೆ.
20.	ಯಾಲದಹಳ್ಳಿ (ನಾಮಂ 64) – ಬಸದಿ ನಿರ್ಮಾಣ – ದಾನ ಶಾಸನ	ಕ್ರಿ.ಶ. 1145	ಹೊಯ್ಸಳ ವಿಷ್ಣುವರ್ಧನನ ಮಹಾಪ್ರಧಾನ ದೇವರಾಜನು **ಸೂರನಹಳ್ಳಿಯಲ್ಲಿ ಪಾರ್ಶ್ವಜಿನನಿಗೆ ಬಸದಿಯನ್ನು** ನಿರ್ಮಿಸಿ, ಪಾರ್ಶ್ವನಾಥನ ಹೆಸರಿನಲ್ಲಿ ಆ ಹಳ್ಳಿಯನ್ನು 'ಪಾರ್ಶ್ವಪುರ'ವನ್ನಾಗಿ ಪರಿವರ್ತಿಸಿ ದಾನ ನೀಡಿದ್ದನ್ನು ಹೇಳುತ್ತದೆ. ನರಸಿಂಹನು ತನ್ನ ಮಹಾಪ್ರಧಾನಿ ದೇವರಾಜನ ಧರ್ಮ ಬುದ್ದಿ ಮತ್ತು ಸ್ವಾಮಿಭಕ್ತಿಗೆ ಮೆಚ್ಚಿ ಸೂರನಹಳ್ಳಿಯನ್ನು ದಾನವಾಗಿ ಕೊಡಲು ದೇವರಾಜನು ಆ ಊರಿನಲ್ಲಿ ಬಸದಿಯನ್ನು ಕಟ್ಟಿಸುತ್ತಾನೆ.
21.	ಬಸದಿ ಹೊಸಕೋಟೆ (ಕೃಪೆ 107)	ಕ್ರಿ.ಶ. 1147	ಹೊಯ್ಸಳ ದೊರೆ ವಿಷ್ಣುವರ್ಧನನ ಕಾಲದಲ್ಲಿ ಆತನ ದಂಡನಾಯಕ ಪುಣಿಸಮಯ್ಯನು ಇಲ್ಲಿ **ಬಸದಿಯನ್ನು ಕಟ್ಟಿಸಿ** ಅದಕ್ಕಾಗಿ ಮಾಣಿಕದೊಲೂರು ಹಾಗೂ ಮಾವಿನಕೆರೆಗಳನ್ನು ಸರ್ವಬಾಧಾಪರಿಹಾರವಾಗಿ ಕೊಟ್ಟಿದ್ದಾನೆ

22.	ಬಸದಿ ಹೊಸಕೋಟೆ (ಕೃಪೆ 106)	ಕ್ರಿ.ಶ. 1165	ಹೊಯ್ಸಳ ವೀರನರಸಿಂಹನ ಕಾಲದಲ್ಲಿ ಮಹಾಪ್ರಧಾನ ಹೆಗ್ಗಡೆ ಶಿವರಾಜನ ಸಮ್ಮತಿಯಿಂದ ಮಣಿಸಮಯ್ಯನು ಮಾಣಿಕ್ಯವೊಳಲು ಹೊಯ್ಸಳ **ಜಿನಾಲಯಕ್ಕೆ ಅಲ್ಲಿನ ಆಶ್ರಮವಾಸಿಗಳ** ಆಹಾರಕ್ಕೆ ಆ ಸೀಮೆಯ ನಾಲ್ಕು ಕಡೆಯ ಗ್ರಾಮಗಳ ಕೆಲವು ಕರ ತೆರಿಗೆಗಳನ್ನು ದತ್ತಿಯಾಗಿ ಕೊಡುತ್ತಾನೆ.
23.	ಕಂಬದಹಳ್ಳಿ (ನಾಮಂ 26)	ಕ್ರಿ.ಶ. 1168	ನೇಮದಂಡೇಶ ಮತ್ತು ಗಂಗವಂಶದ ಮುದ್ದರಿಸಿಯ ಮಗನಾದ ಪಾರ್ಶ್ವದೇವನು ಬಿಂಡಿಗನವಿಲೆ ಪಾರ್ಶ್ವಜನನ ಬಸದಿಯನ್ನು ಜೀರ್ಣೋದ್ಧಾರ ಮಾಡಿ, ಸುಣ್ಣ ಹೊಡೆಸಿ ನಿರಂತರ ಶೋಭಿಸುವಂತೆ ಮಾಡಿ ಪುಣ್ಯ ಪಡೆದನು ಎಂದು ಹೊಗಳುತ್ತದೆ. 'ಇದು ಪಾರ್ಶ್ವದೇವರಿಗೆ ಬಿಟ್ಟಿದಾನವನ್ನು ಚತುರ್ವಿಧ ದಾನಕ್ಕೆ ಬಿಟ್ಟ ದತ್ತಿ' ಎಂದಿದೆ.
24.	ಬೋಗಾದಿ (ನಾಮಂ 184)	ಕ್ರಿ.ಶ. 1173	ಒಂದನೇ ನರಸಿಂಹನ ಕಾಲದ **ಶ್ರೀಕರಣದ ಜಿನಾಲಯಕ್ಕೆ** ಕಾಳ ಬೋವನಹಳ್ಳಿಯನ್ನು ಸೇರಿಸಿದ್ದನ್ನು ಈ ಶಾಸನ ಹೇಳುತ್ತದೆ. **ದಾನಶಾಸನ**
25.	ಕಂಬದಹಳ್ಳಿ (ನಾಮಂ 29)	ಕ್ರಿ.ಶ. 1174	ಭರತಯ್ಯ ದಂಡನಾಯಕನು **ಶಾಂತಿನಾಥದೇವರ** ಪೂಜೆಗೆಂದು ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ.
26.	ಕ್ಯಾತನಹಳ್ಳಿ (ಪಾಂಪು 15) – ದಾನ ಶಾಸನ	ಕ್ರಿ.ಶ. 1175	ಹೊಯ್ಸಳ ವೀರಬಲ್ಲಾಳದೇವನ ಆಳ್ವಿಕೆಯಲ್ಲಿ **ಕೊಡೆಹಾಳ ಬಸದಿಗಾಗಿ** ಎರೆಯಣ್ಣ ಎಂಬಾತ ಭೂಮಿಯನ್ನು ಕ್ರಯಕ್ಕೆ ಕೊಂಡು ಅದನ್ನು ಆ ಬಸದಿಗಾಗಿ ಧಾರೆ ಎರೆದಿದ್ದಾನೆ ಎಂದಿದೆ.
27.	ಹಟ್ಟಣ (ನಾಮಂ 118)	ಕ್ರಿ.ಶ. 1178	ಪಟ್ಟಣಸ್ವಾಮಿ ಸೋವಿಸೆಟ್ಟಿಯು ಹಟ್ಟಣದಲ್ಲಿ **ಸಾಗರಸಮಾನವಾದ ಮೂರು ಕೆರೆಗಳನ್ನು ಪಾರ್ಶ್ವಜಿನಾಲಯವೊಂದನ್ನು** ಕಟ್ಟಿಸಿ, ಅದಕ್ಕೆ ದಾನ ನೀಡಿದ್ದನ್ನು ಹೇಳುತ್ತದೆ. ಈ ಸೋವಿಸೆಟ್ಟಿಯ ಪೂರ್ವಜರಲ್ಲಿ ಎಪಗಾಂಪ ಎಂಬುವನು ಮುದುಹೊಳಲಿನಲ್ಲಿ ಬಸದಿ–ಕೆರೆ–ದೇವಸ್ಥಾನ ಮತ್ತು ಮಠವೊಂದನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಇದು ನಂದಾದೀವಿಗೆಗೆ ನೀಡಿದ ದಾನಶಾಸನವಾಗಿದೆ. ಕೆರೆ ನಿರ್ಮಾಣ, ಬಸದಿ ನಿರ್ಮಾಣ,– ದಾನ ಶಾಸನ
28.	ಅಳೀಸಂದ್ರ (ನಾಮಂ 72)	ಕ್ರಿಶ. 1184	ಭರತಮಯ್ಯ ಮತ್ತು ಬಾಹುಬಲಿ ದಂಡನಾಯಕರು **ಅಣುವಸಮುದ್ರದಲ್ಲಿ 'ಕನ್ನೆವಸದಿ'** ಯನ್ನು ಕಟ್ಟಿಸಿ ದಾನ ನೀಡಿದ್ದನ್ನು ಹೇಳುತ್ತದೆ.
29.	ಶ್ರವಣನಹಳ್ಳಿ (ಕೃಪೆ 21)	12ನೇ ಶತಮಾನ (ಶಾಂತಲೆ)	ವಿಷ್ಣುವರ್ಧನನ ಪಿರಿಯರಸಿ ಚಂದಲದೇವಿ ತನಗೆ ತಮ್ಮ ತಂದೆ ಬಳುವಳಿಯಾಗಿ ಕೊಟ್ಟಿದ್ದ ಕಾವನಹಳ್ಳಿಯನ್ನು **ವೀರಕೊಂಗಾಳ್ವ ಜಿನಾಲಯಕ್ಕೆ** ದತ್ತಿಯಾಗಿ ತಮ್ಮ ಗುರುಗಳಾದ ಪ್ರಭಾಚಂದ್ರ ಸಿದ್ಧಾಂತ ದೇವರ ಕಾಲಂಕರ್ಚ್ಚಿ' ಧಾರಾಪೂರ್ವಕವಾಗಿ ಸರ್ವಬಾಧಾ ಪರಿಹಾರವಾಗಿ ಕೊಟ್ಟ ವಿಚಾರ. – ಬಸದಿ ನಿರ್ಮಾಣ, ದಾನ
30.	ಕೊಡಿಹಳ್ಳಿ (ನಾಮಂ 24) ನಿಶಿಧಿ ,ಶಾಸನ	ಹತ್ತನೇ ಶತಮಾನ	ಸಲ್ಲೇಖನ ವಿಧಿಯಿಂದ "ಎರಡುನ್ತೋನ್ತು' ಸತ್ತವನ ನಿಶಿಧಿಯಾಗಿದೆ.
31.	ಆಬಲವಾಡಿ (ಮದ್ದೂ 30)	12ನೆಯ ಶತಮಾನ	ಹೆಚ್ಚಿನ ವಿವರವಿಲ್ಲದ ಶಾಸನ
32.	ಬಳೆ ಅತ್ತಿಗುಪ್ಪೆ (ಪಾಂ 245)	12ನೆಯ ಶತಮಾನ	ಇದೊಂದು ದಾನ ಶಾಸನ. ಯಾರೋ ಒಬ್ಬ ಶ್ರಾವಕ, ಆತನನ್ನು ಶಾಸನ ಸತ್ಯಾರಾಧಕ, ಅನೇಕ ಗುಣಗಣಾಂಕಿತ, ಪುಣ್ಯಪ್ರಂಜಿತ, ಪ್ರಣಥ ಮಹಾಧರ್ಮಿ, ದೇಸಿಯ ಭರಣ ಮತ್ತು ಜನಚರಣ ಸರಣಂ ಎಂದು ಹೊಗಳುತ್ತದೆ. ಈತ ಶ್ರೀ

			ಕುಂದಕುಂದಾನ್ವಯದ ಸಿದ್ಧಾಂತ ಚಕ್ರವರ್ತಿಗಳೆನಿಸಿದ್ದ ಶ್ರೀಮನ್‌ನಯಕೀರ್ತಿ ದೇವರನ್ನು ಪೂಜಿಸಿ ಈ ದಾನವನ್ನು ಕೊಟ್ಟಿದ್ದಾನೆ.
33.	ಕಂಬದಹಳ್ಳಿ (ನಾಮಂ 27) ನಿಶಿಧಿ ಶಾಸನ	12ನೆಯ ಶತಮಾನ	ಹೆಚ್ಚಿನ ವಿವರವಿಲ್ಲದ ನಿಶಿಧಿ
34.	ಕಂಬದಹಳ್ಳಿ (ನಾಮಂ 28) ನಿಶಿಧಿ ಶಾಸನ	12ನೆಯ ಶತಮಾನ	**ರುಕ್ಕುಮವ್ವೆ ಮತ್ತು ಜಕ್ಕವ್ವೆ ಕಂತಿಯರ ನಿಶಿಧಿಯಾಗಿದೆ.** ಇವರು ಮೂಲಸಂಘ ದೇಶೀಯಗಣ ಪುಸ್ತಕಗಚ್ಛದ ಕುಂದಕುಂದಾನ್ವಯದ ಪ್ರಭಾಚಂದ್ರ ಸಿದ್ಧಾನ್ತಿಗಳ ಶಿಷ್ಯೆಯರೆಂದು ತಿಳಿದುಬರುತ್ತದೆ.
35.	ಕಂಬದಹಳ್ಳಿ (ನಾಮಂ 38) ನಿಶಿಧಿ ಶಾಸನ	12ನೆಯ ಶತಮಾನ	ಏಕವೀರಭಟಾರರ ಶಿಷ್ಯನೂ, ಪುರುಷೋತ್ತಮಯ್ಯನ ಮಗನೂ ಆದ ವ್ಯಕ್ತಿಯೊಬ್ಬನು**ಸಮಾಧಿ ಮರಣವನ್ನಪ್ಪಿದನೆಂದು** ಹೇಳುತ್ತದೆ.
36.	ಹಾಗಲಹಳ್ಳಿ (ಮದ್ದೂ 106)	12ನೆಯ ಶತಮಾನ	ತಿಪ್ಪೂರ ತೀರ್ಥಕ್ಕೆ ಸೇರಿದ ಹಾದರವಾಗಿಲು (ಹಾಗಲಹಳ್ಳಿಯ) ತೆಳ್ಳರ (ತೆಳೆಯರ) ಕುಲದ ಭೂಮಿಕಾರ ಚಾಮಗಾವುಂಡನು ತನ್ನ ಗುರುಗಳಾದ ಆದಿನಾಥ ಪಂಡಿತ ದೇವರು ಮತ್ತು ಶ್ರುತಕೀರ್ತಿ ಪಂಡಿತ ದೇವರ ಅನುಮತದಿಂದ ಕಲ್ಲುಗಾಣ ಮಾಡಿಸಿದ ವಿಷಯ ಪ್ರಸ್ತಾಪವಾಗಿದೆ.
37.	ಕಂಬದಹಳ್ಳಿ (ನಾಮಂ 31)	1200 ಕ್ರಿ.ಶ.	'ಏಕ್ಕೋಟಿ ಮಹಾರುದ್ರರು' ಸೇರಿ ಅಲ್ಲಿನ ಮೂಲಸಂಘದ ದೇಶಿಗಣ ಪುಸ್ತಕಗಚ್ಛದ **ಕಂಬದಹಳ್ಳಿ ತೀರ್ಥದ ಬಸದಿಯೊಂದಕ್ಕೆ ಏಕ್ಕೋಟಿ ಜಿನಾಲಯವೆಂದು ಹೆಸರಿಟ್ಟು** ಪಂಚಮಹಾ ಶಬ್ದಗಳನ್ನು ನೀಡಿದ್ದನ್ನು ಹೇಳುತ್ತದೆ. ಅಲ್ಲದೆ ಈ ನಿಯಮವನ್ನು ಮೀರಿದವನು 'ಶಿವದ್ರೋಹಿ' ಎಂದಿದೆ.
38.	ತಿಪ್ಪೂರು (ಮದ್ದೂ 53) –ಪರೋಕ್ಷ ವಿನಯ	13ನೆಯ ಶತಮಾನ ಕ್ರಿ.ಶ. 1204	ಇದೊಂದು ಪರೋಕ್ಷ ವಿನಯದ ವಿಷಯವನ್ನು ದಾಖಲಿಸುವ ಶಾಸನ. ಇದನ್ನು ಒಂದು ಜಿನಬಿಂಬದ ಪೀಠದ ಮೇಲೆ ಕೆತ್ತಲಾಗಿದೆ. ಕವಿಕಂದರ್ಪ ಹಾಗೂ ಪೊನ್ನಾದೇವಿಯ ಮಗನಾದ ಬಾಳಚಂದ್ರನು ತನ್ನ ಗುರುಗಳಿಗೆ ಪರೋಕ್ಷವಾಗಿ ಮಾಡಿದ ಪ್ರತಿಷ್ಠೆ ಎಂದಿದೆ.
39.	ತಿಪ್ಪೂರು (ಮದ್ದೂ 52)	13ನೇ ಶತಮಾನ	ಇದು ಹೊಯ್ಸಳ ವೀರಬಲ್ಲಾಳನ ಕಾಲಕ್ಕೆ ಸೇರಿದ ಶಾಸನವಾಗಿದೆ.
40.	ಕಳಗೆರೆ (ನಾಮಂ60)	3ನೇ ನರಸಿಂಹನ ಕಾಲ	ಈ ಶಾಸನದಲ್ಲಿ ಬಲತ್ಕಾರಗಣದ ಉಲ್ಲೇಖವಿದ್ದು ಇದು ಮುನಿಮಾಘನಂದಿ ಸಿದ್ಧಾಂತನನ್ನು ಹೆಸರಿಸುತ್ತಿದ್ದು, ಇವನು ದೊರೆ ಮೂರನೇ ನರಸಿಂಹನಿಂದ ದೊರಸಮುದ್ರದ ಶಾಂತಿನಾಥ ಬಸದಿಗೆ ಚಿಕ್ಕತನಹಳ್ಳಿಯನ್ನು ದಾನ ಪಡೆಯುತ್ತಾನೆ. ಮುನಿ ಮಾಘನಂದಿಯು ಕುಮುದಚಂದ್ರ ಭಟ್ಟಾರಕನ ಶಿಷ್ಯರಾಗಿದ್ದು, ಸಿದ್ಧಾಂತಸಾರ, ಶ್ರಾವಕಾಚಾರಸಾರ, ಪದಾರ್ಥಸಾರ ಶಾಸ್ತ್ರಸಾರ ಸಮುಚ್ಚಯ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಈ ಶಾಸನದಲ್ಲಿ **ಅಂಗಭೋಗ ರಂಗಭೋಗ, ಆಹಾರದಾನ** ಮುಂತಾದ ಸಮಸ್ತ ಧರ್ಮಕಾರ್ಯಕ್ಕಂ ಎಂದು ದಾನದ ಉದ್ದೇಶವನ್ನು ಹೇಳಲಾಗಿದೆ.
41.	ಬೆಳಗೊಳ (ಶ್ರೀಪ73)	12–13ನೇ ಶತಮಾನ	ಈ ಶಾಸನದಲ್ಲಿ ಅರುಂಗಳ ಅನ್ವಯದ ದ್ರವಿಳ ಸಂಘದ ನಂದಿ ಸಂಘದ ಉಲ್ಲೇಖವಿದೆ. ಬಸ್ತಿದಿಬ್ಬ ಎಂದು ಕರೆದಿರುವುದರಿಂದ ಇಲ್ಲೊಂದು ಬಸದಿ ಇದ್ದಿರಬಹುದು ಎಂಬುದು ಸ್ಪಷ್ಟವಾಗುತ್ತದೆ.

50.	ಬೆಳ್ಳೂರು (ನಾ.ಮಂ96)	ಕ್ರಿ.ಶ. 1602	ಈ ಶಾಸನದ ದಾನಿ ಹರತಿಯ ಸಾಂಮೇಟ ರಾಯಪ್ಪರಾಜ ಆತ ರತ್ನಗಿರಿ (ಆಂಧ್ರದ ಮಡಕಶಿರಾ ತಾಲ್ಲೂಕು ಅನಂತಪುರ ಜಿಲ್ಲೆ) ಬಸದಿಯಲ್ಲಿ ಬಹುಕಾಲದಿಂದ ಪೂಜೆ ಇಲ್ಲದೆ ಇದ್ದ ಜಿನ್ನೇಶ್ವರ ದೇವರ ಪೂಜೆ ಮತ್ತು ಸೇವೆಗಾಗಿ, ತಮ್ಮ ಅಧಿಪತ್ಯಕ್ಕೆ ಸೇರಿದ್ದ ಸಿರಹದ ಸೀಮೆಯ ದೊಡ್ಡೇರಿ ಹೋಬಳಿಯ ಬಡವನಹಳ್ಳಿಯನ್ನು ಸರ್ವಬಾಧಾ ಪರಿಹಾರವಾಗಿ ಡಿಳ್ಳಿ, ಪೆನುಗೊಂಡೆ, ಸೀಮೆಗಳ ಸಿಂಹಾಸನಾಧೀಶ್ವರ (ಧರ್ಮ) ರಾದ ಲಕ್ಷ್ಮಿಸೇನ ಭಟಾರರಿಗೆ ದಾನವಾಗಿ ಕೊಡುತ್ತಾನೆ.
51.	ಬೆಳ್ಳೂರು (ನಾಮಂ94)	17ನೆಯ ಶತಮಾನ	ಬೆಳ್ಳೂರಿನ ವಿಮಲನಾಥ ಬಸದಿಗೆ ಕ್ಷೇತ್ರದಾನ ಮಾಡಿದವರು ಆಗ ಮೈಸೂರಿನ ರಾಜರಾಗಿದ್ದ ದೇವರಾಜ ಒಡೆಯರು ಎಂದು ಈ ಶಾಸನ ತಿಳಿಸುತ್ತದೆ.
52.	ಬೆಳ್ಳೂರು (ನಾಮಂ93)	ಕ್ರಿ.ಶ. 1680	ಶರ್ಕರ ಎಂಬ ವರ್ತಕನು ಬೆಳ್ಳೂರಿನಲ್ಲಿ **ವಿಮಲನಾಥನ ಚೈತ್ಯಾಲಯವನ್ನು** ಕಟ್ಟಿಸಿದ್ದನ್ನು ತಿಳಿಸುತ್ತದೆ.
53.	ಬೆಳ್ಳೂರು (ನಾಮಂ92)	17ನೇ ಶತಮಾನ	ವಿಮಲನಾಥ ಚೈತ್ಯಾಲಯದ ಮೂಲಬಿಂಬದ ಮೇಲಿನ ಈ ಶಾಸನವು, ಈ ಬಿಂಬವನ್ನು ಸಮಂತಭದ್ರಾಚಾರ್ಯರ ಶಿಷ್ಯರಾದ ಲಕ್ಷ್ಮಿಸೇನಾಚಾರ್ಯರು ಪ್ರತಿಷ್ಠಾಪಿಸಿದರೆಂದು ಸ್ಪಷ್ಟಪಡಿಸುತ್ತದೆ.
54.	ಕಂಬದಹಳ್ಳಿ (ನಾಮಂ37)	17–18ನೇ ಶತಮಾನ	ಈ ಶಾಸನವು ಕಂಬದಹಳ್ಳಿಯ ಬೆಟ್ಟದ ಶ್ರೀ ಚಂದ್ರಪ್ರಭಸ್ವಾಮಿಯ ಅರ್ಚನೆಗೆ ಒಂದು ಕೊಳವನ್ನು ಕಟ್ಟಿಸಿದ್ದನ್ನು ಉಲ್ಲೇಖಿಸುತ್ತದೆ.

		ಶೋಧಿಸಿದವರು	ಅಪ್ರಕಟಿತ ಶಾಸನಗಳು
55	ಹಿರೇಮರಳಿ ಪಾಂಡವಪುರ ತಾ॥ ನಿಶಿಧಿ ಶಾಸನ	ಮೈಸೂರಿನ ಪುರಾತತ್ವ ಇಲಾಖೆಯು ಶ್ರೀಯುತ ಹೆಚ್.ಎಂ. ನಾಗರಾಜರಾವ್, ಪ್ರಾಚೀನ ಇತಿಹಾಸ ವಿಭಾಗದ ಡಾ॥ ಎನ್ ಹವಳಯ್ಯ, ಡಾ॥ ಎ.ವಿ. ನರಸಿಂಹಮೂರ್ತಿ	ಬುದ್ಧಸೇನ ಕಂತಿ ಎಂಬ ಜೈನ ಸನ್ಯಾಸಿನಿಯು ಹಿರೇಮರಳಿಯಲ್ಲಿ ತಪಸ್ಸು ಮಾಡಿ ಸ್ವರ್ಗಸ್ಥಳಾದಳು ಎಂದು ಹೇಳುತ್ತದೆ. ಹಾಗೂ 'ಮಣಲೂರು ಸಂಘ' ಎಂಬ ಒಂದು ಜೈನಸಂಘದ ಪ್ರಸ್ತಾಪ ಮಾಡುತ್ತದೆ.
56	ಗುತ್ತಲು ಮಂಡ್ಯ ತಾ॥ – ನಿಶಿಧಿ ಶಾಸನ	ಡಾ॥ ಹಂಪನಾ ಮತ್ತು ಎಂ.ಜಿ. ಮಂಜುನಾಥ್	ಹಂಪನಾರವರ ಚಂದ್ರಕೊಡೆಯಲ್ಲಿ ಪ್ರಸ್ತಾಪವಾಗಿದೆ. ಗಂಗವಂಶದ ಇಮ್ಮಡಿ ಭೂತುಗನ ಮರಿಮಗನಾಥ ಲೋಕವಿದ್ಯಾಧರನ ನಿಶಿಧಿ
57	ಹೊಸಹೊಳಲು ಕೆ.ಆರ್. ಪೇಟೆ ತಾಲ್ಲೂಕು	ಶ್ರೀರಂಗಪಟ್ಟಣದ ಸ.ಪ್ರ.ದರ್ಜೆ ಕಾಲೇಜಿನ ಆರ್. ರಂಗಸ್ವಾಮಿ ಹಾಗೂ ಗದಗದ ಸ.ಪ್ರ.ದರ್ಜೆ ಕಾಲೇಜಿನ ಅಪ್ಪಣ ಹಂಜೆ	ಕ್ರಿ.ಶ. ಸುಮಾರು 12ನೆಯ ಶತಮಾನಕ್ಕೆ ಸೇರಿದ ಶಾಸನ. ಹೊಸಹೊಳಲು ಗ್ರಾಮದ ಪೂರ್ವಕ್ಕೆ ಕೆರೆಯ ಅಂಚಿನಲ್ಲಿರುವ ಭೈರವೇಶ್ವರ ದೇವಾಲಯದ ಆವರಣದಲ್ಲಿ ಬೆಳಕಿಗೆ ಬಂದಿರುವ ಜೈನಪಾದಪೀಠ ಶಾಸನ, ಇದು ಕುಕ್ಕಟಾಸನ ಮಲದಾರಿದೇವ ಮುನಿಯ ಶಿಷ್ಯ ಶುಭಚಂದ್ರ ಸಿದ್ಧಾಂತದೇವ ಮುನಿಯ ಗುಡ್ಡ (ಶಿಷ್ಯ) ನೊಳಂಬಿಸೆಟ್ಟಿ ಶಿಲ್ಪವನ್ನು ಪ್ರತಿಷ್ಠಾಪಿಸಿದ ವಿಚಾರವನ್ನು ಪ್ರಸ್ತಾಪಿಸುತ್ತದೆ.
58	ಬಳ್ಳೇಕೆರೆ ಕೆ.ಆರ್. ಪೇಟೆ ತಾಲ್ಲೂಕು	ಡಾ. ಆರ್. ರಂಗಸ್ವಾಮಿ	ನಾಗಿಯಣ್ಣನ ಪ್ರಶಸ್ತಿಯನ್ನು ಒಳಗೊಂಡಿದ್ದು, ಸನ್ಯಾಸದಿಂದ ಅವನು ಮುಕ್ತಿಯನ್ನು ಪಡೆದ ವಿವರವಿದೆ. – ನಿಶಿಧಿ ಶಾಸನ

ಅನುಬಂಧ –2

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಉಕ್ತರಾಗಿರುವ ಆಚಾರ್ಯರು ಮತ್ತು ಅವರ ಗುರುಪರಂಪರೆ

ಕ್ರ ಸಂ	ಆಚಾರ್ಯರು	ಸಂಘ	ಗಣ	ಗಚ್ಛ	ಅನ್ವಯ	ಗುರುಪರಂಪರೆ
1	ದೇವರಹಳ್ಳಿ ಶಾಸನ	ನಂದಿ ಸಂಘ	ಎರೆಗಿತ್ತೂರು	ಪುಲಿಕಲ್	–	ಚಂದ್ರ ನಂದಿ ದೇವರು, ಕುಮಾರನಂದಿ ದೇವರು,ಕೀರ್ತಿನಂದಿ ದೇವರು, **ವಿಮಲಚಂದ್ರ**
2	ಸುಕ್ಕುದರೆ ಶಾಸನ	ದ್ರವಿಳ ಸಂಘ	–	–	–	ಸಮಂತ ಭದ್ರರು, ಭಟ್ಟಾ ಕಳಂಕರು, ಹೇಮಸೇನರು, ವಾದಿರಾಜರು, ಅಜಿತಸೇನರು, **ಮಲ್ಲಿಷೇಣ ಮಲಧಾರಿ ದೇವರು**
3	ಕಂಬದಹಳ್ಳಿ ಶಾಸನ	ಮೂಲಸಂಘ	ದೇಶಿಯಗಣ	ಪುಸ್ತಕಗಚ್ಛ	ಕುಂದಕುಂದಾನ್ವಯ	ಮೇಘಚಂದ್ರ ತ್ರೈವಿದ್ಯಾ ದೇವರು, **ಪ್ರಭಾಚಂದ್ರ ಸಿದ್ಧಾಂತ ದೇವರು**
4	ಪಲ್ಲಕೀರ್ತಿ ಪಂಡಿತ	–	ಸೂರಸ್ತಗಣ	–	–	ಅನಂತವೀರ್ಯ, ಬಾಳಚಂದ್ರ ಪಂಡಿತ, ಪ್ರಭಾ ಚಂದ್ರ ಪಂಡಿತ, ಕಣ್ಣೆಲದೇವ, ಅಷ್ಟೋಪವಾಸಿ ಮುನಿ, ವಿನಯನಂದಿ ದೇವ, **ಪಲ್ಲಕೀರ್ತಿ ದೇವ,**
5	ಕಳಗೆರೆ ಶಾಸನ	ಮೂಲಸಂಘ	ಬಲತ್ಕಾರಗಣ	–	–	ವರ್ಧಮಾನ ಭಟಾರರು, ಶ್ರೀಧರಾಚಾರ್ಯರು, ದೇವನಂದಿ ತ್ರೈವಿದ್ಯರು, ವಾಸುಪೂಜ್ಯ ಸಿದ್ಧಾಂತ ದೇವರು, ಶುಭಚಂದ್ರ ಸಿದ್ಧಾಂತ ದೇವರು, ಅಭಯನಂದಿ ಭಟ್ಟಾರರು, ಅರ್ಹನಂದಿ ಭಟ್ಟಾರರು, ದೇವಚಂದ್ರ ಸಿದ್ಧಾಂತಿಗಳು, ಅಷ್ಟೋಪವಾಸಿ ಕನಕಚಂದ್ರ ದೇವರು, ನಯಕೀರ್ತಿಚಂದ್ರಾರ್ಯರು, ಮಾಸೋಪವಾಸಿ ರವಿಚಂದ್ರ ಕೀರ್ತಿಗಳು, ಹರಿಯನಂದಿ ಸಿದ್ಧಾಂತಿಗಳು, ಗಂಡ ವಿಮುಕ್ತ ನೇಮಿಚಂದ್ರ ಭಟಾರರು, ವರ್ಧಮಾನ ಮುನೀಂದ್ರರು, ಶ್ರೀಧರಾಚಾರ್ಯರರು, ಸುಮೂಜ್ಯ ತ್ರೈವಿದ್ಯರು, ಉದಯಚಂದ್ರ ಸಿದ್ಧಾಂತಿಗಳು, ಕುಮುದಚಂದ್ರ ಭಟಾರರು, **ಮಾಘನಂದಿ ಸಿದ್ಧಾಂತ ಚಕ್ರವರ್ತಿ**
6	ಯಾಲದಹಳ್ಳಿ ಶಾಸನ	ಮೂಲಸಂಘ	ದೇಶಿಯಗಣ	ಪುಸ್ತಕಗಚ್ಛ	ಕುಂದಕುಂದಾನ್ವಯ	ಸಮಂತ ಭದ್ರಾಚಾರ್ಯ, ಅಕಳಂಕ ದೇವರು, ಗೃದ್ಧ ಪಿಂಚಾಚಾರ್ಯರು, ಸಾಗರನಂದಿ ಸಿದ್ಧಾಂತ ದೇವರು, ಅರ್ಹನಂದಿ ಮುನಿ, ನರೇಂದ್ರ ಕೀರ್ತಿ ತ್ರೈವಿದ್ಯಾ ದೇವರು, ಮುನಿಚಂದ್ರ ಭಟ್ಟಾರಕರು, **ದೇವರಾಜ ಪಂಡಿತ**
7	ಅಳೀಸಂದ್ರ ಶಾಸನ	ಮೂಲಸಂಘ	ದೇಶಿಯಗಣ	ಪುಸ್ತಕಗಚ್ಛ	ಕುಂದಕುಂದಾನ್ವಯ	ಮಾಘನಂದಿ ಸಿದ್ಧಾಂತ ದೇವರು, ಗಂಧವಿಮುಕ್ತ ಸಿದ್ಧಾಂತ ದೇವ, ದೇವಕೀರ್ತಿ ಪಂಡಿತ ದೇವ, **ದೇವರಾಜ ಪಂಡಿತ ದೇವ,**

8	ಹಟ್ಟಣ ಶಾಸನ	ಮೂಲಸಂಘ	ದೇಶಿಯಗಣ	ಪುಸ್ತಕಗಚ್ಛ	ಕುಂದಕುಂದಾನ್ವಯ	ಗುಣಚಂದ್ರ ಸಿದ್ಧಾಂತ ದೇವ, ನಯಕೀರ್ತಿ ಸಿದ್ಧಾಂತ ದೇವ, ರಾಮನಂದಿ ತ್ರೈವಿದ್ಯಾ ದೇವ, **ಬಾಲಚಂದ್ರ ದೇವರು,**
9	ಎಲೆಕೊಪ್ಪ ಶಾಸನ	–	–	–	–	ಏಲಾಚಾರ್ಯ
10	ದಡಗ ಶಾಸನ	ಮೂಲಸಂಘ	ಕಾಣೂರ್ಗಣ	ತಿಂತ್ರಿಣಗಚ್ಛ	ಕುಂದಕುಂದಾನ್ವಯ	ಜವಳಿಗೆಮುನಿ ಭದ್ರಸಿದ್ಧಾಂತ ದೇವರು,**ಮೇಘ ಚಂದ್ರ ಸಿದ್ಧಾಂತ ದೇವರು**
11	ಬೆಳ್ಳೂರು ಶಾಸನ	ಮೂಲಸಂಘ	ದೇಶಿಯಗಣ	ಪುಸ್ತಕಗಚ್ಛ	ಕುಂದಕುಂದಾನ್ವಯ	ಜಿನಕಂಚಿ, ಪೆನಗೊಂಡೆ, ನರಸಿಂಹರಾಜ ಪುರ ಸಿಂಹಾಸ ನಸ್ತರಾದ ಸಮಂತಭದ್ರ ಸ್ವಾಮಿ, ವೀರಸೇನಭಟ್ಟಾರಕ, **ಲಕ್ಷ್ಮೀಸೇನಭಟ್ಟಾರಕರು**
12	ಕಸಲಗೆರೆ	ಮೂಲಸಂಘ	ಸೂರಸ್ತಗಣ	–	–	**–ಭಾನುಕೀರ್ತಿ ಸಿದ್ಧಾಂತದೇವ**
13	ಬೋಗಾದಿ ಶಾಸನ	ದ್ರವೀಳಸಂಘ	–	–	–	ಸಮಂತಭದ್ರ ಆಚರ್ಯ, ಅಕಳಂಕದೇವ, ವಕ್ರಗ್ರೀವಾಚಾರ್ಯ, ಕನಕಸೇನಾಚಾರ್ಯ, ವಾದಿರಾಜ, ವಿಜಯನಂದಿ ಆಚಾರ್ಯ, ಅಜಿತಪಾಲನಾಥದೇವ, ಅಜಿತಸೇನಾ ಆಚಾರ್ಯ, ದಿತೀಯ ಅಕಳಂದೇವ, ಕುಮಾರಸ್ವಾಮಿ, ಮಲ್ಲಿಸೇನಾಮಲಧಾರಿದೇವ
14	ಅಬಲವಾಡಿ ಶಾಸನ	ಮೂಲಸಂಘ	ದೇಶಿಯಗಣ	ಪುಸ್ತಕಗಚ್ಛ	ಕುಂದಕುಂದಾನ್ವಯ	ಸಿದ್ಧಾಂತದೇವ ಚಕ್ರವರ್ತಿ, ಗುಣಭದ್ರ ಸಿದ್ಧಾಂತ ದೇವರು, **ನಯಕೀರ್ತಿ, ಭಾನುಕೀರ್ತಿ ಪಂಡಿತರು,**
15	ಹೊಸಹೊಳಲು ಶಾಸನ	ಮೂಲಸಂಘ	ದೇಶಿಯಗಣ	ಪುಸ್ತಕಗಚ್ಛ	ಕುಂದಕುಂದಾನ್ವಯ	ದಿವಾಕರ ನಂದಿ ಮುನಿ, ಕುಕ್ಕಟಾಸನ ಮಲದಾರಿ ದೇವ, **ಶುಭಚಂದ್ರ ಸಿದ್ಧಾಂತ ದೇವ**
16	ಶ್ರವಣನ ಹಳ್ಳಿ ಶಾಸನ	ಮೂಲಸಂಘ	ದೇಶಿಯಗಣ	ಪುಸ್ತಕಗಚ್ಛ	ಕುಂದಕುಂದಾನ್ವಯ	ಮೇಘಚಂದ್ರ ತ್ರೈವಿದ್ಯಾದೇವ, ಪ್ರಭಾಚಂದ್ರ ಸಿದ್ಧಾಂತ ದೇವ
17	ಬಸ್ತಿಪುರ	ಮೂಲಸಂಘ	ಕಾಣೂರ್ಗಣ	ತಿಂತ್ರಿಣಿಗಚ್ಛ	ಕುಂದಕುಂದಾನ್ವಯ	ವಾಸುಪೂಜ್ಯದೇವರು, **ಸಕಲಚಂದ್ರ ದೇವರು**

ಛಾಯಾಚಿತ್ರಗಳು



5.2.1 ಶ್ರೀರಂಗಪಟ್ಟಣ : ಆದೀಶ್ವರ ಬಸದಿಯ ಮುಂಭಾಗದ ನೋಟ



5.2.2 ಶ್ರೀರಂಗಪಟ್ಟಣ : ಆದೀಶ್ವರ ಬಸದಿಯ ಪಾರ್ಶ್ವ ನೋಟ



5.2.3 ಶ್ರೀರಂಗಪಟ್ಟಣ : ಆದೀಶ್ವರ ಬಸದಿಯ ಮುಂಭಾಗದ ನೋಟ



5.2.4 ಶ್ರೀರಂಗಪಟ್ಟಣ : ಆದೀಶ್ವರ ಬಸದಿಯ ಚತುರ್ವಿಂಶತಿ ತೀರ್ಥಂಕರರು




5.2.5 ಶ್ರೀರಂಗಪಟ್ಟಣ : ಆದೀಶ್ವರ ಬಸದಿಯ ಗರ್ಭಗೃಹದಲ್ಲಿರುವ ಆದಿನಾಥ ವಿಗ್ರಹ



5.2.6 ಶ್ರೀರಂಗಪಟ್ಟಣ : ಆದೀಶ್ವರ ಬಸದಿಯಲ್ಲಿರುವ ಜೈನ ತೀರ್ಥಂಕರನ ಮಹಾವೀರನ ಶಿಲ್ಪ



5.3.1 ಹೊಸಹೊಳಲು : ಪಾರ್ಶ್ವನಾಥ ಬಸದಿಯ ಮುಂಭಾಗದ ನೋಟ



5.3.2 ಹೊಸಹೊಳಲು : ಪಾರ್ಶ್ವನಾಥ ಬಸದಿಯ ಪಾರ್ಶ್ವನಾಥ ತೀರ್ಥಂಕರ ಶಿಲ್ಪ




5.3.3 ಹೊಸಹೊಳಲು : ಪಾರ್ಶ್ವನಾಥ ಬಸದಿಯ ಅನಂತನಾಥ ತೀರ್ಥಂಕರರ ಪಂಚಲೋಹದ ಮತ್ತು ಶಿಲೆಯ ಶಿಲ್ಪ



5.3.4 ಹೊಸಹೊಳಲು : ಪಾರ್ಶ್ವನಾಥ ಬಸದಿಯಲ್ಲಿರುವ ಬಾಹುಬಲಿಯ ವಿಗ್ರಹ ಮತ್ತು ಶಾಸನ



5.4.1 ಮುರುಕನಹಳ್ಳಿ : ಪಾರ್ಶ್ವನಾಥ ಬಸದಿಯ ಮುಂಭಾಗದ ನೋಟ



5.4.3 ಮುರುಕನಹಳ್ಳಿ : ಪಾರ್ಶ್ವನಾಥ ಬಸದಿಯ ಚೌವ್ವೀಸತೀರ್ಥಂಕರರ ಪಂಚಲೋಹದ ಶಿಲ್ಪ



5.4.2 ಮುರುಕನಹಳ್ಳಿ : ಪಾರ್ಶ್ವನಾಥ ಬಸದಿಯಲ್ಲಿನ ಪಾರ್ಶ್ವನಾಥ ಸ್ವಾಮಿಯ ವಿಗ್ರಹ



5.5.1 ಕಂಬದಹಳ್ಳಿ : ಪಂಚಕೂಟ ಬಸದಿಯ ಮುಂಭಾಗದಲ್ಲಿರುವ ಮಾನಸ್ತಂಭ

5.5.2 ಕಂಬದಹಳ್ಳಿ : ಮಾನಸ್ತಂಭದ ಮೇಲಿರುವ ಬ್ರಹ್ಮಯಕ್ಷನ ಮುಂಬದಿಯ ನೋಟ

5.5.3 ಕಂಬದಹಳ್ಳಿ : ಮಾನಸ್ತಂಭದ ಮೇಲಿರುವ ಬ್ರಹ್ಮಯಕ್ಷನ ಹಿಂಬದಿಯ ನೋಟ



5.5.4 ಕಂಬದಹಳ್ಳಿ : ಪಂಚಕೂಟ ಬಸದಿಯ ದ್ವಾರ ಮಂಟಪ



5.5.5 ಕಂಬದಹಳ್ಳಿ : ಪಂಚಕೂಟ ಬಸದಿಯ ವಿಹಂಗಮ ನೋಟ



5.5.6 ಕಂಬದಹಳ್ಳಿ : ಪಂಚಕೂಟ ಬಸದಿಯ ಪಾರ್ಶ್ವ ನೋಟ



5.5.7 ಕಂಬದಹಳ್ಳಿ : ಪಂಚಕೂಟ ಬಸದಿಯ ಬಲಿಪೀಠ



5.5.8 ಕಂಬದಹಳ್ಳಿ : ಪಂಚಕೂಟ ಬಸದಿಯ ಬಲಿಪೀಠ ಸಹಿತ ಮುಖಮಂಟಪದ ನೋಟ



5.5.9 ಕಂಬದಹಳ್ಳಿ : ಶಾಂತಿನಾಥ ಬಸದಿಯ ಪಾರ್ಶ್ವ ನೋಟ



5.5.10 ಕಂಬದಹಳ್ಳಿ : ಶಾಂತಿನಾಥ ಬಸದಿಯ ಹಿಂಬದಿಯ ನೋಟ



5.5.11 ಕಂಬದಹಳ್ಳಿ : ಪಂಚಕೂಟ ಬಸದಿಯ ಭಿತ್ತಿಯ ಅರೆಕಂಬಗಳು, ದೇವಕೋಷ್ಠ ಮತ್ತು ಜಿನಮೂರ್ತಿ



5.5.12 ಕಂಬದಹಳ್ಳಿ : ಪಂಚಕೂಟ ಬಸದಿಯ ಗರ್ಭಗುಡಿಯ ಪ್ರವೇಶದ್ವಾರದ ಪಾರ್ಶ್ವದಲ್ಲಿರುವ ಪಾರ್ಶ್ವನಾಥ ಶಿಲ್ಪಗಳು ಮತ್ತು ಗರ್ಭಗೃಹದ ಆದಿನಾಥ ಶಿಲ್ಪ



5.5.13 ಕಂಬದಹಳ್ಳಿ : ಪಂಚಕೂಟ ಬಸದಿಯಲ್ಲಿರುವ ಮಹಾವೀರ ತೀರ್ಥಂಕರರ ಶಿಲ್ಪ



5.5.14 ಕಂಬದಹಳ್ಳಿ : ಕೂಷ್ಮಾಂಡಿನಿ ಯಕ್ಷಿ (ಅಂಬಿಕಾ)



5.5.15 ಕಂಬದಹಳ್ಳಿ : ಗೋಮುಖ ಯಕ್ಷ



5.5.18 ಕಂಬದಹಳ್ಳಿ : ಪಂಚಕೂಟ ಬಸದಿಯ ಪಾರ್ಶ್ವನಾಥ



5.5.17 ಕಂಬದಹಳ್ಳಿ : ಪಂಚಕೂಟ ಬಸದಿಯ ಪಾರ್ಶ್ವನಾಥ ವಿಗ್ರಹ



5.5.16 ಕಂಬದಹಳ್ಳಿ : ಶಾಂತಿನಾಥ ಬಸದಿಯಲ್ಲಿರುವ ಭಗ್ನ ಜಿನಬಿಂಬ



5.5.19 ಕಂಬದಹಳ್ಳಿ : ಚಕ್ರೇಶ್ವರಿ ಯಕ್ಷಿ




5.5.20 ಕಂಬದಹಳ್ಳಿ : ಕುಬೇರಯಕ್ಷ



5.5.21 ಕಂಬದಹಳ್ಳಿ : ಯಕ್ಷಿಯ ಶಿಲ್ಪ





5.5.22 ಕಂಬದಹಳ್ಳಿ : ಯಕ್ಷಿಯ ಶಿಲ್ಪ



5.5.23 ಕಂಬದಹಳ್ಳಿ : ಶಾಂತಿನಾಥ ಬಸದಿಯಲ್ಲಿ ಸಂರಕ್ಷಿಸಿರುವ ತೀರ್ಥಂಕರರ ಶಿಲ್ಪ

5.5.24 ಕಂಬದಹಳ್ಳಿ : ಶಾಂತಿನಾಥ ಬಸದಿಯಲ್ಲಿ ಸಂರಕ್ಷಿಸಿರುವ ತೀರ್ಥಂಕರರ ಶಿಲ್ಪ





5.5.25 ಕಂಬದಹಳ್ಳಿ : ಕುಬೇರಯಕ್ಷ




5.5.23 ಕಂಬದಹಳ್ಳಿ : ಶಾಂತಿನಾಥ ಬಸದಿಯಲ್ಲಿರುವ ಚೌರಿದಾರಿಗಳು



5.5.28 ಕಂಬದಹಳ್ಳಿ : ಕಂಬದಹಳ್ಳಿ ಪಂಚಕೂಟ ಬಸದಿಯ ಸಮೀಪ ಸಂರಕ್ಷಿಸಿರುವ ಜೈನಶಿಲ್ಪಗಳು



5.7.1 ದಡಗ : ಶಾಂತಿನಾಥ ಬಸದಿಯ ಪ್ರವೇಶದ್ವಾರ



5.7.2 ದಡಗ: ಶಾಂತಿನಾಥ ಬಸದಿಯ ತೀರ್ಥಂಕರರ ಶಿಲ್ಪ



5.7.3 ದಡಗ : ಜೈನಶಾಸನ



5.7.4 ಮತ್ತು 5.7.5 ದಡಗ : ಉತ್ಸವಮೂರ್ತಿಗಳು





5.8.1 ಬೆಳ್ಳೂರು : ವಿಮಲನಾಥ ತೀರ್ಥಂಕರರ ಬಸದಿಯ ನವರಂಗದ ಎಡಪಾರ್ಶ್ವದ ನೋಟ



5.8.2 ಬೆಳ್ಳೂರು : ವಿಮಲನಾಥ ತೀರ್ಥಂಕರರ ಬಸದಿಯ ಬಲಪಾರ್ಶ್ವದ ನೋಟ



5.8.3 ಬೆಳ್ಳೂರು : ಮೊದಲ ಅಂತಸ್ತಿನ ಗರ್ಭಗುಡಿಯಲ್ಲಿರುವ ಪಾರ್ಶ್ವನಾಥ ತೀರ್ಥಂಕರ ಶಿಲ್ಪ



5.8.4 ಬೆಳ್ಳೂರು : ವಿಮಲನಾಥ ತೀರ್ಥಂಕರ ಬಸದಿಯ ಗರ್ಭಗೃಹದಲ್ಲಿರುವ ವಿಮಲನಾಥರ ಶಿಲ್ಪ



5.9.1 ಅರೆತಿಪ್ಪೂರು: ಸಣ್ಣಗುಡ್ಡದ ಜೈನ ಸ್ಮಾರಕಗಳ ವಿಹಂಗಮ ನೋಟ




5.9.2 ಅರೆತಿಪ್ಪೂರು: ಸಣ್ಣಗುಡ್ಡದಲ್ಲಿರುವ ನೀರಿನ ದೋಣೆ



5.9.3 ಅರೆತಿಪ್ಪೂರು: ನೀರಿನ ದೋಣೆಯ ಕಲ್ಲು ಬಂಡೆಯ ಮೇಲೆ ಕೆತ್ತಿರುವ ತೀರ್ಥಂಕರರ ಶಿಲ್ಪಗಳು



5.9.4 ಅರೆತಿಪ್ಪೂರು: ಸಣ್ಣಗುಡ್ಡದ ಉತ್ಖನನಕ್ಕೆ ಮೊದಲು



5.9.5 ಅರೆತಿಪ್ಪೂರು: ಸಣ್ಣಗುಡ್ಡದಲ್ಲಿ ಉತ್ಖನನದ ನಂತರ ಕಂಡುಬಂದ ಬಸದಿಯ ಅಧಿಷ್ಠಾನ



5.9.6 ಅರೆತಿಪ್ಪೂರು: ಬಸದಿಯೊಂದರ ಅಧಿಷ್ಠಾನ ಮತ್ತು ಜಿನಬಿಂಬ



5.9.7 ಅರೆತಿಪ್ಪೂರು: ಬಸದಿಯೊಂದರ ಇಟ್ಟಿಗೆಯ ಅಧಿಷ್ಠಾನ




5.9.8 ಅರೆತಿಪ್ಪೂರು: ಸಣ್ಣಗುಡ್ಡದ ಪಾರ್ಶ್ವನಾಥ ಶಿಲ್ಪ




5.9.9 ಅರೆತಿಪ್ಪೂರು: ಸಣ್ಣಗುಡ್ಡದಲ್ಲಿನ ಗೊಮ್ಮಟೇಶ್ವರ ವಿಗ್ರಹ



5.9.10 ಅರೆತಿಪ್ಪೂರು: ಸಣ್ಣಗುಡ್ಡದಲ್ಲಿನ ಉತ್ಖನನದಲ್ಲಿ ದೊರೆತ ನಿಷಧಿ ಶಿಲ್ಪಗಳು





5.9.11 ಮತ್ತು 5.9.12 ಅರೆತಿಪ್ಪೂರು: ಸಣ್ಣಗುಡ್ಡದಲ್ಲಿ ಬಸದಿಯೊಂದರ ಚಾಮರದಾರಿಗಳು



5.9.13 ಅರೆತಿಪ್ಪೂರು: ಸಣ್ಣಗುಡ್ಡದಲ್ಲಿ ಬಾಹುಬಲಿಯ ಶಿಲ್ಪ



5.9.14 ಅರೆತಿಪ್ಪೂರು: ಸಣ್ಣಗುಡ್ಡದ ಬಸದಿಯೊಂದರ ಜೈನತೀರ್ಥಂಕರ ಶಿಲ್ಪ



5.9.15 ಅರೆತಿಪ್ಪೂರು: ಶ್ರವಣಪ್ಪನ ಗುಡ್ಡದ ಮೇಲಿರುವ ಬಾಹುಬಲಿ ಶಿಲ್ಪದ ಹಿಂಭಾಗ ಮತ್ತು ಮುಂಭಾಗದ ನೋಟ



5.10.1 ಬಸ್ತಿಹೊಸಕೋಟೆ: ಗಂಗರ ಕಾಲದ ಪ್ರಾಚೀನ ಬಸದಿಯ ಅವಶೇಷ



5.10.2 ಬಸ್ತಿಹೊಸಕೋಟೆ: ಗಂಗರ ಕಾಲದ ಪ್ರಾಚೀನ ಬಸದಿಯ ಅವಶೇಷ



5.10.3 ಬಸ್ತಿಹೊಸಕೋಟೆ: ಹೊಯ್ಸಳರ ಕಾಲದ ಬಾಹುಬಲಿಯ ಶಿಲ್ಪ



5.10.4 ಬಸ್ತಿಹೊಸಕೋಟೆ: ತೀರ್ಥಂಕರರ ಶಿಲ್ಪ

5.10.5 ಬಸ್ತಿಹೊಸಕೋಟೆ: ಪಾರ್ಶ್ವನಾಥ ಶಿಲ್ಪದ ಹಿಂಬದಿಯ ನೋಟ





5.10.6 ಬಸ್ತಿಹೊಸಕೋಟೆ: ತೀರ್ಥಂಕರರ ಅಪೂರ್ಣ ಶಿಲ್ಪ



5.10.7 ಬಸ್ತಿಹೊಸಕೋಟೆ: ಪಾರ್ಶ್ವನಾಥ ಶಿಲ್ಪ



5.10.8 ಬಸ್ತಿಹೊಸಕೋಟೆ: ಮಹಾವೀರರ ಶಿಲ್ಪ



5.10.9 ಬಸ್ತಿಹೊಸಕೋಟೆ: ತೀರ್ಥಂಕರರ ಶಿಲ್ಪ



5.10.10 ಬಸ್ತಿಹೊಸಕೋಟೆ: ಜೈನ ಶಿಲ್ಪಗಳ ವಿಹಂಗಮ ನೋಟ





5.10.11 ಮತ್ತು 5.10.11 ಬಸ್ತಿಹೊಸಕೋಟೆ: ಚೌರಿದಾರಿಗಳ ಶಿಲ್ಪಗಳು



5.12.1 ಬೋಗಾದಿ : ಶಾಸನೋಕ್ತ ಪಾರ್ಶ್ವನಾಥ ಜಿನಾಲಯ



5.12.2 ಬೋಗಾದಿ :
ಪಾರ್ಶ್ವನಾಥ ಜಿನಾಲಯದ
ಪಾರ್ಶ್ವನೋಟ



5.12.3 ಬೋಗಾದಿ : ಪಾರ್ಶ್ವನಾಥ ಬಸದಿಯ ಪ್ರವೇಶದ್ವಾರ



5.12.4 ಬೋಗಾದಿ : ಪಾರ್ಶ್ವನಾಥ ಬಸದಿಯ ಪಾರ್ಶ್ವನೋಟ



5.14.1 ಯಾಲದಹಳ್ಳಿ: ಪಾರ್ಶ್ವನಾಥ ಬಸದಿಯ ತ್ರಿಕೂಟಾಚಲ ಬಸದಿಯ ಮುಂಭಾಗದ ನೋಟ



5.14.2 ಯಾಲದಹಳ್ಳಿ: ಪಾರ್ಶ್ವನಾಥ ಬಸದಿಯ ತ್ರಿಕೂಟಾಚಲ ಬಸದಿಯ ಪಾರ್ಶ್ವನೋಟ



5.14.3 ಯಾಲದಹಳ್ಳಿ: ಪಾರ್ಶ್ವನಾಥ ಬಸದಿಯ ತ್ರಿಕೂಟಾಚಲ ಬಸದಿಯ ಪಾರ್ಶ್ವನೋಟ



5.14.4 ಯಾಲದಹಳ್ಳಿ: ಪಾರ್ಶ್ವನಾಥ ದೇವಸ್ಥಾನ ಯಾಲದಹಳ್ಳಿ



6.5.1 ಹಟ್ಟಣ : ಜೈನಶಾಸನ ಮತ್ತು ವೀರಭದ್ರೇಶ್ವರ ಗುಡಿಯ ಮುಂಭಾಗ



6.5.2 ಹಟ್ಟಣ : ಜೈನಶಾಸನ ಮತ್ತು ವೀರಭದ್ರೇಶ್ವರ ಗುಡಿಯ ಹೊರನೋಟ



6.5.3 ಹಟ್ಟಣ : ವೀರಭದ್ರೇಶ್ವರ ಗುಡಿಯ ನವರಂಗ



6.5.4 ಹಟ್ಟಣ : ಜಿನಪೀಠದ ಮೇಲೆ ಸ್ಥಾಪಿಸಲಾಗಿರುವ ವೀರಭದ್ರೇಶ್ವರ ಶಿಲ್ಪ



6.9.1 ಗುತ್ತಲು : ಶ್ರೀ ಅರ್ಕೇಶ್ವರ ದೇವಸ್ಥಾನದ ಮುಖಮಂಟಪ




6.9.2 ಗುತ್ತಲು : ಶ್ರೀ ಅರ್ಕೇಶ್ವರ ದೇವಸ್ಥಾನದ ಪಾರ್ಶ್ವನೋಟ



6.9.3 ಗುತ್ತಲು : ಶ್ರೀ ಅರ್ಕೇಶ್ವರ ದೇವಸ್ಥಾನದ ಉದ್ಭವಲಿಂಗ



6.9.4 ಗುತ್ತಲು : ಶ್ರೀ ಅರ್ಕೇಶ್ವರ ದೇವಸ್ಥಾನದ ಮುಂದಿರುವ ವೀರಗಲ್ಲು



6.9.5 ಗುತ್ತಲು : ಶ್ರೀ ಅರ್ಕೇಶ್ವರ ದೇವಸ್ಥಾನದಲ್ಲಿ ದೊರೆತ ಪ್ರಾಚೀನ ಜಿನಶಾಸನ ಮತ್ತು ಆಧುನಿಕ ಶಾಸನ



ಚಿತ್ರ 3.1 ಜೈನವೀರಗಲ್ಲು – ಎಲೆಕೊಪ್ಪ (ನಾಗಮಂಗಲ ತಾಲ್ಲೂಕು)